ಜಯಂತಿ

ಪಗಲ ಕನಸು

❊

ಏನು ಬಿತ್ತಿದೇನು, ಏನು ಬೆಳೆದೇನು: ಕಾಯುಲೆಂದು ನೆಟ್ಟ ಬೇಲಿಗಳೆ ಹೊಲವ ಮೇಯುತಿವೆ ನೋಡಾ ! ಹೊಳೆ-ಹಳ್ಳಗಳು ತುಂಬಿ ಸೂಸಿ ಪರಿಯುತ್ತಿದ್ದರೇನು: ಕುಡಿಯಲು ಹನಿ ನೀರು ಸಿಗದೆ ಜೀವಕುಲ ಬಾಯ್ಬಿಡುತಿವೆ ನೋಡಾ ! ಹನುಮಕ್ಕಳು ಹಸಿದು ಬಿಲವಿಲಸಿ ಒದ್ದಾಡುತಿವೆ; ಡಾಲನೂಡಿ ಸಲಹುವ ಪೆತ್ತಮ್ಮಗಳು ಮುಖ ತಿರುಗಿಸಿ ಕುಳಿತಿದ್ದಾರೆ ಕಾಣಾ !

ಉಂಡು ಜೆಲ್ಲಿಸ' ಎಂಜಲಿಲೆಗಾಗಿ ತಮ್ಮ-ತಮ್ಮೊಳಗೆ ಕಚ್ಚಾಡುವ ಹಿಂಡುನಾಯ್ಗಳ ನೋಡಿರಣ್ಣಾ ! ಕುಚ್ಚಟದ ಸಂಧಿಯ ಸಾಧಿಸಿ ಎಂಜಲುಕೊಳಗಟ್ಟಿಸುವ ಭಂಡನಾಯನು ಕಂಡಿರೇನಣ್ಣಾ ! ಕಚ್ಚಾಡಿದ ನಾಯಿಗಳಿಗೇನು ? ಸ್ವತಂತ್ರ ಕಚ್ಚು-ಹೊಟ್ಟೆಯೊಳಗೆ ಹಸಿಸಿನುರಿಯ ಕೆಚ್ಚು !

ಜಯ್ಯಾ, ಹೆಚ್ಚಿಟ್ಟ ನಂದಾದೀಪ, ಎಣ್ಣೆಗಾಣವೆ ತಣ್ಣಗಾಗುವ ದಾರಿಯಲ್ಲಿವೆ ನೋಡಯ್ಯಾ ! ಎಳ್ಳೆಣ್ಣೆಯೆಂದು ದೀವಿಗೆಗಳ ಹೊರೆಯಬೇಕೆಂಬ ಜರುಹು ಯಾರಲಿಯೂ ತೋರದಿಹುದಯ್ಯಾ ! ದೀವಿಗೆಗಳೊಮ್ಮೆ ಆರಿ ತಣ್ಣಗಾದರೆ, ಕಗ್ಗತ್ತಲೆ ಪಾಲೆಯುಸು ಮುಪುಕಜೇನಯ್ಯಾ !

ಗಾಣಿಗ ಗಾಣವಾಡುತ್ತಿದ್ದಾನೆ: ಎಳ್ಳೆಣ್ಣೆಯ ಸೊನ್ನೆಯೆ ಕಾಣುತಿಲ್ಲವಯ್ಯಾ ! ಅಂಬಾರ ಹಿಗರಿಯ ಬಿಡುಗಸುತ್ತಿದ್ದಾನೆ; ಗಟ್ಟಿ ಮಜಕೆ ಒಂದೂ ಹೊರಬೀಳದಯ್ಯಾ ! ಏಜ, ಸುತ್ತಿಗೆಯೇಟು ಹಾಕುತ್ತಲೇ ಇದ್ದಾನೆ; ಕಲ್ಲು ಕಗ್ಗಲ್ಲಾಗಿಯೆ ಉಂಡಿಯಯ್ಯಾ ! ಬಿಡಿಲ್ಲವನೂ ನೋಡುತ್ತ ನಗಪ ನಮ್ಮ ಬುದ್ಧಿಯ ಕಾಲವಾಯ !

—ಸಾಸೂಜಿತ

JAYANTI

ಈ ಸಂಚಿಕೆಯಲ್ಲಿ

ಜಯಂತಿಗೆ ೨೨ ವರುಷ (ಸಂಪಾದಕೀಯ)
ಸಂಪಾದಕರು ೪೦೧
ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೪೦೩
ಪದ್ದಕ್ಕನ ಕೊನೆಯ ದಿನ (ಸಣ್ಣಕತೆ)
ಆ. ರಾ. ಸೇ. ೪೦೫
ವ್ಹರ್ಜಿನಿಯಾ ವೂಲ್ಫ್ (ಸಾಹಿತ್ಯಿಕ ವ್ಯಕ್ತಿಪರಿಚಯ)
ಶ್ರೀಮತಿ 'ವಸಂತಲಕ್ಷ್ಮಿ', ಮದ್ರಾಸ್ ೪೧೦
ವೇಣುಗಾನವ ನುಡಿಸು! (ಕವಿತೆ)
ಕುಮಾರಿ ಸಿ. ಹೆಚ್. ಲಕ್ಷ್ಮೀ-ಪಾಡಿ, ಮುಟ್ಟತ್ತೋಡಿ ೪೧೩
ಬಿಸಮಿಲ್ಲಾರ ಶಹನಾಯಿವಾದನ ಕೇಳಿ (ಕವಿತೆ)
ಶ್ರೀ ಚೆನ್ನವೀರ ಕಣವಿ, ಧಾರವಾಡ ೪೧೪
ಕವಿಯ ಗಾಯತ್ರಿ (ಕವಿತೆ)
ಶ್ರೀ ಎಚ್. ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದ್ ೪೧೪
ತಂದೆನೊಂದು ವೀಣೆ (ಕವಿತೆ)
ಶ್ರೀ ಚಂದ್ರಶೇಖರ ಪಾಟೀಲ, ಧಾರವಾಡ ೪೧೪
ವಿಶ್ವಸಿಂಹ (ಅಸ್ಸಾಮಿನ ಒಂದು ಐತಿಹಾಸಿಕ ವಿಭೂತಿ)
ಶ್ರೀ ಪಿ. ವ್ಹಿ. ಗುಡಿ, ಗೋಹಟ್ಟಿ (ಅಸ್ಸಾಂ) ೪೧೫
ಭಾರತೀಯ ಸಂಗೀತ ಮತ್ತು ನೃತ್ಯ (ಕಲಾಪರಿಚಯ)
ಶ್ರೀಮತಿ ರುಕ್ಮಿಣಿದೇವಿ ೪೧೯
ವರದ ಶಾಪ! (ಸಣ್ಣಕತೆ)
ಶ್ರೀ ಮುದೇಸೂರ ಸಂಗಣ್ಣ, ಚಿಗಟೇರಿ (ಹರಪನಹಳ್ಳಿ).... ೪೨೩
ಭೂಕಂಪ (ಕವಿತೆ)
'ಆನಂದಕಂದ' ೪೨೯
"ಪಮ್ಮಾ" (ಸಣ್ಣಕತೆ)
ಗಂಗಾತನಯ ೪೩೦
ದತಕಂತ (ಕವಿತೆ)
"ರಂಜನ" ಭಟ್ಟ, ಮದ್ರಾಸ ೪೩೨
ವಿಷಾದಶಿಯ ಚಂದ್ರ (ಕವಿತೆ)
ಶ್ರೀ ಈಶ್ವರ ಪೆರಡಾಲ-ಅಸ್ಸಾಮು ೪೩೨
ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ
ಶ್ರೀ ಗಂಗಾಧರಭಟ್ಟ ಮತ್ತು ಶ್ರೀ ಜಿ. ಎಸ್. ಗ್ರಾಮಪುರೋಹಿತ
ಸಾದರ ಸ್ವೀಕಾರ .... (ಕವರ್ ೩ನೆಯ ಪುಟದಲ್ಲಿ)

ಜಯಂತಿ

ಸಂಪುಟ ೨೨] [ಸಂಚಿಕೆ ೧೦

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

❖

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

❖

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

❖

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

❖

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಜಯಂತಿಗೆ ೨೨ ವರುಷ

ಈ ಸಂಚಿಕೆಗೆ ಜಯಂತಿ ತನ್ನ ೨೨ನೆಯ ವರ್ಷವನ್ನು ಮುಗಿಸಿತು. ಜಯಂತಿ ಅನುಭವಿಸುತ್ತಲಿರುವ ಆರ್ಥಿಕ ಆಪತ್ತಿಯನ್ನು ನೆನೆದುಕೊಂಡರೆ, 'ಇದನ್ನು ಮುಂದುವರಿಸಬೇಕೆ ?' ಎಂಬ ಬಿಡಿಸಲಾಗದ ಪ್ರಶ್ನೆಯೊಂದು ಮುಂದೆ ಬಂದು ನಿಲ್ಲದೆ ಇರದು. ವ್ಯವಹಾರ ದೃಷ್ಟಿಯಿಂದ ನೋಡಿದರೆ, ಈ ಪ್ರಶ್ನೆಗೆ ಉತ್ತರಕೊಡಲು ನಾನು ಅಸಮರ್ಥ. ಏಕೆಂದರೆ ಇತ್ತೀಚಿನ ೧೦-೧೨ ವರ್ಷಗಳಲ್ಲಿ ಜಯಂತಿ ನಷ್ಟದ ಹೊರೆಯನ್ನೇ ನನ್ನಮೇಲೆ ಹೊರಿಸುತ್ತ ಬಂದಿದೆ. ನಷ್ಟದ ವ್ಯವಹಾರವನ್ನು ಮುಂದುವರಿಸುವುದು ಮೂರ್ಖತನವೆಂದು ಯಾವ ವ್ಯವಹಾರಿಯೂ ಹೇಳಬಹುದು.

ಜಯಂತಿಯ ವ್ಯವಹಾರ ಮೊದಲಿನಿಂದಲೂ ಅವ್ಯವಹಾರ್ಯವೆ. ಏಕೆಂದರೆ ಲೌಕಿಕ ವ್ಯವಹಾರಗಳೆಲ್ಲವೂ ಕೇವಲ ವರ್ತಮಾನಲಾಭದ ಕಡೆಗೆ ದೃಷ್ಟಿಯಿರಿಸಿಕೊಂಡು ಸಾಗಿರುವುವು. ಇದ್ದ ಮಾಲಿಗೆ ಸರಿಯಾಗಿ ಲಾಭ ಬಂದೀತೇ ಎಂಬುದನ್ನೇ ಅವು ನೋಡುತ್ತಿರುವುವು. ಲಾಭ ಬಾರದೆಂದಾಗ ಅವು ವ್ಯವಹಾರವನ್ನು ನಿಲ್ಲಿಸಿಬಿಡುವುವು.

ನಾನು ಜಯಂತಿಯನ್ನು ಲೌಕಿಕ ವ್ಯವಹಾರದ ದೃಷ್ಟಿಯಿಂದ ನಡೆಯಿಸಬೇಕೆಂದು ಎಂದೂ ಅಪೇಕ್ಷಿಸಿದವನಲ್ಲ. ಸದಭಿರುಚಿಯನ್ನು ಬೆಳೆಯಿಸುವಂತಹ ಸಾಹಿತ್ಯ, ಸಾಮಾಜಿಕ ಸಂಸ್ಕೃತಿ — ಇವುಗಳನ್ನು ನೀಡಬಲ್ಲ ಪತ್ರಿಕೆಯೊಂದು ನಮ್ಮ ನಾಡಿನಲ್ಲಿ ಇರಬೇಕೆಂಬ ನನ್ನ ಆಶೆಯೆ ಜಯಂತಿಯನ್ನು ಇದುವರೆಗೆ ಬದುಕಿಸಿಕೊಂಡು ಬಂದಿದೆ. ಇಲ್ಲವಾದರೆ ಜಯಂತಿ ಎಂದೋ ಕಣ್ಮರೆಯಾಗಿಬಿಡುತ್ತಿತ್ತು.

ಮಾವಿನ ಸಸಿಗಳನ್ನು ನೆಟ್ಟು ಬೆಳೆಸುತಿರುವ ಹಿರಿಯನೊಬ್ಬ, ವರ್ತಮಾನ ಲಾಭದ ಕಡೆಗೆ ದೃಷ್ಟಿಯಿರಿಸಿದರೆ, ಅವನಿಂದ ಆ ಕಾರ್ಯ ಎಂದೂ ಚೆನ್ನಾಗಿ ನಡೆಯದು. ಗಿಡಗಳು ಬೆಳೆದು ಮಕ್ಕಳು ಮೊಮ್ಮಕ್ಕಳು ಅವುಗಳ ಫಲವನ್ನು ಉಣ್ಣಬಹುದೆಂಬ ಭವಿಷ್ಯಕಾಲದ ಲಾಭವೆ ಅವನ ಆದರ್ಶವಾಗಿರುವುದು. ಹಿರಿಯ ಗಿಡಗಳನ್ನು ನೆಟ್ಟು ಬೆಳೆಸದೆ ಹೋದರೆ, ಅವನ ಮಕ್ಕಳು-ಮೊಮ್ಮಕ್ಕಳಿಗೆ ಫಲಗಳು ಸಿಗುವ ಬಗೆ ಹೇಗೆ ?

ಜಯಂತಿ ತನ್ನೆದುರು ಇರಿಸಿಕೊಂಡಿರುವ ಗುರಿ, ಈ ಮಾವಿನ ಸಸಿಗಳನ್ನು ನೆಡುವ ಹಿರಿಯನ ಗುರಿಯಂತಾಗಿದೆ. ಭವಿಷ್ಯದ ಲಾಭವನ್ನು ಬಯಸುವವರು, ವರ್ತಮಾನಕಾಲದಲ್ಲಿ ತನು-ಮನೋಧನಗಳಿಂದ ಶ್ರಮಿಸಬೇಕಾಗುವುದು ಅನಿವಾರ್ಯವಾಗಿದೆ.

ಜಯಂತಿ ಅಖಂಡವಾಗಿ ೨೨ ವರ್ಷಗಳಲ್ಲಿ ಮಾಡಿದ ಕೃಷಿಯಿಂದ, ಜಯಂತಿಗೆ ಆರ್ಥಿಕ ನಷ್ಟವಾಗಿದ್ದರೂ, ನಮ್ಮ ನಾಡಿಗರಿಗೆ ಅದರ ಲಾಭ ದೊರೆಯದೆ ಹೋಗಿಲ್ಲ. ಜಯಂತಿ ತನ್ನ ಕೃಷಿಯಿಂದ ಎಷ್ಟು ಜನ ಹೊಸಹೊಸ ಸಾಹಿತ್ಯಿಕರನ್ನು ಒದಗಿಸಿಕೊಟ್ಟಿದೆ ! ಇಂದಿನ ತರುಣ ಸಾಹಿತ್ಯಿಕರಲ್ಲಿ ಬಹುಜನರು, ಜಯಂತಿಯ ಕೃಷಿಕ್ಷೇತ್ರದಲ್ಲಿ ದುಡಿದು ಪಳಗಿದವರೇ ಆಗಿದ್ದಾರೆ. ವರ್ತಮಾನ ಲಾಭದ ದೃಷ್ಟಿಯವರಿಗೆ ನಾನು ಈ ಹೊಸ ಸಾಹಿತ್ಯಿಕರ ಕಡೆಗೆ ಬೆರಳುಮಾಡಿ ತೋರಿಸಬಯಸುತ್ತೇನೆ.

ನಾಡಿನ ಶುಭಭವಿಷ್ಯದ ಸಾಂಸ್ಕೃತಿಕಲಾಭ ಭಾವನೆಯಿಂದಲೇ ನಾನು ಜಯಂತಿಯನ್ನು ಇದುವರೆಗೆ ಸಾಗಿಸಿಕೊಂಡು ಬಂದೆ. ನನ್ನಲ್ಲಿಯೆ ಎಣ್ಣೆಯಿರುವಾಗ ಈ ಸಂಸ್ಕೃತಿಯ ದೀಪವನ್ನು ನಾನೆ ಎಣ್ಣೆಯೆರೆದು ಬೆಳಗುವಂತೆ ಮಾಡಿದೆ. ಆದರೆ ನನ್ನಲ್ಲಿ ಎಣ್ಣೆಯ ಕೊರತೆಯಾದುದರಿಂದ ಈ ಬೆಳಗುವ ದೀಪ ನಂದನಂತೆ ಎಣ್ಣೆಯೆರೆಯಿರೆಂದು ಜನತೆಯಲ್ಲಿ ಬಿನ್ನವಿಸಿಕೊಳ್ಳಬೇಕಾಗಿದೆ.

ಜಯಂತಿಯ ಕಿರುಪೊರೆಯನ್ನು ಕೇಳಿ, ಈ ವರ್ಷ ಕೆಲವು ಮಹನೀಯರು, ತಮ್ಮ ನೆರವಿನ ಕೈಯನ್ನು ಮುಂದೆ ಮಾಡಿದರು. ಇವರೆಲ್ಲರೂ ಪ್ರೀತಿಯಿಂದ ನೀಡಿದ ನೆರವಿನ ಹಣ ಇನ್ನೂರರ ಮೊತ್ತವನ್ನು ಮೀರಲಿಲ್ಲ. ಇಷ್ಟಾದರೂ ನಷ್ಟದ ಭಾರ ನನಗೆ ಕಡಮೆಯಾಯಿತಲ್ಲಾ— ಎಂದು ನನಗೆ ಸಮಾಧಾನ.

ಇಪ್ಪತ್ತೆರಡನೆಯ ವರ್ಷದ ಕೊನೆಗೆ ಜಯಂತಿಯಿಂದ ನಾನು ನಿವೃತ್ತನಾಗುವೆನೆಂದು ಕಳೆದ ವರ್ಷವೆ ನಾನು ವಿದಿತಪಡಿಸಿದ್ದೆ. ಈಗಲೂ ನಾನು ನಿವೃತ್ತನಾಗಲು ಮನಸಾರೆ ಅಪೇಕ್ಷಿಸುತ್ತೇನೆ. ಆದರೆ 'ಜಯಂತಿ' ಮುಂದುವರೆಯುವ ಯೋಜನೆಯೊಂದನ್ನು ಮಾಡಿ ನಾನು ನಿವೃತ್ತನಾಗಬೇಕೆಂಬ ಆಶೆಯನ್ನು ಇಟ್ಟುಕೊಂಡಿದ್ದೇನೆ. ಹೊಸ ಉತ್ಸಾಹದ ಜನರು ಬಂದು ಜಯಂತಿಯನ್ನು ತೆಗೆದುಕೊಂಡು, ಕಾರ್ಯಮಾಡಲು ತೊಡಗಿದರೆ, ನನ್ನಂತೆ ಅವರು ಆರ್ಥಿಕ ನಷ್ಟವನ್ನು ವಹಿಸುವ ಸಂದರ್ಭ ಬರಲಾರದೆಂದು ನನಗೆ ಎನಿಸುತ್ತದೆ. ಏಕೆಂದರೆ, ಜಯಂತಿಯ ವ್ಯವಸ್ಥಾಪಕ ವಿಭಾಗಕ್ಕೆ ಅವಶ್ಯಕವಾಗಿದ್ದ ಶಕ್ತಿ ನನ್ನದು ಪರಿಮಿತವಾದುದೆಂಬುದರ ಅರಿವು ನನಗೆ ಸಾಕಷ್ಟು ಇದೆ.

ಜಯಂತಿ ತನ್ನ ತ್ರಿನಿಯ ವರ್ಷದಲ್ಲಿ ಕಾಲಿರಿಸಿ ಮುಂದುವರಿಯಲಿದೆ. ಅದರ ಮುಂದಿನ ನಡಿಗೆಗಾಗಿ ಶಕ್ತಿಯನ್ನು ತುಂಬುವ ಕಾರ್ಯವನ್ನು ನಮ್ಮ ಜನತೆ ಮಾಡಬೇಕು. ಇದುವರೆಗೆ ತೋರಿಸಿದಂತಹ ಉಪೇಕ್ಷೆ-ಔದಾಸೀನ್ಯಗಳನ್ನೆ ನಮ್ಮ ಜನತೆ ತೋರಿಸಿದರೆ, ಜಯಂತಿ ಶಕ್ತಿಹೀನವಾಗಿ ನೆಲಕ್ಕೆ ಬೀಳುವುದು ಖಂಡಿತ.

ಇಪ್ಪತ್ತೆರಡನೆಯ ವರ್ಷದಲ್ಲಿ ಜಯಂತಿ ತನ್ನ ವಾಚಕರಿಗೆ ಒಳ್ಳೆಯ ಸಾಹಿತ್ಯವನ್ನು ಒದಗಿಸಿಕೊಡಲು ಸಾಕಷ್ಟು ಪ್ರಯತ್ನವನ್ನು ಮಾಡಿದೆ. ಸಣ್ಣಕಥೆಯ ನವ ನಿರ್ಮಿತಿಯ ಬಗೆಗೆ ನಿರಾಶೆಯ ಮಾತನಾಡುವವರು, ಜಯಂತಿಯಲ್ಲಿ ಪ್ರಕಟವಾದ ಸಣ್ಣಕಥೆಗಳನ್ನು ನೋಡಿ ತಮ್ಮ ಅಭಿಪ್ರಾಯವನ್ನು ಬದಲಿಸಬಹುದು. ಕನ್ನಡ ಕಥೆಗಾರರಿಗೆ ಹೊಸಹೊಸ ಕಥನತಂತ್ರಗಳನ್ನು ನಿದರ್ಶನಕ್ಕೆ ತಂದುಕೊಡಬೇಕೆಂದು, ಪರಭಾಷೆಯ ಒಳ್ಳೊಳ್ಳೆಯ ಕಥೆಗಾರರ ಕಥೆಗಳ ಅನುವಾದಗಳನ್ನೂ ಆಗಾಗ ಪ್ರಕಟಿಸಲಾಗಿದೆ. ಈ ಸ್ವತಂತ್ರ ಕಥೆಗಳನ್ನೂ ಅನುವಾದ ಕೃತಿಗಳನ್ನೂ, ನಿಷ್ಕಾಮಬುದ್ಧಿಯಿಂದ ಒದಗಿಸಿ ಕೊಟ್ಟ ನಮ್ಮ ಲೇಖಕವರ್ಗಕ್ಕೆ ನನ್ನ ಕೃತಜ್ಞತೆಯ ವಂದನೆಗಳು.'

ಕಥೆಗಳಂತೆಯೆ ವಿವಿಧ ಸಾಹಿತ್ಯವಿಭಾಗದ ಲೇಖನಗಳೂ ಈ ಸಂಪುಟದಲ್ಲಿ ಪ್ರಕಟವಾಗಿವೆ. ಕವನ, ನಾಟಕ, ಪ್ರಬಂಧ, ಜೀವನ. ಚರಿತ್ರೆ, ವಿಜ್ಞಾನವಿಷಯ ಹೀಗೆ ಎಲ್ಲ ಲೇಖನಗಳೂ ಮೇಲಿನ ಮಟ್ಟದವಾಗಿ, ನಮ್ಮ ವಾಚಕರ ಪ್ರೀತಿಗೆ ಪಾತ್ರವಾಗಿವೆ. ಈ ಲೇಖಕವರ್ಗದ ಉಪಕಾರವನ್ನೂ ನಾನು ಮನವಾರೆ ಸ್ಮರಿಸುತ್ತೇನೆ.

ಜಯಂತಿಯ ಸಂಪಾದಕೀಯ ವಿಭಾಗಗಳನ್ನು ನಮ್ಮ ಜನತೆ ತುಂಬ ಮೆಚ್ಚಿದೆ ಆ ವಿಭಾಗಗಳಿಗೆ ಇನ್ನೂ ಹೆಚ್ಚು ಸ್ಥಳ ಕೊಡಬೇಕೆಂಬ ಸೂಚನೆಗಳೂ ಆಗಾಗ ಬರುತ್ತವೆ. ಸಂಚಿಕೆಯ ಒಟ್ಟು ಪುಟಗಳು ಹೆಚ್ಚಾದ ಹೊರತು, ಸಂಪಾದಕೀಯ ವಿಭಾಗಗಳಿಗೆ ಹೆಚ್ಚು ಸ್ಥಳವನ್ನು ಕೊಡಲು ಬರುವಂತಿಲ್ಲ.

ಜಯಂತಿ ಮುದ್ರಣದ ತೊಂದರೆಯನ್ನು ಅನುಭವಿಸುವ ಪ್ರಸಂಗ ಆಗಾಗ ಬರುತ್ತಿತ್ತು. ಈಗ ಲಲಿತ ಮುದ್ರಣಾಲಯದ ಸಂಚಾಲಕರಾದ ಶ್ರೀಮಾನ್ ಬಸವರಾಜ ಹೊರಡಿಯವರು, ನಮ್ಮ ತೊಂದರೆಯನ್ನು ಕಡಿಮೆ ಮಾಡಿದ್ದಾರೆ. ಅವರ ಸಹಕಾರ ಸಹಾನುಭೂತಿಗಳ ಕಾರಣದಿಂದಲೇ ಇದ್ದುದರಲ್ಲಿಯೆ ಜಯಂತಿ ಅಚ್ಚುಕಟ್ಟಾಗಿ-ಸಮಯಕ್ಕೆ ಸರಿಯಾಗಿ—ಬೆಳಕಿಗೆ ಬರುತ್ತಲಿದೆ. ಶ್ರೀ. ಹೊರಡಿಯವರ ಈ ಆತ್ಮೀಯಭಾವದ ಸಹಕಾರಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಅರ್ಪಿಸುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ.

ಆರ್ಥಿಕ ಆಪತ್ತಿಯ ಮೂಲಕ ಜಯಂತಿಗೆ ಆಗಾಗ ಇನ್ನೊಬ್ಬರ ಕೈಯಕಡೆಗೆ ನೋಡಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಯಾವ ಬಗೆಯ ಬೇಸರವನ್ನೂ ತೋರಿಸದೆ ಅನೇಕ ಸ್ನೇಹಿತರು ನನ್ನ ಆರ್ಥಿಕ ಅನನುಕೂಲತೆಯನ್ನು ಬಗೆಹರಿಸುತ್ತಾರೆ. ಅವರ ಹೆಸರುಗಳನ್ನು ಇಲ್ಲಿ ಹೇಳಬೇಕೆಂದರೆ, ಬಹುಜನ ಸ್ನೇಹಿತರಿಗೆ ಒಪ್ಪಿಗೆಯಾಗಲಿಕ್ಕಿಲ್ಲ. ಆದರೆ ಅವರ ಉಪಕಾರವನ್ನು ನೆನೆಯದೆ ಇರಲು ನನ್ನಿಂದ ಸಾಧ್ಯವಿಲ್ಲ. ಆ ಆಪತ್ಪಾಂಧವರ ನೆರವು ಇಲ್ಲದೆ ಹೋಗಿದ್ದರೆ, ಜಯಂತಿಯ ಮುಂಬರಿತವೇ ನಿಂತುಹೋಗುತ್ತಿತ್ತು.

ಮುಂದಿನ ತನ್ನ ಜೀವನದ ಸ್ಥಿರತೆಗಾಗಿಯೂ ಪ್ರಗತಿಗಾಗಿಯೂ ಜಯಂತಿ ಕನ್ನಡ ಜನತೆಯ ಕಡೆಗೆ ಆಶೆಯಿಂದ ನೋಡುತ್ತಲಿದೆ. ಜನತೆಗೆ ಜಯಂತಿಯ ಅವಶ್ಯಕತೆಯ ಅರಿವಾಗಬೇಕು. ತನ್ನ ಸಹಸ್ರ ಹಸ್ತಗಳಿಂದ ಜನತೆ ಜಯಂತಿಗೆ ನೆರವು ಕೊಡುತ್ತ ಹೋದರೆ, ಪತ್ರಿಕಾ ಪ್ರಪಂಚದಲ್ಲಿಯ ಒಂದು ಆದರ್ಶ ಸ್ಥಾನ ಜಯಂತಿಗೆ ದೊರೆಯದಿರದು. ನನುಸ್ತೇ।

—ಬೆಟಗೇರಿ ಕೃಷ್ಣಶರ್ಮ

ಜಯಂತಿಯ ಸಹಾಯಕರು

೧) ರಂಗಂಪೇಟೆಯ ಶ್ರೀಮಾನ್ ಬುದ್ಧಿಸಂತಸೆಟ್ಟಿಯವರು ತಮ್ಮ ಮಗಳು ಚಿ. ಸೌ. ಸುಭದ್ರೆಯ ವಿವಾಹಮಹೋತ್ಸವದ ಸವಿನೆನಪಿಗಾಗಿ ಜಯಂತಿಗೆ ೫೫ ರೂಪಾಯಿಗಳನ್ನು ಸಹಾಯಧನವೆಂದು ಕಳುಹಿಸಿದ್ದಾರೆ.

೨) ಶ್ರೀಮಾನ್ ಆರ್. ಎಂ. ಮುತಾಲಿಕ ಬಿ. ಎಸ್‌ಸಿ. ರಾಜಮಹೇಂದ್ರಿ— ಅವರು ಚಂದಾಹಣ ಸಹಿತ ೧೦ ರೂಪಾಯಿಗಳನ್ನು ಕಳುಹಿಸಿದ್ದಾರೆ.

ಇಬ್ಬರು ಮಹನೀಯರಿಗೂ ಅಭಿನಂದನೆಗಳು.

— ಸಂಪಾದಕ

ನಾಡನಡೆ

ರ್ವಧರ್ಮ ಸಮ್ಮೇಳನ

ಸುಖ-ಸಮಾಧಾನಗಳಿಂದ ಲೋಕದಲ್ಲಿ ಬಾಳಬೇಕೆನ್ನುವವನಿಗೆ ಗಳಗಳು ಬೇಕಾಗುವುದಿಲ್ಲ. ಆದುದರಿಂದ ಅಂತಹ ಲೌಕಿಕ ಸುಖ-ಾದಿ, ಸಮಾಜದಲ್ಲಿ ಇನ್ನ ಮತ-ಪಂಗಡಗಳಲ್ಲಿಯ ತಿಕ್ಕಾಟವನ್ನು ಡಮೆಮಾಡಲು ಬಯಸುವನು.

ನಾವೆಲ್ಲರೂ ಮೊದಲು ಇಹಲೋಕದಲ್ಲಿ ಒಳ್ಳೆಯ ರೀತಿಯಿಂದ ಬದುಕಿ-ಬಾಳುವ ಮಾನವರಾಗಬೇಕು. ಇದಕ್ಕಾಗಿ ಅನಾದಿಯಿಂದಲೂ ಡೆದುಕೊಂಡು ಬಂದ— ಅನಂತಕಾಲದವರೆಗೂ ಸಾಗುವ ಶಾಶ್ವತ-ಾದ ನಿಯಮಗಳಿರುವುವು. ಈ ನಿಯಮಮಾಲೆಯೆ ಧರ್ಮವೆನಿಸಿ-ಳ್ಳುವುದು. ಈ ಧರ್ಮದ ತಿಳಿವಳಿಕೆಯಿಂದಲೇ, ಅಜ್ಞಾನದ ಲಕ ಪಶುಸನಾದ— ಸ್ವಾರ್ಥದ ಮೂಲಕ ದಾನವಸಮ-ದ— ಮಾನವನು ಸ್ವಸ್ವರೂಪವನ್ನು ಕಾಣುವನು; ಸ್ವಂತದ ಕರ್ತವ್ಯ ರ್ಮಗಳೇನೆಂಬುದನ್ನು ತಿಳಿದುಕೊಳ್ಳುವನು.

ಮಾನವನು ನಿಜವಾದ ಮಾನವನಾಗಿ ಪರಿಣಮಿಸಿದ ಮೇಲೆ ನಿಗೆ 'ಮೋಕ್ಷ' ಎಂಬುದು ದೂರದ ವಿಷಯವಾಗಲಾರದು. ಆದರೆ, ಲ್ಲಿ ಮಾನವತೆಯ ಮುಖವಿ ಪರಿಚಯವನ್ನೂ ಪಡೆದುಕೊಳ್ಳದೆ, ಜನರು ಮೋಕ್ಷದ ಬಗೆಗೆ ಮಾತನಾಡುತ್ತಾರೆ. ಅಜ್ಞಾನ-ಅಭ್ಯ-ಶಗಳಿಂದ, ವ್ಯರ್ಥವಾಗಿ ಜಗಳಕಾಯುತ್ತಾರೆ. ಇದರಿಂದ ುಕ್ತಿಕ ಜೀವನಕ್ಕೂ ಹಾನಿ; ಸಾಮಾಜಿಕ ಜೀವನಕ್ಕೂ ಹಾನಿ.

ಈ ದುಷ್ಪರಿಣಾಮಗಳನ್ನು ಅರಿತು, ನಮ್ಮ ನಾಡಿನಲ್ಲಿಯ ದೂರ ಷ್ಟಿಯವರು, ಜಗಳಾಡುವ ಮತಧರ್ಮಗಳನ್ನೆಲ್ಲ ಒಂದೆಯಡೆಲ್ಲಿ ಸಿ, ಪರಸ್ಪರ ಮತಧರ್ಮಗಳು ಪರಸ್ಪರರಿಗೆ ಪರಿಚಯವಾಗು-ತೆಯೂ, ಮಾನವಧರ್ಮ ಒಂದೆಂಬ ತಿಳಿವಳಿಕೆ ಮೂಡುವಂತೆಯೂ ಸಮ್ಮೇಲನಗಳನ್ನು ಏರ್ಪಡಿಸುತ್ತಲಿವ್ದಾರೆ ಇಂತಹದೇ ಒಂದು ಯು 'ಸರ್ವಧರ್ಮ ಸಮ್ಮೇಳನ' ಎಂಬ ಹೆಸರಿಂದ, ಕಳೆದ ಏಪ್ರಿಲ್ ನೆಯ ವಾರದಲ್ಲಿ, ನವಿಲುಗುಂದದ ಗವಿಮಠದಲ್ಲಿ ನಡೆಯಿತು. ಈ ಮ್ಮೇಳನವನ್ನು ಏರ್ಪಡಿಸಿದವರು ನವಿಲುಗುಂದ ಗವಿಮಠದ ಶ್ರೀ. ಪ್ರ. ಸ್ವ. ಬಸವಲಿಂಗಸ್ವಾಮಿಗಳವರು. ಬಾಗಿಲುಕೋಟೆಯ ನಾನ್ ವೆಂಕಪ್ಪ ಸಕ್ಕರಿಯವರು ಸ್ವಾಗತಾಧ್ಯಕ್ಷರಾಗಿದ್ದರು. ಮ್ಮೇಳನದ ಕಾರ್ಯಕ್ರಮಗಳು ಶ್ರೀಮಾನ್ ಬೆಟಗೇರಿ ಕೃಷ್ಣಶರ್ಮರ ಧ್ಯಕ್ಷತೆಯಲ್ಲಿ ಸಾಗಿದುವು.

ಶ್ರೀ ಶ್ರೀ ಬಸವಲಿಂಗಸ್ವಾಮಿಗಳ ದೂರದೃಷ್ಟಿಯ ಸಾಮಾಜಿಕ ನಡೆ ಪ್ರಶಂಸನೀಯವಾದುದು. ಇವರ ಪ್ರಯತ್ನದಂತಹ ಪ್ರಯತ್ನ ಆಗಾಗ ಅಲ್ಲಲ್ಲಿ ನಡೆದು, ಪ್ರಾಮಾಣಿಕತನದಿಂದ ವಿಚಾರ-ಚರ್ಚೆ-ನಡೆಯತೊಡಗಿದರೆ, ನಮ್ಮ ಮತ-ಮತಗಳಲ್ಲಿಯ ನಿರರ್ಥಕವಾದ ಟ್ಟ ಕಡಮೆಯಾಗದಿರದು.

ದ ಗಡಿಯಲ್ಲಿಯ ಅಶಾಂತಿ ಅಡಗಿತು

ಕರ್ನಾಟಕದ ಉತ್ತರದ ಗಡಿಪ್ರದೇಶದಲ್ಲಿ ಸಂಯುಕ್ತ ಮಹಾ-ರಾಷ್ಟ್ರ ಸಮಿತಿಯ ದುಸ್ಪ್ರಚಾರದಿಂದ ಹರಡಿಕೊಂಡಿದ್ದ ಅಸಂತುಷ್ಟಿ-ಅತೃಪ್ತಿಗಳು ಈಗ ಕಡಮೆಯಾಗುತ್ತ ನಡೆದುದು ಸಂತೋಷದ ಸಂಗತಿ. ಆ ಪ್ರದೇಶದ ಪರಾಂಗಿರಿಗೆ ಪರಿಸ್ಥಿತಿಯ ವಾಸ್ತವತೆಯ ತಿಳಿವಳಿಕೆ ಈಗ ಹೇಗೋ ಮೂಡಿಕೊಂಡಿದೆ.

ಭಾಷಾನುಗುಣವಾಗಿ ಯಾವ ಪ್ರಾಂತ-ಪ್ರದೇಶಗಳನ್ನು ರಚಿಸ-ಬೇಕೆಂದರೂ, ಗಡಿಪ್ರದೇಶಗಳಲ್ಲಿ ದ್ವಿಭಾಷಾ ಜನರು ಕೂಡಿ ಇರಬೇಕಾ-ದುದು ಅನಿವಾರ್ಯ. ಒಂದು ಸಾಮಾನ್ಯನಿಯಮವನ್ನಿರಿಸಿಕೊಂಡು ಪ್ರಾಂತದ ಗಡಿಗಳನ್ನು ನಿರ್ಮಿಸಿದ ಮೇಲೆ, ಆ ಸಾಮಾನ್ಯ ನಿಯಮ-ವನ್ನು ಒಪ್ಪದೆ ಗಡಿಯ ಬದಲಾವಣೆಗಾಗಿ ಅಲ್ಲಿಯ ಒಂದು ಭಾಷೆಯ ಜನರು ವಿಶೇಷದ ಚಳವಳಿ ಹೂಡುವುದೆಂದರೆ ಅದು ಅರಾಷ್ಟ್ರೀಯ-ವೆನಿಸುವುದು; ಅನಾಗರಿಕವೆನಿಸುವುದು. ಸ್ವಂತದ ವ್ಯಕ್ತಿತ್ವವನ್ನು ಬೆಳೆಯಿಸಿಕೊಂಡು ಮುಂದಾಳುಗಳಾಗಿ ಮೆರೆಯಬೇಕೆಂಬ ದುರಾಶೆಯ ಕೆಲವು ಪುಂಡ ವ್ಯಕ್ತಿಗಳು, ಗಡಿನಾಡಿನಲ್ಲಿಯ ನಿಷ್ಕಾಪ ಮರಾಠಿಗರನ್ನು ಸಲ್ಲದ ದುರ್ಬೋಧನೆಗಳಿಂದ ರೊಚ್ಚಿಗೆಬ್ಬಿಸಿದರು. ವೈಸೂರ ಸರ-ಕಾರದ ವಿಷಯದಲ್ಲಿ ಪರಕೀಯ ಭಾವದ ವಿಷವನ್ನು ಬಿತ್ತಿದರು.

ಪರಿಣಾಮವೇನು? ಒಂದು ಸರಕಾರದೆದುರು, ಅನ್ಯಾಯದಿಂದ ಎಬ್ಬಿಸಿದ ಹುಂಬತನದ ಚಳವಳಿಯು ಎಷ್ಟು ದಿನ ತಡೆದು ನಿಂತೀತು? ದಿನಗಳು ಹೋದಂತೆ ಮರಾಠಿಗರಿಗೆ, ತಮ್ಮ ಮುಂದಾಳುಗಳ ಸ್ವಾರ್ಥ-ಸಾಧಕವೃತ್ತಿಯೂ, ತಾವು ಹೂಡಿದ ಚಳವಳಿಯ ಪೊಳ್ಳುತನವೂ ಪ್ರತೀತಿಗೆ ಬರಲು ತೊಡಗಿದುವು. ಆದುದರಿಂದಲೇ ಆ ಗಡಿನಾಡಿನಲ್ಲಿಯ ಮರಾಠಿಗರು, ತಮ್ಮ ಸ್ವಾರ್ಥಿ ಮುಂದಾಳುಗಳ ವಿರುದ್ಧ ಬಂಡನ್ನು ಹೂಡಿದರು. ಆಗ ಮುಂದಾಳುಗಳು ಮುಖತೋರಿಸಲು ಹೆದರಿ, ಮೂಲೆ ಹಿಡಿದು ಕುಳಿತುಕೊಂಡರು.

ಈಗ ಉತ್ತರದ ಗಡಿಯ ಮರಾಠಿಗರಲ್ಲಿ ಸಮಂಜಸತನ ತಲೆ ದೋರಿದೆ. ವೈಸೂರುಸರಕಾರಕ್ಕೆ ನಿಷ್ಠರಾಗಿ ನಡೆಯುವುದರಲ್ಲಿಯೆ ತಮ್ಮ ಹಿತವಿದೆಯೆಂಬ ಮಾತು ಅವರಿಗೆ ಮನನವಾಗಿದೆ. ಎಂತಲೇ ಕಳೆದ ತಿಂಗಳಲ್ಲಿ ಆ ಭಾಗದಲ್ಲಿ ತಿರುಗಾಡಿದ ಮಾನ್ಯಮಂತ್ರಿ ಜತ್ತಿ-ಯವರನ್ನು ಅಲ್ಲಿಯ ಜನರು ಹೃತ್ಪೂರ್ವಕವಾಗಿ ಸ್ವಾಗತಿಸಿದರು; ನಾವೂ ನಿಮ್ಮವರೆಂಬ ಆತ್ಮೀಯಭಾವದ ಉಡುಗೊರೆಯನ್ನು ಅರ್ಪಿಸಿದರು. ಇದನ್ನೆಲ್ಲ ಕಣ್ಣಾರೆ ಕಾಣುತ್ತಲಿದ್ದ, ಕವಿಯಾರೆ ಕೇಳುತ್ತಲಿದ್ದ ಪುಂಡ ಮುಂದಾಳುಗಳ ಹೊಟ್ಟೆಯಲ್ಲಿ ಬೆಂಕಿ ಉರಿದೆದ್ದಿರಬೇಕು? ಆದರೆ ಈ ಹುಲ್ಲುಬೆಂಕಿ ಎಷ್ಟು ಕಾಲವಿದ್ದೀತು?

ಪ್ರಜಾಪ್ರಭುತ್ವದ ಅಜೀರ್ಣರೋಗ

ಎರಡನೆಯ ಮಹಾಯುದ್ಧದ ಕೊನೆಯಲ್ಲಿ ಏಸಿಯಾ ಖಂಡ-ದಲ್ಲಿಯ ಅನೇಕ ರಾಷ್ಟ್ರಗಳು ಸ್ವತಂತ್ರವಾಗಿ, ಪ್ರಜಾಪ್ರಭುತ್ವಶಾಸನ ಪದ್ಧತಿಯನ್ನು ವುರಸ್ಕರಿಸಿ, ತಂತಮ್ಮ ರಾಷ್ಟ್ರಗಳಲ್ಲಿ ಪ್ರಚಾರದಲ್ಲಿ ತಂದು ಕೊಂಡವು. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ—ಎಂಬಂತೆ, ಪ್ರಜಾ-ಪ್ರಭುತ್ವ—ದೂರದಲ್ಲಿರುವಾಗ, ಅದರ ಬಗೆಗೆ ಅವರೆಲ್ಲರಿಗೆ ಆಕರ್ಷಣೆ ತುಂಬ ಇದ್ದಿತು. ಆದರೆ ಅದನ್ನು ತಮ್ಮ ತಮ್ಮ ರಾಷ್ಟ್ರದ ಜೀವನಕ್ಕೆ ಅನ್ವಯಿಸಿಕೊಂಡಾಗ, ಪ್ರಜಾಪ್ರಭುತ್ವದ ಅಮೃತವು ವಿಷವಾಗಿ ಪರಿಣ-

ನಿಸಿದುದನ್ನು ಅನುಭವಿಸುತ್ತಲಿದ್ದಾರೆ ಮಾವಿನಹಣ್ಣು ಮಧುರವಾದ ಪುಷ್ಟಿಕರವಾದ ವಸ್ತು ನಿಜ. ಆದರೆ ಅದನ್ನು ರೋಗಿಗಳಿಗೆ ತಿನ್ನಲು ಕೊಟ್ಟರೆ ಪಚನವಾದೀತೆ?

ಪಾಕಿಸ್ತಾನದ ಜನತೆಗೆ ಪ್ರಜಾಪ್ರಭುತ್ವ ಪಚನವಾಗದೆ ಹೊಯೀತು. ಸಿಂಹಲದಲ್ಲಂತೂ ಅದರ ಅಪಚನ, ಹೊಸ ಹೊಸ ರೋಗಗಳನ್ನೇ ನಿರ್ಮಾಣ ಮಾಡುತ್ತಲಿದೆ. ಬರ್ಮಾ, ಮಲಾಯಾ, ಇಂಡೋನೇಶಿಯಾಗಳಲ್ಲಿಯೂ ಅದು ಪಚನವಾಗಿಲ್ಲವೆಂಬುದರ ದುರ್ಲಕ್ಷಣಗಳು ಕಾಣತೊಡಗಿನೆ. ಭಾರತದಲ್ಲಿ ಪ್ರಜಾಪ್ರಭುತ್ವ ಇದುವರೆಗೆ ತಡೆದು ನಿಂತಿದೆಯೆಂದರೆ, ಅದರ ಶ್ರೇಯಸ್ಸು ನಮ್ಮ ಕೆಲವೆ ಕೆಲವು ಪ್ರಮುಖ ಧುರೀಣರಿಗೆ ಸಲ್ಲಬೇಕಾದುದೇ ಹೊರತು ಭಾರತದ ಪ್ರಜಾಸಮೂಹಕ್ಕಲ್ಲ.

ಭಾರತದಲ್ಲಿಯೂ ಪ್ರಜಾಪ್ರಭುತ್ವದ ತುತ್ತು ಕೊಳೆಯುತ್ತ ಹೇಗೆ ನಡೆದಿದೆಯೆಂಬುದಕ್ಕೆ, ನಮ್ಮ ಅನೇಕ ರಾಜ್ಯಸರಕಾರಗಳು ಪ್ರತ್ಯಕ್ಷ ಉದಾಹರಣೆಯಾಗಿ ನಿಂತಿವೆ. ಪ್ರಜಾಪ್ರಭುತ್ವವೆಂದರೆ ಏನೆಂಬುದನ್ನೇ ಅರಿಯದ ಸ್ವಾಧಿಕಾರಕಾಮಿಗಳ ಕೈಯಲ್ಲಿ ಪ್ರಜಾಪ್ರಭುತ್ವದ ಸೂತ್ರಗಳು ಹೋಗತೊಡಗಿದರೆ, ಅಂತಹ ಪ್ರಜಾಪ್ರಭುತ್ವ ಪ್ರಜಾಪ್ರಭುತ್ವವಾಗಿ ಉಳಿಯಬಲ್ಲದೆ?

ಪ್ರಜಾಪ್ರಭುತ್ವವೆಂಬುದು ಒಂದು ಶಾಸನತಂತ್ರ. ಇದರ ತತ್ತ್ವ ತಳಹದಿಗಳನ್ನು ತಿಳಿದ ಪ್ರಜಾಕೋಟಿ ಇರುವಲ್ಲಿಯೇ ಇದು ಯಶಸ್ವಿಯಾಗಬಲ್ಲದು, ಅಜ್ಞಾನಿ ಪ್ರಜೆಗಳ ನಂಬುಗೆಯನ್ನು ದುರುಪಯೋಗ ಪಡಿಸಿಕೊಂಡು, ಸ್ವಾರ್ಥ ಸಾಧಿಸಿಕೊಳ್ಳಬೇಕೆನ್ನುವ ತುಂಟ ಮುಂದಾಳುಗಳಿರುವಲ್ಲೆಲ್ಲ, ಪ್ರಜಾಪ್ರಭುತ್ವದ ತತ್ತ್ವ ಕೊಳೆತು ನಾರತೊಡಗುವುದು. ಈ ಮಾತಿಗೆ ತೀರ ಹೊಸ ಸಾಕ್ಷಿಯೆಂದರೆ ಆಂಧ್ರರಾಜ್ಯ. ಅಲ್ಲಿಯ ಈ ಅಜೀರ್ಣ ರೋಗವನ್ನು ಕಳೆಯಲು, ಮೇಲಿನ ಮುಂದಾಳುಗಳು ಎಂತಹ ಮದ್ದನ್ನು ಅರೆಯುವರೋ ನೋಡಬೇಕು. ನಮ್ಮ ಮೈಸೂರು ಸರಕಾರವ ಪ್ರಜಾಪ್ರಭುತ್ವಸೂತ್ರಧಾರಿಗಳೂ, ಆಂಧ್ರದಲ್ಲಿ ತಲೆದೋರಿದ ಈ ರೋಗದಿಂದ ಜಾಗೃತರಾಗಬೇಕು.

ಜನಾಬ್ ಅಯೂಬ್ ಖಾನರ ಜಾಣತನವೆಷ್ಟು?

ಕೇವಲ ಸೈನ್ಯಾಧಿಕಾರಿಯಾಗಿ ಸೈನಿಕರನ್ನು ಓಡಾಡಿಸುವುದರಲ್ಲಿಯೆ ಆಯುಷ್ಯವನ್ನು ಕಳೆದ ಜನಾಬ್ ಆಯೂಬ್ ಖಾನರಿಗೆ ರಾಜಕೀಯ ಜ್ಞಾನ ಎಷ್ಟಿದ್ದೀತು? ಆದರೆ ಅಂತಪ ಅವರೂ ಪಾಕಿಸ್ತಾನದಲ್ಲಿ ರಾಜಕಾರಣಿಗಳೆಂದು ಮೆರೆಯುತ್ತಿದ್ದ ಪುಂಡು-ಪೋಕರಿಗಳನ್ನೆಲ್ಲಾ ಮೂಲೆಗೊತ್ತಿ ಬಿಟ್ಟಿದ್ದಾರೆ. ಜನತೆಗಿದು ಇಷ್ಟವೊ ಅನಿಷ್ಟವೊ ಎಂಬುದು ತಿಳಿಯುವಂತಿಲ್ಲವಾದರೂ, ಮೊದಲಿನ ಪುಂಡನಾಯಕರ ಪ್ರಜಾಪ್ರಭುತ್ವಕ್ಕಿಂತ, ಈ ಸೇನಾಪತಿಯ ಸರ್ವಾಧಿಕಾರಿ ಪ್ರಭುತ್ವ ಒಳ್ಳೆಯದೆಂದು, ಪಾಕಿಸ್ತಾನದ ಪ್ರಜೆಗಳಿಗೆ ಎನಿಸುತ್ತಿರಬಹುದು. ಒಳ ಅಡಳಿತದ ವಿಷಯದಲ್ಲಿ ಈ ಮಾತು ಸರಿಹೋಯಿತು. ಈಗ ಯಾವ ರಾಷ್ಟ್ರವೂ ತನ್ನಮಟ್ಟಿಗೆ ತಾನು ಬಾಳಿಕೊಂಡಿರುವೆನೆಂದರೆ ಸಾಧ್ಯವಿಲ್ಲ. ಅಂತರ್ರಾಷ್ಟ್ರೀಯ ಆರ್ಥಿಕದೃಷ್ಟಿಯಿಂದ ಒಂದು ಪ್ರಬಲ ರಾಷ್ಟ್ರದ ತಕ್ಕೆಯಲ್ಲಿ ಸಿಕ್ಕಿಕೊಂಡ ಪಾಕಿಸ್ತಾನದಂತಹ ರಾಷ್ಟ್ರಕ್ಕಂತೂ ಸ್ವತಂತ್ರ ರೀತಿಯಿಂದ ಬಾಳಿಕೊಂಡಿರುವುದಕ್ಕೆ ಸಾಧ್ಯವೆ ಇಲ್ಲ. ಆಯೂಬ್ ಖಾನರು ಪಾಕಿಸ್ತಾನದ ಮಟ್ಟಿಗೆ ಸರ್ವಾಧಿಕಾರಿಗಳಾಗಿರಬಹುದಾದರೂ, ಅವರು ಅಮೇರಿಕೆಯ ಕೈಯಲ್ಲಿಯ ಕೀಲುಗೊಂಬೆಯಾಗಿದ್ದಾರೆ. ಪಾಕಿಸ್ತಾನದಲ್ಲಿ ನಿಂತುಕೊಂಡು, ಏನೇನೋ ತಟಸ್ಥರಾಷ್ಟ್ರದ ತತ್ತ್ವಗಳನ್ನವರು ಬಡಬಡಿಸುತ್ತಲಿದ್ದರೂ ಅವುಗಳನ್ನು ಆಚರಣೆಯಲ್ಲಿ ತಂದುತೋರಿಸಬಲ್ಲ ಸತ್ತ್ವ-ಜಾಣ್ಮೆಗಳು ಅವರಲ್ಲಿಲ್ಲ.

ಆಯೂಬ್‌ಖಾನರು ರಸಿಯದ ಅಧ್ಯಕ್ಷ ಕ್ರುಶ್ಚೇವರನ್ನೂ ತಮ್ಮಲ್ಲಿ ಬರಮಾಡಿಕೊಂಡು ಆತಿಥ್ಯ ನೀಡಿದರು. ಅಮೇರಿಕೆಯ ಅಧ್ಯಕ್ಷ ಎಸೆನ್‌ಹಾವರ್ ಅವರನ್ನೂ ಕರೆಯಿಸಿಕೊಂಡು ಸತ್ಕರಿಸಿದರು. ಈ ನಾಟ್ಯಾಭಿನಯದಿಂದ ಆಯೂಬ್‌ಖಾನರು ಏನು ಸಾಧಿಸಿದಂತಾಯಿತು? ರಸಿಯದ ಮೇಲೆ ಹಾರಿದ ಅಮೇರಿಕೆಯ ಬೇಹುನಿಮಾನ, ಪಾಕಿಸ್ತಾನದ ವಿಮಾನ ನಿಲ್ದಾಣದಿಂದಲೇ ಹಾರಿದೆಯೆಂದು ರಸಿಯವು ಅಕ್ಕೋಶದ ಪ್ರಚಾರ ನಡೆಸಿದೆ. ಪಾಕಿಸ್ತಾನಕ್ಕೆ ಈ ಆರೋಪವನ್ನ ತಿರಸ್ಕರಿಸುವ ನೈತಿಕಧೈರ್ಯವೂ ಇಲ್ಲ; ಅಹುದೆಂದು ಒಪ್ಪಿಕೊಳ್ಳುವ ಗಂಡೆದೆಯೂ ಇಲ್ಲ. ಇದಕ್ಕಾಗಿ ಅಮೇರಿಕೆಗೆ ಪ್ರತಿಭಟನೆ ಕಳುಹಿಸ್ದೇವೆಂದು ಆಯೂಬ್‌ಖಾನರು ಉಗ್ಗಡಿಸುತ್ತಾರೆ; ತನಗೆ ಅಂತಹ ಯಾವ ಪ್ರತಿಭಟನೆಯ ಪತ್ರವೂ ಪಾಕಿಸ್ತಾನದಿಂದ ಬಂದಿಲ್ಲವೆಂದು ಅಮೇರಿಕೆಯ ಸರಕಾರ ಘೋಷಿಸುತ್ತದೆ. ಹೇಗಿದೆ ತಮಾಷೆ? ಆಯೂಬ್‌ಖಾನರ ರಾಜಕೀಯ ಜಾಣತನ, ಇನ್ನೂ ಇಂತಹ ಎಷ್ಟೊಂದು ತಮಾಷೆಗಳಿಗೆ ಅವಕಾಶ ಕಲ್ಪಿಸಿಕೊಡಲಿದೆಯೋ ಏನೋ!

ಶೃಂಗಸಮ್ಮೇಳನ ಬೋಳುಬೋಳಾಯಿತು!

ಪಶ್ಚಿಮ ರಾಷ್ಟ್ರಗಳ ಅನೇಕ ದಿನದ ಆಕಾಂಕ್ಷೆಯ ಫಲವಾಗಿ ಪಾರೀಸ್ ನಗರದಲ್ಲಿ, ಪಶ್ಚಿಮದ ಶೃಂಗರಾಷ್ಟ್ರಗಳ ನಾಯಕರ ಸಭೆ ಸೇರಿತು. ಪ್ರಪಂಚವೆಲ್ಲವೂ ಈ ಸಭೆಯ ಸಮುದ್ಭವಮಥನದಿಂದ ಅವ್ಯಾ ಹೊರಡುವುದೆಂದು ಆಶೆಯಿಂದ ನೋಡುತ್ತಿತ್ತು. ಆದರೆ ಮೊದಲನೆಯ ಸಂಭಾಷಣದಲ್ಲಿಯೆ ಕಾಳಕೂಟ ವಿಷವು ಹೊರಬಿದ್ದು, ಆತುರದಿಂದ ನೋಡುವವರನ್ನೆಲ್ಲ ನಿರಾಶೆಗೊಳಿಸಿತು.

ಅಮೇರಿಕೆ ರಸಿಯಾ ಇವೆರಡೇ ಇಂದು ಕಾದಾಟಕ್ಕೆ ಸಿದ್ಧವಾ ಹೋರಿಗಳು. ಈ ಹೋರಿಗಳು ಕಾದಾಟ ಹೂಡಿದರೆ, ಪ್ರಪಂಚವೆಲ್ಲವ ಇವುಗಳ ಕಾಲುತುಳಿತಕ್ಕೆ ಸಿಕ್ಕಿ ನುಚ್ಚುನೂರಿಯಾಗಬಹುದಾಗಿದೆ. ಶೃಂ ಸಭೆ ಈ ಹೋರಿಗಳೆರಡರಲ್ಲಿ ಸ್ನೇಹಸಂಬಂಧ ಬೆಳೆಯಿಸಿ ಲೋಕಕ್ಕೆ ಒ ಬಹುದಾಗಿರುವ ಆಪತ್ತಿಯನ್ನು ದೂರವಾದಬಹುದೆಂದು ಅನೇ ಆಶೆಯಿದ್ದಿತು; ಒದಗಿರುವ ಸದ್ಯದ ಪರಿಸ್ಥಿತಿಯನ್ನು ನೋಡಿದರೆ, ಶೃಂ ಸಭೆ ಎರಡೂ ಹೋರಿಗಳಲ್ಲಿ ಹೆಚ್ಚಿನ ದ್ವೇಷ ರೋಷಗಳು ಬೆಳೆಯ ಕಾರಣವಾಯಿತೆಂದು ವಿಷಾದದಿಂದ ಹೇಳಬೇಕಾಗುವುದು.

ಈಗ ಲೋಕಶಾಂತಿಯ ವಿಚಾರ ನಿಕ್ಕಿ ಯಾವ ರಾಷ್ಟ್ರದ ರಾ ಕಾರಣಿಗಳ ಕೈಯಲ್ಲಿಯೂ ಉಳಿದಿಲ್ಲ. ರಸಿಯಾ ಅಮೇರಿಕೆಗಳ ಶಾ ಸೂತ್ರಧಾರಿಗಳ ವಿವೇಕದ ಮೇಲೆ ಅದು ಅವಲಂಬಿಸಿ ಕುಳಿತುಕೊಂ ಒಂದೆ ಒಂದು ರಾಷ್ಟ್ರನಾಯಕರ ವಿವೇಕೋದಯದಿಂದ ಧ್ಯೇಯಸಾ ಯಾಗದು. ಅದಕ್ಕೆ ಎರಡೂ ರಾಷ್ಟ್ರಗಳ ನಾಯಕರ ಹೃದಯವೂ ಗೊಳ್ಳಬೇಕು. ಈ ಅಸಾಧ್ಯವನ್ನು ಸಾಧ್ಯ ಮಾಡುವುದಕ್ಕೆ ದಾರಿಯೆ

ಪದ್ದಕ್ಕನ ಕೊನೆಯ ದಿನ

[ಸಣ್ಣಕಥೆ]

ಅ. ರಾ. ಸೇ.

ನಮ್ಮ ಹಳೆಯ ಆಚಾರ-ವಿಚಾರಗಳ ಪಾಡು, ಪದ್ದಕ್ಕನಂತಹ ಮುದುಕಿಯ ಜೀವನದ ಪಾಡು ಒಂದೇ ಆಗಿವೆ. ಕೃಷ್ಣಮೂರ್ತಿಯಂತಹ ಸ್ವೈರವೃತ್ತಿಯ ತರುಣರು ಮನೆ-ಮನೆಗಳಲ್ಲಿಯೂ ಕಾಣುತ್ತಿದ್ದಾರೆ. ಈಗಲೂ ಅವರನ್ನು ತಾಯಿಯ ಹೃದಯ, ಪರಂಪರೆಯ ಆಚಾರ— ಇವು ಆಶೆಯಿಂದ ಬೆನ್ನುಹತ್ತಿವೆ.

ಆಷಾಢದ ಚಳಿಗಾಳಿ ರಾತ್ರಿಯೆಲ್ಲಾ ಬೀಸುತ್ತಲೇ ಇತ್ತು. ಸೂರ್ಯ ಯಾವಾಗ ಹುಟ್ಟಿದನೋ ಏನೋ? ಮಳೆ, ಗುಂಜು-ಗುಂಜಾಗಿ ಬೀಳಲಾರಂಭಿಸಿತು. ಬೂದು ಬಣ್ಣದ ಮೋಡ ಆಕಾಶದಲ್ಲಿ ದಟ್ಟವಾಗಿ ತುಂಬಿತ್ತು. ಹಗಲು ಆಗ ತಾನೇ ಕಣ್ಣು ತೆಗೆದಿತ್ತು. ಪದ್ದಕ್ಕ ಕಂಬಳಿ ಹೊದೆದು ಕತ್ತಲುಕೋಣೆಯ ಮೂಲೆಯಲ್ಲಿ ಮಲಗಿದ್ದವಳು 'ರಾಮ ರಾಮಾ' ಎನ್ನುತ್ತಾ ಕಣ್ಣು ತೆರೆದಳು. ಅವಳ ಕಣ್ಣುಗಳು ಕೋಪದಿಂದ ಕೆಂಪಾದುವು.

ಅವಳಿಗೆ ಇದೀಗ ಕನಸೊಂದು ಬಿದ್ದಿತ್ತು: "ಸುಬ್ಬಣ್ಣ (ಅವಳ ಗಂಡ) ಜರತಾರಿ ಪಂಚೆಯುಟ್ಟು, ರೇಷ್ಮೆ ಉತ್ತರೀಯ ಹೊದ್ದು, ಮೀಸೆ ನೇವರಿಸುತ್ತಾ ಯಾವುದೋ ಪಹರಿನ ಗಲ್ಲಿಯಲ್ಲಿ ಹೋಗುತ್ತಿದ್ದ; ಅವನ ಜೊತೆಯಲ್ಲಿ ತಿಸ್ತುಗಾರ ಪುಟ್ಟಶಾಮಿ ದೇಶಾವರಿ ನಗೆ ನಗುತ್ತಾ ಹೊರಟಿದ್ದ. ಯಾವುದೋ ಮನೆಯೊಂದನ್ನು ತೋರಿಸಿ "ಅದೇ"ಎಂದು ಪುಟ್ಟಶಾಮಿ ಹೊರಟು ಹೋದ.

ಮನೆಯ ಬಾಗಿಲು ತೆರೆಯಿತು. ಪಪ್ಪನೆಯ ಹೆಂಗುಸೊಬ್ಬಳು ಇಣುಕಿ ನೋಡಿದಳು. ಸುಬ್ಬಣ್ಣ ಆ ಮನೆಯೊಳಕ್ಕೆ ಹೋಗಿ ಪಡಸಾಲೆಯಲ್ಲಿ ಮಂಚದ ಮೇಲೆ ಕುಳಿತ. ನಡುಮನೆಯಿಂದ ಬಿಳೀಮೀಸೆಯ ಮುದುಕರೊಬ್ಬರು ಬಗ್ಗಿನೋಡಿ ಮಾಯವಾದರು. ಒಳಗಿನಿಂದ ನಡು-ಹರೆಯದ ಹುಡುಗಿಯೊಬ್ಬಳು ಬಂದು ಮಂಚದ ಮೇಲೆ ಕುಳಿತು ನಸು ನಕ್ಕಳು."

ಅಡುಗೆ ಮನೆಯಿಂದ ಮಗು ಅಳುವ ಸದ್ದು ಕೇಳಿಸಿತು. ಪದ್ದಕ್ಕ "ಯಾಕೇ ರಂಗೂ, ಆ ಮಗೂನ ಗೋಳು ಹುಯಿದುಕೊಳ್ಳುತ್ತಿ? ಸುದಾರಿಸಬಾರದೇ? ಇದೇ ಏನು ನಿಮ್ಮ ಅಮ್ಮ ಕಲಿಸಿಕೊಟ್ಟದ್ದು? ಕೆಟ್ಟ ಎಲ್ಲಿಗೆ ಹೋದ? ಹುಚ್ಚನಾಯಿ ಹಾಗೆ ಅಲೆಯುವುದೇ ಅವನಿಗೆ ಕೆಲಸ!....." ಎಂದು ಲೊಟಗುಟ್ಟುತ್ತಾ ಕೋಲೂರಿ ಎದ್ದು ನಿಂತಳು.

"ಕೆಟ್ಟಾ, ಕೆಟ್ಟಾ" ಯಾರೋ ಬಾಗಿಲಿನಲ್ಲಿ ಕೂಗಿದ ಹಾಗಾಯಿತು. ಪದ್ದಕ್ಕ ತಿರುಗಿ ನೋಡಿದಳು.

"ಯಾರದು? ನಾಗಣ್ಣನೇ? ಹತ್ತಿರ ಬಾ. ಯಾವಾಗ ಬಂದೆ" ಪದ್ದಕ್ಕ ಕೈಸನ್ನೆಮಾಡಿ ಹೇಳಿದಳು.

"ಹೂಂ" ನಾಗಣ್ಣ ಜೋರಾಗಿ ಕೂಗಿದ "ಈಗ ಬಸ್ಸಿಗೆ ಬಂದೇ" ಪದ್ದಕ್ಕನಿಗೆ ಸರಿಯಾಗಿ ಕಿವಿಕೇಳಿಸುತ್ತಿರಲಿಲ್ಲ. ಅವಳಿಗೆ ಎಪ್ಪತ್ತರ ಮೇಲೆ ವಯಸ್ಸು.

"ನಿನ್ನೆ ಬಂದೆಯಾ? ಇವತ್ತು ನಿಮ್ಮಪ್ಪನ ವೈದೀಕವಲ್ಲವೇ? ನಿನ್ನ ಹೆಂಡತಿ ಮಕ್ಕಳು ಚೆನ್ನಾಗಿದ್ದಾರೆಯೇ?"

"ಹೂಂ. ಚೆನ್ನಾಗಿದ್ದಾರೆ. ಕೆಟ್ಟ ಎಲ್ಲಿ? ಇವೊತ್ತು ಬ್ರಾಹ್ಮಣಾರ್ಥಕ್ಕೆ ಹೇಳೋಣ ಅಂತ ಬಂದೆ" ನಾಗಣ್ಣ ಮತ್ತೆ ಕಿರುಚಿದ.

"ಕೆಟ್ಟನೇ? ಹೋದ ಎಲ್ಲಿಗೋ ಹಾಳಾಗಿ! ಹುಚ್ಚುನಾಯಿ; ಮತಿಯೇ ಮಾರ್ಗವೇ? ಕೊರಮ!"

ಪದ್ದಕ್ಕ ಮಗನನ್ನು ಇನ್ನೂ ಎಷ್ಟು ಬೈಯುತ್ತಿದ್ದಳೋ ಏನೋ? ಅಷ್ಟು ಹೊತ್ತಿಗೆ ನಾಗಣ್ಣನ ನಾಲ್ಕು ವರ್ಷದ ಮಗ "ಅಪ್ಪಾ" ಎಂದು ಕೂಗುತ್ತಾ ಓಡಿಬಂದ.

"ನಿನ್ನ ಮಗನೇ? ಏನು ಹೆಸರಿಟ್ಟಿದ್ದೀ" ಎಂದು ಕೇಳಿದಳು.

"ರಾಮು"

"ಅಜ್ಜನ ಹೆಸರೇ ಮೊಮ್ಮಗನಿಗೆ." ಹುಬ್ಬಿನ ಮೇಲೆ ಕೈಯಿಟ್ಟು, ಪದ್ದಕ್ಕ ಹೇಳಿದಳು. "ಎಷ್ಟು ಮುದ್ದಾಗಿದ್ದಾನೆ. ಆಗಲಪ್ಪಾ ಆಗಲಿ." ರಾಮುವನ್ನು ಕೈಹಿಡಿದು, ತಲೆಮೇಲೆ ಕೈಯಾಡಿಸಿ "ಬಾರೋ ಬಾ. ಕಲ್ಲು ಸಕ್ಕರೆ ಕೊಡುತ್ತೇನೆ." ಎಂದಳು. ರಾಮು ತಲೆಯಾಡಿಸಿ 'ಬೇಡ' ಎಂದ. ಪದ್ದಕ್ಕ ಕೋಣೆಯೊಳಕ್ಕೆ ಹೋದಳು.

ಪದ್ದಕ್ಕ ಯಾವಾಗಲೂ ತನ್ನ ಪೆಟ್ಟಿಗೆಯೊಳಗೆ ಕಲ್ಲುಸಕ್ಕರೆ, ದ್ರಾಕ್ಷಿ ಇಟ್ಟುಕೊಂಡಿರುತ್ತಿದ್ದಳು. ಈ ದಿವಸ ತೆಗೆದು ನೋಡಿದಾಗ ಅವೆರಡೂ ಇರಲಿಲ್ಲ.

"ಕೆಟ್ಟಾ, ಕೆಟ್ಟಾ ಎಲ್ಲೀ ಕೆಟ್ಟ? ಹೋದ ಹಾಳಾಗಿ. ಕರೆದಾಗ ಇರೋಣ ಅಂದರೇನು? ಒಂದು ಮೂರು ಕಾಸು ಕೈಬಿಟ್ಟು ಕೊಟ್ಟಾನೆ? ಬಯಸಿ ಬಯಸಿ ಪಡೆದೆ ಈ ಕಬ್ಬಿಣದ ಕೆಟ್ಟಾನ." ಹೀಗೆಯೇ ಮಗನನ್ನು ಶಪಿಸುತ್ತಾ ಪದ್ದಕ್ಕ ಹೊರಗೆ ಬಂದಾಗ, ನಾಗಣ್ಣನೂ ಇರಲಿಲ್ಲ, ರಾಮುವೂ ಇರಲಿಲ್ಲ.

"ಯಾರು ಇರುತ್ತಾರೆ ನನ್ನ ಚೀರಾಟ ಕೇಳಿ?" ಎಂದು ಕೊಂಡು ಪದ್ದಕ್ಕ ಬಚ್ಚಲುಮನೆಯ ಕಡೆಗೆ ಹೊರಟಳು.

ಮುಖತೊಳೆದು ಕಾಷೀಕುಡಿದು ಪದ್ದಕ್ಕ "ರಾಮಣ್ಣನ ಮನೆಯಲ್ಲಿ ಏನು ಮಾಡುತ್ತಿದ್ದಾರೋ ನೋಡೋಣ" ಎಂದುಕೊಳ್ಳುತ್ತಾ ಹೊರಟಳು.

* * * * *

ಪದ್ದಕ್ಕನ ಮನೆಯ ಪಕ್ಕದ್ದೇ ರಾಮಣ್ಣನ ಮನೆ. ರಾಮಣ್ಣ ಶಟ್ಟ ಅಂದಿಗೆ ಎಂಟುವರುಷ. ಈಗ ಆ ಮನೆಯಲ್ಲಿ ರಾಮಣ್ಣನ ಹಿರಿಯಮಗ ಭೀಮಣ್ಣ ಇದ್ದಾನೆ. ರಾಮಣ್ಣನಿಗೆ ಇಬ್ಬರು ಗಂಡು ಮಕ್ಕಳು. ಎರಡನೆಯ ಮಗ ನಾಗಣ್ಣ ದೂರ ದೇಶದಲ್ಲಿ ನೌಕರಿಯಲ್ಲಿದ್ದಾನೆ. ವರ್ಷಕ್ಕೆರಡು ಬಾರಿ ತಂದೆ-ತಾಯಿಯವರ ಯೋಗಕ್ಷೇಮಕ್ಕೆ ಬಂದು ಹೋಗುತ್ತಾನೆ.

ಪದ್ದಕ್ಕನಿಗೆ ರಾಮಣ್ಣನ ಮಕ್ಕಳೆಂದರೆ ತುಂಬಾ ವಿಶ್ವಾಸ. ಈಚಿನ ವರ್ಷಗಳಲ್ಲಿ ಪದ್ದಕ್ಕ ಚೀರಾಡುವುದು ಮಾಮೂಲಿಯಾಗಿ ಹೋಗಿದೆ. ಅವಳಗೂ ಅವಳ ಮಗ ಕೃಷ್ಣಮೂರ್ತಿಗೂ ಎಣ್ಣೆ-ಸೀಗೆ. ಹಾಗೆ ಅಲ್ಲದೆಹೋದರೂ ಪದ್ದಕ್ಕನ ಚೀರಾಟ ಕೇಳಿದವರಿಗೆ ಹಾಗೆನ್ನಿಸುತ್ತಿದೆ. ಪದ್ದಕ್ಕನ ಗಂಡ ಸುಬ್ಬಣ್ಣ ರಸಿಕಶಿಖಾಮಣಿ ಆಗಿದ್ದ. ಈಗಿನ ಕಾಲದ ಹುಡುಗರ ಪ್ರತಾಪಗಳ ಸುಳಿವು ಅವಳಿಗೆ ಹೊಳೆದಾಗ, ಅವರನ್ನು ಕರೆದು "ಅಯ್ಯೋ ಹುಚ್ಚು ಮುಂ.....ಗಂಡ; ಅವರ ಹಾಗೆ ಆಗಬೇಡ" ಎಂದು ಹೇಳಿ ಪದ್ದಕ್ಕ ನಗುತ್ತಿದ್ದಳು.

ಕೃಷ್ಣಮೂರ್ತಿ ತನ್ನ ತಂದೆಯ ಹೆಜ್ಜೆಗಳನ್ನೇ ಆ ಒಂದು ವಿಷಯದಲ್ಲಿ ಅನುಸರಿಸುತ್ತಿದ್ದ. ತಾಯಿಯ ಬುದ್ಧಿವಾದ ಕಲ್ಲಿನ ಮೇಲೆ ಕರೆದ ಮಳೆಯಾಗಿತ್ತು.

ವಯಸ್ಸು ಹೆಚ್ಚುತ್ತಾ ಬಂದ ಹಾಗೆಲ್ಲಾ, ತನ್ನ ಮಗ ತನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲವೆಂಬ ಆಕ್ರೋಶ ಪದ್ದಕ್ಕನಿಗೆ ಬಂದಿದೆ. ಕೃಷ್ಣಮೂರ್ತಿ ತನ್ನ ತಾಯನ್ನೇನೂ ಕಡೆಗಣಿಸಿಲ್ಲವೆಂದು ಎಲ್ಲರಿಗೂ ತೋರುತ್ತಿದ್ದರೂ, ಪದ್ದಕ್ಕನ ಚೀರಾಟದಲ್ಲಿ ನಿಜಾಂಶವಿಲ್ಲವೆಂದು ಹೇಳುವುದೂ ಕಷ್ಟದ ಮಾತೇ.

ಸುಬ್ಬಣ್ಣ ತೀರಿಕೊಂಡ ಮೇಲೆ, ಪದ್ದಕ್ಕನಿಗೆ ಜೀವನಾಂಶದ ಹಣವೆಂದು ವರ್ಷಕ್ಕೆ ಐದುನೂರು ರೂಪಾಯಿ ಉತ್ಪತ್ತಿಯ ಹೊಲ ವೊಂದನ್ನು ಅವಳ ಹೆಸರಿಗೆ ಮಾಡಿತ್ತು. ಅದು ರಾಮಣ್ಣ ಮಾಡಿದ ಪಂಚಾಯಿತಿ. ಅವಳ ಜೀವಮಾನ ಪರಿಯಂತರ ಅವಳ ರಕ್ಷಣೆಯ ಭಾರವೂ ಮಗನಿಗೇ ಸೇರಿದ್ದು. ತನ್ನ ಮಗ ಐದುನೂರು ರೂಪಾಯಿ ಇರಲಿ, ಐದು ರೂಪಾಯಿ ಸಹಾ ತನಗೆ ಕೊಡುತ್ತಿಲ್ಲವೆಂದು ಪದ್ದಕ್ಕ ಬಹಿರಂಗ ಪ್ರಚಾರ ನಡೆಸುತ್ತಿದ್ದಾಳೆ.

"ನಿನಗೇನು ಕಮ್ಮಿ ಮಾಡಿದ್ದೇನೆ. ಹೀಗೇಕೆ ಕೂಗಾಡುತ್ತೀ" ಎಂದು ಮಗ ಹೇಳಿದ ಮಾತು ವ್ಯರ್ಥ. ಅವಳ ಕಿಟಕಿಟೆಯಿಂದ ಕೃಷ್ಣಮೂರ್ತಿಗೆ ಹುಚ್ಚುಹಿಡಿಯುವ ಹಾಗಾಗಿದೆ. "ನಮ್ಮಮ್ಮ ಚಿರಂಜೀವಿ" ಎಂದೂ ಅವನು ಆಗಾಗ ಹೇಳುತ್ತಾನೆ.

ಪದ್ದಕ್ಕನಿಗೆ ಈ ಹಿಂದೆ ಸಮಾಧಾನ ಹೇಳುತ್ತಿದ್ದವರೆಲ್ಲಾ ಈಗೀಗ ತಲೆಕೊಡವಿ ದೂರ ಹೋಗುತ್ತಿದ್ದಾರೆ. ರಾಮಣ್ಣನ ಮಕ್ಕಳು ಸಮಾಧಾನ ಹೇಳಿದಾಗ ಮಾತ್ರ ಅವಳ ಆಕ್ರೋಶ ಅಲ್ಪಸ್ವಲ್ಪ ಕಡಮೆಯಾಗುತ್ತದೆ. "ಪದ್ದಕ್ಕ, ನಿನಗೂ ವಯಸ್ಸಾಯಿತು. ಎಲ್ಲಾ ಮರೆತು, ರಾಮ ರಾಮ ಎನ್ನುತ್ತಾ ಕಾಲಹಾಕು" ಎಂದು ಅವರು ಹೇಳಿದರೆ, "ಕಂಡಿದೀನಿ ಬಿಡೋ ನಿನ್ನ ವೇದಾಂತ ಹೋಗ್ಹೋಗು" ಎಂದವಳು "ಏನೋ ನನ್ನ ಕರ್ಮ! ನಿನ್ನ ಮೇಲೇಕೆ ನನ್ನ ಸಿಟ್ಟು? ಸುಖವಾಗಿರಪ್ಪ ಇರು!" ಎಂದು ಸ್ವಲ್ಪಕಾಲ ಚೀರಾಟ ನಿಲ್ಲಿಸುತ್ತಿದ್ದಳು.

ಪದ್ದಕ್ಕ ಈ ದಿನ ರಾಮಣ್ಣನ ಮನೆಗೆ ಹೋದಾಗ, ರಾಮಣ್ಣನ ಹಿರಿಯ ಸೊಸೆ ಅಡುಗೆ ಮಾಡುತ್ತಿದ್ದಳು. ಅವಳ ಮಕ್ಕಳು ಹೊರಗೆ ಅಂಗಳದಲ್ಲಿ ಆಡುತ್ತಿದ್ದರು. ಭೀಮಣ್ಣ ನಾಗಣ್ಣ ಇಬ್ಬರೂ ಹೊರಗೆ ಹೋಗಿದ್ದರು.

* * * * *

"ಏನೇ ಗಂಗೂ ಆಡುಗೆ ಎಲ್ಲಿಗೆ ಬಂತು?" ಎಂದು ಕೇಳುತ್ತಾ ಪದ್ದಕ್ಕ ಅಡುಗೆ ಮನೆಯಲ್ಲಿ ಇಣುಕಿ ನೋಡಿದಳು.

"ಕೂತುಕೋ ಬಾ ಪದ್ದಕ್ಕ. ಇವರೂ, ಇವರ ತಮ್ಮನೂ ಹೊರಗೆ ಹೋಗಿದ್ದಾರೆ." ಎಂದು ರಾಮಣ್ಣನ ಸೊಸೆ— ಗಂಗಮ್ಮ— ಹೇಳಿದಳು.

"ಆಗಲಮ್ಮ ಆಗಲಿ." ಎಂದು ಪದ್ದಕ್ಕ ಕೋಲನ್ನು ಕೈಬಿಟ್ಟು ಗೋಡೆ ಹಿಡಿದುಕೊಂಡು ಅಡುಗೆ ಮನೆಯ ಓಣಿಯಲ್ಲಿ ಕುಳಿತಳು. "ನಿನ್ನೆ ರಾತ್ರಿ ಯಾಕೋ ಜ್ವರ ಬಂದಿತ್ತು ಕಣೇ." "ಬೆಳಗಿನ ಜಾವ ಹಾಳಾದದ್ದು ಏನೋ ಕನಸು. ಎದ್ದು ಸ್ವಲ್ಪ ಹೊತ್ತಾಯಿತು ಅಷ್ಟೇ. ಏಳುತ್ತಿದ್ದ ಹಾಗೇ ನಿನ್ನ ನೈದಿಲೆ ಬಂದಿದ್ದ. ನಾಗಣ್ಣನ ಮಗನಿಗೆ ಅಜ್ಜನ ಹೆಸರೇ ಇಟ್ಟಿದ್ದಾರೆ. ಸುಖವಾಗಿರಲವ್ವಾ ಇರಲಿ. ಹುಡುಗ ಒಳ್ಳೇ ಚೂಟಿಯಾಗಿದ್ದಾನೆ. ಪಾಪ ಅದಕ್ಕೆ ಕೊಡೋಣ ಅಂದರೆ ಒಂದು ಚೂರು ಕಲ್ಲು ಸಕ್ಕರೆಗೂ ಗತಿಯಿಲ್ಲ. ಕಿಟ್ಟನ ಹತ್ತಿರ ದುಡ್ಡು ಇಸಗೊಂಡು ತರಿಸಿಕೊಡೋಣ ಎಂದರೆ, ಅವನು ಮನೆಬಿಟ್ಟು ಎಲ್ಲಿಯೋ ಹೋಗಿದ್ದ. ಎಲ್ಲಾ ತನ್ನಪ್ಪನ ಪ್ರತಿರೂಪ. ಆದರೂ ಅವರು ಇರೋತನಕ....ನನಗೆ....ಯಾತಕ್ಕೂ ಕಡಿಮೆ...." ಪದ್ದಕ್ಕ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಗಂಗಮ್ಮನಿಗೆ ಏನುಹೇಳಲೂ ತೋಚಲಿಲ್ಲ. ಪದ್ದಕ್ಕ ತನ್ನ ಕೆಂಪು ಸೀರೆಯ ಸೆರಗಿನಿಂದ ಕಣ್ಣೊರೆಸಿಕೊಂಡು

"ನನ್ನ ಜೀವನಾಂಶದ ದುಡ್ಡು ನನಗೆ ಕೊಟ್ಟುಬಿಡಲಿ. ನಿನ್ನ ಗಂಡನಿಗೂ ಭಾವನಿಗೂ ಹೇಳಿ ಕಿಟ್ಟನ ಕೈಲಿ ಕೊಡಿಸಿಬಿಡು. ಇವ್ವೊತ್ತೇ ತೀರ್ಮಾನ ಆಗಿಬಿಡಲಿ." ಎಂದಳು.

ಗಂಗಮ್ಮ ಏನೂ ಹೇಳಲಿಲ್ಲ. ಬೆಳಗ್ಗೆ ಮಾಡಿದ ಕಾಫಿ ಇದ್ದಿಲೊಲೆಯ ಮೇಲಿತ್ತು, ಡಿಕಾಕ್ಷನಿಗೆ ಹಾಲು-ಸಕ್ಕರೆ ಹಾಕಿ ಪದ್ದಕ್ಕನಿಗೆ ತಂದುಕೊಟ್ಟಳು.

"ಪದ್ದಕ್ಕಾ ಕಾಫೀ ತಕೋ. ಹೇಗಿದೆಯೋ ಏನೋ? ಬೆಳಗ್ಗೆ ಮಾಡಿದ್ದು" ಎಂದಳು. ಪದ್ದಕ್ಕ ಕಾಫೀ ಬಟ್ಟಲು ತೆಗೆದುಕೊಂಡು, ಕುಡಿಯುತ್ತಾ ಹೇಳಿದಳು.

"ಅಮೃತವಾಗಿದೆ ಕಣೇ. ಭಾಳ ಚೆನ್ನಾಗಿದೆ. ಇವ್ವೊತ್ತೇ ಏನಾದರೂ ಒಂದು ತೀರ್ಮಾನ....."

ಗಂಗಮ್ಮ "ಅದೆಲ್ಲಾ ಯಾಕೆ ಪದ್ಮಕ್ಕ? ದೇವರು ನಿನಗೇನು ಕಡಿಮೆ ಮಾಡಿದಾನೆ. ರಾಮ ರಾಮಾ ಎನ್ನುತ್ತಾ ....." ಎನ್ನುವಷ್ಟರಲ್ಲೇ ಪದ್ದಕ್ಕ ಜೋರಾಗಿ ನಕ್ಕುಬಿಟ್ಟಳು.

"ಎಲ್ಲಾರಿಗೂ ರಾಮಣ್ಣನ ಗುಣವೇ. ಹೌದಮ್ಮಾ ನಾನು ಪಾಪಿ. ರಾಮಣ್ಣನೂ, ನಿಮ್ಮತ್ತೆಯೂ, ನೀವೂ ಎಲ್ಲರೂ ಹೇಳಿದರೂ ನನಗೆ ಸಮಾಧಾನ ಬರಲಿಲ್ಲ. ಪುಣ್ಯವಂತ ಎಂದರೆ ನಿಮ್ಮ ಮಾವ. ಅವನಿಲ್ಲದಿದ್ದರೆ ನಮ್ಮ ಮನೆ ಮುರಿದು ಹೋಗುತ್ತಿತ್ತು.

ಒಲೆಯ ಕಟ್ಟಿಗೆಗಳು ಸರಿಯಾಗಿ ಉರಿಯುತ್ತಿರಲಿಲ್ಲ. ಗಂಗಮ್ಮ ಒಲೆ ಊದಲಾರಂಭಿಸಿದಳು. ಅಡುಗೆಮನೆಯಲ್ಲೆಲ್ಲಾ ತುಂಬಿದ ಹೊಗೆ ಓಣಿಗೂ ನುಗ್ಗಿತು.

ಪದ್ದಕ್ಕ ಕಾಫಿ ಬಟ್ಟಲನ್ನು ತೆಗೆದಿಟ್ಟು "ಇವನ್ನೆಲ್ಲಾ ಯಾರು ತೊಳೆಯುತ್ತಾರೆಯೇ? ನಿನ್ನ ಗಂಡನಿಗೆ ಕೆಲಸ ಹಚ್ಚು....." ಎಂದು ನಕ್ಕಳು. ಅಷ್ಟು ಹೊತ್ತಿಗೆ ಅವಳ ಸೊಸೆ ರಂಗಮ್ಮ ಬಂದಳು. ಆ ದಿವಸವೆಲ್ಲಾ ಹೊರಗೆಲಸವನ್ನು ಅವಳೇ ನೋಡಿಕೊಳ್ಳುವುದು ವಾಡಿಕೆ. ಪದ್ದಕ್ಕನ ಊಟವೂ ಅಲ್ಲಿಯೇ.

"ನಾನಿದೇನತ್ತೇ" ಎಂದಳು ರಂಗಮ್ಮ.

"ಎಂಥ ಅತ್ತೆಯೋ? ಕತ್ತೆ!" ಎಂದುಕೊಂಡಳು ಪದ್ದಕ್ಕ.

"ಗಂಗೂ ನಿನಗೇನು ಗೊತ್ತು, ಅದು ಬಲು ಹಿಂದಿನ ಕತೆ. ಆಗ ನೀನಿನ್ನೂ ಹುಟ್ಟಿದ್ದೆಯೋ ಇಲ್ಲವೋ, ನಿನ್ನ ಗಂಡ ಎರಡು ವರ್ಷದ ಹುಡುಗ. ನಮ್ಮವರ ಸ್ವಭಾವ ಎಂದರೆ ದೇವರೇ ಬಲ್ಲ. ಗೋಕುಲ ಕೃಷ್ಣನ ಕೆಟ್ಟ ಚಾಳಿ ಅವರ ಅಡಿಯಿಂದ ಮುಡಿಯವರೆಗೂ. ಪುಟ್ಟ ಶಾಮಿಗೂ ಅವರಿಗೂ ಗಳಸ್ಯ ಕಂಠಸ್ಯ. ಇಬ್ಬರೂ ಯಾವಾಗಲೂ ಅವಳ ಹಿಂದೆ ಇವಳ ಹಿಂದೆ. ಏನೇನು ಮಾಡಿದರೋ ಏನೋ!" ಪದ್ದಕ್ಕ ನಕ್ಕಳು. ಗಂಗಮ್ಮ ಒಲೆ ಊದುತ್ತಿದ್ದಳು. ರಂಗಮ್ಮ ಹತ್ತಲ್ಲಿ ಉಪಕರಣ ತೊಳೆಯುತ್ತಿದ್ದಳು,

"ಇಪ್ಪತ್ತು ವರ್ಷ ಸಂಸಾರ ಮಾಡಿದ ಮೇಲೂ ನನಗೆ ಮಕ್ಕಳಾಗಲಿಲ್ಲ. ಆ ದೇವರು, ಈ ದೇವರು ಹರಕೆ ಹೊತ್ತಿದ್ದಾಯಿತು. ಕಂಡಕಂಡವರಿಗೆಲ್ಲಾ ಜಾತಕ ತೋರಿಸಿವ್ವಾಯಿತು. ಅಶ್ವತ್ಥ ಕಟ್ಟಿ ಸುತ್ತಿ ಸುತ್ತಿ ಸಾಕಾಗಿ ಹೋಯಿತು. ಏನೂ ಪ್ರಯೋಜನವಾಗಲಿಲ್ಲ. ರಾಮಣ್ಣನೊಬ್ಬನು ಮಾತ್ರ "ಪದ್ದಕ್ಕ, ಮೂವತ್ತೈದು ವರ್ಷವಾದ ಮೇಲೆ ನಿನಗೆ ಮಕ್ಕಳಾಗುವ ಯೋಗವಿದೆ" ಎಂದು ಜಾತಕ ನೋಡಿ ಹೇಳುತ್ತಿದ್ದ.

"ಈ ನಡುವೆ ಒಂದು ಸಲ ಇವರೂ ಪುಟ್ಟಶಾಮಿಯೂ, ಮೈಸೂರಿಗೆ ದಸರಾ ನೋಡಿಕೊಂಡು ಬರಲು ಹೋದರು. ವಿಜಯದಶಮಿ ಆದಮೇಲೆ ಬೆಂಗಳೂರಿಗೆ ಹೋದರು. ಅಲ್ಲಿಯೇ ಹದಿನೈದು ದಿನ ತಾಣೆ ಹಾಕಿದರು. ದೀಪಾವಳಿ ಮುಗಿದ ಮೇಲೇ ಅವರು ಊರಿಗೆ ಬಂದದ್ದು.

"ಅವರು ಬಂದ ಒಂದೆರಡು ದಿನದೊಳಗಾಗಿ ಊರಿನ ತುಂಬಾ ಒಂದು ಸುದ್ದಿ ಹಬ್ಬಿತು. ಜನಗಳೆಲ್ಲಾ ಗುಸುಗುಸು ಮಾತಾಡಿಕೊಳ್ಳುತ್ತಿದ್ದರು. ನನ್ನ ಕಿವಿಗೂ ಹೌದೋ ಅಲ್ಲವೋ ಎನ್ನುವ ಹಾಗೆ ಬಿತ್ತು. ಅದು ನಿಜವೋ ಸುಳ್ಳೋ ತಿಳಿದುಕೊಳ್ಳಲು ನಿಮ್ಮ ಮಾವನ ಹತ್ತಿರಕ್ಕೆ ಬಂದೆ. "ಇದು ನಿಜವೇ ರಾಮಣ್ಣ?" ಎಂದು ಕೇಳಿದೆ.

"ಹೌದು ಪದ್ದಕ್ಕಾ. ನಿನ್ನ ಗಂಡ ಎರಡನೇ ಮದುವೆಯಾಗುತ್ತಾನಂತೆ ಹೆಣ್ಣು ಬೆಂಗಳೂರಿನದು. ಯಾರೋ ವಿಠ್ಠಲರಾಯರ ಮಗಳಂತೆ— ಎಂದ ನಿಮ್ಮ ಮಾವ. 'ನನ್ನ ಹಣೆಯಲ್ಲಿ ಹೀಗೆ ಬರೆದಿದೆ ರಾಮಣ್ಣ ಏನು ಮಾಡುವುದು? ಮಕ್ಕಳನ್ನು ಪಡೆಯುವ ಭಾಗ್ಯ ನನಗಿಲ್ಲ' ಎಂದು ಕಣ್ಣೀರು ಕರೆದೆ. ರಾಮಣ್ಣ 'ಯೋಚನೆ ಮಾಡಬೇಡ ಪದ್ದಕ್ಕ. ಸುಬ್ಬಣ್ಣನ ಜಾತಕದಲ್ಲಿ ಎರಡು ಮದುವೆಯಾಗುವ ಯೋಗವಿಲ್ಲ. ಅಲ್ಲದೆ ನಿನಗೆ ಇನ್ನೊಂದು ವರ್ಷದೊಳಗಾಗಿ ಮಕ್ಕಳಾಗುತ್ತವೆ.' ಎಂದ. ನಾನು 'ಅದು ಹೇಗಾಗುತ್ತದೆ ರಾಮಣ್ಣ. ಮದುವೆ ನಿಶ್ಚಯವಾಗಿ ಹೋಗಿದೆ' ಎಂದೆ. 'ಇನ್ನೂ ತಾಳಿಕಟ್ಟೆಯೂ ಇಲ್ಲ. ಸಪ್ತಪದಿಯೂ ಆಗಲಿಲ್ಲ' ಎಂದ ನಿಮ್ಮ ಮಾವ.

"ನಾನು 'ನಮ್ಮ ಸಂಬಂಧದಲ್ಲೇ ಮದುವೆಯಾಗಿದ್ದಿದ್ದರೆ ನಾನು ಬೇಡ ಎನ್ನುತ್ತಿರಲಿಲ್ಲ' ಎಂದೆ. ಅದಕ್ಕೆ ರಾಮಣ್ಣ 'ಅವನಿಗೆ ವಂಶ ಉದ್ಧಾರವಾಗುವುದರ ಕಡೆಗೆ ಅಷ್ಟು ಬುದ್ಧಿ ಹರಿಯುತ್ತಿಲ್ಲ' ಎಂದ.

"ಒಂದು ವಾರ ಕಳೆಯಿತು. ಊರಿನ ತುಂಬಾ ಇದೇ ಸುದ್ದಿ. ನಮ್ಮ ಜನಗಳೆಲ್ಲಾ ನಮ್ಮ ಕಟ್ಟೆಯ ಮೇಲೆ ಸೇರಿ ಬರೀ ಇದೇ ಮಾತಾಡುತ್ತಿದ್ದರು. ಯಾರೂ ಇದನ್ನು ತಪ್ಪು ಎನ್ನಲಿಲ್ಲ.

"ಒಂದು ದಿನ ರಾಮಣ್ಣ ದಾವಣಗೆರೆಗೆ ಹೋಗಿಬಂದವನು ನೇರವಾಗಿ ನಮ್ಮ ಮನೆಗೇ ಬಂದ. ಅವರು ಇರಲಿಲ್ಲ.

"ಪದ್ದಕ್ಕ ಕೆಲಸ ಕೆಟ್ಟಿತು. ದಾವಣಗೆರೆಗೆ ಹೋಗಿದ್ದಾಗ ನಮ್ಮ ಶಾಸ್ತ್ರಿಗಳ ಮನೆಗೆ ಹೋಗಿದ್ದೆ. ಆ ಮಾತು ಈ ಮಾತು ಆಡುತ್ತಾ ಸುಬ್ಬಣ್ಣನ ಎರಡನೇ ಮದುವೆಯ ಸುದ್ದಿ ಬಂತು. ಸುಬ್ಬಣ್ಣನಿಗೆ ಹೆಣ್ಣು ಕೊಡುತ್ತಾರಲ್ಲಾ, ಅದಕ್ಕೆ ಆಗಲೇ ಮದುವೆಯಾಗಿದೆಯಂತೆ. ವಿಠ್ಠಲರಾಯ ಮಹಾಕುತಂತ್ರಿಯಂತೆ. ಶಾಸ್ತ್ರಿಗಳು ಬೆಂಗಳೂರಿನ ಕಡೆಯವರೇ, ಅವರಿಗೆ ಅವನ ಸುದ್ದಿ ಗೊತ್ತು' ಎಂದು ಹೇಳಿದ. ನಾನು ಜೋರಾಗಿ ಅಳಲಾರಂಭಿಸಿದೆ.

"ಅವರು ಅಷ್ಟರಲ್ಲಿ ಒಳಕ್ಕೆ ಬಂದರು. 'ರಾಮಣ್ಣ ನಿನಗೇಕೆ ಇಲ್ಲದ ಕಾರುಬಾರಿನ ಮಾತು ಶಾಸ್ತ್ರಿಗೇನು ಗೊತ್ತು? ಅವಳಿಗೆ ಮದುವೆ ಗೊತ್ತಾಗಿತ್ತು. ಅಷ್ಟೇ. ಮದುವೆ ಆಗಲಿಲ್ಲ' ಎಂದರು.

'ನಿನಗೇನು ಗೊತ್ತು. ಯಾವ ಆಧಾರದ ಮೇಲೆ. ಹಾಗೆ ಹೇಳುತ್ತೀ? ಕಾಣದ ಊರಿನ ಸುದ್ದಿ ಯಾರೊಬ್ಬರ ಮಾತಿನ ಮೇಲೂ ನಂಬಬಾರದು.' ಎಂದು ರಾಮಣ್ಣ ವಾದಿಸಿದ.

'ಅದು ಹೇಗಾದರೂ ಇರಲಿ. ನಾನು ಸಂತಾನವಿಲ್ಲದೆ ಸತ್ತರೆ ನನ್ನ ಆಸ್ತಿ ನಿನಗೇನೂ ಬರುವದಿಲ್ಲ. ನನ್ನ ವಂಶಾಭಿವೃದ್ಧಿಗೆ ನೀನೇಕೆ ಅಡ್ಡಿ ಬರುತ್ತೀ' ಇವರು ಹೇಳಿದರು.

'ಸುಬ್ಬಣ್ಣ, ವಂಶ ಅಭಿವೃದ್ಧಿಗೆ ಬರುವುದು ಮೋಹದಿಂದಲ್ಲ. ನೀನು ಬೇರೆ ಹೆಣ್ಣನ್ನೇಕೆ ಮದುವೆಯಾಗಲಿಲ್ಲ. ನಿನಗೀಗ ಬುದ್ಧಿ ಕದಡಿ ಹೋಗಿದೆ. ಮಂಕು ಕವಿದಿದೆ' ಎಂದು ಹೇಳಿದ ನಿಮ್ಮ ಮಾವ. ಇವರು ರೇಗಿದರು.

'ಮದುವೆಯಾದವಳೋ, ಗಂಡ ಸತ್ತವಳೋ ಕಟ್ಟಿಕೊಂಡು ನಿನಗೇನು? ನಾನು ಅವಳನ್ನೇ ಆಗುವುದು ದಿಟ. ನಿನ್ನನ್ನು ಯಾರು ಕರೆಸಿ ಕೇಳಿದವರು?' ಎಂದರು.

'ದುಡುಕಬೇಡ ಸುಬ್ಬಣ್ಣ! ಮನೆತನ ಉದ್ಧಾರ ಮಾಡುವುದು ಹೀಗೆಲ್ಲ' ಎಂದ ನಿಮ್ಮ ಮಾವ.

'ತಲೆಹರಟೆ ಮಾಡಬೇಡ. ಎದ್ದು ಹೋಗು' ಎಂದು ಇವರು ಜೋರಿದರು. ರಾಮಣ್ಣ ಮುಖ ಕೆಳಗೆ ಹಾಕಿಕೊಂಡು ಎದ್ದುಹೋದ. ನಾನು ಅಳುತ್ತಾ ಎದ್ದು ಹೋಗಿ ಮೂಲೆಯಲ್ಲಿ ಮಲಗಿದೆ.

"ಈ ಸುದ್ದಿ ಕರ್ಣಾಕರ್ಣಿಯಾಗಿ ಊರಿನಲ್ಲೆಲ್ಲಾ ಹಬ್ಬಿತು. ಅನೇಕರು ಈ ಮದುವೆ ಸರಿಯಲ್ಲವೆಂದು ವಾದಿಸಿದರು. ಇವರು ಹಠ ಹಿಡಿದರು. ಸಮಾಜದವರೆಲ್ಲಾ ಸೇರಿ ಈ ಸುದ್ದಿಯನ್ನು ಶೃಂಗೇರಿ ಮಠಕ್ಕೆ ತಿಳಿಸಿ 'ಮಠದ ಅನುಜ್ಞೆ ಸಿಕ್ಕರೆ ಮಾತ್ರಾ ಮದುವೆ ನಡೆಯ-ತಕ್ಕದ್ದು' ಎಂದು ತೀರ್ಮಾನ ಮಾಡಿದರು. ರಾಮಣ್ಣನನ್ನೇ ಶೃಂಗೇರಿಗೆ ಕಳಿಸಬೇಕೆಂದು ಎಲ್ಲರೂ ನಿರ್ಧಾರ ಮಾಡಿದರು. ಈ ತಂಟೆ ನನಗೆ ಬೇಡ– ಎಂದು ರಾಮಣ್ಣ ಹೇಳಿಬಿಟ್ಟ. ಆಗ ನಾನು ಬಂದು ರಾಮಣ್ಣನ ಮುಂದೆ ಗೋಳೋ ಎಂದು ಅತ್ತು, 'ಈ ಕೆಲಸ ಮಾಡಲು ನೀನೇ ಸರಿ. ನೀನು ಕೈ ಬಿಟ್ಟರೆ ಇನ್ನಾರು ಗತಿ' ಎಂದು ಹೇಳಿದೆ.

ರಾಮಣ್ಣ ಹೇಳಿದ "ಪದ್ಮಕ್ಕ, ಪರರ ಗೃಹಕೃತ್ಯದಲ್ಲಿ ಕೈಹಾಕು-ವವನು ಮೂರ್ಖ ಎಂದು ತಿಳಿದೂ ತಿಳಿದೂ, ನಿಮಗೆ ಒಳ್ಳೆಯದಾಗಲಿ ಅಂತ ಎರಡು ಮಾತಾಡಿದ್ದಕ್ಕೆ ನಿಷ್ಠೂರದ ಮಾತು ಕೇಳಿದೆ. ಆಯಿತು, ನಾನು ಮತ್ತೆ ಕೈಹಾಕಲಾರೆ" ಎಂದ. ನಾನು ಹೇಳಿದ ಮಾತನ್ನೇ ಊರಿನವರೂ ಹೇಳಿದರು. ಕೊನೆಗೆ ನನ್ನ ರಾದ್ಧಾಂತದಿಂದ ಅವರೇ ಬಂದು ನಿಮ್ಮ ಮಾವನನ್ನು ಕೇಳಿಕೊಂಡರು.

" ರಾಮಣ್ಣ, ಇನ್ನು ಎಂಟು ದಿವಸಕ್ಕೆ ಮದುವೆ. ಅಷ್ಟರೊಳ-ಗಾಗಿ ಬಾ " ಎಂದು ಹೇಳಿದರು. ರಾಮಣ್ಣ ಶೃಂಗೇರಿಗೆ ಹೊರಟ. ಐದಾರು ದಿವಸ ಕಳೆದರೂ ಅವನು ಬರಲಿಲ್ಲ.

" ಆರನೆ ದಿವಸ, ನಮ್ಮ ಮನೆಯಲ್ಲಿ ದೇವರ ಕಾರ್ಯವಾಯ್ತು. ರಾಮಣ್ಣ ಬರುವುದರೊಳಗೆ ಊರು ಬಿಡಬೇಕೆಂದು ಪುಟ್ಟಶಾಮಿ ಅವರಿಗೆ ಹೇಳಿದ್ದನ್ನೂ ಕೇಳಿದೆ. 'ದೇವರೇ, ನೀನೇಗತಿ' ಎಂದು ಸುಮ್ಮನಾಗಿ ಬಿಟ್ಟೆ. ಸಾಯಂಕಾಲ ಗಾಡಿಗೆ ಸಾಮಾನು ಅಡಕಿದರು. ಅವರಿಗೆ ಬೇಕಾದವರೆಲ್ಲಾ ಗಾಡಿ ಹತ್ತಿದರು. ನನ್ನನ್ನೂ ಕರೆದರು. ನಾನು ಬರುವುದಿಲ್ಲ ಎಂದು ಹಠ ಹಿಡಿದೆ. ಗಾಡಿ ಹೊರಟೇ ಬಿಟ್ಟಿತು. ನನ್ನ ಎಡಗಣ್ಣು ರೆಸ್ಸೆ ಹೊಡೆಯಿತು. ದಾವಣಗೆರೆಗೆ ಹೋಗಿ ಅಲ್ಲಿಂದ ಬೆಳ-ಗಿನ ರೈಲು ಹತ್ತಿ ಬೆಂಗಳೂರಿಗೆ ಹೋಗಿಯೇ ಬಿಡುತ್ತಾರೆ. ನನ್ನ ಕತೆ ಮುಗಿದ ಹಾಗೆಯೇ ಎಂದುಕೊಂಡೆ.

"ಆ ದಿನ ರಾತ್ರಿಯೇ ರಾಮಣ್ಣ ಬಂದ. ಮಕೆದವರು 'ಈ ಮದುವೆ ಆಗಕೂಡದು' ಎಂದು ಎಂದಿದ್ದರಂತೆ. 'ಬೆಳಿಗಿನ ಬಸ್ಸಿಗೆ ನಾವಿಬ್ಬರೂ ದಾವಣಗೆರೆಗೆ ಹೋಗೋಣ' ಎಂದು ರಾಮಣ್ಣ ಹೇಳಿದ. ರಾತ್ರಿಯೆಲ್ಲಾ ಬಿರುಗಾಳಿ ಬಿಸುತ್ತಿತ್ತು. ಮಳೆ ಜೋರೋ ಎಂದು ಹಿಡಿದಿತ್ತು.

" ಬೆಳಿಗಿನ ಜಾವದ ಹೊತ್ತಿಗೆ ಮನೆಬಾಗಿಲು ತಟ್ಟಿದ ಹಾಗಾಯ್ತು. ಇವರು ಕೂಗಿದ ಹಾಗಾಯ್ತು. ಇದೇನೋ ಕನಸು ಎಂದುಕೊಂಡೆ. ಇಲ್ಲ. ಅವರೇ ಬಂದಿದ್ದರು. ರಾತ್ರಿ ಆನಗೋಡು ಸರದಲ್ಲಿ ಎತ್ತಿನ ಗಾಡಿಯ ಅಚ್ಚು ಮುರಿದಿತ್ತಂತೆ. ಕಳ್ಳರು ಬಂದು ಗಾಡಿಯಲ್ಲಿದ್ದವರನ್ನೆಲ್ಲಾ ಬಡಿದು ಹಾಸಿಗೆ, ಆಭರಣ, ದುಡ್ಡು ಎಲ್ಲಾ ದೋಚಿಕೊಂಡು ಹೋಗಿದ್ದರು! ಮದುವೆ ಆಯಿತಲ್ಲ!

" ಮುಂದಿನ ವರ್ಷನೇ ಕಿಟ್ಟು ಹುಟ್ಟಿದ್ದು. ಏಕೋ ತಲೆ ನೋಯ್ತಾ ಇದೆ ಗಂಗು. ಆಗಲೇ ಮಧ್ಯಾಹ್ನವಾಯಿತು. ಏನೋ, ನಾಗಾ ಎಲ್ಲಿಗೆ ಹೋಗಿದ್ದೆ? ಕಿಟ್ಟು ಸಿಕ್ಕನೇ." ಎನ್ನುತ್ತಾ ಪದ್ಮಕ್ಕ ಕೋಲೂರಿಕೊಂಡು ಎದ್ದಳು.

" ಬೆಳಿಗ್ಗೆಯೇ ಸಿಕ್ಕ ಪದ್ಮಕ್ಕ. ತೋಟಕ್ಕೆ ಕರೆದುಕೊಂಡು ಹೋಗಿದ್ದ" ಎಂದ ನಾಗಣ್ಣ.

* * * *

ಮಧ್ಯಾಹ್ನವಾಗಿದ್ದರೂ ಛಳಿಯಾಗುತ್ತಿತ್ತು. ಆಕಾಶದಲ್ಲಿ ಕಪ್ಪು ಮೋಡದ ತುಂಡುಗಳು ಗಾಳಿಯ ಹೊಡೆತಕ್ಕೆ ವೇಗವಾಗಿ ಚಲಿಸುತ್ತಿ-ದ್ದುವು. ಮಳೆ ಬರುತ್ತಿರಲಿಲ್ಲ. ಬೆಳಿಗಿನ ಜುಬ್ಬಿಗೇ ಅದು ಕೊನೆ-ಗೊಂಡಿತ್ತು. ಮನೆಯ ಮುಂದಿನ ಮರದ ಮೇಲೆ ಕುಳಿತ ಕಾಗೆಗಳ ಆಕ್ರಂದನ ತಾರಕಕ್ಕೇರಿತ್ತು.

ಕೃಷ್ಣಮೂರ್ತಿ ಮನೆಯ ಮುಂದೆ ಬಾಗಿಲಲ್ಲಿ ನಿಂತಿದ್ದ. ನಡು-ಹರೆಯದವಳೊಬ್ಬಳು ಕಟ್ಟಿಗೆ ಹೊರೆ ಹೊತ್ತು ನಗುತ್ತಾ ಅಂಗಳದಲ್ಲಿ ನಿಂತಿದ್ದಳು. ಅಷ್ಟರಲ್ಲಿ ಪದ್ಮಕ್ಕ ಬಂದಳು.

" ಅರಿಷ್ಟ ಮುಂ..... ಹೋಗು. ತೋಟವಿರುವನರಿಗೆ ಕಟ್ಟಿಗೆ ಯಾಕೆ " ಎನ್ನುತ್ತಾ ಒಳಕ್ಕೆ ಹೋಗಿ ಕೋಣೆಯಲ್ಲಿ ಮಲಗಿದಳು.

ಕೃಷ್ಣಮೂರ್ತಿ ನಗುತ್ತಾ " ಹೆಂಗೆ ಹಾಕ್ತೀ ಹೊರೇನಾ?' ಎಂದು ಕೇಳಿದ.

" ಎಂಟಾಣೆ ಸೋಮಿ "

" ಎರ್ಡಾಣೆಗೆ ಹಾಕ ಹಂಗಿದ್ರೆ....."

" ಯೋ, ಸೋಮಿ! ಎಳ್ಡಾಣೇ ಅಂತೇ."

" ಹೆಂಗಾರೆ ಆಗ್ಲಿ ಹಿತ್ಲ ಕಡೀಗೆ ತಗಂಬಾ " ಎಂದ ಕೃಷ್ಣಮೂರ್ತಿ ಅವಳು ಹಿತ್ತಿಲ ಕಡೆಗೆ ಹೋದಳು. ಕೃಷ್ಣಮೂರ್ತಿ ಮುಂದಿನ ಬಾಗಿಲು ಹಾಕಿದ. ಒಳಗೆ ಹೋಗಿ ಕೋಣೆಯಲ್ಲಿ ಇಣುಕಿ ನೋಡಿದ. ಪದ್ಮಕ್ಕ ಕಂಬಳಿ ಮುಸುಕು ಹಾಕಿ ಮಲಗಿದ್ದಳು. 'ಸದ್ಯ' ಎಂದುಕೊಂಡ ಹಿತ್ತಿಲ ಬಾಗಿಲೂ ಹಾಕಿ ಹಿತ್ತಿಲೊಳಗೆ ಹೋದ. ಕಟ್ಟಿಗೆಯವಳ ಹಿತ್ತಿಲ ಕಾಂಪೌಂಡಿನ ಬಾಗಿಲು ತೆರೆದು ಒಳಗೆ ಬಂದಳು.

* * * *

ಸ್ವಲ್ಪ ಹೊತ್ತಾದ ಮೇಲೆ ಪದ್ಮಕ್ಕ ಎದ್ದಳು. 'ಕಟ್ಟಿಗೆ ಯಾ ತೋಟ ಇರುವವರಿಗೆ?' ಎಂದು ಗೊಣಗಿದಳು. 'ಹಾಳಾದ ಕಾಲಿ ಏನೋ ಹೋಗುಗಾಲ ಬಂದಿದೆ' ಎಂದುಕೊಂಡಳು 'ಯಾರ ಮುಂದಿನ ಬಾಗಿಲು ಹಾಕಿದವರು? ಮಧ್ಯಾಹ್ನದ ಹೊತ್ತು' ಎಂದ ಕೊಂಡಾಡುತ್ತಾ ಬಂದು, ಬಾಗಿಲು ತೆಗೆದಳು. ಆ ಮೇಲೆ ಹಿತ್ತಿ

ಾಗಿಲ ಕಡೆ ಹೋಗಿ ಬಾಗಿಲು ತೆಗೆದು ಹಿತ್ತಿಲಲ್ಲಿ ನೋಡಿದಳು. ಕಣ್ಣು ಇದ್ದಕ್ಕಿದ್ದಂತೆ ಕೆಂಪೇರಿದುವು. ಬಾಯಿ ತೆರೆದಳು. ಅಷ್ಟರಲ್ಲಿ

" ಕಿಟ್ಟಾ ಕಿಟ್ಟಾ, ಸ್ನಾನಮಾಡು ಹೊತ್ತಾಯಿತು ! " ಎನ್ನುತ್ತಾ ನಾಗಣ್ಣ ಮನೆಯೊಳಕ್ಕೆ ಬಂದ. ಪದ್ದಕ್ಕ ಸರ್ರನೆ ಒಳಗೆ ಬಂದು ಬಾಗಿಲು ಹಾಕಲು ಹೋದಳು. ಕಾಲು ಜಾರಿ ಎಚ್ಚರತಪ್ಪಿ ಬಿದ್ದು ಬಿಟ್ಟಳು. ನಾಗಣ್ಣ ಅವಳನ್ನು ಎತ್ತಿ ಕುಳ್ಳಿರಿಸಲು ಹೋದ. ಅಷ್ಟರಲ್ಲಿ ಕೃಷ್ಣಮೂರ್ತಿ 'ಅಮ್ಮಾ' ಎನ್ನುತ್ತಾ ಬಂದ. ಇಬ್ಬರೂ ಪದ್ದಕ್ಕನನ್ನು ಎತ್ತಿಕೊಂಡು ಹೋಗಿ ಕೋಣೆಯಲ್ಲಿ ಮಲಗಿಸಿದರು.

" ಅಮ್ಮನಿಗೆ ಮತಿಯಿಲ್ಲ. ಯಾಕೆ ಸುಮ್ಮನೆ ಒಂದು ಕಡೆ ಇರಬಾರದು. ಏನೇನೋ ಕಾರುಭಾರು ಮಾಡಲು ಹೋಗಿ ಮುಗ್ಗರಿಸಿ ಬೀಳುತ್ತಾಳೆ. ಇಕ್ಕೊ, ಸ್ನಾನಮಾಡಿ ಬಂದುಬಿಟ್ಟೆ. ನೀನು ಹೋಗು" ಎಂದ ಕೃಷ್ಣಮೂರ್ತಿ. ನಾಗಣ್ಣ ಹೋದ ಮೇಲೆ ಜೇಬಿನಿಂದ ಒಂದು ರೂಪಾಯಿ ತೆಗೆದು ಹಿತ್ತಿಲಲ್ಲಿಸೆದ.

§ ಕೆ ಕೆ ಕೆ

ಗಂಗಮ್ಮ ಊಟಕ್ಕೆ ಕರೆಯಲು ಬಂದಾಗ, ಪದ್ದಕ್ಕನಿಗೆ ಕೆಂಡದಂತಹ ಜ್ವರ. ಅದರಲ್ಲೇ ಸ್ನಾನಮಾಡಿ ರಾಮಣ್ಣನ ಮನೆಗೆ ಹೋದಳು. ಒಂದು ತುತ್ತೂ ಗಂಟಲಲ್ಲಿಳಿಯಲಿಲ್ಲ. ಗಂಗಮ್ಮ, ರಂಗಮ್ಮ ಆಕೆಯನ್ನು ಮನೆಗೆ ಕರೆದುಕೊಂಡು ಹೋಗಿ ಮಲಗಿಸಿದರು.

ಮಧ್ಯಾಹ್ನದ ನೋಡಗಳು ಬರಿ ಉರುಳಿ ಹೋದದ್ದಷ್ಟೇ. ಒಣಗಿದ ನೆಲವನ್ನು ತೋಯಿಸಲಿಲ್ಲ. ಸಂಜೆಯ ಹೊತ್ತಿಗೆ ಮೋಡಗಳೇ ಇರಲಿಲ್ಲ. ಮುಳುಗುವ ಸೂರ್ಯನನ್ನು ದಿಗಂತದಂಚಿನಲ್ಲಿ ಗೊಡ್ಡು ಮೋಡಗಳು ಮರೆ ಮಾಡಿದ್ದುವು. ಉಳಿದಂತೆ ಆಕಾಶವೆಲ್ಲ ನೀಲಿ. ನರನರಗಳನ್ನೂ ಸುಡುಗಿಸುವ ಚಳಿಗಾಳಿ ಬೀಸುತ್ತಿತ್ತು.

ರಂಗಮ್ಮ, ಗಂಗಮ್ಮ ಪದ್ದಕ್ಕನ ತಲೆದೆಸೆಯಲ್ಲಿ ಕುಳಿತಿದ್ದರು. ನಾಗಣ್ಣನ ಮಗ ರಾಮು, ರಂಗಮ್ಮನ ಮಗ ವಿನೊಂದಿಗೆ ಆಡುತ್ತಿದ್ದ. ಮಂಪರಿನಲ್ಲಿ ಮುಲುಕಿ ಪದ್ದಕ್ಕ ಕಣ್ಣು ತೆರೆದಳು.

"ರಂಗೂ, ದೇವರ ಮಂಟಪದಲ್ಲಿ ಗಂಗೋದಕ ಇದೆಯಲ್ಲ ತಂದು ನಾಯಿಗೆ ಹಾಕು" ಎಂದಳು ಪದ್ದಕ್ಕ. ಅವಳ ಮಾತು ಅಸ್ಪಷ್ಟವಾಗಿತ್ತು. ಧ್ವನಿ ಕ್ಷೀಣವಾಗಿತ್ತು. 'ಎರಡಾಣೆ ಕಲ್ಲುಸಕ್ಕರೆ...." ಎಂದಳು.

ರಂಗಮ್ಮ " ಅತ್ತೇ ಹಾಗೇಕೆ ಹೇಳುತ್ತೀ " ಎಂದಳು.

ನಾಗಣ್ಣ " ಪದ್ದಕ್ಕ ಹಾಗೇಕೆ ಹೇಳುತ್ತಿ. ನೀನಿನ್ನೂ ಹತ್ತು ವರ್ಷ....."

"ಏನು ಹಾಳು ಬದುಕೋ" ಎಂದು ಪದ್ದಕ್ಕ ಗೊಣಗಿಕೊಂಡಳು.

" ಕಿಟ್ಟ ಎಲ್ಲಿ ? " ಎಂದು ಕೇಳಿದಳು. ಕೃಷ್ಣಮೂರ್ತಿ ಮನೆಯಲ್ಲಿರಲಿಲ್ಲ. ರಂಗಮ್ಮ ಎದ್ದು ಹೋಗಿ ಕಲ್ಲುಸಕ್ಕರೆ ತಂದುಕೊಟ್ಟಳು. ಪದ್ದಕ್ಕ ಹುಡುಗರ ಕಡೆಗೆ ಸನ್ನೆಮಾಡಿದಳು. ರಂಗಮ್ಮ ಹುಡುಗರಿಗೆ ಕಲ್ಲುಸಕ್ಕರೆ ಕೊಟ್ಟಳು.

"ರಂಗೂ, ಅವನು ಅವಿವೇಕಿ. ನೀನೇ....." ಎಂದಳು ಪದ್ದಕ್ಕ. ಮುಂದಕ್ಕೆ ಮಾತನಾಡಲು ಆಗಲಿಲ್ಲ. ರಂಗಮ್ಮ ಗಂಗೋದಕ ತಂದು ಬಾಯಲ್ಲಿ ಹಾಕಿದಳು. ನಾಗಣ್ಣ ಊರಿಗೆ ಆ ದಿನ ಹೋಗಲಿಲ್ಲ. ಕೃಷ್ಣಮೂರ್ತಿ ಬರುವ ಹೊತ್ತಿಗೆ ಪದ್ದಕ್ಕ ಇರಲಿಲ್ಲ. ❋

ದಿ ಸದ್ವೈದ್ಯ ಶಾಲಾ [ಪ್ರೈವೇಟ್] ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಆರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ
ಅತ್ಯಾಧುನಿಕ ಕ್ರಮದಲ್ಲಿ
ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

!! ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ !!

ಶಾಖೆಗಳು :

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು : (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)

(ಕನ್ನಡ ಸೀಸೆ ಬಿಟ್ಟು)

ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ್

ವ್ಹರ್ಜಿನಿಯಾ ವೂಲ್ಫ್

(ಸಾಹಿತ್ಯಿಕ ವ್ಯಕ್ತಿಪರಿಚಯ)

ಶ್ರೀಮತಿ 'ವಸಂತಲಕ್ಷ್ಮಿ' ಮದ್ರಾಸ್

ಆಂಗ್ಲಸಾಹಿತ್ಯದಲ್ಲಿ ಕಾದಂಬರೀನಿರ್ಮಿತಿಯಲ್ಲಿ ಹೊಸ ಮಾರ್ಗವನ್ನು ಸೃಷ್ಟಿಸಿದವರಲ್ಲಿ ಈಕೆಯ ಹೆಸರು ಪ್ರಾಮುಖ್ಯವಾಗಿ ಕಂಡುಬರುತ್ತೆದೆ. ಹುಟ್ಟಬಳೆದ ವಾತಾವರಣವೇ ಇವಳನ್ನು ವಿಖ್ಯಾತ ಸಾಹಿತ್ಯಿಕಳನ್ನಾಗಿ ಮಾಡಿತು.

ಜೀವನವೃತ್ತಾಂತ

ಇಪ್ಪತ್ತನೆಯ ಶತಮಾನದ ಆರಂಭದ ಕಾಲ. ಫಿಟ್ಸ್‌ರಾಯ್ ಚೌಕದಲ್ಲಿಯ ಒಂದು ದೊಡ್ಡ ಮನೆಯಲ್ಲಿ, ಆಂಗ್ಲಸಾಹಿತ್ಯದಲ್ಲಿಯೇ ಪ್ರಖ್ಯಾತನಾಮರೆನಿಸಿದ ಚಾರ್ಲ್ಸ್ ಟೆನಿಸನ್, ಕ್ಲಾಯಿವ್ ಬೆಲ್, ಲಿಟ್ಟಿಸ್ಟ್ರೆಚಿ, ಪಿಲ್ಟನ್‌ಯಂಗ್ ಮೊದಲಾದವರು ವಿಸ್ತಿಯನ್ನು ಕುಡಿಯುತ್ತ, ಹರಟುತ್ತ, ಉಲ್ಲಾಸದಲ್ಲಿ ಕಾಲವನ್ನು ಕಳೆಯುತ್ತಿದ್ದರು. ನಗೆಯ ಬುಗ್ಗೆಗಳೂ ಚಿಮ್ಮುತ್ತಿದ್ದವು. ದಿನದಿನವೂ ಇದೇ ಕಾರ್ಯಕ್ರಮವು ಅಲ್ಲಿ ನಡೆಯುತ್ತಿತ್ತು. ಈ ಕಲಾವಿದ ಗೆಳೆಯರ ಬಳಗದಲ್ಲಿ—ಗಂಭೀರವಾವ, ಹೆಚ್ಚು ಮಾತನಾಡದ, ಆದರೆ ಎಲ್ಲ ಮಾತುಗಳನ್ನೂ ಆಸ್ಥೆಯಿಂದ ಕೇಳುವ, ಕೇಳಿ ಎಲ್ಲವನ್ನೂ ಸಂಗ್ರಹಿಸಿ ನಕ್ಕು ನಲಿದಾಡುವ—ಮಹಿಳೆಯೊಬ್ಬಳೂ ಕುಳಿತಿದ್ದಾಳೆ. ಅವಳು ಸುಮಾರು ಇಪ್ಪತ್ತೈದು ವರುಷದ ತರುಣಿ; ಕಂಗಳಲ್ಲಿ ತೇಜಸ್ಸಿದೆ, ದೇಹವು ಸ್ವಲ್ಪ ಕೃಶವಾಗಿದೆ. ಅವಳೇ ವ್ಹರ್ಜಿನಿಯಾ ಸ್ಟಿಫನ್—ಮುಂದೆ ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಖ್ಯಾತ ಕಾದಂಬರಿಕಾರಳೆನಿಸಿಕೊಂಡ ವ್ಹರ್ಜಿನಿಯಾ ವೂಲ್ಫ್!

ಇಪ್ಪತ್ತನೆಯ ಶತಮಾನದ ಆರಂಭಕ್ಕೆ ಮೂಡಿದ ಹೊಸ ಮಾದರಿಯ ಕಾದಂಬರಿಯ ಅಧ್ವರ್ಯುಗಳಲ್ಲಿ ವ್ಹರ್ಜಿನಿಯಾ ವೂಲ್ಫಳೂ ಒಬ್ಬಳು. ಹಳೆಯ ಕಾದಂಬರಿಕಾರರಾದ ಡಿಕನ್ಸ್, ಥ್ಯಾಕರೆ ಮುಂತಾದವರ ಕಾಲವು ಅದೆಂದೋ ಮುಗಿದುಹೋಗಿತ್ತು. ವಿಜ್ಞಾನ ಮತ್ತು ಜೀವನದ ಇನ್ನಿತರ ಕ್ಷೇತ್ರಗಳಲ್ಲಿ ಆಗ ಪ್ರಯೋಗಗಳು ನಡಿಯುತ್ತಿದ್ದ ಹಾಗೆಯೇ ಕಾದಂಬರಿ ನಿರ್ಮಿತಿಯಲ್ಲಿಯೂ ಹೊಸ ಪ್ರಯೋಗಗಳು ನಡೆದಿದ್ದುವು. ಹೊಸತಾಗಿ ಹುಟ್ಟಬಂದ ಸಮಾಜಶಾಸ್ತ್ರ (Sociology) ಮಾನಸಶಾಸ್ತ್ರ (Phiychology) ಪ್ರಾಣಿಶಾಸ್ತ್ರ (Biology) ಮುಂತಾದ ಶಾಸ್ತ್ರಗಳು ಕಾವಂಬರಿಯ ಮೇಲೆ ತಮ್ಮ ಪ್ರಭಾವವನ್ನು ಬೀರಿದ್ದುವು. ಪ್ರಾಊಸ್ಟ್, ಡೊಸ್ಟೋಸ್ಕಿ, ಚೆಕೊವ್ ಮುಂತಾದ ಯುರೋಪಿಯನ್ ಕಾದಂಬರಿಕಾರರ ಹೊಸ ವಿಚಾರಗಳೂ ಇಂಗ್ಲಿಷ್ ಕಾದಂಬರಿಕಾರರ ಪುನಸ್ಸನ್ನು ನೆಳೆದಿದ್ದುವು, ಇಂಗ್ಲಂಡಿನಲ್ಲಿಯೇ ಡೊರೊಥಿ ರಿಚರ್ಡ್‌ಸನ್ ಎಂಬವಳು ಹೊಸಬಗೆಯ ಹಲವು ಕಾದಂಬರಿಗಳನ್ನು ಬರೆಯಲು ಹವಣಿಸಿದ್ದಳು. ಜೇಮ್ಸ್ ಜಾಯ್ಸ್ ಅದಾಗಲೇ ತನ್ನ ಪ್ರಯೋಗಗಳನ್ನು ಮುಂದುವರೆಸಿದ್ದನು. ವ್ಹರ್ಜಿನಿಯಾ ವೂಲ್ಫಳೂ ಇವರ ಹಾದಿಯಲ್ಲಿಯೇ ಮುಂದುವರೆದು ಪ್ರಖ್ಯಾತಳಾದಳು ಕಾದಂಬರಿಯಲ್ಲಿಯ ಈ ಹೊಸ ಮಾರ್ಗ, ವ್ಹರ್ಜಿನಿಯಾ ವೂಲ್ಫಳ ಮನಸ್ಸನ್ನು ಸೆಳೆದಿತ್ತು; ಇದೇ ಸಂಪ್ರದಾಯವನ್ನು ಅನುಸರಿಸಿ ಅವಳು ಹಲವು ಅತ್ಯುತ್ತಮ ಕಾದಂಬರಿಗಳನ್ನು ಬರೆದಳು.

ಇಂತಹ ಸಾಹಿತ್ಯಕೃತಿಗಳನ್ನು ರಚಿಸಲು ಯೋಗ್ಯವಾದ ಜೀವನವನ್ನು ಅವಳು ಕಂಡಿದ್ದಳು. ಅವಳ ತಂದೆಯಾದ ಲೆಸ್ಲಿ ಸ್ಟೀಫನ್‌ರು ಉತ್ತಮ ವಿಮರ್ಶಕರೂ, ಪಂಡಿತರೂ, ತತ್ತ್ವಜ್ಞಾನಿಗಳೂ ಆಗಿದ್ದರು. ಸಮಕಾಲೀನ ಎಲ್ಲ ಸಾಹಿತಿಗಳಿಗೂ ಇವರಿಗೂ ಉತ್ತಮವಾದ ನಿಕಟ ಸಂಬಂಧವಿತ್ತು. ಇವರು ಮದುವೆಯಾದದ್ದು ಪ್ರಖ್ಯಾತ ಕಾದಂಬರಿಕಾರನಾದ ಥ್ಯಾಕರೇನ ಮಗಳನ್ನು. ಎಂಟು ವರುಷಗಳ ದಾಂಪತ್ಯ ಜೀವನದ ನಂತರ ಅವಳು ತೀರಿಹೋದ ಕಾರಣ, ಲೆಸ್ಲಿ ಸ್ಟೀಫನ್‌ರು ಜ್ಯೂಲಿಯಾ ಡಕ್‌ವರ್ತ್ ಎಂಬ ವಿಧವೆಯನ್ನು ಮದುವೆಯಾದರು. ವ್ಹರ್ಜಿನಿಯಾ ಮತ್ತು ಅವಳ ಮೂರು ಜನ ಅಕ್ಕ-ತಮ್ಮಂದಿರು ಲೆಸ್ಲಿ ಸ್ಟೀಫನ್‌ರ ಎರಡನೆಯ ಮದುವೆಯಿಂದ ಆದ ಮಕ್ಕಳು. ೧೮೮೨ರಲ್ಲಿ ಲಂಡನ್ ನಗರದಲ್ಲಿ ವ್ಹರ್ಜಿನಿಯಾ ವೂಲ್ಫಳ ಜನನವಾಯಿತು.

ವ್ಹರ್ಜಿನಿಯಾ ಬೆಳೆದದ್ದು ದೊಡ್ಡ ಕುಟುಂಬದಲ್ಲಿ. ಅವಳ ತಾಯಿಯ ಮೊದಲನೆಯ ಮದುವೆಯಿಂದ ಆದ ಮಕ್ಕಳು ಅವಳೊಡನೆಯೇ ಬೆಳೆಯುತ್ತಿದ್ದರು. ಒಳ್ಳೆಯ ಶಿಕ್ಷಣವು ದೊರೆಯಲು ಬೇಕಾದ ಎಲ್ಲ ಅನುಕೂಲತೆಗಳೂ ಅವಳ ಮನೆಯಲ್ಲಿದ್ದುವು. ಅವಳ ತಂದೆಯ ವಿಶಾಲವಾದ ಮತ್ತು ಸಮೃದ್ಧವಾದ ಪುಸ್ತಕಸಂಗ್ರಹವೇ ಅವಳಿಗೆ ವಿಶ್ವವಿದ್ಯಾನಿಲಯವಾಯಿತು. ಅವಳಾದರೋ ಈ ಅನುಕೂಲತೆಗಳನ್ನು ಉತ್ತಮವಾಗಿ ಉಪಯೋಗಿಸಿಕೊಂಡಳು. ಅವಳು ಬೆಳೆದ ವಾತಾವರಣದಲ್ಲಿ ಸಂಸ್ಕೃತಿಯು ತುಂಬಿತ್ತು. ಸುಸಂಸ್ಕೃತಿಯು ಅವಳ ರಕ್ತದಲ್ಲಿಯೇ ಇತ್ತು. ಅವಳ ಶಿಕ್ಷಣವೆಲ್ಲವೂ ಮನೆಯಲ್ಲಿಯೇ ಜರುಗಿತು. ತಂದೆಯ ಬುದ್ಧಿಯು ಅವಳಿಗೆ ಅನುವಂಶಿಕವಾಗಿ ಬಂದಿತ್ತು. ಗ್ರೀಕ್, ಲೆಟಿನ್ ಮುಂತಾದ ಪುರಾತನ ಭಾಷೆಗಳ ಅಭ್ಯಾಸವನ್ನು ಅವಳು ಚೆನ್ನಾಗಿ ಮಾಡಿದಳು. ಬುದ್ಧಿಯ ಮಹಿಮೆಯಲ್ಲಿ ಅವಳಿಗೆ ನಂಬಿಗೆ ಇತ್ತು.

ಇಂತಹ ವಾತಾವರಣದಲ್ಲಿ ಬೆಳೆದ ವ್ಹರ್ಜಿನಿಯಾ ವೂಲ್ಫಳಿಗೆ, ಇಂಗ್ಲಂಡಿನಲ್ಲಿಯ ಮುಕ್ಕಾಲು ಪಾಲು ಜನ ಪುರಾತನಕಾಲದ ಅಮರ ಕೃತಿಗಳನ್ನು (classics) ಓದಿಲ್ಲ—ಎಂದು ಹೇಳಿದ್ದರೆ ಆಶ್ಚರ್ಯವಾಗುತ್ತತ್ತೇನೋ!

ವ್ಹರ್ಜಿನಿಯಾ ತನ್ನ ದಿನಗಳನ್ನು ಕಳೆದದ್ದು ಹೆಚ್ಚಾಗಿ ಲಂಡನ್ ಮತ್ತು ಕಾರ್ನವಾಲ್ ಎಂಬ ಸ್ಥಳಗಳಲ್ಲಿ—ಒಂದು ಶಹರ, ಮತ್ತೊಂದು ಹಳ್ಳಿ. ಇಲ್ಲಿಯ ಜೀವನದಿಂದ ಅವಳ ಮನಸ್ಸಿನ ಮೇಲೆ ತುಂಬ ಪರಿಣಾಮವಾಯಿತು. ಲಂಡನ್ ಮತ್ತು ಕಾರ್ನವಾಲ್‌ನಲ್ಲಿಯ ಜೀವನವನ್ನೇ ಹೆಚ್ಚಾಗಿ ವ್ಹರ್ಜಿನಿಯಾ ವೂಲ್ಫಳು ತನ್ನ ಕಾದಂಬರಿಗಳಲ್ಲಿ ಬಣ್ಣಿಸಿದ್ದಾಳೆ.

೧೯೦೪ರಲ್ಲಿ ಅವಳ ತಂದೆಯಾದ ಲೆಸ್ಲಿಸ್ಟೀಫನ್‌ರು ತೀರಿ ಹೋದರು. ಮುಂದೆ 'ಗಾರ್ಡನ್ ಸ್ಕ್ವೆರ್ ಬ್ಲೂಮ್ಸ್‌ಬರಿ' ಎಂಬಲ್ಲಿ ಅವಳು ತನ್ನ ಬಂಧು ಭಗಿನಿಯರೊಡನೆ ಇರತೊಡಗಿದಳು. ಆರ್ಥಿಕ ಚಿಂತೆಯಿಲ್ಲದೆ ಸ್ವಚ್ಛಂದವಾಗಿ, ಸಾಹಿತಿಗಳ ಸಂಪರ್ಕದಲ್ಲಿ—ವ್ಹರ್ಜಿನಿಯಾ ತನ್ನ ಕಾಲವನ್ನು ಕಳೆಯುತ್ತಿದ್ದಳು. ಅವಳೂ ಮತ್ತು ಅವಳ ತಮ್ಮನಾದ ಏಡ್ರಿಯನ್‌ನೂ ಇರುತ್ತಿದ್ದ ಮನೆಯಲ್ಲಿ, ಎಷ್ಟೋ ವಿಖ್ಯಾತ ಸಾಹಿತಿಗಳು ಸೇರುತ್ತಿದ್ದರು. ಇಂತಹ ಸುಸಂಸ್ಕೃತ ಮತ್ತು ಸ್ವಚ್ಛಂದ ವಾತಾವರಣದಲ್ಲಿ ಅವಳಲ್ಲಿ ಸಾಹಿತ್ಯದಾಸಕ್ತಿ ಹೆಚ್ಚಾದರೆ ಆಶ್ಚರ್ಯವಲ್ಲ! ಇದೇ ಸಮಯಕ್ಕೆ ಅವಳು ತನ್ನ ಕೃತಿಗಳನ್ನು ರಚಿಸತೊಡಗಿದಳು. ಇದಲ್ಲದೆ ಸಾಹಿತ್ಯದಲ್ಲಿಯ ಹೊಸ ಹೊಸ ಕೃತಿಗಳನ್ನು ಓದಿ, ಒಳ್ಳೆ ಅಭಿರುಚಿಯನ್ನೂ ಗತಿಯನ್ನೂ ಬೆಳೆಸಿಕೊಂಡಳು. ೧೯೧೭ರಲ್ಲಿ ಅವಳ ಜೀವನಕ್ಕೆ ಇನ್ನೂ ಹೆಚ್ಚು ಕಳೆಯು ಬಂದಿತು. ಲಿಓನಾರ್ಡ್ ವೂಲ್ಫ್‌ನಂತಹನು ಅವಳಿಗೆ ಬಾಳಸಂಗಾತಿಯಾಗಿ ದೊರೆತನು. ವ್ಹರ್ಜಿನಿಯಾ ವೂಲ್ಫಳದು ತುಂಬ ಸುಪ್ಪೆಯವದ ಮದುವೆ. ಲಿಓನಾರ್ಡ್ ವೂಲ್ಫನು ಒಳ್ಳೇ ರಾಜಕಾರಣವಿವೇಚಕನೂ, ನಿಬಂಧಕಾರನೂ ಮತ್ತು ಸಾಹಿತ್ಯದಲ್ಲಿ ತುಂಬ ಆಸಕ್ತಿಯುಳ್ಳವನೂ ಆಗಿದ್ದನು. ತನ್ನ ಹೆಂಡತಿಯಲ್ಲಿದ್ದ ಸಾಹಿತ್ಯಿಕ ಶಕ್ತಿಯನ್ನು ಕಂಡು ಲಿಓನಾರ್ಡನು ಮೆಚ್ಚಿದನು. ಮತ್ತು ಅವಳಿಗೆ ಎಲ್ಲ ಬಗೆಯಿಂದ ಪ್ರೋತ್ಸಾಹ, ಸಹಕಾರ ಇವುಗಳನ್ನು ನೀಡಿದನು. ಇವರಿಬ್ಬರೂ ಕೂಡಿ 'ಯೋಗಾರ್ತ್ ಪ್ರೆಸ್' ಎಂಬ ಮುದ್ರಣಾಲಯವನ್ನು ತೆಗೆದರು. ವ್ಹರ್ಜಿನಿಯಾ ವೂಲ್ಫಳ ಎಲ್ಲ ಕಾದಂಬರಿಗಳೂ ಇಲ್ಲಿಯೇ ಪ್ರಕಟಿಸಿಗೊಂಡವು. ಇದಲ್ಲದೇ ಇನ್ನೂ ಎಷ್ಟೋ ಪುಸ್ತಕಗಳನ್ನು ಪ್ರಸಿದ್ಧಿಸುವ ಒಳ್ಳೆಯ ಕೆಲಸವನ್ನೂ ಈ ಮುದ್ರಣಾಲಯವು ಮಾಡಿತು. ಹೊಸ ಜೀವನದ ಹುರುಪಿನಲ್ಲಿ, ಲಿಓನಾರ್ಡ್-ವೂಲ್ಫನು ನೀಡಿದ ಸಹಕಾರ-ಸ್ಫೂರ್ತಿಗಳಿಂದಾಗಿ ತನ್ನ ಸಾಹಿತ್ಯಿಕ ಚಟುವಟಿಕೆಗಳನ್ನು ಇಮ್ಮಡಿಯಾದ ಉತ್ಸಾಹದಿಂದ ಅವಳು ಮುಂದುವರಿಸಿದಳು. ಆರಂಭದಲ್ಲಿ ಅವಳು ಅನೇಕ ವಿಮರ್ಶಾತ್ಮಕ ಲೇಖನಗಳನ್ನು ಬರೆದು ವಿಖ್ಯಾತ ಪತ್ರಿಕೆಗಳಿಗೆ ಕಳಿಸುತ್ತಿದ್ದಳು, ಇದರಿಂದ ಅವಳಿಗೆ ಒಳ್ಳೆಯ ಹೆಸರು ಬಂದು, ಮುಂದೆ ಹಲವು ಪತ್ರಿಕೆಗಳಿಗೆ ಅಧಿಕೃತ ವಿಮರ್ಶಕಳಾದಳು. ಲೆಸ್ಲಿ ಸ್ಟೀಫನ್‌ರ ಸಂಪರ್ಕದಲ್ಲಿ ಬೆಳೆದು ಬಂದ ವ್ಹರ್ಜಿನಿಯಾ ವೂಲ್ಫಳ ಸಾಹಿತ್ಯಿಕ ಅಭಿರುಚಿಯು ತುಂಬ ಉಚ್ಚಮಟ್ಟದ್ದಾಗಿತ್ತು. ಆದುದರಿಂದ ಅವಳ ಮಾರ್ಗವು ತುಂಬ ಸುಲಭವಾಗಿತ್ತು. ವಿಮರ್ಶೆಯೊಳಗಿಂದ ಹಾಯ್ದು ವ್ಹರ್ಜಿನಿಯಾ ವೂಲ್ಫಳು ಸ್ವತಂತ್ರ ಸಾಹಿತ್ಯ ಸೃಷ್ಟಿಯ ಕಡೆಗೆ ಸಾಗಿದಳು.

ಸಾಹಿತ್ಯದ ಹೊಸಹಾದಿ

ವ್ಹರ್ಜಿನಿಯಾ ವೂಲ್ಫಳು ತುಳಿದ ಸಾಹಿತ್ಯದ ಹಾದಿಯ ಹೊಸತನವನ್ನು ಅರಿತಾಗ, ಅವಳ ಸಾಹಿತ್ಯ-ಸಿದ್ಧಿ ಎಷ್ಟು ಆಗಾಧವಾಗಿತ್ತು ಎಂಬುದರ ಅರಿವು ನಮಗಾಗುತ್ತದೆ. ಅವಳ ಕಾಲದಲ್ಲಿ ಹಳೆಯ ಕಾದಂಬರೀಕಾರರಾದ ಗಾಲ್ಸವರ್ದಿ, ವೆಲ್ಸ್, ಬೆನೆಟ್ ಮುಂತಾದವರ ಸಂಪ್ರದಾಯ ಮಾರ್ಗವನ್ನು ಬಿಟ್ಟು ಕೆಲವರಾದರೂ ಹೊಸ ಮಾರ್ಗವನ್ನು ಅನುಸರಿಸಿದ್ದರು. ಪ್ರಜ್ಞಾವಾಹ ತಂತ್ರದಿಂದ (The stream of conciousness technique) ಕಲೆಯನ್ನು ಆರಾಧಿಸುವುದೇ ಈ ಮಾರ್ಗದ ವೈಶಿಷ್ಟ್ಯವಾಗಿತ್ತು. ಇಲ್ಲಿ ಕತೆಗೆ ಮಹತ್ತ್ವದ ಸ್ಥಾನವಿಲ್ಲ. ಸಾಮಾನ್ಯವಾಗಿ ಮಿಕ್ಕ ಕಾದಂಬರಿಗಳಲ್ಲಿಯೂ ಕ್ರಮಬದ್ಧವಾದ ಪರಸ್ಪರ ಸಂಬಂಧವಿದ್ದ ಘಟನೆಗಳ ಒಂದು ಮಾಲೆ ಇರುತ್ತದೆ; ಅದಕ್ಕೆ ನಾವು ಕತೆ ಎನ್ನುತ್ತೇವೆ. ಆದರೆ ಈ ನವ-ಕಾದಂಬರಿಯಲ್ಲಿ ಮನುಷ್ಯನ ಆಂತರಿಕ ಪ್ರಜ್ಞೆಗೆ (inner conciousness) ಪ್ರಾಮುಖ್ಯವನ್ನು ಕೊಟ್ಟಿರುತ್ತದೆ. ಕೇವಲ ಮನುಷ್ಯನ ಮನಸ್ಸನ್ನು ಬೆಳೆಸುವುದೇ ಈ ಕತೆಗಾರನ ಉದ್ದೇಶ. ಮಾನವನ ಮನಸ್ಸಿನಲ್ಲಿ ಹೊಯ್ದಾಡುವ ವಿಚಾರಸಾಗರದ ಅಪಾರತೆಯನ್ನೂ ಅಸ್ತವ್ಯಸ್ತತೆಯನ್ನೂ ಕಲೆಯಿಂದ ಅಳೆಯುವ ಹವಣಿಕೆ ಈ ತಂತ್ರದಲ್ಲಿದೆ.

ಈ ತಂತ್ರ, ತನ್ನ ಗುರಿಯ ಸಿದ್ಧಿಗಾಗಿ ಹೇರಳವಾಗಿ ಪ್ರತಿಮೆಗಳನ್ನೂ, ಪ್ರತೀಕಗಳನ್ನೂ ಸಂಕೇತಗಳನ್ನೂ ಬೆಳಸುತ್ತದೆ. ಈ ತಂತ್ರವನ್ನು ಫೋಟೋಗ್ರಾಫಿಯಲ್ಲಿಯ 'The close up' ಮತ್ತು 'The slow up' ತಂತ್ರದೊಡನೆ ಹೋಲಿಸಬಹುದು. ಚಲನ ಚಿತ್ರಗಳಲ್ಲಿ ನಾವು ಇದನ್ನು ಕಾಣುತ್ತೇವೆ. ಪಾತ್ರಗಳ ದೊಡ್ಡ ಗಾತ್ರದ ಚಿತ್ರಗಳನ್ನು ಒಂದೊಂದೇ ಸಾವಕಾಶವಾಗಿ ಪ್ರೇಕ್ಷಕರ ಮುಂದೆ ತಂದು ನಿಲ್ಲಿಸಲಾಗುತ್ತದೆ; ಇದರ ಪರಿಣಾಮವಾಗಿ ಪ್ರೇಕ್ಷಕರು ಪಾತ್ರಗಳನ್ನು ಚೆನ್ನಾಗಿ ನೋಡಬಹುದು. ಅದಲ್ಲದೆ ಪಾತ್ರಗಳು ಹೆಚ್ಚು ಜೀವಂತವೆನಿಸುತ್ತವೆ. ನವ-ಕಾದಂಬರಿಕಾರನ ತಂತ್ರವೂ ಇದೇ ಮಾದರಿಯದು. ಪಾತ್ರಗಳ ಮನಸ್ಸನ್ನೇ ಓದುಗರ ಮುಂದೆ ತಂದಿಟ್ಟಂತೆ ಅವುಗಳಲ್ಲಿ ಇರುತ್ತದೆ; ಮತ್ತು ಅಲ್ಲಿ ಬರಲಿರುವ ವಿಚಾರಗಳನ್ನು ಒಂದೊಂದೇ ಸಾವಕಾಶವಾಗಿ ನಿರೂಪಿಸಲಾಗುತ್ತದೆ.

ಹೀಗೆ ಮಾಡುವಾಗ ಕಾದಂಬರಿಕಾರನು ಅದೃಶ್ಯನಾಗುತ್ತಾನೆ. ಜೇಮ್ಸ್ ಜಾಯ್ಸ್ ಹೇಳಿದಂತೆ " The artist like the brod of creation, remains within or behind or beyond his handiwork. (ಕಲಾವಿದನು ಸೃಷ್ಟಿಕರ್ತನಾದ ದೇವರಿದ್ದಂತೆ; ಅವನು ತನ್ನ ಸೃಷ್ಟಿಯ ಒಳಗಾಗಲೀ, ಅಥವಾ ತನ್ನ ಸೃಷ್ಟಿಯ ಹಿಂಬದಿಯಲ್ಲಾಗಲೀ, ತನ್ನ ಸೃಷ್ಟಿಯಿಂದಾಚೆಗಾಗಲೀ ಇರುತ್ತಾನೆ.) ಇಲ್ಲಿ ಕಾದಂಬರಿಕಾರನು ಕತೆಯನ್ನು ನಿರೂಪಿಸುವುದಿಲ್ಲ: ಪಾತ್ರಗಳ ಮನಸ್ಸುಗಳನ್ನೇ ನಮ್ಮ ಮುಂದೆ ಬಿಚ್ಚಿಟ್ಟಂತೆ ತೋರು-

ತ್ತದೆ. ಅಥವಾ ನಮ್ಮನ್ನೇ ಪಾತ್ರಗಳ ಮನಸ್ಸುಗಳಲ್ಲಿ ಕರೆದುಕೊಂಡು ಹೋಗಿ ಕೂಡ್ರಿಸಿದಂತೆ ಇರುತ್ತದೆ. ಈ ತಂತ್ರದ ಇನ್ನೊಂದು ಲಕ್ಷಣ ವೆಂದರೆ ಕಾಲಾತೀತತೆ. ಕಾಲಕ್ಕೆ ಇಲ್ಲಿ ಮಹತ್ತ್ವವಿಲ್ಲ. ಕಾಲವನ್ನೇ ಇಲ್ಲಿ ಸ್ಥಿರವಾಗಿ ನಿಲ್ಲಿಸಿದಂತೆ ಇರುತ್ತದೆ. ಭೂತಕಾಲ, ವರ್ತಮಾನ ಕಾಲ, ಭವಿಷ್ಯಕಾಲಗಳೆಲ್ಲವೂ ಒಂದು ಕಡೆಗೆ ಸೇರಿದಂತೆ ಇರುತ್ತದೆ.

ಕಾದಂಬರಿಗಳ ನಿರ್ಮಿತಿ

ವ್ಹರ್ಜಿನಿಯಾ ವೂಲ್ಫಳು ಈ ಮಾರ್ಗವನ್ನು ಅನುಸರಿಸಿದರೂ ಆರಂಭದಲ್ಲಿ ಅವಳ ಕಾದಂಬರಿಗಳು ಸಂಪ್ರದಾಯ ಪ್ರಿಯವಾಗಿದ್ದವು. ಹೀಗಿದ್ದರೂ ಆರಂಭದಲ್ಲಿಯ ಅವಳ ಕಾದಂಬರಿಗಳಲ್ಲಿಯೂ ಹೊಸ ಹಾದಿಯ ಹಂಬಲವು ಕಂಡುಬರುತ್ತದೆ. **"ಹೊರಪ್ರಯಾಣ"** (The voyage out 1915) ಎಂಬ ಅವಳ ಮೊದಲನೆಯ ಕಾದಂಬರಿಯು ತೀರ ಸಾಮಾನ್ಯವೆನಿಸುತ್ತದೆ. ಮುಗ್ಧ ಬಾಲಿಕೆಯೊಬ್ಬಳು ಜಗತ್ತಿನ ನೀತಿ ನಿಯಮಗಳನ್ನು ಅರಿತ ಬಗೆಯನ್ನು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. **'ಹೊರಪ್ರಯಾಣ'** ದಲ್ಲಿ **"ಹಗಲುರಾತ್ರಿ"** (Night & Day 1919) ವರ್ಜಿನಿಯಾಳ ಮುಂದಿನ ಹೆಜ್ಜೆ. ಇದಾದರೂ ತೀರ ಸಾಮಾನ್ಯವೆನಿಸುವ ಒಂದು ಪ್ರಣಯಕಥೆ. ಆತ್ಮಕಥೆಯ ಪಡಿನೆಳಲು ಅಲ್ಲಿ ಇಲ್ಲಿ - ಈ ಕಾದಂಬರಿಯಲ್ಲಿ ಹಾಸುಹೊಕ್ಕಾಗಿರುವಂತೆ ಅನಿಸುತ್ತದೆ. ಆರಂಭದ ಈ ಕಾದಂಬರಿಗಳಲ್ಲಿ ವ್ಹರ್ಜಿನಿಯಾಳು ತನ್ನ ಹೆಜ್ಜೆಯನ್ನೆ ತಾನು ಹುಡುಕಿಕೊಂಡಂತಿದೆ; ಹೊಸ ಹಾದಿಯ ಹಂಬಲವಿದ್ದರೂ ಅವಳು ತುಳಿದುದು ಸಂಪ್ರದಾಯದ ಮಾರ್ಗವನ್ನೇ. ಕತೆಗೆ ಪ್ರಾಧಾನ್ಯತೆಯನ್ನು ಕೊಡದೆ ಅವಳು ತಂತ್ರಕ್ಕೆ ಒಲಿದಂತೆ ಕಂಡರೂ, ಈ ಎಲ್ಲ ಕೃತಿಗಳೂ 'ಕಲಸು-ಮೇಲೋಗರ' ಎನಿಸಿಕೊಳ್ಳುತ್ತವೆ.

ವ್ಹರ್ಜಿನಿಯಾಳ ಮುಂದಿನ ಕಾದಂಬರಿ **"ಜೇಕಬ್‌ನ ಕೋಣೆ"** (Jacob's Room 1922) ಈ ಕಾದಂಬರಿಯಲ್ಲಿ ಹೊಸ ತಂತ್ರವು ಮೊದಲನೆಯ ಬಾರಿ ಕಂಡುಬರುತ್ತದೆ. ಕ್ರಮಬದ್ಧವಾದ ಘಟನೆಗಳ ಮಾಲೆ ಇಲ್ಲಿ ಇಲ್ಲ. ಜೇಕಬ್‌ನ ಮನಸ್ಸನ್ನು, ಅವನ ಜೀವನವನ್ನು ಚಿತ್ರಿಸುವುದೇ ಇಲ್ಲಿ ಮುಖ್ಯ ವಿಷಯವಾಗಿದೆ. **"ಜೀವನವೆಂದರೆ** ಸುಸೂತ್ರವಾಗಿ ಕೂಡಿಸಿಟ್ಟ ದೀಪಗಳ ಮಾಲೆ ಅಲ್ಲ; ಅದೊಂದು ನಮ್ಮ ಪ್ರಜ್ಞೆಯನ್ನು ಮೊದಲಿನಿಂದ ಕೊನೆಯವರೆಗೆ ಸುತ್ತುಗಟ್ಟಿದ ಕಾಂತಿಮಯವಾದರೂ ಅಸ್ಪಷ್ಟವಾದ ಆವರಣ" Life is not a series of symmetrically arranged gig-lamps, but a semi-transparent envelope that surrounds our conciousness from the beginning to the end.) ಎಂದು ಅವಳು ಒಂದು ನಿಬಂಧದಲ್ಲಿ ಹೇಳಿದ್ದಳು. ಮತ್ತು **"ಈ ಅಸ್ಪಷ್ಟವಾದುದನ್ನು ಸ್ಪಷ್ಟವಾಗಿಸುವುದೇ ಕಾದಂಬರೀಕಾರನ ಕರ್ತವ್ಯವು"** ಎಂದು ಬಗೆದಿದ್ದಳು. ಮುಂದುವರೆದು ಅವಳು ಹೀಗೆ ಬರೆದಿದ್ದಳು. "ನಮ್ಮ ಮನಸ್ಸಿನಮೇಲೆ ಅಣುಗಳು ಬಂದು ಬಂದು ಬಿದ್ದ ಕ್ರಮದಲ್ಲಿಯೇ ಅವುಗಳನ್ನು ಉಲ್ಲೇಖಿಸೋಣ. ಅವುಗಳಿಂದ ನಮ್ಮ ಪ್ರಜ್ಞೆಯಲ್ಲಿ ಸಿದ್ಧವಾಗುವ ಆಕೃತಿಯನ್ನು ಮೂಡಿಸೋಣ" (Let us record the atoms as they fall upon the mind in the order in which they fall, let us trace the pattern, which each incident scores upon the conciousness") ಹೀಗೆ ಬರೆದುದನ್ನೇ ಪ್ರಸ್ತುತ ಕಾದಂಬರಿಯಲ್ಲಿ ಅವಳು ಕಾರ್ಯರೂಪಕ್ಕೆ ತರುತ್ತಾಳೆ. 'ಜೇಕಬ್' ಎಂಬವನ ಬಾಲ್ಯವನ್ನೂ, ಅವನ ವಿದ್ಯಾರ್ಥಿಜೀವನವನ್ನೂ, ಲಂಡನಿನಲ್ಲಿಯ ಅವನ ಸ್ವತಂತ್ರ ಜೀವನವನ್ನೂ ಅವಳು ಚಿತ್ರಿಸುತ್ತಾಳೆ. ಲಂಡನಿನಲ್ಲಿ ಜೇಕಬ್‌ನು ಬೇರೆ ಬೇರೆ ಹೆಣ್ಣುಮಕ್ಕಳ ಬೆನ್ನುಹತ್ತುತ್ತಾನೆ. ಫ್ರಾನ್ಸ್ಸು, ಗ್ರೀಸ್ ಮುಂತಾದ ದೇಶಗಳ ಪ್ರಯಾಣದ ನಂತರ ಯುದ್ಧದಲ್ಲಿ ಅವನು ಸಾಯುತ್ತಾನೆ; ಆದರೆ ಇದನ್ನೆಲ್ಲ ಚಿತ್ರಿಸುವಾಗ ವ್ಹರ್ಜಿನಿಯಾ ವೂಲ್ಫಳು ನೇರವಾಗಿ ಅದನ್ನು ಮಾಡುವುದಿಲ್ಲ. ಒಂದು ಸಲ ಜೇಕಬ್‌ನು ತನ್ನ ಕತೆಯನ್ನು ಹೇಳಿದರೆ, ಮತ್ತೊಂದು ಸಲ ಅವನ ಸ್ನೇಹಿತರೊಬ್ಬರು ಜೇಕಬ್‌ನ ಬಗ್ಗೆ ತಮಗೆನಿಸಿದುದನ್ನು ಹೇಳುತ್ತಾರೆ. ಹೀಗೆ ಕತೆಯ ಮುಖ್ಯ ವಸ್ತು ಜೇಕಬ್‌ನ ಜೀವನವೇ ಆದರೂ, ಅದನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡಲಾಗಿದೆ. **ಕ್ಲಾರಾ ಡ್ಯೂಗಂಟ್** ಎಂಬ—ಕಾದಂಬರಿಯಲ್ಲಿಯ-ವ್ಯಕ್ತಿ ಹೇಳುತ್ತಾಳೆ: "ನನಗೆ ಜೇಕಬ್ ಸೇರುತ್ತಾನೆ. ಅವನಿಗೆ ವ್ಯವಹಾರಬುದ್ಧಿ ಕಡಿಮೆ. ಅವನಿಗೆ ಜಂಭನಿಲ್ಲ" ಎಂಬುದಾಗಿ. ಹೀಗೆ ಅನೇಕ ಪಾತ್ರಗಳಲ್ಲಿ ಜೇಕಬ್‌ನ ವಿಷಯ ಮೂಡಿದ ವಿಚಾರಗಳನ್ನು ಕೊಡಲಾಗಿದೆ. ಆದರೆ ಇನ್ನೂ ಹಳೆಯ ತಂತ್ರದ ಹಲವು ಅಂಶಗಳನ್ನು ನಾವು ಇಲ್ಲಿ ಕಾಣುತ್ತೇವೆ. ಉದಾ : ಜೇಕಬ್‌ನ ಮನಸ್ಸಿನಲ್ಲಿ ಮೂಡಿದ ವಿಚಾರಗಳನ್ನು ನೇರವಾಗಿ ನಮ್ಮ ಮುಂದೆ ಇಡದೆ 'ಜೇಕಬ್ ಎಣಿಸಿದ', 'ಜೇಕಬ್‌ನಿಗೆ ಎನಿಸಿತು' ಮುಂತಾದ ಪ್ರಯೋಗಗಳು ಇಲ್ಲಿ ಬರುತ್ತವೆ. ಈ ಕಾದಂಬರಿಯ ನಂತರದ ಕೃತಿಗಳಲ್ಲಿ ಈ ಅಂಶಗಳನ್ನು ಸಹ ನಾವು ಕಾಣುವುದಿಲ್ಲ.

ತೀರ ಹೊಸತಂತ್ರದ ಕಾದಂಬರಿ

ಇದರ ಮುಂದಿನ ಕಾದಂಬರಿಗಳು ಹೊಸ ತಂತ್ರದಲ್ಲಿಯೇ ಬರೆದುವುಗಳು. **'ಮಿಸೆಸ್ ಡೆಲೋವೆ'** (Mrs. Dalloway. 1925) ಎಲ್ಲ ದೃಷ್ಟಿಯಿಂದಲೂ ವ್ಹರ್ಜಿನಿಯಾ ವೂಲ್ಫಳ ಉತ್ತಮ ಕಾದಂಬರಿ. ಈ ಕಾದಂಬರಿಯಲ್ಲಿ ಕಥೆ ನಡೆವ ಕಾಲಾವಧಿಯು ತೀರ ಸ್ವಲ್ಪ. ಕಥಾನಾಯಕಿಯಾದ ಮಿಸೆಸ್ ಡೆಲೋವೆ ಬೆಳಗು ಎದ್ದು ಚಹ-ಫಲಾಹಾರವನ್ನು ಸ್ವೀಕರಿಸಿ ಪೇಟೆಗೆ ಹೋಗಿ, ಸಾಯಂಕಾಲ ಅವಳ ಮನೆಯಲ್ಲಿಯೇ ನಡೆಯಬೇಕಾಗಿದ್ದ ಪಾರ್ಟಿಗೆ ಕೆಲವು ವಸ್ತುಗಳನ್ನು ಕೊಂಡುಕೊಳ್ಳುತ್ತಾಳೆ. ಕತೆಯು ಆ ಪಾರ್ಟಿಯ ವರ್ಣನೆಯೊಡನೆ ಮುಕ್ತಾಯವಾಗುತ್ತದೆ. ಆದರೆ ಅಷ್ಟರಲ್ಲಿಯೇ ವ್ಹರ್ಜಿನಿಯಾ ವೂಲ್ಫಳು ನಮಗೆ ಮಿಸೆಸ್ ಡೆಲೋವೆಳ ಜೀವನದ ಎಲ್ಲ ವೃತ್ತಾಂತವನ್ನೇ ಕೊಡುತ್ತಾಳೆ. ಇದನ್ನು ಸಾಧಿಸಲು ಅವಳಿಗೆ ಹೊಸ ತಂತ್ರವು ಉಪಯುಕ್ತವಾಗುತ್ತದೆ. ಮಿಸೆಸ್ ಡೆಲೋವೆ ಮನೆಯಲ್ಲಿದ್ದಾಗ, ಹೊರಗೆ ಹೋದಾಗ, ಅವಳ ಮನಸ್ಸಿನಲ್ಲಿ ಅವಳ ಗತಜೀವನದ ವರ್ತಮಾನ ಜೀವನದ ಬಗ್ಗೆ ವಿಚಾರಗಳು ಬಂದ ಹಾಗೆ ವ್ಹರ್ಜಿನಿಯಾ

ವೊಳ್ಳಳು ನಮ್ಮ ಮುಂದೆ ಇಡುತ್ತ ಹೋಗುತ್ತಾಳೆ. ಹಿಂದೆ ಪರಿಚಿತವಾಗಿದ್ದ ಹಲವು ವ್ಯಕ್ತಿಗಳ ಬಗ್ಗೆ ಅವಳ ವಿಚಾರಗಳನ್ನು ಬೇರೆ ಬೇರೆ ಜನರೊಡನೆ ಇದ್ದ ಅವಳ ಸಂದರ್ಭಗಳನ್ನು ಬಣ್ಣಿಸಲಾಗಿದೆ. ಮಿಸೆಸ್ ಡೆಲೊವೆಳ ಪ್ರಜ್ಞೆಯಲ್ಲಿಯೇ ಓದುಗರನ್ನು ಕರೆದುಕೊಂಡು ಹೋಗಿ ಕಾದಂಬರಿಕಾರಳು ಕೂಡಿಸಿದಂತಿದೆ. ಆದ್ದರಿಂದಲೆ ಈ ಕಥಾನಾಯಕಿಯೊಡನೆಯೇ ಓಡಾಡಿ ನಾವು ಎಲ್ಲವನ್ನೂ ನೇರವಾಗಿ ತಿಳಿದುಕೊಳ್ಳುತ್ತೇವೆ. ಊದಾ: "ನಾನೇ ಹೂಗಳನ್ನು ಕೊಳ್ಳುತ್ತೇನೆ. ಮಿಸೆಸ್ ಡೆಲೊವೆ ನುಡಿದಳು. "ಏಕೆಂದರೆ ಲೂಸಿಗೆ ಬೇರೆ ಕೆಲಸವಿದೆ—ಬಾಗಿಲುಗಳನ್ನು ಸರಿಪಡಿಸಬೇಕು, ಅದಲ್ಲದೆ ಬೇರೆ ಅತಿಥಿಗಳು ಬರುವವರಿದ್ದರು. ಮೇಲಾಗಿ ಅದೆಂತಹ ಅದ್ಭುತ ಬೆಳಗು! ಎಷ್ಟು ಪ್ರಶಾಂತವಾಗಿದೆ.!" ಹೀಗೆ ಆರಂಭವಾದ ಅವಳ ಪ್ರಜ್ಞಾವಾದವು ಓಡುತ್ತಲೇ ಇರುತ್ತದೆ. ಕಥಾನಾಯಕಿಯ ಜೀವನದ ವೃತ್ತಾಂತವು ನಮಗೆ ಹೆಚ್ಚು ಹೆಚ್ಚಾಗಿ ತಿಳಿಯುತ್ತಲೇ ಇರುತ್ತದೆ. ಅವಳು ಪ್ರೇಮಿಸಿದ್ದು, ಜಗಳವಾಡಿದ್ದು ಎಲ್ಲವೂ ನಮಗೆ ಗೊತ್ತಾಗುತ್ತದೆ. ಆದರೆ ಹೀಗೆ ಒಂದು ಆಂತರಿಕ ಜಗತ್ತಿನಲ್ಲಿಯೇ ಕುಳಿತುಕೊಂಡು ಹೊರಗಿನ ಜಗತ್ತನ್ನು ನಾವು ಮರೆಯುವಂತೆ ವ್ಹರ್ಜಿನಿಯಾ ವೂಳ್ಫಳು ಮಾಡುವದಿಲ್ಲ. ತುಂಬ ಕಲಾತ್ಮಕವಾಗಿ ಬಾಹ್ಯ ಜಗತ್ತಿನ ಸಂಬಂಧವನ್ನು ಅವಳು ಕತೆಯಲ್ಲಿ ತರುತ್ತಾಳೆ. ಮಿಸೆಸ್ ಡೆಲೊವೆ ತುಂಬ ಜನದಟ್ಟಣೆಯಿದ್ದ ಬೀದಿಯಲ್ಲಿಯೇ ತುಂಬ ವಿಚಾರಮಗ್ನಳಾಗಿ ಹೋಗುತ್ತಿರುವಾಗ, ಒಮ್ಮೆಲೆ ವಿಮಾನವು ಹಾರಾಡುವ ಶಬ್ದವು ಕೇಳುತ್ತದೆ 'ಅದರೊಂದಿಗೆ ಬಾಹ್ಯ ಜಗತ್ತಿನ ಧ್ವನಿಯೂ ಕೇಳುತ್ತದೆ. ವಿಮಾನವನ್ನು ನೋಡಲು ಮಿಸೆಸ್ ಡಿಲೊವೆಳ ಹತ್ತಿರವೇ ಹಾಯ್ದು ಹೋಗುವ-ಮಿಸೆಸ್ ಕೋಟ್ಸ್ ಎಂಬುವವಳು ಮೇಲೆ ನೋಡುತ್ತಾಳೆ. 'ಅದು ಕ್ರಿಮೋ ಜಾಹಿರಾತು' ಎಂದು ಮಿಸೆಸ್ ಬ್ಲೆಚಲಿ ಎನ್ನುವಳು ನುಡಿಯುತ್ತಾಳೆ."ಅಯ್ಯೋ, ಟಾಸಿಯ ಜಾಹಿರಾತು" ಎಂದು ಮಿಸೆಸ್ ಬೌಲೆ ನುಡಿಯುತ್ತಾಳೆ. ಹೀಗೆ ಇಂತಹ ಯುಕ್ತಿಗಳಿಂದ ನಮಗೆ ಬಾಹ್ಯ ಜಗತ್ತಿನ ಅರಿವನ್ನು ಮಾಡಿಕೊಟ್ಟು ಮತ್ತೆ ಮಿಸೆಸ್ ಡಿಲೊವೆಯ ಪ್ರಜ್ಞಾವಾವನ್ನು ಮುಂದುವರಿಸುತ್ತಾಳೆ; ಬಾಹ್ಯಜಗತ್ತಿನ ಅರಿವನ್ನು ಮಾಡಿಕೊಡಲು ಮತ್ತೊಂದು ಸೂಕ್ಷ್ಮವಾದ ಯುಕ್ತಿಯನ್ನು ವ್ಹರ್ಜಿನಿಯಾ ವೂಳ್ಫಳು ಉಪಯೋಗಿಸುತ್ತಾಳೆ-ಅದೆಂದರೆ ಗಡಿಯಾರದಲ್ಲಿಯ ಗಂಟೆಗಳ ಉಲ್ಲೇಖನ. ಹೀಗೆ ಮಿಸೆಸ್ ಡೆಲೊವೆಳ ಪ್ರಜ್ಞಾವಾದವನ್ನು ಹೊಕ್ಕು, ಅವಳ ಜಗತ್ತನ್ನೂ, ಅವಳ ಪರಿಚಿತರನ್ನೂ ನಾವು ಕಾಣುತ್ತೇವೆ, ಮತ್ತು ಅದೇ ದಿನ ಸಂಜೆ ಪಡೆಯುವ ಪಾರ್ಟಿಯಲ್ಲಿಯೂ ನಾವು ಅದುವರೆಗೆ ಅರಿತ ಜಗತ್ತನ್ನೇ ಕಾಣುತ್ತೇವೆ. ಆದುದರಿಂದ ಈ ಕತೆಗೆ ಏಕಮುಖತೆ ಬಂದಿದೆ.

ಇದೊಂದು ವ್ಹರ್ಜಿನಿಯಾಳ ಉತ್ತಮ ಕಾದಂಬರಿ. ಇಲ್ಲಿ ಅವಳಿಗೆ ಕಲೆಯ ಸಾಕ್ಷಾತ್ಕಾರವಾಗಿದೆ-ಅವಳು ಬಳಸಿದ ಹೊಸ ತಂತ್ರ ಇಲ್ಲಿ ಸಾಫಲ್ಯವನ್ನು ಪಡೆದಿದೆ. ಅವಳ ಕಾದಂಬರಿಯು ಮನೋಹರವಾಗಿ, ರಮ್ಯವಾಗಿ ಓದುಗರನ್ನು ಸೆಳೆಯುತ್ತದೆ.

—❋—

ವೇಣುಗಾನವ ನುಡಿಸು!

ಕುಮಾರಿ ಸಿ. ಹೆಚ್. ಲಕ್ಷ್ಮೀ-ಪಾಡಿ, ಮುಟ್ಟತ್ತೋಡಿ

ಈ ಜಗವ ಮರೆಯಿಸುವ ನಾಕಲೋಕಕೆ ಒಯ್ವ!
ನಿನ್ನಮರ ಗಾನಸುಧೆಯೊಮ್ಮೆ ಹರಿಸು ॥
ಈರೇಳು ಲೋಕಗಳನೆತ್ತಿ ತಿರುಗಿಸಬಲ್ಲ!
ಶಕ್ತ ಬೆರಳಲಿ ವೇಣುಗೀತ ನುಡಿಸು! ॥ ೧ ॥

ಈ ಭವದ ಬಾಳಿನಲಿ ಬೆಂದು ಬೇಗುದಿಗೊಂಡು!
ವಿಲಪಿಸುವ ಹೃನ್ಮನದ ಬೇಗೆ ತಣಿಸಿ ॥
ಅಮಿತ ನಿರ್ಮಲ ಸತ್ಯ ಸ್ವರ್ಗಸುಖವನೆ ಪಡೆವೆ!
ಹರಿಯೆ! ನಿನ್ನಯ ದಿವ್ಯ ಗಾನವೆಣಿಸಿ ॥ ೨ ॥

ಬಂದಿಹುದು ಮೊಗದ ಕಡೆ ವೇಣು ಪಿಡಿದಿಹ ಕರವು!
ಇನ್ನೇತರೆಣಿಕೆಯದು? ಕಾವ್ಯಧಾರ? ॥
ನವ್ಯಚೇತನ ಸುಧೆಯು ತುಂಬಿ ಹರಿಯಲು ತವಕ-!
ಗೊಂಡಿರಲು ನೀನೇಕೆ ಪಡೆವೆ ಚೋರ? ॥ ೩ ॥

ನೀನು ಮನಮಾಡಿದರೆ, ಗಾನತೊರೆ ಹರಿಸಿದರೆ!
ಆ ಗಾನಲಹರಿಯಲಿ ಮುಳುಗಿ ಮಿಂದು ॥
ಕೃತ್ರಿಮದ ಜಗದಿರವ ಮರೆತು ನಿರ್ಮಲ ಲೋಕ!
ಸೇರಿ ವಿಹರಿಪೆನಲ್ಲಿ ಮುಗ್ಧಗೊಂಡು! ॥ ೪ ॥

ಗೋಪವನಿತೆಯರಿಲ್ಲವೆಂದು ಸ್ಫೂರ್ತಿಯನುಳಿದು!
ಬರಿಬೊಂಬೆಯೊಲು ಕರದಿ ವೇಣು ಹಿಡಿದು ॥
ಶೂನ್ಯಮೌನದಿ ನಿಂದು ಗಾನ ಮರೆತಿಹೆಯೇನು?!
ಪರಮಾತ್ಮ! ಸ್ಫೂರ್ತಿಯೇತಕೆ ಶಕ್ತಿ ಹಿರಿದು! ॥ ೫ ॥

ಜಗವೆಲ್ಲ ಕೇಳಿದರೆ, ಜನರೆಲ್ಲ ಮೈಮರೆತು!
ಕರ್ಮಶೂನ್ಯತೆಯೊಗೆವುದೆಂಬ ಮನದಿ ॥
ಮೌನವಾದರೆ ಬೇಡ,— ಎನ್ನ ಹೃದಯಕೆ ಮಾತ್ರ!
ಕೇಳಲಾದರು ಮಧುರಗೀತ ಮುದದಿ ॥ ೬ ॥

ನುಡಿಸು! ಹರಿಸೈ ಶ್ಯಾಮ! ಮನದ ಕಲ್ಮಷದುಗುಡ!
ತೊಳೆವಂಥ ತಿಳಿಗಂಗೆ ಗಾನತೊರೆಯ! ॥
ಹರಿಹರಿದು ಕೊಳೆ ತೊಳೆದು, ನಿರ್ಮಲ ಸುಶೋಭೆಯಲಿ!
ಮನ ಬೆಳಗೆ ಹರಸುವೊಲು ನೀಡು ಅಭಯ! ॥ ೭ ॥

ಬಿಸಮಿಲ್ಲಾರ ಶಹನಾಯಿವಾದನ ಕೇಳಿ

ಶ್ರೀ. ಚೆನ್ನವೀರ ಕಣವಿ, ಧಾರವಾಡ

ಒಂದೆ ಉಸಿರಿಗೆ ಹಸಿರ ಹೊಮ್ಮಿಸುವ; ನೂರು ಬಗೆ
ಭಾವಕುಸುಮವನೆತ್ತಿ ಗಾಳಿಸುಳಿಯಲಿ ಹೀಗೆ
ನರುಗಂಪ ತೇಲಿಸುವ; ಹಂಬಲದ ಸವಿದನಿಗೆ

ತುಂಬಿ ಅಲಿಸುವ; ಮನಸಿನ ಮಧ್ಯಬಿಂದುವಿಗೆ
ಕನಸು-ಕಾಮನಬಿಲ್ಲ ವರ್ತುಳವ ರಚಿಸಿ ನೆಲ-
ಮುಗಿಲನೊಂದು ಸಲ ಬಂಧಿಸಿ ಜೀವ ಸ್ಪಂದಿಸುವ;
ಮೋಡದೊಡಲಿಗೆ ಮಿಂಚು ಸಂಚರಿಸಿ ಹಸಿಗರೆವ
ರಾಗಲಹರಿಯ ತೊರೆಗಳೋಡಿ ತಬ್ಬಿವೆ ಕಡಲ.

ಕೋಟಿ ಮೈಲಂತರದ ನೀಹಾರಿಕೆಯ ನಾಡಿ-
ಮಿಡಿತ ತಟ್ಟಿತು ಕಿವಿಗೆ! ನಾದದ ಕೂದಲೆಳೆಯಲಿ
ಪೃಥ್ವಿತೂಗಿರೆ ಸೂರ್ಯಚಂದ್ರರಿಗು ಜೋಕಾಲಿ

ಪಾತಾಳಗವಿಗೆ ತೆರೆದವು ನೂರು ಬೆಳಕಿಂಡಿ!
ಹೊಕ್ಕಳುಹುರಿಯ ಕತ್ತರಿಸಿ ಮುಗಿಯೆ ಶಹನಾಯಿ
ಆಗಸದ ಚಿಪ್ಪೊಡೆದು ಜೀವ ತೆರೆಯಿತು ಬಾಯಿ

ಕವಿಯಗಾಯತ್ರಿ

ಶ್ರೀ. ಎಚ್. ಜೆ. ಉಪಾಧ್ಯಾಯ, ಎಂ. ಎ. ಹೈದರಾಬಾದ್

ನಯನದಲ್ಲಿ ತನಿಸೊಬಗನೆಲ್ಲಿಯೂ ಕಾಂಬ ಕಾಂತಿಗಾಗಿ
ನಾಸಪುಟದಿ ಅವಿನಾಶಿ ಪ್ರೇಮ ಶ್ರೀಗಂಧ ಸುರಭಿಗಾಗಿ
ಶ್ರೋತ್ರಗಳಲಿ ಸತ್‌ಕರ್ಮಯಶದ ಸವಿಗಾನತಿಂಪಿಗಾಗಿ
ರಸನೆಯಲ್ಲಿ ಹಿತಮಿತದ ನುಡಿಯ ಸನಿಪಾಕ ಕಂಪಿಗಾಗಿ
ತನುವಿನಲ್ಲಿ ಭವಭವದ ಮಧುರ ಅನುಭವದ ಸೊಂಪಿಗಾಗಿ
ಹರಸು ತಾಯಿ ಗಾಯತ್ರಿ ನೀನು ತುಂಬೊಲುಮೆಯಲ್ಲಿ ತೂಗಿ
ಮುಕ್ತಮಧುರ ಜೀವನವ ತೆರೆದು ಬಾ ಎದೆಯಬರವ ನೀಗಿದಿ
ರಸವಂತಿ ನೀನು, ರಸವಿರಹಿ ನಾನು, ಸುರಿಸು ಸರಸವೃಷ್ಟಿ
ಸರಸತಿಯು ನೀನು ತವಸುತನು ನಾನು ಬೀರು ಕೃಪೆಯದೃಷ್ಟಿ
ತೊದಲುನುಡಿಯೊಳೂ ಜೇನು ಸುರಿಯದೇ ನಿನ್ನ ಬೀಣೆಯುಲಿಗೆ
ಮದಡುಬುದ್ಧಿಗೂ ನವ್ಯಕಲ್ಪಕತೆ ತವಹಾವಭಾವಸಿರಿಗೆ
ಕುರುಡು ಕಾಶ್ಮೆಯೊಳು ನೂರು ಇಂದ್ರಧನು ನಿನ್ನ ನಯನರುಚಿಗೆ
ಶುಷ್ಕಹೃದಯ ಮಧುಜಷಕವಾಗದೆ ತವರಾಗ ಯೋಗರತಿಗೆ
ಎದೆಯ ತಣಿಸು ಮೈಮನವ ಮಣಿಸು ನೀನುಡಿಸುಮೋದಮುರಲಿ
ರಾಗರೂಪ ರಸಗಂಧ ಶಬ್ದ ಮನದುಂಬಿ ಕುಣಿದುಬರಲಿ

ತಂದೆನೊಂದು ವೀಣೆ

ಶ್ರೀ. ಚಂದ್ರಶೇಖರ ಸಾಟೇಲ, ಕರ್ನಾಟಕ ಕಾಲೇಜ್, ಧಾರವಾಡ

❊

ಅಲ್ಲಿ ಇಲ್ಲಿ ಅಲೆದು ಅರಸಿ
ತಂದೆನೊಂದು ವೀಣೆ—
ಅದರ ನಿಡಿತ ಜಗವ ಮರೆಸಿ-
ತೇಕೊ ಏನೊ ಕಾಣೆ.

ವೀಣೆಗಾನದೊಡನೆ ಬೆರೆಯಿ
ನನ್ನ ಅಳಲ ಕೂಗು—
ಬಾಳಮೊಗ್ಗೆ ತುಟಿಯ ತೆರೆಯೆ
ಹೆರುಷ-ಎಲ್ಲ ಕಡೆಗು

ಕಳೆಯೆ ವೀಣೆಮೊಗದ ಕಾಂತಿ
ಹಗಲು ಇರುಳು ದುಡಿದು,
ಸುರಿದು ಬಿತ್ತು ಕೊನೆಯ ತಂತಿ
ಕೊನೆಯು ತಾನ ಮಿಡಿದು.

ಇಂದು- ನಾನು ಅಳೆನು ಕೂಗಿ;
ವೀಣೆ ಅಳಿದರೇನು?
ಹಾಡುತಿಹುದು ಹಕ್ಕಿಯಾಗಿ,
ಸೇರಿ ಎದೆಯ ಬಾನು.

ವಿಶ್ವಸಿಂಹ

(ಆಸ್ಸಾಮ್ಮಿನ ಒಂದು ಐತಿಹಾಸಿಕ ವಿಭೂತಿ)

ಲೇ. ಪಿ. ವ್ಹಿ. ಗುಡಿ, ಗೋಹಟ್ಟಿ (ಆಸ್ಸಾಂ)

ನಮ್ಮ ಭಾರತೀಯ ಜನತೆಯ ಭಾವುಕಹೃದಯದಲ್ಲಿ, ಆಸಾಮಿನ ಒಬ್ಬ ಐತಿಹಾಸಿಕ ಪುರುಷನ ವಾಸ್ತವ ಜೀವನವು, ಪೌರಾಣಿಕ ಕಥೆಯಂತೆ ಅದ್ಭುತ ರಮ್ಯತೆಯನ್ನು ಪಡೆದಿದೆ. ವಿಶ್ವಸಿಂಹ ೧೬ನೆಯ ಶತಮಾನದಲ್ಲಿ, ಆಸ್ಸಾಮಿನಲ್ಲಿ ಜೀವಿಸಿದ್ದ ಒಬ್ಬ ದೊರೆ.

'ಮಹಾರಾಜಾ ವಿಶ್ವಸಿಂಹನಿಗೆ ಜಯವಾಗಲಿ' ಎಂಬ ಜಯ-ಜಯಕಾರವ ಧ್ವನಿಯಿಂದ ಸಭಾಂಗಣವೆಲ್ಲ ತುಂಬಿಹೋಯಿತು. ಪಟ್ಟಾಭಿಷೇಕದ ಸಮಾರಂಭ ಮುಗಿದು ಜನರೆಲ್ಲರೂ ತಾಂಬೂಲ ಮುಂತಾದವುಗಳನ್ನು ತೆಗೆದುಕೊಂಡು ಹೊರಗೆ ಬರತೊಡಗಿದರು. ಎಲ್ಲರೂ ಮಹಾರಾಜಾ ವಿಶ್ವಸಿಂಹನ ವರ್ಣನೆ ಮಾಡುವವರೇ; ಅವನ ಶೌರ್ಯ, ಧೈರ್ಯ, ದಯಾಳುಸ್ವಭಾವ, ಧಾರ್ಮಿಕ ವೃತ್ತಿ ಮುಂತಾದುವುಗಳು, ಎಲ್ಲರಲ್ಲಿಯೂ ಅವನ ಬಗ್ಗೆ ಆದರ ಹುಟ್ಟಿಸಿದ್ದುವು. ಅದರಲ್ಲಿಯೂ ಇಂದು, ಕಾಮರೂಪದ ರಾಜಪುತ್ರನ ಬಗ್ಗೆ ಅವನು ತೋರಿಸಿದ ಔದಾರ್ಯ, ಎಲ್ಲರಲ್ಲಿಯೂ "ಈತನ ಆಳಿಕೆಯಲ್ಲಿಯೇ ತಮ್ಮ ಸೌಖ್ಯವಿದೆ" ಎಂಬ ನಂಬಿಗೆ ತಂದಿದ್ದಿತು.

ಕೊನೆಯದಾಗಿ ಉಳಿದಿದ್ದ ಕಾಮರೂಪ ಪ್ರದೇಶವನ್ನು ವಶಪಡಿಸಿಕೊಂಡ ನಂತರ, ಮ್ಲೇಚ್ಛವಂಶದ ಬಿಸುರಾಜಕುಮಾರ, ಇಂದು 'ಮಹಾರಾಜ ವಿಶ್ವಸಿಂಹ' ಎಂಬ ಹೆಸರಿನಿಂದ ಪಟ್ಟಾಭಿಷಿಕ್ತನಾದನು. ಈ ಕಾಮರೂಪದ ಯುದ್ಧದಲ್ಲಿ ವಿಶ್ವಸಿಂಹನಿಗೆ ಜಯಸಿಗುವುದೆಂದು ಯಾರೂ ತಿಳಿದಿರಲಿಲ್ಲ. ವಿಶ್ವಸಿಂಹನಿಂದ ಪರಾಜಿತರಾದ ಎಲ್ಲ ಭೂಯಾಸರಾಜರು, ಕಾಮರೂಪದ ನಾರಾಯಣ ಭೂಯಾನನ ಮುಖಂಡತ್ವದಲ್ಲಿ ಒಂದಾಗಿ, ಸುಸಜ್ಜಿತವಾದ ದೊಡ್ಡ ಸೈನ್ಯದೊಂದಿಗೆ ವಿಶ್ವಸಿಂಹನನ್ನು ಎದುರಿಸಿದ್ದರು; ಆದರೆ ದೈವಸಂಕೇತಕ್ಕನುಸಾರವಾಗಿ ವಿಶ್ವಸಿಂಹನಿಗೆ ಜಯಸಿಕ್ಕು ನಾರಾಯಣ ಭೂಯಾನನು ಯುದ್ಧದಲ್ಲಿ ಕೊಲ್ಲಲ್ಪಟ್ಟನು. ಈ ಯುದ್ಧದಿಂದ ವಿಶ್ವಸಿಂಹನಿಗೆ ಎಷ್ಟೋ ಜನರನ್ನೂ ಧನವನ್ನೂ ಕಳೆದುಕೊಳ್ಳಬೇಕಾಯಿತು. ಅಲ್ಲಿಯ ಕಂದಾಯದ ವಸೂಲಿಯ ಸಲುವಾಗಿ ಜನರನ್ನು ಕಳುಹಲು, ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳೆಲ್ಲ ನಾಶಮಾಡಲ್ಪಟ್ಟಿವೆಯೆಂದೂ, ಅವುಗಳ ಕೆಲವು ಪ್ರತಿಗಳು ನಾರಾಯಣ ಭೂಯಾನನ ಮಗ, ಭಗೀರಥನ ಹತ್ತಿರ ಇವೆಯೆಂದೂ ಅವರು ಸುದ್ದಿಯನ್ನು ತಂದರು. ಅದನ್ನು ಕೇಳಿದ ಕೂಡಲೆ ಬಿಸುಕುಮಾರ ಭಗೀರಥನನ್ನು ಕರೆಕಳುಹಿಸಿದ. ಸಭೆಯಲ್ಲಿ ನೆರೆದ ಜನರೆಲ್ಲರೂ 'ಭಗೀರಥನ ಸಲುವಾಗಿ ಅವೆಂತಹ ಶಿಕ್ಷೆ ಕಾದಿದೆಯೋ' ಎಂದು ಗಾಬರಿಯಾಗಿದ್ದರು. ಆದರೆ ಅವನು ಸಭೆಯನ್ನು ಪ್ರವೇಶಿಸಿದ ಕೂಡಲೆ ವಿಶ್ವಸಿಂಹನು ಅವನನ್ನು ಆದರದಿಂದ ಬರಮಾಡಿಕೊಂಡು, ಅವನಿಗೆ ಉಚ್ಚಸ್ಥಾನ ಕೊಟ್ಟು ಕುಳ್ಳಿರಿಸಿದ. ಭಗೀರಥನು ತನ್ನಲ್ಲಿದ್ದ ಎಲ್ಲ ಕಾಗದಗಳನ್ನು ಕಾಣಿಕೆಯಾಗಿ ಅರ್ಪಿಸಿದ ನಂತರ, ವಿಶ್ವಸಿಂಹನು ಅವನನ್ನು ಕಾಮರೂಪದ ರಾಜನನ್ನಾಗಿ ಮಾಡಿ, ಈ ರೀತಿ ಹೇಳಿದ: "ನಿನ್ನ ತಂದೆಯು ನನ್ನಿಂದ ಪರಾಜಿತನಾದರೂ, ನಿನ್ನ ರಾಜ್ಯದ ಮೇಲೆ ಆಧಿಪತ್ಯ ನಡೆಯಿಸಬೇಕೆಂಬ ಇಚ್ಛೆ ನನಗಿಲ್ಲ. ನಿನ್ನ ರಾಜ್ಯಕ್ಕೆ ನೀನೇ ಒಡೆಯ. ಪ್ರಜೆಗಳನ್ನು ಧರ್ಮ ಮತ್ತು ನ್ಯಾಯದಿಂದ ನೋಡಿಕೊಳ್ಳುತ್ತೇನೆಂದು ವಚನಕೊಟ್ಟರೆ ಸಾಕು; ಇಂದಿನಿಂದ ನಾವು ಒಳ್ಳೆಯ ಮಿತ್ರರಾಗಿ ಇರೋಣ."

ಭಗೀರಥನಿಗೂ ವಿಶ್ವಸಿಂಹನ ಈ ನಡತೆಯಿಂದ ಬಲು ಸಂತೋಷವಾಯಿತು. ತನ್ನ ತಂದೆಯು ವೈರಿಯೆಂದು ಮೊದಲು ದ್ವೇಷವಿದ್ದರೂ ನಂತರ ಅವನ ಗುಣ-ಸ್ವಭಾವಗಳಿಂದ, ಅವನ ಬಗ್ಗೆ ಪ್ರೇಮಾದರಗಳು ಹುಟ್ಟಿದುವು.

ಪಟ್ಟಾಭಿಷೇಕದ ಉತ್ಸವ ಮುಗಿದ ಕೂಡಲೆ ವಿಶ್ವಸಿಂಹ ಅರಮನೆಯ ಕಡೆಗೆ ಧಾವಿಸಿದ. ತನ್ನ ಆರಾಧ್ಯದೇವತೆಯಾದ ದುರ್ಗಾಮೂರ್ತಿಯ ಎದುರಿಗೆ ಸಾಷ್ಟಾಂಗ ನಮಸ್ಕಾರಮಾಡಿ ಭಕ್ತಿಯಿಂದ ಕೈಮುಗಿದು ನಿಂತುಕೊಂಡ. 'ತಾಯೇ, ನಿನ್ನ ಕೃಪೆಯಿಂದ ಅಸಾಧ್ಯವಾದ ಕೆಲಸಗಳೆಲ್ಲ ಸುಲಭವಾಗಿ ಕೈಗೂಡತೊಡಗಿವೆ. ೪೦೦ ವರ್ಷಗಳ ನಂತರ ಈ ಮ್ಲೇಚ್ಛರಾಜ್ಯ ಪುನರುಜ್ಜೀವಿತವಾಗಿದೆ. ನಾನು ಈ ರಾಜ್ಯಕ್ಕೆಲ್ಲ ಅಧಿಪತಿಯಾಗಿದ್ದೇನೆಂದು ಅಭಿಮಾನ, ಅಹಂಕಾರ ನನಗಿಲ್ಲ; ಆದರೆ ಮಹಾರಾಜಾ ಭಗದತ್ತನ ವಂಶಜನಾದ ನನ್ನಲ್ಲಿ ಅವನ ಶಕ್ತಿ, ಧರ್ಮ, ನ್ಯಾಯನಿಷ್ಠುರತೆಗಳು ಬರುವಂತೆ ಅನುಗ್ರಹಿಸು ತಾಯೇ; ಇಷ್ಟೇ ನನ್ನ ಪ್ರಾರ್ಥನೆ!' ಎಂದು ಬೇಡಿಕೊಂಡ.

ಈ ಸಮಾರಂಭ-ಉತ್ಸವಗಳ ಮೂಲಕ ದಣಿವಾದಂತಾದ್ದರಿಂದ ವಿಶ್ವಸಿಂಹ ಅಲ್ಲಿಯೇ ಒಂದು ಆಸನದ ಮೇಲೆ ಕುಳಿತುಕೊಂಡ. ಅವನ ಮನಸ್ಸು ೫-೬ ವರ್ಷಗಳ ಹಿಂದಿನ ತನ್ನ ಜೀವನದ ಕಡೆಗೆ ಹರಿಯಿತು. 'ಮಹಾರಾಜಾ ವಿಶ್ವಸಿಂಹನೆನ್ನಲ್ಲಿ' ಅವನಿಗಷ್ಟು ಉತ್ಸುಕತೆ ಕಂಡುಬರಲಿಲ್ಲ. 'ಬಿಸುಕುಮಾರ'ನ ಜೀವನದಲ್ಲಿಯೇ ಅವನಿಗೆ ಸಂತಸವೆನಿಸಿತ್ತು. ಅವನು ಹರಿಯಾನಾ ಮಂಡಲನೆಂಬ ಚಿಕ್ಕ ಮಾಂಡಲಿಕ ರಾಜನ ಮಗನಾಗಿದ್ದರೂ, ತಂದೆಯು ಅವನಿಗೆ ನಾನಾತರದ ಶಾಸ್ತ್ರಗಳ ಅಭ್ಯಾಸವಲ್ಲದೆ ಕ್ಷತ್ರಿಯರಿಗನುಗುಣವಾದ ಕುದುರೆಯ ಸವಾರಿ ಮುಂತಾದ ವಿದ್ಯೆಗಳನ್ನು ಅಭ್ಯಾಸಮಾಡಿಸಿದ್ದನು. ಕುದುರೆಯ ಸವಾರಿ,

ಹುಲಿಬೇಟೆಗಳಲ್ಲಿ ಬಿಸುಕುಮಾರನಿಗೆ ಸರಿಯಾದವರಿರಲಿಲ್ಲ. ಚಿಕ್ಕಂದಿನಿಂದಲೂ ಅವನು ಧೈರ್ಯಶಾಲಿಯೆಂದು ಹೆಸರಾಗಿದ್ದನು.

ಅಂದು ಬಿಹು ಹಬ್ಬ; ಹೊಸವರ್ಷದ ಮೊದಲದಿವಸ. ಎಲ್ಲರಲ್ಲಿಯೂ ಉತ್ಸಾಹ ತೋರುತ್ತಲಿದೆ. ಹೊಸ ಉಡಿಗೆ-ತೊಡಿಗೆಗಳೊಂದಿಗೆ ಸಂಗೀತ ನೃತ್ಯಗಳಲ್ಲಿ ಎಲ್ಲರೂ ಮೈಮರೆತಿದ್ದಾರೆ. ಬಿಸುಕುಮಾರನೂ ತನ್ನ ಮಿತ್ರರೊಂದಿಗೆ ಹೊರಹೊರಡುವುದರಲ್ಲಿದ್ದ. ಅಷ್ಟರಲ್ಲಿ ತಂದೆ ಹರಿಯಾನಾ ಮಂಡಲನಿಂದ ಕರೆಬಂದಿತು. ಕೂಡಲೆ ಮುಂದೆ ಹೊರಡಲಿಕ್ಕೆ ಮಿತ್ರರಿಗೆ ಹೇಳಿ, ತಾನು ತನ್ನ ತಂದೆಯ ಭೆಟ್ಟಿಗೆ ಹೋದ.

ವಿಶ್ವಸಿಂಹನಿಗೆ ನಿನ್ನೆ ಮೊನ್ನೆಯ ಸಂಗತಿಯಂತೆ ಅಚ್ಚಳಿಯದೆ ಆ ದಿವಸದ ನೆನಪಿತ್ತು. ಆದೇ ಬಿಹು ದಿವಸವೇ ಅವನ ಜೀವನದಲ್ಲಿ ಒಂದು ಗುರಿಯನ್ನುಂಟುಮಾಡಿಕೊಟ್ಟಿತು; ಹುಡುಗತನದ ಆಟಪಾಟಗಳಿಂದ ಅವನನ್ನು ದೂರಮಾಡಿತು.

ಬಿಸುಕುಮಾರ ತಂದೆಯ ಕೋಣೆಗೆ ಬಂದಾಗ, ಅವನ ತಾಯಿ ಹೀರಾದೇವಿಯೂ ಅಲ್ಲಿ ಇದ್ದಳು. ಬಿಸುಕುಮಾರ ಇಬ್ಬರಿಗೂ ನಮಸ್ಕರಿಸಿ ಒಂದೆಡೆಗೆ ಕುಳಿತ. ಹರಿಯಾನಾ ಅವನ ಕಡೆಗೆ ವಾತ್ಸಲ್ಯದಿಂದ ನೋಡುತ್ತ 'ಕುಮಾರ, ಈಗ ನಾಲ್ಕು ವರ್ಷಗಳಿಂದ ನಿನಗೆ ಹೇಳಬೇಕೆಂದು ದಾರಿ ಕಾಯುತ್ತಿರುವ ದಿವಸ ಇಂದು ಬಂದಿದೆ.' ಎಂದು ಹೇಳತೊಡಗಿದ; 'ನಿನ್ನ ವಿದ್ಯಾಭ್ಯಾಸ ಮುಗಿಯುತ್ತ ಬಂದಿದೆ; ನೀನೀಗ ಕೈಕೊಳ್ಳಬೇಕಾದ ಕೆಲಸಕ್ಕೆ ತಕ್ಕವನಾಗಿರುವೆಯೆಂಬುದು ನಿನ್ನ ಶೌರ್ಯ ಧೈರ್ಯಗಳಿಂದ ವಿದಿತವಾಗುತ್ತದೆ. ಆ ಕೆಲಸವೇನೆಂಬುದನ್ನು ತಿಳಿದುಕೊಳ್ಳುವುದಕ್ಕೆ ಮೊದಲು, ಕೆಲವೊಂದು ವಿಷಯಗಳು ನಿನಗೆ ಗೊತ್ತಿರುವುದವಶ್ಯ. ನಾವು ಆ ನೀರಾಗ್ರಣಿ ಧರ್ಮಸಂಪನ್ನನಾದ ಭಗದತ್ತ ಮಹಾರಾಜನ ವಂಶದವರಿಷ್ಟೇ ಅಲ್ಲ; ಕ್ಷತ್ರಿಯರ ರಕ್ತವು ನಮ್ಮ ನಾಡಿನಾಡಿಗಳಲ್ಲಿ ಹರಿಯುತ್ತಿದೆ. ಸಹಸ್ರಾರ್ಜುನನ ಹನ್ನೆರಡು ಜನ ಮಕ್ಕಳು ಮ್ಲೇಚ್ಛಕನ್ಯೆಯರನ್ನು ಲಗ್ನವಾಗಿ ಮ್ಲೇಚ್ಛ ಧರ್ಮವನ್ನೇ ಅಂಗೀಕರಿಸಿದರು. ಅವರ ವಂಶಜರು ನಾವು. ನಾಲ್ಕು ಸಾವಿರ ವರ್ಷಗಳ ಅಳಿಕೆಯನಂತರ ಯಾವ ಪಾಪದ ಮೂಲಕವೋ, ಈ ರಾಜ್ಯ ನಮ್ಮ ಕೈ ತಪ್ಪಿತು. ಎಷ್ಟೋ ಮ್ಲೇಚ್ಛ ಶೂರ ಸರದಾರರು, ಎಲ್ಲಿಯೋ ಬೇರೆ ಬೇರೆ ರಾಜರ ಕೈಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಪೂರ್ವದ ವೈಭವವನ್ನು ಮತ್ತೆ ಸಂಪಾದಿಸಲು ಎಲ್ಲರಲ್ಲಿಯೂ ಇಚ್ಛೆ ಇದೆ. ಮೊದಲನೆಯ ಪ್ರಯತ್ನವಾಗಿ ನಾನು, ಪ್ರಜೆಗಳನ್ನು ಪೀಡಿಸುತ್ತ ಅನ್ಯಾಯದಿಂದ ರಾಜ್ಯವಾಳುತ್ತಿದ್ದ ಫುಲಗುರಿ ಭೂಯಾನನೊಂದಿಗೆ ಯುದ್ಧ ಹೂಡಿದೆ. ಇನ್ನೂ ಶಾಪದ ಅವಧಿ ಪೂರ್ಣ ಮುಗಿದಂತೆ ಕಂಡುಬರಲಿಲ್ಲ. ಆದರೆ ಸೋತು ಹಿಂದಿರುಗುವುದಕ್ಕಿಂತ ಯುದ್ಧದಲ್ಲಿ ಮಡಿಯುವುದೇ ಲೇಸೆಂದು ನಾನು ಎಲ್ಲವನ್ನೂ ಅಣಿಮಾಡಿಕೊಂಡು ಸಿದ್ಧನಾದೆ. ಕೊನೆಯಸಾರೆ ನನ್ನ ಪೂಜೆಯನ್ನು ಅರ್ಪಿಸುವುದಕ್ಕೆಂದು ದುರ್ಗಾಮಾತೆಯೆದುರಿಗೆ ಬಂದು ನಮಸ್ಕರಿಸಿದೆ. ಆಗ ಒಂದು ಒಳ್ಳೇ ಚಮತ್ಕಾರದ ಸಂಗತಿ ಸಂಭವಿಸಿತು. ನಾನು ನಮಸ್ಕರಿಸುತ್ತಿರುವಾಗಲೆ ದುರ್ಗಾಮಾತೆಯು ಕಣ್ಣೆದುರಿಗೆ ನಿಂತಂತಾಗಿ 'ಯಾವುದಕ್ಕೂ ಬೇಳೆ ಬರಬೇಕು, ದುಡುಕಬೇಡ, ಶಿವಶಕ್ತಿಯು ನಿನ್ನ ಮಗ ಬಿಸುಕುಮಾರನಲ್ಲಿದೆ. ಇನ್ನು ಐದುವರ್ಷಗಳ ನಂತರ ನೀನು ಯೋಚಿಸಿದಂತೆ ಇಡೀ ಮ್ಲೇಚ್ಛರಾಜ್ಯಕ್ಕೆ ಬಿಸುಕುಮಾರನು ಅಧಿಪತಿಯಾಗುತ್ತಾನೆ. ನೀನೀಗ ಸೋಲನ್ನೊಪ್ಪಿಕೊಂಡು ನಿನ್ನ ಮಗನ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡು, ಎಂದು ಹೇಳಿದಂತೆನಿಸಿತು. ನಾನು ಎದ್ದು ಅದೇ ಯೋಚನೆಯಲ್ಲಿದ್ದೆ. ಆ ಮಧುರ ಸ್ವರ ಇನ್ನೂ ಕಿವಿಯಲ್ಲಿ ಕೇಳಿಸಿದಂತಾಗುತ್ತಿತ್ತು. ಅದೇ ವೇಳೆಗೆ ನಿನ್ನ ತಾಯಿಯು ಧಾವಿಸಿ ಬರುತ್ತಿರುವುದನ್ನು ನೋಡಿದೆ.'

ಹೀರಾದೇವಿಯೂ ಧ್ವನಿಕೂಡಿಸಿದಳು. 'ಅಹುದು ಬಿಸುಕುಮಾರ, ಅಂದು ನನಗೊಳ್ಳೇ ವಿಚಿತ್ರವಾದ ಕನಸು ಬಿದ್ದಿತ್ತು. ಅದನ್ನು ಹೇಳಿ ನಿನ್ನ ತಂದೆಯನ್ನು ಯುದ್ಧಕ್ಕೆ ಹೋಗದಂತೆ ಮಾಡಬೇಕೆಂಬ ಉದ್ವೇಶದಿಂದ ನಾನು ಓಡುತ್ತಬಂದೆ ನಿನ್ನ ತಂದೆಯು ಯುದ್ಧಕ್ಕೆ ಹೊರಟು ನಿಂತಂತೆಯೂ, ನೀನು ಬಂದು ಅವನನ್ನು ಹಿಂದಕ್ಕೆ ಕಳುಹಿಸಿನ ಮುಂದಿರಕ್ಕೆ ಹೋಗಿ ನಮಸ್ಕರಿಸಿದಂತೆಯೂ, ಶಿವಲಿಂಗದಿಂದ ಒಂದು ತರದ ಬೆಳಕು ಬಂದು ನಿನ್ನಲ್ಲಿ ಪ್ರವೇಶಿಸಿದಂತೆಯೂ, ಅನಂತರ ನೀನು ಎಲ್ಲರನ್ನೂ ಗೆದ್ದು ಮ್ಲೇಚ್ಛ ರಾಜ್ಯಕ್ಕೆಲ್ಲ ಅಧಿಪತಿಯಾಗಿ ಪಟ್ಟಾಭಿಷಿಕ್ತನಾದಂತೆಯೂ ಕನಸನ್ನು ಕಂಡೆ.'

ಹರಿಯಾನಾ ಹೇಳಿದ: 'ನಿನ್ನ ತಾಯಿಯ ಕನಸು ಕೂಡ ನಾನು ಕೇಳಿದ ದುರ್ಗಾಮಾತೆಯ ವಾಣಿಯ ಅರ್ಥವನ್ನೇ ಸಮರ್ಥಿಸಿದ್ದರಿಂದ, ಅಪಮಾನಾಸ್ಪದವಾದ ಸೋಲನ್ನೊಪ್ಪಿಕೊಂಡು, ಆಗ ನನ್ನ ರಾಜ್ಯಕ್ಕೆ ಬಂದೆ. ಆ ಐದು ವರ್ಷಗಳು ಇಂದಿಗೆ ಮುಗಿದುವು. ದುರ್ಗಾಮಾತೆಯು ಹೇಳಿದಂತೆ ಶಿವನ ಶಕ್ತಿಯು ನಿನ್ನಲ್ಲಿ ಕಾರ್ಯ ಮಾಡತೊಡಗುತ್ತದೆ. ಅನ್ಯಾಯದಿಂದ ರಾಜ್ಯವಾಳುತ್ತಿರುವ ಈ ಎಲ್ಲ ಭೂಯಾನ ಅರಸರನ್ನು ಸೋಲಿಸಿ, ಮ್ಲೇಚ್ಛರಾಜ್ಯವನ್ನು ಪುನರುಜ್ಜೀವನಗೊಳಿಸಿ, ಧರ್ಮನ್ಯಾಯದಿಂದ ಪ್ರಜರನ್ನು ಪಾಲಿಸುತ್ತ ನಮ್ಮ ಕುಲಕ್ಕೆ ಕೀರ್ತಿಯನ್ನು ತರಬೇಕು.'

ಈ ಮಾತುಗಳನ್ನು ಕೇಳಿ ಏನು ಮಾಡುವುದಕ್ಕೂ ತೋಚದೆ, ಹಾಗೆಯೇ ಹೊರಕ್ಕೆ ಬಂದ ಬಿಸುಕುಮಾರ. ಪಟ್ಟಣದಲ್ಲಿ ನಡೆದ ಬಿಹೂವ ಮನೋರಂಜನೆಯ ಕಾರ್ಯಕ್ರಮಗಳ ಕಡೆಗೆ ಅವನ ಮನಸ್ಸು ಹರಿಯಲಿಲ್ಲ. ಊರ ಆಚೆಗಿನ ಗುಡ್ಡದ ಕಡೆಗೆ ನಡೆದ. ಕಾಲಿಗೆ ಏನೋ ತಗುಲಿದಂತಾಯಿತು. ಕೆಳಗೆ ನೋಡಿದರೆ ಒಂದು ಸುಂದರವಾದ ಹೊಳೆಯುತ್ತಿರುವ ಪ್ರತಿಮೆ—ದುರ್ಗಾಮಾತೆಯದು. ಅದನ್ನು ಕೈಯಲ್ಲಿ ತೆಗೆದುಕೊಳ್ಳುತ್ತಲೇ ತನ್ನಲ್ಲಿಯ ಸುಪ್ತವಾದ ಶಕ್ತಿಯೊಂದು ಜಾಗೃತವಾಗಿ, ಅವನನ್ನು ಬಡಿದೆಬ್ಬಿಸಿದಂತಾಯಿತು. ಆ ಮೂರ್ತಿಯನ್ನು ತೆಗೆದುಕೊಂಡು ಬಂದು ತನ್ನ ಕೋಣೆಯಲ್ಲಿಟ್ಟು ಭಕ್ತಿಯಿಂದ ನಮಸ್ಕರಿಸಿದ. ಅಂದಿನಿಂದ ಅದೇ ಅವನ ಆರಾಧ್ಯದೇವತೆಯಾಯಿತು. ಮತ್ತು ಅಂದಿನಿಂದಲೇ ಬಿಸುಕುಮಾರ ತಂದೆಯು ಎಲ್ಲ ಕಾರ್ಯಗಳಲ್ಲಿ ಆಸಕ್ತಿಯನ್ನು ತೋರಿಸತೊಡಗಿದ.

೮-೧೦ ತಿಂಗಳುಗಳು ಹಾಗೆಯೇ ಕಳೆದುವು. ಈ ವರ್ಷ ಬಿಸುಕುಮಾರ ಫುಲಗುರಿ ಭೂಯಾನನಿಗೆ ಕೊಡಬೇಕಾದ ಕಪ್ಪವನ್ನು ಕಳುಹಲಿಲ್ಲ. ಅವನೊಂದಿಗೆ ಯುದ್ಧಹೂಡಿ, ತನ್ನ ತಂದೆಗಾದ ಅಪ-

ಮಾನದ ಸೇಡನ್ನು ತೀರಿಸಿಕೊಳ್ಳಬೇಕಾಗಿತ್ತು ಅವನಿಗೆ. ತಾನಾಗಿಯೇ ದಂಡೆತ್ತಿ ಹೋಗಬೇಕೆಂದರೆ ಅವನ ಮಿತ್ರರು ಸಿದ್ಧರಾಗಿರಲಿಲ್ಲ. ಫುಲಗುರಿಯ ಸುಸಜ್ಜಿತವಾದ ಸಾವಿರಾರು ಸೈನಿಕರೊಂದಿಗೆ ಕಾದಾಡಲು ತಾವು ಅಸಮರ್ಥರೆಂದು ಅವರಲ್ಲಿ ದೃಢವಾದ ನಂಬಿಕೆಯಿತ್ತು. ಇಷ್ಟರಲ್ಲಿ ಫುಲಗುರಿಯ ಭೂಯಾನನು ದಂಡೆತ್ತಿ ಬರುತ್ತಿದ್ದಾನೆಂಬ ಸುದ್ದಿ ಬಂದಿತು. ತನಗೆ ಬೇಕಾದದ್ದೇ ಸಂಭವಿಸಿತಾದ್ದರಿಂದ, ಬಿಸುಕುಮಾರನಿಗೆ ಸಂತೋಷವಾಯಿತು. ಕೋಟೆಯನ್ನು ಭದ್ರವಾಗಿರಿಸಿ, ಬಾಗಿಲುಗಳನ್ನು ಮುಚ್ಚಿಸಿ, ಎಲ್ಲ ಕಡೆಗೂ ಕಾವಲುಗಾರರನ್ನು ನೇಮಿಸಿ ಯುದ್ಧಕ್ಕೆ ಅಣಿಮಾಡಿಕೊಳ್ಳತೊಡಗಿದನು.

೩ ತಿಂಗಳು ಕಳೆದರೂ ಜಯಾಪಜಯಗಳ ಚಿಹ್ನೆ ಎರಡೂ ಪಕ್ಷಗಳಲ್ಲಿ ಕಂಡುಬರಲಿಲ್ಲ. ಐದು ವರ್ಷ ಮುಗಿದು ನಾಳಿನ ದಿವಸ ಹೊಸ ವರ್ಷದ ಮೊದಲಿನ ದಿವಸ. ಹೊರಗೆ ವೈರಿಗಳು ಮುತ್ತಿಗೆ ಹಾಕಿ ಕುಳಿತಾಗ ಬಿಹು ಹಬ್ಬವನ್ನು ಹೇಗೆ ಆಚರಿಸುವುದು? ಆ ರಾತ್ರಿ ಬಿಸುಕುಮಾರ ಅದನ್ನೇ ಯೋಚಿಸುತ್ತ, ನಿತ್ಯಕ್ರಮದಂತೆ ದುರ್ಗೆಯ ಮಂದಿರಕ್ಕೆ ಬಂದು ಭಕ್ತಿಯಿಂದ ನಮಸ್ಕರಿಸಿ ಕುಳಿತುಕೊಂಡ. ಏನೇನೋ ಯೋಚನೆಗಳಿಂದ ಮನಸ್ಸೆಲ್ಲ ಕದಡಿದಂತಾಗಿತ್ತು.—ಈ ಯುದ್ಧದಿಂದ ಅದೆಷ್ಟು ಜನರ ಪ್ರಾಣಪಾನಿಯಾಗುತ್ತದೆ! ಫುಲಗುರಿಯ ರಾಜನೊಬ್ಬನು ತನ್ನ ತಂದೆಯ ಅಪಮಾನ ಮಾಡಿದರೆ, ಇಷ್ಟೆಲ್ಲ ಜನರು ಏಕೆ ಕೊಲ್ಲಲ್ಪಡಬೇಕು?—ದೈವೀಶಕ್ತಿಯೊಂದು ಅವನ ದೇಹದಲ್ಲಿ ಸಂಚರಿಸಿದಂತಾಯಿತು. ಹಾಗೆಯೇ ದೇವಿಗೆ ಸಾಷ್ಟಾಂಗವೆರಗಿ ಹೊರಬಿದ್ದ. ಎಲ್ಲಿ ಹೋಗುತ್ತಿದ್ದೇನೆಂಬವರ ಅರಿವಿರಲಿಲ್ಲ ಅವನಿಗೆ. ಮಧ್ಯರಾತ್ರಿಯಲ್ಲಿ ಹೀಗೆ ಹೊರಟದ್ದನ್ನು ನೋಡಿ, ಅವನ ಸಂರಕ್ಷಣೆಯ ಭಾರವನ್ನು ಹೊತ್ತ (Body-guards) ೬ ಜನ ಮಿತ್ರರೂ ಅವನನ್ನು ಹಿಂಬಾಲಿಸಿದರು. ಅವನು ಕೋಟೆಯ ಗುಪ್ತದ್ವಾರದಿಂದ ಹೊರಬಿದ್ದು, ನೇರವಾಗಿ ವೈರಿಗಳ ಬೀಡಾರವನ್ನು ಹೊಕ್ಕು ಭೂಯಾನನು ಮಲಗಿದಲ್ಲಿಗೆ ಬಂದ. ಮಧ್ಯರಾತ್ರಿಯಾಗಿ ಕಾವಲುಗಾರರೆಲ್ಲ ತೂಕಡಿಸುತ್ತಿದ್ದುದರಿಂದ, ಅವನಿಗೆ ದಾರಿಯಲ್ಲಿ ಆತಂಕವಾಗಲಿಲ್ಲ. ಬಿಸುಕುಮಾರ ಭೂಯಾನನನ್ನು ಒದರಿ ಎಬ್ಬಿಸಿದ. 'ನಾನು ಬಿಸುಕುಮಾರ, ಹರಿಯಾನಾನ ಮಗ; ಬಂದಿದ್ದೇನೆ. ನೀನು ನನ್ನ ತಂದೆಗೆ ಅಪಮಾನ ಮಾಡಿದ್ದಕ್ಕೆ ಕ್ಷಮೆ ಕೇಳುವಿಯೋ, ಇಲ್ಲವೆ ನನ್ನೊಡನೆ ಯುದ್ಧಕ್ಕೆ ಬರುವಿಯೋ?' ಎಂದು ಕೇಳಿದ.

ಭೂಯಾನ ಎದ್ದು ಕಣ್ಣು ಒರೆಸಿಕೊಳ್ಳುತ್ತ, ಇವನ ಕಡೆಗೆ ತುಚ್ಛ ದೃಷ್ಟಿಯಿಂದ ನೋಡಿ ನಕ್ಕು ಹೇಳಿದ: 'ನೀನು ಹರಿಯಾನಾನ ಮಗನೇ? ನೀನೇ ಬಂದದ್ದು ಒಳ್ಳೆಯದಾಯಿತು. ನಿನ್ನ ತಂದೆಯು ಈ ಸಾರೆಯ ಕಪ್ಪವನ್ನು ಕೊಡದ್ದರಿಂದ, ನಿಮ್ಮನ್ನು ಶಿಕ್ಷಿಸುವುದಕ್ಕಾಗಿಯೇ ನಾನು ಬಂದದ್ದು. ನೀನು ನನ್ನ ಗುಲಾಮನಾಗಿ ನನ್ನ ಚಾಕರಿಗೆ ನಿಂತರೆ ಮಾತ್ರ ನೀವು ಈ ವರ್ಷದ ಕಪ್ಪದ ಹಣವನ್ನು ಕೊಡುವದವಶ್ಯವಿಲ್ಲ. ಅಲ್ಲಿದ್ದ ಬೀಸಣಿಕೆ ತೆಗೆದುಕೊ; ಗಾಳೀ ಹಾಕುವುದು ಇಂದಿನಿಂದ ನಿನ್ನ ಕೆಲಸ!'

ಈ ಅಸಹ್ಯವಾದ ಮಾತುಗಳನ್ನು ಕೇಳಿ ಬಿಸುಕುಮಾರನ ರಕ್ತ ಕುದಿಯತೊಡಗಿತು. ತಂದೆಗಾದ ಅಪಮಾನದಿಂದ ಮೊದಲೇ ಸಂತಪ್ತನಾಗಿದ್ದ ಕುಮಾರನಿಗೆ ಈಗ ಸಿಟ್ಟು ಸಹಿಸುವುದಸಾಧ್ಯವಾಗಿ, ತನ್ನ ಕೈಯಲ್ಲಿಯ ಕತ್ತಿಯಿಂದ ಒಂದೇ ಏಟಿಗೆ ಅವನನ್ನು ಅಲ್ಲಿಯೇ ಆಹುತಿ ತೆಗೆದುಕೊಂಡನು. ಇವನನ್ನು ಹಿಂಬಾಲಿಸಿ ಬಂದ ೬ ಜನ ಮಿತ್ರರು ಕೂಡಲೆ ಹೊರಗೆ ಎಲ್ಲರ ಸಮಾಚಾರ ತೆಗೆದುಕೊಂಡರು. ಸೂರ್ಯೋದಯದ ಮೊದಲೇ ಈ ಸುದ್ದಿ ಎಲ್ಲ ಕಡೆಗೂ ಹಬ್ಬಿ, ಫುಲಗುರಿಯ ಸೈನಿಕರೆಲ್ಲ ಓಡಿಹೋದರು. ಹರಿಯಾನಾ ಮಂಡಲನಿಗೆ ಮಗನ ಈ ಸಾಹಸದ ಕಾರ್ಯದಿಂದ ತುಂಬ ಸಂತೋಷವಾಗಿ, ತಾನು ಕೇಳಿದ ದೇವಿಯ ವಾಣಿಯಲ್ಲಿ ಮತ್ತಿಷ್ಟು ನಂಬಿಗೆ ಹುಟ್ಟಿತು. ಹೊಸ ವರ್ಷದ ಮೊದಲ ದಿವಸ ಈ ಸಂತೋಷದ ಸಂಗತಿಯಿಂದ ಎಲ್ಲರೂ ಆನಂದಿತರಾಗಿ ಬಿಹು ಹಬ್ಬವನ್ನು ಒಳ್ಳೇ ವಿಜೃಂಭಣೆಯಿಂದ ಆಚರಿಸಿದರು.

ಬಿಸುಕುಮಾರ ಫುಲಗುರಿಯ ಸೈನ್ಯವನ್ನು ಒಬ್ಬನೇ ರಾತ್ರಿಯಲ್ಲಿ ಪ್ರವೇಶಿಸಿ, ಭೂಯಾನನನ್ನು ಕೊಂದು ಬಂದ ಸುದ್ದಿ ಎಲ್ಲಕಡೆಗೂ ಹಬ್ಬಿತು. ಜನರೆಲ್ಲರೂ ಅವನ ಧೈರ್ಯ-ಸಾಹಸಗಳನ್ನು ಹೊಗಳತೊಡಗಿದರು. ಮುಂದೆ ಒಂದೇ ವರ್ಷದಲ್ಲಿ ಕರಣ ಪುರ, ಕನೌಜ ಪುರ ಮತ್ತು ಬಿಜೇನಿ ರಾಜ್ಯಗಳು ಅವನ ಕೈವಶವಾದುವು. ೪೦೦ ವರ್ಷಗಳ ಮೇಲೆ ಶಿವನು ಅವತರಿಸಿ ಮ್ಲೇಚ್ಛರಾಜ್ಯವನ್ನು ಪುನರುಜ್ಜೀವನಗೊಳಿಸುವನೆಂಬ ಭವಿಷ್ಯವನ್ನು ಎಲ್ಲರೂ ಹೇಗೋ ನಂಬಿದ್ದರು. ಎರಡೇ ವರ್ಷಗಳಲ್ಲಿಯೆ ಚಿಕ್ಕ ವಯಸ್ಸಿನ ಬಿಸುಕುಮಾರನ ಈ ಸಾಹಸಗಳು, ಇವನೇ ಶಿವನ ಅವತಾರವಿರಬಹುದೆಂಬ ಸಂದೇಹವನ್ನು ಹುಟ್ಟಿಸಿದ್ದರಲ್ಲಿ ಆಶ್ಚರ್ಯವೇನು! ಎಲ್ಲೆಲ್ಲಿಯೋ ಅಡಗಿಕೊಂಡು ಕುಳಿತ ಮ್ಲೇಚ್ಛ ಸರದಾರರು ಬಿಸುಕುಮಾರನನ್ನು ಬಂದು ಕೂಡತೊಡಗಿದರು. ೪೦೦ ವರ್ಷಗಳ ಅವಧಿ ಮುಗಿದದ್ದರಿಂದ, ಇನ್ನು ಸ್ವಲ್ಪೇ ದಿವಸಗಳಲ್ಲಿ ಮ್ಲೇಚ್ಛ ರಾಜ್ಯ ಮತ್ತೆ ಮೊದಲಿನ ವೈಭವ ಪಡೆಯುವುದೆಂದು ಅವರಿಗೆಲ್ಲ ಆಶೆ ಹುಟ್ಟಿಸಿತ್ತು. ಆ ಆಶೆಗೆ ಮುಖ್ಯ ಕಾರಣವೆಂದರೆ ಬಿಸುಕುಮಾರನ ಈ ಸಾಹಸಗಳು.

ಈಗ ಅನೇಕ ಸರದಾರರ ಸಹಾಯದಿಂದ ಮತ್ತಿಷ್ಟು ಉತ್ತೇಜಿತನಾಗಿ, ಬಿಸುಕುಮಾರನು ಒಳ್ಳೇ ಬಲಿಷ್ಠನಾದ ಪ್ರತಾಪ ಭೂಯಾನನ ಮೇಲೆ ದಂಡೆತ್ತಿ ಹೋದ. ಮ್ಲೇಚ್ಛ ರಾಜ್ಯ ಮೊದಲಿನ ಘನತೆಯನ್ನೂ ವೈಭವವನ್ನೂ ಪಡೆಯಬೇಕೆಂಬ ಆಶೆ ಬಿಸುಕುಮಾರನಲ್ಲಿಯೂ ಬಲವಾಗಿತ್ತು. ಆದರೆ ಅದಕ್ಕಾಗಿ ಜನರನ್ನು ಕೊಲ್ಲುವುದು ಅವನಿಗೆ ಬೇಡವಾಗಿತ್ತು. ಪ್ರತಿದಿವಸ ದುರ್ಗಾಮಾತೆಯನ್ನು ಅವನು ಪ್ರಾರ್ಥಿಸಿಕೊಳ್ಳುವುದೂ ಅದೇ ಆಗಿತ್ತು-- 'ಮ್ಲೇಚ್ಛರಾಜ್ಯ ಮೊದಲಿನಂತೆ ವೈಭವಸಂಪನ್ನವಾಗಿ, ಅಲ್ಲಿ ಜನರೆಲ್ಲರೂ ಸುಖಶಾಂತಿಗಳಿಂದ ಇರುವಂತಾಗಬೇಕು; ಧರ್ಮ-ನ್ಯಾಯಗಳು ಆ ರಾಜ್ಯದ ತಳಹದಿಯಾಗಿರಬೇಕು.'

ಈಗಲೂ ಕೂಡ ಅವನಿಗೊಂದು ಯೋಚನೆ ಹೊಳೆಯಿತು: ಪ್ರತಾಪ ಭೂಯಾನನಿಗೆ ಮಕ್ಕಳಿರಲಿಲ್ಲ; ಒಬ್ಬನೇ ತಮ್ಮನಿದ್ದ. ಅವನ ಮೇಲೆ ಪ್ರತಾಪನ ಮೋಹ ಬಹಳ. ಅವನನ್ನು ಬಿಟ್ಟು ಅಣ್ಣ ಅಕೆ-

ಗಳಿಗೆಯಾದರೂ ಇರುತ್ತಿರಲಿಲ್ಲ. ಅವನ ತಮ್ಮನು ಪ್ರತಿದಿವಸ ಮುಂಜಾನೆ ಬ್ರಹ್ಮಪುತ್ರ ನದಿಯ ಸ್ನಾನಕ್ಕೆ ಬರುತ್ತಿದ್ದ. ಇದನ್ನು ತಿಳಿದುಕೊಂಡು ಬಿಸುಕುಮಾರ, ಅವನು ನದಿಗೆ ಸ್ನಾನಕ್ಕೆ ಬಂದಾಗ ಗುಪ್ತರೀತಿಯಿಂದ ಅವನನ್ನು ಬಂದಿಯಾಗಿ ತೆಗೆದುಕೊಂಡು ಹೋದ; ಮತ್ತು ನದಿಯಲ್ಲಿ ಸ್ನಾನಮಾಡುವಾಗ ಅವನು ಮೊಸಳೆಯ ಬಾಯಿಗೆ ಬಿದ್ದು ಸತ್ತುಹೋದನೆಂದು ಸುದ್ದಿ ಹುಟ್ಟಿಸಿದ. ತನ್ನ ತಮ್ಮನು ಸತ್ತ ಸುದ್ದಿಯನ್ನು ಕೇಳಿ, ಜೀವನದಲ್ಲಿ ತುಂಬ ನಿರಾಶೆಯುಂಟಾಗಿ ಪ್ರತಾಪ ಭೂಯಾನನು ರಾಜ್ಯಬಿಟ್ಟು ಸಂನ್ಯಾಸಿಯಾಗಿ ಅರಣ್ಯಕ್ಕೆ ಹೊರಟುಹೋದ. ಹೀಗಾಗಿ ಏನೂ ತೊಂದರೆ ಇಲ್ಲದೆ ಆ ರಾಜ್ಯ ಬಿಸುಕುಮಾರನಿಗೆ ಸಿಕ್ಕಿತು. ಆದರೆ ಅವನು ಅದಕ್ಕೆ ಆಶೆಮಾಡದೆ, ಪ್ರತಾಪನ ತಮ್ಮನನ್ನು ಆದರದಿಂದ ಬರಮಾಡಿಕೊಂಡು,ಅವನ ರಾಜ್ಯವನ್ನೆಲ್ಲ ಅವನಿಗೆ ಕೊಟ್ಟು ಅವನ ಮಿತ್ರತ್ವ ಸಂಪಾದಿಸಿದ. ಕೆಲವು ದಿವಸಗಳ ನಂತರ ಅಕಸ್ಮಾತ್ತಾಗಿ ತನ್ನ ಪಟ್ಟಣಕ್ಕೆ ಬಂದ ಪ್ರತಾಪನು, ತನ್ನ ತಮ್ಮನೇ ಸ್ವತಂತ್ರವಾಗಿ ರಾಜ್ಯವಾಳುತ್ತಿದ್ದುದನ್ನೂ, ಬಿಸುಕುಮಾರನೊಡನೆ ಒಳ್ಳೇ ಗೆಳೆತನದಿಂದ ಇದ್ದುದನ್ನೂ ನೋಡಿ ಸಂತೋಷಪಟ್ಟು, ಮತ್ತೆ ಅರಣ್ಯಕ್ಕೆ ಹೊರಟು ಹೋದನಂತೆ.

ವಿಶ್ವಸಿಂಹ ದುರ್ಗಾಮೂರ್ತಿಯ ಎದುರಿಗೆ ಕುಳಿತಾಗ, ಇವೆಲ್ಲ ಸಂಗತಿಗಳು ಒಂದೊಂದೇ ಅವನ ಸ್ಮೃತಿಪಟದ ಮೇಲೆ ಮೂಡಿ ಹೋದುವು. ತನ್ನ ತಂದೆಗೆ ಕೇಳಿಸಿದ ದೈವೀವಾಣಿಯಂತೆ, ತಾಯಿಯು ಕಂಡ ಕನಸಿನಂತೆ, ಭಗದತ್ತನ ಕಾಲದ ಪ್ರಾಗ್ಜ್ಯೋತಿಷದ ಪ್ರದೇಶವೆಲ್ಲ ಈಗ ತನ್ನ ಆಧಿಪತ್ಯದಲ್ಲಿದೆ— ಭಗದತ್ತನ ಹೆಸರಿನೊಂದಿಗೆ ಬಿಸುಕುಮಾರನಿಗೆ ತನ್ನ ತಂದೆಯು ಹೇಳಿದ ಮಾತಿನ ನೆನಪಾಯಿತು— 'ಧರ್ಮ, ನ್ಯಾಯ ಇವುಗಳು ನಿನ್ನ ರಾಜ್ಯದ ತಳಹದಿಯಾಗಿರಬೇಕು.' ದೇವಿಯ ಮೂರ್ತಿಯ ಎದುರಿಗೆ ಸಾಷ್ಟಾಂಗ ನಮಸ್ಕಾರ ಹಾಕಿ 'ತಾಯಿ, ಭಗದತ್ತನ ಧರ್ಮನಿಷ್ಠೆ, ನ್ಯಾಯ ತತ್ಪರತೆ ನನ್ನಲ್ಲಿ ಉಂಟಾಗುವಂತೆ ಅನುಗ್ರಹಿಸು' ಎಂದು ಬೇಡಿಕೊಂಡ.

ಅದೇ ಹೊತ್ತಿಗೆ ಬಾಗಿಲು ಕಾಯುವವನು ಬಂದು, ಸಾರ್ವಭೌಮ ಪಂಡಿತರು ತಮ್ಮನ್ನು ಕಾಣಬೇಕೆಂದು ಬಂದಿದ್ದಾರೆಂದು ಹೇಳಿದ. ತಾನಾಗಿಯೇ ಹೋಗಿ ಅವರನ್ನು ಕಾಣಬೇಕೆಂದಿದ್ದ ವಿಶ್ವಸಿಂಹನಿಗೆ ಇದನ್ನು ಕೇಳಿ ಸಂತೋಷನಾಯಿತು.

ಸಾರ್ವಭೌಮ ಪಂಡಿತರು ಒಳ್ಳೇ ವೇದಶಾಸ್ತ್ರ ಪಾರಂಗತರು. ಬಿಸುಕುಮಾರನ ವಿದ್ಯಾಭ್ಯಾಸ ಇವರಲ್ಲಿಯೇ ಆಯಿತು. ಇಲ್ಲಿಯವರೆಗೆ ಅವನು ಅವರ ಸಲಹೆ ಕೇಳದೆ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಇವರ ಸಲಹೆಯ ಮೇರೆಗೆ ಮತ್ತೆ ಬೇರೆ ೧೨ ಜನ ವಿದ್ವಾಂಸರನ್ನು ಮಿಥಿಲಾಪಟ್ಟಣದಿಂದ ಬರಮಾಡಿಕೊಂಡು, ಅವರಿಗೆ ಗ್ರಾಮಗಳನ್ನು ಇನಾಮಾಗಿ ಕೊಟ್ಟು, ಜನರಿಗೆಲ್ಲ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಿದ್ದ.

ಸಾರ್ವಭೌಮ ಪಂಡಿತರು ಒಳಗೆ ಬರುತ್ತಲೇ ಹೇಳಿದರು. 'ಬಿಸುಕುಮಾರ, ನಿನ್ನ ಪಟ್ಟಾಭಿಷೇಕೋತ್ಸವದ ಈ ಸುದಿನವಲ್ಲಿ ನಿನಗೊಂದು ವಿಶೇಷ ಸಂತೋಷದ ಸಂಗತಿಯನ್ನು ತಂದಿದ್ದೇನೆ. ಈಗಿದ್ದ ಮಿಥಿಲೆಯ ಅರಸನ ತಂದೆಯು ಸ್ವಾರ್ಥಿಯೂ ಪ್ರಜರ ಕಲ್ಯಾಣಕ್ಕಾಗಿ ಎಷ್ಟೂ ಲಕ್ಷ್ಯಕೊಡದವನೂ ಇದ್ದುದರಿಂದ, ಅವನ ಮುಖ್ಯಮಂತ್ರಿಗಳಾದ ನರಹರಿದಾಸರು ರಾಜ್ಯವನ್ನು ಬಿಟ್ಟು ಹೊರಟು ಹೋದರು. ಆ ರಾಜನ ನಂತರ ಅವನ ಮಗನು ಎಷ್ಟು ಹುಡುಕಿದರೂ ಅವರು ಸಿಕ್ಕಲಿಲ್ಲ. ಐಹಿಕ ವಿಷಯಗಳಲ್ಲಿ ಅವರಿಗೆಷ್ಟೂ ಆಸಕ್ತಿ ಇರದ್ದರಿಂದ, ಅವರು ಸಂನ್ಯಾಸ ತೆಗೆದುಕೊಂಡು ಹಿಮಾಲಯಕ್ಕೆ ಹೋದರೆಂದು ಎಷ್ಟೋ ಜನರು ಹೇಳಿಕೊಳ್ಳುತ್ತಿದ್ದರು. ಆದರೆ ಅವರು ಇಲ್ಲಿಯೇ ನೀಲಾಚಲದ ಮೇಲೆ ಕಾಮಾಖ್ಯಾ ಮಂದಿರದಲ್ಲಿರುವರೆಂದು ನನಗೆ ನಿನ್ನೆ ಗೊತ್ತಾಯಿತು. ಇಂದು ಮುಂಜಾನೆಯೇ ಅವರಲ್ಲಿಗೆ ಹೋಗಿ ನಿನ್ನ ಮಂತ್ರಿಗಳಾಗಲಿಕ್ಕೆ ಅವರನ್ನು ಒಪ್ಪಿಸಿಬಂದಿದ್ದೇನೆ.'

ಇದನ್ನು ಕೇಳಿ ವಿಶ್ವಸಿಂಹನಿಗಾದ ಆನಂದ ಅಷ್ಟಿಷ್ಟೆಂದಲ್ಲ. ಮತ್ತೆ ಮತ್ತೆ ದೇವಿಗೆ ಕೈಮುಗಿದ. 'ದುರ್ಗಾಮಾತೆಯು ನನ್ನ ಇಚ್ಛೆಯನ್ನು ಈಡೇರಿಸಿದಳು. ಈಗಲೇ ಹೋಗಿ ರಾಜಮರ್ಯಾದೆಯಿಂದ ಅವರನ್ನು ಕರೆದುಕೊಂಡು ಬರೋಣ. ಅರಮನೆಯಲ್ಲಿಯೇ ಅವರಿಗೆ ಇರಲಿಕ್ಕೆ ವ್ಯವಸ್ಥೆಮಾಡಿಕೊಡುತ್ತೇನೆ' ಎಂದು ಆತುರತೆಯಿಂದ ನುಡಿದ.

ಸಾರ್ವಭೌಮ ಪಂಡಿತರು ನಗುತ್ತ ಹೇಳಿದರು: 'ಕುಮಾರ, ಅವರು ಸಂನ್ಯಾಸಿಗಳು. ಸುಖ–ಸಂಪತ್ತು ಮರ್ಯಾದೆಗಳ ಕಡೆಗೆ ಅವರು ಎಷ್ಟೂ ಲಕ್ಷಿಸುವದಿಲ್ಲ. ಧರ್ಮ ಮತ್ತು ನ್ಯಾಯದ ಮೇಲೆಯೇ ನಿನ್ನ ರಾಜ್ಯದ ತಳಹದಿಯಾಗಬೇಕೆಂಬ ನಿನ್ನ ಇಚ್ಛೆಯನ್ನೂ ನಿನ್ನ ಹೆಸರನ್ನೂ ಹೇಳಿದ ಬಳಿಕ, ಅವರು ಸ್ವಲ್ಪ ಹೊತ್ತು ಯೋಚಿಸುತ್ತ ಕುಳಿತು, ಅನಂತರ ಒಪ್ಪಿಗೆ ಕೊಟ್ಟರು. ಆದರೆ ಒಂದು ಕರಾರು ಮಾತ್ರ ಹಾಕಿದ್ದಾರೆ. ಅವರು ಯಾವುದೇ ಕಾರಣದಿಂದಲೇ ಆಗಲಿ ನೀಲಾಚಲದಲ್ಲಿಯ ತಮ್ಮ ಆಶ್ರಮ ಬಿಟ್ಟು ಬರುವುದಿಲ್ಲ. ನೀನೇ ಅವರಲ್ಲಿಗೆ ಹೋಗಬೇಕು.'

ಬಿಸುಕುಮಾರ ಹೇಳಿದ: 'ಅವರು ಮಂತ್ರಿಗಳಾದರೆ, ನಾನು ಏನು ಮಾಡುವುದಕ್ಕೂ ಸಿದ್ಧನಾಗುತ್ತೇನೆ.'

[ವಿಶ್ವಸಿಂಹನು ನರಹರಿದಾಸರ ಸಲಹೆಯ ಮೇರೆಗೆ ತನ್ನ ಇಬ್ಬರು ಮಕ್ಕಳನ್ನು—ನರನಾರಾಯಣ ಮತ್ತು ಚೇಲಾರಾಯ—ವೇದಶಾಸ್ತ್ರಾಭ್ಯಾಸಕ್ಕಾಗಿ ಬನಾರಸಕ್ಕೆ ಕಳುಹಿಸಿದ. ಧರ್ಮರಾಜನೆಂದೇ ಹೆಸರಾದ ಇವನ ಹಿರಿಯ ಮಗನು ಅವರ ಶಿಷ್ಯನಾಗಿ ಸಂನ್ಯಾಸ್ವೀಕರಿಸಿದ. ಅವರ ಸಲಹೆಯ ಮೇರೆಗೇನೇ ರಾಜ್ಯಭಾರ ಮಾಡಿ ವಿಶ್ವಸಿಂಹನು ಒಳ್ಳೇ ದೊಡ್ಡ ರಾಜನೆಂದೂ, ಧರ್ಮಾಭಿಮಾನಿಯೆಂದೂ ನ್ಯಾಯ ತತ್ಪರನೆಂದೂ ಇಡೀ ಕಾಮರೂಪದ ಇತಿಹಾಸದಲ್ಲಿಯೇ ಹೆಸರಾಗಿದ್ದಾನೆ. ಒಳ್ಳೇ ಛಾನತೆಗೇರಿದ ಇವನ ರಾಜ್ಯ ಮಗನಾದ ನರನಾರಾಯಣನ ಕಾಲಕ್ಕೆ ಹೆಚ್ಚಿಗೆ ವಿಶಾಲವೂ ಆಯಿತು.]

ಭಾರತೀಯ ಸಂಗೀತ ಮತ್ತು ನೃತ್ಯ

(ಕಲಾಪರಿಚಯ)

ಶ್ರೀಮತಿ ರುಕ್ಮಿಣಿದೇವಿ*

ಭಾರತದಲ್ಲಿ ಸಂಗೀತ-ನೃತ್ಯಗಳು ಬಳೆದುದು ದೈವಭಕ್ತಿಯ ಸಾಧನೆಗೆಂದು. ಅಧ್ಯಾತ್ಮಸಿದ್ಧಿಯೇ ಇವುಗಳ ಆದರ್ಶವಾಗಿದ್ದಿತು. ಈ ಶ್ರದ್ಧೆಯಿಂದಲೇ ಅವು ಅಭಿವೃದ್ಧಿಯನ್ನು ಹೊಂದಿದುವು. ಅಧ್ಯಾತ್ಮಶ್ರದ್ಧೆಯ ಬಲವಿಲ್ಲದೆ, ಕೇವಲ ಶಾಸ್ತ್ರಗಳ ದೃಷ್ಟಿಯಿಂದ ಇವು ಬದುಕಿ-ಬಾಳಲಾರವು!

ಭಾರತೀಯ ಸಂಸ್ಕೃತಿಯ ಪರಿಪೂರ್ಣತೆಗೆ ದಕ್ಷಿಣಭಾರತ ಸಲ್ಲಿಸಿರುವ ಕಾಣಿಕೆ ಬಹಳ ಮಹತ್ತ್ವದ್ದು. ದಕ್ಷಿಣಭಾರತದ ಭೂಭಾಗ ಭೌಗೋಳಿಕವಾಗಿ ಪ್ರತ್ಯೇಕವಾಗಿದ್ದು. ಪರಕೀಯರ ದಾಳಿಗಳಿಗೆ ಬಲಿಯಾಗದೆ ಉಳಿಯಿತಾದ ಕಾರಣ, ಮುಸ್ಲಿಂ ಆಕ್ರಮಣಕ್ಕೆ ಮೊದಲು ಇದ್ದ ಭಾರತೀಯ ಸಂಸ್ಕೃತಿಯ ಸ್ವರೂಪ ಇತರ ಪ್ರಭಾವಗಳಿಂದಾಗಿ ಕಲುಷಿತವಾಗದೆ, ಇಲ್ಲಿ ಹಾಗೆಯೇ ದೀರ್ಘಕಾಲ ಉಳಿಯಲು ಸಾಧ್ಯವಾಯಿತೆಂದೂ ಹೇಳಬಹುದು.

ಮುಸ್ಲಿಮರು ದಕ್ಷಿಣಭಾರತಕ್ಕೂ ಧಾವಿಸಿ ಮುನ್ನಡೆಯುವ ಹೊತ್ತಿಗೆ, ಅವರ ಸಂಸ್ಕೃತಿ ಭಾರತೀಯ ಸಂಸ್ಕೃತಿಯ ಪ್ರಭಾವದಿಂದಾಗಿ ರೂಪಾಂತರ ಹೊಂದಿತ್ತೆಂಬುದನ್ನೂ ಇಲ್ಲಿ ಗಮನಿಸಬಹುದು. ಒಂದು ದೃಷ್ಟಿಯಿಂದ ಅವರು ಈ ಹೊತ್ತಿಗೆ ಪರಕೀಯರಾಗಿರದೆ ಭಾರತೀಯರಾಗಿಬಿಟ್ಟಿರುವರು! ಬಹಮನಿ ಮತ್ತು ಬಿಜಾಪುರದ ನವಾಬರ ಮನೆತನಗಳ ರಾಜರು, ಹಿಂದೂ ಸಾಹಿತ್ಯ ಮತ್ತು ಕಲೆಗಳ ಪೋಷಕರೆಂದು ಹೆಸರುಗಳಿಸಿದ್ದರು. ಹೀಗಾಗಿ ಯುರೋಪಿಯನ್ನರು ನಮ್ಮ ದೇಶದಲ್ಲಿ ಪದಕ್ರಾಂತ ಮಾಡಿದ ಮೇಲೆಯೇ, ತಮ್ಮ ಸಂಸ್ಕೃತಿ ನಿಜಕ್ಕೂ ಪರಕೀಯ ಪ್ರಭಾವಕ್ಕೊಳಗಾಗಿ ಕಲುಷಿತಗೊಳ್ಳತೊಡಗಿತು ಎಂದು ಹೇಳಬಹುದು. ಅವರ ಸಂಸ್ಕೃತಿ ನಮ್ಮ ಸಂಸ್ಕೃತಿಯೊಳಗೆ ಮಿಳಿತವಾಗದೆ ಹೋಗಿ, ಹೊಸ ಸಾಂಸ್ಕೃತಿಕ ಭಾವನೆಗಳು ನಮ್ಮಲ್ಲಿ ಪ್ರತ್ಯೇಕವಾಗಿ ಬೆಳೆಯತೊಡಗಿದುವು. ದಕ್ಷಿಣ ಭಾರತದಲ್ಲಿ ಪ್ರಚಲಿತವಿರುವ ಸಂಗೀತ ಮತ್ತು ನೃತ್ಯಕಲೆ ತುಂಬಾ ಶಾಸ್ತ್ರೀಯವಾಗಿದ್ದು ಈ ವಿಚಾರಗಳ ಬಗ್ಗೆ ಇರುವ ಪುರಾತನ ಗ್ರಂಥಗಳಲ್ಲಿಯ ವಿವರಣೆಗಳಿಗೆ ಹೊಂದಿಕೊಂಡಿವೆ. ಈ ಕಲೆಗಳ ವಿಚಾರದಲ್ಲಿ ದಕ್ಷಿಣ ಭಾರತದ ಕಾಣಿಕೆ ಬಹುಮುಖ್ಯವಾಗಿ ಅವುಗಳಿಗಿರುವ ಒಂದು ವಿಶಿಷ್ಟ ಸೌಂದರ್ಯ ಹಾಗೂ ಪಾಂಡಿತ್ಯದ ಆಳಕ್ಕೆ ಅನ್ವಯಿಸುತ್ತದೆ. ಆದರೆ ದಕ್ಷಿಣಭಾರತವು ತಾಯ್ನಾಡಿಗೆ ಅಷ್ಟು ಕಲುಷಿತವಲ್ಲದ ಪುರಾತನ ಕಲೆ ಹಾಗೂ ಸಂಸ್ಕೃತಿಗಳ ಕಾಣಿಕೆಯನ್ನು ಒಪ್ಪಿಸುತ್ತದೆ ಎಂಬುದು ಇಲ್ಲಿ ಮುಖ್ಯ.

ಶಾಸ್ತ್ರಗಳ ಪ್ರಕಾರ ಸಂಗೀತದ ಅರ್ಥದಲ್ಲಿ ನೃತ್ಯ ಸಹ ಸೇರುತ್ತದೆಯೆಂಬುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ವಿಷಯ. ನಮ್ಮ ದೇಶದಲ್ಲಿ ಸಂಗೀತದ ಪ್ರತ್ಯಕ್ಷ ದರ್ಶನದಂತಿದೆ ನೃತ್ಯ. ಎರಡೂ ಕಲೆಗಳಿಗೆ ಸ್ಫೂರ್ತಿ ಒಂದೇ ಆಗಿದೆ. ಆದರೆ ಚರ್ಚೆಯ ಸಲುವಾಗಿ ಸಂಗೀತವನ್ನು ಒಂದು ಪ್ರತ್ಯೇಕ ವಿಷಯವಾಗಿ ಪರಿಗಣಿಸಿ ಮುಂದುವರಿಯುವುದಾದರೆ, ನಮ್ಮ ಜನರಲ್ಲಿ ಇನ್ನೂ ಆಚ್ಚಳಿಯದೆ ಉಳಿದಿರುವಂತಹ ಸಂಗೀತ ಜ್ಞಾನ ಯೋಗ್ಯ ವಿಮರ್ಶೆಗೆ ಅವಕಾಶವನ್ನು ಕಲ್ಪಿಸುತ್ತದೆ ಎಂದು ಹೇಳಬಹುದು. ಆದರೆ ನೃತ್ಯದ ವಿಷಯವಾಗಿ ಹಾಗಲ್ಲ. ಐತಿಹಾಸಿಕ ಕಾರಣಗಳಿಂದಾಗಿ ನೃತ್ಯಗಳ ಬಗ್ಗೆ ಅಂತಹ ಜ್ಞಾನ ಕುಂಠಿತವಾಗಿದೆ; ಅಂತೆಯೇ ಈ ಕಲೆಯ ಪ್ರಸಕ್ತ ಬೆಳವಣಿಗೆ ಅಡ್ಡಾದಿಡ್ಡಿಯಾಗಿ, ಒಂದು ಯೋಗ್ಯ ಮಾರ್ಗದರ್ಶನ ಹಾಗೂ ಹತೋಟಿ ಇಲ್ಲದೆಯೇ ನಡೆದಿರುವುದು ಕಂಡುಬರುತ್ತದೆ.

ಆದರೆ ಈ ಎರಡು ಕಲೆಗಳೂ ಭಾರತದ ಜನಜೀವನದಲ್ಲಿ ಒಂದು ಬಹು ಮುಖ್ಯ ಪಾತ್ರವನ್ನು ವಹಿಸಿವೆ. ಧಾರ್ಮಿಕ ಹಾಗೂ ತಾತ್ತ್ವಿಕ ಪರಿಣಾಮಗಳು ಜನಮನದ ಮೇಲೆ ಅಚ್ಚಳಿಯದೆ ಉಳಿಯಲು ಅವಕಾಶ ಮಾಡಿರುವಂತಹ ಉತ್ತಮ ಸಾಧನಗಳೂ ಆಗಿವೆ. ಬಡವ-ಬಲ್ಲಿದರೆಂಬ ಭೇದಭಾವವಿಲ್ಲದೆ ದೇವಸ್ಥಾನಗಳಲ್ಲೆ ಆಗಲಿ ಪೈರುಪಚ್ಚೆ ತುಂಬಿರುವ ಭೂಮಾತೆಯ ಮಡಿಲಲ್ಲೇ ಆಗಲಿ ನಾಟಕದ ರೂಪದಲ್ಲಿಯೇ ಆಗಲಿ ನೃತ್ಯದ ರೂಪದಲ್ಲಿಯೇ ಆಗಲಿ, ಸಂಗೀತವು ಜನಜೀವನದ ಮೇಲೆ ತುಂಬಾ ಪರಿಣಾಮಕಾರಿಯಾದ ಪ್ರಭಾವ ಬೀರಿದೆಯೆಂದೇ ನಮ್ಮ ನಾಡಿನ ಸಂಸ್ಕೃತಿ ಹಾಗೂ ನಾಗರೀಕತೆ ಸಮೃದ್ಧಿಯಾಗಿ ಬೆಳೆಯಲು ಸಹಕಾರಿಯಾಗಿದೆ. ಸಂಗೀತದ ಈ ಒಂದು ಭವ್ಯಪರಂಪರೆ ನಮ್ಮಲ್ಲಿ ಇಲ್ಲದಿದ್ದಿದ್ದರೆ, ನಾಡಿನ ಜೀವನ ತುಂಬಾ ಬರಡಾಗುತ್ತಿತ್ತು; ಇಂದು ನಮ್ಮಲ್ಲಿರುವ ಒಂದು ಸಂಪತ್ತು ಇಲ್ಲವಾಗುತ್ತಿತ್ತು.

ಆದರೆ ಇತ್ತೀಚೆಗೆ ಸಂಕುಚಿತ ವಿದ್ಯಾಭ್ಯಾಸ ಪದ್ಧತಿ ಈ ದಿಶೆಯಲ್ಲಿ ಸಾಕಷ್ಟು ಅಜ್ಞಾನ ಬೆಳೆಯಲು ಕಾರಣವಾಗಿದೆಯಷ್ಟೆ ಅಲ್ಲದೆ, ಪರಂಪರಾಗತವಾಗಿ ನಮಗೆ ಲಭ್ಯವಾಗಿರುವ ಸಂಗೀತ ಸಂಪತ್ತಿನ ಬಗ್ಗೆ ಸಾಕಷ್ಟು ಆಸಕ್ತಿಯೇ ಇಲ್ಲವಾಗುತ್ತಿದೆ. ಮೊನ್ನೆ ಮೊನ್ನೆಯತನಕ ಭಾರತೀಯ ರಾಜಮನೆತನಗಳು ಮತ್ತು ಶ್ರೀಮಂತರು ಮೊಡ್ಡ ಮೊಡ್ಡ ಸಂಗೀತಗಾರರನ್ನೂ ಕೃತಿರಚನಾಕಾರರನ್ನೂ ಪೋಷಿಸುತ್ತಿದ್ದರು. ಆದರೋ—ಹೊರಜಗತ್ತಿನ ದುಷ್ಪ್ರಭಾವ ಭಾರತೀಯ ಸಂಗೀತ ಕಲೆಯಮೇಲೆ ಬೀಳದಂತೆ ರಕ್ಷಿಸಿಕೊಂಡು ಬರುತ್ತಿದ್ದರು. ಇದಕ್ಕಾಗಿ ಅವರಿಗೆ ನಾವೆಷ್ಟು ಕೃತಜ್ಞರಿದ್ದರೂ ಕಡಮೆಯೇ. ದಕ್ಷಿಣ ಭಾರತದಲ್ಲಿ

* ಕೇಂದ್ರಸರಕಾರದ ಪ್ರೆಸ್ ಇನ್‌ಫರ್ಮೇಶನ್ ಬ್ಯೂರೋ—ಅವರಿಂದ ಬಂದ ಲೇಖನವಿದು.

ಇದು ಹೆಚ್ಚು ಸಾಧ್ಯವಾಗಿದೆಯೆಂಬುದು ನಮ್ಮ ಸುಕೃತವೆನ್ನಬೇಕು. ಇದು ಸಾಧ್ಯವಾಗಲು ಇನ್ನೊಂದು ಮುಖ್ಯಕಾರಣವೆಂದರೆ, ನಮ್ಮ ಮನೆಗಳಲ್ಲಿ ಬಾಲ್ಯದಿಂದಲೇ ಮಕ್ಕಳಿಗೆ ಹಿರಿಯ ಆಚಾರ್ಯರ ಕೃತಿಗಳನ್ನು ಕಲಿಸಿ, ಅವರಲ್ಲಿ ಸಂಗೀತದ ಬಗ್ಗೆ ಒಂದು ಉತ್ತಮ ಅಭಿರುಚಿ ಬೆಳೆಯಲು ಸಾಧ್ಯವಾಗಿ, ಯಾವುದೇ ಒಳ್ಳೆಯ ಕಲೆ ಬೆಳೆಯಲು ಅವಶ್ಯಕವೆನಿಸಿದ ಪ್ರಬುದ್ಧ ಶ್ರೋತೃಗಳ ಒಂದು ವರ್ಗ ಬೆಳೆಯಲೂ ಸಾಧ್ಯವಾಗಿರುವುದು.

ರಕ್ತಗತವಾಗಿರುವ ಕಲೆ

ಭಾರತೀಯರಲ್ಲಿ ಸಂಗೀತಕಲೆ ರಕ್ತಗತವಾಗಿದೆ. ಮನಸಿನ ಭಾವನೆಗಳು ಸಂಗೀತದ ರೂಪದಲ್ಲಿ ಹೊರಹೊಮ್ಮುತ್ತವೆ. ಅಂತೆಯೇ ಸಂಗೀತ ಭಾರತೀಯ ಆತ್ಮಪ್ರಕಾಶನದ ರೂಪದಲ್ಲಿ ಹೊರಜಗತ್ತಿಗೆ ಹೊಳೆಯುತ್ತದೆ. ಒಂದೆಲ್ಲ ಒಂದುರೂಪದಲ್ಲಿ ಸಂಗೀತ ಹೊರಹೊಮ್ಮುವೆ ಯಾವ ದೇಶವೂ ಉಳಿಯಲಾರದೇನೋ! ಭಾರತದ ಮಟ್ಟಿಗಂತೂ ಇದು ತುಂಬಾ ನಿಜವೆನ್ನಬೇಕು. ಕಾರಣ, ಇಲ್ಲಿ ಜನಜೀವನಕ್ಕೂ ಭವ್ಯವಾದಂತಹ ಸಂಗೀತಕಲೆಗೂ ಅಷ್ಟರಮಟ್ಟಿನ ನಿಕಟವಾದ ಸಂಬಂಧವಿದೆ. ಪ್ರಪಂಚದಲ್ಲಿಯೇ ಒಂದು ಪುರಾತನ ಗ್ರಂಥವೆನಿಸಿದ ರಾಮಾಯಣದಲ್ಲಿ ವಾಲ್ಮೀಕಿಯು ಸಂಗೀತಪ್ರಾಧಾನ್ಯವಾದ ಪದ್ಯರೂಪದಲ್ಲಿ ಶ್ರೀರಾಮಚಂದ್ರನ ಕಥೆಯನ್ನು ಹೇಳುತ್ತಾನೆ. ವೇದಗಳ ಸಾರ ಈ ಕೃತಿಯಲ್ಲಿ ಭಟ್ಟಿ ಇಳಿದಿದೆ. ಶ್ರೀರಾಮಚಂದ್ರನ ಮಕ್ಕಳಾದ ಲವಕುಶರು ಹಾಡುವ ರಾಮಾಯಣ, ಅರಣ್ಯಪ್ರದೇಶದಲ್ಲಿ ವಾಸಿಸುತ್ತಿದ್ದ ಮುನಿವರ್ಯರ ಮನಸ್ಸನ್ನು ಸೂರೆಗೊಂಡಿತಂತೆ. ಭಾರತದಲ್ಲಿ ಸಂಗೀತಕ್ಕೆ ಅಂತಹ ಒಂದು ವಿಶಿಷ್ಟ ಅರ್ಥವಿದೆ. ಎಲ್ಲ ಜೀವಜಂತುಗಳನ್ನು ಹುರಿದುಂಬಿಸಿ ಅದರ ಆತ್ಮಶಕ್ತಿ ವಿಕಾಸನಾಗುವಂತೆ ಮಾಡುವ ವಿಶಿಷ್ಟ ಕಲೆ ಸಂಗೀತ ಎನ್ನಬಹುದು.

ಶ್ರೀಕೃಷ್ಣನಿಗೆ ಎಲ್ಲರನ್ನೂ ಮುಗ್ಧಗೊಳಿಸುವಂತಹ ರೂಪವಿದ್ದಿತು. ಆದರೂ ಎಲ್ಲರು ಹೃದಯಗಳಲ್ಲಿ ಅಲೆಗಳನ್ನು ಎಬ್ಬಿಸುವಂತಹ ಕಾರ್ಯ ಮಾಡುತ್ತಿದ್ದುದು ಅವನ ಕೊಳಲು ಪ್ರಕೃತಿಯೇ ಕೊಳಲಿನ ಆ ನಿನಾದಕ್ಕೆ ಮಾರುಹೋಗುತ್ತಿತ್ತು. ಮೂಕಪ್ರಾಣಿಗಳೂ ಮಂತ್ರಮುಗ್ಧವಾಗಿ ನಿಲ್ಲುತ್ತಿದ್ದವು.

ಭಾರತದಲ್ಲಿ ಜನಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಂಗೀತವು ಪ್ರೇರಕಶಕ್ತಿಯಾಗಿ ಕೆಲಸ ಮಾಡಿರುವುದು ಕಂಡುಬರುತ್ತದೆ. ಅದು ಎಷ್ಟು ಪ್ರೇರಕವೋ ಅಷ್ಟು ಸಾಂತ್ವನಕಾರಿಯೂ ಹೌದು; ಸಂಗೀತ ಕೇಳುತ್ತಾ ಹಾಗೆಯೇ ಮಗು ನಿದ್ದೆಹೋಗುತ್ತದೆ; ಕಾಯಿಲೆಯ ವೇಳೆಯಲ್ಲಿಯೂ ಹಾಯಾಗಿ ನಿದ್ದೆ ಹೋಗಿಸುವ ಶಕ್ತಿ ಸಂಗೀತಕ್ಕಿದೆ.

ಭಾವನಾಪ್ರಧಾನಶಾಸ್ತ್ರ

ಸಂಗೀತದಲ್ಲಿರುವ ಆಧ್ಯಾತ್ಮಿಕ ದೃಷ್ಟಿ ಬಹಳ ಮುಖ್ಯವಾದುದು. ಇದೇ ಭಾರತದ ಬೃಹತ್‌ಕಾಣಿಕೆ ಎನ್ನಬಹುದು. ಹೀಗಾಗಿ ಸಂಗೀತ ಮತ್ತು ನೃತ್ಯಗಳು ಮೂಲತಃ ಭಾವನಾಪ್ರಧಾನವಾದಂತಹ ಶಾಸ್ತ್ರಗಳಾಗಿವೆ. ಅಂತೆಯೇ ಭಾರತೀಯ ಸಂಗೀತಕ್ಕೆ ರಾಗಪದ್ಧತಿ ಜೀವನಾಡಿ ಇದ್ದಂತೆ. ಪಾಶ್ಚಾತ್ಯರ ಸಂಗೀತದಲ್ಲಿ ತಾಳಬದ್ಧತೆ ವೈಶಿಷ್ಟ್ಯವಾದರೆ, ಭಾರತೀಯ ಸಂಗೀತದಲ್ಲಿ ಭಾವಪೂರ್ಣ ಇಂಪು ಬಹಳ ಮುಖ್ಯ. ಭಾವನೆಗಳಿಲ್ಲದ ಇಂಪು ವೈವಿಧ್ಯತೆಯನ್ನು ಕಳೆದುಕೊಂಡು ಕೇವಲ ಯಾಂತ್ರಿಕವಾಗುತ್ತದೆ. ಕಲೆ ಜನರ ಆತ್ಮವಿಕಾಸದ ಕುರುಹು. ಭಾರತೀಯ ಸಂಗೀತಕ್ಕೆ ಆಧಾರವಾಗಿರುವುದು ಭಾರತೀಯ ಆಧ್ಯಾತ್ಮ ವಿಚಾರಗಳ ತಿರುಳು.

ಭಾರತದಲ್ಲಿ ಆಧ್ಯಾತ್ಮ ವಿಚಾರಗಳು ವ್ಯಕ್ತಿಗಳ ಭಾವನೆಯನ್ನು ಆಧರಿಸಿ ರೂಪುಗೊಂಡಿವೆ. ಅಂತೆಯೇ ಗಾನಮಾಧುರ್ಯವು ವ್ಯಕ್ತಿಯ ಮನಸ್ಸಿನ ವ್ಯಕ್ತರೂಪವೂ ಹೌದು. ಅದರ ಪ್ರಾಥಮಟ್ಟ ವೈಯಕ್ತಿಕ ಉಚ್ಚಭಾವನೆಗಳ ಪ್ರತಿಬಿಂಬ.

ಭಾರತೀಯ ಸಂಗೀತದ ಮೂಲಭಾವನೆಗಳನ್ನು ದಕ್ಷಿಣಭಾರತದ ಪರಂಪರೆಯಲ್ಲಿ ಸುರಕ್ಷಿತವಾಗಿ ಕಾಪಾಡಿಕೊಂಡು ಬರಲಾಗಿದೆ. ಮತ್ತು ಈ ಭಾವನೆಗಳಿಗೆ ಒಂದು ರೀತಿಯ ಪಾವಿತ್ರ್ಯವನ್ನು ಕೊಟ್ಟು ಅವುಗಳನ್ನು ಉಳಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಯಾವುದರ ಮೂಲದಲ್ಲಿ ಆಧ್ಯಾತ್ಮಿಕ ಒಲವಿದ್ದು ಧಾರ್ಮಿಕ ಪ್ರೇರಣೆ ಇದೆಯೊ, ಅದೇ ಇಂದಿಗೂ ಶಾಶ್ವತವಾಗಿ ಉಳಿದಿದೆ ಎನ್ನಬಹುದು.

'ಸಂಗೀತ ರತ್ನಾಕರ' ಗ್ರಂಥದ ಪರಂಪರೆಯನ್ನನುಸರಿಸಿ, ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದ ಉದ್ಗ್ರಂಥಗಳು ಕೆಲವು ದಕ್ಷಿಣ ಭಾರತದಲ್ಲಿಯೇ ಪ್ರಕಟವಾಗಿವೆ. 'ಚತುರ್ದಂಡಿ ಪ್ರಕಾಶಿಕಾ' ಅಂತಹ ಒಂದು ಗ್ರಂಥ. ಈ ಗ್ರಂಥದಲ್ಲಿ ರಾಗಗಳ ವರ್ಗೀಕರಣ ಕಾರ್ಯ ತುಂಬಾ ವೈಶಿಷ್ಟ್ಯಪೂರ್ಣವಾಗಿ ನಡೆದಿದೆ. ಹಿಂದುಸ್ತಾನಿ ಸಂಗೀತದ ಮೇಲೂ ಈ ಕೃತಿ ತುಂಬಾ ಪರಿಣಾಮಕಾರಿಯಾಗಿರುವುದು ಕಂಡುಬರುತ್ತದೆ.

ದಕ್ಷಿಣಭಾರತದಲ್ಲಿ ನೃತ್ಯಕಲೆ ಸಂಗೀತದ ಹಾದಿಯನ್ನು ಹಿಡಿದೇ ನಡೆದಿದೆ. ಜಾನಪದ ನೃತ್ಯಗಳ ವೈವಿಧ್ಯ ಅಪಾರವಾದುದು. ತಮಿಳು, ತೆಲಗು, ಕನ್ನಡ ಮತ್ತು ಮಲಯಾಳ ಭಾಷಾವಿಭಾಗಗಳಿಗೆ ಸಂಬಂಧಿಸಿದಂತೆ, ಬೇರೆಬೇರೆ ಜಾನಪದ ನೃತ್ಯಪರಂಪರೆ ಇರುವುದಾದರೂ, ಒಂದೊಂದು ಭಾಗದಲ್ಲೂ ಸ್ಥಳೀಯ ಬದಲಾವಣೆಗಳಿಂದ ಕೂಡಿದ ವಿಶಿಷ್ಟ ರೂಪಾಂತರಗಳೂ ಕಂಡುಬರುತ್ತವೆ. ಇವುಗಳೂ ಅಸಂಖ್ಯ ಪ್ರಮಾಣದಲ್ಲಿವೆ. ಆದರೆ ಇವುಗಳ ಪೈಕಿ ಅನೇಕ ಕ್ರಮೇಣ ಕಣ್ಮರೆಯಾಗುತ್ತಿರುವದು ದುರದೃಷ್ಟವೆನ್ನಬೇಕು. ಗ್ರಾಮ್ಯಜೀವನದ ಪ್ರಾಧಾನ್ಯ ಹೋಗುತ್ತ ನಗರದ ನಾಗರಿಕತೆ ವ್ಯಾಪಿಸುತ್ತಿರುವುದು ಇದಕ್ಕೊಂದು ಕಾರಣವೆನ್ನಬೇಕು.

ಶಾಸ್ತ್ರೀಯ ನೃತ್ಯಗಳು

ಶಾಸ್ತ್ರೀಯ ಸಂಗೀತದಂತೆಯೇ ಶಾಸ್ತ್ರೀಯ ನೃತ್ಯಗಳು ಸಹ ಧಾರ್ಮಿಕ ಸ್ಫೂರ್ತಿಯಿಂದ ಪ್ರೇರೇಪಿತವಾಗಿವೆ. ದಕ್ಷಿಣ ಭಾರತದಲ್ಲಿ

ನೃತ್ಯಪರಂಪರೆಯು ದೇವಸ್ಥಾನಗಳಲ್ಲಿ ದೇವದಾಸಿಗಳ ಮೂಲಕ ಬೆಳೆಯಿತು; ಅವರೇ ಈ ಕಲೆಯ ರಕ್ಷಕರಾಗಿ ನಿಂತರು. ದೇವದಾಸಿಗಳ ನೃತ್ಯಗಳಿಗೆ ದೇವಸ್ಥಾನಗಳಲ್ಲಷ್ಟೇ ಅಲ್ಲದೆ ಅರಮನೆ ಹಾಗೂ ಶ್ರೀಮಂತರ ಮನೆಗಳಲ್ಲಿ ಮನ್ನಣೆ ಇತ್ತು. ಪ್ರತಿಯೊಂದು ಶುಭಕಾರ್ಯದ ಸಮಯದಲ್ಲೂ ನೃತ್ಯಗಳಿಗೆ ಪೂರ್ಣ ಮಾನ್ಯತೆ ಇತ್ತು. ಆದರೆ ಕಾಲಕ್ರಮೇಣ ಈ ಕಲೆ ಹಲವಾರು ಕಾರಣಗಳಿಂದಾಗಿ ಕಳಂಕಿತವಾಗಿ, ಕೊನೆಗೆ ಕಣ್ಮರೆಯಾಗುವ ಸ್ಥಿತಿ ಬಂತು. ಆ ಕಾಲದ ದೇವದಾಸಿಯರನೇಕರು ನೃತ್ಯ ಕಲೆಯನ್ನು ಪೂರ್ಣವಾಗಿ ಕರಗತ ಮಾಡಿಕೊಂಡಿದ್ದರಲ್ಲದೆ, ತುಂಬಾ ದೈವಭಕ್ತಿಯುಳ್ಳವರಾಗಿದ್ದರು. ದೇವಸ್ಥಾನಗಳಲ್ಲಿ ತಮ್ಮ ನೃತ್ಯಕಲೆಯನ್ನು ಪ್ರದರ್ಶಿಸುವುದು ಅವರ ಪಾಲಿಗೆ ಒಂದು ದೊಡ್ಡ ಗೌರವದ ವಿಷಯವಾಗಿದ್ದಿತು. ಅಷ್ಟೇ ಅಲ್ಲ, ಇದು ತಾವು ದೇವರಿಗೆ ಅರ್ಪಿಸುವ ಕಾಣಿಕೆ—ಎಂಬ ಭಾವನೆ ಇತ್ತು. ಅವರಿಗೆ ಬೇರಾವ ಉದ್ದೇಶವೂ ಈ ವಿಷಯವಾಗಿ ಇರಲಿಲ್ಲ. ಕಲೆ ಹಾಳಾಗಲು ದೇವದಾಸಿಯರಿಗಿಂತ ಸಮಾಜ ಹೆಚ್ಚು ಕಾರಣವಾಯಿತು.

ಭರತನಾಟ್ಯ ಪರಂಪರೆಯನ್ನನುಸರಿಸಿ ನೃತ್ಯನಾಟಕಗಳೂ ರೂಪುಗೊಂಡುವು. ಈ ಪೈಕಿ ಕೆಲವು ತಂಜಾವೂರು ಮತ್ತು ಕುಚ್ಚುಪುಡಿ ದೇವಾಲಯಗಳಲ್ಲಿ ಮುಖ್ಯವಾಗಿ ಅರ್ಚಕವರ್ಗದವರಿಂದ ಅಭಿನಯಿಸಲ್ಪಡುತ್ತಿದ್ದುವು. ಇವುಗಳನ್ನು ಅಭಿನಯಿಸುತ್ತಿದ್ದವರನ್ನು ಭಾಗವತರ್ಗಳೆಂದು ಕರೆಯುತ್ತಿದ್ದರು. ಈ ನೃತ್ಯನಾಟಕಗಳನ್ನು ಅಭಿನಯಿಸುತ್ತಿದ್ದ ತಂಜಾವೂರು ತಂಡದ ಮೂಲಕ ನಮಗಿಂದು ಪ್ರಾಪ್ತವಿರುವ ನೃತ್ಯನಾಟಕಗಳನ್ನು ಮೆಲತ್ತೂರಿನ ವೆಂಕಟರಾಮಶಾಸ್ತ್ರಿಗಳು ಬರೆದರು. ೧೮ನೆಯ ಶತಮಾನದ ಅಂತ್ಯ ಹಾಗೂ ೧೯ನೆಯ ಶತಮಾನದ ಆದಿಭಾಗದಲ್ಲಿ ಅವರು ಜೀವಿಸಿದ್ದರು. ಕೂಚುಪುಡಿ ನಾಟಕಗಳನ್ನು ಬರೆದವರು ೧೭ ಅಥವಾ ೧೮ನೆಯ ಶತಮಾನದ ಸಿದ್ಧೇಂದ್ರ ಯೋಗಿಗಳು.

ಕೊರವಂಜಿ ನೃತ್ಯಗಳನ್ನು ದೇವದಾಸಿಯರು ದೇವಸ್ಥಾನಗಳಲ್ಲಿ ಅಭಿನಯಿಸುತ್ತಿದ್ದರು. ವಸ್ತುವಿನ ಮಟ್ಟಿಗೆ ಎಲ್ಲಾ ಕೊರವಂಜಿ ನೃತ್ಯಗಳೂ ಒಂದೇ. ದೈವಭಕ್ತಿಯೇ ಇವುಗಳಲ್ಲಿ ಪ್ರಾಧಾನ್ಯ. ಅತ್ಯಂತ ಹಳೆಯ ಹಾಗೂ ಅತ್ಯುತ್ತಮ ಕೊರವಂಜಿ ನೃತ್ಯವನ್ನು ಬರೆದವರು ೧೮ನೆಯ ಶತಮಾನದ ಕುಟ್ರಾಲಮ್ಮಿನ ರಾಜಕವಿ ರಾಯರ್‌ರವರು. ದೇವಸ್ಥಾನದಲ್ಲಿ ಇಂದಿಗೂ ಅಭಿನಯಿಸಲ್ಪಡುವ ಒಂದು ಕೊರವಂಜಿ ನೃತ್ಯವೆಂದರೆ ಸುಭೋಜ ಕೊರವಂಜಿ. ತಂಜಾವೂರಿನ ಮಹಾರಾಜ ಸರಭೋಜಿಯ ಗುಣಗಾನ ಇದರಲ್ಲಿ ಅಡಕವಾಗಿದೆ. ತಂಜಾವೂರು ದೇವಸ್ಥಾನದಲ್ಲಿ ಇವೊತ್ತಿಗೂ ಅದನ್ನು ಅಭಿನಯಿಸುತ್ತಾರೆ.

ಕಥಕ್ಕಳಿ ನೃತ್ಯ

ಕೇರಳದಲ್ಲಿ ಬೆಳೆದ ನೃತ್ಯಕಲೆ ಕಥಕ್ಕಳಿ. ಅದು ಭರತನಾಟ್ಯದ ಸೋದರ ಕಲೆಯಾದರೂ ಭರತನ ಅಳಿಕೆಯ ಪ್ರಭಾವವಿದ್ದ ನಾಡಿನಲ್ಲಿ ಪ್ರಚಲಿತವಿದ್ದ ಸ್ಥಳೀಯ ನೃತ್ಯನೇ ಅದಕ್ಕೆ ಮೂಲವಾಗಿರಬೇಕು. ಕಥಕ್ಕಳಿಯಲ್ಲಿ ನಾಲ್ಕುಬಗೆಯ ಅಭಿನಯ ಪರಿಪೂರ್ಣವಾಗಿ ನೈಗೂಡಿಕೊಂಡಿದೆ. ಅದರಲ್ಲಿ ನೃತ್ಯದ ಅಂಶಕ್ಕಿಂತ ನಾಟಕದ ಅಂಶ ಹೆಚ್ಚು.

ಇತ್ತೀಚೆಗಂತೂ ನೃತ್ಯಕಲೆಯಮಟ್ಟಿಗೆ ಹೇಳುವುದಾದರೆ ದಕ್ಷಿಣ ಭಾರತವು ತುಂಬಾ ಜನಪ್ರಿಯವಾಗತೊಡಗಿದೆ. ದಕ್ಷಿಣಭಾರತದ ಸಂಗೀತ ಗ್ರಹಿಸಲು ಕಷ್ಟಸಾಧ್ಯವಾದರೂ, ನಾಡಿನಾದ್ಯಂತ ಅದು ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದೆ. ಇನ್ನೂ ಒಂದು ಅಂಶ ಗಮನಾರ್ಹ! ದಕ್ಷಿಣ ಭಾರತದಲ್ಲಿ ದಕ್ಷಿಣ ಭಾರತದ ಸಂಗೀತಕ್ಕೆ ದೊರಕುವಷ್ಟು ಶ್ರೋತೃಗಳು ಉತ್ತರದಲ್ಲಿ ಹಿಂದುಸ್ತಾನಿ ಸಂಗೀತಕ್ಕೆ ದೊರಕರು. ಉತ್ತರದಲ್ಲಿ ಸಂಗೀತದ ಅಭಿಮಾನ ಕುಗ್ಗಲು ಒಂದು ಮುಖ್ಯ ಕಾರಣವೆಂದರೆ, ಹೆಣ್ಣುಮಕ್ಕಳಿಗೆ ಅಲ್ಲಿ ಸಂಗೀತ ಕಲಿಸುವುದು ಅವಮಾನದ ಪ್ರಸಂಗವಾಗಿ ಪರಿಣಮಿಸಿದುದೇ ಆಗಿದೆ. ಉತ್ತರದಲ್ಲಿಯೇ ಆಗಲಿ ದಕ್ಷಿಣದಲ್ಲಿಯೇ ಆಗಲಿ, ಭಕ್ತಿಪ್ರಾಧಾನ್ಯವಾದ ಸಂಗೀತ ಕಲೆಯನ್ನು ಹೆಚ್ಚು ಹೆಚ್ಚು ಜನ ಹೆಣ್ಣುಮಕ್ಕಳು ಕಲಿಯದಿಹೋದರೆ, ಮನೆ ಒಂದು ಸೃಷ್ಟಿಯಿಂದ ಬರಿದಾಗುತ್ತದೆ; ಸಂಸ್ಕೃತಿ ಇಲ್ಲದಂತಾಗುತ್ತದೆ.

ಸಂಗೀತದಲ್ಲಿ ಉತ್ತರಾದಿ ಮತ್ತು ದಕ್ಷಿಣಾದಿಗಳೆಂಬ ಭೇದಭಾವ ಬಂದುದು ಮುಖ್ಯವಾಗಿ ಅಕ್ರಮಣಗಳ ಪರಿಣಾಮವಾಗಿ ಎಂಬುದೇ ನನ್ನ ಭಾವನೆಯಾಗಿದೆ. ಉತ್ತರದಲ್ಲಿ ಮುಸ್ಲಿಮರ ಪ್ರಭಾವ ತುಂಬಾ ಪರಿಣಾಮಕಾರಿಯಾಯಿತು. ಮುಸ್ಲಿಮರು ತುಂಬಾ ಸಂಗೀತಪ್ರಿಯರಾಗಿದ್ದರು. ಒಂದುರೀತಿಯ ತೀವ್ರಾಸಕ್ತಿಯನ್ನು ಬೆಳಿಸಿಕೊಂಡಿದ್ದರಾದ ಕಾರಣ, ಸಂಗೀತದ ಮಟ್ಟಿಗೆ ಅವರೂ ಪ್ರವರ್ಧಮಾನರಾದರಲ್ಲದೆ, ಅವರ ಸಂಪರ್ಕದಿಂದಾಗಿ ಭಾರತವೂ ಪ್ರವರ್ಧಮಾನವಾಯಿತು. ಉತ್ತರದ ದೊಡ್ಡ ದೊಡ್ಡ ಸಂಗೀತ ವಿದ್ವಾಂಸರೆಲ್ಲ ಮುಸ್ಲಿಮರೇ ಆಗಿದ್ದಾರೆ. ಆದರೆ ಇಷ್ಟು ನಿಜ. ಅವರ ಸಂಗೀತ ಉಚ್ಛ್ರಾಯಮಟ್ಟದ್ದಾದರೆ, ಅದಕ್ಕೆ ಮೂಲವಾದ ಭಾರತೀಯ ಸಂಗೀತ ಉಚ್ಛ್ರಾಯಮಟ್ಟದ್ದಾಗಿದ್ದುದೇ ಕಾರಣ. ಭಾರತೀಯ ಸಂಗೀತ ಹಿಂದೂ ಸಂಗೀತವೂ ಆಗಿತ್ತು. ಇತರ ಮುಸ್ಲಿಂ ರಾಷ್ಟ್ರಗಳಲ್ಲಿ ಪ್ರಚಲಿತವಿರುವ ಸಂಗೀತಕಲೆ ಭಾರತೀಯ ಸಂಗೀತದಷ್ಟು ವೈವಿಧ್ಯಪೂರ್ಣವೂ ಅಲ್ಲ; ಪ್ರಬುದ್ಧವೂ ಅಲ್ಲ. ಭರತನ ನಾಟ್ಯಶಾಸ್ತ್ರ—ಕಥಕ್ಕಳಿ, ಮಣಿಪುರಿ, ಕಥಕ್ ಇತ್ಯಾದಿಗಳಿಗೂ ಹೇಗೆ ಮೂಲವೋ, ಅದೇ ರೀತಿಯಲ್ಲಿ ಭಾರತೀಯ ಸಂಗೀತಕ್ಕೂ ಒಂದು ಸಮಾನ ಮೂಲವಿರುವುದು ಕಂಡುಬರುತ್ತದೆ. ಸ್ಥಳೀಯ ಪ್ರಭಾವಗಳನ್ನು ನೈಗೂಡಿಸಿಕೊಂಡು ವೈವಿಧ್ಯ ಬೆಳೆದಿದೆ. ಹೊರಗಿನ ಪ್ರಭಾವಗಳು ದಕ್ಷಿಣ ಭಾರತದ ಮೇಲೆ ಅಷ್ಟಾಗಿ ಬೀಳಲಿಲ್ಲವಾದ ಕಾರಣ, ದಕ್ಷಿಣ ಭಾರತದ ಕಲೆ ಹೆಚ್ಚು ಭಾರತೀಯವಾಗಿ ಹಾಗೂ ಪುರಾತನ ರೂಪದಲ್ಲಿ ಉಳಿದಿದೆ. ಹಿಂದಿನ ಕಾಲದಲ್ಲಿ ಒರಿಸ್ಸಾದ ಸಂಗೀತ ಹಾಗೂ ನೃತ್ಯಕಲೆ ಹೆಚ್ಚು ದಕ್ಷಿಣಭಾರತೀಯವಾಗಿ ಇತ್ತು ಎಂಬ ಬಗ್ಗೆ ನನಗೆ ನಂಬಿಕೆ ಇದೆ. ಒರಿಸ್ಸಾ ಮತ್ತು ಆಂಧ್ರದ ಕಲೆಗಳಲ್ಲಿ ವಿಶೇಷ ರೀತಿಯ ಸಾಮ್ಯವಿದ್ದುದು ಕಂಡುಬರುತ್ತದೆ. ಇನ್ನೂ ಸ್ವಾರಸ್ಯದ ಸಂಗತಿ ಎಂದರೆ, ಹಿಂದೆ ಒರಿಸ್ಸಾದಿಂದ

ಆಗ್ನೇಯ ಏಷ್ಯಾದ ಇತರ ಕಡೆಗಳಿಗೆ ಹೋಗಿ ನೆಲೆಸಿದವರು ಅಲ್ಲಿಯ ಕಲೆಗಳ ಮೇಲೆ ತಮ್ಮ ಕಲೆಗಳ ಪ್ರಭಾವ ಬೀರಿರುವುದು ಕಂಡು ಬರುತ್ತದೆ. ಇದರ ಪರಿಣಾಮವಾಗಿ ಆಗ್ನೇಯ ಏಷ್ಯಾದ ನೃತ್ಯಕಲೆ ಮೂಲತಃ ಭಾರತೀಯ ನೃತ್ಯಕಲೆಯೇ ಆಗಿ ರೂಪಾಂತರ ಹೊಂದಿರುವುದು. ಅದು ಮುಖ್ಯವಾಗಿ ಮೂಲತಃ ದಕ್ಷಿಣ ಭಾರತದ ಕಲೆಯಾಗಿದೆಯೆಂಬುದನ್ನು, ಕಾಂಬೋಡಿಯಾ ಮತ್ತಿತರ ದೇಶಗಳಿಗೆ ಹೋಗಿ ಅಲ್ಲಿಯ ನೃತ್ಯಕಲೆಯನ್ನು ನೋಡುವವರು ಹೇಳುತ್ತಾರೆ.

ಕಲೆ ಉಳಿಯಬೇಕಾದುದು ಮುಖ್ಯ; ಆದರೆ ಸಂಗೀತ ಅಥವಾ ನೃತ್ಯ ಉಳಿಯಬೇಕಾದರೆ, ಅದಕ್ಕೆ ಜೀವ ತುಂಬಿರುವ ಮೂಲ ಉಳಿಯಬೇಕಾದುದೂ ಮುಖ್ಯವಾಗುತ್ತದೆ. ಭಾರತೀಯ ಸಂಗೀತವಾಗಲಿ, ನೃತ್ಯಗಳಾಗಲಿ ಕೇವಲ ಪ್ರೌಢಿಮೆಯ ಬಲದಿಂದ ಪ್ರದರ್ಶಿಸಲ್ಪಡುವುದೇ ಆದರೆ, ಅದು ಯಾಂತ್ರಿಕವಾಗಿ ಕಗ್ಗವಾಗಿ ಪರಿಣಮಿಸುತ್ತದೆ; ಇಡೀ ಭಾರತವನ್ನು ಈ ವಿಷಯದಲ್ಲಿ ಒಂದುಗೂಡಿಸಿರುವ ಒಂದು ಅಂಶವೆಂದರೆ ಭಕ್ತಿ. ತಮ್ಮ ಪೂರ್ವಜರು ಹಿಂದುಗಳೇ ಆಗಿದ್ದ ಎಷ್ಟೋ ಜನ ಮುಸ್ಲಿಂ ಸಂಗೀತಗಾರರು ಸಹ ಸಂಗೀತದ ಮೇಲೆ ತಮ್ಮ ಮಧುರ ಕಂಠದ ಸಾಧನೆಯ ಮೂಲಕ ಪ್ರಭಾವ ಬೀರಿರುವರಾದರೂ, ಸಂಗೀತವನ್ನು ಧರ್ಮದಿಂದ ಪ್ರತ್ಯೇಕಿಸುವ ಸಾಹಸಕ್ಕೆ ಕೈಹಾಕಲಿಲ್ಲ. ಅವರಿಗೂ ಕೃಷ್ಣ ಆರಾಧ್ಯದೇವತೆಯಾದ. ಹಿಂದು-ಮುಸ್ಲಿಮರನ್ನು ಒಂದುಗೂಡಿಸುವ ಶಕ್ತಿ ಕೃಷ್ಣನ ನಾಮ ವೈಶಿಷ್ಟ್ಯವಾಗಿ ಪರಿಣಮಿಸಿತೆನ್ನಲೂಬಹುದು.

ಭಾರತೀಯರು ಭಕ್ತಿಪ್ರಧಾನ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಭಕ್ತಿಯ ಸಂದೇಶವಾಹಕವಾಗಿರುವತನಕ ಸಂಗೀತವಾಗಲಿ, ನೃತ್ಯವಾಗಲಿ ತುಂಬಾ ಪ್ರವರ್ಧಮಾನಸ್ಥಿತಿಯಲ್ಲಿದ್ದಿತು. ಅರಮನೆಯ ಆಸ್ಥಾನದ ಆಸರೆಗೆ ಹೋಗಿ ಅದು ಹಾಳಾಗತೊಡಗಿತೆನ್ನಲೂಬಹುದು. ಈಗಿನ ಪರಿಸ್ಥಿತಿ "ಅದು ಹಣದ ಮಾರುಕಟ್ಟೆಗಿಳಿಯುವ ಅಧೋಗತಿಯನ್ನು ಮುಟ್ಟಿದೆಯೇ?" ಅನ್ನಿಸುತ್ತದೆ. ಪೂರ್ಣ ಅರ್ಪಣೆ, ಸಂಪೂರ್ಣ ತಲ್ಲೀನತೆ ಇವುಗಳು ಮಾತ್ರ ಸಂಗೀತವನ್ನಾಗಲಿ, ನೃತ್ಯವನ್ನಾಗಲಿ ಉಳಿಸಬಲ್ಲುವೇ ಹೊರತು ಬುದ್ಧಿ ಮತ್ತೆಯೂ ಅಲ್ಲ, ಹಣವೂ ಅಲ್ಲ. ದಕ್ಷಿಣ ಭಾರತದಲ್ಲಿ ಇನ್ನೂ ಧಾರ್ಮಿಕ ಪರಂಪರೆ ಉಳಿದಿದೆಯೆಂದೇ ಇನ್ನೂ ಸಂಗೀತದ ಭವಿಷ್ಯದ ಬಗ್ಗೆ ನಾನು ಆಶಾವಾದಿಯಾಗಿರಲು ಕಾರಣವಾಗಿದೆ. ಅದೊಂದು ಆಶಾಕಿರಣ.

ನೃತ್ಯದ ಕ್ಷೇತ್ರದಲ್ಲಿ ಒಂದು ದೊಡ್ಡ ಅಪಾಯವಿದೆ. ಆದರೆ ದೂರದೃಷ್ಟಿಯಿಂದ ಹೇಳುವುದಾದರೆ, ಸಂಗೀತ ಒಂದು ಜೀವಂತವಿದ್ದರೆ, ಇನ್ನುಳಿದ ಕಲೆಗಳೆಲ್ಲ ಜೀವಂತವಿರುತ್ತವೆ. ಕಾರಣ ಸಂಗೀತಕಲೆ ಇತರ ಎಲ್ಲ ಕಲೆಗಳಿಗೂ ಜೀವನಾಡಿಯಾಗಿದೆ.

(ಆಕಾಶವಾಣಿಯ ಕೃಪೆಯಿಂದ)

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
— ಧಾರವಾಡ —

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ಸಂಬುಗೆಯ ಮಾಲು! ಸ್ವಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನನ್ನ್ನು ವ್ಯವಹಾರ ನಡೆದಿದ್ದು,
ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮೂಲಕರು: **ಬಿ. ಜೆ. ಮುತ್ತಿಗಿ**
ಸುಭಾಸ ರೋಡ್, ಧಾರವಾಡ

ಹಳೆಯ ನಾಟಕಗಳನ್ನೇ ಆಡಿ ಬೇಸತ್ತ ಗೆಳೆಯರೆ,
ಇದೀಗ ಪ್ರಕಟವಾದ

'ರಾಯರ ಸೋಲು'

ಏಕಾಂಕ ನಾಟಕಗಳ ಸಂಕಲನದಲ್ಲಿಯ ನಾಟಕಗಳನ್ನು
ರಂಗಭೂಮಿಗೆ ತಂದು ಸಂತೋಷಪಡಿಯಿರಿ!

ಲೇಖಕರು:- **ಶ್ರೀ. ಬಿ. ಆರ್. ವಾಡಪ್ಪಿ,** ಎಂ. ಎ. ಬಿ. ಟಿ.

ಬೆಲೆ:- ೧. ೬೨ ನ. ಪೈ.

ಮುಖ್ಯ ಮಾರಾಟಗಾರರು:
ಮನೋಹರ ಗ್ರಂಥ ಭಾಂಡಾರ
ಹಾಗು
ಸಮಾಜ ಪುಸ್ತಕಾಲಯ, ಧಾರವಾಡ

ವರದಶಾಪ!*

(ಒಂದು ಸಣ್ಣ ಕಥೆ)

ಮದೇನೂರ ಸಂಗಣ್ಣ, ಚಿಗಟೇರಿ (ಹರಪನಹಳ್ಳಿ)

ಸಾಮಾಜಿಕ ನಿಯಮಬಾಹಿರವಾದ ಕುಮಾರಿಕೆಯ ಬಸಿರು ಎಷ್ಟೊಂದು ಭಯಾನಕವಾದುದು!
ಪೃಥಮ ಪ್ರೇಮದ ಮಧುರ ಫಲವನ್ನೇ ಅವಳು ನದಿಯಲ್ಲಿ ಬಿಸುಡಬೇಕಾಗುವುದು.
ಯಾರಿಗೂ ಎಂದೂ ಹೇಳಲಾಗದ ತನ್ನ ಕರುಳುರಿಯನ್ನು, ಜೀವನದುದ್ದಕ್ಕೂ ಸಹಿಸಬೇಕಾಗುವುದು!

ಪೃಥಾ ಹೇಳಿದಳು—ನನಗೆ ಯಾವ ವರವೂ ಅಗತ್ಯವಿಲ್ಲ ವಿಪ್ರ-ಋಷಿ. ನನ್ನ ಉಪಚಾರದಿಂದ ಅತಿಥಿರೂಪೀ ದೇವತೆಯಾದ ನೀವು ಸಂತಸ್ಪಗೊಂಡಿರಿ. ಜಾತ ಕುಂತೀ ಭೋಜನೂ ಸಂತೋಷಗೊಂಡ; ವರದ ಲಾಭವಾಗಿಯೇ ಬಿಚ್ಚೆದೆ; ಇದಕ್ಕಿಂತ ಇನ್ನಾವ ಕೊಡುಗೆಯ ಆವಶ್ಯಕತೆಯೂ ಇಲ್ಲ ನನಗೆ.

ವಿಪ್ರರ್ಷಿ ದುರ್ವಾಸನು ಬೀಳ್ಕೊಡಲ್ಪಡುವ ಮುನ್ನ ಸಸ್ನೇಹ ದೃಷ್ಟಿಯಿಂದ ಪೃಥಾ ಕುಮಾರಿಯನ್ನು ನಿಟ್ಟಿಸುತ್ತಾ ನಕ್ಕರು—ಅಗತ್ಯವಿದೆ ಪೃಥಾ.

ತನ್ನ ಜೀವನಕ್ಕೆ ಯಾವ ವರದ ಅಗತ್ಯವಿದೆ?—ಎಂಬುದನ್ನು ತಿಳಿದುಕೊಳ್ಳಲು ನಿಜವಾಗಿಯೂ ಪೃಥಾಳಿಗಾಗಲಿಲ್ಲ. ಸಂತಾನಹೀನ ಕುಂತೀಭೋಜನ ಪಿತೃಸ್ನೇಹದ ಈ ಸುಖನೆಯ ಗೂಡಿನ ಹೊರಗೆ, ಜೀವನದಲ್ಲಿ ಅಂತಹ ಬೇರಾವ ಸುಖವಿರಲು ಸಾಧ್ಯನೆಂಬುದನ್ನು, ಕುಂತೀ ಭೋಜನ ಪಾಲಿತ ಕನ್ಯೆ ಪೃಥಾಳಿಗೆ ಅರಿತುಕೊಳ್ಳಲಿಕ್ಕಾಗಲಿಲ್ಲ. ಇದನ್ನು ತಿಳಿದುಕೊಳ್ಳುವ ವಯಸ್ಸೂ ಅವಳಿಗಾಗಿಲ್ಲ. ಇನ್ನೂ ಇದೀಗ ಕೆತ್ತೋರಿ; ಉಷಃಕಾಲದ ತನಿಬೆಳಕಿನ ಸ್ನಿಗ್ಧತೆಯಿಂದ ನಿರ್ಮಿತವಾದ ಒರ್ವ ಕನ್ಯೆಯ ಮೂರ್ತಿ—ಅವಳು. ಪ್ರಭಾತವು ಪರಿಪೂರ್ಣವಾಗುವ ಸಮಯ ಸನ್ನಿಹಿತವಾಗಿರುವಾಗ, ಮುದ್ರಿತಕೋರಕದ ಸುಶಾಂತ ರೂಪವು ಬೆಳಕಿನ ಪಿಪಾಸೆಯೊಂದಿಗೆ ಉತ್ಸುಕವಾಗಿರುತ್ತದೆ. ಇಂದಿರ ಪ್ರತಿಬಿಂಬ ಪೃಥಾಕುಮಾರಿಯ ಅಂಗಾಂಗಗಳಲ್ಲಿ ವಿಕಸಿಸುತ್ತಲಿದೆ-ಯಾದರೂ, ಅವಳ ಮನಸ್ಸಲ್ಲಿ ಮಾತ್ರ ಇನ್ನೂ ಅದು ಮೂಡಿ ವಿಕಸಿಸಿಲ್ಲ. ತಾತ ಕುಂತೀಭೋಜನ ಸ್ನೇಹದಲ್ಲಿ ಲಾಲಿತಳಾದ ಆ ಲೀಲಾಚಪಲೆಗೆ, ಆಲಯ ಮತ್ತು ಪ್ರಾಂಗಣಗಳಲ್ಲಿ ಪೃಗಲಲನೆಯಂತೆ ಅತ್ತಿತ್ತ ಓಡಿ ಆಡುವ ಆಟ, ದೇವಪೂಜೆ ಮತ್ತು ಅತಿಥಿಸೇವೆಯ ಆಟ,—ಇವುಗಳಿಗಿಂತ ಹೆಚ್ಚಿನ ಆನಂದಜೀವನ ಇನ್ನಾವುದಿದೆ? ಕ್ಷಣಕ್ಷಣಕ್ಕೂ ಕುಂಜ-ಲತಿಕೆಯೊಡನೆ ಅಭಿಮಾನದ ಆಟ, ಸರೋವರದ ನೀರಿನಲ್ಲಿ ಬಿಂಬಿತವಾದ ಛಾಯೆಯೊಂದಿಗೆ ಕೌತುಕದ ಆಟ, ಮತ್ತು ಜಡೆಯಲ್ಲಿರುವ ಪುಷ್ಪಗಳಿಗಾಗಿ ವಿಷಯಲಂಪಟವಾಗಿರುವ ತುಂಟ ಭ್ರಮರದೊಂದಿಗೆ ಭೃಕುಟಿಯ ಆಟ,—ಇವಕ್ಕಿಂತ ಹೆಚ್ಚಿನ ಮಾಯದ ಆಟಗಳ-ಗಡಿಯ ಆಚೆ ಇನ್ನಾವ ಅನ್ಯ ಪ್ರಪಂಚವಿದೆ?

ಋಷಿ ದುರ್ವಾಸರು ಪ್ರೀತ ಸ್ವರದಲ್ಲಿ ಮತ್ತೆ ಹೇಳಿದರು:—ಅಗತ್ಯವಿದೆ ಪೃಥಾ, ಇಂದಿರಲಿಕ್ಕೆಲ್ಲ; ನಾಳೆ ಇರಲಿಕ್ಕೆಲ್ಲ; ಆದರೆ ಬಹಳ ದಿನ ದೂರವಿಲ್ಲ, ನೀನು ನಿನ್ನ ಜೀವನ ಸಂಗಾತಿಯನ್ನು ಸ್ವೀಕರಿಸ-ಬೇಕಾಗುತ್ತದೆ. ಆಶೀರ್ವದಿಸುವೆ—ಪ್ರಿಯದರ್ಶನಿ ಪೃಥಾ, ಪ್ರಿಯ ದರ್ಶನ ಸಂಗಾತಿಯನ್ನು ಪಡೆಯಲಿ.

ಮನುಷ್ಯನ ನಡತೆಯಲ್ಲಿ ಒಂದಲ್ಲ ಇನ್ನೊಂದು ನ್ಯೂನತೆಯನ್ನು ಕಂಡುಹಿಡಿಯ ಬಲ್ಲವರು ದುರ್ವಾಸರು. ಇಂತು ಕಂಡ ಕುಂದನ್ನು ಸಹಿಸಲಾಗುತ್ತಿರಲಿಲ್ಲ ಅವರಿಗೆ. ಕ್ಲೇಶಗೊಂಡು ಅಭಿಶಾಪವನ್ನೀಯುತ್ತಿದ್ದರು. ಸಾಂಸಾರಿಕ ರೀತಿನೀತಿಗಳ ಯಾವ ದೌರ್ಬಲ್ಯವನ್ನೂ ಕ್ಷಮಾದೃಷ್ಟಿಯಿಂದ ನೋಡುತ್ತಿರಲಿಲ್ಲ ಅವರು. ಸಂಸಾರದ ಬಗ್ಗೆ ಯಾವ ಮಮತೆಯೂ ಅವರಿಗಿಲ್ಲದಿರುವುದೇ ಅದಕ್ಕೆ ಕಾರಣ.

ಆದರೆ ಕುಂತೀಭೋಜನ ಗೃಹದಲ್ಲಿ ಇದ್ದ ಇಷ್ಟು ದಿನಗಳಲ್ಲಿ ಒಂದು ದಿನವಾದರೂ ತಾವು ಅಸುಖಿ ಎಂದು ಭಾವಿಸಲಿಲ್ಲ ಋಷಿ-ದುರ್ವಾಸ. ಪೃಥಾಕುಮಾರಿ ಹಗಲಿರುಳೂ ಅತಿಥಿ ದುರ್ವಾಸರ ಸೇವೆ ಮಾಡಿದ್ದಳು. ಅವಳ ಆಚರಣೆಗಳಲ್ಲಿ ಯಾವ ತೃಟಿಯನ್ನೂ ಕಾಣಲಾಗಲಿಲ್ಲ ಅವರಿಗೆ.

ಜನರ ಸಾಮಾನ್ಯ ಅಪರಾಧಗಳಿಂದ ಕ್ಷುಬ್ಧರಾಗುತ್ತಿದ್ದರು ಋಷಿ ದುರ್ವಾಸರು; ಅಲ್ಲದೆ ಅಭಿಶಾಪವನ್ನೂ ಆ ಕ್ಷಣಕಾಲದಲ್ಲಿಯೇ ಕೊಡುತ್ತಿದ್ದರವರು. ಆದರೆ ತಮ್ಮ ಜೀವನದಲ್ಲಿ ಇಂದು ಮಾತ್ರ ಇಂತು ಪ್ರಥಮವಲ ಪ್ರೀತರಾಗಿದ್ದಾರೆ. ಅದಕ್ಕಾಕ್ಕಾಗಿಯೇ ಪೃಥಾಳಿಗೆ ಆಶೀರ್ವಾದ ನೀಡಿದ್ದಾರೆ. ಮನುಷ್ಯನಿಗೆ ತಮ್ಮ ಜೀವನದಲ್ಲಿ ನೀಡಿದ ಅವರ ಪ್ರಥಮ ಆಶೀರ್ವಾದ ಇದೇ ಎಂದು ಕಾಣುತ್ತದೆ.

ಈ ಆಶೀರ್ವಾದದ ಅರ್ಥವನ್ನು ಅರಿಯಲಾಗಲಿಲ್ಲ ಪೃಥಾಳಿಗೆ. ಕುತೂಹಲಿಯಾಗಿ ಪ್ರಶ್ನಿಸಿದಳವಳು—ಆ ಪ್ರಿಯದರ್ಶನ ಎಲ್ಲಿದ್ದಾನೆ ಋಷಿ?

ದುರ್ವಾಸ—ನಿನ್ನ ಮನದಲ್ಲಿ. ಮನವು ಯಾರನ್ನು ಬಯಸುವುದೋ ಅವನನ್ನು ನೀನು ಆಹ್ವಾನಿಸು.

---

* ಸಂಗಸಾಹಿತಿ ಶ್ರೀಸುಬೋಧ ಘೋಷರ ಮೂಲ ಕತೆಯ ಅನುವಾದ.

ಋಷಿ ದುರ್ವಾಸರು ಹೊರಟುಹೋದರು. ಹೋಗುವ ಮುನ್ನ ಕುಮಾರಿ—ಕಿಶೋರಿಯೊರ್ವಳ ಮನದಲ್ಲಿ ಯಾವ ಮಂತ್ರ ತುಂಬಿ ಹೋದರು? ಅದರ ಪರಿಣಾಮವೇನಾಯಿತು?—ಎಂಬುದು ಅವರ ಕಲ್ಪನೆಯ ಅನುಭವಕ್ಕೆ ಬರುವ ಸಂಭವವೇ ಇಲ್ಲ ಏಕೆಂದರೆ ಅವರು ಸಂಸಾರ ಮತ್ತು ಸಮಾಜಗಳನ್ನು ದೂರದಿಂದ ಮಾತ್ರ ನೋಡಿದ್ದರು ಅವರ ಅಭಿಶಾಪ ಎಷ್ಟು ತ್ಯಾಜ್ಯನೀಯವೋ ಅವರ ಆಶೀರ್ವಾದ ಅಥವಾ ವರದಾನಗಳೂ ಅಷ್ಟೇ ವಿನಾಶಕಾರಿ.

"ಮನ ಯಾರನ್ನು ಬಯಸುತ್ತದೋ ಅವನನ್ನು ಬಾಳಮಂಟಪಕ್ಕೆ ಆಹ್ವಾನಿಸುವುದು!"

ಇಷ್ಟು ಘನವಾದ ಇಚ್ಛಾವಿಲಾಸದ ಮಂತ್ರವನ್ನು, ಪಾರ್ಥಿವ ದುರ್ಬಲತೆಯಿಂದ ರಚಿತವಾದ ಮಾನವಸಮಾಜ ಸಹಿಸಬಲ್ಲುದೇ, ಇಲ್ಲವೆ—ಎಂಬುದೊಂದಿಷ್ಟನ್ನೂ ವಿಚಾರಿಸಲಿಲ್ಲ ದುರ್ವಾಸ. ಕುಮಾರೀ ಪೃಥಾ ಈ ಮಂತ್ರದ ಅರ್ಥವೇನೆಂದು ತಿಳಿದಿರುವಳೆಂಬುದನ್ನು ಅರಿಯುವುದಗ ಪ್ರಯೋಜನದ ಬಗ್ಗೆಯೂ ಯೋಚಿಸಲಿಲ್ಲ ಅವರು.

ದುರ್ವಾಸರಂತಹ ರೋಷಪ್ರವೃತ್ತಿಯ ಋಷಿ ಪ್ರಸನ್ನ ಚಿತ್ತದಿಂದ ಪೃಥಾಳಿಗೆ ಆಶೀರ್ವಾದಗೈದು ಬೀಳ್ಕೊಂಡು ತೆರಳಿದ್ದನ್ನು ತಿಳಿದು, ವಿಸ್ಮಿತ ಕುಂತೀಭೋಜ ಹರ್ಷಗೊಂಡ. ತನ್ನ ಸಮರ್ಥ ನಡತೆಯಿಂದ ದುರ್ವಾಸರು ತುಷ್ಟರಾದದ್ದನ್ನು ತಿಳಿದು, ತನ್ನ ಪಿತನ ಗೌರವವನ್ನು ತಾನು ರಕ್ಷಿಸಿದ ಬಗ್ಗೆ ಅರಿತು ಪೃಥಾ ಸಂತಸಗೊಂಡಿದ್ದಾಳೆ. ಈ ಆನಂದದಿಂದಲೇ ಪಿತ ಕುಂತೀಭೋಜನ ಆಲಯದಲ್ಲಿ, ಕ್ರೀಡಾ ಚಂಚಲ ಕುರಂಗಿಯ ಜೀವನದಂತೆ, ಕಿಶೋರಿ ಪೃಥಾಳ ಜೀವನದಲ್ಲಿಯ ಪ್ರತಿಕ್ಷಣವೂ ಚಾಂಚಲ್ಯದಿಂದ ಆಮೋದ-ಪ್ರಮೋದಮಯವಾಗಿದೆ.

೨

ಈ ಚಂಚಲತೆ ಮೆಲ್ಲಮೆಲ್ಲನೆ ತನ್ನಲ್ಲಿ ಅಗೋಚರವಾಗಿ, ಯೌವನಭಾರದಿಂದ ಮಂದೀಭೂತವಾಗುತ್ತಿರುವುದನ್ನು ಸ್ವತಃ ಅರಿಯಲಾಗಲಿಲ್ಲ ಪೃಥಾಳಿಗೆ. ಆದರೆ ಸರೋವರದ ನೀರಿನಲ್ಲಿಯ ವ್ಯಥ-ಕಂಪಿತ ಪ್ರತಿಬಿಂಬವನ್ನು ಕಂಡ ಚಕಿತ ಪೃಥಾಳಿಗೆ, ಮನದ ಅಂತರಾಳದಲ್ಲಿ ಒಂದು ಅಭಿನವ ವೇದನೆಯ ಅನುಭವವಾಯಿತು. ಅವಳು ಭಾವಿಸಿದಳು:—ಈ ಪೃಥಿವಿಯ ನೆಲಲು-ಬೆಳಕಿನ ಆಟ ಕೇವಲ ಆಟ ಮಾತ್ರವಲ್ಲ, ಯಾರೋ ಒಬ್ಬ ಸುಂದರನ ಅನ್ವೇಷಣೆಯಾಗಿದೆ. ಈ ಶಿಶಿರದ ಬಿಸಿಲು, ಬೆಳದಿಂಗಳು, ತೃಣ-ಪುಷ್ಪ-ಲತೆಗಳು, ಯಾವುದೊಂದೂ ಒಂಟಿಯಾಗಿ ಬಿದ್ದಿರ ಬಯಸುತ್ತಲಿಲ್ಲ. ಶಬ್ದ ವರ್ಣ ಮತ್ತು ಸೌರಭಗಳು ಕಂಪನವನ್ನುಂಟು ಮಾಡುತ್ತಿರುವುದು ಜೀವನದ ಸಂಗಾತಿಯನ್ನು ಅನ್ವೇಷಿಸುತ್ತಿರುವ ಒಂದು ನಿರಂತರ ಆಟವಾಗಿ ತನ್ನ ದೇಹವನ್ನೇ ನಿಟ್ಟಿಸಿಕೊಂಡು ಇನ್ನಷ್ಟು ವಿಸ್ಮಿತಳಾದಳು ವೃಥಾ. ಮನದ ಅಂತರಾಳದಲ್ಲಿ ಇದುವರೆಗೂ ನೀಹಾರ ನದಿಯಂತೆ ಸುಪ್ತವಾಗಿ ನಿದ್ರಿಸುತ್ತಿದ್ದ ಯಾವುದೋ ಒಂದು ಸ್ವಪ್ನ, ಇಂದು ತನ್ನ ರಕ್ತದ ಬಿಸಿಯಿಂದ, ದ್ರವೀಭೂತ ಸ್ರೋತದಂತೆ ಜಾಗೃತಗೊಂಡು, ಅಂಗಾಂಗವನ್ನೆಲ್ಲಾ ವ್ಯಾಪಿಸಿದೆ. ಏಕೆ? ಯಾರಿಗಾಗಿ?

ಜೀವನದಲ್ಲಿ ಈ ಪ್ರಥಮಭಾವನೆಯ ಭಾರದ ಅನುಭವವಾಯಿತು ಪೃಥಾಳಿಗೆ. ತನ್ನದೇ ನಿಶ್ವಾಸದ ಶಬ್ದಕ್ಕೆ ನಿಷ್ಕಾರಣವಾಗಿ ಚಮಕಿತಳಾದವಳು. ನಿಶಾಸಮೀರನ ಮೃದುಲತ್ವ ಕೂಡಾ ಉಪದ್ರವಕಾರಿಯಾಗಿ ತೋರಿತು, ಸುಖತಂದ್ರತೆ ಭಂಗವಾಯಿತು. ಅಗಸದ ತಾರೆಯಂತೆ ಇರುಳಿನಲ್ಲಿ ಜಾಗೃತಳಾಗಿಯೇ ಇದ್ದಳು ಪೃಥಾ.

ಆ ದಿನವೂ ಬೆಳಗಾಯಿತು! ಬೆಳಗಾಗಿದ್ದರೂ ನಭಃಪಟಲದ ಕೊನೆಯ ತಾರೆ ಇನ್ನೂ ಬೀಳ್ಕೊಂಡಿರಲಿಲ್ಲ. ಮೂಡಣದ ದಿಗಂತದಲ್ಲಿ ಉಷಾರಾಗ ಯಾವುದೋ ಪ್ರಥಮ ಲಜ್ಜೆಯಿಂದ ಸಂಕೋಚಗೊಳ್ಳುತ್ತಲಿತ್ತು. ಇದೇ ರೀತಿ ತನ್ನ ದೇಹದ ಪ್ರಥಮಲಜ್ಜೆಯಿಂದ ಅಂಜಿದ ಪುಷ್ಪವತೀ ಪೃಥಾ, ಛಾಯಾಚ್ಛನ್ನ ನಿಶಾಕಾಲದ ಕೊನೆಯ ಮುಹೂರ್ತ ಕಳೆಯುವ ಮುನ್ನವೇ, ಉದ್ಯಾನ ಸರೋವರದ ಜಲದಲ್ಲಿ ಸ್ನಾನವನ್ನು ಮುಗಿಸಿದಳು.

ಪೂರ್ವ ಗಗನದತ್ತ ಕಣ್ಣು ಹೊರಳಿಸಿ ನೋಡುತ್ತಲೇ ಪೃಥಾಳಿಗೆ ಕಾಣಿಸಿತು,—ನವೋದಿತ ದಿವಾಕರನಂತೆ ಕಿರಣ್ಮಯನಾದೊಬ್ಬ ದಿವ್ಯ ಕಾಯನ ಪುರುಷಸ್ಪರ್ಶ, ತರುವೀಥಿಕೆಯ ಮಧ್ಯೆ ನಿಂತು ತನ್ನನ್ನೇ ನಿಟ್ಟಿಸಿ ನೋಡುತ್ತಲಿದ್ದಾನೆ. ಎಷ್ಟು ನಯನಾಭಿರಾಮವಾಗಿದೆ ಆ ಮುಖಚಿತ್ರ! ತಾರುಣ್ಯದಿಂದ ಮಂಡಿತವಾದ ಒರ್ವ ಪ್ರಿಯದರ್ಶನ! ಅವನ ಗದ್ದವು ಉಷೆಯ ಬೆಳಕಿನಲ್ಲಿ ಜಾಗೃತ ಸಮಸ್ತ ಸಂಸಾರದ ಚುಂಬನದಿಂದ ರಂಜಿತಗೊಂಡಂತಿದೆ. ಓಷ್ಠಾಧರದಲ್ಲಿ ಸಮುದ್ರ-ಕಾಮನೆಯ ಸ್ಪಂದನೆಯಿದೆ; ನಯನಗಳಲ್ಲಿ ಆಗಸದ ನೀಲಿಮೆಯು ಪ್ಲಾವಿತವಾಗಿದೆ.

ಯಾರಿವರು?

ಮನೋಮಂದಿರದಲ್ಲಿ ಈ ಪ್ರಶ್ನೆ ಹುಟ್ಟಿದರೂ ಅವನ ಪರಿಚಯವನ್ನು ಊಹಿಸಲಾಗಲಿಲ್ಲ—ಪೃಥಾಳಿಗೆ. ಪ್ರಿಯದರ್ಶನನೊರ್ವನು ಇಂದಿನ ಪ್ರಭಾತದಲ್ಲಿ ಅವಳ ಹೃದಯ ಕುಟೀರದ ಸಮ್ಮುಖದ ಪಥದಲ್ಲಿ ವಿಸ್ಮಯಗೊಂಡು ಕ್ಷಣವ ಮಟ್ಟಿಗೆ ಬಂದು ನಿಂತಿದ್ದಾನೆ. ಆದರೆ ಇನ್ನೆಷ್ಟು ಕ್ಷಣ? ಬಹುಶಃ ಈಗಲೇ ಹೊರಟುಹೋಗಬಹುದು; ಈ ಭೂಲೋಕದ ಅಪಾರ ರಹಸ್ಯದೊಂದಿಗೆ ಅದೃಶ್ಯವಾಗಬಹುದು ಆ ರೂಪ.

ಒಂದು ಸಲ ಹತ್ತಿರಕ್ಕೆ ಕರೆಯಬೇಕೆಂದು ಮನ ಬಯಸಿತು. ಆದರೆ ಲಜ್ಜೆ ಹೇಳಿತು—ಕರೆಯಬೇಡ.

ಅನೇಕಕ್ಷಣ ನೋಡಲೆಳಸಿದುವು ಕಣ್ಣುಗಳು; ಆದರೆ ಭಯ ಹೇಳಿತು—ನೋಡದಿರು.

ಈ ಅದ್ಭುತ ಲಜ್ಜೆ ಮತ್ತು ಭಯಗಳ ಮಧ್ಯದಲ್ಲಿಯೇ ಯಾವುದೋ ರಹಸ್ಯಮಯ ಮಾಧುರ್ಯವೊಂದು ಅವಿತುಕೊಂಡಿದೆ. ಅದು ಈ ಲಜ್ಜೆಯನ್ನು ಹಾಗೆಯೇ ಇಟ್ಟುಕೊಳ್ಳಬಯಸುತ್ತಿದೆ, ಭಂಗಗೊಳಿಸಲೂ ಆಶಿಸುತ್ತಲಿದೆ!

ಆಕಸ್ಮಾತ್ ಖರಕಿರಣವೊಂದರ ಸ್ಪರ್ಶದಿಂದ ಪೃಥಾಳ ನಯನ ಮತ್ತು ಮನಗಳ ಸಕಲ ಲಜ್ಜೆಯೂ ದೀಪ್ತವಾಯಿತು. ಸಂಗೀತಮಯ

ಮಂತ್ರದಂತೆ ಒಂದು ಅಶರೀರವಾಣಿಯ ಧ್ವನಿ ಅವಳ ಅಂತರ್ಯದಲ್ಲಿ ಹರ್ಷದ ಕಲ್ಲೋಲವನ್ನೆಬ್ಬಿಸಿತು.

ಋಷಿ ದುರ್ವಾಸರ ಉಪದೇಶ ನೆನಪಿಗೆ ಬಂದಿತು.

'ಮನ ಯಾರನ್ನು ಬಯಸುತ್ತದೋ ಅವನನ್ನೇ ಆಹ್ವಾನಿಸುವಿ' ಈ ಪ್ರಗಲ್ಭ ಮುಹೂರ್ತದಲ್ಲಿ ದುರ್ವಾಸರ ಉಪದೇಶ ಎಲ್ಲದಕ್ಕಿಂತಲೂ ದೊಡ್ಡ ಸತ್ಯವಾಗಿ, ಪೃಥಾಳ ಮನಸ್ಸಿಗೆ ತೋರಿತು. ಅಪರಿಚಿತನಾಗಿರಲಿಕ್ಕಿಲ್ಲ, ಮಣಿದೀಪ್ತ ಕುಂಡಲದಿಂದ ಮತ್ತು ರತ್ನಖಚಿತ ಕವಚದಿಂದ ಶೋಭಿಸುವ ಈ ನಯನ ಮೋಹನ ತನುಧರನೇ ಅವಳ ಜೀವನದ ಪ್ರಥಮ ಪ್ರಿಯದರ್ಶನನಲ್ಲವೆ?

ಯಾವುದೋ ಒಂದು ಕುತೂಹಲದ ಚಿನ್ನಾಟದ ಆವೇಗದಲ್ಲಿ ಸಕಲಭಯ ಮತ್ತು ಲಜ್ಜೆಗಳನ್ನೂ ತೊಡೆದು ಹಾಕಿ, ಕುಮಾರಿ ಪೃಥಾ ತನ್ನ ಜೀವನದ ಪ್ರಥಮ ಪ್ರಿಯದರ್ಶನನಲ್ಲಿ ಆಹ್ವಾನವನ್ನು ನಿವೇದಿಸಿದಳು—ಬನ್ನಿ.

ಅವನು ಬಂದ; ಸಮ್ಮುಖದಲ್ಲಿ ನಿಂತ. ಅಂಶುಪುಂಜದಿಂದ ರಚಿತವಾದ ಆ ಅಪರಿಚಿತ ಯೌವನವಂತನ ವದನಪ್ರಭೆಯನ್ನು ನಿಸ್ಸಂಶಯದಿಂದ ಕೆಲವು ಕ್ಷಣ ನೋಡಿಯೇ ನೋಡಿದಳು ಪೃಥಾ. ಅನಂತರ ಪ್ರಶ್ನಿಸಿದಳು—ಯಾರು ನೀವು?

—ನಾನು ದೇವಸಮಾಜದ ಭಾಸ್ಕರ. ನೀನು ಯಾರು?

—ನಾನು ಮರ್ತ್ಯದ ನಾರಿ ಪೃಥಾ, ಕುಂತೀಭೋಜನ ಮಗಳು.

—ಹತ್ತಿರಕ್ಕೆ ಕರೆದದ್ದೇಕೆ?

—ಇಚ್ಛೆಯಾಯಿತು.

—ಏಕೆ ಇಚ್ಛೆಯಾಯಿತು?

—ಹತ್ತಿರಕ್ಕೆ ಕರೆಯಲು!

ಪೃಥಾಳ ಮಾತು ಭಾಸ್ಕರನ ಮುಖದಲ್ಲಿ ನಗೆಯನ್ನು ಹುಟ್ಟಿಸಿತು. ಇಚ್ಛೆಯ ಅರ್ಥ ಗೊತ್ತಿಲ್ಲ, ಇಚ್ಛೆಯ ಅರ್ಥವನ್ನು ಹೇಳಲಾದಳು, ಆದರೂ ಇಚ್ಛೆಯ ಕೈಗೇ ತನ್ನ ಅಸ್ತಿತ್ವವನ್ನು ಒಪ್ಪಿಸಿಕೊಟ್ಟಿದ್ದಾಳೆ—ಈ ನವೋದ್ಭಿನ್ನಯೌವನಾ ಮರ್ತ್ಯನಾರಿ. ಕಪ್ಪೆಯ ಚಿಪ್ಪಿನ ನೀರಡಿಕೆ ಒಂದು ಪಕ್ಷ ಸ್ವಾತೀ ಸಲಿಲದ ಹರ್ಷವನ್ನು ಹತ್ತಿರಕ್ಕೆ ಆಹ್ವಾನಿಸಿದರೆ, ಜಲಕುಮುದಿನಿಯ ಆಕುಲತೆ—ಪೂರ್ಣ ಶಶಧರನ ಕಿರಣಧಾರೆಯನ್ನು ಸನಿಹಕ್ಕೆ ಕರೆದರೆ, ಏಲಾಲತೆಯು ಚಂದನತರುವನ್ನು ಹತ್ತಿರಕ್ಕೆ ಕೂಗಿ ಕರೆದರೆ, ಪರಾಗ ಕಾತರ ಪದ್ಮಿನಿಯು ಮತ್ತ ಭೃಂಗ ಸಾನ್ನಿಧ್ಯನನ್ನು ಆಹ್ವಾನಿಸಿದರೆ, ಆಗದರ ಪರಿಣಾಮವೇನಾಗುವುದೆಂಬುದರ ಕಲ್ಪನೆ ಮಾಡಲಾಗಲಿಲ್ಲ ಪೃಥಾಳಿಗೆ. ಆದರೂ ಆಹ್ವಾನಿಸಿದಳು.

ಭಾಸ್ಕರನ ಸ್ಮಿತಮುಖದ ಅನುರಂಜಿತ ಮಾಯೆಯು ಅಪಾರ್ಥಿವ ದೀಪ್ತಿಯ ಮಾಲಿಕೆಯಂತೆ, ಪೃಥೆಯ ಚೇತನದ ನಾಲ್ಕೂದಿಕ್ಕೆಗಳಲ್ಲಿ ಮೇಖಲೆಯನ್ನು ಸೃಷ್ಟಿಸಿತು. ಅದರ ಮಧ್ಯೆ ಯಾವುದೋ ರಮಣೀಯ ಮೂರ್ಛೆಯಿಂದ ಅಭಿಭೂತವಾದುವು ಅವಳ ಸಕಲ ಕುತೂಹಲ ಮತ್ತು ಬಯಕೆಗಳು. ಪ್ರತಿನಿತ್ಯದ ನಿಯಮದಿಂದ ಎಷ್ಟೋ ಕ್ಷಣಗಳು ಹಠಾತ್ತಾಗಿ ವಿಚ್ಛಿನ್ನವಾಗಿ, ಸಮಾಜ ಮತ್ತು ಸಂಸಾರಗಳಿಗೆ ಗೋಚರಿಸದಂತೆ ಒಂದು ಗೌಪ್ಯ ಮಿಲನದ ಸಂದರ್ಭವನ್ನು ರಚಿಸಿದುವು.

ಭಾಸ್ಕರ ನುಡಿದ:—ಚಪಲ ಕಿಶೋರಿ, ನೀನೇಕೆ ನನ್ನನ್ನು ಹತ್ತಿರಕ್ಕೆ ಕರೆದೆ ಎಂಬುದರ ಅರ್ಥ ನಿನಗೆ ಗೊತ್ತಿಲ್ಲ; ಆದರೆ ಗೊತ್ತಿದೆ ನನಗೆ.

ಒಂದು ಕ್ಷಣದ ಮಟ್ಟಿಗೆ ಅತ್ಯಂತ ಭೀತಳಾದಳು ಪೃಥಾ—ನೀವಿನ್ನು ಹೊರಟು ಹೋಗಿರಿ ಭಾಸ್ಕರ; ನನ್ನ ನೋಡುವಿಕೆ ಮುಗಿದಿದೆ.

—ಏನು?

—ಕಂಡೆ, ನೀವು ಪ್ರಿಯದರ್ಶನ! ಮನ ಬಯಸಿತು; ಹತ್ತಿರಕ್ಕೆ ಕರೆದೆ. ನಾನು ಹತ್ತಿರಕ್ಕೆ ಕರೆದದ್ದಕ್ಕಾಗಿಯೇ ನೀವು ಹತ್ತಿರಕ್ಕಾಗಮಿಸಿದಿರಿ. ನನ್ನ ಕುತೂಹಲ ತೀರಿತು.

—ಆದರೆ ನನ್ನ ನಯನಗಳ ಪಿಪಾಸೆ ತೀರಿಲ್ಲ ಪೃಥಾ.

ಅಳ್ಳಿದೆಯ ಬಾಳೆಯ ಎಲೆಯ ಕಂಪನದಂತೆ ಯಾವುದೋ ವಿನಶ ಮತ್ತು ಅಸಹಾಯ ಆಪತ್ತಿಯ ಬಾಷೆಯೊಂದು ಪೃಥಾಳ ಆವೇದನೆಯ ದನಿಯಲ್ಲಿ ಕಂಪಿಸಿತು!—ಕ್ಷಮಿಸಿರಿ, ಹೊರಟು ಹೋಗಿರಿ ಭಾಸ್ಕರ.

—ಹೊರಟು ಹೋಗಲಾರೆ ಪ್ರಿಯದರ್ಶಿನಿ.

ಬಲಗೈಯನ್ನು ಮೇಲೆತ್ತಿ ಅತ್ಯಂತ ಸಾದರದಿಂದ ಪೃಥಾಳ ಗದ್ದವನ್ನು ಸ್ಪರ್ಶಿಸಿದ ಭಾಸ್ಕರ. ದಕ್ಷಿಣದ ಸಮೀರ ಚಂಚಲ ಗೊಂಡಿತು. ಲವಂಗ, ಕೇಸರಗಳ ಸೌರಭ ರಾಶಿರಾಶಿಯಾಗಿ ಸುರಿದು ಅವೆಯಾಗಿ ಹೋಯಿತು. ಕ್ರೌಂಚನಿನಾದಿತ ಸರೋವರತಟ ಏಕಾಏಕೀ ನಿಸ್ತಬ್ಧವಾಯಿತು. ಭಾಸ್ಕರನ ಆಲಿಂಗನದಲ್ಲಿ ಸಮರ್ಪಿತನಾದ ತನು, ಕುಮಾರೀ ಪೃಥಾಳ ಅಸ್ತಿತ್ವವನ್ನು ಪರಮಸ್ಪರ್ಶ ಮಹೋತ್ಸವದಲ್ಲಿ ಕಳೆದುಕೊಂಡಿತು.

ಭಾಸ್ಕರ ಬೀಳ್ಕೊಟ್ಟು ಹೊರಟುಹೋದ.

೩

ರಾಜಾ ಕುಂತೀಭೋಜನ ಆಲಯದಲ್ಲಿ ಇನ್ನೊಂದು ಪ್ರಭಾತದ ಸಮಯ—ಕವಿಗೆ ನವಕರ್ಣಿಕೆಯನ್ನು ಧರಿಸುವುದು, ನಯನಕ್ಕೆ ಕೃಷ್ಣಾಂಜನವನ್ನು ಲೇಪಿಸುವುದು, ದಟ್ಟವಾಗಿ ಗಮಗಮಿಸುವ ಕಪ್ಪಾದ ಕೇಶರಾಶಿಯನ್ನು ಸುಂದರ ಜಡೆಯಾಗುವಂತೆ ಹೆಣೆದು ಕೊಳ್ಳುವುದು....ಇತ್ಯಾದಿಗಳಲ್ಲಿ ನಿರತಳಾಗಿದ್ದಳು ಕುಮಾರಿ ಪೃಥಾ.

ಅವಳನ್ನು ನೋಡಿ ನಗುಮುಖದೊಂದಿಗೆ ಎದುರಿಗೆ ಬಂದು ನಿಂತಳು ಧಾತ್ರೇಯಿಕೆ.

ಪೃಥಾ ಹೇಳಿದಳು:—ಸ್ವಪ್ನದ ಅರ್ಥವನ್ನು ಹೇಳಬಲ್ಲೆಯಾ ಧಾತ್ರೇಯಿಕಾ?

ಧಾತ್ರೇಯಿಕಾ:—ಹೇಳಬಲ್ಲೆ.

ಪೃಥಾ—ಅದ್ಭುತ ಸ್ವಪ್ನವೊಂದನ್ನು ಕಂಡೆ ಧಾತ್ರೇಯಿಕಾ; ಆದರೆ ಅದರ ಅರ್ಥ ತಿಳಿಯಲೊಲ್ಲದು ನನಗೆ.

ಧಾತ್ರೇಯಿಕಾ—ಹೇಳು ಏನು ಸ್ವಪ್ನ ಕಂಡೆ ನೀನು?

ಪೃಥಾ—ರಾತ್ರಿಯ ಆಗಸದಿಂದ ಪ್ರತಿಪದೆಯ ಚಂದ್ರರೇಖೆಯು ಬಂದು ನನ್ನ ವಕ್ಷಸ್ಥಲದ ಅಂತರ್ಯದಲ್ಲಿ ಮಿಲನವಾದದ್ದನ್ನು ಕಂಡೆ. ಐಚ್ಛತ್ತು ನೋಡಿದರೂ ಆ ಚಂದ್ರರೇಖೆಯ ಭಾರ ನನ್ನ ವಕ್ಷಸ್ಥಳದಲ್ಲಿಯೆ ಇರುವಂತೆ ತೋರಿತು; ಅಲ್ಲದೆ ಅದು ಪ್ರತಿಕ್ಷಣಕ್ಕೂ ಬೆಳೆಯುತ್ತಿರುವಂತೆ ಕಾಣುತ್ತಿದೆ!

ಧಾತ್ರೇಯಿಕೆಯ ನಗುಮುಖದಲ್ಲಿ ಸಂಶಯದ ವಿಷಣ್ಣ ಛಾಯೆ ಆವರಿಸಿತು. ಪೃಥಾಳನ್ನು ನಿಟ್ಟಿಸಿ ನೋಡಿ ಅನಂತರ ಭಯಗ್ರಸ್ತಳಂತೆ ಚಕಿತಳಾದಳು:—ಇದೇನು ಪೃಥಾ?

ಪೃಥಾ ವಿರಕ್ತಭಾವದಲ್ಲಿ ನುಡಿದಳು—ಏನಾಯಿತು?

ಧಾತ್ರೇಯಿಕಾ—ಗೌಪ್ಯವಾಗಿ ಯಾರನ್ನೆ ವರಿಸಿರುವೆ ಹೇಳು?

ಪೃಥಾ—ದೇವ ಭಾಸ್ಕರನನ್ನು!

ಧಾತ್ರೇಯಿಕಾ ಅಸಹಾಯ ಭಾವದಿಂದ ಆಕ್ಷೇಪಿಸಿದಳು—ದುರ್ಭಾಗಿನೀ ಕನ್ಯೆ! ಯಾವನೋ ಒಬ್ಬ ಅಧಮ ಪ್ರಣಯಿಯ ಮೋಸದ ತಪ್ಪಿನಿಂದಾಗಿ ನಿನ್ನನ್ನೇ ಸರ್ವನಾಶಕ್ಕೀಡು ಮಾಡಿಕೊಂಡು ಕುಳಿತಿರುವೆಯಲ್ಲ!

ಪೃಥಾ—ಅವರನ್ನು ನಿಂದಿಸದಿರು ಧಾತ್ರೇಯಿಕಾ. ಮನವು ಯಾರನ್ನು ಬಯಸಿತೋ ಆತನನ್ನೇ ವರಿಸಿದ್ದೇನೆ; ಯಾವ ತಪ್ಪನ್ನೂ ಮಾಡಿಲ್ಲ.

—ಈ ಮಂತ್ರವನ್ನೆಲ್ಲಿ ಕಲಿತೆ ಪೃಥಾ?

—ನಿನಗಿಂತ ನೂರರಷ್ಟು ಯಾರು ಜ್ಞಾನಿಯೋ ಅವರಿಂದ ಕಲಿತಿರುವೆ.

—ಯಾರವರು?

—ವಿಪ್ರರ್ಷಿ ದುರ್ವಾಸರು. ಅವರು ನನ್ನನ್ನಾಶೀರ್ವದಿಸಿ ಈ ಮಂತ್ರವನ್ನು ಕರುಣಿಸಿ ಹೋಗಿದ್ದಾರೆ.

—ಅತ್ಯಂತ ಭಯಂಕರ ಮಂತ್ರವಿದು! ನೀನು ತಪ್ಪು ತಿಳಿದಿರುವಿ ಪೃಥಾ. ಮಾನವಸಮಾಜ ಈ ಮಂತ್ರವನ್ನು ಸಹಿಸಲಾರದು. ನೀನು ಕುಮಾರಿ, ಅವಿವಾಹಿತ ಸ್ತ್ರೀ; ಸ್ವ ಇಚ್ಛೆಯಿಂದ ಅಥವಾ ಗೌಪ್ಯವಾಗಿ, ಅಥವಾ ಮನ ಯಾರನ್ನು ಬಯಸುತ್ತದೋ ಅವರಿಗೆ ಆತ್ಮದಾನಗೈದು ಸಂತಾನವತಿಯಾಗುವ ಅಧಿಕಾರ ನಿನಗಿಲ್ಲ.

—ಏಕೆ?

—ನೀನು ಗುಪ್ತಪ್ರಪಂಚದ ಪ್ರಾಣಿಯಲ್ಲ ಪೃಥಾ! ಈ ಸಮಾಜಕ್ಕೆ ಸೇರಿದ ಕನ್ಯೆ ನೀನು! ಸಂಸಾರಕ್ಕೆ ಸಾಕ್ಷಿಯಾಗಿ ಮಾಡುವುದಕ್ಕಾಗಿಯೇ, ನೀನು ಜನಿಸಿದ ಮುಹೂರ್ತದಲ್ಲಿ ಶಂಖಧ್ವನಿಯಾಯಿತು. ಸಂಸಾರವನ್ನು ಸಾಕ್ಷಿಯಾಗಿಟ್ಟುಕೊಂಡೇ ಮಂತ್ರೋಚ್ಚಾರಣೆಯೊಂದಿಗೆ ನೀನು ಪೃಥನುಸಲ ಅನ್ನಪ್ರಾಶನ ಮಾಡಿದೆ. ಸಮಸ್ತದ ಸಾಕ್ಷಿಯಾಗಿಯೇ, ಸರ್ವರ ಸ್ನೇಹ ಮತ್ತು ಆಶೀರ್ವಾದಗಳ ಸ್ವೀಕೃತಿ ರೂಪದಲ್ಲಿ ನೀನು ದೊಡ್ಡವಳಾಗಿ ಬೆಳೆದಿರುವೆ. ನಿನ್ನ ಸುರುಚಿ ಪ್ರೇಮ ಮತ್ತು ಪ್ರಿಯ ಸಹವಾಸ—ಎಲ್ಲವೂ, ಈ ಸಂಸಾರದ ಆಶೀರ್ವಾದವನ್ನು ಪಡೆದು ಸಾರ್ಥಕ ಹೊಂದುವುದೇ ಹೊರತು ಸಂಸಾರದಿಂದ ಗುಪ್ತನಾಗಿಟ್ಟುಕೊಂಡಲ್ಲ ಪೃಥಾ.

ಕೆಲವು ಕ್ಷಣ ಮೌನವಾಗಿದ್ದಳು ಧಾತ್ರೇಯಿಕಾ. ಅನಂತರ ಶೋಕಾರ್ತಳಂತೆ ಕ್ರಂದನಸ್ವರದಲ್ಲಿ ನುಡಿದಳು—ಅದರೆ ಇದೆಂತಹ ಭಯಂಕರ ತಪ್ಪು ಮಾಡಿದೆ ಪೃಥಾ! ಆ ತಪ್ಪು ಆಶೀರ್ವಾದದಲ್ಲಿ ವಿಶ್ವಾಸವಿರಿಸಿ ಸ್ವೇಚ್ಛೆಯಿಂದ ಮತ್ತು ಗೌಪ್ಯವಾಗಿ, ಮೂರ್ಖಳಂತೆ ಒಂದು ಹುಡುಗಾಟದ ಆವೇಗದಲ್ಲಿ ನಿನ್ನ ಕುಮಾರೀ ಜೀವನದ ಗೌರವ ನಿನ್ನ ಸಿತನ ಗೌರವ, ನಿನ್ನ ಸ್ವಂತ ಸಮಾಜದ ಗೌರವ....ಎಲ್ಲವನ್ನೂ ನಾಶ ಮಾಡಿಕೊಂಡು ಬಿಟ್ಟೆ!

—ಇಂತು ಧಿಕ್ಕಾರದ ನುಡಿಯಾಡದಿರು ಧಾತ್ರೇಯಿಕಾ! ನನ್ನ ಪ್ರೇಮದ ಸತ್ಯತೆಯನ್ನು ಅಗೌರವಗೊಳಿಸುವ ಅಧಿಕಾರ ಯಾರಿಗೂ ಇಲ್ಲ. ಒಂದು ಪಕ್ಷ ನಾನು ಎಲ್ಲಿಯವರೆಗೆ ನಿಮ್ಮ ಗೃಹದ ಕನ್ಯೆಯಾಗಿರುವೆನೋ, ಅಲ್ಲಿಯವರೆಗೆ ನಿಮ್ಮ ಮನೆತನದ ಗೌರವವನ್ನು ಮಲಿನವಾಗಗೊಡುವುದಿಲ್ಲ.

ಧಾತ್ರೇಯಿಕಾ ಕರ್ಕಶಸ್ವರದಲ್ಲಿ, ಅದರೂ ವಿಸ್ಮಿತಭಾವದಲ್ಲಿ ಪ್ರಶ್ನಿಸಿದಳು—ಅದು ಹೇಗೆ?

ಪೃಥಾ—ನನ್ನ ಗುಪ್ತಪ್ರಣಯದ ಪರಿಣಾಮವನ್ನು ನಾನೇ ಗುಪ್ತವಾಗಿ ನೀರಿನ ಮೇಲೆ ತೇಲಿಬಿಡುವೆ.

ಧಾತ್ರೇಯಿಕಾ—ಏನು ಹೇಳಿದೆ ಪೃಥಾ?

ಪೃಥಾ—ಕುಮಾರಿಯ ತೊಡೆಯೇರದಿರಲಿ ಆ ಸಂತಾನ. ಅದಕ್ಕಾಗಿ ನನ್ನ ಮನದಲ್ಲಾವ ಉದ್ವೇಗವೂ ಇಲ್ಲ ಧಾತ್ರೇಯಿಕಾ! ಅದರ ಪರಿಚಯವನ್ನಾರೂ ಅರಿಯಲಾರರು.

ಧಾತ್ರೇಯಿಕಾ—ಅದು ಹೇಗೆ?

ಪೃಥಾ—ಅದನ್ನು ಪರಿಚಯಹೀನಗೊಳಿಸಿ ಈ ಪೃಥ್ವಿಯ ತೊಡೆಯ ಮೇಲೆ ಪರಿತ್ಯಜಿಸುವೆ. ಈ ಜಗದ ಒಂದಲ್ಲ ಒಂದು ಮನೆಯಲ್ಲಿ ನೂತನ ಪರಿಚಯದೊಂದಿಗೆ ಬದುಕಿ ಜೀವಿಸಬಹುದು. ಈ ಬಗ್ಗೆ ನನಗೆ ಒಂದಿಷ್ಟೂ ದುಃಖವಾಗಲಾರದು ಧಾತ್ರೇಯಿಕಾ.

ಧಾತ್ರೇಯಿಕಾ ಹುಬ್ಬು ಗಂಟಿಕ್ಕಿ ನುಡಿದಳು:—ಆ ಕಾರ್ಯ ಅಷ್ಟೊಂದು ಸಹಜಸುಲಭವೇನು ಪೃಥಾ? ಅದೂ ಕೂಡಾ ಗುಪ್ತಪ್ರಣಯದಂತೆ ಒಂದು ಆಟವೇ?

ಧಾತ್ರೇಯಿಕಾ ಇನ್ನೇನನ್ನೂ ಹೇಳಲಾರದಾದಳು. ಪೃಥಾ ಕೂಡ ಯಾವ ಉತ್ತರವನ್ನೂ ಕೊಡಲಿಲ್ಲ. ಆಟವೆಂದೇ ಭಾವಿಸಿದ್ದಳು ಪೃಥಾ—ಪ್ರಿಯ ಸಂಗಾತಿಯೊಂದಿಗೆ ಆಟದ ಆನಂದದೊಂದಿಗೆ ವನದಲ್ಲಿ ಹೋಗುವಾಗ, ಕೈಯಿಟ್ಟೊಜನೆ ದೊರೆಯುವ ಕಸುಮದ ಪೊಗ್ಗೊಂದು ಬಯಸಿ ಹುಡುಕಿದರೂ ಸಿಗದೆ ಹೋಗಬಹುದು. ನನ್ನದು ಇದಕ್ಕಿಂತ ಹೆಚ್ಚಿನ ಕಷ್ಟದ ಕೆಲಸವೇನೂ ಅಲ್ಲ; ಇದಕ್ಕಿಂತ ಹೆಚ್ಚಿನ ದುಃಖದ ಸಂಗತಿಯೇನಲ್ಲ. ಧಾತ್ರೇಯಿಕೆ ಇಷ್ಟೊಂದು ದೊಡ್ಡದಾಗಿ ಹುಬ್ಬು ಗಂಟಿಕ್ಕುವುದರ ಅರ್ಥ ಪೃಥಾಳಿಗಾಗಲೊಲ್ಲದು.

೪

ರಾತ್ರಿಯ ಕೊನೆಯ ಅಂಧಕಾರ, ಶುಕ್ರನಕ್ಷತ್ರದ ತಂಬೆಳಕು. ಕುಂತೀಭೋಜನ ಪ್ರಾಸಾದದಿಂದ ಬಹುದೂರದಲ್ಲಿರುವ ನದೀ ತೀರದಲ್ಲಿ ಜಲಪದ್ಮಗಳ ವನ, ಜಲದ ಮೇಲೊಂದು ಪುಟ್ಟನೌಕೆ, ನೌಕೆಯ ಒಳಗಡೆ ಅನಾವೃತವಾದೊಂದು ವಸ್ತ್ರದ ಪೆಟ್ಟಗೆ. ಆ ಪೆಟ್ಟಗೆಯಲ್ಲಿ ಮಲಗಿರುವ ಕುಸುಮಕೋರಕದಂತಹ ಸದ್ಯೋಜಾತ ಶಿಶುವೊಂದರ ನಿದ್ರಾಮಗ್ನ ಮುಖದತ್ತ ಬಾಗಿ ನೋಡುತ್ತಿದ್ದಾಳೆ ಪೃಥಾ. ಆ ಕ್ಷುಬ್ಧ ಹೃತ್ಪಿಂಡದ ಧಕ್-ಧಕ್ ಶಬ್ದ ಅವಳ ಕಿವಿಗೆ ಕೇಳಿಸುತ್ತಿದೆ. ಪುಟ್ಟ ಭಂಡೋಗತಿಯಲ್ಲಿ ಸ್ಪಂದಿಸುವ ಕಿರಿಯ ಶ್ವಾಸವಾಯುವಿನ ಮೃದು ಉತ್ತಾಪ ಪೃಥಾಳ ಮುಖಕ್ಕೆ ಬಂದು ತಾಗುತ್ತಿದೆ.

ನದಿಯ ತರಂಗಸ್ರೋತದಲ್ಲಿ ಕಲ್ಲೋಲವೆದ್ದಿತು. ತೀರದಲ್ಲಿ ಕಟ್ಟಿದ್ದ ಹಗ್ಗವನ್ನು ಹರಿದು ಈ ಮುಹೂರ್ತದಲ್ಲಿಯೇ ಆ ನೌಕೆಯನ್ನು ತೇಲಿಬಿಡಲಾಗುವುದು. ಹಗ್ಗವನ್ನು ಛಿನ್ನಗೊಳಿಸಲಿಕ್ಕಾಗಿ ಕೈಜಾಚಿದಳು ಧಾತ್ರೇಯಿಕಾ. ಆರ್ತನಾದಗೈಯುತ್ತಾ ಅವಳ ಕೈಯನ್ನು ಅಮುಕಿ ಹಿಡಿದು ತಡೆದಳು ಪೃಥಾ. ಧಾತ್ರೇಯಿಕಾ ಹುಬ್ಬುಗಂಟಿಕ್ಕಿ ನುಡಿದಳು—ಏನಿದು?

ಪೃಥಾ—ಇದೇನು ಸರ್ವನಾಶಗೈಯುತ್ತಿರುವಿ ಧಾತ್ರೇಯಿಕಾ!

ಧಾತ್ರೇಯಿಕೆಯ ಮುಖದಲ್ಲಿ ವ್ಯಂಗ್ಯನಗುವಿನ ರೇಖೆ ಮೂಡಿತು—ನಿನ್ನ ಗುಪ್ತಪ್ರೇಮದ ಪರಿಣಾಮವನ್ನು ಗುಪ್ತವಾಗಿಯೇ ತೇಲಿಬಿಡು. ತುಸೆ; ಇದಕ್ಕಾಗಿ ಮತ್ತೇಕೆ ಆರ್ತನಾದ ಪೃಥಾ?

ಧಾತ್ರೇಯಿಕೆಯ ಕೈಯನ್ನು ಇನ್ನಷ್ಟು ವ್ಯಗ್ರತೆಯಿಂದ ಗಟ್ಟಿಯಾಗಿ ಅವುಕಿ ಹಿಡಿದಳು ಪೃಥಾ; ಇಲ್ಲದಿದ್ದಲ್ಲಿ ಅವಳ ವಕ್ಷಃಪಂಜರ ವಿದೀರ್ಣವಾಗಿ ಹೋಗುವುದೇನೋ!

ಕರುಣಾಮಯವಾಗತೊಡಗಿತು ಧಾತ್ರೇಯಿಕೆಯ ಮುಖ. ಸಾಂತ್ವನದ ಸ್ವರದಲ್ಲಿ ನುಡಿದಳವಳು—ಧುಃಖಪಡದಿರು ಪೃಥಾ, ನಿನ್ನ ಗುಟ್ಟಿನ ಕಲಂಕವನ್ನು ಈ ಪರಿಸ್ಥಿತಿಯಲ್ಲಿ ಈ ರೀತಿ ಗುಪ್ತವಾಗಿ ತೇಲಿಬಿಡದೆ ಬೇರೆ ಉಪಾಯವಿಲ್ಲ.

ಕಲಂಕ? ಪೃಥಾಳ ಯೌವನದ ಶೋಣಿತದಲ್ಲಿ ಪ್ರಥಮ ಮಧುರತೆಯ ಪುಲಕದಿಂದ ಅರಳಿ ತನ್ನ ಸ್ಪರ್ಶದಿಂದ ಅವಳ ಕೌಮಾರ್ಯಮಯ ಸೇಹವನ್ನು ಸೀಯೂಷದಿಂದ ತುಂಬಿ, ಧನ್ಯಗೊಳಿಸಿದ ಆ ಕರುಣೆಯ ರಕ್ತಕಮಲ, ಇಂದು ಈ ರೀತಿಯಾಗಿ ಲಕ್ಷ್ಯಹೀನ ಭವಿಷ್ಯತ್ತಿನಲ್ಲಿ, ಈ ಅಂಧಕಾರದಲ್ಲಿ, ತರಂಗಗಳ ಆಟಿಗೆಯಂತೆ ದೂರದಿಂದ ದೂರಾಂತರಕ್ಕೆ ತೇಲಿ ಹೋಗಬೇಕೆ? ಇದೇ ಜೀವನದಲ್ಲಿಯ ಪ್ರಥಮ ಪ್ರಿಯದರ್ಶನ! ನನವು ಯಾವುದರ ನೆರೆಯನ್ನು ಬಯಸಿತೋ ಅದೇ ಇದು! ಇಂದಿನ್ನು ಬೇಳ್ಕೊಡಲು ಪೃಥಾಳ ಇಹಜೀವನದ ಸಮಸ್ತ ಅದೃಷ್ಟವೂ ಶೋದಿಸತೊಡಗಿತು.

ಪೃಥಾ ಹೇಳಿದಳು:—ಕಲಂಕವೆಂದಾಡದಿರು ಧಾತ್ರೇಯಿಕಾ. ಇದು ನನ್ನ ಸಂತಾನ.

ದುರ್ದಮನೀಯ ಕ್ರಂದನದ ಉಚ್ಛ್ವಾಸವನ್ನು ತಡೆಹಿಡಿದುಕೊಂಡಳು ವೃಥಾ. ಆದರೆ ದುಃಸಹ ಬಯಕೆಯೊಂದನ್ನು ತಡೆಹಿಡಿಯಲಾಗಲಿಲ್ಲವಳಿಗೆ. ತಾಳಲಾಗದ ವೇದನಾರಸದ ಭಾರದಿಂದ ವಿಹ್ವಲವಾದ ಕುಚಕೋರಕಗಳನ್ನು, ನಿದ್ರಿಸುವ ಶಿಶುವಿನ ಸ್ಪಂದಿತ ಅಧರಗಳಿಗೆ ಅರ್ಪಣೆಗೈಯಲು ಚಂಚಲಗೊಳ್ಳತೊಡಗಿದಳು ಪೃಥಾ.

ತಡೆಗಟ್ಟುತ್ತಾ ನುಡಿದಳು ಧಾತ್ರೇಯಿಕಾ—ಬೇಡ, ಹತ್ತಿರ ಹೋಗದಿರು ಪೃಥಾ, ಶಾಂತಳಾಗು.

ಶಾಂತಳಾದಳು ಪೃಥಾ.

ಧಾತ್ರೇಯಿಕೆಯ ಕಣ್ಣುಗಳು ನೀರು ತುಂಬತೊಡಗಿದುವು. ಇಷ್ಟು ದಿನಗಳ ನಂತರ ಪೃಥಾ ತನ್ನ ನಾರೀಜೀವನದ ಬಯಕೆಯ ಒಂದಿಷ್ಟು ಅರ್ಥವನ್ನು ತಿಳಿದುಕೊಳ್ಳಬಲ್ಲವಳಾಗಿರುವುದನ್ನು ಕಂಡು ವಿಸ್ಮಿತಳಾದಳು ಧಾತ್ರೇಯಿಕಾ. ಇಂದು ಪೃಥಾ ನಿರ್ಲಜ್ಜ ಕೌತುಕಿನಿಯಲ್ಲ; ನಿರಾಂತ್ಯದ ಮಡಿಲಿನ ಅಂಧಕಾರದಲ್ಲಿ ಕುಳಿತ ಮಮತೆಯ ಮಾತೆ. ಅವಳ ಶೂನ್ಯ ವಕ್ಷದ ಯಾತನೆ ಅಶ್ರುಸ್ರೋತವಾಗಿ ಜಲಪದ್ಮವನದಲ್ಲಿ ಸುರಿಯುತ್ತಲಿದೆ.

ಬಹಳ ಕ್ಷಣಗಳ ವರೆಗೆ ನೀರವವಾಗಿ ಕುಳಿತಳು ಪೃಥಾ. ಅನಂತರ ಏಕೋ ಉತ್ಕರ್ಣಳಾಗಿ ದೂರಾಂತ್ಯದಲ್ಲಿ ಮಿಲನವಾಗುವ ಜಲಸಿಧಿಯ ಕೋಲಾಹಲದ ನಿನಾದವನ್ನು ಆಲಿಸಿ ಕೇಳತೊಡಗಿದಳು.

—ಕೇಳುತ್ತಿದೆಯಲ್ಲವೆ ಧಾತ್ರೇಯಿಕಾ?

ಪೃಥಾಳ ಪ್ರಶ್ನೆಯಿಂದ ಧಾತ್ರೇಯಿಕೆ ವಿಸ್ಮಿತಳಾದಳು—ಏನು ಪೃಥಾ?

ಪೃಥಾ—ನೂಪುರದ ಶಬ್ದ; ಈ ಪೃಥ್ವಿಯ ಯಾವುದೋ ಮಾನವಗೃಹದ ಅಂಗಣದಲ್ಲಿ, ಕ್ರೀಡಾ ಚಂಚಲ ಶಿಶುವಿನ ಆತ್ಮಿತ್ವ. ಓಡುವ ಆಟ, ಅದರ ಪುಟ್ಟ ಪಾದಗಳ ನೂಪುರಗಳ ಝಣತ್ಕಾರದಿಂದ ಆ ಅಂಗಣದ ವಾಯು ಮಧುರಗೊಂಡಿದೆ. ಆದರೆ ಅದು ನನ್ನ ಮನೆಯಂಗಣವಲ್ಲ!

ಉತ್ತರಿಸಲಿಲ್ಲ ಧಾತ್ರೇಯಿಕಾ.

ದೂರಾಂತರವವರಗಿರುವ ಘನ ಅಂಧಕಾರದತ್ತ ಸ್ಥಿರ ದೃಷ್ಟಿಯಿಂದ ಏನನ್ನೋ ನೋಡುತ್ತಲಿದ್ದಳು ಪೃಥಾ, ಧಾತ್ರೇಯಿಕಾ ನುಡಿದಳು—ಇಂತು ಏನನ್ನು ನೋಡುತ್ತಲಿರುವಿ ಪೃಥಾ?

ಪೃಥಾ—ಈ ಪೃಥ್ವಿಯ ಯಾವ ಗೃಹದಲ್ಲಿ, ಪ್ರಾಸಾದದಲ್ಲಿ, ಅಥವಾ ಕುಟೀರದಲ್ಲಿ, ನಾರಿಯೋರ್ವಳ ತೊಡೆಯ ಮೇಲೆ ಅಪರಿಚಿತವಾದ—ಕೈಜಾಚಿದೊಡನೆ ಬರುವ ಶಿಶು ಬಳೆದು ದೊಡ್ಡದಾದದ್ದನ್ನೂ, ಆ ಶಿಶು ಅವಳ ಕೊರಳನ್ನು ಎರಡೂ ಕೈಗಳಿಂದ ಬಳಸಿ ಜೋತುಬಿದ್ದು ಅವಳನ್ನು "ಅವ್ವಾ" ಎಂದು ಕೂಗುತ್ತಲಿರುವುದನ್ನೂ ನೋಡುತ್ತಿದ್ದೇನೆ. ಅವಳು ತಾಯಿ; ಆದರೆ ನಾನಲ್ಲ ಧಾತ್ರೇಯಿಕಾ!

ಧಾತ್ರೇಯಿಕೆಯ ಬಾಷ್ಪ ತುಂಬಿದ ನಯನದ್ವಯಗಳು ಎವೆ
ಯಿಕ್ಕದೆ ಪೃಥಾಳ ಮುಖವನ್ನು ನಿಟ್ಟಿಸುತ್ತಿದ್ದುವು.

ಒಮ್ಮೆಗೇ ಚಮಕಿತಳಾದಳು ಪೃಥಾ. ಧಾತ್ರೇಯಿಕಾ ಭಯಾರ್ತ
ರವದಲ್ಲಿ ಕೇಳಿದಳು—ಏನಾಯಿತು ಪೃಥಾ?

ಪೃಥಾ—ಉತ್ಸವದ ಶಂಖಧ್ವನಿಯಾಗುತ್ತಲಿದೆ ಧಾತ್ರೇ-
ಯಿಕಾ! ಇಲ್ಲಿಂದ ಬಹುದೂರದಲ್ಲಿ, ಬಹುವರ್ಷಗಳ ನಂತರ, ಈ
ರಾತ್ರಿ ಕಳೆದು ಬೆಳಗಾದಂತಿದೆ. ಸುಂದರ ತನುವಿನ ಒರ್ವ ಯುವಕನು
ವರನ ವೇಷದಲ್ಲಿ ತನ್ನ ಚಂದ್ರಮುಖಿ ವಧುವನ್ನು ಕರೆದುಕೊಂಡು,
ಮಂಗಳಕಲಶವನ್ನು ಹಿಡಿದು ನಿಂತಿರುವ ಒಂದು ಭವನದ ದ್ವಾರದಲ್ಲಿ
ಬಂದು ನಿಂತಿದ್ದಾನೆ, ಅಕ್ಷತೆಯನ್ನು ಕೈಯಲ್ಲಿ ಹಿಡಿದು ಮಾತೆ-
ಯರ್ವಳು ಆಗಮಿಸಿ ವಧೂ-ವರರನ್ನು ಆಶೀರ್ವದಿಸುತ್ತಿದ್ದಾಳೆ.
ಪುತ್ರ ಶಿರಬಾಗಿ ಮಾತೆಯ ಪಾದಧೂಲಿಯನ್ನು ತೆಗೆದುಕೊಂಡು ಶಿರ-
ದಲ್ಲಿ ಧರಿಸಿಕೊಳ್ಳುತ್ತಿದ್ದಾನೆ. ಸುಂದರ ಹಾಸದಿಂದ ಪ್ರಸನ್ನವಾಗುತ್ತ
ಲಿದೆ ಮಾತೆಯ ಆನನ. ಅವಳು ತಾಯಿ; ಆದರೆ ನಾನು ಅಲ್ಲ
ಧಾತ್ರೇಯಿಕಾ!

ಪೃಥಾಳ ಸಜಲದೃಷ್ಟಿ ಕೆಲವು ಕ್ಷಣದ ವರೆಗೆ ಉಜ್ವಲ
ಗೊಂಡಂತೆ ಕಂಡಿತು. ಧಾತ್ರೇಯಿಕಾ ನಿಂದಾಸ್ವರದಲ್ಲಿ ಕೇಳಿದಳು—
ಇಗಲೂ ದೂರಕ್ಕೆ ನಿಟ್ಟಿಸುತ್ತಾ ವ್ಯರ್ಥವಾಗಿ ಮತ್ರೇನನ್ನು ನೋಡುತ್ತ
ರುವಿ ಪೃಥಾ?

ಪೃಥಾ ಹೇಳಿದಳು—ಒಂದು ನಗರದಲ್ಲಿ ದೀಪಾವಳಿಯ ಶೋಭೆ
ಸಾಗೃತಗೊಂಡಿರುವುದನ್ನು ಕಾಣುತ್ತಿದ್ದೇನೆ ಧಾತ್ರೇಯಿಕಾ. ಉತ್ಸ
ವದ ಹರ್ಷಸಂಭ್ರಮಗಳಿಂದ ತುಂಬಿ ತುಳುಕುವ ಪಥಿಕಜನರ ಮಧ್ಯ
ದಿಂದ ಯಾರು ಬರುತ್ತಲಿದ್ದಾರೆ, ನೋಡು ಧಾತ್ರೇಯಿಕಾ!
ತೇಜೋಗರ್ವಿತನಾದ ಒರ್ವ ಶತ್ರುಂಜಯ, ತನ್ನ ವೀರ ರಣಯಾತ್ರೆ
ಯನ್ನು ಮುಗಿಸಿಕೊಂಡು ಮನೆಗೆ ಮರಳಿ ಬಂದಿದ್ದಾನೆ; ಪುತ್ರಗರ್ವ
ದಿಂದ ಗೌರವಾನ್ವಿತಳಾದ ಮಾತೆ ಬಂದು ಆ ವೀರಪುತ್ರನ ಲಲಾಟ
ದಲ್ಲಿ ಜಯತಿಲಕವನ್ನು ಚಿತ್ರಿಸುತ್ತಲಿದ್ದಾಳೆ. ಅವಳು ವೀರಮಾತೆ;
ಆದರೆ ನಾನು ಅಲ್ಲ ಧಾತ್ರೇಯಿಕಾ!

ಸುಮ್ಮನಾದಳು ಪೃಥಾ. ನಿಶ್ಶಬ್ದ ಅಂಧಕಾರದ ಗಾಳಿ ಹಠಾ-
ತ್ತಾಗಿ ನಿದ್ರಾಭಂಗಿತ ಪಕ್ಷಿಯೊಂದರ ಕೂಗಿಗೆ ಮಾರುತ್ತರವಿತ್ತು
ರೋಮಾಂಚನಗೊಳಿಸಿತು. ಧಾತ್ರೇಯಿಕಾ ವ್ಯಸ್ತಭಾವದಲ್ಲಿ ನುಡಿ
ದಳು—ಬೆಳಗಾಗತೊಡಗಿತು ಪೃಥಾ.

ಧಾತ್ರೇಯಿಕೆಯ ಕೈಗಳನ್ನು ಅತ್ತ ದಬ್ಬಿ ಪೃಥಾ ತನ್ನ ಎರಡೂ
ಕೈಗಳಿಂದ ಎರಡೂ ಕಣ್ಣುಗಳನ್ನು ಮುಚ್ಚಿಕೊಂಡಳು. ನೌಕೆಯ
ಹಗ್ಗವನ್ನು ಹರಿದಳು ಧಾತ್ರೇಯಿಕಾ. ಪರಿಚಯಹೀನ ಶಿಶುವೊಂದರ
ಜೀವನ ಸ್ಪಂದನವನ್ನು ಹೊತ್ತ ಒಂದು ತರಣಿ, ನಿಶಾಂತ್ಯದ ಮಡಲಿ
ನಲ್ಲಿ ಹರಿವ ನದೀಸ್ರೋತದೊಂದಿಗೆ ದೂರಾಂತರಕ್ಕೆ ಹೊರಟು
ಹೋಯಿತು.

ಧಾತ್ರೇಯಿಕೆಯ ನೆರಳನ್ನನುಸರಿಸಿ, ತನ್ನ ದುರ್ಬಲದೇಹವನ್ನು
ಹೊತ್ತುಕೊಂಡು, ಮೆಲ್ಲ ಮೆಲ್ಲನೆ ರಾಜಪ್ರಾಸಾದದತ್ತ ಮರಳಿ
ಹೋಗುತ್ತಲಿದ್ದಳು ಪೃಥಾ. ಪೂರ್ವದಿಗಂತದಲ್ಲಿ ಆಗ ನವಾರುಣನ
ಉದಯದ ಕಾಂತಿ ನಯನ ಮನೋಹರ ಶೋಭೆಯನ್ನು ಪ್ರಸರಿಸುತ್ತ
ಲಿತ್ತು. ಪೃಥಾ ಮುಹೂರ್ತಮಾತ್ರಕ್ಕೆ ಅತ್ತ ಕಡೆಯೊಮ್ಮೆ ಮಾತ್ರ
ನೋಡಿ, ಯಾವುದೋ ಅಭಿಮಾನದಿಂದ ತುಂಬಿ ಶುಳುಕಿ ಮುಖ
ತಿರುಗಿಸಿದಳು, ಇದೇ ಅಲ್ಲವೇ ಆ ಭಯಂಕರ ತಪ್ಪನ್ನು ಗೈದ ಸುಂದರ
ಸಮಯ! ಇದೇ ಕಾಲದಲ್ಲಿಯೇ ಆಲ್ಲವೆ ಮನ ಯಾರನ್ನು ಬಯಸಿತೋ
ಅವನನ್ನೇ ಗುಪ್ತವಾಗಿ ಹತ್ತಿರಕ್ಕೆ ಪೃಥಾ ಕರೆದದ್ದು! ಅದರ ಪರಿ-
ಣಾಮವೇ ಈ ನಿಶ್ಶಬ್ದ ಕ್ರಂದನದ ಭಾರ. ಯಾವಜ್ಜೀವವೂ ಅತ್ಯಂತ
ಎಚ್ಚರಿಕೆಯಿಂದ, ಯಾರಿಗೂ ಕೇಳಿಸದಂತೆ, ಗುಪ್ತವಾಗಿ ಕ್ರಂದನ
ಭಾರವನ್ನು ಹೊತ್ತು ತಿರುಗಬೇಕವಳು.

ಪೃಥಾ ನುಡಿದಳು—ಅರಿತುಕೊಂಡೆ ಧಾತ್ರೇಯಿಕಾ!

ಧಾತ್ರೇಯಿಕಾ—ಏನು?

ಪೃಥಾ—ಋಷಿ ದುರ್ವಾಸರು ವರವನ್ನಲ್ಲ, ಅಭಿಶಾಪವನ್ನಿತ್ತಿ-
ದ್ದಾರೆ ನನಗೆ!

"ಬರಲಿರುವ ಹೊಸವರ್ಷದಲ್ಲಿ
"ಜಯಂತಿಯ"
ಚಂದಾದಾರರ ಬಳಗವು ಬೆಳೆಯಲಿ!

ಭೂಕಂಪ

'ಆನಂದಕಂದ'

೧

ಗುಡುಗುತಲಿದೆ, ಗುಡುಗುತಲಿದೆ,
ಭೂಮಾತೆಯ ಬಸಿರೊಳೇನೊ ಗುಡುಗುತಲಿದೆ!
ನಡುಗುತಲಿದೆ, ನಡುಗುತಲಿದೆ,
ಪೊಡವಿಯಮ್ಮನ ಮೈ ಗಡಗಡ ನಡುಗುತಲಿದೆ
ಶಾಂತಿಸಾಗರದಲ್ಲಿಯೂ ಅಶಾಂತಿಯ ತೊತ್ತುಳಿ;
ಕಡೆಗಾಲದ ಕುಣಿತ ನಡೆಯಿಸಿದೆ ಪೆರ್ದೆರೆಯೋಳಿ!
ನಾಡುಗಳಲಿ ನುಗ್ಗುತಿದೆ; ಬೀಡುಗಳನು ಜಗ್ಗುತಿದೆ.

೨

ಅದೇಸು ಜನ ಬಾಳ್ವಾಸೆಯ ಮನುಜರಿಗೆ ಸಾವು,
ಅದೇಸು ಜನ ತಾಯ್ತಂದೆಗಿಳ ಕರುಳಿಂಗೆ ನೋವು!
ಕಿರುಗೂಸುಗಳ ಮರಣವೆನಿತು—
ಹಿರಿಯರ ಮೈ-ಮನಗಳಿಗೆ ಹುಣ್ಣೆನಿತು!
ತುರು-ಕರುಗಳಿಗೂ ಸಾವು,
ಮರ-ಬಳ್ಳಿಗಳಿಗೂ ಬದುಕಲು ಇಲ್ಲ ಠಾವು!
ಮಂದಿರಗಳಿಂದ ತುಂಬಿದ ನಗರ ಮಸಣವಾಗಿವೆ;
ಸೌಂದರ್ಯಕೆ ನೆಲೆಯಾಗಿದ್ದ ಹಳ್ಳಿ ಹಾಳ್ಬೆಲವಾಗಿವೆ!

೩

ಓ, ಕೇಳಿದವರ ಕರುಳನಿರಿವ ಸರ್ತಮಾನ—
ಅಬ್ಬಾ, ಎಂತಹ ರೌದ್ರ ಭಯಾನಕ ದರ್ಶನ!
ಭೂಕಂಪ, ಭೂಕಂಪ, ಭೂಕಂಪವಂತೆ,
ಸಂಜೆಯಲಿ ಸೊಗವಿದ್ದು ಉಂಡು ಮಲಗಿದ ಮುಂದಿ
ಮರುದಿನದ ಮುಂಜಾವ ಕಾಣಲಿಲ್ಲವಂತೆ!
ತಾಯ ಮೊಲೆಯನು ಕುಡಿಯುತಿದ್ದ ಹಸುಳಿಗಳೆಲ್ಲ
ಹಾಗೆಯೇ ಹರಣವನು ತೊರೆದಿದ್ದುವಂತೆ!
ಎಲ್ಲೆಲ್ಲಿಯೂ ಆಕ್ರಂದನ—
ಎಲ್ಲೆಡೆಗೂ ವಿಹ್ವಲನ—ರೋದನ!

೪

ಭೂಕಂಪ, ಭೂಕಂಪ! ಏಕೆ ಭೂಮಿಗೆ ಕಂಪ?
ಎಲವೆಲವೊ ವಿಜ್ಞಾನಿ, ಎಲ್ಲಿ ಕುಳಿತಿಹೆ ನೀನು?
ನೋಡುತಿಲ್ಲವೆ ನಿಸರ್ಗದ ಮಹಾಕ್ಷೋಭೆಯನು?
ಅಣುಶಕ್ತಿ ಸೃಷ್ಟಿಸಿದೆ, ಗ್ರಹಗಳನು ಹುಟ್ಟಿಸಿದೆ,
ಚಂದ್ರಲೋಕದಿ ಮನೆಯ ಕಟ್ಟಿ ಬಾಳುವೆನೆಂಬ
ನಂಬುಗೆಯು ನಿನಗಿಹುದು—
ಅದೊಡೀ ಭೂಕಂಪದಿಂ ನಿನ್ನ ಭೂಮಿ ಹಾಳಾಗುವುದು
ಕಾಣುತಿಲ್ಲವೆ? ಇದಕೆ ಏನೆಂಬೆಯೆಂದು?
'ಚಂದ್ರಲೋಕಕೆ ನಡೆವ ನನಗೆ ಭೂಮಿಯ ಬಗೆಗೆ
ಚಿಂತೆಯೇತಕೆ ಬೇಕು' ಎಂದೆಂಬೆಯೇನು?

೫

ರಾಷ್ಟ್ರ-ರಾಷ್ಟ್ರದ ರಾಜಕಾರ್ಯವಿದರೇ ಹೇಳಿ
ನಾವವ 'ಈರುಂ' ಇದನು ತಡೆಯಬಹುದು?
ಯಾವ ಅಧಿಕಾರ ದೊರೆತರೆ ಇದನು ನಿಲಿಸುವಿರಿ?
ಈ ಧರಣಿಯೊಡಲುರಿಯ ಹೇಗೆ ಕಳೆಯುವಿರಿ?
ಶೃಂಗಸಭೆ ಯಾವುದನು ಎಲ್ಲಿ ಸೇರಿಸಲಿಹಿರಿ?
ಎಲ್ಲಿವೆ ಎಲ್ಲಿವೆ ಪೇಳ್ವೆಯಾ ಜೋಕುಮಾರ,
ಭೂಕಂಪವ ನಿಲಿಸಬಲ್ಲ ಸಾರ್ವಭೌಮಾಧಿಕಾರ-
ಎಲ್ಲಿರುವುದು ಹೇಳಂತಹ ರಾಜಕೀಯ ಚಮತ್ಕಾರ!

೬

ಪಾತಕದ ಹೊರೆಯನ್ನು ತಾಳಲಾರದೆ ಭೂಮಿ
ನಡುಗುವುದು-ಎಂಬುದಿದು ಭಾವುಕರ ಕಲ್ಪನೆಯು!
ಅಹುದೇನು, ಪಾತಕದ ಹೊರೆಯಿಂದು ಹೆಚ್ಚಿಹುದೆ?
ಪಾತಕವು ಎಂದರೇನದು, ರೂಪವೆಂತಹದದಕೆ?
ಏಕೆ ಹೆಚ್ಚಾಗಿಹುದು, ಎಲ್ಲಿ ಹೆಚ್ಚಾಗಿಹುದು?
ಅದನು ಅಳೆಯುವ ಮಾನದ್ರೋಣ ಎಲ್ಲಿಹುದು?
ಅದನಳೆಯಬಲ್ಲ ವಿಜ್ಞಾನಿಯೆಲ್ಲಿಹನು!
ಓ, ಭೂಕಂಪ, ಭೂಕಂಪ, ಭೂಕಂಪ!

[ಸಣ್ಣಕತೆ] [ಸಣ್ಣಕತೆ]

"ಪಮ್ಮಾ"

ಲೇ.— ಗಂಗಾತನಯ

ಪಮ್ಮಾ ಕುರೂಪಿಯಾದ ಬಡಹುಡುಗಿಯೊಬ್ಬಳಾಗಿದ್ದರೆ, ಅಲ್ಲಿದ್ದವರಲ್ಲಿ ಒಬ್ಬರಾದರೂ ಸಹಾನುಭೂತಿಯಿಂದ ಮಾತನಾಡುತ್ತಿದ್ದರೋ ಇಲ್ಲವೋ! ನೋಡಲು ಚೆಲುವೆಯಾಗಿದ್ದ — ಒಳ್ಳೆಯ ಉಡಿಗೆ-ತೊಡಿಗೆಗಳಲ್ಲಿದ್ದ ಆ ಹುಡುಗಿಯನ್ನು ಕಂಡಾಗ, ಎಷ್ಟು ಜನರಲ್ಲಿ ಸಹಾನುಭೂತಿ ?

"ಭುಂಯೀ ssss"

ಮುನ್ಸೂಚನೆ ಕೊಟ್ಟಿತು ಕಲ್ಯಾಣಕ್ಕೆ ಹೊರಡುವ ಗಾಡಿ.

"ಸಿರ್‌ರ್"

ಗಾರ್ಡ ವ್ಹಿಸಲ್ ಊದಿದ.

'ಪಟ್ ಪಟ್ ಪಟ್ ಪಟ್' — 'ಟಕ್ ಟಕ್ ಟಕ್ ಟಕ್' ಓಡುವ ಬೂಟಿನ ಸಬ್ದು.

'ಚಪ್ ಛಪ್ ಚಪ್ ಛಪ್' ಓಡುವ ಚಪ್ಪಲಿಗಳ ಸದ್ದು.

'ಗಿಲ್‌ಗಿಲಲ್ ಗಿಲ್‌ಗಿಲಲ್ ಚಿಣ್ ಚಿಣ್' ಬಳೆಗಳ ನಾದ.

"ಭುಂಯೀ sss ಭುಂಯೀ sss"

ಕೊನೆಯ ಕೂಗು ಎಲ್ಲರಿಗೂ ಕೇಳಿಸುವಂತೆ ಕೂಗಿ ತಾನು ಹೊರಡುವುದಾಗಿ ಜನರಿಗೆ ತಿಳಿಸಿ ಹೊರಟಿತು. ಮತ್ತೆ—

'ಪಟ್ ಪಟ್ – ಪಟ್ ಪಟ್' 'ಟಕ್ ಟಕ್ ಟಕ್ ಟಕ್'

'ಚಪ್ ಛಪ್ ಚಪ್ ಛಪ್'

"ಅರೆ ಚಢೋ ಮತ್, ಚಢೋ ಮತ್, ಕ್ಯೋಂ ಜಾನಸರ ಖೇಲತೇ ಹೋ?" ಒಳಗಿನ ಸಹಾನುಭೂತಿಗಳ ಧ್ವನಿ-ಕೂಗು, ಗಾಡಿ ಹತ್ತುವವರ ಕರ್ಣಪಟಲಗಳಿಗೆ ಅಪ್ಪಳಿಸುತ್ತಿದ್ದುವು. ಕರ್ಣಪಟಲಗಳಿಗೆ ಅಪ್ಪಳಿಸಿ ಜ್ಞಾನತಂತುವಿನಿಂದ ಮಿದುಳಿಗೆ ಸುದ್ದಿ ಮುಟ್ಟಿಸಿದರೂ ಕೈ ಓಡಿ ಗಾಡಿಯ ಬಾರ್ ಹಿಡಿದುವು. ಕಾಲು ಚಂಗನೆ ಜಿಗಿದು ಫುಟ್‌ಬೋರ್ಡಿನ ಮೇಲೆ ಒಂದಂಗುಲ ಸ್ಥಾನ ಆಕ್ರಮಿಸಿದುವು. ಮೊದಲೇ ಮುಂಬಯಿಯ ಬೇಸಗೆಯ ಧಗೆಯಿಂದ ಮೈಯ್ಯೆಲ್ಲ ಬೆವರಿನ ಸ್ನಾನ ಮಾಡಿತ್ತು. ಎಷ್ಟು ಒರೆಸಿಕೊಂಡರೂ ಒರತೆಯ ನೀರಿನಂತೆ ಬೆವರು ಹನಿಹನಿಯಾಗಿ ಬರುತ್ತಿತ್ತು. ಓಡಿದ್ದರಿಂದ ಮತ್ತಷ್ಟೂ ಹನಿಗೆ ಹನಿ ಕೂಡಿ ಹಳ್ಳವಾದಂತೆ ಹರಿದು ಬಟ್ಟೆ ತೋಯಿಸುತ್ತಿತ್ತು. ಬಾಗಿಲಿನ ಹ್ಯಾಂಡಲ್ ಹಿಡಿದು ನೋಲೆ ನೋಡಿದೆ.

"Please don't travel on Foot-board" ಎಂಬ ಬೋರ್ಡು ಕಣ್ಣಿಗೆ ಬಿತ್ತು.

ಬೆವರಿನ ಹನಿಯೊರೆಸುವಂತೆ ನಿರ್ಲಕ್ಷ್ಯದಿಂದ ಓದಿ ಸುಮ್ಮನಾದೆ.

ಮುಂಬಯಿಯಲ್ಲಿ ಹೆಚ್ಚಾಗಿ Foot-Board ಪ್ರಯಾಸವೇ ಪ್ರವಾಸ.

ಒಳಗಿನಿಂದ ಯಾವಾಗಲೂ 'House Full' ಶಬ್ದಗಳೇ ಕೇಳಿ ಬರುತ್ತವೆ.

ಕೆಲವೆಡೆ Window-shutters close ಮಾಡಿರುತ್ತಾರೆ.

ಕೆಲವೆಡೆ ಇಸ್ಪೇಟ್ ಪ್ರೇಮಿಗಳು ತಿರುಗುವ ಪಂಖಾ ಬಂದು ಮಾಡಿರುತ್ತಾರೆ.

ಹಾಗೂ ಇವೆಲ್ಲಕ್ಕೂ ಸೆಲ್ಫಟ್ಟು ಮೈಗೆ ಮೈ ತಿಕ್ಕಾಟ.

ಒಬ್ಬರ ಬೆವರು ಮತ್ತೊಬ್ಬರ ಬಟ್ಟೆಗೆ.

ಹೊರಗೆ ಬಿಸಿಲಿನ ಝಳ ತಾಗುತ್ತಿದ್ದರೂ, ಬೆವರಿನಿಂದ ತೊಯ್ದು ಮೈಗೆ ಗಾಳಿ ತಣ್ಣಗೆ ಹತ್ತಿ ಅಷ್ಟೇ ತಾತ್ಪರ್ತಿಕ ಅಲ್ಲಾದಗೊಳಿಸುತ್ತಿತ್ತು.

ಘಾಟಕೋಪರ್ ಸ್ಟೇಶನ್ನಿನವರೆಗೂ ಇಷ್ಟು ಗದ್ದಲವಿದ್ದದ್ದೇ.

"ಬಂಬಯಿಕೇ ಜೆಂದಗೀ ಫುಟ್‌ಬೋರ್ಡಪರ ಗುಜರತೀ ಹೈ. ಯಹ ಗಾಡೀ ಚುಕೇ ತೋ ಚಾಲೀಸ್ ಪಚಾಸ್ ಮಿನಿಟ್ ತಕ್ ಗಾಡೀ ನಹೀಂ" ಎಂದು ನನ್ನ ಮುಂಬಯಿ ಸೇಟಿಯ ಒಂದೀ ಭಾಷೆ (Market Hindi) ಯಲ್ಲಿ ಹೇಳಿದೆ.

ನನ್ನ ಬದಿಗೆ ನಿಂತ ಪ್ರವಾಸಿ ಸಹ ಹೌದೆಂದು ಹಲ್ಲು ತೆರೆದು ನಕ್ಕು ಹೇಳಿದ.

ದಾಕ್ಷಿಣ್ಯಕ್ಕಾಗಿಯೋ ಅಥವಾ ತಾನೂ ಅಂಥವನೇ ಎಂದು ಹೇಳಲಿಕ್ಕೋ— ಯಾರಿಗೆ ಗೊತ್ತು ?

"ಅಂದರ್ ಚಲೋ, ಅಂದರ್ ಚಲೋ accident ಹೋಗಯಾ ತೋ ಆಧಾ ಘಂಟೇತಕ್ ಗಾಡೀ ರುಕೇಗಿ" ಸ್ವಾರ್ಥಿ ಮುಂಬಯಿ ಪ್ರವಾಸಿ ಹೇಳಿದ. Accident ನಿಂದ ಸತ್ತರೂ ಅಡ್ಡಿಯಿಲ್ಲ; ಗಾಡಿ ತಡಮಾಡಿದರೆ ತನಗೆ ತೊಂದರೆ ಎನ್ನುವ ಅರ್ಥದಲ್ಲಿ.

ಸ್ವಲ್ಪ ಸ್ಥಳವಾಗಿತ್ತು. ಒಳಗೆ ಹಣಿಕಿ ನೋಡಿದೆ; ಎಲ್ಲರೂ ಒಂದೆಡೆ ನೆರೆದಿದ್ದರು. Centre of attraction ಏನಿತ್ತೋ ಕಾಣಲಿಲ್ಲ.

ಮುಂಬಯಿ ನಾಗರಿಕರಿಗೆ ಇಂತಹ ಕುತೂಹಲ, ಸಹಾನುಭೂತಿ ಬಹಳ.

ಸ್ವಲ್ಪ ಮತ್ತಷ್ಟೂ ಒಳಗೆ ಸರಿದು ನೋಡಿದೆ;

ನಸುಗೆಂಪು ಬಣ್ಣದ ಏಳೆಂಟು ವರುಷಗಳ ಹುಡುಗಿ ನಿಂತಿತ್ತು. ಕೈಯ್ಯಲ್ಲಿ ಕೆಲವೊಂದು ಕಾಗದದ ಪುಡಿಕೆ ಹಿಡಿದಿದ್ದಳು.

ಮುಂಬಯಿಯ ಕೃತ್ರಿಮಸೌಂದರ್ಯವನ್ನು ಆ ಹುಡುಗಿ ಬಾಡಿಗೆಗೆ ತಂದಿದ್ದಿಲ್ಲ. ನೈಸರ್ಗಿಕ ಚೆಲುವು ಸೌಂದರ್ಯ ನಲಿಯುತ್ತಿತ್ತು. ಆದರೆ ಜನರೆಲ್ಲ ಸುತ್ತು ನೆರೆದದ್ದರಿಂದ, ಇದ್ದ ನಲಿವು ಒಡಿಹೋಗಿ ಸ್ವಲ್ಪ ಕಂಪಿಸುತ್ತಿದ್ದಳು.

ಸಿಳಿಸಿಳಿ ಕಣ್ಣು ಬಿಡುತ್ತ ಎದುರಿಗೆ ನೋಡುತ್ತಿತ್ತು ಹುಡುಗಿ.

ಹಸಿರು ಬಣ್ಣದ ಸ್ಕೋಲಕಾ, ಬಿಳಿ ಬಣ್ಣದ ಪರಕಾರ ತೊಟ್ಟಿದ್ದಳು.

ಮೋಡಕವಿದು ಕವ್ಚಾದ ಆಕಾಶದಲ್ಲಿ ನಸುಗೆಂಪಾಗಿ ಕಾಣುವ ಮುಂದ ಸೂರ್ಯನಂತೆ ನಸುಗೆಂಪಾದ ಹಣೆಯ ಮೇಲೆ ಕುಂಕುಮ ತಿಲಕ ಒಪ್ಪುತ್ತಿತ್ತು.

ಬಣ್ಣ ಕಪ್ಪಿದ್ದರೂ ಸುಂದರಿಯಾಗಿದ್ದಳು; ಸಿಳಿಸಿಳಿ ಬಡಿಯುವ ಕಣ್ಣು, ಸ್ವಲ್ಪ ಉದ್ದಾಗಿದ್ದ ಮುಖಕ್ಕೆ ತಕ್ಕ ಮಾಟ ಮೂಗು, ಮೂಗಿ-

ನಲ್ಲಿ ಹೊಳೆಯುವ ಮೂಗ್ಬೊಟ್ಟು, ನಿಜ ಬಣ್ಣಕ್ಕಿಂತ ಸ್ವಲ್ಪ ಕೆಂಪಾಗಿದ್ದ ತುಟಿ– ಇವೆಲ್ಲವುಗಳಿಂದ ಮುದ್ದು ಬರುವಂತೆ ಕಾಣುತ್ತಿದ್ದಳು ಹುಡುಗಿ.

ಅವಳ ಸುತ್ತು ನೆರೆದಿದ್ದ ಪ್ರವಾಸಿಗರೆಲ್ಲರೂ ಅವಳನ್ನು ಒಂದು ಕ್ಷಣ ನೋಡಿ, ತಮ್ಮತಮ್ಮಲ್ಲಿ ಮಾತಾಡಿಕೊಳ್ಳುತ್ತಿದ್ದರು :

" ಕುಛ ಬೋಲತೀ ಭೀ ನಹೀಂ, ಬೈಠತೀ ಭೀ ನಹೀಂ. "

" ದೇಖನೇಕೋ ತೋ ಮದ್ರಾಸೀ ದಿಖತೀ ಹೈ. "

" ಕೌನಸೀ ಭಾಷಾ ಬೋಲತೀ ಭಗವಾನ್ ಜಾನೇ ! "

" ಅರೆ, ಕೌನಸಿ ಕ್ಯಾ ರಂಡುಗುಂಡು ಬೋಲತೀ ಹೋಗಿ. "

" ಯಹ ತೋ ಮುಸೀಬತ ಹೈ " ಎಂದು ಮತ್ತೊಬ್ಬ ಬಹಳಷ್ಟು ಸಹಾನುಭೂತಿ ಹೊರಸೂಸುತ್ತಿದ್ದ.

ಅವರೆಲ್ಲರ ಅಷ್ಟು ಸಹಾನುಭೂತಿ ಹೊರಸೂಸುವುದನ್ನು ಕಂಡೇ, ಹುಡುಗಿ ಅಷ್ಟು ಹೆದರಿಕೊಂಡಂತೆ ಕಾಣುತ್ತಿತ್ತು.

" ಬಂಬಯೀಸೇ ಚಢೀ ಹೈ " ಎಂದ ಕಿಡಕಿಯ ಹತ್ತಿರ ಕಾಲು ಜಾಚಿ ಕುಳಿತವನೊಬ್ಬ.

" ಕಹಾಂ ಜಾನೇಕಾ ಹೈ ? " ಎಂದು ಪುಲ್ಲನೆ ಅಕ್ಕರೆಯಿಂದ ಕೇಳಿದ ನಡುಹರೆಯದ ತರುಣ.

" ..... "

" ಡರೋ ಮತ್ ಡರೋ ಮತ್, ಬೋಲೋ ಕಹಾ ಜಾನೇವಾಲೀ ಹೈ ? " ಮತ್ತಷ್ಟು ರಮಿಸಿ ಕೇಳಿದ.

" ..... " ಪ್ರತ್ಯುತ್ತರವಾಗಿ ಪಿಳಿ ಪಿಳಿ ಕಣ್ಣು ಬಿಟ್ಟು ತೋಡುತ್ತಿತ್ತು ! ಹುಡುಗಿ.

"ತುಮುಚೀ ಮರಾಠೀ ಮೇ ವಿಚಾರೋ " ಎಂದು ಆತ ಮಧ್ಯವಯಸ್ಸಿನ ಮಹಾರಾಷ್ಟ್ರದ ಮುದುಕನಿಗೆ ಹೇಳಿದ.

" ಕಾಯ್ ಮುಲೀ, ಕುಠೇ ಜಾಣಾರ್ ಆಹೇಸ್ ? ಸಾಂಗ ಸಾಂಗ; ಘಾಬರೂ ನಕೊ, ಸಾಂಗ" ಕುಳಿತಲ್ಲಿಂದ ಎದ್ದು ಬಂದು ಕೇಳಿದನಾತ.

"....." ಮೊದಲನೆಯವ ಪಡೆದ ಮೂಕೋತ್ತರವನ್ನೇ ಈತನೂ ಪಡೆದ.

" ಘಾಬರಲೀಸ ಕಾಯ್ ? ಘಾಬರೂ ನಕೊ ಸಾಂಗ " ಎಂದು ರಮಿಸಿ ಕೇಳಿದ.

" ....." ಮೌನೋತ್ತರ; ಬದಲು ಪುಡಿಕೆ ಬಿಗಿ ಹಿಡಿದಳು.

ಅವಳ ನಿರುತ್ತರ ಕಂಡು,

"ಇಧರ್ ಕೋಯೀ ಮದರಾಸೀ ಹೈ ಕ್ಯಾ? ಸ್ಸೋಧೋ ತುಮ್ಹಾರೀ ಭಾಷಾಮೆ. ಬಿಚಾರಿ ಲಡಕೀ ರಸ್ತಾ ಭೂಲ ಗಯೀ ಹೋಗಿ " ಎಂದು ಕುಳಿತ ಜನರಿಗೆ ಹೇಳಿದ.

" ಏನಮ್ಮಾ ಎಲ್ಲಿಗೆ ಹೋಗಬೇಕಾದ್ದು ? ಹೇಳು, ಪೆದರಬೇಡ ಹೇಳು " ಎಂದು ನೈಸೂರಿನವ.

" ..... "

" ಏನವಾ ಹುಡುಗೀ ಎಲ್ಲಿಗೆ ಹೋಗಬೇಕಾಗೇದ ? ಹೇಳು ಹೇಳಿ, ಅಂಜಬ್ಯಾಡಾ " ಎಂದ ಅಲ್ಲಿಯೇ ಪಕ್ಕದಲ್ಲಿ ನಿಂತ ಉತ್ತರ ಕರ್ನಾಟಕದವ.

" ..... " ಅವನನ್ನೇ ಸ್ವಲ್ಪ ದಿಟ್ಟಿಸಿ ನೋಡಿದಳು. ಅವಳ ಕಣ್ಣೋಟದ ಭಾಷೆ ಯಾರಿಗೆ ತಿಳಿಯಬೇಕು ?

" ನೀ ಯೆಂಗೆ ಪೋಹಿರಾಯ್ ? ಭಯ ಪಡಾದೆ, ಭಯ ಪಡಾದೆ" ಎಂದು ಕೇಳಿದರು ತಮಿಳಿನವರು; ಹಾಗು ಮಲಯಾಳಿಗಳು.

" ..... " ನಿರುತ್ತರ. ಕೇಳಿದವರ ಮುಖವನ್ನು ಮಾತ್ರ ಪಿಳಿಪಿಳಿ ಕಣ್ಣು ಬಿಡುತ್ತ ನೋಡುತ್ತಿದ್ದಳು.

ತೆಲುಗಿನವ ತನ್ನ ಪ್ರಾದೇಶಿಕ ಸಹಾನುಭೂತಿಯ ಸರತಿಯನ್ನು ಮುಗಿಯಿಸಿದ.

ಅದಕ್ಕೂ ನಿರುತ್ತರ.

ರಾಷ್ಟ್ರಭಾಷೆಯಾದ ಹಿಂದಿಯಲ್ಲಿ ಕೇಳಿದರೆ ನಿರುತ್ತರ.

ಪ್ರಾದೇಶಿಕ ಭಾಷೆಗಳಾದ ಮರಾಠಿ, ಕನ್ನಡ, ತೆಲುಗು, ತಮಿಳು, ಮಲೆಯಾಳಿ ಮೊದಲಾದ ಭಾಷೆಗಳಲ್ಲಿ ಕೇಳಿದರೂ ನಿರುತ್ತರ.

" ನೋಡಲಿಕ್ಕಾದರೋ ಮದ್ರಾಸಿಗಳ ಹಾಗೆ ಕಾಣುತ್ತಾಳೆ " ಎಂದರು ಕುಳಿತವರು.

ನನಗೂ ಯೋಚನೆಗಿಟ್ಟಿತು. ' ಪಾಪ ! ಇವರೆಲ್ಲರ ಅತಿ ಸಹಾನುಭೂತಿಯಿಂದ ಕೃತಜ್ಞಳಾಗಿ ಬಾಯಿಯಿಂದ ಹೇಳಲಿಕ್ಕಾಗದೆ ಮೂಕಿಯಾಗಿದ್ದಾಳೋ ? ' ಎಂದು ಮರುಗಿದೆ.

ಮಹಾಜನರಲ್ಲಿ ಹೀಗಾಗುವುದು ಸಹಜ.

ಡೋಂಬಿವಲಿ ಸಮೀಪಿಸುತ್ತಿತ್ತು; ಇಳಿಯುವ ಜನರ ಗಡಿಬಿಡಿ ಪ್ರಾರಂಭವಾಯಿತು.

" ಹೆಲೋ ಗೋವಿಂssss ಎಂದು, ಆಚೆಯ ಬದಿ ದೂರದಲ್ಲಿ–ಗದ್ದಲದಲ್ಲಿ–ನಿಂತ ನನ್ನ ಮಿತ್ರ ಗೋವಿಂದನನ್ನು ನೋಡಿ ಕೂಗಿದೆ.

" ಆರೆ " ಎಂದವನೇ ಗದ್ದಲದಲ್ಲಿ ನೂಕುತ್ತ ನನ್ನೆಡೆಗೆ ಬಂದ. ಒಂದೇ ಡಬ್ಬಿಯಲ್ಲಿದ್ದರೂ ಇಬ್ಬರೂ ಒಬ್ಬರನ್ನೊಬ್ಬರು ನೋಡಿದ್ದಿಲ್ಲ.

" ಏನು ಜನ ನೆರೆದದ್ದು ? " ಎಂದು ಕೇಳಿದ.

" ನೋಡುಬಾ " ಎಂದು ಕರೆದು ಹೇಳಿದೆ.

ಹತ್ತಿರ ಹೋಗಿ ನೋಡಿ,

" ಆರೆ, ಈ ಹುಡಗಿ ನಮ್ಮ ಗೆಳೆಯ ಮಾಧವರಾಯರ ತಂಗಿ ಪಮ್ಮಾ. ಇವಳು ಮೂಕಿ ! ಕಿವುಡಿ ! ! " ಎಂದು ಹೇಳಿ, " ನಡೀ ಪಮ್ಮಾ " ಎಂದು ಸನ್ನೆ ಮಾಡಿದ.

ಅವನನ್ನು ಕಂಡಕೂಡಲೇ ಕಣ್ಣೀರು ಸುರಿಸಿತು ಆ ಹುಡುಗಿ.

ಡೋಂಬಿವಲಿಗೆ ನಿಂತಿತು ಗಾಡಿ; ಸಹಾನುಭೂತಿ ತೋರಿದ ಜನ ದಾರಿ ಮಾಡಿಕೊಟ್ಟರು.

ಪಮ್ಮಾ ಗೋವಿಂದನೊಂದಿಗೆ ಇಳಿದು ಹೋದಳು. ಜನ ನನ್ನ ಮಿತ್ರನಿಗೆ ಧನ್ಯವಾದ ಅರ್ಪಿಸಿದರು.

" ಸಿರ್ರ್ " ಸೀಟಿಯೂದಿದ ಗಾರ್ಡ್.

" ಭುಂಯಿssss " ಕೂಗಿ ಸಾಗಿತು ಗಾಡಿ.

ಕಾಕುರ್ಲಿ ಬರಲು ಕೆಳಗಿಳಿದು ಹೊರಟೆ.

ಮತ್ತೆ

" ಸಿರ್ರ್ "

" ಭುಂಯಿssss "

ಕೇಳಿಸಿದುವು.

" ಮೂಕಿ ! ಕಿವುಡಿ ! ! " ಎಂದು ಹೇಳಿದ ನನ್ನ ಮಿತ್ರನ ಮಾತು ಇನ್ನೂ ಕೇಳಿಬರುತ್ತಿದ್ದುವು.

" ಮೂಕಿ ! ಕಿವುಡಿ ! ! ಪಮ್ಮಾ. "

ದಶಕಂಠ

"ರಂಜನ" ಭಟ್ಟ, ಮದ್ರಾಸ

ನಿನಗಿಹುದು ದಶಕಂಠ
ನೀನೆ ರಾಕ್ಷಸರೂಪ
ಹತ್ತು ಬಾಯಿಯ ಭೂಪ;
ಯಾವಕಡೆ ನಿನ್ನ ಮುಖ ?
ಏನು ಯಾತರ ಬೇಟೆ
ಎತ್ತಕಡೆ ದಿಟ್ಟಿಯಿದೆ ?
ಯಾವ ಮಲ್ಲಿಗೆ ಹೂವು ಬಾಡಲಿದೆ ನಿನಗಾಗಿ
ಯಾವ ಲಂಕೆಯ ದ್ವೀಪ ಹೊತ್ತಲಿದೆ ನಿನಗಾಗಿ ?
ಕಡಲನಳಿಯುವ ಹವಣೆ
ಬಾನನುಟ್ಟುವ ಕನಸೆ
ಕೈಲಾಸಗಿಡದಿಂದ ಶಿವನಕೊಯ್ಯುವ ಹೊಂಚಿ ?
ನಿನಗಿಹುದು ಹತ್ತುತಲೆ;—
ನಿನ್ನ ತಲೆಯಂಗಳದಿ, ಪಾಪ, ಆಡಿದೆ ಚಿಂತೆ
ಹಗಲಿರುಳ ಥಕಥೈಯ ತಾಳಮದ್ದಲೆಯಾಟ.
ಒಂದು ತಲೆಯೇ ಹೊರೆಯೊ
ಚಿಂತೆಸಂತೆಯ ಬಯಲೊ
ಮುಗಿಯದಿಹ ಬಯಕೆಯದು ಬೇಲಿಯಾಗಿರೆ ಬಾಳ್ಗೆ !—
ನಿನ್ನದೆಂತಹ ಪಾಡೊ
ಹತ್ತು ತಲೆಗಳ ಹೊರೆಯೊ !
ದಶದಿಕ್ಕ ಹಿಡಿದಿಡುವ ಜೊಳ್ಳು ಸಂಭ್ರಮವಯ್ಯೊ !
ಚಣಚಣಕು ವಿಧವಿಧವು
ನಿನ್ನ ಕಂಠದ ಕರೆಯು—
ಈಗ ಕಾಗೆ, ಆಗ ಗೂಗೆ— ಮತ್ತೆ ಕೋಗಿಲೆ;
ನಿನ್ನನೇ ನೀನರಿಯೆ—
ಈಗ ನೀನೆಲ್ಲಿರುವೆ ಹೇಳಬಲ್ಲೆಯಾ ಭೂಪ ?
ದಂಡಕಾರಣ್ಯವೋ ಸಿಂಹಳದ್ವೀಪವೋ
ಅಶೋಕವನದಲ್ಲಿ ಸೀತಾಸ್ವಯಂವರವೋ ?
ಭೃಂಗದೊಲು ಹಾರಿರುವೆ
ದಿಕ್ಕಿನಿಂ ದಿಕ್ಕಿನೆಡೆ
ಯಾವ ನೆಲೆಯೋ ನಿನಗೆ
ಯಾವ ಆಳವೊ ನೀನು ?
ನಿನಗಿಹುದು ದಶಕಂಠ
ನೀನೆ ರಾಕ್ಷಸರೂಪ !

ಏಕಾದಶಿಯ ಚಂದ್ರ

ಅ. ಈಶ್ವರ ಪೆರಡಾಲ–ಅಸ್ಸಾಮು

ಬಣ್ಣವೊಂದಿದ ಮುಗಿಲ ಕೆಲದಲ್ಲಿ ಮೆರೆದಿಹುದು
ಏಕಾದಶಿಯ ಚಂದ್ರ—ಬಾನ ಬೆಡಗೆ !
ಮೆಲ್ಲಮೆಲ್ಲನೆ ಬಾನಿನಂಚಿನೆಡೆ ಸಾರುತಿದೆ
ಗಂಗೆಯಲಿ ತೇಲ್ವಂತೆ ಒಡಕುಗಡಿಗೆ. *

ಧರೆಯಂಧಕಾರಕ್ಕೆ ಸುರಿದಿಹುದು ಜೊನ್ನಜಲ
ಈ ಒಡೆದ ಕೊಡದಿಂದಲೆ—
ವನಸಿರಿಯು ತಿಂಗಳಿನ ತಿಳಿಬಣ್ಣ ಪಡೆದಿಹುದು
ಕೊಡವಿದರ ತುಳುಕಿಂದಲೆ. *

ಎಳೆಮಗುವಿನಾ ನಗುವು ತಾಯಿದಿಯ ತುಂಬೊಲವು
ನವಿಲಿನಾ ಬಣ್ಣದುಡುಗೆ,
ಮೊಲ್ಲೆಮಲ್ಲಿಗೆ ಮುಗುಳು ಬಿರಿದರಳುವಾ ಚೆಲುವು
ಒಡಕು ಕೊಡವಿದರ ಕೊಡುಗೆ ! *

ನಲ್ಲೆಯಧರದ ನವಿಯು ಮುಂಗುರುಳ ಚಂಚಲತೆ
ಚೆಲ್ಲಾಟ ತೋರುವನುರಾಗ,
ಎಲ್ಲೆಯರಿಯದ ಒಲವು, ನಳಿದೋಳ ಕೋಮಲತೆ
ಚೆಲ್ಲಿಹುದು ಕೊಡವು ಒಡೆದಾಗ ! *

ಇಳೆಯೆಲ್ಲ ಅರಳಿರುವ ಹೂಗಳಲಿ ಸೌಗಂಧ
ಒಳಗಿನಲಿ ಅಡಗಿರುವ ಮಧುವು
ತಿಳಿನೀರ ಕೊಳದಲ್ಲಿ ಮೆರೆಯುವಾ ನೈದಿಲೆಯು,
ಕಳಸವಿದರೊಡಲಸುಧೆಯು ! *

ಹಸಿಹುಲ್ಲ ಮೇಲೆರಗಿ ಮುತ್ತಿನಾ ಜಾಲರಿಯು-
ತಿಳಿಮಂಜು ಮುದ್ದಿಡುತಿದೆ !
ಆಕಾಶದೆತ್ತರದಿ ಗಡಿಗೆಯೊಡಲದು ಬಿರಿಯೆ
ಇಳಿಬಿತ್ತು ಧರಣಿಯೆಡೆಗೆ ! *

ಬಾನಗಲ ಹರಡಿರುವ ಚಿಕ್ಕೆಗಳ ಒಕ್ಕಲವು
ಬಿಡಿಸಲಾರದ ಚಕ್ರಬಂಧ—
ತಾನಾಗಿ ಮೆರೆಯಿತೆ ? ಸಿಡಿದು ಹಾರಿತು ಚೆಲುವು
ಒಡೆದ ಆ ಗಡಿಗೆಯಿಂದ ! *

ಯುಗಯುಗಗಳಿಂದಲೀ ಮುರುಕು ಗಡಿಗೆಯು ತಾನೆ
ಜಗಕೆಲ್ಲ ಸುರಿಯುತಿದೆ ನವರಸದ ಹೊನಲು ?
ತೆಗೆತೆಗೆದು ಮುಗಿಯದಾ ಅಕ್ಷಯದ ಈ ಒಸರು-
ಸೊಗನೀಯದಿರೆ ಧರೆಯು ಬರಿ ಶೂನ್ಯ ಬಯಲು !

—❋—

* ಸುಪ್ರಸಿದ್ಧ ಬಂಗಳಿ ಕಾಜಿ ನಜರುಲ್ ಇಸ್ಲಾಂರವರ ಬಂಗಾಲಿ ಗೀತೆಯೊಂದರಿಂದ ಭಾವಪ್ರೇರಿತ.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದ ಪ್ರಕಾರ, ಈ ಸಲದ ಮೇಲಾಟಕ್ಕೆ **'ತಿಮ್ಮುಡು ಕೈಹಿಡಿದ ಹುಡುಗಿ'** ಕತೆಯನ್ನು ಕುರಿತು ಮೂವರಿಂದಲೂ, **'ಶಂಕರಾಚಾರ್ಯರು'** ತರಂಗರೂಪಕವನ್ನು ಕುರಿತು ಇಬ್ಬರಿಂದಲೂ ವಿಮರ್ಶೆಗಳು ಬಂದಿವೆ. ತೀರ ನಿರುತ್ಸಾಹಕರ ಪರಿಸ್ಥಿತಿ. ಶಾಲೆ-ಕಾಲೇಜುಗಳ ಬಿಡುವಿನ ಪರಿಣಾಮದಿಂದ ಹೀಗಾಗಿರಬಹುದೆಂದು ಭಾವಿಸಬಹುದಾಗಿದೆ.

'ಶಂಕರಾಚಾರ್ಯರು' ತರಂಗರೂಪಕದ ವಿಮರ್ಶೆಗಳನ್ನು ನಾವು ಹೆಚ್ಚು ಜನರಿಂದ ನಿರೀಕ್ಷಿಸಿರಲೇ ಇಲ್ಲ. ಏಕೆಂದರೆ ಅದರ ವಿಷಯವು ಅನೇಕ ಜನ ತರುಣರಿಗೆ ಅಪರಿಚಿತವಾಗಿಯೂ ಸಾಂಪ್ರದಾಯಿಕವಾಗಿಯೂ ತೋರಬಹುದೆಂದು ನಮಗೆ ಮೊದಲೇ ಎನಿಸಿತ್ತು. ಆದರೆ ಕಥೆಯನ್ನು ಕುರಿತ ವಿಮರ್ಶೆಗಳಾದರೂ ಹೆಚ್ಚು ಜನರಿಂದ ಬರಬೇಕಾಗಿದ್ದಿತು. ನಾವು ಆಗಾಗ ಹೇಳುತ್ತಲೇ ಬಂದಿದ್ದೇನೆ. ವಿಮರ್ಶೆಯೆಂದರೆ ಬರೀ ಕೃತ್ರಿಮ ಪ್ರಶಂಸೆಯಲ್ಲ. ಆದನ್ನೋದಿ ನಿಮ್ಮ ಸಂಸ್ಕಾರಯುಕ್ತ ಮನಸ್ಸಿಗೆ ಏನೆನಿಸಿತೆಂಬುದರ ನಿವರಣೆಯೇ ವಿಮರ್ಶೆಯಿನಿಸುವುದು. ಮೆಚ್ಚಿಕೆಯದಾಗಿ ತೋರಿದ್ದರೆ, ಯಾವ ಯಾವ ಕಾರಣಗಳಿಗಾಗಿ ಮೆಚ್ಚಿಕೆಯಾಯಿತೆಂಬುದನ್ನು ವಿವರಿಸಬೇಕು; ಅದಂರಂತೆ ಮೆಚ್ಚಿಕೆಯದಾಗದಿದ್ದರೆ, ಏಕೆ ಆಗಲಿಲ್ಲವೆಂಬುದನ್ನು ಪ್ರಮಾಣಗಳೊಂದಿಗೆ ಬರೆಯಬೇಕು. ನಮ್ಮ ತರುಣ ವಿಮರ್ಶಕರಿಂದ ನಾವೇನು ತಂತ್ರದ ಕಟ್ಟಿನಲ್ಲಿ ಕುಳ್ಳಿರಿಸಿದ ವಿಮರ್ಶೆಗಳನ್ನೇ ಅಪೇಕ್ಷಿಸುವುದಿಲ್ಲ; ಪ್ರಾಮಾಣಿಕವಾಗಿ ತಮಗೆ ಏನೆನಿಸಿತೆಂಬುದನ್ನು ಬರೆಹದಲ್ಲಿ ಮೂಡಿಸಿ ತೋರಿಸುವ ರೂಢಿ ಬೆಳೆದರೂ ಸಾಕು.

'ತಿಮ್ಮುಡು ಕೈಹಿಡಿದ ಹುಡುಗಿ' ವಿಮರ್ಶಕರು :

(೧) ಶ್ರೀ. ಸಿ. ಬಿ. ಮಹೇಂದ್ರಕರ, ರಬಕವಿ (೨) ಕುಮಾರಿ ಸಿ. ಎಚ್. ಲಕ್ಷ್ಮಿ—ಣಾಡಿ, (ದ. ಕ.)
(೩) ಶ್ರೀ. ಎಂ. ಗಂಗಾಧರ ಭಟ್ಟ, ನೀರ್ಚಾಲು

'ಶಂಕರಾಚಾರ್ಯರು' ವಿಮರ್ಶಕರು :

(೧) ಶ್ರೀ. ಕೃಷ್ಣಮೂರ್ತಿ ಭಾರದ್ವಾಜ, ಸೆದಲಿಗೆ (೨) ಶ್ರೀ. ಜಿ. ಎಸ್. ಗ್ರಾಮಪುರೋಹಿತ, ಬಿ.ಎ., ಗುಲಬರ್ಗಾ

ಎಲ್ಲ ವಿಮರ್ಶೆಗಳನ್ನೂ ಜಯಂತಿಯ ಸಂಪಾದಕಸಮಿತಿಯವರು ನೋಡಿ, ಕತೆಯ ವಿಮರ್ಶೆ ಮೂರರಲ್ಲಿ ಶ್ರೀ. ಎಂ. ಗಂಗಾಧರ ಭಟ್ಟ ಅವರ ವಿಮರ್ಶೆ ಚೆನ್ನಾಗಿದೆಯೆಂದೂ, ತರಂಗರೂಪಕದ ವಿಮರ್ಶೆಗಳೆರಡರಲ್ಲಿ ಶ್ರೀ ಜಿ. ಎಸ್. ಗ್ರಾಮಪುರೋಹಿತರ ವಿಮರ್ಶೆ ಉತ್ತಮವಾಗಿದೆಯೆಂದೂ ನಿರ್ಣಯವನ್ನು ಕೊಟ್ಟಿದ್ದಾರೆ.

ಮುಂದಿನ ತಿಂಗಳ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ **'ಪದ್ಮಕ್ಕನ ಕೊನೆಯ ದಿನ'** ಎಂಬ ಕಥೆಯನ್ನಾಗಲಿ, **'ವರದ ಶಾಪ'** ಎಂಬ ಕಥೆಯನ್ನಾಗಲಿ ವಿಮರ್ಶೆಗೆ ತೆಗೆದುಕೊಳ್ಳಬೇಕು. ಹೆದರಿಕೆ-ಔದಾಸೀನ್ಯಗಳನ್ನು ತ್ಯಜಿಸಿ ಹೆಚ್ಚು ಜನ ವಿಮರ್ಶಕರು ಮೇಲಾಟದಲ್ಲಿ ಭಾಗವಹಿಸಬೇಕು.

—ಸಂಪಾದಕ

ತಿಮ್ಮುಡು ಕೈಹಿಡಿದ ಹುಡುಗಿ

(ಸಣ್ಣ ಕಥೆಯ ವಿಮರ್ಶೆ)

ಶ್ರೀ. ಗಂಗಾಧರಭಟ್ಟ, ನೀರ್ಚಾಲು

ಬಾಳಿಗೆಳತಿಯಿಂದೊಡಗೂಡಿದ ಜೀವನವೇ ಆದರ್ಶಜೀವನ-ಸುಗಮವಾದ ಬಾಳು. ಜೀವನವನ್ನು ಒಂಟಿಯಾಗಿ ಕಳೆಯುವುದೆಂದರೆ ಅದು ನೀರಸವೇ ಸರಿ. ಜೀವನದಲ್ಲಿ ಮನುಷ್ಯನು ಒಂದು ಸರಸ ನಾಟಕವನ್ನಾಡಬೇಕಾದರೆ, ಇಹದ ನಂದನವನದ ಸುಖವನ್ನು ಆರೆಚಣವಾದರೂ ಸವಿಯಬೇಕಾದರೆ, ಸರಸ ಸಂಭಾಷಣೆಯೂ, ಸುಲಲಿತೆಯೂ ಸರಳತೆಯೂ ಆದ ತರಳೆಯ ಒಡನಾಡಿಯಾಗಿರಬೇಕು. ಅಂದರೇ ಇಹವು ಸ್ವರ್ಗಸುಖವನ್ನು ತಂದೀತು. ಜೀವನ ಪಾವನವಾದೀತು

ತಿಮ್ಮುಡುವಿನ ಮನಃಪಟಲದ ಆಲೋಚನಾ ತರಂಗಗಳು ಕೂಡ ಇದೇ ಮಾದರಿಯವುಗಳಾಗಿವೆ. ಅವನ ಭಾರವಾದ ಹೃದಯದಿಂದ ಹೊರಜಿಮ್ಮುವ ಮಾತು—'ಆದಷ್ಟು ಬೇಗ ಮಂಗಲವಾಗಿ ಹೆಣ್ಣೊಂದನ್ನು ತಂದು ಮನೆ ತುಂಬಬೇಕು.' ಎಂದು.

ತಿಮ್ಮುಡು ಬೇಟೆಯಾಡಿ ದಣಿದು ಗುಡ್ಡ ಇಳಿದು ಬರುವಲ್ಲಿಂದ ಕಥೆಯು ಪ್ರಾರಂಭವಾಗುತ್ತದೆ. ತಿಮ್ಮುಡು ಬೇಟೆಗಾರ – ಮಾತ್ರವಲ್ಲ ಬೇಟೆಯ ಗೀಳನ್ನೇ ತಲೆಗೆ ಹಚ್ಚಿಕೊಂಡವ; ಆದರೂ ಸಾಹಸಿ. ತಿಮ್ಮುಡುವಿಗೆ ಅಂದು ಸಿಕ್ಕಿದುದು ಒಂದು ಮೊಲ ಮತ್ತು ಎರಡು ಕೊಕ್ಕರೆಗಳು ಮಾತ್ರ. ದಣಿವಾರಿಸಿಕೊಂಡು ಮುಂದೆ ಬೇಟೆ—ಎಂದು ತೋಡಿನ ದಡದಲ್ಲಿ ವಿಶ್ರಮಿಸಿ ಬುತ್ತಿಯನ್ನು ಬಿಚ್ಚಿ ಪ್ರೀತಿಯ ನಾಯಿ-ಜೂಬ್ಬಿಗೂ ಚಪಾತಿ ಕೋಳಿಕರಿಗಳನ್ನಿತ್ತು ತಾನೂ ಮೆಲ್ಲುತ್ತಾನೆ. ಆಗಲೇ ಅವನ ಮನಸ್ಸು ಎತ್ತೆತ್ತಲೋ ಸಾಗುತ್ತದೆ. ಹಿಂದಿನ ಗೆಳೆಯರ ಮಾತು—"ತಿಮ್ಮುಡು ಮೃಗಬೇಟೆಯನ್ನಾಡಿದ; ನರಬೇಟೆಯನ್ನಾಡಿದ; ಇನ್ನು ಒಂದು ಬೇಟೆ ಮಾತ್ರ ಉಳಿದಿದೆ" ಎಂದು. ಯಾವುದೆಂದರೆ ಉತ್ತರ—"ಹೆಣ್ಣು ಬೇಟೆ!" ಈ ಮಾತುಗಳಿಂದ ಅವನ ಮನಸ್ಸು ದೃಢವಾಗುತ್ತದೆ. 'ಒಂಟಿ ಬಾಳು ಹಾಳು' ಎಂದು ಅರಿವಾಗುತ್ತದೆ.

ಮರದಡಿಯಲ್ಲಿ ಮಲಗಿಕೊಂಡು ತಿಮ್ಮುಡು ಯಾವ ಹುಡುಗಿಯನ್ನು ಮದುವೆಯಾಗುವುದೆಂದು ಆಲೋಚಿಸುತ್ತಾನೆ. ಎಲ್ಲದಕ್ಕೂ ಒಂದೊಂದು ಕೊರತೆ. ಒಂದು ಉಬ್ಬುಗಲ್ಲದ್ದು; ಇನ್ನೊಂದು ಬಣ್ಣದ ಗೊಂಬೆ. ಹೌದು ಇಂತಹ ಸ್ತ್ರೀಯರಿಗೆ ಸಮಾಜದಲ್ಲೆಲ್ಲೂ ಕಡಮೆ ಇಲ್ಲ. ಸಮಾಜದಲ್ಲಿ ಅವಿವಾಹಿತರಾಗಿರುವ ತರುಣಿಯರತ್ತ ಲೇಖಕರು ದೃಷ್ಟಿ ಹರಿಸಿದ್ದಾರೆ.

ಜೋಂದುವೇ ತನಗೆ ಯೋಗ್ಯ ಹೆಣ್ಣೆಂದು ನಿಶ್ಚಯಿಸಿ ನೆಮ್ಮದಿಯಿಂದ ನಿದ್ದೆಯನ್ನೈದುತ್ತಾನೆ.

ತಿಮ್ಮುಡು ನಿದ್ದೆಯಿಂದೆದ್ದು ಬೇಗಬೇಗನೆ ಹೆಜ್ಜೆ ಹಾಕುತ್ತಿದ್ದಾಗ ಹುಲಿಮರಿಗಳು ಅಡುತ್ತಿರುವುದನ್ನು ಕಾಣುತ್ತಾನೆ. ಹಿಡಿಯಲೆಂದು ಹೋಗಿ-ಒಂದನ್ನು ಕಟ್ಟಿ ಚೀಲದಲ್ಲಿ ಹಾಕಿದಾಗ, ತಾಯಿ ಹುಲಿಯು ಹೊರಬಂದು ತಿಮ್ಮುಡುವಿನೊಡನೆ 'ಯುದ್ಧ' ಆರಂಭಿಸುತ್ತದೆ. ತಿಮ್ಮುಡುವಿಗೆ ಪೆಟ್ಟಾಯಿತು. ಪ್ರೀತಿಯ ನಾಯಿ ಧನಿಯ ಸೇವೆಗೈದು ಪ್ರಾಣವನ್ನು ತ್ಯಜಿಸಿತು. ಕಡೆಗೂ ಸೆಣಸಾಡಿ ಗುಂಡಿಕ್ಕಿ ಹುಲಿಯನ್ನು ಕೊಂದು ತಾನೂ ಮೂರ್ಛೆಗೊಂಡ.

ದನವನ್ನು ಹುಡುಕಲು ಬಂದ ಜೋಂದು ಇವನನ್ನು ನೋಡಿ, ಗುರುತು ಹಚ್ಚಿ ಮನೆಗೆ ಕರೆದುಕೊಂಡು ಹೋಗಿ, ಆದರದಿಂದ ಆರೈಕೆ ಮಾಡುತ್ತಾಳೆ. ಕಡೆಗೆ ಸುಖದಲ್ಲಿ—ಎಂದರೆ ತಿಮ್ಮುಡು-ಜೋಂದು ಇವರ ಮದುವೆಯಲ್ಲಿ ಕಥೆಯು ಕೊನೆಗೊಳ್ಳುತ್ತದೆ.

ಮುಖ್ಯವಾಗಿ ಕತೆಯಲ್ಲಿ ಎರಡು ವಿಷಯಗಳನ್ನು ಗಮನಿಸಬೇಕಾಗುತ್ತದೆ. ಒಂದು—ಒಂಟಿ ಜೀವನ ಬರಡೆಂದು ಬಗೆದ ಮನಸ್ಸಿಗೆ ಯಾವುದೂ ಹಿತವಾಗುವುದಿಲ್ಲ. ಅಂತೆಯೇ ತಿಮ್ಮುಡುವಿಗೆ ಅಡಿಗೆಯನು ಮಾಡಿದ ಅಡಿಗೆ ರುಚಿಸಲಿಲ್ಲ. 'ಈ ತಿನಿಸನ್ನು ತನಗೊಲಿದು ಬಂದ ಹೆಣ್ಣು ತಯಾರಿಸಿವ್ವರೆ' ಎಂದು ಅವನ ಮನಸ್ಸು ವಿಹ್ವಲವಾಗುತ್ತದೆ. ಮನಸ್ಸಿಗೆ ನೆಮ್ಮದಿ ಇಲ್ಲದಾಗ ಯಾವುದೂ ಚೇಡವೆನಿಸುವುದು ಸಹಜವಾಗಿದೆ. ಎರಡು....ಇದೇ ವಿಷಯವನ್ನು ಒತ್ತಿ ಹೇಳಬೇಕಾಗಿಯೋ ಎಂಬಂತೆ ಮುಂದೆ ತೋರುತ್ತದೆ—ತಿಮ್ಮುಡು ಜೋಂದುವನ್ನು ಕಂಡಕೂಡಲೇ ಮುಗುಳ್ನಕ್ಕು ಪೆಟ್ಟಾದರೂ ಏಳುತ್ತಾನೆ. ಅವಳ ಹೆಗಲು ಹಿಡಿದು ನಡೆದು ದೂರದ ಹಳ್ಳಿಗೆ ಬರುತ್ತಾನೆ. ತಾನು ಬಯಸಿದ ವಸ್ತು ಸಿಕ್ಕಲು ದೂರವಿಲ್ಲವೆಂದು ತಿಳಿದು ಅವನ ಮನಸ್ಸು ಪ್ರಫುಲ್ಲವಾಗುವುದು. ಆದ್ದರಿಂದಲೇ ದೇಹದಲ್ಲಿ ರಕ್ತವಿಲ್ಲದಿದ್ದರೂ ಅವನು ಎದ್ದು ನಿಲ್ಲುವಂತೆ ಮಾಡಿತು. ಈ ಎರಡು ವಿಷಯಗಳೂ ಕೂಡ ಒಂದು ನಿಗೂಢಸ್ಥಿತಿಯಲ್ಲಿವೆ. ಎರಡಕ್ಕೂ ಹೊಂದಿಕೆಯು ಬಹಳ ಹತ್ತಿರವಿದೆಯೆಂದು ತೋರುವುದು. ತಾನು ಬಯಸಿದ ಹೆಣ್ಣು ಸನಿಯದಲ್ಲಿರುವಾಗ ಪ್ರಾಣಾಂತಿಕ ಅವಸ್ಥೆಯಲ್ಲಿರುವವನಿಗೂ ನವ ಉತ್ಸಾಹ ಬರುವುದು ಸಹಜವಾಗಿದೆ. ಕಥೆಯ ಒಂದು ನವೀನತೆಗೆ ಇದೂ ಕಾರಣವಾಗಬಹುದೆಂದು ನನ್ನ ಅಭಿಮತ.

ತಿಮ್ಮುಡುವಿನ ಮನಸ್ಸಿನಲ್ಲಿ ಇನ್ನೂ ಒಂದು ಬೇಸರವನ್ನು ತಂದು ಹಾಕಿದ್ದಾರೆ—ಲೇಖಕರು. ಅವನ್ನು ಗೆಳೆಯನೊಬ್ಬನ ಬಾಯಿಯಿಂದ ಹೇಳಿಸಿದ್ದಾರೆ. 'ಅತನ ಕೂದಲು ನೆರೆತು ಹಣ್ಣಾಗತೊಡಗಿದೆ' ಎಂದು. ಈ ಮಾತು ತಿಮ್ಮುಡುವಿನ ಹೃದಯಕ್ಕೆ ಅತ್ಯಂತ ನೋವನ್ನುಂಟುಮಾಡುತ್ತದೆ. ತಾನು ಮುದುಕನಾದರೂ ತನಗೊಂದು 'ಬಾಳು ತುಂಬಲು ಹೆಣ್ಣು ಸಿಗಲಿಲ್ಲವಲ್ಲಾ' ಎಂಬ ಬೇಸರವೂ ಅವನ ಹೃದಯದಲ್ಲಿ ತುಂಬುತ್ತದೆ. ಇದು ಕೂಡ ವರ್ಷ ಮೂವತ್ತೈದು ದಾಟಿದ ಅವನ ಕಾತರತೆಯನ್ನು ಹೆಚ್ಚಿಸಲು ಲೇಖಕರು ಸೇರಿಸಿ ಕತೆಯನ್ನು ಊರ್ಜಿತಗೊಳಿಸಿದ್ದಾರೆ.

ಇದೇ ರೀತಿಯಲ್ಲಿ ಪ್ರಾರಂಭದಲ್ಲೂ ನಾಯಿ-ಪತಂಗಗಳನ್ನು ಕಂಡು ಅನ್ನುತ್ತಾನೆ-- "ನಾಯ ದವಡೆಯಿಂದ ಚಟ್ಟಿ ಪಾರಾಗಿ ಹೋದಂತೆ, ಸುಖ ನಸ್ಸ ಕೈಬೆರಳುಗಳ ಎಡೆಯಿಂದ ನುಸುಳಿ ತಪ್ಪಿಸಿಕೊಳ್ಳುತ್ತದೆ" ಎಂದು. ಇದೆಲ್ಲವನ್ನೂ ಲೇಖಕರು ಮುಖ್ಯಾಂಶವನ್ನು

ಹೊರಗೆಡಹಲು ತುಂಬಿಸಿದ್ದಾರೆ. ಅವನ ಬಾಲಿನ ನ್ಯೂನತೆಯನ್ನು ಲೇಖಕರು ಜೆಂದವಾಗಿ ವಿವರಿಸಿದ್ದಾರೆ.

ಹುಲಿಯೊಡನೆ ತಿಮ್ಮುಡುವಿನ ಕಾದಾಟವನ್ನು ಅವನ ಸಾಹಸ-ಜೀವನವನ್ನು ಎತ್ತಿ ಹಿಡಿಯುವುದಕ್ಕಾಗಿ ಲೇಖಕರು ತೋರಿಸಿದ್ದಾರೆ. ಜೋಂದು ಒಬ್ಬಳೇ ಅಡವಿಗೆ. ಹೋಗುವುದೂ ಕೂಡ ಅವಳ ದಿಟ್ಟ-ತನವನ್ನು - ಚುರುಕುತನವನ್ನು ಸೂಚಿಸುತ್ತದೆ. ಜೋಂದುವಿನ ಹಿಂದೆಯೂ ಬೊಳ್ಳುನಾಯು ಇತ್ತು. ಇದರಿಂದ ಮುಲಿನಾಡನವರು ಪ್ರತಿಯೊಬ್ಬರೂ ಬೇಟೆನಾಯಿಗಳನ್ನು ಸಾಕುತ್ತಾರೆಂದು ತಿಳಿಯ-ಬಹುದು. ಜೋಂದುವಿನ ಶುಶ್ರೂಷೆಯಾದ್ದರಿಂದ ತಿಮ್ಮುಡುವಿಗೆ ಅಷ್ಟು ಬೇಗನೆ ಗುಣವಾಯಿತೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಕತೆಯ ಉಪಸಂಹಾರವೂ ಕೂಡ ಜೆಲೋದಾಗಿದೆ. ಸಂತೋಷ-ಹಾಸ್ಯಗಳಲ್ಲಿ ಕತೆಯು ಪೂರ್ಣವಾಗುತ್ತದೆ. "ಕೋವಿಯನ್ನು ಹಿಯಮುತ್ತಿದ್ದ ಕೈ ಈಗ ಜೋಂದುವಿನ ಕೈ ಹಿಡಿಯಿತು!" ಎಂಬ ಮಾತು ಅರ್ಥಗರ್ಭಿ-ತವೂ ಹಾಸ್ಯಪ್ರಧಾನವೂ ಆಗಿದೆ.

ಕತೆಯಲ್ಲಿ ಮುಖ್ಯ ಪಾತ್ರಗಳು ತಿಮ್ಮುಡು ಮತ್ತು ಜೋಂದು-ಇಬ್ಬರವೇ. ಸಹಾಯಪಾತ್ರಗಳು—ಜೆಂಗಪ್ಪ, ತಿಮ್ಮುಡುವಿನ ಗೆಳೆಯರು, ಜೂಬಿನಾಯಿ, ಬೊಳ್ಳುನಾಯಿ ಮೊದಲಾದುವು. ಇನ್ನೂ ಕೆಲವು ಹೆಸರಿಗೆ ಮಾತ್ರ ಬರುವ ಪಾತ್ರಗಳು—ದೇಜು, ಮಾಚು ಮುಂತಾದವರು. ಹುಲಿ ಮತ್ತು ಹುಲಿಮರಿಗಳು ವಿರೋಧಿ ಪಾತ್ರ ಗಳು. ತಂತ್ರನಾವೀನ್ಯತೆಯಿಂದ ಕೂಡಿದ ಈ ಕಥೆಗೆ ಲೇಖಕರು ಉತ್ತಮ ಶೈಲಿಯನ್ನು ಬಳಸಿಕೊಂಡಿದ್ದಾರೆ. ತುಸು ಹಾಸ್ಯರಸದಿಂ-ದೊಡಗೂಡಿದ ಸಂಭಾಷಣೆಗಳೂ ಪಾರ್ಮಿಕವಾಗಿವೆ ಆದರೆ ಒಂದೆರಡು ಕಡೆಯಲ್ಲಿ ಲೇಖಕರು ಗಡಿಬಿಡಿ ಮಾಡಿದಂತೆ ತೋರುತ್ತದೆ. 'ಅವನು ಎಡಗೈಯಲ್ಲಿ ಕೋವಿ ಹಿಡಿದಿದ್ದ' ಎಂದಮೇಲೆ 'ಅವನು ಎಡಗೈಯ ಬೆರಳುಗಳ ತುದಿಯಿಂದ ತನ್ನ ಕುಡಿಮೀಸೆಗಳನ್ನು ಹುರಿ-ಗೊಳಿಸುತ್ತಾ ಮುಂದೆ ಸಾಗುತ್ತಿದ್ದ' ಎಂದಿದ್ದಾರೆ, ಕೋವಿ ಹಿಡಿದ ಕೈಯಲ್ಲಿ ಮೀಸೆ ಹುರಿಗೊಳಿಸುವುದೆಂತೋ ತಿಳಿಯಲಾರದ ವಿಷಯ-ವಾಗಿದೆ. ಅಲ್ಲದೆ ಕೆಲವು ಶಬ್ದಗಳೂ ಕೂಡ ಗ್ರಾಮ್ಯವಾದುವುಗಳಾಗಿವೆ. ಈ ಶಬ್ದಗಳಿಂದ ಕಥೆಗೆ ಒಳ್ಳೆಯದೆನಿಸಿದರೂ ವಾಚಕರಿಗೆ ಅರ್ಥವಾಗದೆ ಹೋಗಬಹುದೆಂದು ನನಗೆ ತೋರುತ್ತದೆ.ಉದಾ:—'ನೆಲ್ಲು ಮಿದಿಯುವ ಒನಕೆಗಳು' ಎಂಬುದನ್ನು ಭತ್ತ ಕುಟ್ಟುವ ಒನಕೆಗಳು ಎಂದು ಬರೆಯ-ಬಹುದಿತ್ತು. ಇನ್ನೊಂದು ಕಡೆ ಒಂದು ಉಪಮಾನದಲ್ಲಿ ಸಾಧಾರಣ ಧರ್ಮವು ಸರಿಕಾಣುವುದಿಲ್ಲ. ಉದಾ—'ಜೂಬಿಯ ಅರೆದೆರೆದ ಬಾಯಲ್ಲಿ ಮೊನೆಚಾದ ಬಿಳಿಯ ಹಲ್ಲುಗಳು ಕೋಲುಮಲ್ಲಿಗೆಯ ಮೊಗ್ಗುಗಳಂತೆ ತೋರುತ್ತಿದ್ದುವು.' ಎಂದಿದೆ. ಜೂಬಿಯ-ನಾಯಿಯ ಹಲ್ಲುಗಳು ಎಂದರೆ ಹರಿತವಾದುವುಗಳು—ಕಾಣುವಾಗಲೇ ಭಯ-ವನ್ನುಂಟುಮಾಡುವುವು. ಆದರೆ ಮಲ್ಲಿಗೆ-ಮೃದುವಾದ ವಸ್ತು. ಹಲ್ಲಿಗೂ ಮಲ್ಲಿಗೆಗೂ ಕವಿಗಳು ಸಾಮ್ಯ ಹೇಳುವುದಿದ್ದರೂ ಅದು ನಾಯಿಗಳ ಹಲ್ಲಿಗಲ್ಲ. ಮುಗುಡೆಯರ ಹಲ್ಲಿಗೆ. ಲೇಖಕರು ಇಲ್ಲಿ ತಪ್ಪಿದರೆಂದು ನನಗೆ ತೋರುತ್ತದೆ.

ಕೆಲವು ತೊಂದರೆಗಳನ್ನು ನಿವಾರಿಸಿದರೆ, ಈ ಕತೆಯು ಸ್ವಾಗತಕ್ಕೆ ಅರ್ಹವಾಗಬಹುದು. ಕತೆಯ ರಚನಾಕೌಶಲ್ಯಕ್ಕೆ ತಲೆದೂಗಬೇಕಾಗಿದೆ ಶಿರೋನಾಮೆಯೂ ಅಚ್ಚುಕಟ್ಟಾಗಿದ್ದು ಚೆನ್ನಾಗಿದೆ ಎನ್ನಬಹುದಾಗಿದೆ "ಭಾರತೀಸುತ" ರು ತಮ್ಮ ಯಸರನ್ನೂ ಗೂಢವಾಗಿರಿಸಿ ವಿಮರ್ಶೆ-ಯನ್ನು ನೋಡಬಯಸಿದ್ದಾರೆ. ಅವರು ಹೆದರಬೇಕಾದ ಅಗತ್ಯವಿಲ್ಲ ಕಥೆಯನ್ನು ಬರೆಯುವ ಸಾಮರ್ಥ್ಯವಿದೆಯೆಂದು ದೃಢವಾಗಿ ಹೇಳ-ಬಹುದು. ಮೊದಲೇ ಹೇಳಿದಂತೆ ಗಡಿಬಿಡಿಯಿಂದ ಬರೆಯದೆ ಸಾವ-ಧಾನಚಿತ್ತದಿಂದ ತಪ್ಪಿಲ್ಲದಂತೆ, ಪೂರ್ವಾಪರ ಸಂಬಂಧ, ಉಪಮಾನ-ಉಪಮೇಯಗಳ ಹೊಂದುವಿಕೆ, ಇವುಗಳನ್ನು ವಿವೇಚಿಸಿ ಬರೆದರೆ ಇಂತಹ ಕಥೆಗಳಿಗೆ ತುಂಬುಹೃದಯದ ಸ್ವಾಗತವನ್ನು ಕೊಡುವೆವು.

"ಶ್ರೀ ಶಂಕರಾಚಾರ್ಯರು"

(ತರಂಗರೂಪಕದ ವಿಮರ್ಶೆ)

ಶ್ರೀ ಜಿ. ಎಸ್. ಗ್ರಾನುಪುರೋಹಿತ, ಬಿ. ಎ., ಗುಲಬರ್ಗಾ

'ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ'—ಗ್ರಂಥಕೋಟಿಗಳಿಂದ ಉಕ್ತವಾದ ಸತ್ಯವನ್ನು ಶ್ಲೋಕಾರ್ಧದಲ್ಲಿ ಅಡಗಿಸಿಡುವ ಸಾಮರ್ಥ್ಯ ಬಾಲಶಂಕರರಿಗೆ. ಹುಟ್ಟಿನಿಂದ ಬ್ರಹ್ಮ ತನ್ಮಯರು. ಅವರಿಗೆ ಬಾಲ್ಯ, ಯೌವನ, ಮುಂತಾದ ಅವಸ್ಥಾಂತರ-ಗಳೆಲ್ಲ? ಅವರ ಜೀವನದ ಅವಧಿ ಕೇವಲ ೩೨ ವರ್ಷ. ಆದರೆ ಆ ಪುಣ್ಯಾತ್ಮ ಮಾಡಿದ ಕಾರ್ಯವೆಷ್ಟು ಎಂಬುದನ್ನು ಲಕ್ಷಿಸಿದರೆ, ಅವರ ಬೃಹತ್ಕಾರ್ಯದ ಅರಿವಾದೀತು. ಸಾಮಾನ್ಯನಿಗೆ ಹತ್ತು ಜನ್ಮಗಳಲ್ಲಿ ಮಾಡಲಾಗದ ಕಾರ್ಯವನ್ನು ತಮ್ಮ ಜೀವನದ ಅಲ್ಪಾವಧಿಯಲ್ಲಿ ಅವರು ಮಾಡಿ ತೋರಿಸಿದ್ದಾರೆ. ಅವೇ ಭಾರತದ ಹಿರಿಜೀವನವೊಂದರ ದೈವಿಕ ಪ್ರತಿಭೆಗೆ ಸಾಕ್ಷಿ. ಮಿಂಚಿನಂತೆ ಕ್ಷಣಕಾಲ ಬೆಳಗಿ, ಅನಂತದಲ್ಲಿ ಲೀನವಾದ ಆ ಜ್ಯೋತಿರ್ಮಯ ಪುರುಷನ ಕಾರ್ಯ ೧೨ ಶತಮಾನ ಗತಿಸಿದರೂ ಅಚ್ಚಳಿಯದೆ ನಿಂತಿದೆ.

ಮೊನ್ನೆ ಮೊನ್ನೆ ಶಂಕರಜಯಂತಿಯು ನಾಡ ತುಂಬ ಆಚರಿಸ-ಲ್ಪಟ್ಟಿದೆ. ಈ ವೇಳೆಯಲ್ಲಿ ಶ್ರೀಯುತ ಬೆಟಗೇರಿಯವರ ತರಂಗ-ರೂಪಕವು ತೀರ ಸ್ವಾಗತಾರ್ಹ. ಕನ್ನಡದ ಹಿರಿ ಸಾಹಿತ್ಯಿಕರೆಲ್ಲೊಬ್ಬ-ರಾದ ಶ್ರೀಯುತರು, ಯೋಗ್ಯಕಾಲದಲ್ಲಿ ಆ ಪುಣ್ಯಪುರುಷನ ಸ್ಮರಣೆಗೆ ಅವಕಾಶವೊದಗಿಸಿದ್ದು ಯಥಾರ್ಥವಾಗಿದೆ.

ತರಂಗರೂಪಕ ಕನ್ನಡಕ್ಕೆ ಹೊಸತಾಗಿ ಬಂದ ಸಾಹಿತ್ಯ ಪ್ರಕಾರ. ಅನೇಕ ಪ್ರಯೋಗಗಳು ನಡೆದಾಗ ಅದು ಒಂದು ಹದಕ್ಕೆ ಬರುತ್ತದೆ. ಶ್ರವಣಪ್ರಧಾನವಾದ ಈ ಪ್ರಕಾರದಲ್ಲಿ ಧ್ವನಿಗೆ ಅತ್ಯಂತ ಪ್ರಾಶಸ್ತ್ಯ-ನಿದೆ. ಕೇಳುತ್ತಿರುವಂತೆಯೇ ಅರ್ಥ ಹೊಳೆದು, ರಸಾಸ್ವಾದಕ್ಕೆ ಎಡೆ ಮಾಡಿಕೊಡುವಂಥ ಶಬ್ದಸಂಯೋಜನೆಯಿರಬೇಕು. ಸಾರಗ್ರಹಣದ ಹದಬೇಕು. ಸನ್ನಿವೇಶಗಳ ಆಯ್ಕೆಯಲ್ಲಿ ಹಾಗೂ ನಿರ್ವಹಣದಲ್ಲಿ ಕುಶಲತೆ ಬೇಕು. ಇವೆಲ್ಲ ದೃಷ್ಟಿಗಳಿಂದಲೂ 'ಶ್ರೀ ಶಂಕರಾಚಾರ್ಯರು'

ಒಂದು ಅತ್ಯುತ್ತಮ ತರಂಗರೂಪಕವಾಗಿದೆ. ಭಗವಾನ್ ಶಂಕರಾಚಾರ್ಯರ ಜೀವನದ ಐದು ಮಹತ್ತ್ವದ ಸನ್ನಿವೇಶಗಳನ್ನೆತ್ತಿಕೊಂಡು ಈ ರೂಪಕವನ್ನು ಐದು ಭಾಗಗಳಾಗಿ ವಿಂಗಡಿಸಲಾಗಿದೆ.

(೧) ಬೌದ್ಧಧರ್ಮದ ನಂತರ ಭಾರತದಲ್ಲಿ ಉಂಟಾದ ಧರ್ಮಕ್ರಾಂತಿಯ ಆಚಾರ್ಯ ಪುರುಷರೆಂದು ಶ್ರೀ ಶಂಕರಾಚಾರ್ಯರು ಗಣಿಸಲ್ಪಟ್ಟಿದ್ದಾರೆ. ವೈದಿಕಧರ್ಮ ಕೇವಲ ಡಂಭಾಚಾರವಾದಾಗ, ಬೌದ್ಧ ಧರ್ಮವೇ ಒಂದು ಧರ್ಮಕ್ರಾಂತಿಯನ್ನು ರೂಪಿಸಿತೆನ್ನಬಹುದು. ಆದರೆ ಆ ಕ್ರಾಂತಿಯ ಕಾವು ಆರಿ ಅವನತಿಗಿಳಿದಾಗ, ಅದಕ್ಕೊಂದು ಪ್ರತಿಕ್ರಾಂತಿಯ ಆವಶ್ಯಕತೆ ಭಾರತದ ಸಂಸ್ಕೃತಿಯ ದೃಷ್ಟಿಯಿಂದ ಮಹತ್ತ್ವದ್ದಾಗಿತ್ತು. ವೇದೋಪನಿಷತ್ತುಗಳ ಸಾರವನ್ನು ತಿರುಗಿ ಬೋಧಿಸುವ ಆವಶ್ಯಕತೆ ಉಂಟಾಯಿತು. ಇಂಥ ಕಾಲದಲ್ಲೇ ಶ್ರೀ ಶಂಕರಾಚಾರ್ಯರ ಅದ್ವೈತವು ಧರ್ಮಕ್ಕೆ ತಾರಕವಾಯಿತು. ಇಂಥ ಮಹಾಪುರುಷನನ್ನು ಅವತಾರೀ ಪುರುಷನೆಂದು ಮೊದಲಿಸಿಂದಲೂ ನಮ್ಮ ಸಂಸ್ಕೃತಿ ಪರಿಗಣಿಸಿದೆ. ಮಹೇಶ್ವರನ ಅವತಾರವೆಂದು ಶ್ರೀಶಂಕರರು ಗಣಿಸಲ್ಪಟ್ಟಿದ್ದಾರೆ. ಇದೇ ಅಂಶವನ್ನು ವಿಶದಪಡಿಸಲು ಪ್ರಥಮ ತರಂಗದಲ್ಲಿ ವೇದಮಾತೆಯ ಆರ್ತಧ್ವನಿಯನ್ನು ಆಲಿಸಿ, ಸ್ವತಃ ಮಹೇಶ್ವರನು ಅವತಾರ ಮಾಡುವೆನೆಂದು ಹೇಳುತ್ತಾನೆ. ವೇದ, ಉಪನಿಷತ್ತುಗಳನ್ನುಳಿಸಬೇಕಾಗಿದೆ. ಧರ್ಮದ ಪುನರುತ್ಥಾನವಾಗಬೇಕಾಗಿದೆ. ನಾಡಿನಲ್ಲಿ ಅವತಾರಿಯೊಬ್ಬನ ಉದಯಕ್ಕಾಗಿ ಸಿದ್ಧತೆಯಾಗಿದೆ.

(೨) ಶಂಕರಾಚಾರ್ಯರ ಬಾಲ್ಯಜೀವನದ ಚಿತ್ರಣವು ಇಲ್ಲಿದೆ. ತೀರ ಸಣ್ಣ ವಯಸ್ಸಿನಲ್ಲಿಯೇ ವ್ಯಾಸಂಗದಲ್ಲಿ ಪರಿಣತಿ ಪಡೆದ ಈ ಅಸಾಮಾನ್ಯ ಬಾಲಕನ ಸ್ಫುಟವಾದ ರೂಪ ಇಲ್ಲಿ ಮೂಡಿದೆ. ಶ್ರೀಶಂಕರಾಚಾರ್ಯರು ದೇವಾಂಶ ಸಂಭೂತರೆಂಬ ಅಂಶವನ್ನು ಪ್ರಾರಂಭದಲ್ಲಿಯೇ ವಿವರಿಸಿದ್ದರಿಂದ, ಈ ಬಾಲಕನ ಅಸಾಮಾನ್ಯತೆಯು ಅವರ ಬೆಳಕಿನಲ್ಲಿ 'ಪ್ರಾಕ್ತನ' ಸಂಸ್ಕಾರವಾಗಿ ಪರಿಣಮಿಸಿ ರೂಪಕದ ಉದ್ದಕ್ಕೂ ನಿಲ್ಲಲು ಸಹಾಯವಾಗಿದೆ. 'ರಾಮೋ ಹರಿಃ ಕರೀ ಭೂ ಭೃತ್' ಎನ್ನಲು ತಡವರಿಸುತ್ತಿರುವ ಗೆಳೆಯರ ನಡುವೆ' ಬಾಲ ಶಂಕರನು ಜ್ಞಾನವೃದ್ಧ ಬಾಲಕನಂತೆ ಕಂಗೊಳಿಸುತ್ತಾನೆ. ಈ ಮೊದಲೇ ವಿವರಿಸಿದಂತೆ ಈ ಬಾಲಬ್ರಹ್ಮನಿಗೆ ಬಾಲ್ಯವೆಲ್ಲಿಯದು? ಮಹತ್ಕಾರ್ಯಕ್ಕಾಗಿ ಸಿದ್ಧವಾಗಿ ಬಂದ ಜೀವ ತನ್ನ ತನ್ಮಯತೆಯಲ್ಲಿಯೇ ಇದೆ ಎಂಬ ಅಂಶ ಇಲ್ಲಿ ಮೂಡಿದೆ.

'ಧ್ಯೇಯಸ್ಸದಾ ಸವಿತೃಮಂಡಲ ಮಧ್ಯವರ್ತೀ
ನಾರಾಯಣಃ ಸರಸಿಜಾಸನ ಸನ್ನಿವಿಷ್ಟಃ।'—ತನ್ನ ಧ್ಯೇಯದ ವಿಷಯವಾಗಿ ಬಾಲಶಂಕರನ ಮುಖದಿಂದ ಬಂದ ಈ ಶ್ಲೋಕವು ಅತ್ಯಂತ ಹೃದಯಂಗಮವಾಗಿದೆ. ಸರ್ವಾಭರಣ ಭೂಷಿತ, ಸರ್ವಾಂಗ ಸುಂದರ ಸೂರ್ಯ ನಾರಾಯಣ. ಅವನಲ್ಲಿ ಲೀನವಾಗುವುದೇ ಧ್ಯೇಯ ಅತ್ಯಂತ ಧ್ವನಿಪೂರ್ಣವಾದ ಈ ಶ್ಲೋಕದ ಸೇರ್ಪಡೆ ಯೋಗ್ಯ ಸ್ಥಾನದಲ್ಲಾಗಿ ರೂಪಕದ ಧ್ವನಿಸಾಮರ್ಥ್ಯವು ಹೆಚ್ಚಿದೆ. ಪರಿಪೂರ್ಣ ಜೀವನಕ್ಕೆ ಧ್ಯೇಯವು ಇದಕ್ಕಿಂತ ಹೆಚ್ಚಿಗೇನಿರಬಹುದು? ಪ್ರಖರ ಜ್ಞಾನ ಒಂದು ಕಡೆ, ಸೌಂದರ್ಯದ ದೃಷ್ಟಿ ಇನ್ನೊಂದೆಡೆ, ಪರಮಾತ್ಮನಲ್ಲಿ ಕೇವಲ ಭಕ್ತಿ ಇನ್ನೊಂದೆಡೆ; ಇವು ಮೂರೂ ಸಮರಸವಾಗಿ ಶ್ರೀಶಂಕರಾಚಾರ್ಯರಲ್ಲಿ ಬೆರೆತುಕೊಂಡಿವೆ. ಅದನ್ನು ಮೇಲಿನ ಶ್ಲೋಕ ಬಹಳ ಸಾಂಕೇತಿಕವಾಗಿ ವಿವರಿಸಿದೆ ಎನ್ನಬಹುದು.

(೩) ಮುಂದಿನ ತರಂಗದಲ್ಲಿ ಶ್ರೀ ಶಂಕರಾಚಾರ್ಯರ ಉಪನಯನದ ಪ್ರಸಂಗವು ಬಂದಿದೆ. ಗಾಯತ್ರಿಯ ಉಪದೇಶಾಮೃತವನ್ನು ಕುಡಿದು ಆ ಆನಂದ ತನ್ಮಯತೆಯಲ್ಲಿ ಅವರ ಅಂತಶ್ಚಕ್ಷು ಅರಳಿರಬೇಕು. 'ಗಾಯಂತಂ ತ್ರಾಯತಿ'— ಆ ದಿವ್ಯ ಮಂತ್ರ ಸ್ಪರ್ಶದಿಂದ ಬಾಲಕನಲ್ಲಿಯ ದೇವಾಂಶವು ಜಾಗೃತವಾಗಿದೆ. 'ಅನ್ನಂ ಬ್ರಹ್ಮೇತಿ ವ್ಯಜಾನಾತ್' ಮಂತ್ರಪನ್ನು ಅರಗಿಸಿಕೊಳ್ಳುತ್ತಿರುವಂತೆಯೇ 'ಆನಂದಂ ಬ್ರಹ್ಮೇತೀ ವ್ಯಜಾನಾತ್'— ಮಂತ್ರದೆಡೆಗೆ ಅವರ ಊರ್ಧ್ವಮುಖ-ಚೇತನವು ತಿರುಗಿದೆ. ಜಿಜ್ಞಾಸೆ ಮೂಡಿದೆ. 'ಅಥಾತೋ ಬ್ರಹ್ಮ ಜಿಜ್ಞಾಸಾ'— ಸೂತ್ರಭಾಷ್ಯಕ್ಕೆ ಶ್ರೀಕಾರ ಹಾಕಲು ಸಾಧನೆ ಪ್ರಾರಂಭವಾಗಿದೆ.

(೪) ಮುಂದಿನ ತರಂಗದಲ್ಲಿ, ಸಂನ್ಯಾಸಕ್ಕೆ ತಾಯಿಯ ಅನುಮತಿ ಪಡೆದು ಗುರುವಿನ ಅನ್ವೇಷಣೆಗಾಗಿ ಶ್ರೀಶಂಕರಾಚಾರ್ಯರು ಹೊರಟ ವಿಷಯವನ್ನು ನಿರೂಪಿಸಲಾಗಿದೆ. ಕೇರಳದಿಂದ ನರ್ಮದೆಯ ವರೆಗೆ ಸತತವಾಗಿ ಅನ್ವೇಷಣೆ ಮಾಡುತ್ತ ಬರುತ್ತಿದ್ದಾನೆ ಬಾಲಶಂಕರನು.. ಗುರುವಿನ ಸುಳಿವೇ ಇಲ್ಲ. ಅವನ ಹೊರೆಗೆ ಮಾರ್ನುಡಿದಂತೆ ತಾಯಿಯನುಡಿ ಕೇಳಬರುತ್ತದೆ. ಸ್ವಲ್ಪ ಅಸಮಾಧಾನದಿಂದಲೇ ತಾಯಿ ಸಂನ್ಯಾಸ ಸ್ವೀಕಾರಕ್ಕೆ ಅನುಮತಿ ಕೊಟ್ಟರಬಹುದು; ಆದರೆ ಮಗುವಿನ ಹೊರೆಗೆ ಓ ಗೊಡದ ತಾಯಿಯಿರಲಾರಳು. "ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ"— ತೀರ ಆರ್ತರಾದಾಗ ಶಂಕರಾಚಾರ್ಯರ ಬಾಯಲ್ಲಿ ಬಂದ ಈ ಮಾತು, ರೂಪಕಕ್ಕೆ ಬಹಳ ಕಳೆಯಿತ್ತಿದೆ. ಪ್ರಸಿದ್ಧವಾದ ಅವರ 'ದೇವೀ ಕ್ಷಮಾಪನ ಸ್ತೋತ್ರ'ದ ನೆನಹು ಮೂಡಿ ಶ್ರೇಷ್ಠ ಭಕ್ತಿಗೀತೆಗಳನ್ನು ರಚಿಸಿದ ಶ್ರೀ ಶಂಕರಾಚಾರ್ಯರ ವ್ಯಕ್ತಿತ್ವಕ್ಕೆ — ಅವರ ಭಕ್ತಿಮುಖಕ್ಕೆ — ಹಿನ್ನೆಲೆಯಾಗಿ ನಿಲ್ಲುತ್ತದೆ. ಬಹುಶಃ ಈ ಅನ್ವೇಷಣೆಯ ಕಾಲದಲ್ಲೇ ಅವರ ಪ್ರಸಿದ್ಧ ಭಕ್ತಿಗೀತೆಗಳು ಕೆಲವು ಮೂಡಿರಬಹುದು.

(೫) ಶ್ರೀ ಶಂಕರಾಚಾರ್ಯರು ಗುರುವಿನಿಂದ ಶಾಸ್ತ್ರೀಯ ಸಂನ್ಯಾಸ ದೀಕ್ಷೆ ಪಡೆದು, ವ್ಯಾಸಂಗ ಮಾಡಿ ಪರಮಗುರು ಬಾದರಾಯಣರೆಡೆಗೆ ಹೊರಟು ನಿಂತ ವಿಷಯ ಮುಂದಿನ ತರಂಗದಲ್ಲಿ ನಿರೂಪಿತವಾಗಿದೆ. ಬಾದರಾಯಣರ ಆದೇಶದಂತೆ ಗೋವಿಂದ ಭಗವತ್ಪಾದರು ನರ್ಮದಾತೀರದಲ್ಲಿ ಈ ಬಾಲ ಸಂನ್ಯಾಸಿಗಾಗಿ ಕಾದು ಕುಳಿತಿದ್ದಾರೆ. ಪೂರ್ಣೆಯಿಂದ ನರ್ಮದೆಯ ವರೆಗೆ ಅನ್ವೇಷಣೆ ಮಾಡುತ್ತ ಬಂದ ಬಾಲ ಶಂಕರನಿಗೆ ಗುರುವಿನ ದರ್ಶನವಾಗುತ್ತದೆ. ಶಿವಸಾನ್ನಿಧ್ಯಕ್ಕೆ ನರ್ಮದಾತೀರ ಬಹಳ ಪ್ರಸಿದ್ಧವಾದದ್ದು. ಈಶ್ವರಾಂಶ ಸಂಭೂತರಾದ ಶ್ರೀ ಶಂಕರಾಚಾರ್ಯರಿಗೆ ಗುರೂಪದೇಶ ಅಲ್ಲಿ ದೊರೆತು, ಸಿದ್ಧಿಗಳೆಲ್ಲವೂ ದೊರೆತು, ಯುಕ್ತ ಕಾರ್ಯಕ್ಕಾಗಿ ಬದರೀಕಾಶ್ರಮದೆಡೆಗೆ ಮುಂಬರಿಯುತ್ತಾರೆ.

' ವಿರಿಂಚಿ ವಿಷ್ಣು ಶಂಕರ ಸ್ವಕೀಯ ಧಾಮವರ್ಮದೇ
ತ್ಪದೀಯ ಪಾದ ಪಂಕಜಂ ನಮಾಮಿ ದೇವಿ ನರ್ಮದೇ '

ಎಂದು ಹಾಡಿದ್ದಾರೆ ಶ್ರೀ ಶಂಕರಾಚಾರ್ಯರು. ನರ್ಮದಾ ತೀರದ ವಾಸ್ತವ್ಯ ಶ್ರೀ ಶಂಕರಾಚಾರ್ಯರ ಜೀವನದಲ್ಲಿ ಒಂದು ಮಹತ್ತ್ವದ ಘಟ್ಟವೆಂದು ಹೇಳಬಹುದು. ದೀಕ್ಷೆ, ವ್ಯಾಸಂಗ ಹಾಗೂ ಸಾಧನೆಗಳನ್ನು ಅವರು ಇಲ್ಲಿಯೇ ಗೋವಿಂದ ಭಗವತ್ಪಾದರ ಸನ್ನಿಧಿಯಲ್ಲಿ ಮಾಡಿ, ದಿಗ್ವಿಜಯಕ್ಕಾಗಿ ಸನ್ನದ್ಧರಾದರೆಂದು ತಿಳಿಯಬಹುದು. ಸತ್ಯದ ಪೇಲಣ ಹಿರಣ್ಮಯಪಾತ್ರವು ಮುಗುಚಿ ಸತ್ಯಸೂರ್ಯನ ಆವಿಷ್ಕಾರ ಅವರಿಗಾದುದು ಪ್ರಾಯಶಃ ಇದೇ ಸ್ಥಳದಲ್ಲಿಯೇ ಇರಬಹುದು. ಗುರುಸಾನ್ನಿಧ್ಯದಲ್ಲಿ ಉಪನಿಷತ್ತಿನ ಮಹಾವಾಕ್ಯಗಳ ಬಗ್ಗೆ ಚರ್ಚೆ ನಡೆಸಿ ಒಂದು ಹದಕ್ಕೆ ಬಂದಿದೆ. ' ಅಹಂ ಬ್ರಹ್ಮಾಸ್ಮಿ ', ' ಪ್ರಜ್ಞಾನಂ ಬ್ರಹ್ಮ ' ಇವೇ ಮೊದಲಾದ ಮಹಾವಾಕ್ಯಗಳ ಬಗ್ಗೆ ಬಿಜ್ಞಾಸೆ ಮೂಡಿ ಬೆಳೆದಿದೆ. ಶಿಷ್ಯನ ಅಸಾಮಾನ್ಯತೆಯನ್ನು ಮೊದಲೇ ಅರಿತವರಾದ ಗೋವಿಂದಭಗವತ್ಪಾದರು ಈ ವಿಶ್ವಜೇತನನ್ನು ಇಟ್ಟುಕೊಳ್ಳಲು ಬಯಸಲಿಲ್ಲ. ಬದರಿಕಾಶ್ರಮದಲ್ಲಿ ಪರಮಗುರು ಅವನಿಗಾಗಿ ಕಾಯುತ್ತಿದ್ದಾನೆ. ತಮ್ಮಿಂದ ಕಲಿಯಬೇಕಾದ್ದು ಮುಗಿದ ಮೇಲೆ ಮುಂದಿನ ಬೆಳಕನ್ನು ಸೂಚಿಸಿ ಪ್ರಯಾಣಕ್ಕೆ ಅನುಮತಿಯಿತ್ತು. ಶಿಷ್ಯನನ್ನು ಹರಿಸಿ ಕಳಿಸುವ ಈ ದೃಶ್ಯ ಬಹಳ ಮಾರ್ಮಿಕವಾಗಿ ರೂಪಕದಲ್ಲಿ ಮೂಡಿದೆ. ' ಪೂರ್ಣಮದಃ ಪೂರ್ಣಮಿದಂ ' ಎಂಬ ಈಶಾವಾಸ್ಯದ ಶಾಂತಿಮಂತ್ರವನ್ನು ಪಠಿಸುತ್ತ ಶಂಕರನು— ಶಂಕರ ಭಗವತ್ಪಾದರು ಪ್ರಯಾಣ ಬೆಳೆಸುತ್ತಾರೆ.

ಇದಿಷ್ಟು ರೂಪಕದ ಸ್ಥೂಲ ಪರಿಚಯವಾಯಿತು. ಮೊದಲೇ ಹೇಳಿದಂತೆ ಲೇಖಕರು ಸನ್ನಿವೇಶಗಳ ಆಯ್ಕೆಯಲ್ಲಿ ಹಾಗೂ ಅವುಗಳ ನಿರ್ವಹಣೆಯಲ್ಲಿ ಕೌಶಲ್ಯವನ್ನೂ ಸಾಮರ್ಥ್ಯವನ್ನೂ ತೋರಿಸಿದ್ದಾರೆ. ಮೇಲೆ ವಿವರಿಸಿದ ಐದು ಸನ್ನಿವೇಶಗಳ ಸಂಯೋಜನೆಯಿಂದ ಶ್ರೀ-ಶಂಕರಾಚಾರ್ಯರ ಸಮಗ್ರಜೀವನದ ಕಲ್ಪನೆ ಮೂಡಿ ನಿಲ್ಲುತ್ತದೆ. ಅಲ್ಲಲ್ಲಿ ಉಚಿತವಾದ ಸಂಸ್ಕೃತ ಶ್ಲೋಕಗಳಿಂತೂ ರೂಪಕಕ್ಕೆ ಬಹಳ ಕಳೆ ತಂದಿವೆ. ವೇದೋಪನಿಷತ್ತುಗಳು ಹಾಗೂ ಭಕ್ತಿ ಶ್ಲೋಕಗಳ ಒಂದೆರಡು ಸಾಲುಗಳು ಯೋಗ್ಯಸ್ಥಾನಗಳಲ್ಲಿ ಹೊಂದಿಕೊಂಡು ರೂಪಕದ ಧ್ವನಿಸಾಮರ್ಥ್ಯವನ್ನು ಹೆಚ್ಚಿಸಿವೆ. ಇವಕ್ಕೆ ' ಧ್ಯೇಯಸ್ಸದಾ ಸವಿತೃ ಮಂಡಲ ಮಧ್ಯವರ್ತೀ ' ಎಂಬ ಶ್ಲೋಕವು ಅತ್ಯುತ್ಕೃಷ್ಟ ಉದಾಹರಣೆಯಾಗಿದೆ. ' ತಸ್ಮೈಕ ' ಮುತಪ ತಾತ್ತ್ವಿಕ ಹಿನ್ನೆಲೆ ಕೂಡ ಅಲ್ಲಲ್ಲಿ ಸೇರಿಕೊಂಡು ಸಮಗ್ರಚಿತ್ರಣಕ್ಕೆ ದಾರಿ ಮಾಡಿಕೊಟ್ಟಿದೆ. ಗೋವಿಂದ ಭಗವತ್ಪಾದರು ಶ್ರೀಶಂಕರಾಚಾರ್ಯರಿಗೆ ವಿವರಿಸುವ ಉಪನಿಷತ್ತಿನ ಮಹಾ ವಾಕ್ಯಗಳು ಈ ದೃಷ್ಟಿಯಲ್ಲಿ ಯೋಗ್ಯ ಹಿನ್ನೆಲೆಯನ್ನು ಕೊಡುತ್ತವೆ. ಸರಳವಾದ ಭಾಷೆ ತರಂಗ ರೂಪಕಕ್ಕೆ ಒಂದು ವರವೆಂದು ಹೇಳಬಹುದು. ಇಲ್ಲಿಯ ಸರಳ ಭಾಷೆಯ ಹದವು ರಸಾಸ್ವಾದಕ್ಕೆ ಬಹಳ ಪ್ರಯೋಜನಕಾರಿಯಾಗಿದೆ. ಈ ಐದು ಸನ್ನಿವೇಶಗಳ ಜೊತೆಗೆ ' ನಿರೂಪಕ'ನ ಸಂಗ್ರಹವಾದ ವಿವರಣೆಯು ಕೂಡಿಕೊಂಡು, ತರಂಗರೂಪಕವು ಪೂರ್ಣವಾಗಿ ರೂಪುಗೊಂಡಿದೆ. ಕೊನೆಯಲ್ಲಿ ಬರುವ ' ಪಲಾಪ ' ಪ್ರಸಂಗವು (ನರ್ಮದಾನದಿಯನ್ನು ಶ್ರೀ ಶಂಕರಾಚಾರ್ಯರ ಕಮಂಡಲು ಹೀರುವುದು.) ಉಳಿದವುಗಳ ಜೊತೆಗೆ ಅಷ್ಟು ಸರಿಯಾಗಿ ಹೊಂದಿಲ್ಲವೆನ್ನಬಹುದು. 'ನಿರೂಪಕ'ನ ವಿವರಣೆಯೇ ನಮಗೆ ಇಲ್ಲಿ ಈ ಪ್ರಸಂಗದ ಬಗ್ಗೆ ಹೇಳಬೇಕಾಗುವುದಕ್ಕಾಗಿಯೋ ಏನೋ ಅಷ್ಟೊಂದು ಪರಿಣಾಮಕಾರಿಯಾದಂತೆ ತೋರುವುದಿಲ್ಲ. ಗೋವಿಂದ ಭಗವತ್ಪಾದರಿಂದ ನಿರೂಪಣೆ ತೆಗೆದುಕೊಳ್ಳುವಾಗ ಶ್ರೀ ಶಂಕರಾಚಾರ್ಯರ ತೀರ ಪ್ರಸಿದ್ಧವಾದ ' ಭಜ ಗೋವಿಂದಂ ' ಎಂಬ ಸ್ತೋತ್ರದ ಒಂದೆರಡು ಸಾಲುಗಳು ಈಗ ಇದ್ದ ಶಾಂತಿ ಮಂತ್ರದ ಜೊತೆಗೆ ಸೇರಿದ್ದರೆ, ರೂಪಕಕ್ಕೆ ಇನ್ನೂ ಹೆಚ್ಚಿನ ಕಳೆಯೇರುತ್ತಿತ್ತು.

ಹೊಸದಾಗಿ ಕನ್ನಡ ಸಾಹಿತ್ಯಕ್ಕೆ ಬಂದ ಈ ಸಾಹಿತ್ಯ ಪ್ರಕಾರವನ್ನು ಶ್ರೀಯುತ ಬೆಟಗೇರಿ ಕೃಷ್ಣಶರ್ಮರಂತಹ ಹಿರಿಯರು ಬಳಸಿಕೊಂಡು ಅದಕ್ಕೊಂದು ರೂಪ ತರುವುದು ಯೋಗ್ಯವಾದದ್ದು. ಈಗಾಗಲೇ ಹಲವಾರು ಇಂಥ ರೂಪಕಗಳನ್ನು ಕನ್ನಡಕ್ಕೆ ಕೊಟ್ಟ ಅವರು ಇನ್ನೂ ಹೆಚ್ಚು ಕೊಡುವರೆಂಬ ನಂಬಿಕೆಯನ್ನು ಇವರ ' ಶ್ರೀ ಶಂಕರಾಚಾರ್ಯರು ' ಸಮರ್ಥಿಸುತ್ತದೆ.

—●—

ಸಾದರ ಸ್ವೀಕಾರ

೭೯. ಸಂದರ್ಶನ (ಕನ್ನಡ ವಾರಪತ್ರಿಕೆ) : ಸಂಪಾದಕರು ಶ್ರೀಮಾನ್ ವಿ. ಬಿ. ನಾಯಕ, ಎಂ. ಎ., ಎಲ್ ಎಲ್. ಬಿ. ವಿಜಾಪುರ. ಶ್ರೀಮಾನ್ ಟಿ. ಕೆ. ನಾಯಕ, ಬಿ. ಎಸ್ಸಿ., ಬಿ. ಟಿ. ' ಸಂದರ್ಶನ ' ಕಾರ್ಯಾಲಯ, ವಿಜಾಪುರ. ಡೆಮಿ ಹೋಲಿಯೊ ೧೨ ಪುಟಗಳು. ವಾರ್ಷಿಕ ಚಂದಾ ೭.೦೦; ಅರ್ಧ ವರ್ಷಕ್ಕೆ ೪.೦೦; ಬಿಡಿ ಸಂಚಿಕೆ ೦೦.೧೨.

ಪತ್ರಿಕಾವ್ಯವಹಾರವನ್ನೂ ಅಭಿರುಚಿಯ ಔಚಿತ್ಯವನ್ನೂ ಜೆನ್ನಾಗಿ ಅರಿತ ಶ್ರೀ. ವಿ. ಬಿ. ನಾಯಕರು ಇದರ ಸಂಪಾದಕರೆಂದು ಹೇಳಿದರೆ ಸಾಕು; ಈ ಪತ್ರಿಕೆಯ ಸಾಂಸ್ಕೃತಿಕ—ವೈಚಾರಿಕ ಮಟ್ಟವು ತಾನೇ ಗೊತ್ತಾಗುವುದು. ಇಂತಹ ಒಳ್ಳೆಯ ಪತ್ರಿಕೆಗಳು ಜನತೆಯ ಸಹಕಾರ ಪಡೆದುಕೊಂಡು ಬಹುಕಾಲ ಬದುಕಬೇಕು.

೮೦. ನಕ್ಷತ್ರ (ಕವನಸಂಕಲನ) : ಲೇಖಕರು ಮತ್ತು ಪ್ರಕಾಶಕರು ಶ್ರೀ. ಆರ್. ಎ. ಹೊರಡಿ, ಕರ್ನಾಟಕ ಕಾಲೇಜ, ಧಾರವಾಡ. ಪ್ರೂ. ಕ್ಯಾ. ೪. ೫೬ ಪುಟಗಳು. ಬೆಲೆ : ೧.೦೦.

೮೧. ನವುಸ್ಕಾರ (ಗದ್ಯ ಕವನಸಂಕಲನ) : ಲೇಖಕರು ಶ್ರೀಮಾನ್ ಸಿಂಪಿ ಲಿಂಗಣ್ಣ. ಚಡಚಣ. ಪ್ರಕಾಶಕರು: ಶ್ರೀ ಅರವಿಂದ ಗ್ರಂಥಾಲಯ, ಪೋ. ಚಡಚಣ; ಜಿಲ್ಲಾ: ವಿಜಾಪುರ. ಕ್ರೌ. ಅ. ೧೧೦ ಪುಟಗಳು. ಬೆಲೆ : ೧.೫೦.

೮೨. ನಮುದ್ರದೀಚೆಯಿಂದ (ಪ್ರವಾಸ ಪ್ರಬಂಧ) : ಬರೆದವರು : ಶ್ರೀಮಾನ್ ವಿ. ಕೃ. ಗೋಕಾಕ ಅವರು. ಪ್ರಕಾಶಕರು : ಕರ್ನಾಟಕ ಸಹಕಾರೀ ಸಾಹಿತ್ಯ ಸಂಘ ಲಿಮಿಟೆಡ್, ಧಾರವಾಡ. ಕ್ರೌ. ಅ. ೧೬೮ ಪುಟಗಳು. ಬೆಲೆ : ೧.೫೦.

ಶರತ್‌ಪ್ರಕಾಶನ ಮಂದಿರ, ಶಹಾಪುರ (ಬೆಳಗಾಂವ)

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ ನಾಲ್ಕನೆಯ ಆವೃತ್ತಿ

ರಾಜಯೋಗಿ

ಹೊಸ ಕಾಲಕ್ಕೆ ತಕ್ಕ

ಮುದ್ರಣ-ಬಂಧನಗಳ ಬೆಡಗಿನೊಂದಿಗೆ ಇದೀಗ ಬೆಳಕಿಗೆ ಬಂದಿದೆ.

ಐತಿಹಾಸಿಕ ಕಾದಂಬರಿಯೆಂದರೆ, ಆ ಕಾಲದ ಜನಜೀವನದ ತದ್ರೂಪ ಚಿತ್ರಣವಾಗಿರಬೇಕು. ವಾಚಕರಿಗೆ ತಾವು ಐತಿಹಾಸಿಕ ಕಾಲದಲ್ಲಿಯೇ ಇದ್ದೇವೆ, ಘಟನೆ ನಡೆವ ಪ್ರದೇಶದಲ್ಲಿಯೆ ಇದ್ದೇವೆ—ಎನಿಸಬೇಕು. ಪಾತ್ರಗಳು ಐತಿಹಾಸಿಕವಾದರೂ, ಅಂದಿನ ಕಾಲದ ಜೀವನವನ್ನು ಜೀವಂತ ವ್ಯಕ್ತಿಗಳಾಗಿ ವ್ಯವಹರಿಸಿ ತೋರಿಸಬೇಕು.

'ರಾಜಯೋಗಿ' ಕಾದಂಬರಿಯಲ್ಲಿ ಇವೆಲ್ಲ ಗುಣಗಳೂ ಇವೆ. ಎಂತಲೇ ಇದು ಹುಟ್ಟಿ ೫೫ ವರ್ಷಗಳಾದರೂ, ವಾಚಕರಿಗೆ ಹೊಸ ಹೊಸದೇ ಎನಿಸುತ್ತದೆ.

ಪ್ರತಿಯೊಂದು ವಾಚನಮಂದಿರದಲ್ಲಿಯೂ ಇರಲೇಬೇಕಾದ ಕಾದಂಬರಿಯಿದು.

ಕ್ರೌ. ಅ. ೧೪೦ ಪುಟಗಳು. ● **ಬೆಲೆ : ೨ ರೂ. ೨೫ ನಯೇಪೈಸೆ**

ನಮ್ಮ ಮಂದಿರದ ಬೇರೆ ಪ್ರಕಟನೆಗಳು

ಮಗಳ ಮದುವೆ
(ಸಾಮಾಜಿಕ ಕಾದಂಬರಿ)
ಕ್ರೌ. ಅ. ೩೫೦ ಪುಟ * ಬೆಲೆ : ೪ ರೂ.

ಕಾರಹುಣ್ಣಿವೆ
(ಕವನಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೨ ರೂ.

ಬೆಳವಡಿ ಮಲ್ಲಮ್ಮ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೫೦

ಬೆಂದ ಹೃದಯ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೨೫

ನಲ್ ವಾಡುಗಳು
(ಪ್ರೀತಿ ಗೀತ ಸಂಕಲನ)
ಕ್ರೌ. ಅ. ೭೨ ಪುಟ ● ಬೆಲೆ : ೧.೨೫

'ಆನಂದಕಂದ'ರ ಯಾವ ಪುಸ್ತಕಗಳು ಬೇಕಾದರೂ ನಮಗೆ ಬರೆಯಿರಿ!

ಶರತ್‌ಪ್ರಕಾಶನ ಮಂದಿರ, ಕಚೇರಿಗಲ್ಲಿ, ಶಹಾಪುರ (ಬೆಳಗಾಂವ)

Printed by Basavaraj Horadi at Lalita Mudranalaya, Dharwar &
Published for the Propritors Jayanti Publications by K. S. Betgeri at Jayanti Office, Dharwar.





ಜಯಂತಿ

ನಮ್ಮ ನಮ್ಮ ಕಜ್ಜ

*

ನಮ್ಮ ನಮ್ಮ ಕಜ್ಜಂಗಳ ಒಮ್ಮನದಿಂ ಮಾಡುತಿದ್ದರೆ ಸುಮ್ಮಾನವ ಸುಗ್ಗಿ ಎಲ್ಲೆಲ್ಲಿಯೂ ಕಾಣಯ್ಯಾ! ನಮ್ಮ ನಮ್ಮ ಕಜ್ಜಂಗಳನುಳಿದು ಅನ್ಯರ ಕಜ್ಜಂಗಳಿಗೆ ಕೈಯಿಕ್ಕಿದರೆ, ಸುಮ್ಮಾನವೆಂದೂ ತಪ್ಪದು ನೋಡಯ್ಯಾ!

ಒಕ್ಕಲಿಗ ತನ್ನ ತಕ್ಕ ಬೇಸಾಯವನುಳಿದು, ತಕ್ಕಡಿ ಹಿಡಿಯುವೆನೆಂದು ಹೊರಟರೆ, ಬೇಸಾಯದ ಬೆಳಸಿಗೆ ಸೊನ್ನೆ; ತಕ್ಕಡಿಯ ಕಾರ್ಯವರಿಯದ ಒಕ್ಕಲಿಗ, ಕೈಯಲ್ಲಿದ್ದುದನ್ನೆಲ್ಲ ಕಳೆದುಕೊಂಡು, ದಿಕ್ಕುದಿಕ್ಕಿಗೆ ಬಾಯ್ಬಿಡುವಂತಪ್ಪುದಯ್ಯಾ!

ಕುಂಬಾರ ತನ್ನ ತಿಗರಿಯ ಕಾಯಕ ಬಿಟ್ಟು ಕಂಬಾರಿಕೆಯ ಕಜ್ಜಕ್ಕೆಳಸಿದರೆ, ಮಡಕೆ-ಕುಡಿಕೆಗಳೂ ಇಲ್ಲ; ಕುಡುಗೋಲು ಕೊಡಲಿಗಳೂ ಇಲ್ಲ. ಕುರುಬ ತನ್ನ ಕುರಿಗಜ್ಜವ ಬಿಟ್ಟು ಪರಿದಾಸನಾಗುನೆನೆಂದು ಹೊರಟರೆ, ಕುರಿಗಳೆಲ್ಲ ತೋಳಗಳ ಬಾಯ್ಗೆ ತುತ್ತು; ಕುರುಬನನು ಹಿಡಿವುದು ಹಸಿನೆಯ ಕುತ್ತು!

ಜೇಡ ತನ್ನ ಮಗ್ಗವ ಬಿಟ್ಟು, ಕಾಡ ಕಡಿಯಲು ಮನ ಮಾಡಿದರೆ, ನಾಡಿಗರಿಗೆ ಬಟ್ಟೆಯಿಲ್ಲ; ಜೇಡಸಿಗೆ ಹೊಟ್ಟೆಗಿಲ್ಲ ನೋಡಿ ಭೋ! ಬಡಗಿ ತನ್ನ ಜ್ಜಗಕೆ ಬೇಸತ್ತು ಮಡಿವಳನ ಕಜ್ಜ ಕೈಕೊಂಡರೆ, ಬಡಗಿಯ ಕೊರತೆಯುಂಟೆ ಉಂಟು; ಮಡಿಬಟ್ಟೆಗಳೆಲ್ಲ ಮೈಲಿಗೆ ಗಂಟು ಕಾಣಿಭೋ!

ತನ್ನ ಕಜ್ಜವೆಂಬುದೆ ಮಾನವನಿಗೊಂದು ಮಹಾ ತಪಸ್ಸು ಕಾಣಯ್ಯಾ! ಈ ತಪಸ್ಸಾಧನೆಯಿಂದ ತನಗೂ ಬಾಳು, ಜನರಿಗೂ ಬಾಳು-ಎಂದು ಹೇಳುವ ನಮ್ಮ ಕಾಲರಾಯ!

JAYANTI

ಈ ಸಂಚಿಕೆಯಲ್ಲಿ

❋

ಕವಿಯನ್ನೊಳಗೊಂಡ ಕಾಲಪುರುಷ (ಸಂಪಾದಕೀಯ)
ಸಂಪಾದಕರು ೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೩

ಸೋಮುಣ್ಣಿ ಮಾವ (ಸಣ್ಣಕತೆ)
'ಭಾರತೀಸುತ' ವೀರರಾಜೇಂದ್ರಪೇಟೆ ೫

ನಮ್ಮ ಕಾರವಾರ (ಪ್ರವಾಸ ಪ್ರಬಂಧ)
ಶ್ರೀ. ಗಿರಡ್ಡಿ ಗೋವಿಂದರಾಜ, ಧಾರವಾಡ ೧೧

ಸರಸಾಕ್ಷಿಯೋಗು (ಕವಿತೆ)
ಶ್ರೀ. ಎಜ್. ಜೆ. ಉಪಾಧ್ಯಾಯ, ಎಂ. ಎ. ಹೈದರಾಬಾದ್ ೧೬

ಕಾವ್ಯ ಚೈತ್ರ
ಶ್ರೀ. ಈಶ್ವರ ಹಿರೇನಂದಿಹಳ್ಳಿ, ಮೊರಬ ೧೬

ವ್ಹರ್ಜಿನಿಯಾ ವೂಲ್ಫ್ (ಸಾಹಿತ್ಯಿಕ ವ್ಯಕ್ತಿಪರಿಚಯ)
ಶ್ರೀಮತಿ ವಸಂತಲಕ್ಷ್ಮಿ, ಮದ್ರಾಸ್ ೧೭

ಮಂಜುಲಾ (ಸಣ್ಣಕತೆ)
ಶ್ರೀ. ವರಗಿರಿ ಮಾರ್ತಾಂಡರಾಯರು ಎಂ. ಎ. ಬಿ. ಟಿ. ಧಾರವಾಡ ೨೧

ಅಸೂಯೆ
ಶ್ರೀಮತಿ ಸೌ. ರಾಧಾಬಾಯಿ ಕಸುಲಾಪುರ, ಧಾರವಾಡ ೨೪

ಎರಡು ಚಿತ್ರಗಳು (ಜೀವನ ಸಮಸ್ಯೆ)
ಶ್ರೀ. ಮಹಲಿಂಗ ಯಾಳಗಿ, ಮುಂಡರಗಿ ೨೬

ಮಳೆ ನಿಂತಮೇಲೆ ಮಲ್ಲಿಗೆ (ಕವಿತೆ)
ಶ್ರೀ. ಜ. ಶ್ರೀ. ಜ. ದೇವದುರ್ಗ ೨೮

ಮಣ್ಣು-ಕಲ್ಲು (ಕವಿತೆ)
"ರಂಜನ"ಭಟ್ಟ ಮದ್ರಾಸ್ ೨೮

ಇತಿಹಾಸದ ತೊಡಕುಗಳನ್ನು ಬಿಡಿಸಬಲ್ಲ ಪರಿಮಾಣು (ವೈಜ್ಞಾನಿಕ ಲೇಖನ)
ಮಿ. ಲಿನ್‌ವೂಲ್, ಜಾನ್‌ಹಾಪಕ್ಕಿನ್ಸ್ ವಿಶ್ವವಿದ್ಯಾಲಯ, ಅಮೇರಿಕೆ ೨೯

ವರದಿಗಾರ (ಬಲ್ಗೇರಿಯಾದ ಸಣ್ಣಕತೆ)
ಹ್ರಿಸ್ತೋ ಸ್ಮಿರ್ನೆನಸ್ಕಿ ೩೧

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ
ಶ್ರೀ. ಜಿ. ಬಿ. ಕುಲಕರ್ಣಿ ಜ್ಯೂ. ಬಿ. ಎ.
ಜನತಾಕಾಲೇಜ, ಧಾರವಾಡ ೩೪

ಸಾದರ ಸ್ವೀಕಾರ .... (ಕವರ್ ೩ನೆಯ ಪುಟದಲ್ಲಿ)

ಜಯಂತಿ

ಸಂಪುಟ ೨೩] [ಸಂಚಿಕೆ ೧

ಕುಟುಂಬವಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

○

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

○

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

○

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

○

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಕುದಿಯನ್ನೊಳಗೊಂಡ ಕಾಲಪುರುಷ

'ಸತ್ಯವಂತರಿಗಿದು— ಕಾಲವಲ್ಲ' ಎಂದು, ಜೀವನವಿಜ್ಞಾನಿಗಳಾದ ನಮ್ಮ ಹರಿದಾಸರು, ಲೋಕಕ್ಕೆಲ್ಲ ಸಾರಿ ಹೇಳಿದ್ದಾರೆ. ಇದನ್ನು ಜೆನ್ನಾಗಿ ಅರಿತವರಾದರೂ, ಈ ಕಾಲದಲ್ಲಿ ಹುಟ್ಟಿದ ನಮ್ಮ ಭಾರತ ಸ್ವಾತಂತ್ರ್ಯ ಪಿತಾಮಹ 'ಸತ್ಯೋಪಾಸನೆಯೇ ಮಾನವನ ಜೀವನ ಸರ್ವಸ್ವ' ಎಂಬುದನ್ನು ತನ್ನ ಪ್ರತ್ಯಕ್ಷ ಜೀವನದಿಂದ ಸಿದ್ಧವಮಾಡಿ ತೋರಿಸಿದ್ದಾನೆ. ದಾಸರು 'ಸತ್ಯವಂತರಿಗಿದು ಕಾಲವಲ್ಲ!' ಎಂದು ಕಂಡುಂಡು ಹೇಳಿದ್ದರೂ, ಆ ಕಾರಣದಿಂದ ಸತ್ಯವಿದೂರರಾಗಬೇಕೆಂದು ಎಲ್ಲಿಯೂ ಹೇಳಿಲ್ಲ; ಸತ್ಯಜೀವನವನ್ನು ನಡೆಯಿಸಬೇಕೆನ್ನುವವರಿಗೆ ಮುನ್ನೆಚ್ಚರಿಕೆಯ ಮಾತನ್ನು ಹೇಳಿದ್ದಾರೆ. ಸತ್ಯೋಪಾಸಕನು ಈ ಕಾಲದಲ್ಲಿ ಎಂತೆಂತಹ ತೊಡಕು–ತೊಂದರೆಗಳನ್ನು ಅನುಭವಿಸಬೇಕಾಗುವುದೆಂಬುದನ್ನು ಸೋದಾಹರಣವಾಗಿ ವಿವೇಚಿಸಿದ್ದಾರೆ.

ಈಗ ಮಹಾತ್ಮರ ಸತ್ಯ–ಅಹಿಂಸೆಗಳ ಗುರಿಯಿಂದ ಹೊರಬರುವ ಭಾರತದ ಜನತೆಗೂ ಧುರೀಣರಿಗೂ, ಮತ್ತೆ ನಮ್ಮ ದಾಸರು ಹೇಳಿದ 'ಸತ್ಯವಂತರಿಗಿದು ಕಾಲವಲ್ಲ' ಎಂಬ ವಚನವನ್ನು ನೆನಪಿಗೆ ತಂದುಕೊಡಬೇಕೆನಿಸುತ್ತದೆ. ಏಕೆಂದರೆ ಸತ್ಯವಂತನದು ವಕ್ರಮಾರ್ಗವಲ್ಲ; ಸರಳಮಾರ್ಗ. ಆತ ಕ್ಷಣಕ್ಕೊಂದು ಬಗೆಯ ಮಾತನಾಡುವವನಲ್ಲ; ಒಂದೆ ಒಂದು ಕಟ್ಟುನಿಟ್ಟಾದ ಮಾತಿನವನು.

ಇಂದಿನ ನಮ್ಮ ಭಾರತೀಯ ಪ್ರಜಾಪ್ರಭುತ್ವ ಅಜಾತಶತ್ರುತ್ವವನ್ನು ಸಾಧಿಸಬೇಕೆನ್ನುತ್ತಿದೆ. ಎಂತಲೆ ಜಗತ್ತಿನ ಪ್ರತಿಯೊಂದು ರಾಷ್ಟ್ರದ ರಾಜ್ಯಪ್ರತಿನಿಧಿಯನ್ನೂ ಭಾರತಕ್ಕೆ ಬರಮಾಡಿಕೊಂಡು, ತನ್ನ ಪ್ರೀತಿ–ವಿಶ್ವಾಸಗಳ ಕಾಣಿಕೆಯನ್ನು ಅರ್ಪಿಸುತ್ತದೆ. ಪರಸ್ಪರ ಮಿತ್ರತ್ವದ ಘೋಷಣೆಯನ್ನು ಹೊರಡಿಸುತ್ತದೆ. ಭಾರತದ ಜನತೆ ಇದೆಲ್ಲವೂ ನಿಜವೆಂಬ ನಂಬುಗೆಯಿಂದ ಹಿರಿಹಿರಿ ಹಿಗ್ಗುತ್ತದೆ; ತನ್ನ ರಾಷ್ಟ್ರನಾಯಕರ ವಿಷಯದಲ್ಲಿ ಧನ್ಯವಾದಗಳನ್ನು ವ್ಯಕ್ತಪಡಿಸುತ್ತದೆ.

ಭಾರತದ ರಾಷ್ಟ್ರನಾಯಕರಿಗೆ ಶಾಂತಿ, ಸತ್ಯ, ಅಹಿಂಸೆ ಇವೆಲ್ಲ ಬೇಕಾಗಿರಬಹುದು; ನುಡಿದಂತೆ ನಡೆಯಲು ತಾವು ಸಿದ್ಧರಿರಬಹುದು; ಆದರೆ ಹೊರಗಿನ ರಾಷ್ಟ್ರಗಳಿಗೆ ಶಾಂತಿ, ಸತ್ಯ, ಅಹಿಂಸೆ ಇವುಗಳಲ್ಲಿ ಸಂಪೂರ್ಣ ಶ್ರದ್ಧೆಯುಂಟೆಯೆ? ಇಲ್ಲಿ ಬಂದಾಗ ಆಡಿದಂತೆ, ಅವರು ತಮ್ಮ ರಾಷ್ಟ್ರದ ಜನತೆಯ ಮನಸ್ಸನ್ನು ತಿದ್ದುವುದಕ್ಕೆ ಸಾಧ್ಯವಿದೆಯೆ? ಸಾಧ್ಯವಿಲ್ಲವೆಂಬ ಮಾತು ದಿನದಿನವೂ ಅನುಭವಕ್ಕೆ ಬರತೊಡಗಿವೆ. ಏಕೆಂದರೆ, ಇಂದು ರಾಜ್ಯಸೂತ್ರವನ್ನು ಕೈಯಲ್ಲಿ ಹಿಡಿದಿರುವ ಧುರೀಣ, ನಾಳೆ ತನ್ನ ಸ್ಥಾನದಲ್ಲಿ ಉಳಿದಾನೆಂಬುದರ ನಿಯಮವೇ ಇಲ್ಲದಂತಾಗಿದೆ.

ಇಂದು ಜಗತ್ತಿನ ಯಾವ ರಾಷ್ಟ್ರದಲ್ಲಿಯೂ ಆಂತರಿಕ ಸೌಹಾರ್ದ–ಸೌಮನಸ್ಯಗಳಿಗೆ ಅವಕಾಶವೇ ಇಲ್ಲದಂತಾಗಿದೆ. ಪ್ರತಿಯೊಂದು ರಾಷ್ಟ್ರದಲ್ಲಿಯೂ ಪ್ರಭುತ್ವಪಕ್ಷ–ವಿರೋಧಿಪಕ್ಷ— ಎಂಬುವು ಇದ್ದೇ ಇರುವುವು. ಕೆಲಕೆಲವು ರಾಷ್ಟ್ರಗಳಲ್ಲಂತೂ ಮೂರು ಮೂರು ನಾಲ್ಕು ನಾಲ್ಕು ಪಕ್ಷಗಳಿರುವುವು. ಪ್ರತಿಯೊಂದು ಪಕ್ಷಕ್ಕೂ ಅಧಿಕಾರಭೂತ ಬಡಿದುಕೊಂಡಿರುವುದು. ಪ್ರಭುತ್ವದಲ್ಲಿ ಇದ್ದವರು, ತಮ್ಮ ಆಸನವನ್ನು ಭದ್ರಪಡಿಸಿಕೊಳ್ಳಲು ಹೆಣಗುವರು; ವಿರೋಧಿಪಕ್ಷಗಳವರು, ಅವರನ್ನು ಆಸನದಿಂದ ಉರುಳಿಸಿ, ತಾವು ಅಲ್ಲಿ ಕುಳಿತುಕೊಳ್ಳಬೇಕೆಂದು ಹೋರುವರು. ಈ ಹೋರಾಟ ಹೆಣಗಾಟಗಳಲ್ಲಿ, ರಾಷ್ಟ್ರದ ಸುಭದ್ರಜೀವನಕ್ಕೆ ಅತ್ಯವಶ್ಯವಾಗಿರುವ ಸ್ವರಾಷ್ಟ್ರಾಭಿಮಾನಕ್ಕೂ ಸ್ವಜನ ಭಾಂಧವ್ಯಕ್ಕೂ ತತ್ಪಾರ ಬಂದು ಕುಳಿತಿದೆ.

ಅಮೇರಿಕೆಯ ಸಂಯುಕ್ತ-ರಾಷ್ಟ್ರ, ಸೋವಿಯಟ್ ರಸಿಯಾ ಇವೆರಡೂ ಇಂದಿನ ಬಲಿಷ್ಠ ರಾಷ್ಟ್ರಗಳು. ಆಡಳಿತದ ತತ್ತ್ವಜ್ಞಾನದ ಮೂಲಕ ಅವೆರಡೂ ಇಂದು ಸುಂಪೋಷಸುಂದರಂತೆ ವಿರೋಧಿಗಳಾಗಿ ನಿಂತಿವೆ. ಬೇರೆ ದುರ್ಬಲ ರಾಷ್ಟ್ರಗಳಲ್ಲಿ ಅಲ್ಲಿಯ ಆಂತರಿಕ ಕಲಹದ ಮೂಲಕ, ಇವೆರಡೂ ಭೂತಗಳಿಗೆ ತಮ್ಮ ಕೈಗಳನ್ನು ಚಾಚಿ-ಅಲುಗಾಡಿಸಲು ಅವಕಾಶ ದೊರೆತಿದೆ. ಎಂತಲೇ ಯಾವ ರಾಷ್ಟ್ರದಲ್ಲಿ ನೋಡಿದರೂ, ಪ್ರಭುತ್ವಕ್ಕೆ ಸ್ಥೈರ್ಯವಿಲ್ಲ; ಜನತೆಯಲ್ಲಿ ಸುಖ-ಸಮಾಧಾನಗಳು ಇಲ್ಲ-ಹೀಗಾಗಿದೆ ಪರಿಸ್ಥಿತಿ. ಆದುದರಿಂದಲೇ ಯಾವ ರಾಷ್ಟ್ರದ ರಾಜ್ಯಪ್ರತಿನಿಧಿಯೂ ಭಾರತಕ್ಕೆ ಬಂದಾಗ ನುಡಿದ ನುಡಿ, ನಡೆದ ನಡೆ—ಇವು ತಾತ್ಕಾಲಿಕವಾದುವುಗಳೆಂಬುದನ್ನು ನಮ್ಮ ಜನ ಮನವರಿಕೆ ಮಾಡಿಕೊಳ್ಳಬೇಕಾಗಿದೆ.

ಮೊನ್ನೆನೊನ್ನೆ ನಮ್ಮ ಭಾರತ ಪ್ರಧಾನ ಮಂತ್ರಿಗಳು ಇಂಗ್ಲಂಡಿನಿಂದ ಮರಳಿ ಬರುವಾಗ, ಆಗಿನ ತುರ್ಕಸ್ತಾನ್ ಸರಕಾರದ ಅತಿಥಿಗಳಾಗಿ ಹೋಗಿದ್ದರು. ಸ್ನೇಹಪೂರ್ಣ ಆತಿಥ್ಯ ನಡೆಯಿತು; ಪರಸ್ಪರ ರಾಷ್ಟ್ರಗಳ ಸೌಹಾರ್ದ ಸಂಬಂಧದ ಮಾತು-ಕಥೆಗಳೂ ನಡೆದುವು. ಆದರೆ ನಮ್ಮ ಪ್ರಧಾನ ಮಂತ್ರಿಗಳು ಮರಳಿ ದಿಲ್ಲಿಗೆ ಬರುವುದರಲ್ಲಿಯೆ, ತುರ್ಕಸ್ತಾನದಲ್ಲಿ ಆಂತರಿಕ ಕ್ರಾಂತಿಯು ಜರುಗಿ ಹೊಸ ಸರಕಾರವನ್ನು ತಲೆ ಕೆಳಗೆ ಮಾಡಿ, ಹೊಸ ಸರಕಾರ ತಲೆಯೆತ್ತಿ ನಿಂತಿತು.

ಜಪಾನಿನ ನೋಬೊಷಿಕಿ ಕಿಷಿಯವರೂ ಭಾರತಕ್ಕೆ ಬಂದು ಹೋದವರು. ಭಾರತ ಸರಕಾರದ ಶಾಸನಘೋರಣವನ್ನು ಒಪ್ಪಿ ಪರಸ್ಪರ ಮಿತ್ರತ್ವದಿಂದಿರಲು ಪೂರ್ವಕ ಒಪ್ಪಿಕೊಂಡು ಹೋದವರು. ಆದರೆ ಜಪಾನಿನಲ್ಲಿಯ ಅಧಿಕಾರ ಲೋಭದ ಆಂತರಿಕ ಕಲಹ, ಕಿಷಿಯವರನ್ನು ಅವರ ಆಸನದಿಂದ ಎಳೆದೊಗೆದಂತೆ ಮಾಡಿದೆ. ಇಂಡೊನೇಷ್ಯಾದ ಹಣೆಯಬರೆಹವೂ ಹೀಗೆ; ವಿಯೇಟ್‌ನಾಮ್ ರಾಷ್ಟ್ರದ ಹಾಡೂ ಹೀಗೆ.

ಅರಬ ರಾಷ್ಟ್ರಗಳಲ್ಲಿಯೂ ಈ ಎರಡೂ ಮಹಾರಾಷ್ಟ್ರ ಭೂತಗಳು ತಂತಮ್ಮ ಕೈಗಳನ್ನಾಡಿಸುತ್ತಲಿವೆ. ಅಲ್ಲಿಯ ಪ್ರಭುತ್ವಗಳಿಗೂ ಪ್ರಜಾನಾಯಕರಿಗೂ ಸ್ಥಿರತೆಯೆ ಇಲ್ಲದಂತಾಗಿದೆ. ಒಂದೆ ಒಂದು ಭಾವನಾತ್ಮಕ ಬಂಧನದಲ್ಲಿದ್ದ ಜರ್ಮನ್ ಜನತೆ, ಗಂಡಭೇರುಂಡನಂತಾಗಿದೆ. ಒಂದು ತಲೆ ಪಶ್ಚಿಮದ ಪ್ರಬಲ ರಾಷ್ಟ್ರಗಳ ಕಡೆಗೆ ಒಲೆದಿದ್ದರೆ, ಇನ್ನೊಂದು ತಲೆ ಕಮ್ಯೂನಿಸ್ಟ್ ರಸಿಯದ ಕಡೆಗೆ ಒಲೆದಿದೆ. ಫ್ರಾನ್ಸ್ ರಾಷ್ಟ್ರವಂತೂ ಯಾವಾಗಲೂ ಆಂತರಿಕ ಕಲಹಗಳ ಕೇಂದ್ರ. ಎಂತಲೇ ಅದೂ ವಿಚಾರ ಸ್ವಾತಂತ್ರ್ಯವನ್ನೀಗ ಕಳೆದುಕೊಂಡು ಪ್ರಬಲಶಕ್ತಿಗಳ ಕೈಗೂಸಾಗಿದೆ.

ಒಂದು ಮಹಾರಾಷ್ಟ್ರದ ಮಿತ್ರತ್ವವನ್ನು ಸಾಧಿಸಿ, ಇನ್ನೊಂದು ಮಹಾರಾಷ್ಟ್ರದೊಂದಿಗಿನ ದ್ವೇಷವನ್ನು ತೀರಿಸಿಕೊಳ್ಳಲೆಂದು ಕೆಂಪು ಚೀನಾ ರಾಷ್ಟ್ರದ ಸಂಸ್ಕೃತಿಶೂನ್ಯ ಸರಕಾರ, ತನ್ನ ಪಾಶವ ಶಕ್ತಿಯನ್ನು ಬೆಳೆಸಿಕೊಂಡು ಪ್ರಳಯತಾಂಡವನನ್ನಾಡಲು ಸಿದ್ಧವಾಗಿ ನಿಂತಿದೆ. ತಿಬೇಟಿನ ಆಕ್ರಮಣವನ್ನು ಆಂತರಿಕ ರಾಜಕಾರ್ಯವೆಂದು ದುರ್ಲಕ್ಷಿಸಿತು, ಭಾರತ ಸರಕಾರದ ರಾಜನೀತಿ; ಸರಿ, ಕೆಂಪುಚೀನದ ಸೈನ್ಯವೀಗ ಭಾರತದ ಭಾಗವನ್ನು ಆಕ್ರಮಿಸಿ ಕುಳಿತಿದೆ; ಭಾರತದ ಅವಿಭಾಜ್ಯ ಅಂಗವಾದ ನೇಪಾಳದ ಗಡಿಯಲ್ಲಿ ಪ್ರವೇಶಿಸಿ ಗೊಂದಲವಿಕ್ಕುತ್ತಲಿದೆ. ಈ ಸಂದರ್ಭದಲ್ಲಿ ದಾಯಾದ ದ್ವೇಷದ ಪಾಕಿಸ್ತಾನವು ಎಂತಹ ಆಟಕ್ಕೆ ಅಣಿಗೊಂಡೀತೆಂಬುದರ ನಿಯಮವಿಲ್ಲ; ಸಿಂಹಳವು ಇನ್ನೂ ಹಗ್ಗದ ಮೇಲಿನ ಕಸರತ್ತು ನಡೆಸಿದೆ. ಅದು ಎತ್ತ ಬಿದ್ದೀತೆಂಬುದರ ಕಲ್ಪನೆ ಯಾರಿಗೂ ಇಲ್ಲ.

ಸುತ್ತು-ಮುತ್ತಲೂ ಕಾಲ ಕುದಿಯುತ್ತಲಿದೆ. ಸತ್ಯ, ಅಹಿಂಸೆಗಳ ಬಗೆಗೆ ಹೊರಗಿನ ರಾಷ್ಟ್ರದಲ್ಲಿ ವಿಶ್ವಾಸವಿಲ್ಲವೆಂಬುದು ಪ್ರತ್ಯಕ್ಷವಾಗಿ ಕಾಣುತ್ತಲಿದೆ. ಭಾರತಕ್ಕೆ ಮಿತ್ರರಾಗಿ ಬರುವ ರಾಷ್ಟ್ರಗಳೂ ಹಿಂಸೆಯಲ್ಲಿ ಶ್ರದ್ಧೆಯಿಟ್ಟಿವೆ; ಶತ್ರುಗಳಾಗಿ ಇರುವ ರಾಷ್ಟ್ರಗಳೂ ಹಿಂಸೆಯನ್ನು ಅವಲಂಬಿಸಿದುವು. ಇವುಗಳ ನಡುವೆ ಭಾರತಕ್ಕೆ ತನ್ನ ಅಹಿಂಸಾ ಘೋರಣವನ್ನು ಅವಿಚ್ಛಿನ್ನ ಜನ ಹಿಡಿದುಕೊಂಡಿರಲಿಕ್ಕೆ ಆದೀತು?

ಭಾರತದ ಪ್ರಾಚೀನ ತತ್ತ್ವಪ್ರಣಾಲಿಯಂತೆ, ರಾಜ್ಯವನ್ನು ಆಳುವವರು—ಎಂದರೆ ಕ್ಷತ್ರಿಯರು. 'ಕ್ಷತ್ರಿಯ' ಎಂಬ ಶಬ್ದವೇ ಹಿಂಸೆಗೆ ಆಲಂಬನವಾಗಿರುವುದು. ರಾಜ್ಯವನ್ನು ಆಳುವವರಿಗೆ—ಆಕ್ರಮಣಕ್ಕೆ ಅಲ್ಲದೆ ಹೋದರೂ—ಸ್ವಸಂರಕ್ಷಣೆಗಾಗಿ ಹಿಂಸೆಯನ್ನು ಆಶ್ರಯಿಸಲೇಬೇಕಾಗುವುದು. ಯುದ್ಧಪ್ರಿಯವೃತ್ತಿ ಇಲ್ಲದ ಕ್ಷತ್ರಿಯನು 'ಕ್ಷತ್ರಿಯ' ಪದಕ್ಕೆ ಪಾತ್ರನೇ ಅಲ್ಲ. ದಂಡೋಪಾಯವೊಂದನ್ನೇ ಬಲ್ಲ ವೈರಿ, ಮೈಮೇಲೆ ಏರಿ ಏರಿ ಬರುತ್ತಿರುವಾಗ, ಪ್ರತಿಪಕ್ಷಿಯು ಅನಿವಾರ್ಯ ಕರ್ತವ್ಯವೆಂದು ದಂಡೋಪಾಯವನ್ನೇ ಅವಲಂಬಿಸಬೇಕು.

ಸುತ್ತಣ ಕುದಿಯುವ ಪರಿಸ್ಥಿತಿ, ಭಾರತವು ಅಪಧರ್ಮವೆಂದಾದರೂ ತನ್ನ ಶಾಂತಿಮಂತ್ರವನ್ನು ಬಿಟ್ಟು ಪಾಂಚಜನ್ಯಧ್ವನಿಯನ್ನು ಮೊಳಗಿಸಬೇಕಾದಂತಹ ಸಂದರ್ಭವನ್ನು ತಂದಿವೆ. ನಮ್ಮ ಪ್ರಜಾಪ್ರಭುತ್ವ, ಕಾಲದ ಔಚಿತ್ಯವನ್ನರಿತು, ಕೂಡಲೆ ಶ್ರೀಕೃಷ್ಣನ ಪಾಂಚಜನ್ಯವನ್ನಾಗಲಿ, ವೀರಪಾರ್ಥನ ದೇವದತ್ತವನ್ನಾಗಲಿ ಮೊರೆಯಿಸಿ, ಜನತೆಯನ್ನು ಜಾಗೃತರನ್ನಾಗಿ ಮಾಡಲಿ!

—ಸಂಪಾದಕ

೨೩ನೆಯ ವರ್ಷದಲ್ಲಿ

ಜಯಂತಿಗೆ ಚಂದಾದಾರರರ ಬಳಗ ಬೆಳೆಯಲಿ!

ಜಯಂತಿಯನ್ನು ಪೋಷಿಸಿದರೆ

ಅದು ಜನರ ಹೃದಯ-ಮನಗಳನ್ನು ತೋಷಿಸುವುದು.

ನಾಡನಡೆ

ವರ್ಣದ್ವೇಷದ ಉಗ್ರಸ್ವರೂಪ.

ದಕ್ಷಿಣಆಫ್ರಿಕೆಯಲ್ಲಿ, ಯಾವುದೇ ಬಗೆಯ ಭಾವನಾತ್ಮಕ ದಾಕ್ಷಿಣ್ಯ, ಮಾನವೀಯ ಸಹಾನುಭೂತಿ ಇವಾವುವೂ ಇಲ್ಲದೆ, ಅಲ್ಲಿಯ ಅಲ್ಪಸಂಖ್ಯಾಕ ಶ್ವೇತವರ್ಣೀಯರ ಸರಕಾರ, ಬಹುಸಂಖ್ಯಾಕ ಕೃಷ್ಣವರ್ಣೀಯರನ್ನು, ಕೇವಲ ವರ್ಣಭೇದವೊಂದು ಕಾರಣದಿಂದಲೇ, ಒತ್ತಿಕ್ಕೆ ಇಳುತ್ತಲಿದೆ. ಕಪ್ಪು ಜನರನ್ನು ಅನಾಗರಿಕರು-ಅಸ್ಪೃಶ್ಯರು-ಅಯೋಗ್ಯರು—ಎಂದು ನಿರ್ಣಯಿಸುವ ಕಾಯಿದೆಗಳನ್ನು ದಿನಕ್ಕೊಂದು ರೀತಿಯಲ್ಲಿ ಮಾಡುತ್ತಿದೆ. ವರ್ತಮಾನ ಕಾಲದಲ್ಲಷ್ಟೇ ಅಲ್ಲ; ಭೂತ ಕಾಲದಲ್ಲಿಯೂ ಆ ಜನ ಪತಿತರಾಗಿಯೇ ಉಳಿಯಬೇಕೆಂದು ಅಲ್ಲಿಯ ಸರಕಾರದ ಸತತಪ್ರಯತ್ನ.

ಆದರೇನು, ದ. ಆಫ್ರಿಕೆಯಲ್ಲಿರುವ ಕೃಷ್ಣವರ್ಣೀಯರಲ್ಲಿ ಇಂದು ಸ್ವಾತಂತ್ರ್ಯ ಜಾಗೃತಿ ಮೂಡಿದೆ. ಮಾನವನ ಪಕ್ಕುಬಾಧ್ಯತೆಗಳೇನೆಂಬುದನ್ನು ಅವರಿಂದು ಜೆನ್ನಾಗಿ ಅರಿತಿದ್ದಾರೆ. ಕೇವಲ ಒತ್ತಾಯದ ಕಾಯಿದೆಗಳನು ಮಾಡಿ, ಆ ಜನರನ್ನು ಅಧೀನದಲ್ಲಿರಿಸಿಕೊಳ್ಳಬಲ್ಲೆನೆನ್ನುವವರಿಗೆ ಅವರಿಂದು ಸರಿಯಾದ ಬುದ್ಧಿಯನ್ನು ಕಲಿಸುವಷ್ಟು ಸಮರ್ಥರಾಗಿದ್ದಾರೆ; ಸುಸಂಘಟಿತರಾಗಿದ್ದಾರೆ. ಶಸ್ತ್ರಾಸ್ತ್ರ-ಸೈನ್ಯ-ಬಲಗಳಿಂದ ಅವರನ್ನು ಅಂಕಿತದಲ್ಲಿ ಇರಿಸಿಕೊಳ್ಳುವೆನೆಂದರೆ, ಮಿಕ್ಕ ಜಗತ್ತು ಇಂತಹ ರಾಕ್ಷಸೀಯ ಶಾಸನವನ್ನು ಒಪ್ಪಿ ಸುಮ್ಮಗಿರಲಾರದು.

ಪ್ರಪಂಚದಲ್ಲಿಯ ಎಲ್ಲ ರಾಷ್ಟ್ರಗಳು, ವೈಯಕ್ತಿಕವಾಗಿಯೂ ಸಂಯುಕ್ತರಾಷ್ಟ್ರಸಂಘದ ಮೂಲಕವಾಗಿಯೂ ದ. ಆಫ್ರಿಕೆಯ ಸರಕಾರದ ವರ್ಣದ್ವೇಷವನ್ನು ಕಟುವಾಗಿ ಖಂಡಿಸುವ ಮಾತುಗಳನ್ನು ಆಡುತ್ತಲಿವೆ; ಕೆಲವು ಪ್ರಾಮಾಣಿಕ ರಾಷ್ಟ್ರಗಳು ಆ ಸರಕಾರದೊಂದಿಗೆ ತಮ್ಮ ಅಸಹಕಾರವನ್ನೂ ಘೋಷಿಸಿಬಿಟ್ಟಿವೆ. ಇಷ್ಟಾದರೂ ಆ ಶ್ವೇತವರ್ಣೀಯರ ಸರಕಾರ ತನ್ನ ಬಿಂಕ-ಬಿಗುಹುಗಳನ್ನು ಬಿಡದೆ, ಮೊಂಡಲಿನ ನೀತಿಯಲ್ಲಿಯೆ ಸಾಗಿದೆ.

ಜಗತ್ತಿನ ಎಲ್ಲ ರಾಷ್ಟ್ರಗಳ ವಿರೋಧವನ್ನು ಕಟ್ಟಿಕೊಂಡು, ಇಂದು ಯಾವುದೇ ಒಂದು ರಾಷ್ಟ್ರ ಏಕಾಕಿಯಾಗಿ ಬದುಕಬಲ್ಲೆನೆಂದರೆ, ಅದು ಅಸಾಧ್ಯವಾದ ಮಾತು. ಈ ವಿಷಯ ದ. ಆಫ್ರಿಕೆಯ ರಾಜ್ಯಶಾಸಕರಿಗೆ ತಿಳಿದಿಲ್ಲವೆಂತಲ್ಲ; ಆದರೂ ಅವರು ಎಲ್ಲರನ್ನೂ ದುರ್ಲಕ್ಷಿಸಿ, ತಮ್ಮ ದುರ್ಮಾರ್ಗದಲ್ಲಿಯೆ ತಾವು ಅಡಿಯಿಡುತ್ತಿರುವುದನ್ನು ನೋಡಿದರೆ, ಆಂತರಿಕವಾಗಿ ಯಾವುದೋ ಶಕ್ತಿಯ ಅಭಯವಿರುವುದೆಂದು ಭಾವಿಸಬೇಕಾಗಿದೆ. ಏಕೆಂದರೆ ಬಹಿರಂಗದಲ್ಲಿ ನಿಷ್ಪಕ್ಷಪಾತದ ಮಾತುಗಳನ್ನಾಡುತ್ತ, ಅಂತರಂಗದಲ್ಲಿ ಒಂದು ಪಕ್ಷಕಟ್ಟುವ ಪ್ರವೃತ್ತಿ ಇಂದು ಪಶ್ಚಿಮರಾಷ್ಟ್ರಗಳಲ್ಲಿ ಹೆಚ್ಚಾಗುತ್ತಲಿದೆ. ಅದರಲ್ಲಿಯೂ ದಕ್ಷಿಣ ಆಫ್ರಿಕೆಯ ಸರಕಾರ ಬಿಳಿಯರದು—ತಮ್ಮ ಜನರದು. ತಮ್ಮ ಜನರು ಎಲ್ಲಿಯೆ ಇದ್ದರೂ ಅವರ ಯೋಗ-ಕ್ಷೇಮಗಳನ್ನು ಸರಿಯಾಗಿ ನೋಡಿಕೊಳ್ಳುವುದು, ಬಿಳಿಯ ರಾಷ್ಟ್ರಗಳ ಸಹಜಕರ್ತವ್ಯವಲ್ಲವೆ ?

ಭಾರತ ರಾಷ್ಟ್ರಾಧ್ಯಕ್ಷರ ರಸಿಯಾಸಂಚಾರ

ಮಾನ್ಯ ರಾಜೇಂದ್ರಪ್ರಸಾದರವರು ಇದೀಗ ರಸಿಯಾದಲ್ಲಿ ಸಂಚರಿಸುತ್ತಿದ್ದು, ಅಲ್ಲಿಯ ಸರಕಾರ ಮತ್ತು ಸಾಮಾನ್ಯ ಜನತೆಯಿಂದ ಸ್ನೇಹದ ಸ್ವಾಗತ ಸತ್ಕಾರಗಳನ್ನು ಪಡೆಯುತ್ತಿದ್ದಾರೆ. ನಮ್ಮ ರಾಷ್ಟ್ರಾಧ್ಯಕ್ಷರ ಈ ಸಂಚಾರವು ಕೇವಲ ಸ್ವಾಗತ-ಸತ್ಕಾರಗಳದಷ್ಟೆ ಆಗದೆ, ಇಂದಿನ ವಿಷಮ ರಾಜಕೀಯಪರಿಸ್ಥಿತಿಯನ್ನು ತಿದ್ದುವುದಕ್ಕೆ ಸಾಧನವಾಗಿ ಪರಿಣಮಿಸೀತೆಂದು ಅನೇಕರು ಆಶೆಯ ಕಣ್ಣುಗಳಿಂದ ನೋಡುತ್ತಲಿದ್ದಾರೆ. ಮಾನ್ಯ ಕ್ರುಶ್ಚೇವರು ಸಮರ್ಥರಾದ ರಾಜಕಾರಣಿಗಳು; ಜಾಗತಿಕ ಕಲ್ಯಾಣವನ್ನೇನಾದರೂ ಸಾಧಿಸಿ ಹೆಸರು ಪಡೆಯಬೇಕೆಂದು, ನಿಃಸೈನ್ಯೀಕರಣ, ನಿಶ್ಯಸ್ತ್ರೀಕರಣ, ಲೋಕಶಾಂತಿ—ಇವುಗಳನ್ನು ಕುರಿತು ಕಂಡಲ್ಲೆಲ್ಲ ದೀರ್ಘವಾಗಿ ಮಾತನಾಡುತ್ತಾರೆ; ಆದರೆ ಅವರ ಸ್ವಾಭಾವಿಕ ಮಡುಕುತನ, ಅಸ್ಯರ ವಿಷಯಕವಾದ ಸಂದೇಹ—ಇವು, ಅವರನ್ನು ನಡಿದಂತೆ ನಡೆಯಗೊಡಲೊಲ್ಲವು. ಎಂತಲೇ ಅಯತ್ನ ಸಂದರ್ಭದಲ್ಲಿ ಹಿಂದಡಿಯಿಟ್ಟು, ಅನುಕೂಲ ಪ್ರಸಂಗಗಳನ್ನು ಹಾಳು ಮಾಡಿಬಿಡುತ್ತಾರೆ. ಶಿಖರ ಸಮ್ಮೇಳನ ನಿಷ್ಪ್ರಯೋಜಕವಾಗಿ ಪರಿಣಮಿಸಿದುದು ಮಾನ್ಯ ಕ್ರುಶ್ಚೇವರ ದುಡುಕುತನದಿಂದ. ಮೊನೆಮೊನ್ನೆ ಕೂಡಿ ನಿಷ್ಫಲತೆಯಲ್ಲಿ ಕೊನೆಗೊಂಡ ಜಿನೆವಾ ಪರಿಷತ್ತಿನ ನಿಷ್ಕ್ರಿಯತೆಗೆ ಕಾರಣರೆಂದರೆ ರಸಿಯದ ಪ್ರತಿನಿಧಿಗಳು.

ಹಿರಿಯರಾದ ಮಾನ್ಯ ರಾಜೇಂದ್ರಪ್ರಸಾದರು, ಲೋಕಾನುಭವದ ಮೂಲಕ ಬುದ್ಧಿಯ ಪರಿಪಾಕವನ್ನು ಕಂಡವರು; ಜೀವನದಲ್ಲಿ ಬುದ್ಧಿ-ಭಾವನೆಗಳಿಗೆ ಕೊಡಬೇಕಾದ ಸ್ಥಾನ-ಮಾನಗಳೇನೆಂಬುದನ್ನು ಬಲ್ಲವರು. ಮಾನವತೆಯ ಮಹತ್ತ್ವವನ್ನು ಅರಿತ ತ್ರಿಕಾಲವಿವೇಕಿಗಳು. ಇವರ ಸಹವಾಸ-ಸಾಹಚರ್ಯಗಳೂ, ಸಂದರ್ಶನ-ಸಂಭಾಷಣಗಳೂ ಸಂಶಯಭೂತ ಬಾಧಿತರಾದ ಭೌತಿಕಮಾರ್ಗದ ರಸಿಯದ ನಾಯಕರ ಮೇಲೆ ಪರಿಣಾಮ ಮಾಡದಿರವೆಂದು ನನ್ನ ನಿರೀಕ್ಷೆ.

ಇನ್ನೊಂದು ಮಹತ್ತ್ವದ ಸಂಗತಿಯೆಂದರೆ, ಭಾರತಕ್ಕೆ ವಿರೋಧಿಯಾಗಿ ಕಲಹಕ್ಕೆ ಕಾಲುಕೆದರುತ್ತಿರುವ ಕೆಂಪು ಚೀನಾರಾಷ್ಟ್ರವು ರಸಿಯದೊಂದಿಗೆ ಬಹುದಿನದಿಂದಲೂ ಗೆಳೆತನವನ್ನು ಬೆಳೆಸಿಕೊಂಡು ಬಂದಿದೆ. ಭಾರತವೂ ರಸಿಯದ ಹತ್ತಿರದ ಗೆಳೆಯನಂತಿದೆ. ಇಬ್ಬರು ಗೆಳೆಯರಲ್ಲಿ ಬಂದ ಸಾಂದರ್ಭಿಕ ವೈಷಮ್ಯಗಳನ್ನು, ಮೂರನೆಯವನ ಪ್ರಾಮಾಣಿಕ ಪ್ರಯತ್ನವು ಸರಿಗೊಳಿಸಬಹುದಾಗಿದೆ. ಯುದ್ಧ ವಿರೋಧದ ಮಾತುಗಳನ್ನಾಡುವ ಕ್ರುಶ್ಚೇವ್ ಮಹಾಶಯರು, ಮನವಾರೆ ಪ್ರಯತ್ನಮಾಡಿದರೆ, ಚೀನಾ-ಭಾರತಗಳಲ್ಲಿ ನಡೆಯಬಹುದೆಂದಿರುವ ಯುದ್ಧದ ಸಂದರ್ಭವನ್ನವರು ತಪ್ಪಿಸಬಹುದು. ಮಾನ್ಯ ರಾಜೇಂದ್ರಬಾಬುಗಳ ರಸಿಯಾ ಸಂಚಾರವೆಂದರೆ, ಪರ್ಯಾಯವಾಗಿ—ಭಾರತ-ರಸಿಯಗಳ ಸ್ನೇಹ-ವಿಶ್ವಾಸಗಳ ಮಟ್ಟವನ್ನು ಅಳೆಯುವ ಅಳತೋಲು, ಎನಿಸುವಂತಿದೆ.

ಚೀನಾದ ಚೇಳುಗಾರಿಕೆ

ಕೆಂಪು ಚೀನಾಸರಕಾರವು ತನ್ನ ಸೈನ್ಯಬಲದ ಮೇಲೆ ತುಂಬ ಭರವಸೆಯಿಟ್ಟುಕೊಂಡು ಹೊರಟಿದೆ. ಅಪರಿಮಿತ ಜನಸಂಖ್ಯೆಯುಳ್ಳ

ಚೀನಾರಾಷ್ಟ್ರದಲ್ಲಿ ಸೈನಿಕರ ಸಂಖ್ಯೆಯನ್ನು ಹೆಚ್ಚಿಸುವುದೊಂದು ಮೊದ್ದ ಮಾತಲ್ಲ; ಅಲ್ಲದೆ ಯುದ್ಧದಲ್ಲಿ ಸೈನಿಕರು ಸತ್ತರೂ ಆ ರಾಷ್ಟ್ರಕ್ಕೆ ಜನದ ಕೊರತೆಯೆನಿಸುವಂತಿಲ್ಲ. ಎಂತಲೇ ಕೆಂಪುಚೀನಾ ಸರಕಾರ ವಿಂದು ಸೈನ್ಯಸಂಖ್ಯೆಯನ್ನು ಬೆಳೆಸಿ, ದಿಗ್ವಿಜಯಕ್ಕೆ ಕಳಿಸುತ್ತಲಿದೆ. ಇದರಿಂದ, ರಾಷ್ಟ್ರದಲ್ಲಿಯ ಜನಬಾಹುಲ್ಯದ ಸಮಸ್ಯೆ ತಾತ್ಪೂರ್ತಿಕವಾಗಿ ಬಿಟ್ಟಂತಾಗುತ್ತಲಿದೆ.

ದಿಗ್ವಿಜಯಕ್ಕೆ ಹೊರಟ ಸೈನ್ಯ ಪರಕೀಯರ ಪ್ರದೇಶವನ್ನು ಗೆದ್ದು ಆಕ್ರಮಿಸಿದರಂತೂ ಸರಿಯೇ ಸರಿ; ಸೋತು ಸತ್ತುಹೋದರೂ ಆ ಸರಕಾರಕ್ಕೆ ನಷ್ಟವಿಲ್ಲ; ಜನಬಾಹುಲ್ಯದ ಸಮಸ್ಯೆಯು ಪರಿಹಾರವಾಗುವುದು. ಎಂತಲೇ ಕೆಂಪು ಚೀನಾಸರಕಾರವಿಂದು, ನಾಗರಿಕರಾಷ್ಟ್ರದ ಗಾಂಭೀರ್ಯವನ್ನು ಬಿಟ್ಟುಕೊಟ್ಟು ಕಾಡುಜನರ ಗುಂಪಿನಂತಹ ಕೇಳುತನದ ಚಳವಳಿಗಳನ್ನು ಕೈಕೊಂಡು ನಡೆಸುತ್ತಲಿದೆ. ಅನಂತರವೂ ಸಂಯುಕ್ತ ರಾಷ್ಟ್ರಸಂಸ್ಥೆಯ ಬಹಿಷ್ಕಾರ ನೀತಿಯೂ ಅಮೇರಿಕಾ ಸರಕಾರದ ಅನಿಮಿತ್ತ ದ್ವೇಷವೂ ಕೆಂಪು ಚೀನೀಯರ ಮನಸ್ಸನ್ನು ಕೆರಳಿಸಿ, ಅವರನ್ನು ಸದಸದ್‌ವಿವೇಕಬುದ್ಧಿರಹಿತರನ್ನಾಗಿ ಮಾಡಿಬಿಟ್ಟಿವೆ. ಇಲ್ಲವಾದರೆ, ಅವರು ಭಾರತದಂತಹ ಸುಸಂಸ್ಕೃತ ಮಹಾರಾಷ್ಟ್ರದ ಮಿತ್ರತ್ವವನ್ನು ಹೀಗೆ ಹಟಾತ್ತಾಗಿ ತುಳಿದುಬಿಡಲು ಸಿದ್ಧರಾಗುತ್ತಿದ್ದಿಲ್ಲ. ಮರಣಭೀತಿಯಿಲ್ಲದ ಅಸಂಸ್ಕೃತ ಮನುಷ್ಯ ಯಾವ ಪಾಪಕರ್ಮಗಳನ್ನೂ ಮಾಡಲು ಹಿಂಜರಿಯನು.

ಚೀನಾದ ಇಂದಿನ ಮನೋವೃತ್ತಿಯನ್ನು ನೋಡಿದರೆ, ಏನೇನಾದರೂ ಕೆಡಿಗೇಡಿತನವನ್ನು ನಡೆಯಿಸಿ ಜಗತ್ತಿನ ಕಣ್ಣಿಗೆ ತನ್ನ ಅಸ್ತಿತ್ವವನ್ನು ತೋರಿಸಬೇಕಾಗಿದೆ. ಇದರ ದುಷ್ಪರಿಣಾಮವನ್ನು ನೆರೆಹೊರೆಯ ರಾಷ್ಟ್ರಗಳು ಪ್ರತ್ಯಕ್ಷವಾಗಿ ಅನುಭವಿಸಬೇಕಾಗಿದೆ. ಈಗ ಮಿಕ್ಕ ರಾಷ್ಟ್ರಗಳು, ಬರೀ ಖಂಡನೆಯ ಮಾತನಾಡುತ್ತ ಕುಳಿತರೆ, ಚೀನೀಯರ ಕೆಡಿಗೇಡಿತನವು ಕಡಿಮೆಯಾಗುವಂತಿಲ್ಲ. ಎಲ್ಲ ರಾಷ್ಟ್ರಗಳು ಒಂದಾಗಿ ಕೂಡಿ, ವಿಚಾರಮಾಡಿ, ಚೀನೀಯರ ನಿಗ್ರಹಕಾರ್ಯವನ್ನು ಪ್ರತ್ಯಕ್ಷವಾಗಿ ಕೈಕೊಳ್ಳಬೇಕು.

ವಿಕೃತ ರಾಜಕಾರಣಿಗಳ ವಿಕ್ಷಿಪ್ತ ಚಟುವಟಿಕೆ

ನಾಗಾಬಂಡುಗಾರ ಫೀಜೋ ಲಂಡನ್ ರಾಜಧಾನಿಗೆ ಹೋಗಿ ತಲ್ಪಿರುವುದೊಂದು ಸರಲಬುದ್ಧಿಯವರಿಗೆ ಆಶ್ಚರ್ಯದ ವಿಷಯವೇ ಆಗಿದೆ. ಆದರೆ ಭಾರತದ ಹಿತಶತ್ರುಗಳು, ಭಾರತದ ಪ್ರಗತಿಯ ದಾರಿಯಲ್ಲಿ ತಡೆಯನ್ನೊಡ್ಡುವ ಅನೇಕ ಕುಟಿಲಕೃತಿಗಳನ್ನು ಒಳಗಿಂದೊಳಗೆ ನಡೆಸಿಯೇ ಇರುವರು. ರಾಷ್ಟ್ರಾಭಿಮಾನವನ್ನು ಸಂಪೂರ್ಣವಾಗಿ ಮರೆತು, ಸ್ವಾರ್ಥ ಸಾಧನೆಗಾಗಿ ನಿಂತ ಭಾರತೀಯ ಬಾಂಧವರನೇಕರೂ, ಇಂತಹ ಕುಟಿಲ ಕೃತಿಗಳಿಗೆ ಸಹಾಯಕರಾಗಿ ನಿಂತಿರುವರು.

ಮಾನವೀಯಭಾವ, ನಾಗರಿಕ ನೀತಿ ಇವುಗಳ ಮೂಲಕ ಭಾರತ ರಾಷ್ಟ್ರದ ಪೆಸರಿಂದು ಜಗತ್ತಿನ ಜನರ ಬಾಯಲ್ಲೆಲ್ಲ ನೊಳಗುತ್ತಲಿದೆ. ವಿದೇಶಿಗಳೆಲ್ಲರೂ ಭಾರತದ ವಿದೇಶಭೋರಣವನ್ನೂ ಅಂತರ ರಾಷ್ಟ್ರೀಯ ಸ್ಥಾನಮಾನಗಳನ್ನೂ ಕೊನೆದುಕೊಂಡಾಡುತ್ತಲಿದ್ದಾರೆ. ಆದರೆ ಭಾರತದ ಈ ಹೆಸರಿನ ಬೆಳಕಿಗೆ ಕಪ್ಪನ್ನು ತೊಡೆಯಬೇಕೆಂಬ ವಿಘ್ನಸಂತೋಷಿಗಳೂ ಎಲ್ಲ ಕಡೆಗೆ ಇದ್ದಾರೆ. ಅಂತಹ ಕುಟಿಲತಂತ್ರಿಗಳೆಲ್ಲ ಕೂಡಿ ಹೊಂಚುಹಾಕಿ ಫೀಜೋನನ್ನು ಇಂಗ್ಲಂಡ್ ದೇಶಕ್ಕೆ ಕಳುಹಿದ್ದಾರೆ; ಅವನಿಂದ ಕೆಟ್ಟ ಮಾತುಗಳನ್ನಾಡಿಸಿ, ಭಾರತದ ಜಾಗತಿಕ ಕೀರ್ತಿಗೆ ಕುಂದುತರಬೇಕೆಂಬುದು ಇವರ ದುರುದ್ದೇಶ. ಆದರೆ ಸೂರ್ಯನ ಬೆಳಕನ್ನು ಕುಂದಿಸಲು ಪತಂಗವನ್ನು ಸಾಕಿ ಹಾರಲುಬಿಟ್ಟರೆ ಅದರಿಂದೇನಾದೀತು? ಸೂರ್ಯನ ಪ್ರಖರ ತೇಜಸ್ಸಿನಿಂದ ಪತಂಗದ ಪಕ್ಕಗಳು ಸುಟ್ಟು ಅದು ಹುಡಿಯಲ್ಲಿ ಬಿದ್ದೀತು— ಇಷ್ಟೆ!

ಭಾರತದ ಇತಿಹಾಸ–ಭೂಗೋಲಗಳ ಸಂಪೂರ್ಣ ಜ್ಞಾನವಿರುವ ಬ್ರಿಟಿಷರಿಗೆ, ಭಾರತದಲ್ಲಿ ನಾಗಾಜನರ ಸ್ಥಾನ–ಮಾನಗಳಾವುವೆಂಬುದು ಗೊತ್ತಿಲ್ಲದ ಮಾತಲ್ಲ. ಆದರೂ ಇಂಗ್ಲಂಡಿನಯ ಹೊಣೆಗಾರ ನಾಯಕರಲ್ಲಿ ಅನೇಕರು ಇದುವರೆಗೂ ಮೌನಿಗಳಾಗಿರುವರು. ಕೆಲವು ಜನರು ಬಾಯಿಬಿಟ್ಟರೂ, ಭಾರತದ ಸ್ವಾಮಾಣಿಕ ರಾಜಕಾರ್ಯದ ವಿಚಾರದಲ್ಲಿ ಸಂದೇಹಭಾವವನ್ನು ಹುಟ್ಟಿಸುವಂತಹ ಧ್ವನಿಯುಕ್ತ ಮಾತನಾಡುವರು. ಇದೂ ಒಂದು ಬ್ರಿಟಿಷರ ರಾಜಕಾರಣಕೌಶಲದ ಪಾಪರಿ.

ಸದ್ಯ ಇಂಗ್ಲಂಡಿನಲ್ಲಿಯೇ ಇರುವ ಶ್ರೀಮಾನ್ ಎನ್. ಸಿ. ಚತ್ತರ್ಜಿಯವರು, ಫೀಜೋನ ವಾಸ್ತವಚರಿತ್ರೆಯನ್ನು ಹೊರಗೆ ಹಾಕುವಂತಹ ಘೋಷಣೆಯೊಂದನ್ನು ಹೊರಡಿಸಿ, ಸಕಾಲದಲ್ಲಿಯೆ ತಮ್ಮ ಭಾರತ ಭಕ್ತಿಯನ್ನೂ ನಿಷ್ಪಕ್ಷಪಾತಿತ್ವವನ್ನೂ ಪ್ರಕಟಿಸಿ, ತಮ್ಮ ಕರ್ತವ್ಯವನ್ನು ಮಾಡಿರುವರು. ಕಾಂಗ್ರೆಸ್ ಪ್ರಭುತ್ವದ ವಿರೋಧಿ ಪಕ್ಷದಲ್ಲಿರುವ ಶ್ರೀಮಾನ್ ಚತ್ತರ್ಜಿಯವರ ಈ ಘೋಷಣೆ ಪರರಾಷ್ಟ್ರಗಳಲ್ಲಿ ತಮ್ಮ ಪ್ರಭಾವವನ್ನು ಬೀರದಿರದು. ತಮ್ಮ ಕೋತಿಯನ್ನು ಕುಣಿಸಿ ಕಾರ್ಯ ಸಾಧಿಸಬೇಕೆಂದು ಹೊಂಚುಹಾಕಿದ ಫೀಜೋ ಕೈವಾರಿಗಳಿಗೆ, ಇದರಿಂದ ಅಸಹನೀಯವಾದ ಆಘಾತ ಬಿದ್ದಿರಬಹುದು.

ನೇಪಾಳಿಗಳ ಸ್ವಾತಂತ್ರ್ಯ ಸ್ಥಿತಿ

ಯಾವುದೇ ಚಿಕ್ಕ ಪ್ರದೇಶದ ಜನತೆಯೂ ಸ್ವಾತಂತ್ರ್ಯವನ್ನು ಅಪೇಕ್ಷಿಸುವುದು ತಪ್ಪೇನೂ ಅಲ್ಲ; ಆದರೆ ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಉಪಾಯವನ್ನೂ ಅದು ಯೋಜಿಸಿಕೊಂಡಿರಬೇಕಾಗುವುದು. ಬಲಶಾಲಿಗಳು ದುರ್ಬಲರ ಮೇಲೆ ಆಕ್ರಮಣ ನಡೆಯಿಸುವುದು ನಡೆದು ಬಂದ ಪದ್ಧತಿಯಾಗಿದೆ. ಬಲಶಾಲಿಗಳ ಆಕ್ರಮಣಕ್ಕೆ ಒಳಗಾದ ದುರ್ಬಲ ದೇಶ, ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದು ಹೇಗೆ? ಎಂತಲೇ ಅಂತಹ ದೇಶ ತನ್ನ ಸ್ವಾತಂತ್ರ್ಯಕ್ಕೊಂದು ಪರಿಮಿತತೆಯನ್ನು ಇರಿಸಿಕೊಳ್ಳಬೇಕಾಗುತ್ತದೆ. ಎಂದರೆ, ತನ್ನ ಸ್ವಾತಂತ್ರ್ಯದ ವಿಷಯದಲ್ಲಿ ಹೆಚ್ಚು ಸಹಾನುಭೂತಿಯಿರುವ ಬಲಶಾಲಿ ರಾಷ್ಟ್ರದ ಕೂಡ ಹಿತಸಂಬಂಧಗಳನ್ನು ಘನಿಷ್ಠವಾಗಿ ಇರಿಸಿಕೊಳ್ಳಬೇಕಾಗುತ್ತದೆ.

(ಪರ್ ಮೂರನೆಯ ಪುಟಕ್ಕೆ)

★ ಸೋಮುಣ್ಣೆ ಮಾವ ★

(ಒಂದು ಸಣ್ಣ ಕತೆ)

' ಭಾರತೀ ಸುತ ' ವೀರರಾಜೇಂದ್ರಪೇಟೆ

ಬಾಹ್ಯ ವ್ಯವಹಾರಗಳನ್ನು ಮಾತ್ರ ನೋಡಿ, ಒಂದು ವ್ಯಕ್ತಿಯ ಅಂತಃಸ್ವರೂಪವನ್ನು ಕಂಡು ಹಿಡಿಯಲಿಕ್ಕಾದೀತೆ?
ಊರ ಜನರು ಸೋಮುಣ್ಣೆ ಮಾವನನ್ನು 'ಜುಗ್ಗ' 'ಲೋಭಿ' ಎಂದು ಆಡಿಕೊಳ್ಳುತ್ತಿದ್ದರು;
ಆದರೆ ಅವನ ಅಂತಃಸ್ವರೂಪ ಎಂತಹದಿದ್ದಿತು ?

ನಾನು ಬ್ಯಾಡ್ಮಿಂಟನ್ ಆಡಲೆಂದು ನಮ್ಮ ಕ್ಲಬ್ಬಿನ ದೈದಾನಕ್ಕೆ ಹೋದಾಗ, ಗಪ್ಪು "ದೈದಾಸನ ಬೊಕ್ಕಸ ಸುಲಿಗೆಯಾಗಿ ಹೋಯಿತು!" ಎಂದು ಹೇಳಿದ.

ಈ ನುಡಿಯನ್ನು ಕೇಳಿ ನನಗೆ ಆಶ್ಚರ್ಯವಾಯಿತು. ನಾನು "ಯಾವಾಗ? ಹೇಗೆ?" ಎಂದು ಉತ್ಸುಕತೆಯ ದನಿಯಲ್ಲಿ ಕೇಳಿದೆ.

"ನಿನ್ನೆಯ ಸಂಜೆ." ಕೈಯಲ್ಲಿ ಹಿಡಿದ ಬ್ಯಾಟನ್ನು ಬೀಸುತ್ತಾ ಚಿಣ್ಣಿ ಉಸುರಿದ: "ದೈದಾಸನ ಅಜ್ಜಿಯವ ಜಾತು ವಿರಾಜಪೇಟೆಗೆ ಹೋಗಿದ್ದ. ಸಂಜೆಯಾದರೂ ಮರಳಿ ಬರಲಿಲ್ಲ. ದೈದಾಸ ಕಾಫೀ ತೋಟದಲ್ಲಿ ಗೇಯಲು ಹೋಗಿದ್ದ. ಕಳ್ಳ ಹಿತ್ತಲ ಸಲಾಕೆಯನ್ನು ಮುರಿದು ಒಳನುಗ್ಗಿದ್ದನಂತೆ. ಆತನ ಪೆಟ್ಟಿಗೆಯ ಬೀಗ ಮುರಿದು ದುಡ್ಡಿನ ಡಬ್ಬಿಯನ್ನು ಹೊರಿಸಿಕೊಂಡು ಹೋದನಂತೆ."

"ದೈದಾಸ ಪೋಲೀಸರಿಗೆ ದೂರುಕೊಡಲೆಂದು ವಿರಾಜಪೇಟೆಗೆ ಓಡಿರಬಹುದು." ಅಪ್ಪಚ್ಚಿ ಸಂಭಾಷಣೆಯಲ್ಲಿ ತನ್ನ ದನಿಯನ್ನು ಬೆರಸಿದ.

"ಇಲ್ಲ. ತನ್ನ ಭಂಡಾರ ಕೊಳ್ಳೆಹೊಡೆದು ಹೋಯಿತಲ್ಲ— ಎಂದು ಮನೆಯೊಳಗೆ ಕಣ್ಣೀರು ಸುರಿಸುತ್ತಾ ಆತ ಹಲುಬುತ್ತಾ ಕುಳಿತಿದ್ದಾನಂತೆ." ಗಪ್ಪು ಉಸುರಿದ: "ಹಾಗೆ ಮಲೆಯಾಳ ಜಾತು ಹೇಳಿದ."

"ಆತನ ಜುಗ್ಗುತನಕ್ಕೆ ತಕ್ಕ ಶಾಸ್ತಿಯಾಯಿತು!" ಚಿಣ್ಣಿ ಉದ್ಗಾರವೆತ್ತಿದ: "ತುಂಬಾ ಹಣ ಹೋಯಿತು ಕಾಣುತ್ತೆ."

"ಅದೊಂದು ಕರಿಮರದ ಪೆಟ್ಟಿಗೆಯಂತೆ." ಗಪ್ಪು ಹೇಳಿದ: "ನೂರು ರೂಪಾಯಿಗಳ ನಲವತ್ತೋ, ಐವತ್ತೋ ನೋಟುಗಳಿದ್ದವಂತೆ. ದೈದಾಸ ಪ್ರತಿರಾತ್ರಿ ಮಲಗುವ ಮುನ್ನ ಪೆಟ್ಟಿಗೆಯನ್ನು ತೆರೆದು ನೋಡಿ, ನೋಟುಗಳನ್ನೆಲ್ಲಾ ಮುಟ್ಟಿ ಲೆಕ್ಕ ಮಾಡುತ್ತಿದ್ದನಂತೆ. ಹೀಗೆ ನೋಟುಗಳನ್ನು ಎಣಿಸದೆ ಹೋದರೆ ಆತನಿಗೆ ನಿದ್ದೆಯೇ ಬರುವುದಿಲ್ಲವಂತೆ."

"ಹಣ ಹೋಯಿತೆಂಬ ದುಃಖದಿಂದ ಆತ ಎದೆಯೊಡೆದು ಸತ್ತಾನು!" ಎಂದು ನುಡಿದ ಚಿಣ್ಣಿ.

ನಾವು ನಮ್ಮೂರ ಸೋಮುಣ್ಣೆ ಮಾವನನ್ನು 'ದೈದಾಸ'ನೆಂದು ಹೆಸರಿಟ್ಟು ಕರೆಯುತ್ತಿದ್ದೆವು. ಹಾಗೆ ಕರೆಯಲು ಕಾರಣವೂ ಇತ್ತು. ಅವನು ನಮ್ಮೂರಿಗೆ ಮರಳಿ ಬಂದು ಆರೆಂಟು ವರ್ಷಗಳಾಗಿದ್ದುವು. ಅವನು ನಮ್ಮೂರಿನವನೇ ಆಗಿದ್ದರೂ, ಕಳೆದ ಇಪ್ಪತ್ತು ವರ್ಷಗಳಿಂದ ಊರಕಡೆ ಸುಳಿದಿರಲಿಲ್ಲ. ಅವನ ತಂದೆತಾಯಿಗಳು, ಅವನು ಹುಡುಗನಾಗಿದ್ದಾಗಲೇ ಕಾಲವಾಗಿದ್ದರು. ದೂರದ ಮಾವನಲ್ಲದೆ ಅವನಿಗೆ ಬೇರೆ ಯಾರೂ ನಂಟರಿರಲಿಲ್ಲ. ಹಳ್ಳಿಯಲ್ಲಿ ಅವನಿಗೆ ನೂರು ಬಟ್ಟೆ ಗದ್ದೆ ಇತ್ತು. ಹತ್ತೆಂಟು ಎಕರೆ ಕರೆ ಜಾಗವಿತ್ತು. ಅವನು ಊರಿಗೆ ವರಳಿ ಸೇರುವ ಮುನ್ನ ಭೂನಿಯನ್ನು ವಾರಕ್ಕೆ ಕೊಟ್ಟಿದ್ದ. ವಾರಗಾರ ಆತನಿಗೆ ತಪ್ಪದೆ ಗೇಣಿಯ ಭತ್ತವನ್ನು ಮಾರಿ ಹಣಕಳುಹುತ್ತಿದ್ದ.

ಯುದ್ಧ ತೊಡಗುವ ಮುನ್ನ ಸೋಮುಣ್ಣೆ ಮಾವ ಶನಿವಾರ ಸಂತೆಯಲ್ಲಿ ಗುಮಾಸ್ತನಾಗಿದ್ದ. ಆರಂಭವಾದೊಡನೆ ಅವನು ದಂಡಿಗೆ ಸೇರಿದ. ಇರಾನ್, ಬಲೂಚಿಸ್ಥಾನ್, ಇರಾಕ್ ಮೊದಲಾದ ದೂರದ ನಾಡುಗಳಲ್ಲಿ ಅಲೆದಾಡಿದ. ನಾಲ್ಕು ಕಾಸನ್ನೂ ಸಂಪಾದಿಸಿದ. ಯುದ್ಧ ಮುಗಿದ ಮೇಲೆ ಆತನಿಗೆ ಕೇಂದ್ರಸರಕಾರದ ಎಕ್ಸೈಸ್ ಶಾಖೆಯಲ್ಲಿ ಉದ್ಯೋಗ ದೊರೆಯಿತು. ಆತ ಬೆಂಗಳೂರಲ್ಲಿ ಕೆಲಸಮಾಡುತ್ತಿದ್ದ. ನೌಕರಿಯಲ್ಲಿದ್ದಾಗ ಆತ ಕೊಡಗಿಗೆ ಬರುವುದೇ ಅಪರೂಪವಾಗಿತ್ತು.

ಈಗ ಸುಮಾರು ಹತ್ತುವರ್ಷಗಳ ಹಿಂದೆ ನಾವು, ಬೆಂಗಳೂರಲ್ಲಿ ಸೋಮುಣ್ಣೆ ಹಾರುವರ ಹುಡುಗಿಯೊಂದನ್ನು ಮದುವೆಯಾದನೆಂಬ ಸುದ್ದಿಯನ್ನು ಕೇಳಿದೆವು. ಆತ ಮಡದಿಯನ್ನು ಊರಿಗೆ ಕರೆದು ಕೊಂಡು ಬರಲೂ ಇಲ್ಲ; ನಾವು ಆಕೆಯ ನೋರೆಯನ್ನು ನೋಡಲೂ ಇಲ್ಲ. ಆಕೆ ಶಾಲೆಯೊಂದರಲ್ಲಿ ಅಧ್ಯಾಪಿಕೆಯಾಗಿದ್ದಳೆಂದು ಮಾತ್ರ ಕೇಳಿ ತಿಳಿದಿದ್ದೆವು.

ಸುಮಾರು ಏಳು ವರ್ಷಗಳ ಹಿಂದೆ ವಿಷುಸಂಕ್ರಮಣ ಕಳೆದ ಮೇಲೆ, ನಾಲ್ಕೆಂಟು ದಿನಗಳಲ್ಲಿ ಸೋಮುಣ್ಣೆ ಮಾವ ಬೆಂಗಳೂರಿನಿಂದ ಊರಿಗೆ ಮರಳಿ ಬಂದ. ಅವನು ತನ್ನ ಭೂಮಿಕಾಣಿಗಳನ್ನು ಸ್ವಾಧೀನ ಪಡಿಸಿಕೊಂಡು ಊರಲ್ಲೇ ನೆಲಸುವನೆಂದು ಅರಿವಾದಾಗ, ನಮಗೆಲ್ಲ ಆಶ್ಚರ್ಯವಾಯಿತು. ಅವನು ಜತೆಯಲ್ಲಿ ಮಡದಿಯನ್ನು ಕರೆದು ಕೊಂಡು ಬಂದಿರಲಿಲ್ಲ. ಕಾರಣವೇನೆಂದು ನಾವು ಉತ್ಸುಕತೆಯಿಂದ ವಿಚಾರಿಸತೊಡಗಿದೆವು. ಕ್ರಮೇಣ ಕಾರಣ ನಮಗೆ ಹೊಲಬಾಗ ತೊಡಗಿತು.

ಸೋಮುಣ್ಣೆಮಾವನ ಮಡದಿ ಗರ್ಭಿಣಿಯಾದಳಂ. ಪ್ರಸವ ಕಾಲದಲ್ಲಿ ಶಸ್ತ್ರಚಿಕಿತ್ಸೆ ನಡೆಸಬೇಕಾಯಿತು. ಶಸ್ತ್ರಚಿಕಿತ್ಸೆ ನಡೆದ

ನಾಲ್ಕು ದಿನಗಳಲ್ಲಿ ಅಕೆ ತೀರಿಕೊಂಡಳು. ಶಿಶುವೂ ನಾಲ್ಕಾರು ದಿನ ಈ ನೆಲದ ಗಾಳಿಯನ್ನು ಉಸಿರಾಡಿಸಿ, ತಾಯನ್ನು ಹಿಂಬಾಲಿಸಿತು. ಮುದ್ದುಮಡದಿಯ ಸಾವು ಸೋಮುಣ್ಣಿಮಾವನಿಗೆ ವೈರಾಗ್ಯವನ್ನು ಹಿಡಿಸಿತು. ಆತ ಉದ್ಯೋಗವನ್ನು ತೊರೆದು ಹುಟ್ಟೂರಲ್ಲಿ ನೆಲೆದು ಕೊಂಡು ಸಾಗುವಳಿ ಮಾಡಿದ. ನಾಲ್ಕು ಎಕರೆ ಕಾಡುಕಡಿಸಿ ಕಾಫಿ ಮತ್ತು ಕೆತ್ತಳೆ ಗಿಡಗಳನ್ನು ಹಾಕಿಸಿದ. ಇಬ್ಬರು ಆಳುಗಳನ್ನು ಕೆಲಸ-ಕ್ಕೆರಿಸಿಕೊಂಡು ತಾನೂ ಅವರ ಜತೆಯಲ್ಲಿ ಆಳಾಗಿ ದುಡಿಯುತ್ತಿದ್ದ. ಅವನ ತೋಟ ಬಹು ಸೊಗಸಾಗಿ ಬೆಳೆದು, ಕಳೆದ ಎರಡು ವರ್ಷಗಳಿಂದ ಫಸಲುಕೊಡತೊಡಗಿತ್ತು. ಗದ್ದೆಯ ಬೇಸಾಯದಿಂದ ನಾಲ್ಕೈದು ಗಾಡಿ ನೆಲ್ಲು ಪಡೆಯುತ್ತಿದ್ದ.

ಅನುಕೂಲವಂತನಾದ ಸೋಮುಣ್ಣಿಮಾವ ಮರುಮದುವೆ ಮಾಡಿ ಕೊಂಡು ಸಂಸಾರವಂದಿಗನಾಗಿ ಬಾಳಿಯಾನು—ಎಂದು, ಅನೇಕರು ಬಗೆದಿದ್ದರು. ಹಳ್ಳಿಯ ಕೆಲವು ಮಂದಿ ವಿಧವೆಯರು ಆತನ ಕೈಹಿಡಿದು 'ಕೂಡಾವಳಿ' ಮಾಡಿಕೊಳ್ಳಲು ಆತುರರಾಗಿದ್ದರು. ಆದರೆ ಊರನ್ನು ಸೇರಿ ಏಳು ವರ್ಷ ಕಳೆದರೂ ಸೋಮುಣ್ಣಿಮಾವ ಮರುಮದುವೆಯನ್ನು ಮಾಡಿಕೊಳ್ಳಲಿಲ್ಲ. ನಮ್ಮೂರ ತಕ್ಕ ಬೆಳ್ಳಿಯಪ್ಪ ಅಜ್ಜ ಒಮ್ಮೆ ಆತನ ಮನೆಗೆ ಹೋಗಿದ್ದಾಗ, ಮರುಮದುವೆ ಮಾಡಿಕೊಳ್ಳುವ ಪ್ರಸ್ತಾಪವನ್ನೆತ್ತಿದರು; ಆಗ ಸೋಮುಣ್ಣಿಮಾವ, "ಮಾವ, ನೀವು ಮದುವೆಯ ದಳ್ಳಾಳಿಯಾಗಿ ನನ್ನ ಮನೆಗೆ ಬರುವುದು ಬೇಡ!" ಎಂದು ನಿಷ್ಠುರ ದನಿಯಲ್ಲಿ ಹೇಳಿ ಕಳುಹಿಬಿಟ್ಟನಂತೆ.

ಅಂದಿನಿಂದ ಸೋಮುಣ್ಣಿ ಮಾವನ ಮುಂದೆ ಮರುಮದುವೆಯ ಸಂಗತಿಯನ್ನು ಪ್ರಸ್ತಾವಿಸಲು ಯಾರೂ ಧೈರ್ಯಪಡಲಿಲ್ಲ.

ಸೋಮುಣ್ಣಿಮಾವ ತೋಟಗದ್ದೆಗಳಲ್ಲಿ ಕೂಲಿ ಆಳಿಗಿಂತ ಮಿಗಿಲಾಗಿ ದುಡಿಯುತ್ತಿದ್ದ. ಅವನು ಎಂದೂ ನಾಜೂಕಾದ ಉಡಿಗೆ-ತೊಡಿಗೆಗಳನ್ನು ಹಾಕಿಕೊಳ್ಳುತ್ತಿರಲಿಲ್ಲ. ತನ್ನ ಮನೆಗೆ ಬನ್ನಿರೆಂದು ಊರವರನ್ನು ಕರೆಯುತ್ತಲೂ ಇರಲಿಲ್ಲ. ಊರ ಭಗವತೀ ದೇವಿಯ ಜಾತ್ರೆ, ಕೈಲ್‌ಮುಹೂರ್ತ, ಹುತ್ತರಿ—ಇತ್ಯಾದಿ ಹಬ್ಬಹರಿದಿನಗಳಲ್ಲಿ ಊರವರೊಂದಿಗೆ ಬೆರೆಯುತ್ತಿರಲಿಲ್ಲ. ಕೈಲ್ ಮುಹೂರ್ತ ಹಬ್ಬಕ್ಕೆ ಚಂದಾ ಕೇಳಲು ಹೋದರೆ, ಆತ ಎಂಟಾಣೆಯನ್ನೋ ಒಂದು ರೂಪಾ-ಯಿಯನ್ನೋ ಕೊಟ್ಟು ಕಳುಹಿಬಿಡುತ್ತಿದ್ದ. ಹುತ್ತರಿ ಹಬ್ಬದಲ್ಲಿ ಮನೆಗೆ ಹಾಡಲು ಹೋದಾಗ, ಆತ ಒಂದು ರೂಪಾಯಿಗಿಂತ ಹೆಚ್ಚು ಕೊಡುತ್ತಿರಲಿಲ್ಲ. ಊರಲ್ಲಿ ಮದುವೆಗಳು ನಡೆದಾಗ ಸೋಮುಣ್ಣಿ ಮಾವನಿಗೂ ಆಮಂತ್ರಣ ಕಳುಹಿಸಿದ್ದರು. ಆದರೆ ಅವನು ಯಾವ ಮದುವೆಗೂ ಹೋಗಿ ಮುಯ್ಯ ಮಾಡುತ್ತಿರಲಿಲ್ಲ.

ಒಂದು ಸಲ ಸೋಮುಣ್ಣಿಮಾವನ ಮನೆಗೆ ದೂರದ ನಂಟನೊಬ್ಬ ಹೋದನಂತೆ. ಎರಡು ದಿನ ಸೋಮುಣ್ಣಿ ಮಾವ ಕಳ್ಳತರಿಸಿ, ಕೋಳಿಕುಯ್ದು ನಂಟನಿಗೆ ಸಮ್ಮಾನ ಮಾಡಿದ. ಮೂರನೆಯ ದಿನ ಮುಂಜಾನೆ ಸೋಮುಣ್ಣಿ ಮಾವ ನಂಟನ ಕೈಗೆ ಗುದ್ದಲಿಯನ್ನು ಕೊಟ್ಟು "ನೋಡು, ದುಡಿದು ಬೆವರು ಹರಿಸದಿದ್ದರೆ ಉಂಡ ಅನ್ನ ಮೈಗೆ ಹಿಡಿಯದು" ಎಂದು ಹೇಳಿ, ನಂಟನನ್ನು ತೋಟದಲ್ಲಿ ಅಗತೆ ಮಾಡಲು ಕರೆದುಕೊಂಡು ಹೋದ. ಅಂದಿನಿಂದ ನಂಟರೆನಿಸಿಕೊಂಡ-ವರು ಸೋಮುಣ್ಣಿ ಮಾವನ ಮನೆಯ ಹತ್ತಿರ ಸುಳಿಯದಾದರು. ಯಾವನಾದರೂ ಒಬ್ಬ— ಸೋಮುಣ್ಣಿ ಮಾವನಿಂದ ಏನಾದರೂ ಒಂದು ಕೆಲಸ ಆಗಬೇಕೆಂದು— ಆತನ ಮನೆಯ ಕಡೆ ಹೋಗಿ ಬರುವೆ-ನೆಂದು ಹೇಳಿದರೆ "ಜೋಕೆ! ನಿನಗೆ ಕಾಫಿ-ತಿಂಡಿಗಳನ್ನು ಕೊಟ್ಟುದ-ರಿಂದ ಆದ ನಷ್ಟವನ್ನು ತುಂಬಲು ನಿನ್ನ ಕೈಗೆ ಗುದ್ದಲಿಕೊಟ್ಟಾನು!" ಎಂದು ಹೇಳಿ ಹಾಸ್ಯಮಾಡುವುದು ರೂಢಿಯಾಗಿ ಹೋಯಿತು.

ಸೋಮುಣ್ಣಿ ಮಾವ ಕಾಸು ಬಿಚ್ಚದ ಪರಮಲೋಭೀ—ಎಂದೇ ಊರವರ ನಂಬಿಕೆ. ಊರ ಹಿರಿಯರು "ಸೋಮುಣ್ಣಿಗೆ ಮಕ್ಕಳು ಮರಿಯೂ ಇಲ್ಲ; ಕೂಡಾವಳಿಯನ್ನು ಮಾಡಿಕೊಳ್ಳುವುದಿಲ್ಲ. ಕತ್ತೆಯ ಹಾಗೆ ದುಡಿದು ಯಾರಿಗೋಸ್ಕರ ಈ ಪಾಟೆ ದುಡ್ಡು ಕೂಡಿಸಾಕು-ತ್ತಾನೆ!" ಎಂದು ಹೇಳ-ತ್ತಿದ್ದರು. ಹೈಸ್ಕೂಲಿನ ನೆಟ್ಟಲಸ್ನೇರಿ ಇಂಗ್ಲಿಷ್ ಕಲಿತು ಬಂದ ತರುಣರು ಸೋಮುಣ್ಣಿ ಮಾವನನ್ನು "ನಮ್ಮೂರ ಮೈದಾಸ"ನೆಂದು ಕರೆಯುತ್ತಿದ್ದರು.

* * * *

ಬ್ಯಾಡ್ಮಿಂಟನ್ ಆಟ ಮುಗಿಯಿತು. ನಾನು ನೀರಡಿಕೆಯನ್ನು ಹಿಂಗಿಸಿಕೊಳ್ಳಲು ಗಪ್ಪು ಮತ್ತು ಜೆಣ್ಣಿಯರ ಜತೆಯಲ್ಲಿ ಪೋಕರ ಕಾಕಾನ ಚಹಾ ಅಂಗಡಿಯೊಳಗೆ ನುಗ್ಗಿದೆ. ಅಲ್ಲಿಯೂ ಮೈದಾಸನ ಭಂಡಾರ ಸುಲಿಗೆಯಾದ ವೃತ್ತಾಂತ ತುಂಬಿಹೋಗಿತ್ತು. ಒಬ್ಬ "ನಾಲ್ಕು ಸಾವಿರ ರೂಪಾಯಿ ಹೋಯಿತು!" ಎಂದು ಹೇಳಿದರೆ, ಇನ್ನೊಬ್ಬ "ಆ ಕಬ್ಬಿಣದ ಸಂದೂಕದಲ್ಲಿ ಮೂರೋ ನಾಲ್ಕು ಸಾವಿರ ರೂಪಾಯಿ ಇದ್ದಿದ್ದರೆ, ಆ ಜುಗ್ಗ ಇಷ್ಟರಲ್ಲಿ ಪ್ರಾಣಬಿಡುತ್ತಿದ್ದ. ಒಡನೆ ಓಡಿಹೋಗಿ ಪೋಲೀಸರಿಗೆ ತಿಳಿಸುತ್ತಿದ್ದ. ಆ ಸಂದೂಕದಲ್ಲಿ ಬರೇ ಆಣೆ ಪಾವಲಿಗಳು ತುಂಬಿದ್ದುವಂತೆ" ಎಂದು ನುಡಿದ. ಮಗು-ದೊಬ್ಬ "ಹೌದು. ಮೈದಾಸ ತನ್ನ ರೊಕ್ಕವನ್ನೆಲ್ಲಾ ಮನೆಯೊಳಗೆ ಗುಡ್ಡೆಹಾಕಿ ಇಟ್ಟುಕೊಳ್ಳುವಷ್ಟು ದಡ್ಡನಲ್ಲ. ಅವನು ತಿಂಗಳಿಗೊಮ್ಮೆ ವಿರಾಜಪೇಟೆಗೆ ಹೋಗಿ ಹಣವನ್ನು ಬ್ಯಾಂಕಿನಲ್ಲಿ ಹಾಕಿಬರುತ್ತಿದ್ದ. ಕಳವಾಗಿದ್ದರೆ ನೂರಿನ್ನೂರು ರೂಪಾಯಿ ಮಾತ್ರ ಹೋಗಿರಬಹುದು" ಎಂದು ಉಸುರಿದ.

ಹೀಗೆ ಸೋಮುಣ್ಣಿ ಮಾವನ ಮನೆಯಲ್ಲಿ ನಡೆದ ಕಳವಿನ ವಿಚಾರ ಒಬ್ಬೊಬ್ಬರು ಒಂದೊಂದು ವಿಧವಾಗಿ ಮಾತಾಡುತ್ತಿದ್ದರು. ಆದರೆ ಸತ್ಯಸಂಗತಿ ಸೋಮುಣ್ಣಿ ಮಾವನಿಗೂ, ಕಳವು ನಡೆಸಿದಾತನಿಗೂ ಅಲ್ಲದೆ ಅನ್ಯರಿಗೆ ತಿಳಿಯದು.

ನಾನು ಚಹಾಹೀರಿ ಮುಗಿಸಿ ಮನೆಗೆ ಹೊರಟೆ. ದಾರಿಯಲ್ಲಿ ಸಿಗರೇಟು ಸೇದಬೇಕೆಂಬ ಚಪಲ ಹುಟ್ಟಿತು. ಸಿಗರೇಟನ್ನು ತುಟಿಯ ಮೇಲಿರಿಸಿ ಬೆಂಕಿಪೆಟ್ಟಿಗೆಯನ್ನು ತೆಗೆದು ಕಡ್ಡಿಯನ್ನೊರೆದೆ. ಗಾಳಿ-ಬೀಸಿದುದರಿಂದ ಕಡ್ಡಿ ನಂದಿಹೋಯಿತು. ನಾನು ದಾರಿಯಾಚೆ ಇರುವ ಲಂಟಾನ ಪೊದೆಯ ಪಕ್ಕಕ್ಕೆ ಸರಿದು, ಕಡ್ಡಿಯನ್ನೊರೆದು ಸಿಗರೇಟು ಹತ್ತಿಸಿಕೊಂಡೆ.

ಅಲ್ಲಿ ಪೊದೆಯ ಸಂದಿನಲ್ಲಿ ಸುರಿದ ಸಂದೂಕವೊಂದು ನನಗೆ ಕಾಣಿಸಿತು. ನಾನು ಪೊದೆಯೊಳಗೆ ನುಸುಳಿ ಹೋಗಿ ಸಂದೂಕವನ್ನು ಕೈಯಲ್ಲಿ ಎತ್ತಿಕೊಂಡೆ. ಅದು ಕಬ್ಬಿಣದ ಸಂದೂಕ. ಅದರ ಮುಚ್ಚ-

ಳಕೆ ಬೇರೊಂದು ದಿಕ್ಕಿನಲ್ಲಿ ಬಿದ್ದಿತ್ತು. ನಾನು ಅದನ್ನು ಹೆಕ್ಕಿಕೊಂಡು ನೋಡಿದೆ. ಅದರ ಮೇಲೆ ಶಿವ.ಪಾರ್ವತಿಯರ ಚಿತ್ರವನ್ನು ಬಹು ಸೊಗಸಾಗಿ ಕೆತ್ತಿದ್ದರು. ಪೆಟ್ಟಿಗೆಯ ಸುತ್ತು ಕೊನರಿ ದಾಂಗುಡಿ ಬಿಟ್ಟ ಮಲ್ಲಿಗೆ ಬಳ್ಳಿಯ ಕೆತ್ತನೆ ಇತ್ತು. ಆ ಪುಟ್ಟ ಸಂದೂಕ ಸುಂದರ ಕಲಾಕೃತಿಯಾಗಿತ್ತು.

ನಸುದೂರದಲ್ಲಿ ಹಲವು ಕಾಗದಗಳು ಚೆಲ್ಲಾಪಿಲ್ಲಿಯಾಗಿ ನೆಲದ-ಮೇಲೆ ಬಿದ್ದಿದ್ದುವು. ನಾನು ಅವುಗಳನ್ನು ಹೆಕ್ಕಿಕೊಂಡು ನೋಡಿದೆ. ಅವೆಲ್ಲ ಪ್ರೇಮಪತ್ರಗಳಾಗಿದ್ದುವು. ಅವು ಮಡಿದ ಮಡದಿ ಸೋಮುಣ್ಣಿ ಮಾವನಿಗೆ ಬರೆದ ಒಲವಿನ ಓಲೆಗಳಾಗಿದ್ದುವು. ಆ ನಲ್ಲೆ ತನ್ನ ಹೃದಯದ ಮಧುರಭಾವಗಳನ್ನು ಆ ಓಲೆಗಳಲ್ಲಿ ನುಡಿಗಳ ರೂಪದಲ್ಲಿ ಎರಕಹೊಯ್ದಿದ್ದಳು. ಆ ಪತ್ರಗಳನ್ನು ಓದಿ ನೋಡುವುದು ಅಸಭ್ಯತೆ ಎಂದು ಆಲೋಚಿಸಿ, ನಾನು ಆ ಓಲೆಗಳನ್ನು ಲೆಕ್ಕಮಾಡಿ ಜೇಬಿನೊಳಗೆ ತುರುಕಿದೆ. ಸುಮಾರು ಮೂವತ್ತು ಪತ್ರಗಳಿದ್ದುವು. ನಾನು ಆ ಮುರಿದ ಸಂದೂಕವನ್ನು ಕೈಯಲ್ಲಿ ಹಿಡಿದು ಮನೆಯ ದಾರಿಯಲ್ಲಿ ಸಾಗಿದೆ.

ನಮ್ಮ ಮನೆಯ ದಾರಿಯಲ್ಲಿಯೇ ಸೋಮುಣ್ಣಿ ಮಾವನ ಮನೆ ಇತ್ತು. ಮುರಿದ ಪೆಟ್ಟಿಗೆ ಮತ್ತು ಪ್ರೇಮಪತ್ರಗಳನ್ನು ಆತನಿಗೆ ಕೊಟ್ಟು ಹೋಗೋಣವೆಂದು ನಾನು ಆತನ ಮನೆಯ ಅಂಗಳಕ್ಕೆ ಇಳಿದೆ. ಅಂಗಳದಲ್ಲಿ ಪುಟ್ಟ ಹೂದೋಟವೊಂದು ಇತ್ತು. ಗಿಡಗಳಲ್ಲಿ ಗುಲಾಬಿ, ಸೇವಂತಿಗೆ, ಚಂದ್ರಕ್ರಾಂತಿ ಮೊದಲಾದ ಹೂಗಳು ಅರಳಿ ವ್ಯಾಮೋಹಾಸವನ್ನು ಬೀರುತ್ತಿದ್ದುವು.

ಮನೆಯ ಕದ ಹಚ್ಚಿತ್ತು. ನಾನು ಬಾಗಿಲವನ್ನು ತಟ್ಟುತ್ತಾ "ಸೋಮುಣ್ಣಿ ಮಾವ, ಸೋಮುಣ್ಣಿ ಮಾವ!" ಎಂದು ಎರಡು ಮೂರು ಸಲ ಕೂಗಿದೆ.

ಸೋಮುಣ್ಣಿ ಮಾವ ಬಂದು ಮನೆಯ ಕದ ತೆರೆದ. ಸಂಜೆಯ ಮಬ್ಬುಬೆಳಕಿನಲ್ಲಿ ನಾನು ಆತನ ಮೋರೆಯನ್ನು ನೋಡಿದೆ. ಮೊಗ ಬಾಡಿತ್ತು. ಹಣೆಯ ಮೇಲೆ ಚಿಂತೆಯ ಗೆರೆಗಳು ಎದ್ದು ಕಾಣುತ್ತಿದ್ದುವು. ಕಣ್ಣುಗಳು ಕೆಂಪಡರಿದ್ದುವು.

"ಏನು ಬೇಕಿತ್ತು?"

ಸೋಮುಣ್ಣಿ ಮಾವನ ದನಿ ಗಡುಸಾಗಿತ್ತು. ಆ ದನಿ ನನ್ನ ಬರವನ್ನು ಆತ ಮೆಚ್ಚಲಿಲ್ಲ ಎಂಬುದನ್ನು ಸೂಚಿಸುತ್ತಿತ್ತು.

"ಮಾವ, ದಾರಿಯಲ್ಲಿ ನನಗೊಂದು ಸಂದೂಕ ಸಿಕ್ಕಿತು. ಇದು ನಿಮ್ಮದೇ?" ನಾನು ಕೈಯಲ್ಲಿ ಹಿಡಿದ ಕರಿಮರದ ಸಂದೂಕವನ್ನು ಆತನ ಕಣ್ಣಮುಂದೆ ಒಡ್ಡಿದೆ.

ಆತ ಆ ಸಂದೂಕವನ್ನು ಆತುರದಿಂದ ನನ್ನ ಕೈಯಿಂದ ಎಳೆದು ಕೊಂಡ. "ಒಳಗೆ ಬಾ" ಎಂದು ಹೇಳಿ, ನನ್ನನ್ನು ಮನೆಯೊಳಗೆ ಕರೆದುಕೊಂಡು ಹೋದ.

ಒಳಕೋಣೆಯಲ್ಲಿ ಮೇಜಿನ ಮೇಲೆ ದೀಪ ಉರಿಯುತ್ತಿತ್ತು. ಮೇಜಿನ ಮೇಲೆ ಹತ್ತೆಂಟು ಹೊತ್ತಗೆಗಳು ಹೊರಳಾಡುತ್ತಿದ್ದುವು. ಅವನು ನನಗೆ ಕುರ್ಚಿಯೊಂದನ್ನು ತೋರಿಸಿ ಕುಳಿತುಕೊಳ್ಳಲು ಹೇಳಿದ.

ನಾನು ಕುಳಿತುಕೊಂಡೆ. ಮೇಜಿನ ಮೇಲಿದ್ದ ಪುಸ್ತಕಗಳು ಯಾವುವು—ಎಂದು ಪರಿಶೀಲಿಸಿದೆ. ಭಗವದ್ಗೀತೆ, ಉಪನಿಷತ್ತುಗಳು, ವಚನಶಾಸ್ತ್ರ, ಹೀಗೆ ಆ ಹೊತ್ತಗೆಗಳೆಲ್ಲ ಪಾರಮಾರ್ಥಿಕ ವಿಚಾರಗಳಿಗೆ ಸಂಬಂಧಿಸಿದುವೇ ಆಗಿದ್ದುವು.

"ಈ ಸಂದೂಕ ಮಾತ್ರ ದೊರೆತುದೇ?" ಸೋಮುಣ್ಣಿಮಾವ ಉದ್ವೇಗಭರಿತ ಸ್ವರದಲ್ಲಿ ನುಡಿದ: "ಹೌದು. ಇದು ನನ್ನ ಸಂದೂಕ!"

"ಅಲ್ಲ. ಪೊದೆಯ ಎಡೆಯಲ್ಲಿ ಈ ಕಾಗದಗಳೂ ಬಿದ್ದಿದ್ದುವು." "ನಾನು ಜೇಬಿನಿಂದ ಓಲೆಗಳ ಕಂತೆಯನ್ನು ತೆಗೆದು ಆತನ ಮುಂದಿರಿಸಿದೆ. ಅವನು ನಡುಗುವ ಕೈಗಳಿಂದ ಓಲೆಗಳನ್ನು ಎತ್ತಿಕೊಂಡು ಎಣಿಸಿ ನೋಡಿದ.

"ತುಂಬಾ ಉಪಕಾರವಾಯಿತು!" ಸೋಮುಣ್ಣಿ ಮಾವನ ಕಣ್ಣುಗಳಿಂದ ನಲವಿನ ಕಿಡಿಗಳು ಸ್ಫುರಿಸಿದುವು. "ನೀನು ಕಳವಾದ ಬೊಕ್ಕಸವನ್ನು ಮರಳಿ ತಂದುಕೊಟ್ಟೆ!"

"ಕಳವಾದ ಬೊಕ್ಕಸ!" ನಾನು ವಿಸ್ಮಿತಸ್ವರದಲ್ಲಿ ಕೇಳಿದೆ.

"ಹೌದು. ಇವೇ ನನ್ನ ಸಂಪತ್ತು!" ಉದ್ವೇಗದಿಂದ ಕಂಪಿಸುವ ದನಿಯಲ್ಲಿ ಸೋಮುಣ್ಣಿಮಾವ ಮಾರ್ನುಡಿದ: "ಈ ಒಂದೊಂದು ಪತ್ರವೂ ಒಂದೊಂದು ನೂರು ರೂಪಾಯಿಯ ನೋಟು! ಹಾಳು ಹಣ ಹೋಗಿದ್ದರೆ ಯಾಕೆ ಚಿಂತೆ ಕಟ್ಟಿಕೊಳ್ಳುತ್ತಿದ್ದೆ?"

"ಸಂದೂಕದಲ್ಲಿ ಹಣಗಿಣವೇನೂ ಇರಲಿಲ್ಲವೆ?"

"ಇಲ್ಲ, ಇಲ್ಲ!" ಸೋಮುಣ್ಣಿಮಾವ ಉತ್ತರಿಸಿದ: "ಆ ಕಳ್ಳ ಚಂದದ ಕರಿಮರದ ಸಂದೂಕವದ್ದು ನೋಡಿ, ನಗನಾಣ್ಯಗಳು ತುಂಬಿರಬೇಕೆಂದು ಊಹಿಸಿ ಹೊತ್ತುಕೊಂಡು ಹೋದ. ಪಾಪ, ಒಡೆದು ನೋಡಿದಾಗ ಸಂದೂಕದ ತುಂಬಾ ಬರೇ ಕಾಗದಗಳು! ತನ್ನ ಸಾಹಸ ಕಟ್ಟಿತಲ್ಲ ಎಂದು ಆ ಕಳ್ಳನಿಗೆ ಎಷ್ಟು ವ್ಯಥೆಯಾಗಿರಬಹುದು."

'ಆದರೆ ಈ ಓಲೆಗಳು ನೂರು ರೂಪಾಯಿಯ ನೋಟುಗಳಿಗಿಂತ ಹೆಚ್ಚು ಬೆಲೆಯುಳ್ಳವು!" ಸೋಮುಣ್ಣಿಮಾವ ಓಲೆಗಳನ್ನು ಮಡಿಚಿ ಸಂದೂಕದೊಳಗೆ ಇರಿಸುತ್ತಾ ಮಾತು ಮುಂದುವರಿಸಿದ: "ಇವು ಮದುವೆಗೆ ಮೊದಲು ಜಲಜಾ ನನಗೆ ಬರೆದ ಓಲೆಗಳು. ಅವಳೆಂದು ನನ್ನ ಕೈಬಿಟ್ಟು— ಓಕೊಡದ ನಾಡಿಗೆ ತೆರಳಿದರೂ, ನಾನು ಈ ಕಾಗದಗಳಲ್ಲಿ ಅವಳ ತಿಳಿಹೃದಯವನ್ನು ಕಾಣುತಿದ್ದೇನೆ; ಅವಳ ಇನಿದನಿಯನ್ನು ಕೇಳುತಿದ್ದೇನೆ! ಇರುಳು ಮಲಗುವ ಮುನ್ನ ಈ ಓಲೆಗಳನ್ನೊಮ್ಮೆ ಓದದಿದ್ದರೆ ನನ್ನ ಕಣ್ಣುಗಳಿಗೆ ನಿದ್ದೆ ಹತ್ತದು. ಈ ಪತ್ರಗಳಲ್ಲಿ ನಾನು ಕಳೆದುಕೊಂಡ ಜಲಜಾಳನ್ನು ಕಾಣುತಿದ್ದೇನೆ!"

ಈ ನುಡಿಗಳನ್ನು ಆಡುತಿದ್ದಾಗ ಸೋಮುಣ್ಣಿಮಾವನ ಸುಕ್ಕುಗಟ್ಟಿದ ಮೋರೆ ಗುಲಾಬಿಬಣ್ಣವನ್ನು ತಳೆಯಿತು. ಕಣ್ಣುಗಳಲ್ಲಿ ನೀರು ತುಂಬಿ ಮಿನುಗಿದುವು. ಆತನ ಕೊರಳುಕಟ್ಟಿತು. ಭಾವೋದ್ವೇಗದಿಂದ ಆತನಿಗೆ ನಿಂತುಕೊಳ್ಳಲು ಆಗಲಿಲ್ಲ. ಆತ ಕುರ್ಚಿಯ ಮೇಲೆ ಕುಸಿದುಬಿಟ್ಟ. ಕಣ್ಣುಗಳಿಂದ ಸರಸರನೆ ನಾಲ್ಕು ಹನಿಗಳು ಉದುರಿ-

ದುವು. ಅವನು ತೊಟ್ಟ ಶರಾಯಿಯ ಕಿಸೆಯಿಂದ ಕೈವಸ್ತ್ರವನ್ನು ತೆಗೆದು ಮೋರೆಯನ್ನು ಉಜ್ಜಿಕೊಂಡ.

"ಮಾವ, ನೀವು ತುಂಬಾ ಪುಸ್ತಕಗಳನ್ನು ಓದುತ್ತೀರಲ್ಲ!" ನಾನು ಮೇಜಿನ ಮೇಲೆ ಹೊರಳಾಡುತಿದ್ದ ಹೊತ್ತಗೆಗಳನ್ನು ನೋಡುತ್ತಾ ಮಾತನ್ನು ಬೇರೊಂದು ಹಾದಿಗೆ ತಿರುಗಿಸಿದೆ.

"ಹೂಂ. ಈ ಒಂಟಿಗತನವನ್ನು ಕಳೆಯಲು ಏನಾದರೂ ಮಾಡುತ್ತಾ ಇರಬೇಕಲ್ಲ." ಸೋಮುಣ್ಣಿಮಾವ ಪೇರುಸಿರೊಂದನ್ನು ಹೊರಚೆಲ್ಲಿ ಉಸುರಿದ: "ಈ ಪುಸ್ತಕಗಳೇ ನನ್ನ ಗೆಳೆಯರು; ನನ್ನ ಜೀವಕ್ಕೆ ಶಾಂತಿ ಸಮಾಧಾನಗಳನ್ನು ಊಡುವ ಮಿತ್ರರು!"

"ಮಾವ, ತುಂಬಾ ತಡವಾಯಿತು." ನಾನು ಕುರ್ಚಿಯಿಂದ ಏಳುತ್ತಾ ನುಡಿದೆ: "ನಾನಿನ್ನು ಹೊರಡುವೆನು."

"ಅಚ್ಚು, ನೀನು ಈ ಒಬ್ಬೊಂಟಿಗ ಮಾವನನ್ನು ಮರೆಯಬೇಡ. ಆಗಾಗ ನನ್ನ ಮನೆಗೆ ಬರುತ್ತಿರು." ಎಂದು ಸೋಮುಣ್ಣಿ ಮಾವ ನನಗೆ ಆಹ್ವಾನ ನೀಡಿದ.

ನನ್ನನ್ನು ಕಳುಹಿಕೊಡಲು ಮಾವ ಬಾಗಿಲವರೆಗೆ ಬಂದ. ನಾನು "ಬರುವೆನು" ಎಂದು ಹೇಳಿ ಆತನ ಮೋರೆಯನ್ನು ನೋಡಿದೆ. ಗಂಭೀರತೆ ಮತ್ತು ಪ್ರಸನ್ನತೆಗಳು ತುಳುಕಾಡುತ್ತಿರುವ ಆ ಮುಖಮುದ್ರೆ, ಇರುಳ ಕತ್ತಲೆಯನ್ನು ಸೀಳಿ ಆಚೆಗಿನ ಬೆಳಕನ್ನು ಕಾಣಲು ಹವಣಿಸುತ್ತಿದ್ದ ಆ ಉಜ್ವಲ ನೇತ್ರಗಳು,— ನನ್ನ ಎದೆಯಲ್ಲಿ ಆತನ ಬಗ್ಗೆ ಒಂದು ಬಗೆಯ ಪೂಜ್ಯ ಭಾವನೆಯನ್ನು ಕುದುರಿಸಿದುವು. ನಾನು ಆತನ ಪಾದಗಳನ್ನು ಮುಟ್ಟಿ ನಮಸ್ಕರಿಸಿದೆ.

"ಮರುಳು ಹುಡುಗ! ನನಗೇಕೆ ಈ ಮಣಿತ?" ಎಂದು ಹೇಳಿ ಸೋಮುಣ್ಣಿಮಾವ ನನ್ನ ತೋಳುಗಳನ್ನು ಹಿಡಿದು ಮೇಲೆತ್ತಿದ.

* * * *

ಸೋಮುಣ್ಣಿಮಾವನ ಮನೆಯಲ್ಲಿ ನಡೆದ ಕಳವು ನನಗೂ ಆತನಿಗೂ ಸ್ನೇಹವನ್ನು ಬೆಸೆಯಿತು. ಅವನ ಆಮಂತ್ರಣಕ್ಕೆ ಒಗೊಟ್ಟು ನಾನು ಆಗಾಗ ಆತನ ಮನೆಗೆ ಹೋಗಿ ಬರತೊಡಗಿದೆ. ಆತನ ಜತೆಯಲ್ಲಿ ಮಾತಾಡುವುದರಲ್ಲಿ ಹೊತ್ತು ಕಳೆಯತೊಡಗಿದೆ. ಆತ ಹೊರಗಿನವರ ಕಣ್ಣುಗಳಿಗೆ ತೋಟ ಮತ್ತು ಗದ್ದೆಗಳಲ್ಲಿ ಕತ್ತೆಯ ಹಾಗೆ ದುಡಿಯುವ ಜುಗ್ಗುವಾಗಿದ್ದ; ನನಗೆ ಆತನ ವ್ಯಕ್ತಿತ್ವದ ಇನ್ನೊಂದು ಪಾರ್ಶ್ವ ಪರಿಚಯವಾಗತೊಡಗಿತು. ಆತನ ನುಡಿಗಳಲ್ಲಿ ತೊಂಡು-ತೊಳಸುಗಳಿರಲಿಲ್ಲ. ಅವನ ಜತೆಯಲ್ಲಿ ಮಾತಾಡಿ ಹೊರಟಾಗ, ಸೆಕೆಗಾಲದ ಕಾವನ್ನು ತಾಳಲಾಗದೆ ತಣ್ಣೀರ ಮಡುವಿನಲ್ಲಿ ಮುಳುಗುಹಾಕಿ ಮೇಲೆದ್ದಾಗ ಅನುಭವವಾಗುವ ಉನ್ಮೇಷವು ಅಂತರಂಗದಲ್ಲಿ ತುಳುಕಾಡುವುದು; ಮನಸ್ಸು ಶಾಂತಿಯನ್ನು ಹೊಂದುವುದು.

ಮಾವ ಕುರ್ಚಿಯ ಮೇಲೆ ಕುಳಿತು, ಉಪನಿಷತ್ತುಗಳಿಂದ, ರಾಮಾಯಣ-ಮಹಾಭಾರತಗಳಿಂದ ಬೇರೆಬೇರೆ ಸಾಧುಸಂತರ ಜೀವನ ಚರಿತ್ರೆಗಳಿಂದ ಸ್ವಾರಸ್ಯಮಯವಾದ ಘಟನೆಗಳನ್ನು ವಿವರಿಸಿ ಹೇಳುತ್ತಿದ್ದ. ನಾನು ಆತನಿತ್ತ ಕಾಫಿಯನ್ನು ನಿಧಾನವಾಗಿ ಹೀರುತ್ತಾ ಅವನ ನುಡಿಗಳನ್ನು ಕೇಳುತ್ತಿದ್ದೆ. ನಡುನಡುವೆ ಪ್ರಶ್ನೆಗಳನ್ನು ಕೇಳಿ ಆತನ ಉತ್ಸಾಹವನ್ನು ಕೆಣಕಿಸುತ್ತಿದ್ದೆ. ಆತ ಉತ್ಸಾಹಪೂರ್ಣದನಿಯಲ್ಲಿ ವಿವರಿಸುತ್ತಿದ್ದ. ಕೊನೆಗೆ ಆತ "ಆತ್ಮ ಅವಿನಾಶಿಯಾದುದು; ಯಾವುದೂ ಅಳಿವುದಿಲ್ಲ. ಈ ಅನುಭವವನ್ನು ನೆಯ್ಗೂಡಿಸಿಕೊಳ್ಳದಿರುವುದೇ ನಮ್ಮಲ್ಲಿರುವ ಕೊರತೆ!" ಎಂದು ಹೇಳಿ ಮಾತು ಮುಗಿಸುತ್ತಿದ್ದ.

"ಮಾವ, ನೀವು ಪಾರಮಾರ್ಥಿಕದ ಹಾದಿ ಹಿಡಿದವರು." ನಾನು ಒಮ್ಮೆ ಹೇಳಿದೆ: "ನೀವೇಕೆ ಈ ಗದ್ದೆತೋಟಗಳ ಜೂಜಾಟ ಕಟ್ಟಿಕೊಂಡಿದ್ದೀರಿ?"

"ಗದ್ದೆ-ತೋಟಗಳಲ್ಲಿ ದುಡಿಯುವುದು ಜೂಜಾಟವೇ!" ಸೋಮುಣ್ಣಿಮಾವ ನಗುತ್ತಾ ಮಾರುಲಿದ: "ಕಾಯಕವೇ ಕೈಲಾಸ; ದುಡಿಯೋದರಲ್ಲಿ ದೇವನನ್ನು ಕಾಣೂಂತ ಬಲ್ಲವರು ಹೇಳಿದ್ದಾರೆ. ನೋಡು; ನಾನು ಹಣ ಗಳಿಸಲೆಂದು ಗೇಯುತ್ತಲಿಲ್ಲ. ದುಡಿಮೆಯಲ್ಲಿ ನಾನು ನನ್ನನ್ನು ಮರೆಯುತ್ತೇನೆ. ನನ್ನ ಇಂದ್ರಿಯಗಳ ಅನುಭವಕ್ಕೆ ಹೊರಗಾದ ಒಂದುಬಗೆಯ ಸುಖವನ್ನು ಸವಿಯುತ್ತೇನೆ."

"ಜನವೆಲ್ಲ ನಿಮ್ಮನ್ನು ಜುಗ್ಗು, ವೈದಾಸ ಅಂತ ಕರೆಯುತ್ತಾರೆ!" ನಾನು ನಡುವೆ ಬಾಯಿಹಾಕಿದೆ.

"ಕರೆಯಲಿ ಬಿಡು." ಮಾವ ಆಲೋಚಿಸುತ್ತಾ ಉತ್ತರಿಸಿದ: "ಒಂದು ರೀತಿಯಲ್ಲಿ ನಾನೂ ವೈದಾಸನ ಕುಲಕ್ಕೆ ಸೇರಿದವನು!"

"ನೀವು ವೈದಾಸನ ಬಳಗಕ್ಕೆ ಸೇರಿದವರು?" ನಾನು ವಿಸ್ಮಯದನಿಯಲ್ಲಿ ಪ್ರಶ್ನಿಸಿದೆ.

"ಹೌದು. ವೈದಾಸನಿಗೆ ಹೊನ್ನಿನ ಧ್ಯಾನ; ನನಗೆ ಜಲಜಳ ಧ್ಯಾನ?"

ಹೀಗೆ ಆತನ ಮಾತು ಮಡಿಪ ಮಡದಿಯೆಡೆಗೆ ಹರಿಯಿತು ಮಡದಿ ಮಡಿದು ಆರೇಳು ವರ್ಷ ಕಳೆದರೂ ಆಕೆಯನ್ನು ಧ್ಯಾನಿಸುವ, ಆಕೆಯ ನೆನಪನ್ನು ಹಚ್ಚಹಸಿರಾಗಿ ಉಳಿಸಿಕೊಂಡು ಮರುಮದುವೆಯನ್ನು ಮಾಡಿಕೊಳ್ಳದೆ ಇರುವ ಆತನ 'ಸಾತಿವ್ರತ್ಯ'ವನ್ನು ಕಂಡು ನನಗೆ ಆಶ್ಚರ್ಯವಾಯಿತು.

* * *

ಒಮ್ಮೆ ನನಗೆ ಬೆಂಗಳೂರಿಗೆ ಹೋಗಬೇಕಾಗಿ ಬಂತು. ನಾನು ಅಲ್ಲಿ ತಾಜಮಹಲ್ ಹೋಟೆಲಿನಲ್ಲಿ ಉಳಿದುಕೊಂಡಿದ್ದೆ. ಒಂದಿರುಳು ನಡುರಾತ್ರಿಯ ಹೊತ್ತಿಗೆ ನನಗೆ ಬಚ್ಚಲುಮನೆಗೆ ಹೋಗಬೇಕೆನಿಸಿತು. ಹಾಗೆಯೇ ನಾನು ಕವ ತೆರೆದು ಹೊರಗೆ ಹೋದೆ. ನಾನು ಬಚ್ಚಲು ಮನೆಯಿಂದ ಮರಳಿ ಬಂದಾಗ ಇರ್ವರು ಮಹಡಿಯ ಮೆಟ್ಟಿಲುಗಳನ್ನೇರಿ ಬರುತ್ತಿದ್ದರು ಅವರಿಬ್ಬರು ಗಂಡು-ಹೆಂಡಿರಾಗಿದ್ದರು. ಇರುಳು ಚಲಚ್ಚಿತ್ರದ ಎರಡನೆಯ ಪ್ರದರ್ಶನವನ್ನು ನೋಡಿಕೊಂಡು ಕೋಣೆಗೆ ಮರಳುತ್ತಿದ್ದರು. ದಾರಿಯಲ್ಲೆಲ್ಲೊ ಶರಾಬು ಅಂಗಡಿಯೊಳಗೆ ನುಗ್ಗಿ ಒಡಲು ಬಿರಿಯುವಷ್ಟು ಕಳ್ಳನ್ನು ಸುರಿದುಕೊಂಡು ಬಂದಿದ್ದರು. ಇರ್ವರ ಬಾಯಿಂದಲೂ ಘಮ್ಮೆಂದು ಕಳ್ಳಿನ ದುರ್ವಾಸನೆ ಹರಿದು ಬಂದು ನನ್ನ ಮೂಗಿಗೆ ಬಡಿಯಿತು. ಹೆಣ್ಣು ನಡೆಯಲಾರದೆ ಗಂಡಿನ ಹೆಗಲನ್ನು ಹಿಡಿದುಕೊಂಡು ಹೆಜ್ಜೆ ಹಾಕುತ್ತಿತ್ತು. ಗಂಡುಸು ತನ್ನ ತೋಳಿನಿಂದ ಆಕೆಯ ನಡುವನ್ನು ಸುತ್ತಿದ್ದ. ಆಕೆಯ ಕಣ್ಣುಗಳು ಕೆಂಪಡರಿದ್ದುವು.

ಕೂದಲು ಕೆದರಿತ್ತು. ಎದೆಯ ಮೇಲಿಂದ ಸೆರಗು ಜಾರಿತ್ತು. ಮಾತು-ಗಳು ತೊದಲುತ್ತಿದ್ದುವು.

ನಾನು ಬೇಗನೆ ಕೋಣೆಯೊಳಗೆ ಬಂದು ಬಾಗಿಲು ಹಾಕಿಕೊಂಡೆ. ಅವರು ಕದತೆರೆದು ಕೋಣೆಯೊಳಗೆ ನುಗ್ಗಿದ ಸದ್ದು ಕೇಳಿಸಿತು. ಈ ಕಳ್ಳುಕುಡುಕರು ನನ್ನ ನೆರೆಯ ಕೋಣೆಯವರಾಗಿರುವರೆಂದು ನನಗೆ ಅರಿವಾಯಿತು.

ತುಸು ಹೊತ್ತು ಕಳೆದ ಮೇಲೆ ಪಕ್ಕದ ಕೋಣೆಯಿಂದ ಹಾಡಿನ ಅಲೆಯೊಂದು ಎದ್ದು ಬರತೊಡಗಿತು. ಕಳ್ಳಿನ ಅಮಲೇರಿದ ಆ ಹೆಣ್ಣು ಹಾಡುತ್ತಿದ್ದಳು. ಅಶ್ಲೀಲವಾದ ತಮಿಳು ಹಾಡದು. ಹಾಡನ್ನು ಕೇಳಿದ ಗಂಡ "ಭಲೆ, ಭೇಷ್" ಎಂದು ಮೆಚ್ಚಿಕೆಯ ಉದ್ಗಾರವನ್ನು ಎತ್ತುತ್ತಾ ತನ್ನ ನಗುವನ್ನು ಅಕೆಯ ಕೊರಳುಲಿತಕ್ಕೆ ಬೆರಸುತ್ತಿದ್ದ. ಆ ಹೊಲಸು ಹಾಡನ್ನು ಕೇಳಬಾರದೆಂದು ನಾನು ಎಷ್ಟು ಪ್ರಯತ್ನಿ-ಸಿದರೂ, ಅದು ಬಂದು ನನ್ನ ಕಿವಿಗಳನ್ನು ಕೊರೆಯಿತು. "ಒಳ್ಳೆಯ ಸಂಸಾರ ಇದು!" ಎಂದು ಹೇಳುತ್ತಾ ನಾನು ಕಿವಿಮುಚ್ಚಿ ಮಲಗಿ-ಕೊಂಡೆ.

ಕಳ್ಳಿನ ಅಮಲು ನೆತ್ತಿಯಿಂದ ಇಳಿದ ಹಾಗೆ ಹಾಡಿನ ದನಿಯೂ ಇಳಿಯುತ್ತಾ ಬಂತು.

ನನ್ನ ಕೋಣೆಯ ಬಾಗಿಲಿಗೆ ಅಂಟಿಸಿದ ವಿಸಿಟಿಂಗ್ ಕಾರ್ಡನ್ನು ನೋಡಿ, ಮರುದಿನ ಪಕ್ಕದ ಕೋಣೆಯ ಮಹಾರಾಯ ನನ್ನ ಪರಿಚಯ ಮಾಡಿಕೊಳ್ಳಲು ಬಂದ. ತೆಳ್ಳಗಿನ ಮೈ ಆತನದು. ಆತನ ಮೋರೆ ಕಳೆಗೆಟ್ಟು ಬಾಡಿದ ಎಲೆಯಂತಿತ್ತು. ಕಣ್ಣುಗಳು ಗುಳಿಯೊಳಕ್ಕೆ ಇಳಿದು ಕೆಂಪಾಗಿದ್ದುವು. ಸಂಯಮವಿಲ್ಲದ ವಿಷಯಾಸಕ್ತಿ ಸತ್ವ-ಗೆಡಿಸಿ ಅವನನ್ನು ಹಿಪ್ಪೆಗೊಳಿಸಿತ್ತು.

"ನಮಸ್ಕಾರ, ನೀವು ಕೊಡಗಿನವರೆಂದು ತೋರುವುದು" ಆತ ಹೆಲ್ಲುಕಿರಿದು ನನ್ನನ್ನು ಮಾತಾಡಿಸಿದ.

"ಹೌದು. ನೀವು ಯಾರು?" ನಾನು ಸೋಜಿಗದ ದನಿಯಲ್ಲಿ ಕೇಳಿದೆ: "ನನ್ನಿಂದ ಏನಾಗಬೇಕು?"

"ಹೂಂ. ನಿಮ್ಮ ಊರಲ್ಲಿಯೇ ನನ್ನ ನಂಟರೊಬ್ಬರಿದ್ದಾರೆ." ಆತ ಸಿಗರೇಟೊಂದನ್ನು ತೆಗೆದು ತುಟಿಯ ಮೇಲಿರಿಸುತ್ತಾ ಹೇಳಿದ: "ನಾನೀಗ ತುಮ್ಕೂರಲ್ಲಿ ಇದ್ದೇನೆ. ನನ್ನ ಹೆಸರು ವಾಸುದೇವರಾವ್ ಅಂತ."

"ಕೊಡಗಿನಲ್ಲಿರುವ ನಿಮ್ಮ ನಂಟರು ಯಾರು?" ವಾಸುದೇವ ರಾಯನ ಮಾತು ಕೇಳಿದಾಗ ನನ್ನ ವಿಸ್ಮಯ ಇಮ್ಮಡಿಸಿತು.

"ಅವರು ನನಗೆ ಷಡ್ಡಕ ಆಗಬೇಕು." ಆತ ಕಡ್ಡಿಯನ್ನೊರೆದು ಸಿಗರೇಟಿಗೆ ಬೆಂಕಿ ಹಚ್ಚುತ್ತಾ ಉಲಿದ: "ಅದರೆ ಅವರು ನಮ್ಮ ಜಾತಿ-ಯಲ್ಲ. ನೀವು ಕೊಡಗರೇ?"

"ಹೌದು." ನಾನು ತಲೆಯನ್ನು ಅಲುಗಿಸಿದೆ.

"ಸರಿ. ಅವರು ನಿಮ್ಮ ಜಾತಿಯವರು." ವಾಸುದೇವರಾಯ ಮಾತು ಮುಂದುವರಿಸಿದ: "ನನ್ನಾಕೆಯ ಅಕ್ಕನನ್ನು ಅವರು ಮದುವೆ-ಯಾಗಿದ್ದರು."

"ಯಾರವರು?" ನಾನು ಉತ್ಸುಕತೆ ತುಂಬಿದ ದನಿಯಲ್ಲಿ ಪ್ರಶ್ನಿಸಿದೆ.

"ಸೋಮಯ್ಯ ಅಂತ ಅವರ ಹೆಸರು. ನನ್ನ ವನಜನ ಅಕ್ಕ ಅವರನ್ನು ಪ್ರೀತಿಸಿ ರಿಜಿಸ್ಟ್ರಿ ಮದುವೆ ಮಾಡಿಕೊಂಡರು. ಆಗ ವನಜಾ ಹೈಸ್ಕೂಲಿನಲ್ಲಿ ಓದುತ್ತಿದ್ದಳು.

"ಸೋಮಯ್ಯನವರು ನನಗೆ ಪರಿಚಿತರು ಮಾತ್ರವಲ್ಲ; ದೂರದ ಮಾವನಾಗಬೇಕು."

"ತುಂಬಾ ಸಂತೋಷ!" ವಾಸುದೇವರಾಯ ಮರಳಿ ಹಲ್ಲು ಕಿರಿದ: "ನಿಮ್ಮಿಂದ ಒಂದು ಸಣ್ಣ ಉಪಕಾರವಾಗಬೇಕಿತ್ತು."

"ಏನು ಉಪಕಾರ?"

"ಸೋಮಯ್ಯನವರು ತುಂಬಾ ಶ್ರೀಮಂತರೆಂದು ತೋರುವುದು."

"ಹೇಳಿಕೊಳ್ಳುವಂತಹ ಶ್ರೀಮಂತರೇನೂ ಅಲ್ಲ."

"ನೋಡಿ ಅವರು ನನ್ನ ವನಜನ ಉಪಜೀವನಕ್ಕೆಂದು ವರುಷಕ್ಕೆ ಐನೂರು ರೂಪಾಯಿ ಕೊಡುತ್ತಿದ್ದಾರೆ. ನನಗೆ ಉದ್ಯೋಗವೂ ಇಲ್ಲ. ಆ ಐನೂರು ರೂಪಾಯಿಯಲ್ಲಿ ನಮ್ಮಿಬ್ಬರ ಉಪಜೀವನ ಸಾಗಬೇಕು!"

ಇನ್ನೊಬ್ಬರು ದಾನ ಮಾಡಿದ ಹಣವನ್ನು ಕಳ್ಳು ಕುಡಿದು ಮೋಜು ಮಾಡಲು ಬಳಸಿದರೆ ಎಲ್ಲಿ ಸಾಕಾದೀತು— ಎಂದು ಹೇಳಿ ಬಿಡಬೇಕೆಂದು ನಾನು ಆಲೋಚಿಸಿದೆ. ಆದರೆ ವಿವೇಕ 'ಅನ್ಯರಿಗೆ ಬುದ್ಧಿ ಹೇಳುವ ಗೊಡವೆ ನಿನಗೇಕೆ?' ಎಂದು ನನ್ನನ್ನು ಎಚ್ಚರಿಸಿತು.

"ನೀವು ಸೋಮಯ್ಯನವರಿಗೆ ನಂಟರೆಂದು ಹೇಳುತ್ತೀರಿ." ವಾಸುದೇವರಾಯ ಮಾತು ಮುಂದುವರಿಸಿದ: "ನೀವು ಅವರಿಗೆ ಒಂದು ಮಾತು ಹೇಳಿ. ಹಿಂದೆ ಒಬ್ಬಾಕೆ ಜೀವನ ನಡೆಸುತ್ತಿದ್ದ ಹಣದಲ್ಲಿ ಈಗ ಇಬ್ಬರು ಬಾಳ್ವೆ ನಡೆಸಬೇಕಾಗಿದೆ. ಅವರು ಬ್ರಾಹ್ಮಣ ಕುಲದೊಡನೆ ಸಂಬಂಧ ಬೆಳೆಸಿದರು. ಅದನ್ನು ನೆನೆದಾದರೂ ವನಜನಿಗೆ ಕೊಡುವ ಹಣವನ್ನು ಹೆಚ್ಚಿಸುವುದು ಅಗತ್ಯ."

ಆತನೊಡನೆ ಮಾತು ಬೆಳಸಲು ನನಗೆ ಇಚ್ಛೆ ಇರಲಿಲ್ಲ. ಆದುದ-ರಿಂದ ನಾನು "ಆಗಲಿ. ಹೇಳಿ ನೋಡುವೆನು." ಎಂದು ನುಡಿದ ಮಾತು ಮುಗಿಸಿದೆ.

ಕೈಗೆ ಸಿಕ್ಕಿದವರನ್ನು ಸುಮ್ಮನೆ ಬಿಡುವ ಆಸಾಮಿಯಲ್ಲ ಆ ವಾಸುದೇವರಾಯ. ಆತ ಜಿಗುಳೆಯ ಹಾಗೆ ನನ್ನನ್ನು ಅಂಟಿದ. ಅಂದು ನನ್ನನ್ನು ಒತ್ತಾಯಪಡಿಸಿ ಕುದುರೆಜೂಜಿಗೆ ಕರೆದುಕೊಂಡು ಹೋದ. ಜತೆಯಲ್ಲಿ ಆತನ ಮಡದಿ, ಆ ಬಣ್ಣದ ಬೊಂಬೆಯೂ ಬಂದಿದ್ದಳು. ದಾರಿಯಲ್ಲಿ ಅವರು ಬಾದೊಂದರೊಳಗೆ ನುಗ್ಗಿದರು. ಆತ ವ್ಹಿಸ್ಕಿ ಶೀಸೆಯೊಂದನ್ನು ತರಿಸಿ "ನೀವೂ ಕುಡಿಯಿರಿ." ಎಂದು ಆಗ್ರಹಪೂರ್ವಕ ಹೇಳಿದ.

"ಬೇಡ. ನನಗೆ ಸೋಡಾ ನೀರೋ, ಲೆಮನೆದೊ ಸಾಕು." ಎಂದು ನಾನು ಕೇಳಿದೆ.

"ಕೊಡಗಿನವರು ಕುಡಿತದಲ್ಲಿ ಮುಂದು— ಎಂದು ನಾನು ಕೇಳಿ-ದ್ದೇನೆ." ವಾಸುದೇವರಾಯ ವ್ಹಿಸ್ಕಿಯನ್ನು ಗ್ಲಾಸಿಗೆ ಬಾಗಿಸುತ್ತಾ ನುಡಿದ.

"ಕೊಡಗಿನವರೆಲ್ಲ ಕುಡುಕರಲ್ಲ ! "

ಆತನ ಮಡದಿಯೂ ಗ್ಲಾಸನ್ನೆತ್ತಿಕೊಂಡು ವ್ಹಿಸ್ಕಿಯನ್ನು ಅರ್ತಿಯಿಂದ ಹೀರಿದಳು. ಹೆಣ್ಣು ಗಂಡುಬೀರಿಯಾಗಿ ಬಾರಿನೊಳಗೆ ನುಗ್ಗಿ ಕಳ್ಳು ಹೀರುವುದನ್ನು ನಾನು ಆ ವರೆಗೆ ನೋಡಿರಲಿಲ್ಲ. ಆಕೆಯ ಬಗೆಗೆ ನನ್ನಲ್ಲಿ ಜುಗುಪ್ಸೆ ಮೂಡಿತು.

ಜೂಜಿನಲ್ಲಿ ವಾಸುದೇವರಾಯ, ಓಡುವ ಕುದುರೆಗಳ ಮೇಲೆ ಹೆಣ ಕಟ್ಟಿದ. ಕೈ ಹಿಡಿದಾಕೆ ಬೇಡವೆಂದು ಅತನನ್ನು ತಡೆಯಲಿಲ್ಲ. ಅವಳು ಭಾಗ್ಯದ ಪರೀಕ್ಷೆ ನಡೆಸಲು ಅತನಿಗಿಂತ ಉತ್ಸುಕಳಾಗಿದ್ದಳು. ಹೆಚ್ಚು ಉತ್ಸುಕಳಾಗಿದ್ದಳು. ಭಾಗ್ಯವನ್ನು ಅರಸಲು ಹೊರಟ ಆ ದಂಪತಿಗಳು ಜೂಜಿನಲ್ಲಿ ಏನತ್ತು ರೂಪಾಯಿಗಳನ್ನು ಕಳೆದುಕೊಂಡರು.

ಹೋಟೆಲಿಗೆ ಮರಳುತ್ತಿದ್ದಾಗ ದಾರಿಯಲ್ಲಿ ವಾಸುದೇವರಾಯ, 'ನೋಡಿ, ನೀವು ಊರಿಗೆ ಹೋದನೆಲೆ ನನ್ನ ಷಡ್ಡಕನಿಗೆ ಒಂದು ಮಾತು ಹೇಳಲು ಮರೆಯಬೇಡಿ " ಎಂದು ಇನ್ನೊಮ್ಮೆ ನನ್ನನ್ನು ಎಚ್ಚರಿಸಿದ.

* * * *

ನಾನು ಬೆಂಗಳೂರು ಊರಿಂದ ಮರಳಿ ಬಂದೆ. ಮರುದಿನ ನಾನು ಸೋಮುಣ್ಣಿ ಮಾವನನ್ನು ಕಾಣಲೆಂದು ಅತನ ಮನೆಗೆ ಹೋದೆ. ಆತ ಈಶಾವಾಸ್ಯ ಉಪನಿಷತ್ತನ್ನು ಕೈಯಲ್ಲಿ ಹಿಡಿದುಕೊಂಡು ಕುಳಿತಿದ್ದ. ನಾನು ಬಂದುದನ್ನು ಕಂಡು ಕೈಯಲ್ಲಿ ಹಿಡಿದ ಪುಸ್ತಕವನ್ನು ಮೇಜಿನ ಮೇಲಿರಿಸಿ "ಅಚ್ಚು, ನೀನು ಬೆಂಗಳೂರಿಂದ ಯಾವಾಗ ಬಂದೆ ? " ಎಂದು ಕೇಳಿದ.

"ಮಾವ, ನಿನ್ನೆ ತಾನೇ ಬಂದೆ." ನಾನು ಕುರ್ಚಿಯ ಮೇಲೆ ಕುಳ್ಳಿರುತ್ತಾ ಮಾರ್ನುಡಿದೆ : "ಬೆಂಗಳೂರಿನಲ್ಲಿ ನಿಮ್ಮ ಷಡ್ಡಕನನ್ನೂ ನಾದಿನಿಯನ್ನೂ ಕಂಡು ಮಾತಾಡಿದೆ."

"ವನಜಾನನ್ನು ನೋಡಿದೆಯಾ ? " ಸೋಮುಣ್ಣಿಮಾವನ ದನಿ ನಡುಗಿತು. ಮೋರೆ ನಸು ಬಿಳುಪೇರಿತು.

"ಹೂಂ. ಆಕೆಯನ್ನು ಕಂಡೆ. ನಿಮ್ಮ ಷಡ್ಡಕ ನಿಮಗೆ ಒಂದು ಸಂದೇಶವನ್ನು ಬೇರೆ ಕಳುಹಿದ್ದಾನೆ."

"ಏನದು? " ಸೋಮುಣ್ಣಿ ಮಾವ ಕಣ್ಣುಗಳನ್ನು ಮೇಲೆತ್ತಿದ,

"ಮಾವ, ನೀವು ಕಳುಹಿಸೋ ಹಣ ಅವರಿಬ್ಬರ ವೆಚ್ಚಕ್ಕೆ ಸಾಕಾಗುವುದಿಲ್ಲವಂತೆ." ನಾನು ಉತ್ತರಿಸಿದೆ : "ಅದನ್ನು ತುಸು ಹೆಚ್ಚಿಸ್ಬೇಕೂಂತ ನಿಮಗೆ ತಿಳಿಸಲು ಹೇಳಿದ. ಆದರೆ ನನ್ನ ಅಭಿಪ್ರಾಯ....."

"ನಿನ್ನ ಅಭಿಪ್ರಾಯವೇನು? " ಸೋಮುಣ್ಣಿ ಮಾವ ನಡುನೆ ಬಾಯಿ ಹಾಕಿದ.

"ನೀವು ಆ ಗಂಡ-ಹೆಂಡರಿಗೆ ಬಿಡುಗಾಸು ಕೊಡಲಾಗದು. ಅವರು ಒಳ್ಳೆಯ ಜನರ ಹಾಗೆ ಕಾಣುವುದಿಲ್ಲ. ನೀವು ಕಳುಹುವ ರೊಕ್ಕವೆಲ್ಲ ಕಳ್ಳಂಗಡಿಗೆ ಮತ್ತು ಜೂಜುಕಟ್ಟೆಗೆ ಹೋಗುವುದು."

"ಅಚ್ಚು, ಅದರೆ ತಂಗಿಯ ಅನ್ನವಸ್ತ್ರಗಳಿಗೆ ತಾಪತ್ರಯ ಒದಗದಂತೆ ನೋಡಿಕೊಳ್ಳುತ್ತೀನೆಂದು ನಾನು ಜಲಜನಿಗೆ ಮಾತು ಕೊಟ್ಟಿದ್ದೇನೆ. ತಂಗಿಗೆ ವರ್ಷಕ್ಕೆ ಏನೂರು ರೂಪಾಯಿಗಳನ್ನು ಕೊಡುತ್ತೀನೆಂದು ಜಲಜನ ಮುಂದೆ ಪ್ರಮಾಣ ಮಾಡಿದ್ದೇನೆ."

"ಆದರೆ ಈಗ ತಂಗಿಗೆ ಮದುವೆಯಾಗಿದೆ. ಆಕೆಯನ್ನು ಸಾಕಿ ಸಲಹೋಕೆ ಗಂಡನೊಬ್ಬನಿದ್ದಾನೆ. ನೀವು ಕಳುಹುವ ರೊಕ್ಕ ಅವರ ದುರ್ವ್ಯಸನಗಳಿಗೆ ಎರೆದ ನೀರಾಗುವುದು. ನೀವು ಆಕೆಗೆ ಕಳುಹಿ ಕೊಡುತ್ತಿರುವ ಹಣವನ್ನು ನಿಲ್ಲಿಸಿ ಬಿಡುವುದು ಲೇಸು."

"ಅಚ್ಚು, ಬೇರೆಯವರ ಒಳಿತು-ಕೆಡುಕುಗಳನ್ನು ಅಳತೆ ಮಾಡಲು ನಾನು ಯಾರು ? " ಸೋಮುಣ್ಣಿ ಮಾವ ವಿಲೋಚನೆಯಿಂದ ಭಾರವಾದ ದನಿಯಲ್ಲಿ ಹೇಳಿದ : "ಆ ದಿನ ಈಗಲೂ ನನ್ನ ನೆನಪಿನಲ್ಲಿ ಅಚ್ಚಳಿಯದೆ ಉಳಿದಿದೆ. ಜಲಜಾ ಕೊನೆಯ ಉಸಿರು ಎಳೆಯುವ ಮುನ್ನ "ನನ್ನ ತಂಗಿ ವನಜಾನ್ನ ನೋಡಿಕೊಳ್ಳಿ; ಆಕೆ ಬೀದಿ ಪಾಲಾಗುವಂತೆ ಮಾಡಬೇಡಿ." ಎಂದು ಬೇಡಿಕೊಂಡಳು. ನಾನು ಆಗ ಆಕೆಯ ತಂಗಿ ಬವಣೆಗೊಳ್ಳದ ಹಾಗೆ ಏರ್ಪಾಡು ಮಾಡುವೆನು— ಎಂದು ಮಾತು ಕೊಟ್ಟೆ. ಆ ಹುಡುಗಿಗೆ ತಾಯಿಯೊಬ್ಬಳೇ ಆಸರೆಯಾಗಿದ್ದಳು. ಜಲಜಾ ಸಾಲೆಯೊಂದರಲ್ಲಿ ಅಧ್ಯಾಪಿಕೆಯಾಗಿ ದುಡಿಯುತ್ತಿದ್ದಳು, ಅವಳಿರುವಷ್ಟು ದಿನ ತಂಗಿ ಮತ್ತು ತಾಯಿಯರ ವೆಚ್ಚಕ್ಕೆಂದು ತಿಂಗಳಿಗೆ ಏನತ್ತು ರೂಪಾಯಿಗಳನ್ನು ಕಳುಹಿಕೊಡುತ್ತಿದ್ದಳು. ತಾಯಿ ಮಗಳು ಬೇರೆ ಜಾತಿಯವನನ್ನು ಮದುವೆಯಾದಳೆಂದು ದೂರವಿರಿಸಿದರೂ, ಜಲಜಾ ತಂಗಿಯ ಮೇಲಿನ ಒಲವನ್ನು ತೊರೆಯಲಿಲ್ಲ. ಅವಳು ನನ್ನ ಬದುಕನ್ನು ಸ್ವರ್ಗವನ್ನಾಗಿ ಮಾರ್ಪಡಿಸಿದಳು, ತಾಯಿ-ತಂಗಿಯರ ಋಣವನ್ನು ತೀರಿಸಿದಳು ಅವಳ ಉಸಿರು ನನಗೆ ನವಚೈತನ್ಯವನ್ನು ತುಂಬುವ ಸಂಜೀವಿನಿಯಾಗಿತ್ತು. ಈಗ ನಾನು ತೆರುವ ರೊಕ್ಕ ದುರುಪಯೋಗವಾಗುತ್ತಿದೆ ಎಂಬ ಕಾರಣವನ್ನೊಡ್ಡಿ ಜಲಜನಿಗೆ ಕೊಟ್ಟ ನುಡಿಯನ್ನು ಮೀರಿ ನಡೆಯಲೇ ? ಇಲ್ಲ, ಇಲ್ಲ ! ಅದು ನನ್ನಿಂದಾಗದು ! "

ಭಾವೋದ್ರೇಕದಿಂದ ಸೋಮುಣ್ಣಿಮಾವನ ಕೊರಳು ಬಿಗಿಯಿತು. ಆತನ ಕಣ್ಣುಗಳಿಂದ ಎರಡು ಹನಿಗಳು ಉದುರಿದುವು. ಅವನ ಕಣ್ಣುಗಳು ಗೋಡೆಯ ಮೇಲಿದ್ದ ಮಡದಿಯ ಭಾವಚಿತ್ರದಲ್ಲಿ ನೆಟ್ಟುವು. ಆಗ ಜಲಜಳ ತುಟಿಗಳ ಮೇಲೆ ಮುಗುಳ್ನಗೆಯ ಮಂದಾರ ಅಲರಿದಂತೆ ನನಗೆ ತೋರಿತು.

"ಹಣ! ಹಣ ಏಕೆ ಬೇಕು! " ಸೋಮುಣ್ಣಿ ಮಾವ ಉದ್ವೇಗ ಭರಿತ ಸ್ವರದಲ್ಲಿ ಉಸುರಿದ : "ರೊಕ್ಕ ಬಾಳ್ವೆಯ ತೊತ್ತಲ್ಲದೆ ಬಾಳ್ವೆ ರೊಕ್ಕದ ತೊತ್ತಲ್ಲ! ನಾನು ಕೊಟ್ಟ ನುಡಿಯನ್ನು ಮುರಿಯಲಿಲ್ಲ ಎಂದು ಜಲಜಾ ತಿಳಿದುಕೊಂಡರೆ ಸಾಕು; ನನಗೆ ಮತ್ತಿನ್ನೇನೂ ಬೇಡ!"

"ಮಾವ, ನಿಮ್ಮ ಮಡದಿ ಇಲ್ಲವಾಗಿದ್ದಾರೆ. ನೀವು ಕೊಟ್ಟ ಮಾತನ್ನು ಮುರಿದಿರಿ ಎಂದು ಅವರು ಹೇಗೆ ತಿಳಿಯಬಲ್ಲರು ? " ನಾನು ನಡುನೆ ಬಾಯಿ ಹಾಕಿ ನುಡಿದೆ.

"ಅಚ್ಚು, ಜಲಜಾ ಇಲ್ಲವಾದಳು ಎಂದು ಹೇಳುವವರಾರು ! " ಸೋಮುಣ್ಣಿ ಮಾವ ಎದ್ದು ನಿಂತು ನುಡಿದ. ಅವನ ಕಣ್ಣುಗಳು

(೧೨ನೇ ಪುಟ ನೋಡಿರಿ.)

ನಮ್ಮ ಕಾರವಾರ

(ಪ್ರವಾಸ ಪ್ರಬಂಧ)

ಶ್ರೀ. ಗಿರಡ್ಡಿ ಗೋವಿಂದರಾಜ, ಧಾರವಾಡ

ಕಾರವಾರವನ್ನು ಕಂಡು, ಅಲ್ಲಿಯ ಚೆಲುವನ್ನು ಅನುಭವಿಸಿ ಆನಂದಪಟ್ಟವರು ಹಲವು ಜನರಿರಬಹುದು; ಆದರೆ ತಾವು ಕಂಡ ಸೌಂದರ್ಯ, ಅನುಭವಿಸಿದ ಆನಂದ ಇವು ಎಂತಹವೆಂಬುದನ್ನು ಶಬ್ದದಲ್ಲಿ ಮೂಡಿಸಿ ತೋರಿಸಬಲ್ಲವರು ಮಾತ್ರ ಅಪೂರ್ವ.

ನಾವು ಹುಬ್ಬಳ್ಳಿಯಿಂದ ಕಾರವಾರ ಬಸ್ಸು ಹತ್ತಿದೆವು. ಕಲಘಟಗಿಯ ವರೆಗೆ ನನಗೆ ಪರಿಚಯದ ಹಾದಿ. ಅಲ್ಲಿಂದ ತುಸು ದೂರದಲ್ಲೇ ಸಹ್ಯಾದ್ರಿಯ ಸೆರಗು ಆರಂಭವಾಗುತ್ತದೆ. ಎತ್ತ ನೋಡಿದರೂ ಕಣ್ಣು ಸೋಲುವಷ್ಟು ದೂರ ಹಬ್ಬಿ ಹರಡಿರುವ ಹಸುರು ನೆಲ. ಬರುಬರುತ್ತ ಕಾಡು ದಟ್ಟವಾಗುತ್ತದೆ. ಘಟ್ಟಗಳನ್ನು ಏರಿಕೊಂಡು ಸೀಮೆಂಟಿನ ನೀಳಹಾದಿಯಲ್ಲಿ ಬಸ್ಸು ವೇಗವಾಗಿ ಚಲಿಸುತ್ತಿತ್ತು. ಹಾಗೆಯೇ ವೇಗವಾಗಿ ಹಿಂದೆ ಸರಿದು ಹೋಗುವ ನಿಬಿಡವಾದ ಕಾನನ. ಹಾದಿಯ ಎರಡೂ ಬದಿಗೂ ಹಬ್ಬಿರುವ ಕಟ್ಟಡವಿಯನ್ನು ಕೊರೆದುಕೊಂಡು, ಹಾಗೆ ಹೊರಳಿ, ಹೀಗೆ ತಿರುಗಿ, ಒಮ್ಮೆ ಕೆಳಗೆ ಮುಖ ಮಾಡಿ, ಇನ್ನೊಮ್ಮೆ ಮೇಲಕ್ಕೆ ಮಾಡಿ ಪಯಣಿಗರನ್ನು ತೂಗಿ ತೂಗಿ ಜಲಿಸುತ್ತಿರುತ್ತದೆ ಬಸ್ಸು.

ಚೆಲುವೆಯ ಉಂಗುರುಗೂದಲಿನಂತೆ ಮೂಲೆಮೂಲೆಯಾಗಿ ಹಬ್ಬಿಕೊಂಡಿರುವ ಬೆಟ್ಟಗಳು. ಗಗನ ಚುಂಬಿಯಾದ ವೃಕ್ಷಗಳು. ಅವುಗಳನ್ನೇರಿ ಹೋಗಿ, ಎದುರುಬದುರು ನಿಂತುಕೊಂಡು ಮುಖಮುಖ ನೋಡಿಕೊಳ್ಳುತ್ತಿವೆ. ಎಂಥ ಹಸುರು ಅದು! ಹಾಗೆಯೇ ಕಿರುವತ್ತಿಯ ಬಳಿಯ ಕಾನನಗಳನ್ನು ದಾಟಿ, ಎಲ್ಲಾಪುರದ ಪುಟ್ಟ ಬೆಟ್ಟಗಳನ್ನೇರಿ ಮುಂದೆ ಹೋಗಬೇಕು. ಆಳವಾದ ಕೊಳ್ಳಗಳು. ಅವುಗಳ ಅಂಚಿನಲ್ಲೇ ಬಸ್ಸಿನ ಹಾದಿ. ಕೆಳಗೆ ನೋಡಿದರೆ ತಲೆ ತಿರುಗಬೇಕು. ಈ ಆಳವಾದ ಕಂದರಗಳಲ್ಲಿ ಬಿದಿರುಮೆಳೆಗಳು ಇಳಿದು ಹೋಗಿ ಸುಳಿಯುತ್ತಿರುವ ತಂಗಾಳಿಯಲ್ಲಿ ಕೊಳಲೂದುತ್ತಿವೆ. ಪೊದೆಪೊದೆಯಾಗಿ ಬೆಳೆದ ಕೇದಗಿಯ ಬನಗಳಿಂದ, ಚಂದನದ ಮರಗಳಿಂದ ಮುಂದಾದ ವಾಸನೆ ತೇಡಿ ಬರುತ್ತಿದೆ. ಸಂಸ್ಕೃತ ಕಾವ್ಯಗಳಲ್ಲಿ ಹೇರಳವಾಗಿ ಬರುವ ಮಲಯ ಪರ್ವತದ ಪ್ರದೇಶ ಇದೇ. ಇಂತಹ ಚೆಲುವಿಗೆ ಸೌಂದರ್ಯಾರಾಧಕರಾದ ನಮ್ಮ ಕವಿಗಳು ಮಾರು ಹೋಗಿದ್ದರೆ ಅದರಲ್ಲಿ ಆಶ್ಚರ್ಯವಾದರೂ ಏನು?

ಅರಬೈಲಿನ ಆ ಘಟ್ಟಗಳ ಚೆಲುವು ಅಪೂರ್ವ ಚೆಲುವು. ಮತ್ತಿ, ತೇಗು, ಬಿದಿರುಮೆಳೆ ಇವುಗಳ ಹುಚ್ಚು ಹಸುರು ಬೆಟ್ಟಗಳಲ್ಲೆಲ್ಲ ಪಸರಿಸಿಕೊಂಡಿದೆ. ಅಲ್ಲಲ್ಲಿ ಹಾದಿ ಮಾಡಿಕೊಂಡು ಕಣ್ಣು ಮಿಟುಕಿಸುವ ತೊರೆಗಳು. ಒಂದೆಡೆ ಆಳವಾದ ಕಂದರಗಳಾದರೆ ಇನ್ನೊಂದೆಡೆ ಗಗನದಾಚೆ ಮೊಗಚಾಚಿರುವ ತುಂಗಶಿಖರಗಳು. ಗಿರಿಕಂದರಗಳನ್ನೆಲ್ಲ ಒಂದೇ ರೀತಿಯಾಗಿ ಮುಸುಗಿಕೊಂಡಿರುವ ದಟ್ಟ ಹಸುರು.

ಈ ವೇಳೆಗೆ ಆಗಲೇ ಸೂರ್ಯ ಪಡುವಣ ಗಿರಿಗಳ ಮೇಲೆ ಅಸ್ತಮಿಸತೊಡಗಿದ್ದ. ಎಡಗಡೆಗೆ ಮೆಟ್ಟಲು-ಮೆಟ್ಟಲಾಗಿ ಏರಿ ಹೋಗಿ ದಿಗಂತವನ್ನು ತಲುಪಿರುವ ಘಟ್ಟಗಳ ಮೇಲೆ ಸೂರ್ಯನ ಮಾಗಿದ ಕಿರಣಗಳು ಚಿನ್ನಾಟವಾಡುತ್ತಿವೆ. ಬಲಗಡೆಗೆ ಕೊಳ್ಳಗಳನ್ನಿಳಿಯುತ್ತ ಕ್ರಮವಾಗಿ ವರ್ಧಿಸುತ್ತಿದ್ದ ನೆಳಲು. ನೆಳಲು-ಬೆಳಕುಗಳ ಈ ಕಣ್ಣು-ಮುಚ್ಚಾಲೆಯನ್ನು ನೋಡುವುದಕ್ಕೆ ಕಣ್ಣು ಸಾಲುವುದಿಲ್ಲ.

ದಟ್ಟಡವಿಯಲ್ಲಿ ದಾರಿ ಮಾಡಿಕೊಂಡು ನಾಗರಹಾವಿನಂತೆ ಬಿದ್ದುಕೊಂಡಿರುವ ದಾರಿಯನ್ನು ಹಿಂದೆ ಹಾಕುತ್ತ, ಬೆಟ್ಟಗಳನ್ನು ಬಳಸಿಕೊಂಡು, ನೂರಾರು ಭಯಾನಕವಾದ ತಿರುವುಗಳನ್ನು ದಾಟುತ್ತ, ಮುಂದೆ ಸಾಗಿತ್ತು ಬಸ್ಸು. ಆ ಕಡೆಗೆ ನೋಡಬೇಕೋ, ಈ ಕಡೆಗೆ ನೋಡಬೇಕೋ—ತಿಳಿಯದಂತಹ ಅಪೂರ್ವ ಸೌಂದರ್ಯ ನೈಚ್ಯಾಚಿಕೊಂಡು ಮಲಗಿದೆ. ಬಸ್ಸಿನಲ್ಲಿ ಅತ್ತೊಮ್ಮೆ, ಇತ್ತೊಮ್ಮೆ ಓಡಾಡಿ ಆ ಚೆಲುವನ್ನು ಹೀರಿ ಹೀರಿ ತೃಪ್ತರಾದೆವು. "ನೋಡದೋ ಪ್ರಿಯಬಂಧು, ಸಹ್ಯಾದ್ರಿ ಕಾನನಗಳುತ್ತಮಾಂಗದಿ ಸೃಷ್ಟಿ ದೃಶ್ಯ ವೈಕುಂಠವನೆ ನೆಯ್ದಿದೆ." ಎಂದ—ಪುಟ್ಟಪ್ಪನವರ ಕೆಲವು ಸಾಲುಗಳನ್ನು ಮನದಲ್ಲೇ ಕುರುಕಿಕೊಂಡೆ.

ದಾರಿಯಲ್ಲಿ ಎರಡು ಪುಟ್ಟ ಜಲಪಾತಗಳೂ ಕಾಣಿಸಿಕೊಂಡುವು; ಇನ್ನೂ ನನಗೆ ಕಾಣದೆ ಆಚೆ, ಈಚೆ ನೊರೆಯುತ್ತಿರುವುವು ಎಷ್ಟೋ ಏನೋ! ಸಂಜೆಯ ಹಕ್ಕಿಗಳು ಹಾರಾಡಿ, ಹಾಡಿ ದಣಿದು ಬಂದು ಗುಂಪು ಗುಂಪಾಗಿ ಗೂಡಿಗೆ ತೆರಳುತ್ತಿವೆ. ಅಲ್ಲಿ ಇಲ್ಲಿ ನಿಂತ ನೀರು ಸೋಗಲಾಡಿ ಹೆಣ್ಣಿನಂತೆ ತೆರೆಯ ನಿರಿಯ ಚಿಮ್ಮಿ ಚಿಮ್ಮಿ, ಮತ್ತೆ ಮುತ್ತೆ ತೇಡಿಕೊಳ್ಳುತ್ತಿದೆ. ಸುತ್ತಲಿನ ಗಿಡಮರಗಳು ಬಾಗಿ ಆ ನೀರಿನಲ್ಲಿ ತಮ್ಮ ಪ್ರತಿಬಿಂಬವನ್ನು ನೋಡಿಕೊಳ್ಳುತ್ತಿವೆ. ಎಲ್ಲೋ ತುಸು ಸಮತಟ್ಟಾದ ನೆಲದಲ್ಲಿ ಅಷ್ಟಿಷ್ಟು ಭತ್ತದ ಗದ್ದೆಗಳು. ಶಾಲಿಯ ತಿಳಿಹಸುರುಬಸಗಳು ಪ್ರಕೃತಿಯ ವೈಭವ-ವಿಲಾಸವನ್ನು ಕಂಡು ಏನೇನೋ ಆಡಿಕೊಳ್ಳುತ್ತಿವೆ. ಆಡಿಕೆ, ತೆಂಗುಗಳ ಗರಿಗಳು ಸಳಸಳ ಸದ್ದು ಮಾಡುತ್ತ ಸಂಧ್ಯಾರವಿಯ ಬೆಳಕಿನಲ್ಲಿ ಮಾರ್ದೊಳೆದು ಚಿನ್ನದ

ಕರವಾಲಗಳನ್ನು ನೆನಪಿಸುತ್ತಿವೆ. ಭಕ್ತದ ಗದ್ದೆಗಳದ್ದಲ್ಲಿ ನಾಲ್ಕಾರು ಪುಟ್ಟ ಗುಡಿಸಿಲು. ಅಷ್ಟಷ್ಟೇ ಒಂದೊಂದು ಊರು. ಲಂಗೋಟಿ ಹಾಕಿ, ಬರಿ ಮೈಯಿಂದ ಹೊಲಗಳಲ್ಲಿ ಓಡಾಡುತ್ತಿದ್ದರು ಇಲ್ಲಿಯ ನಿವಾಸಿಗಳು. ಈ ಜನರ ಬದುಕು ನಿಜವಾಗಿ ಎಂತಹ ಸೌಭಾಗ್ಯ ಶಾಲಿ! ದಿನನಿತ್ಯ ವಿರಾಟ್‌ಪ್ರಕೃತಿ, ತನ್ನ ಮಂದಹಾಸದಿಂದ ಈ ಜನರನ್ನು ಲಾಲಿ ಹಾಡ್ತಿ, ತನ್ನ ಉಡಿಯ ತೊಟ್ಟಿಲಲ್ಲಿ ಚುಕ್ಕು ತಟ್ಟಿ ಮಲಗಿಸುತ್ತಾಳೆ; ಆದರೆ....ಯಾರಿಗೆ ಗೊತ್ತು? ಮಲೆನಾಡಿನ ಈ ನಿರ್ಜನ ವನಗಳಲ್ಲಿ ಬಡ ಗುಡಿಸಿಲುಗಳಲ್ಲಿ ಆಧುನಿಕ ಸೌಕರ್ಯ ಗಳಿಲ್ಲದೆ ಕಳೆಯಬೇಕಾಗಿರುವ ಅವರ ಬದುಕಿನಲ್ಲಿ ಏನೇನು ಕಷ್ಟ-ನಿಷ್ಠುರಗಳಿವೆಯೊ! ದೂರದ ಮಾತು ಯಾವಾಗಲೂ ಚೆಂದ. ಅನುಭವಿಸಿ ನೋಡಿದಾಗಲೇ ನಿಜಸ್ಥಿತಿಯ ಅರಿವಾಗುವುದು

ಅಂಕೋಲಾದಲ್ಲಿ ಬಸ್ಸು ಬಹಳ ಹೊತ್ತು ನಿಂತು, ಕತ್ತಲಾಗಿಯೇ ಮುಂದೆ ಹೊರಟುದರಿಂದ ನಾವು ನಿರಾಶರಾದೆವು. ದೂರವ ವ್ಯವಾಸದ ದಣಿವು ಬೇರೆ. ಕಾರವಾರಕ್ಕೆ ಬಂದಾಗ ರಾತ್ರಿಯ ಗಂಟೆ ಎಂಟಾಗಿತ್ತು. ನಾವು ಹೊರಟ ವಿಷಯವನ್ನು ನಮ್ಮ ಕಾರವಾರದ ಗೆಳೆಯರಿಗೆ ತಿಳಿಸಿರಲಿಲ್ಲವಾದ್ದರಿಂದ, ಅವರ ಕೋಣೆ-ಯನ್ನು ಹುಡುಕುವುದು ತುಸು ಕಷ್ಟದ ಕೆಲಸವೇ ಆಯಿತು. ಅಂತೂ ಒಂಬತ್ತು ಗಂಟೆಗೆ ಅವರ ಕೋಣೆ ಸಿಕ್ಕಿತು. ಅವಸರವಸರವಾಗಿ ಊಟ ಮಾಡಿದೆವು. ಕಡಲನ್ನು ನೋಡಬೇಕೆಂದು ನಾವು ತುಂಬ ಆತುರರಾಗಿದ್ದೆವು. ಬೆಳುದಿಂಗಳ ದಿನಗಳು. ಕಡಲ ತೆರೆಗಳ ಮೊರೆತ ಅಲ್ಲಿಗೂ ಕೇಳಬರುತ್ತಿತ್ತು. ಹಾಗೇಯೇ ಕಡಲ ಕಡೆಗೆ ತಿರುಗಾಡಿ-ಕೊಂಡು ಬರಲು ಹೊರಟೆವು. ತೆಂಗು, ಗಾಳಿಮರಗಳ ನೀಳವಾದ ನೆರಳು ಕಡಲ ತೀರದ ಮೇಲೆ ಒರಗಿಕೊಂಡಿತ್ತು. ಆ ನೆಳಲನ್ನು ದಾಟುತ್ತ, ತೆಳುಮಳಲನ್ನು ತುಳಿಯುತ್ತ ಕಡಲಿನ ಹತ್ತಿರ ಹತ್ತಿರ ಬಂದೆವು.

ಕಡಲಿನ ಬಗ್ಗೆ ನಾನೇನೋ ತುಂಬ ಅದ್ಭುತ ಕಲ್ಪನೆಗಳನ್ನು ಕಟ್ಟಿಕೊಂಡಿದ್ದೆ. ಮೈಲುಗಟ್ಟಲೆ ಉದ್ದಗಲಗಳುಳ್ಳ ಮಳಲ ರಾಶಿ, ಅನೆಯ ಗಾತ್ರದ ತೆರೆಗಳು, ಧಡಂ ಎಂದು ಅಪ್ಪಳಿಸುವ ತೆರೆಗಳ ಅದ್ಭುತ ಶಬ್ದ, ದೂರ....ಬಹು ದೂರದವರೆಗೂ ಹಬ್ಬಿರುವ ವಿಶಾಲ ಜಲನಿಧಿ....ಅದೊಂದೂ ಸತ್ಯವೆಂದು ತೋರಲಿಲ್ಲ ನನಗೆ. ಕಾರವಾರದ ಕಡಲು ತುಂಬ ಪ್ರಶಾಂತವಾದುದು. ಸುತ್ತಲೂ ಬಳಸಿರುವ ಬೆಟ್ಟ ಗಳನ್ನು ಒತ್ತಿಕೊಂಡು ಸಾಗರದ ನೀರು ಒಳಸೇರಿರುವುದರಿಂದ ಸಮುದ್ರದ ಅಬ್ಬರ ಅಷ್ಟಾಗಿ ಕಾಣಬರುವುದಿಲ್ಲ ಇಲ್ಲಿ. ನಾನು ನೋಡಿರುವ ಹಲವಾರು ಅಣೆಕಟ್ಟಿನ ತೆರೆಗಳಿಗಿರುವಷ್ಟು ರಭಸವೂ ಈ ತೆರೆಗಳಿಗಿಲ್ಲ. ಸಾಗರದಲ್ಲಿ ಅಲ್ಲಲ್ಲಿ ಪುಟ್ಟಪುಟ್ಟ ನಡುಗಡ್ಡೆಗಳಿವೆ. ಅವು ಗಳಲ್ಲೊಂದು ತೀರದಿಂದ ಸುಮಾರು ಏಳು ಮೈಲು ಅಂತರದಲ್ಲಿದೆ. ಅದು ತುಂಬ ಸುಂದರವಾದ ಸ್ಥಳವೆಂದು ನನ್ನ ಗೆಳೆಯರು ಹೇಳಿದರು. ಶಾಲೆಯ ಮಕ್ಕಳು ವನಭೋಜನಕ್ಕೆಂದು ಅಲ್ಲಿಗೆ ಹೋಗುತ್ತಾರಂತೆ. ಅಲ್ಲಿ ಅನೇಕ ಬೆಟ್ಟದ ಗಾತ್ರದ ಬಂಡೆಗಳಿವೆಯಂತೆ. ಅಲ್ಲಿ ಒಂದು ಬೆಳಕಿನ ಮನೆ (Light house) ಕೂಡ ಇದೆ. ದೂರದ ಹಡಗು ಗಳಿಗೆ ದಾರಿ ತೋರಿಸಲು ಅದನ್ನು ಹಾಕಿದ್ದಾರಂತೆ. ಅದರ ಬೆಳಕು ರಾತ್ರಿಯೆಲ್ಲ ಅಲ್ಲಿಯ ಕಂಬದ ಮೇಲೆ ಸುತ್ತುತ್ತಿರುತ್ತದೆ.

ನಾವು ಮಳಲಿನ ಮೇಲೆ ಮಲಗಿಕೊಂಡು ಏನೇನೋ ಮಾತ-ನಾಡಿದೆವು. ಬಹಳ ದಿನಗಳ ಮೇಲೆ ಗೆಳೆಯರ ಭೇಟಿ ಎಂದರೆ ಕೇಳುವುದಿದೆಯೆ? ಆಗಾಗ ಬೆಳಕಿನ ಮನೆಯ ಮೇಲೆ ಸುತ್ತು ಹಾಕುತ್ತಿದ್ದ ಶೋಧಕ ದೀಪ (Search light) ದ ಬೆಳಕು ನಮ್ಮ ಮೇಲೂ ಮಂದಪ್ರಕಾಶವನ್ನು ತೂರಿ ಮರೆಯಾಗುತ್ತಿತ್ತು. ತಂಗಾಳಿ ಸುಖವಾಗಿ ತೀಡುತ್ತಿತ್ತು. ಮಾದಕವಾದ ಬೆಳುದಿಂಗಳು ಬೇರೆ.

ಸರಿರಾತ್ರಿ. ಸಾಗರದ ತೆರೆಗಳ ಸದ್ದು ಮಂದವಾಗತೊಡಗಿತ್ತು. ಮಳಲ ದಂಡೆಯುದ್ದಕ್ಕೂ ಬೆಳೆದಿರುವ ತೆಂಗತರುಗಳು ಮೌನವಾ-

---

(೧೦ನೆಯ ಪುಟದಿಂದ ಮುಂದುವರಿದುದು)

ಮಿನುಗುವ ತಾರಕೆಗಳಾದುವು. ಆತನ ಮೋರೆಯ ಮೇಲೆ ಅಪೂರ್ವ ಕಳೆಯೊಂದು ನರ್ತಿಸಿತು.

"ಇಲ್ಲ. ನನ್ನ ಜಲಜಾ ಇಲ್ಲವಾಗಿಲ್ಲ. ಆತ್ಮ ಅವಿನಾಶಿಯಾದುದು! ಅವಳು ಬೀಸುವ ಗಾಳಿಯಾಗಿ ಬಂದು ತಪವಿ ಸಂತೈಸುತ್ತಾಳೆ; ಹೂಗಳ ಕಂಪಿನಲ್ಲಿ ಬೆರೆತು ನನಗೆ ನಲಿವನ್ನು ಊಡುತ್ತಾಳೆ; ಉದಿಸಿ ಬಂದ ಸೂರ್ಯನ ಬೆಳಕಿನಲ್ಲಿ ತೇಲಿ ಬಂದು ನನ್ನ ರೆಪ್ಪೆಗಳನ್ನು ಬಿಚ್ಚುತ್ತಾಳೆ! ಆಕೆಯ ಒಲವಿನೋಲೆಗಳನ್ನು ಓದಿ ಮುಗಿಸಿದಾಗ, ಬಂದು ನನ್ನ ರೆಪ್ಪೆ-ಗಳನ್ನು ಮುಚ್ಚುತ್ತಾಳೆ! ಅಂತಹಳು ಇಲ್ಲವೆಂದು ನಾನು ಹೇಗೆ ನಂಬಲಿ!"

ಸೋಮುಣ್ಣಿ ಮಾವನ ಉದ್ವೇಗ ಭರಿತ ಭಾವಪೂರ್ಣ ವಚನ-ಗಳನ್ನು ಕೇಳಿದಾಗ, ನನಗಾದ ವಿಸ್ಮಯಕ್ಕೆ ಪಾರವಿಲ್ಲ. ಈತನ ಬುದ್ಧಿ ಸಮತೆಯನ್ನು ಕಳೆದುಕೊಂಡಿತೇ— ಎಂಬ ಸಂದೇಹ ನನ್ನ ಅಂತರಂಗ-ದಲ್ಲಿ ಅಂಕುರಿಸಿತು.

"ಅಜ್ಜ, ನನ್ನ ನುಡಿ ನಿನಗೆ ಸಟೆ ಎಂದು ಅನಿಸಿದರೆ ಆಕೆಯನ್ನೇ ಕೇಳಿ ನೋಡು!" ಸೋಮುಣ್ಣಿ ಗೋಡೆಯ ಮೇಲಿದ್ದ ಭಾವ ಚಿತ್ರದೆಡೆಗೆ ಬೆರಳು ತೋರಿಸಿದ.

ನಾನು ಸೋಜಿಗದಿಂದ ಎದ್ದು ನಿಂತೆ. ಗೋಡೆಯ ಮೇಲಿದ್ದ ಭಾವಚಿತ್ರವನ್ನು ನೆಟ್ಟ ಕಣ್ಣುಗಳಿಂದ ದಿಟ್ಟಿಸಿದೆ. ಕತ್ತಲೆಯ ಇರುಳಲ್ಲಿ ಸುಳಿಮಿಂಚೊಂದು ತೋರಿ ಮಾಯವಾದಂತೆ, ಜಲಜಳ ಕಣ್ಣುಗಳಿಂದ ಬೆಳಕಿನ ಕೋಲೊಂದು ಹೊಮ್ಮಿತು. ಆಕೆಯ ತುಟಿಗಳ ಮೇಲೆ ಮೃದು-ಹಾಸದ ಹೂ-ಬಿಸಿಲೊಂದು ಕುಣಿದು ಮರೆಯಾಯಿತು. ಸೋಮುಣ್ಣಿ ಮಾವ ಆಡಿದ ಮಾತು ದಿಟವೆಂದು ಸಾಕ್ಷಿ ಹೇಳುವಂತೆ, ಭಾವಚಿತ್ರದ ಮೇಲೇರಿಸಿದ್ದ ದೊಡ್ಡ ಗುಲಾಬಿ ಹೂವೊಂದು ಉರುಳಿ ಕೆಳಗೆ ಬಿತ್ತು.

ಗಿದ್ದುವು. ಕ್ಷಿತಿಜದ ಸುತ್ತಲೂ ಬೆಟ್ಟಗಳು ಕಡಲ ನಡುವೆ, ಮುಗಿಲ ಮೈಯ ಕೆಳಗೆ ಸದ್ದು ಮಾಡದೆ ಒರಗಿಕೊಂಡಿವೆ. ದೂರದಲ್ಲಿ ಎಲ್ಲೋ ಒಂದೆಡೆ ನೀಲಬಾನು ಸಾಗರದ ಜೊತೆಗೆ ಬೆರೆದು, ಮುಗಿಲೇ ಸಾಗರವಾಗಿ ಭೂಮಿಯ ಮೇಲೆ ಚಾಚಿಕೊಂಡಂತಿದೆ. ಮೇಲೆ ತಾರೆಗಳ ಬಳಗ, ಪ್ರಕೃತಿಯ ತೂಗುತೊಟ್ಟಿಲಲ್ಲಿ ಮಲಗಿ ಸುಖವಾಗಿ ನಿದ್ದೆ ಹೋಗಿರುವ ಕಾರವಾರದ ಮಗುವಿಗೆ ಗುಬ್ಬಿಯ ಚಟ್ಟಾಗಿ ತೂಗಾಡುತ್ತಿದೆ. ನಾನು ಪರವಶನಾಗಿ ಹೋದೆ.

ತುಸು ಹೊತ್ತು ಹಾಗೆಯೇ ಕುಳಿತಿದ್ದು ಮೇಲೆದ್ದು ಮನೆಯ ಕಡೆಗೆ ಹೊರಟೆವು. ದಂಡೆಯ ಮೇಲಿದ್ದ ಗಾಳಿಯ ಮರವೊಂದಕ್ಕೆ ಬಹಳ ಎತ್ತರದಿಂದ ಒಂಟಿಯಾದ ಒಂದು ಬೇರು ನೇತುಬಿದ್ದಿತ್ತು. ಅದನ್ನು ಹಿಡಿದು ತೂಗಾಡಿದೆವು. ಮಕ್ಕಳಂತೆ ನಾನು-ನೀನೆಂದು ಜಗಳವಾಡಿದೆವು. ಆ ಬೇರು ಹಿಡಿದು ಜೀಕುಹೊಡೆಯಲು. ಪ್ರಕೃತಿಯ ವಿರಾಟ ಸ್ವರೂಪ ಒಂದೆಡೆ, ಸಮುದ್ರದ ಗಂಭೀರಮೌನ ಒಂದೆಡೆ. ಇಂಥ ಭವ್ಯ ವಾತಾವರಣವಲ್ಲಿ ಮನುಷ್ಯ ಮಗುವಲ್ಲದೆ ಇನ್ನೇನಾದಾನು?

ಮರುದಿನ ಬೆಳಗಾಗುತ್ತಲೇ ಚಹ ತೆಗೆದುಕೊಂಡು ಮತ್ತೆ ಕಡಲಿಗೆ ಹೋದೆವು. ಸೂರ್ಯನಿನ್ನೂ ಸಹ್ಯಾದ್ರಿಯ ಗಿರಿಶಿಖರಗಳನ್ನು ದಾಟಿ ಬಂದಿರಲಿಲ್ಲ. ಅರುಣಾರುಣ ಛಾಯೆ ಬಾನಿನಲ್ಲಿ ಚಿತ್ರವಿಚಿತ್ರ ಚಿತ್ರಗಳನ್ನು ಬಿಡಿಸತೊಡಗಿತ್ತು. ಕಡಲ ತೆರೆಗಳಿಗೆ ಹತ್ತಿ ಹತ್ತಿಕೊಂಡೇ ನಿಂತೆವು. ಕಡಲಕರೆಯನ್ನು ಬಳಸಿ ನಿಂತಿದೆ ಸುತ್ತು ಕಡೆಗೂ ಅಪೂರ್ವ ನಿಸರ್ಗಶ್ರೀ. ಕಡಲದೊರೆ ತನ್ನ ನಿಡುದೋಳುಗಳನ್ನು ಚಾಚಿ, ಅವಳನ್ನು ತನ್ನೆದೆಗೆ ಹಗುರಾಗಿ ಒತ್ತಿಕೊಂಡು, ತೆರೆಯ ತುಟಿಗಳಿಂದ ಅವಳನ್ನು ಚುಂಬಿಸಬೇಕೆಂದು ಮುಂದೆ ಮುಂದೆ ತರುತ್ತಾನೆ. ನೊರೆಯಿ ನಗು, ಮುಖದಲ್ಲಿ ಲಾಸ್ಯವಾಡುತ್ತಿದೆ. ತುಟಿಗಳನ್ನು ಹತ್ತಿರ ಹತ್ತಿರ ತಂದು, ಇನ್ನೇನು ಮುದ್ದಿಸಬೇಕು; ಅಷ್ಟರಲ್ಲಿ ರವಿಯನ್ನು ಕಂಡು ನಾಚಿ ಒಮ್ಮೆಲೆ ತುಟಿಗಳು ಕಂಪಿಸುತ್ತವೆ. ಮತ್ತೆ ಹಿಂದೆ ಸರಿಯುತ್ತಾನೆ. ಮತ್ತೆ ನಿಸರ್ಗರಮಣಿ ತನ್ನ ಲಾಸ್ಯ-ಲಾವಣ್ಯಗಳಿಂದ ಅವನನ್ನು ಆಕರ್ಷಿಸಿಕೊಳ್ಳುತ್ತಾಳೆ. ಮತ್ತೆ ಅದೇ ಆಟ. ಪ್ರಕೃತಿ-ಪುರುಷರ ಚಿರಂತನ ಯೌವನದ ಈ ಸೆಳೆತ ಅನಾದಿ ಕಾಲದಿಂದಲೂ ನಡೆದೇ ಇದೆ. ರಾತ್ರಿಯ ನೀಲ ಬಾನಲ್ಲಿ ಚಂದ್ರ ತೂಗುತ್ತಿರಲು, ಚಿಕ್ಕೆ ಕಾವಲಾಗಲು, ಸಮುದ್ರರಾಜ ಉಕ್ಕೇರಿ ಬಂದು ಅವಳನ್ನು ತನ್ನ ತೋಳಬಂದಿಯನ್ನಾಗಿ ಮಾಡಿಕೊಳ್ಳುತ್ತಾನೆ. ಈ ಭಾವನೆಯನ್ನು ಹಿಡಿದು ಊರಿಗೆ ಬಂದ ಮೇಲೆ ನಾನೊಂದು ಕವಿತೆಯನ್ನು ಬರೆದೆ.

ಮೀನುಗಾರರು ತಮ್ಮ ಬಲೆಗಳನ್ನು ಸಿದ್ಧಪಡಿಸಿಕೊಂಡು ದೋಣಿಗಳನ್ನು ಕಡಲಿಗಿಳಿಸುತ್ತಿದ್ದರು. ಆಗಲೇ ಹೊರಟುಹೋಗಿದ್ದ ಅನೇಕ ಚಿಕ್ಕಪುಟ್ಟ ನಾವೆಗಳು ಕಡಲಿನಲ್ಲಿ ಬಹು ದೂರದವರೆಗೆ ಚೆದರಿ ಹೋಗಿದ್ದುವು. ನಾವಿಕರ ಹಾಡು ಸಾಗರ ತರಂಗಗಳಗುಂಟ ಅಲೆ-ಯಲೆಯಾಗಿ ತೇಲಿಬರುತ್ತಿದ್ದುವು. ಕವಿ ಬೇಂದ್ರೆಯವರ

"ದಿನದಿನ ಕಡಲಿಗೆ ಹೋಗುವೆನೊ
ತೆರೆಗಳ ಲೀಲೆಯ ನೋಡುವೆನೊ...."

ಎಂದು ಆರಂಭವಾಗುವ 'ಪಡುವಲ ಕಡಲ ಆಚಿಗರ ಹಾಡು' ಎಂಬ ಕವಿತೆ ನೆನಪಿಗೆ ಬಂತು. ನನಗೆ ನೆನಪಿದ್ದಷ್ಟು ಸಾಲುಗಳನ್ನು ಅಲ್ಲಿ ಹಾಡಿದೆ, ನನ್ನ ಕರ್ಕಶ ಕಂಠದಿಂದ.

ಅಲ್ಲಿಂದ, ಅಲ್ಲಿಯೇ ಎಡಗಡೆಗಿದ್ದ ಡಿಪೂಟ ಕಮಿಶನರ್ ಬಂಗ್ಲೆ ಇರುವ ಪುಟ್ಟ ಬೆಟ್ಟವನ್ನೇರಿ ಹೋದೆವು. ಬ್ರಿಟಿಶ್ ಅಧಿಕಾರಿಗಳಿಗಾಗಿ ವಿಶೇಷ ವೆಚ್ಚದಿಂದ ಇಲ್ಲಿ ಕಟ್ಟಡಗಳನ್ನು ಕಟ್ಟಿದ್ದರಂತೆ. ಇಲ್ಲಿ ನಿಂತರೆ ಕಾರವಾರದ ಹಿಂದೆ ಇರುವ ಸಹ್ಯಾದ್ರಿಯ ಉತ್ತುಂಗ ಶಿಖರಗಳ ನೋಟ ಸುಂದರವಾಗಿ ಕಾಣುತ್ತದೆ. ಮಂಜು ಹರಿಯದ ಮುನ್ನ ಆ ದೃಶ್ಯಗಳನ್ನು ನೋಡಬೇಕು. ಏನೇ ಆದರೂ ಕಾರವಾರವನ್ನು ಕಟ್ಟಿದವರು ನಿಜವಾಗಿಯೂ ಮಹಾ ರಸಿಕರು. ಇತ್ತ ಕಡಲು, ಅತ್ತ ಕಾನನ, ಸುತ್ತಲೂ ಗಿರಿಶಾನುಗಳು, ಎತ್ತೆತ್ತಲೂ ಭವ್ಯವಾದ ಹಸುರಿನಿಂದ ಆಚ್ಛಾದಿತವಾದ ಭೂಮಿ. ಅಂತೆಯೇ ಆಚಾರ್ಯ ಶ್ರೀಯವರು ಕಾರವಾರವನ್ನು 'ಚೆಲುವಿನ ಕಣಿ' ಎಂದು ಕರೆದಿರಬೇಕು.

ಆಗಲೇ ಬಿಸಿಲೇರತೊಡಗಿತ್ತು. ಬಿಸಿಲೆಂದರೆ ಕಾರವಾರವನ್ನೇ ನೆನೆಸಿಕೊಳ್ಳಬೇಕು. ಗಾಳಿಯಂತೂ ಎಲ್ಲೋ ತಲೆಮರೆಸಿಕೊಂಡು ಹೋಗಿತ್ತು. ಹತ್ತಿರ ಕಡಲಿದ್ದೂ, ಅಸ್ಪೆಲ್ಲ ಹಸುರು ಇದ್ದೂ ವಿಪರೀತ ಸೆಕೆ ಕಾರವಾರದಲ್ಲಿ. ಅಷ್ಟಕ್ಕೆ ತಿರುಗಿ ಬಂದು, ಊಟಮಾಡಿ, ಒಂದೆರಡು ಗಂಟೆ ವಿಶ್ರಾಂತಿ ತೆಗೆದುಕೊಂಡೆವು. ಸೆಕೆ ಇನ್ನೂ ಅಸಹನೀಯವಾಗಿತ್ತು. ತಣ್ಣೀರಿನ ಸ್ನಾನ ಎಷ್ಟೋ ಹಿತವೆನಿಸಿತು. ಆ ಮೇಲೆ ಚಹತೆಗೆದುಕೊಂಡು ಮತ್ತೆ ಹೊರಟೆವು.

ಡಿ. ಕಮಿಶನರ್ ಬಂಗ್ಲೆಯಿಂದ ತುಸು ದೂರದಲ್ಲೇ ಮುಂದೆ ಬಂದರದ ಸ್ಥಳವಿದೆ. ಕಾರವಾರ ನೈಸರ್ಗಿಕ ಬಂದರವಂತೆ. ಝಿಕೋಸ್ಲಾವಾಕಿಯಾಕ್ಕೆ ರವಾನೆಯಾಗಬೇಕಾಗಿದ್ದ ಬಳ್ಳಾರಿ, ಹೊಸಪೇಟೆಗಳಿಂದ ಬಂದಿದ್ದ ಮ್ಯಾಂಗೇನೀಜ್ ಅದಿರನ್ನು ರಾಶಿ ಹಾಕಿದ್ದರು. ಹಡಗು ಬಂದಾಗ ದಂಡೆಯಿಂದ ಸುಮಾರು ಎರಡು ಮೈಲು ಅಂತರದಲ್ಲಿ ನಿಲ್ಲುವುದಂತೆ. ಇಲ್ಲಿಂದ ಮತ್ತೆ ಯಂತ್ರಗಳನ್ನು ಜೋಡಿಸಿರುವ ನಾವೆ (Launch)ಗಳ ಮುಖಾಂತರ ಅದಿರನ್ನು ಹಡಗಿಗೆ ಸಾಗಿಸಬೇಕು. ಒಂದು ಹಡಗು ಮುಂಬಯಿ, ಮಂಗಳೂರುಗಳ ನಡುವೆ ವಾರಕ್ಕೊಂದು ಸಲ ಓಡಾಡುತ್ತದಂತೆ. ಮಂಗಳೂರಿನಿಂದ ಮುಂಬಯಿಗೆ ಹೋಗಬೇಕಾದ ಹಡಗು ಆ ರಾತ್ರಿ ಬರುವುದಿದ್ದುದರಿಂದ, ಪ್ರಯಾಣಿಕರು ಆಗಲೇ ಬಂದು ನೆರೆಯತೊಡಗಿದ್ದರು. 'ಹಡಗನ್ನು ನೋಡಬಹುದಲ್ಲಾ' ಎಂದು ನಮಗೆಲ್ಲ ತುಂಬ ಆನಂದವಾಯಿತು.

ಅಷ್ಟರಲ್ಲಿ ಸಂಜೆಯ ರವಿಯ ಸುವರ್ಣ ರಂಜಿತ ಕಿರಣಗಳಿಂದ ಸುತ್ತಲಿನ ಸೃಷ್ಟಿ ಪುನೀತವಾಗಿತ್ತು. ಪಡುವಣ ಕಡಲಲ್ಲಿ ಸೂರ್ಯ ಕಾಲುಗಳನ್ನಿಳಿಯಬಿಟ್ಟು ನಗುತ್ತಲಿದ್ದ. ನಾವಿಕರು ದೋಣಿಗಳನ್ನು ದಡದತ್ತ ಸಾಗಿಸತೊಡಗಿದ್ದರು. ಹಿಡಿದು ತಂದ ಮೀನುಗಳನ್ನು

ಹಂಗುಸರು ಬುಟ್ಟಿಯಲ್ಲಿ ತುಂಬಿಕೊಂಡು ಮನೆಗೆ ನಡೆದಿದ್ದರು. ಪಡುವಣ ಕಡಲಿಂದ ನೀಲೆದ್ದು ಬರುತ್ತಿದ್ದ, ತುಂಡುಮೋಡಗಳನ್ನು ಸಂಜೆಯ ರವಿ ಕುಶಲ ಚಿತ್ರತಿಲ್ಪಿಯಂತೆ ವಿವಿಧ ರೀತಿಗಳಲ್ಲಿ ಬಣ್ಣ ಕೊಟ್ಟು ಬದಲಿಸುತ್ತಿದ್ದ ರೀತಿ ನಮ್ಮನ್ನು ಬೆರಗುಗೊಳಿಸಿತು. ಸಂಜೆಯ ತಿಳಿಗಾಳಿ ಬೀಸತೊಡಗಿದ್ದರಿಂದ ವಾತಾವರಣ ಹಿತವಾಗ-ತೊಡಗಿತ್ತು. ದೂರದಿಂದ ಸರಳರೇಖೆಯಲ್ಲಿ ಸಾಗಿ ಬಂದು ನೊರೆಯನ್ನು ಚೆಲ್ಲುತ್ತ ತಡಿಯ ಮೇಲೆ ನಿಧಾನವಾಗಿ ಉರುಳಿಕೊಂಡು ತಿರುಗಿ ಹೋಗುತ್ತಿದ್ದ ತೆರೆಗಳ ಲೀಲೆ ಮೋಹಕವಾಗಿತ್ತು. ತುಸು ಹೊತ್ತು ನಾವೂ ಆ ತೆರೆಗಳೊಡನೆ ಆಟವಾಡಿದೆವು.

ಮರುದಿನ ಬೆಳಗಿಗೆ ಒಂದು ಟ್ಯಾಕ್ಸಿ ಮಾಡಿಕೊಂಡು ಕೋಡಿ-ಬಾಗಕ್ಕೆ ಬಂದೆವು. ಕೋಡಿಬಾಗ ಅತ್ಯಂತ ಸುಂದರವಾದ ಸ್ಥಳ. ಕಾರವಾರ ನಗರದ ಉತ್ತರದ ಕೊನೆಯ ಭಾಗ–ಅದು. ಸಹ್ಯಾದ್ರಿಯ ಬೆಟ್ಟಗಳನ್ನೂ, ದಟ್ಟವಾದ ಕಾಡುಗಳನ್ನೂ ಲೆಕ್ಕಿಸದೆ ತನ್ನಿನಿಯನಾದ ಸಮುದ್ರರಾಜನನ್ನು ಕೂಡಲೆಂದು ಆತುರವಾಗಿ ಬಂದ ಶಾಲ್ಮಲೆ (ಕಾಳಿ) ಇಲ್ಲಿ ತನ್ನ ಬಯಕೆ ಈಡೇರಿತೆಂದು ಹರ್ಷದಿಂದ ಬೀಗಿ ಹೋಗಿದ್ದಾಳೆ. ಪರಮಾತ್ಮನನ್ನು ಕಾಣಲೆಂದು ಹಂಬಲಿಸುವ ಭಕ್ತ, ಎದುರಾಗುವ ಎಡರುಗಳನ್ನೆಲ್ಲ ದಾಟಿ ದೇವಸಾನ್ನಿಧ್ಯವನ್ನು ಪಡೆಯುವಂತೆ ತೋರಿತು ನಮಗೆ. ಸಾಗರ–ಶಾಲ್ಮಲೆಯರ ಈ ಅಪೂರ್ವ ಸಮ್ಮಿಲನವನ್ನು ಕಂಡು ನಾವೆಲ್ಲ ಹರ್ಷಪಟ್ಟೆವು. ನದಿಯು ತುಸು ಹಿಂದೆ ಗುಡ್ಡಗಳ ಓರೆಯಲ್ಲಿ ಮರೆಯಾಗಿದೆ. ಈಚೆಗೆ ಕಾರವಾರಕ್ಕೆ ಒತ್ತಿ ಬೆಳೆದಿದ್ದ ತೆಂಗಿನ ಬನಗಳ ಸೊಬಗು ಇನ್ನೂ ಮನೋಹರ-ವಾಗಿತ್ತು.

ನದಿಯ ಆಚೆಗೆ ಸದಾಶಿವಗಡ. ನದಿಯ ಮುಖವನ್ನು ದಾಟಿ ಅಲ್ಲಿಗೆ ಹೋಗಲು ನಾವೆಗಳ ವ್ಯವಸ್ಥೆಯಿದೆ. ನಾವೆಯಲ್ಲಿ ಕುಳಿತು ಕೈಚಾಚಿ ನದಿಯ ನೀರಲ್ಲಿ ಬೆರಳಾಡಿಸುತ್ತಿದ್ದ ಹಾಗೆಯೆ ವಡ ಬಂದೇ ಬಿಟ್ಟಿತು.

ಸದಾಶಿವಗಡ ಮರಾಠರ ಕಾಲದಲ್ಲಿ ಹೆಸರಾದ ಒಂದು ಕೋಟೆ-ಯಂತೆ. ಈಗ ಕೋಟೆ ಹಾಳಾಗಿದೆ. ಊರಿಗೆ ಹತ್ತಿರವೇ ಒಂದು ಪುಟ್ಟ ದಿನ್ನೆಯಿದೆ. ಅದನ್ನೇರಿ ತುದಿಗೆ ಹೋದೆವು. ಅಲ್ಲಿ ಕೋಟೆಯ ಒಂದೆರಡು ಅವಶೇಷಗಳು ಕಣ್ಣಿಗೆ ಬಿದ್ದುವು. ಈ ದಿನ್ನೆಯ ಮೇಲೆ ನಿಂತು ನೋಡಿದರೆ, ಸುತ್ತಲಿನ ಸೀನೇರ ಬಲು ಸುಂದರವಾಗಿ ಕಾಣಿ-ಸುತ್ತದೆ. ದೂರದವರೆಗೆ ಹರಡಿಕೊಂಡಿರುವ ಜಲಧಿ, ಕೆಳಗೆ ನೆಲಕ್ಕೆ ಒರಗಿಕೊಂಡಂತಿರುವ ತೆಂಗು–ಅಡಿಕೆ–ಗಾಳಿಮರಗಳ ಚಿತ್ರವಿನ್ಯಾಸ, ಜುಳುಜುಳು ಸದ್ದು ಮಾಡುತ್ತ ಕಡಲಿನಲ್ಲಿ ಕೂಡುವ ಒಂದೆರಡು ತೊರೆಗಳು ಮಳಲರಾಶಿಯಲ್ಲಿ ನುಸುಳಿಕೊಂಡು ರಜತರೇಖೆಯಂತೆ ಹರಿದು ಬರುವ ವೈಶ್ಯ, ಕಾಳೀನದಿಯ ಒನಪು–ವೈಯ್ಯಾರ, ಸಹ್ಯಾ-ದ್ರಿಯ ಗಿರಿಸಾನುಗಳು, ಸಾಗರದಲ್ಲಿಯ ನಾವೆಗಳು—ಎಲ್ಲವನ್ನೂ ನೋಡಬಹುದು.

ಬೆಟ್ಟವನ್ನು ಬಿಟ್ಟು ಬರಲು ಮನಸ್ಸೇ ಆಗಲಿಲ್ಲ. 'ನಾನು ಇಲ್ಲಿಯೇ ಸಾಯುತ್ತೇನೆ' ಎಂದು ನನ್ನ ಗೆಳೆಯರೊಬ್ಬರು ಗಿಡದ ಕೆಳಗೆ ಮಲಗಿಬಿಟ್ಟರು. ಸುತ್ತಿಸುತ್ತಿಕೊಂಡು ಬಂದು ಸುತ್ತಲಿ ಪ್ರಕೃತಿವೈಭವನವನ್ನು ಬೇರೆ ಬೇರೆ ಕೋನಗಳಿಂದ ನೋಡಿದಂತೆ; ದಾಹ ಹೆಚ್ಚುತ್ತಲೇ ಇತ್ತು. ಬಿಸಿಲು ಏರತೊಡಗಿದ್ದರಿಂದ ಇಳಿದ ಕೆಳಗೆ ಬಂದೆವು.

ಸದಾಶಿವಗಡದಿಂದ ಮಾಜಾಳಿಗೆ ಎಂಟು ಮೈಲಿನ ಹಾದಿ ಮಾಜಾಳಿಗೆ ಎರಡೇ ಫರ್ಲಾಂಗು ದೂರದಲ್ಲಿ ಗೋವೆಯ ಗಡಿ ಅಲ್ಲಿಯವರೆಗೂ ಹೋಗಿಬರೋಣವೆಂದು ಮಾಜಾಳಿಯ ಬಸ್ಸನ್ನು ಏರಿದೆವು.

ಮಾಜಾಳಿ ಒಂದು ಪುಟ್ಟ ಹಳ್ಳಿ. ಅಲ್ಲಿ ಗೋವೆಗೆ ಹೋಗ-ಬೇಕಾದವರನ್ನೆಲ್ಲ ತಪಾಸಣೆ ಮಾಡಲಾಗುತ್ತದೆ. ಸಶಸ್ತ್ರ ಪೋಲೀಸರು ಕಾವಲಿಗೆ ನಿಂತಿರುತ್ತಾರೆ. ನಮ್ಮನ್ನು ಅಲ್ಲಿಂದ ಮುಂದೆ ಬಿಡುವುದಿಲ್ಲವೆಂದು ಹೇಳಿದ್ದರಿಂದ, ಗೋವೆಯ ಗಡಿಯನ್ನು ನೋಡದೆ ನಿರಾಶರಾಗಿ ಅಲ್ಲಿಗೇ ಹಿಂತಿರುಗಿದೆವು.

ಹಡಗು ಹೋಗಿದೆಯೇನೋ ನೋಡಲೆಂದು ಕುತೂಹಲದಿಂದ ಕಡಲಿನತ್ತ ಧಾವಿಸಿದೆವು. ಹಡಗು ಹೊಗೆಯುಗುಳುತ್ತ ಅದೇ ತಾನೇ ಲಂಗರು ಕೀಳತೊಡಗಿತ್ತು. ನಿಧಾನವಾಗಿ ತಿರುಗಿಕೊಂಡು ಮುಂದೆ ಸಾಗಿತು. ಸಾಗುತ್ತ ಸಾಗುತ್ತ ದೂರ ಹೋದಂತೆಲ್ಲ ಸಣ್ಣದಾಗುತ್ತ ನೀಲಸಿಂಧುವಿನಲ್ಲಿ ಬಿಂದುವಾಗಿ ಕರಗಿಹೋಗುವುದನ್ನು ಬಹುಹೊತ್ತು ನೋಡುತ್ತ ನಿಂತಿದ್ದೆವು.

ಆ ದಿನ ಸಂಜೆ ಕಾರವಾರದ ಪೇಟೆಯಲ್ಲಿ ತಿರುಗಾಡಿದೆವು. ಊರು ಅಂಥ ದೊಡ್ಡದೇನೂ ಅಲ್ಲ. ಒಂದು ಪೋಲಿಟೆಕ್ನಿಕ್ ಕಾಲೇಜಿದೆ, ನಾಲ್ಕೈದು ಹೈಸ್ಕೂಲು, ಕೆಲವು ಪ್ರಾಥಮಿಕ ಶಾಲೆ-ಗಳು ಇವೆ. ಕಡಲಿಗೆ ಹೊಂದಿ ಮೀನಿನ ವ್ಯವಸಾಯ ಕೇಂದ್ರ ಒಂದಿದೆ. ಮಾರುಕಟ್ಟೆಯಲ್ಲಿ ಮೀನಿನ ಹೊರತು ಎಲ್ಲ ವಸ್ತುಗಳ ಬೆಲೆಯೂ ತುಂಬ ಜಾಸ್ತಿ. ಗಂಧದ ಹಾಗೂ ದಂತದ ಕೆತ್ತನೆಯ ಕೆಲಸದಲ್ಲಿ ಇಲ್ಲಿಯ ಜನ ನಿಷ್ಣಾತರು. ಅಂಥ ಕೆಲವು ಅಂಗಡಿಗಳನ್ನು ನಾವು ನೋಡಿದೆವು. ಸಮುದ್ರ ದಂಡೆಯ ಮೇಲೆ ಹೊಸಮಾದರಿಯ ತಂಗು-ಮನೆಯೊಂದನ್ನು ಕಟ್ಟಿದ್ದಾರೆ. ಊರಿಗೆ ಅದೊಂದೇ ಒಳ್ಳೆಯ ಹೋಟಲು.

ಮರುದಿನ ನಾವು ಹುಬ್ಬಳ್ಳಿಯ ಬಸ್ಸನ್ನೇರಿದೆವು. ಮನಸ್ಸಿಲ್ಲದ ಮನಸ್ಸಿನಿಂದ ಕಾರವಾರದ ಜೆಲುವನ್ನೂ, ಜೀವದ ಗೆಳೆಯರನ್ನೂ ಬಿಟ್ಟು ಹೊರಡುವಾಗ, ಏನನ್ನೋ ಕಳೆದುಕೊಂಡಂತೆ ನನ್ನ ಮನಸ್ಸು ರಿಕ್ತತೆಯನ್ನು ಅನುಭವಿಸಿತು. ಸಮುದ್ರದ ದಂಡೆಯನ್ನು ಬಳಸಿ-ಕೊಂಡು ಸಾಗಿತ್ತು ದಾರಿ. ಕೆಲವು ಸಲ ಪುಟ್ಟ ಬೆಟ್ಟಗಳು ಮುನ್ನೀರನ್ನು ಮರೆಮಾಡಿ ಮಾಯವಾಗುತ್ತಿದ್ದುವು. ಅಡಿಕೆ ತೆಂಗು-ಗಳು ತಲೆಬಾಗಿ, ಕೈಬೀಸಿ 'ಹೋಗಿಬನ್ನಿ' ಎಂದು ಹೇಳಿದುವು.

ಎಂಥ ಸುಂದರ ನಾಡಿದು! ಕನ್ನಡವೇ ನಿನ್ನ ಭಾಗ್ಯ ದೊಡ್ಡದು. ಕಾರವಾರದಂಥ ಚೆಲುವ ನಾಡು ಎಲ್ಲ ರಾಜ್ಯಗಳಲ್ಲೂ ಇರುವುದಿಲ್ಲ.

"ಏನು ಚೆಲುವಿನ ನಾಡು! ಚೆಲುವು ಚೆಲ್ಲುವ ನಾಡು!
ಕನ್ನಡದ ನಾಡು!
ಏನು ಚಿನ್ನದ ನಾಡು! ನಮ್ಮೊಲುಮೆಯಾ ನಾಡು!
ನಮ್ಮಿನಿಯ ನಾಡು!"

ಎಂದು ಆಚಾರ್ಯ ಶ್ರೀಯವರು ಹೇಳಿದ ಮಾತು ನೆನಪಿಗೆ ಬಂದು ನನ್ನ ರೋಮರೋಮವೂ ಅಭಿಮಾನದಿಂದ ಪುಳಕಿತವಾಗಿ ಕಣ್ಣಿನಲ್ಲಿ ಹನಿ ಮೂಡಿದ್ದುವು.

ಕಾರವಾರದಲ್ಲಿ ಎಲ್ಲವೂ ಇದೆ; ಆದರೆ ಅದನ್ನು ಸರಿಯಾದ ರೀತಿಯಲ್ಲಿ ನಾವು ಬಳಸಿಕೊಂಡಿಲ್ಲ. ಎಲ್ಲ ಸೌಭಾಗ್ಯವಿದ್ದೂ ಅದನ್ನು ಉಣ್ಣಲಾಗದ ನಿರ್ಭಾಗ್ಯರು ನಾವು ನಿಸರ್ಗವು ಕಾರವಾರಕ್ಕೆ ತಾನಾಗಿ ಒದಗಿಸಿಕೊಟ್ಟುದರ ಸರಿಯಾದ ಲಾಭವನ್ನು ಪಡೆಯಲಿಕ್ಕೆ ನಾವು ಬಹಳ ಬೆಲೆಯನ್ನೇನೂ ತೆರಬೇಕಾಗಿಲ್ಲ. ಹುಬ್ಬಳ್ಳಿಯಿಂದ ಒಂದು ರೈಲುದಾರಿ, ಕಡಿಮೆವೆಚ್ಚದಲ್ಲಿಯೇ ಆಗಬಲ್ಲ ಸರ್ವಋತುಗಳ ಒಂದು ಬಂದರ, ಕೈಗೆ ಸಿಕ್ಕು ತಪ್ಪಿಸಿಕೊಂಡ ನೌಕಾಂಗಣ, ಕಾಳೀ ನದಿಯ ಜಲವಿದ್ಯುದ್ಯೋಜನೆ.....ಅಂದಿಗೆ ಕಾರವಾರ ಜಿಲ್ಲೆಯ ಆಪಾರಸೌಂದರ್ಯ ಸಾರ್ಥಕವಾದೀತು. ಇದರಲ್ಲಿ ಕೇವಲ ಕಾರವಾರ ಜಿಲ್ಲೆಯ ಹಿತದ ಪ್ರಶ್ನೆಯಿಲ್ಲ. ಇಡೀ ನಾಡಿನ ಪ್ರಶ್ನೆಯೇ ಆಡಕ–ವಾಗಿದೆ. ಆದರೆ ಅದೆಲ್ಲ ಎಂದು ನನಸಾದೀತು? ಕಾರವಾರದ ಎಲ್ಲ ಸೌಭಾಗ್ಯವೂ ಹೀಗೇ ಕಾಡುಪಾಲಾಗುವುದು ಎಂದು ನಿಂತೀತು?

ಕಾರವಾರದ ಬಗ್ಗೆ ಏನೂ ಕಳವಳಕ್ಕೆ ಕಾರಣವಿಲ್ಲ. ಇಲ್ಲಿಯ ಜನರಲ್ಲಿ ಇನ್ನೂ ಕನ್ನಡದ ರಕ್ತವೇ ಇದೆ. ಕಾರವಾರದಲ್ಲಿ ನಾನು ನಾಲ್ಕುದಿನವಿದ್ದರೂ ಎಲ್ಲರೊಡನೆಯೂ ಕನ್ನಡದಲ್ಲೇ ಮಾತನಾಡಿದೆ. ಇಲ್ಲಿಯ ಬಹುಜನರ ಭಾಷೆ ಕೊಂಕಣಿ; ಆದರೆ ಕನ್ನಡವನ್ನು ಮಾತೃಭಾಷೆಯಾಗಿ ಉಳ್ಳವರೂ, ಕನ್ನಡವನ್ನು ಜೆನ್ನಾಗಿ ಬಲ್ಲ, ಕನ್ನಡಪರರಾದ ಕೊಂಕಣಿಗರೂ ಸೇರಿ ನೂರಕ್ಕೆ ಎಂಭತ್ತೆರಷ್ಟು ಜನ ಇದೆ. ಅಂಗಡಿಗಳ ಎಲ್ಲ ಫಲಕಗಳೂ ಸಾಮಾನ್ಯವಾಗಿ ಕನ್ನಡದಲ್ಲೇ ಇವೆ. ಇಲ್ಲಿಯ ಮಹಾರಾಷ್ಟ್ರೀಯರ ಚಳವಳಿ ಅರ್ಥವಿಲ್ಲದ್ದಿಂದೂ ಕೆಲವು ಜನ ಕುಹಕಿ ಮರಾಠಿಗರ ಪ್ರಚೋದನೆಯೇ ಅದಕ್ಕೆ ಕಾರಣ ವೆಂದೂ ನನಗೆ ಅಧಿಕೃತವಾಗಿ ತಿಳಿದು ಬಂತು. ಶುದ್ಧ ಮಹಾ-ರಾಷ್ಟ್ರೀಯರು ಇಲ್ಲಿ ಬಹು ಸ್ವಲ್ಪ ಜನ ಇದ್ದಾರೆ. ಚಳವಳಿಯ ಕಾಲಕ್ಕೆ ಮಹಾರಾಷ್ಟ್ರದ ಹಳ್ಳಿಗಳಿಂದ, ಅರಿಯದ ಜನರಿಗೆ ಇಲ್ಲದ ಆಮಿಷ ತೋರಿಸಿ, ಇಲ್ಲಿಗೆ ಕರೆತಂದು ಸತ್ಯಾಗ್ರಹ ಮಾಡಿಸಲಾಯಿ-ತೆಂದೂ, ಅದಕ್ಕೆ ಅನೇಕ ಸ್ಥಳೀಯ ಮರಾಠಿಗರೇ ಬೆಂಬಲಕೊಟ್ಟರ-ಲ್ಲವೆಂದೂ ಕೆಲವರು ಹೇಳಿದರು. ಕರ್ನಾಟಕದಲ್ಲಿ ಉಳಿದರೇ ಇಂದಿಲ್ಲ ನಾಳೆ ಇಲ್ಲಿ ಬಂದರ, ನೌಕಾಂಗಣ, ರೈಲು, ವಿದ್ಯು-ದ್ಯೋಜನೆಗಳ ಲಾಭ ತಮಗೆ ತಟ್ಟುವುದೆಂದು ಈಗೀಗ ಇಲ್ಲಿಯ ಜನ ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆ. ಇಲ್ಲಿ ಬಂದರವಾದರೆ ಮುಂಬಯಿ ಬಂದರದ ವ್ಯಾಪಾರಕ್ಕೆ ಧಕ್ಕೆ ತಟ್ಟೀತೆಂದು ಮರಾಠರು ಅಂಜಿಕೊಂಡಿದ್ದಾರೆ. ಅಂತೆಯೇ ಎಂದೋ ಆಗಬೇಕಾಗಿದ್ದ ಬಂದರದ ಕೆಲಸಕ್ಕೆ, ಕಾರವಾರವು ಮುಂಬಯಿ ರಾಜ್ಯದಲ್ಲಿರುವವರೆಗೂ ಅವರು ಕೇಂದ್ರದ ಮೇಲೆ ಒತ್ತಾಯ ತಂದು ಅಡ್ಡಿಮಾಡಿದರು. ಈಗಲೂ ಇದೇ ಕಾರಣಕ್ಕಾಗಿಯೇ ಅವರು ಕಾರವಾರವನ್ನು ಕೇಳತೊಡಗಿ–ದ್ದಾರೆ.

ಒಟ್ಟಿನಲ್ಲಿ ಕರ್ನಾಟಕದಲ್ಲಿ ಕಾರವಾರಕ್ಕೆ ಅತ್ಯಂತ ಉಜ್ವಲ ಭವಿಷ್ಯ ಕಾದಿದೆ. ನಮ್ಮ ಸರಕಾರ ಇನ್ನೂ ಹೆಚ್ಚು ಆಸ್ಥೆವಹಿಸಿ ಈ ದಿಸೆಯಲ್ಲಿ ಕೆಲಸ ಮಾಡಿದರೆ ಕಾರವಾರಕ್ಕೂ ಹಿತ, ತನ್ಮೂಲಕ ಕರ್ನಾಟಕಕ್ಕೂ ಹಿತ. ○

ದಿ ಸದ್ವೈದ್ಯ ಶಾಲಾ [ಫೈನೇಟ್] ಲಿಮಿಟೆಡ್

— ಸಂಜಸಗೊಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನಸೇವೆಯಲ್ಲಿ ತೊಡಗಿರುವ

ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ
ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ

ಅತ್ಯಾಧುನಿಕ ಕ್ರಮದಲ್ಲಿ

ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ

ನಿತ್ಯವೂ ತಯಾರಾಗುತ್ತಲಿವೆ.

ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ

ಶಾಖೆಗಳು:

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ
(ಕರ್ನಾಟಕ ಸೀಮೆ ಬಿಟ್ಟು)

ಯುನೈಟೆಡ್ ಕರ್ನರ್ಸ್, 54, ಬಂದರ್ ಸ್ಟ್ರೀಟ್, ಮದ್ರಾಸ

ರಸಸಾಕ್ಷಿಯಾಗು

ಶ್ರೀ. ಎಚ್. ಜೆ. ಉಪಾಧ್ಯಾಯ ಎಂ. ಎ., ಹೈದರಾಬಾದ್

ವ್ಯವಹಾರ ನಡತೆಗೂ ಬೇಡವಾದುಪದೇಶ
ಸವಿನುಡಿಯೊಳರಸಿ ನೀ ಪಡೆದೆಯೇನು ?
ಜಂಗಮಜಗತ್ತಿನೀ ಭಂಗುರದ ಭಾವಗಳ
ಸಂಗದಲಿ ಆನಂದ ಸವಿದೆಯೇನು ! ೧

ಜಗದ ವಕ್ರತೆ ತಿದ್ದಿ ಉಳಿಯು ಊಳಿಗದಲ್ಲಿ
ನೀನೆ ಅಷ್ಟಾವಕ್ರನಾದೆಯೇನು !
ಕೊಳಕು ಕಲೆಗಳಿಗೆಲ್ಲ ಸುಣ್ಣ ಬಣ್ಣವ ಬಳಿದು
ಸೊಬಗುಗಣ್ಣಿನ ಕಾಂತಿ ಕುಂದಿತೇನು ! ೨

ಬಾಳಗಡಲಿನ ಉಪ್ಪುನೀರನ್ನೆ ಉಂಡುಂಡು
ಎದೆಯ ಸವಿನೀರ ಸೆಲೆ ಬರತಿತೇನು !
ರಸದ ಸೆಲೆ ಬರಿದಾಗಿ ಭಾವಸಿಸಿಗಳು ಬಾಡಿ
ಸಾಹಿತ್ಯ ಸವುಳುನೆಲವಾಯಿತೇನು ! ೩

ಕ್ಷರದಿ ಕ್ಷುಧೆ ಹಿಂಗುವುದೆ ಬಾ ಕ್ಷೀರಸಾಗರಕೆ,
ಭಾವಬಿನದದ ಅಮೃತರಸಪಾನಕೆ,
ಅಕ್ಷರದಿ ಅಕ್ಷಯದ ಆನಂದ ಸುಧೆಯಿರಲು
ತುಚ್ಛಸುಖ ತಂದಾವೆ ತಣಿವು ಮನಕೆ ! ೪

ಬಾಳು ಬಾ ಬೆಳಕಿನಲಿ–ಕಲ್ಪನೆಯ ಥಳಕಿನಲಿ
ಮುಬ್ಬಿನಲಿ ಮುಸುಕಿನಲಿ ಕಾಂಬುದೇನು !
ಕತ್ತಲೆಗೆ ಕಣ್ಬಡುತ ಹೊಂಬೆಳಕು ಹರಿದುಬರಿ
ಎವೆಯ ಮುಚ್ಚುತೆ ಗೂಬೆ ಕಂಡುದೇನು ! ೫

ಮಧುಮಾಸದೊಸಗೆಯಲಿ ಮೌನಮುದ್ರೆಯನೊಡೆದು
ಮಧುಕಂಠ ಮಧುಗೀತ ಸೂರೆಗೊಳದೆ !
ಸೊಬಗನಿದ್ದೆಡೆಯಲ್ಲಿ ಸವಿದು ಬಾ ಸೋದದಲಿ
ಮಧುಪ ವೃತ್ತಿಗೆ ಮನವ ಮಾರುಗೊಡದೆ. ೬

ಬರಿಯ ಕೇಸರ ಹಿಡಿದು ಅಂದಗೆಟ್ಟಿತು ಶ್ರುತಿಯು
ನುಡಿದ ಬೆರಳಿಗು ಬಂತು ಬೇನೆ ಬೇಸರವು,
ಸುಪ್ತರಾಗಗಳೆಲ್ಲ ಸಪ್ತರಾಗಗಳಾಗೆ
ಜೀವ ವೀಣೆಯ ಮಿಡಿತ ಶ್ರುತಿಮಧುರವು. ೭

ಮಣ್ಣುಬೀಜಗಳುಂಡು, ತಣ್ಣೆಳಲ ಮನೆಮಾಡಿ
ಬಾನನೀಜುವ ಭಾವ ಪಕ್ಷಿಯಾಗು,
ನವರುಚಿರ ಕಲ್ಪನೆಯ ಮಧು ಮಧುರಭಾವಗಳ
ಚಿನ್ಮೋದ ಜೈತ್ರರಸ ಸಾಕ್ಷಿಯಾಗು ! ೮

ಕಾವ್ಯ ಜೈತ್ರ !

ಶ್ರೀ. ಈಶ್ವರ ಹಿರೇನಂದೀಹಳ್ಳಿ, ಸೊರಬ

ಕರುನಾಡಿನಲ್ಲಿ ಬಂದಿಹುದು ಕಾವ್ಯ;
ಜೈತನ್ಯ ಜೈತ್ರವಾಗಿ !
ಹಿಡಿದಿಹಳು ಹಾರ ಕರುನಾಡಶ್ರೀಯು
ನವಯುಗದ ಬರವಿಗಾಗಿ !

೨

ರಂಗೋಲಿ ಬರೆಯೆ ನೆಲ ಮುಗಿಲಿನುದ್ದ
ಮಳೆಬಿಲ್ಲು ನಗೆಯ ತಂದು–
ಮುಂಜಾವ ಮಂಜು, ಇನಿಜೇನ ಬಿಂದು
ತಳೆದಿಹವು ಕಾವ್ಯಸಿಂಧು !

೩

ಬೆಳುದಿಂಗಳಲ್ಲಿ ಉಷೆಯುದಯದಲ್ಲಿ
ಬೆರೆದಂತೆ ಹಾಲು ಹಣ್ಣು;
ಎಳೆದಿಹುದು ಸ್ವರ್ಣ-ರೇಷೆಯನು ಹೆಜ್ಜೆ-
ಪದಚಿಲ್ಲೆ ಕಬ್ಬವೆಣ್ಣು !

೪

ಹಾರಿದರೆ ನದಿಯು, ಏರಿದರೆ ಕಡಲು
ಮಿಡಿಯುವುದು ಪ್ರಕೃತಿ ವೀಣೆ-
ಝೇಂಕರಿಸೆ ಭೃಂಗ ನರ್ತಿಸಲು ನವಿಲು
ನುಡಿಯುವುದು ಕಾವ್ಯವಾಣಿ !

೫

ಕಣ್ತೆರೆಯೆ ಸ್ವರ್ಗ; ಕಣ್ಮರೆಯೆ ಮೃತ್ಯು–
ಸುರಿದೀತು ಪ್ರಳಯವೃಷ್ಟಿ !
ಕಣಕಣಗಳಲ್ಲಿ ಜಿನುಗಿಹುದು ಪೂರ್ಣ
ಕಾಣುವುದೆ–ದಿವ್ಯದೃಷ್ಟಿ !

೬

ತೆರೆದಿಹುದು ಪುಷ್ಪ ಎದೆ ಬೆಳಕು ಚಿಮ್ಮಿ
ಅಣಿಗೊಂಡು ನವ್ಯತಾನ;
ಬೀಸಿದರೆ ಗಾಳಿ, ಸೂಸುವುದು ಕಾವ್ಯ
ಶ್ರುತಿಗೊಂಡು ಕುಕಿಲಗಾನ !

೭

ಎಲ್ಲೆಲ್ಲು ಗುಲ್ಲು ಕಾವ್ಯದ್ದೆ ಸೊಲ್ಲು
ಸರಸತಿಯ ವರಪ್ರಸಾದ
ಬರಲಿರುವ ಭಾಗ್ಯ, ಶುಭಶಕುನ ನೆನೆದು
ಅರಳಿಹುದು ಮನಹಸಾದ.

★ ವ್ಹರ್ಜಿನಿಯಾ ವೂಲ್ಫ್ ★

(ಸಾಹಿತ್ಯಿಕ ವ್ಯಕ್ತಿ ಪರಿಚಯ)

ಕಳೆದ ಸಂಚಿಕೆಯಿಂದ ಮುಂದುವರಿದುದು.

ಶ್ರೀಮತಿ **' ವಸಂತಲಕ್ಷ್ಮಿ '** ಮದ್ರಾಸ್

ಜೀವನದ ರುದ್ರ ಸತ್ಯಸ್ವರೂಪವನ್ನು ಕಂಡು ಸಹಿಸಲಾರದಂತಹ ಕೋಮಲ ಹೃದಯವೇನೋ ವ್ಹರ್ಜಿನಿಯಾಳದು. ಲೋಕದ ಹುಚ್ಚನ್ನು ಕಡಮೆ ಮಾಡಲು ಸಾಹಿತ್ಯನಿರ್ಮಿತಿಗೆ ಹೊರಟವಳಾದರೂ, ತನ್ನ ಹುಚ್ಚನ್ನು ಅರಿತು ತಡೆದುಕೊಳ್ಳುವಂತಹ ಮನೋದಾರ್ಢ್ಯ ಅವಳಿಗಿರಲಿಲ್ಲ.

' ದೀಪಸ್ತಂಭಕ್ಕೆ ' (To the Lighthouse 1917) ಎಂಬುದು ವ್ಹರ್ಜಿನಿಯಾಳ ಮುಂದಿನ ಕಾದಂಬರಿ. ' ನಮ್ಮ ಪ್ರಜ್ಞೆಯನ್ನು ಅವರಿಸುವ ಕಾಂತಿಯುಕ್ತ ಅವರಣ ' ವನ್ನು ಚಿತ್ರಿಸುವುದೇ ಇಲ್ಲಿಯೂ ಅವಳ ಧ್ಯೇಯವಾಗಿತ್ತು. ಹೀಗೆ ಮಾಡಲು ಪಾತ್ರದ ಮನಸ್ಸನ್ನೇ ಕಾದಂಬರಿಕಾರನು ಒಳಹೊಗಬೇಕು; ಬಾಹ್ಯ ಜಗತ್ತಿನ ಒತ್ತಡವು ಕಡಿಮೆಯಾಗಬೇಕು ಇದನ್ನು ಸಾಧ್ಯಗೊಳಿಸಲು ವ್ಹರ್ಜಿನಿಯಾ ವೂಲ್ಫಳು ಈ ಕಾದಂಬರಿಯಲ್ಲಿ ಮತ್ತೊಂದು ಮಾರ್ಗವನ್ನು ಅವಲಂಬಿಸಿದಳು. ಈ ಕಾದಂಬರಿಯಲ್ಲಿಯ ಕತೆ ನಡೆಯುವುದು ಒಂದು ನಡುಗಡ್ಡೆಯ ಮೇಲೆ. ಶ್ರೀ ಮತ್ತು ಶ್ರೀಮತಿ ರ್ಯಾಮ್ಸೆ, ಅವರ ಕುಟುಂಬ ಮತ್ತು ಸ್ನೇಹಿತರು. ಸಮೀಪನೇ ಇದ್ದ ನಡುಗಡ್ಡೆಯ ಮೇಲಿನ ದೀಪಸ್ತಂಭದ ಹತ್ತಿರದೇ ಇಪ್ಪ ಅವರ ಮನೆಗೆ ಪ್ರಯಾಣ ಮಾಡಬೇಕೆಂದು ಹವಣಿಸುತ್ತಾರೆ. ಆದರೆ ಹಲವು ಅಕಸ್ಮಿಕ ಕಾರಣಗಳ ಮೂಲಕ ಅವರು ಹೋಗುವುದು ಮುಂದೆ ಬೀಳುತ್ತದೆ. ಕಾದಂಬರಿಯ ಆರಂಭವೇ ಹೀಗೆ ಆಗುತ್ತದೆ. ಮುಂದೆ ಕುಟುಂಬದಲ್ಲಿಯ ಹಲವರು— ಮಗನಾದ ಎಂಡ್ರೂಸ್, ಮಗಳು ಪ್ರೂ, ಮುಂತಾದವರು ಗತಿಸಿ ಹೋಗುತ್ತಾರೆ. ಕುಟುಂಬದಲ್ಲಿಯ ಉಳಿದ ಜನರೂ, ಅವರ ಸ್ನೇಹಿತರೂ ಕೊನೆಗೆ ಪ್ರಯಾಣವನ್ನು ಕೈಕೊಳ್ಳುತ್ತಾರೆ. ಶ್ರೀ ಯಾಗೂ ಶ್ರೀಮತಿ ರ್ಯಾಮ್ಸೆಯರ ಸ್ನೇಹಿತೆಯಾದ ಅಲಿ ಬ್ರಿಸ್ಕೋ ಎಂಬವಳು ಒಳ್ಳೇ ಕಲೆಗಾರ್ತಿ. ಹಿಂದೊಮ್ಮೆ ಇಲ್ಲಿ ಬಂದಾಗ ಆರಂಭಿಸಿದ ಚಿತ್ರವನ್ನು ಅವಳು ಈಗ ಪೂರ್ತಿಗೊಳಿಸುತ್ತಾಳೆ.

ಈ ಕಾದಂಬರಿಯ ಮಹತ್ವವೆಂದರೆ : ಇದರಲ್ಲಿ ವ್ಹರ್ಜಿನಿಯಾ ವೂಲ್ಫಳು ತನ್ನ ಹೊಸ ತಂತ್ರವನ್ನು ಅನುಸರಿಸುವುದರೊಡನೆ ಅವಳಿಗೆ ಹೊಳೆದ ಹಲವು ಸಮಸ್ಯೆಗಳನ್ನು ಚರ್ಚಿಸುತ್ತಾಳೆ. ' ಅನುಭವದಲ್ಲಿ ಮಹತ್ವನ ಭಾಗವು ಯಾವುದು? ' ' ತಂದೆ-ಮಕ್ಕಳು ಇವರಲ್ಲಿ ಸಂಬಂಧವು ಹೇಗೆ ಇರಬೇಕು? ' ಎಂಬ ಸಮಸ್ಯೆಗಳಿಗೆ ತನ್ನದೆ ಆದ ರೀತಿಯಲ್ಲಿ ಉತ್ತರಗಳನ್ನು ಕೊಟ್ಟಿದ್ದಾಳೆ. ಅದಲ್ಲದೆ ಸಂಕೇತಗಳ ಅದ್ಭುತವಾದ ಮತ್ತು ಕಲಾತ್ಮಕವಾದ ರಚನೆಯನ್ನು ನಾವು ಇಲ್ಲಿ ಕಾಣುತ್ತೇವೆ. ಕತೆಯಲ್ಲಿ ನೇರಲಿಂದ ಮೇಲೆ ಬರುವ ದೀಪಸ್ತಂಭವೇ ಅಪೂರ್ವವಾದರೂ ಸಾಮಾನ್ಯ ಇಹಲೋಕದಲ್ಲಿರುವಂತಹ ವ್ಯಕ್ತಿಯ ಸಂಕೇತವಾಗಿದೆ.

೧೯೨೮ರಲ್ಲಿ ಪ್ರಕಟನಾದ **' ಓಲೆಂಡೋ "** (orlando 1928) ಎಂಬ ಕಾದಂಬರಿಯು ಮೊದಲಿನ ಎಲ್ಲ ಕಾದಂಬರಿಗಳಿಗಿಂತಲೂ ಭಿನ್ನವಾಗಿದೆ. ಅದು, ಒಂದು ಬಗೆಯಿಂದ ಕಾದಂಬರಿಯೂ ಅಹುದು, ಒಂದು ದೃಷ್ಟಿಯಿಂದ ಜೀವನಚರಿತ್ರವೂ ಅಹುದು. ಕಥೆಗೆ ಮೊದಲು ' ಓಲೆಂಡೋ ' ಎಂಬ ನಾಯಕ ಇರುತ್ತಾನೆ. ಮುಂದೆ ಅವನೇ ಹೆಂಗುಸಾದುದರಿಂದ ಕತೆಗೆ ಒಬ್ಬ ನಾಯಕಿ ಇರುವಳು ಎನ್ನಬೇಕು. ವ್ಹರ್ಜಿನಿಯಾ ವೂಲ್ಫಳ ಸ್ನೇಹಿತೆಯಾದ ವಿಕ್ಟೋರಿಯಾ ಸೆಕವಿಲ್ ವೆಸ್ಟ (Victoria Sackville West) ಎಂಬವಳ ಬಾಳನ್ನೇ ಆಧಾರವಾಗಿಟ್ಟುಕೊಂಡು ಈ ಕತೆಯನ್ನು ಬರೆದಂತಿದೆ. ಕಥೆಯ ನಾಯಕ— (ನಾಯಕಿಯೂ ಸಹ!) ಓಲೆಂಡೋ ಹಲವಾರು ಶತಮಾನಗಳವರೆಗೆ ಬದುಕಿರುತ್ತಾನೆ— ಅಂದರೆ ಇಂಗ್ಲಿಷ್ ಸಾಹಿತ್ಯದಲ್ಲಿಯ ಎಲಿಝಬೆಥ್ ಯುಗದಿಂದ ಇಂದಿನವರೆಗೆ ಪ್ರತಿಯೊಂದು ಶತಮಾನದಲ್ಲಿಯ ಸಾಹಿತ್ಯಿಕ ಜೀವನವನ್ನು ಅವಳು ಜೊತ್ತಾಗಿ ಚಿತ್ರಿಸುತ್ತಾಳೆ. ಓಲೆಂಡೋ ಕಥೆಯ ಆರಂಭಕ್ಕೆ ೧೬ ವಯಸ್ಸಿನ ಯುವಕ, ' ಇಥೆಲ್‌ಬರ್ಟ್ ' (Aethelbert) ಎಂಬ ನಾಟಕವನ್ನು ಬರೆಯುವುದರಲ್ಲಿ ತೊಡಗಿರುತ್ತಾನೆ. ಮುಂದೆ ಕೆಲವು ತಂಟೆಗಳಿಗೆ ಒಳಗಾಗಿ ಅವನು ಪರದೇಶಕ್ಕೆ ಹೋಗುತ್ತಾನೆ. ಅಲ್ಲಿ ಹೆಣ್ಣಾಗಿ ಪರಿವರ್ತನೆಗೊಂಡು ಇಂಗ್ಲಂಡಿಗೆ ಮರಳಿ ಬರುವಾಗ, ಅದಾಗಲೇ ೧೮ನೆಯ ಶತಮಾನ! ಆ ಕಾಲದ ಸಾಹಿತಿಗಳನ್ನು ಓಲೆಂಡೋ

ಹೆಚ್ಚಿಯಾಗುತ್ತಾನೆ. ಹೀಗೆಯೇ ಸಾಗಿ ಕತೆಯು ವರ್ತಮಾನಕಾಲದ ವರೆಗೆ ಬಂದು ಮುಟ್ಟುತ್ತದೆ. ಕತೆಯ ಉದ್ದಕ್ಕೂ ತಿಳಿಹಾಸ್ಯ, ವ್ಯಂಗ್ಯ ಬೆರೆತುಕೊಂಡಿವೆ. ವ್ಹರ್ಜಿನಿಯಾ ವೂಲ್ಫಳ ಎಲ್ಲ ಕಾದಂಬರಿಗಳೂ ಗಂಭೀರವಾಗಿವೆ; ಆದರೆ ಅವಳಿಗೆ ಹಾಸ್ಯ ಗೊತ್ತು ಎಂಬುದಕ್ಕೆ ನಿದರ್ಶಕದಂತಿದೆ ಈ ಕಾದಂಬರಿ.

ಈ ಕಾದಂಬರಿಯ ಮುನ್ನುಡಿಯೂ ಹೊಸ ಮಾದರಿಯದು:

"ಎಷ್ಟೋ ಸ್ನೇಹಿತರು ನನಗೆ ಈ ಕಾದಂಬರಿಯನ್ನು ಬರೆಯುವುದರಲ್ಲಿ ಸಹಾಯವನ್ನು ಮಾಡಿದ್ದಾರೆ—ಹಲವರು ತುಂಬ ಸ್ಪಷ್ಟವಾದಿಗಳು ಮತ್ತು ಪ್ರತಿಭಾವಂತರು" ಎಂದು ಹೇಳಿ, ಕಾದಂಬರೀಕಾರರಾದ 'ಡೀಫೋ', 'ಸ್ವರ್ನ್', 'ಬ್ರಾಂಟೆ' ಮುಂತಾದವರ ಹೆಸರುಗಳ ಒಂದು ಉದ್ದವಾದ ಪಟ್ಟಿಯನ್ನೇ ಅವಳು ಕೊಡುತ್ತಾಳೆ. 'ಇಂದಿನ ಸಾಹಿತ್ಯವು ಹಿಂದಿನ ಸಾಹಿತ್ಯಕ್ಕೆ ಚಿರರುಣಿ' ಎಂದು ಹೇಳುವುದೇ ಉದ್ದೇಶವಾಗಿತ್ತೇನೋ! ಈ ಬಗೆಯ ಮುನ್ನುಡಿಯು ಈ ಕಾದಂಬರಿಗೆ ಉಚಿತ; ಏಕೆಂದರೆ ಕಾದಂಬರಿಯಲ್ಲಿ ಮುಖ್ಯವಾಗಿ ಬರುವ ವಿಷಯ ವ್ಯಕ್ತಿ ಮತ್ತು ಇತಿಹಾಸ—ಎಂದೂ ಹೇಳಬಹುದು.

'ಓಲೆಂಡೊ' ಅನಂತರ ಬರೆದ 'ತೆರೆಗಳು' (The waves 1931) ಎಂಬ ಕಾದಂಬರಿಯಲ್ಲಿ ವ್ಹರ್ಜಿನಿಯಾ ವೂಲ್ಫಳು ಮತ್ತೆ ಮೊದಲಿನ ತಂತ್ರವನ್ನು ಸ್ವೀಕರಿಸಿದಳು. ಹಲವಾರು ಪಾತ್ರಗಳು ಕತೆಯಲ್ಲಿದ್ದರೆ ಅವರ ವಿಶ್ಲೇಷಣೆಯನ್ನು ಕೊಡುವುದು ಕಷ್ಟವಾಗುತ್ತದೆ ಎಂದು, ಇಲ್ಲಿ ಆರೇ ಪಾತ್ರಗಳಲ್ಲಿ ಕತೆಯನ್ನು ಹೇಳಲಾಗಿದೆ. ಬರ್ನಾರ್ಡ್, ಲುರೊ, ನೆವಿಲ್, ಸೂಝನ್, ರ್ಹೋಡಾ ಮತ್ತು ಜಿನಿ ಎಂಬ ಆರು ಮಕ್ಕಳು ಒಂದೇ ಮನೆಯಲ್ಲಿ ಇರುತ್ತಾರೆ; ಒಂದೇ ಶಾಲೆಗೆ ಹೋಗುತ್ತಾರೆ; ಮುಂದೆ ಕಾಲೇಜ್ ಶಿಕ್ಷಣಕ್ಕೆಂದು ಅವರು ಬೇರೆ ಬೇರೆ ದಿಕ್ಕಿಗೆ ಹೋಗಬೇಕಾಗುತ್ತದೆ. ಅವರೆಲ್ಲ ವಯಸ್ಕರಾದನಂತರ ಅವರ ಪ್ರೇಮ-ವಿವಾಹ ಮುಂತಾದುವುಗಳನ್ನೆಲ್ಲ ಚಿತ್ರಿಸಲಾಗಿದೆ. ಪ್ರತಿಯೊಂದು ಪಾತ್ರವೂ ತನ್ನ ಕತೆಯನ್ನು 'ಸ್ವಗತ'ದಲ್ಲಿ ಹೇಳುತ್ತದೆ. ಇಲ್ಲಿ ಕತೆಗಾರ್ತಿಯು ಕತೆಯನ್ನು ಹೇಳುವುದಿಲ್ಲ, ವಿವಿಧ ಪಾತ್ರಗಳಲ್ಲಿ ಸಂಭಾಷಣೆಯು ನಡೆಯುವುದಿಲ್ಲ. ನಾಟಕದಲ್ಲಿ ರಂಗಭೂಮಿಯ ಮೇಲೆ ಒಂದೊಂದೇ ಪಾತ್ರವು ಬಂದು ಸ್ವಗತವನ್ನು ನುಡಿದಂತಿದೆ ಈ ಕಾದಂಬರಿಯ ರೀತಿ! ಉದಾ: ಸೂಝನ್ಳು ಶಾಲೆಯಿಂದ ಮನೆಗೆ ರಜೆಗಾಗಿ ಹೋಗುವುದನ್ನು ಕಾಯುತ್ತಿರುತ್ತಾ ಹೀಗೆ ನುಡಿಯುತ್ತಾಳೆ: "ನಾನು ಒಂದು ನದಿಯ ತೀರಕ್ಕೆ ಹೋಗಿ ಕುಳಿತು ಮೀನುಗಳು ಈಜಾಡುವುದನ್ನು ನೋಡುವೆ; ಅವು ಮುಳ್ಳುಬೇಲಿಗಳಲ್ಲಿ ಮಾಯವಾಗಬಹುದು. ಆಗ ನಾನು ಅವುಗಳನ್ನು ಹಿಡಿಯಲು ಹವಣಿಸುವೆ. ನನ್ನ ಕೈಗಳು ಆಗ ಮುಳ್ಳುಗಳಿಂದ ತುಂಬಿ ಹೋಗಬಹುದು." ಅದೇ ಪ್ರಕಾರ ಬೇರೆ ಒಂದು ಸಂದರ್ಭದಲ್ಲಿ ರ್ಹೋಡಾ ನುಡಿಯುತ್ತಾಳೆ: "ಸೂಝನ್ಳ ಜೆನ್ನಿನ ಹಿಂದೆ ಇರುವ ಕನ್ನಡಿಯಲ್ಲಿ ಅದೋ ನನ್ನ ಮೋರೆ ಕಾಣುತ್ತಿದೆ—ಅದೇ, ಅದೇ ನನ್ನ ಮೋರೆ. ಆದರೆ ನಾನು ಬಗ್ಗಿ ಅವಳಿಗೆ ಕನ್ನಡಿಯಲ್ಲಿ ನನ್ನ ಮೋರೆಯು ಕಾಣದಂತೆ ಮಾಡುತ್ತೇನೆ." ಇದೇ ಪ್ರಕಾರ ಸ್ವಗತಗಳ ಮೇಲೆ ಸ್ವಗತಗಳು ಬರುತ್ತವೆ. ಈ ಕಾದಂಬರಿಯೇ ಒಂದು 'ಸ್ವಗತ'ಗಳ ಮಾಲೆ.

ಇವುಗಳ ಮುಖಾಂತರವಾಗಿ ನಾವು ಪ್ರತಿಯೊಂದು ಪಾತ್ರದ ಸ್ವಭಾವದ ವೈಚಿತ್ರ್ಯವನ್ನು ಕಾಣುತ್ತೇವೆ. ರ್ಹೋಡಾ ಎನ್ನುವವಳಿಗೆ ಜೀವನದ ಬಗ್ಗೆ ಭಯವಿದ್ದರೆ, ಜಿನ್ನಿಯು ಸ್ತುತಿಪ್ರಿಯಳು. ಸೂಝನ್ಳಿಗೆ ಭೂಮಿತಾಯಿಯು ಪ್ರಿಯಳು, ನೆವಿಲ್ ಕವಿಯು, ಲುಈಯ ಮಧ್ಯಮ ವರ್ಗದ ಬುದ್ಧಿವಂತಿಕೆ, ಬರ್ನಾರ್ಡನ ಶಾಂತಸ್ವಭಾವ— ಇವೆಲ್ಲವೂ ಆ ಸ್ವಗತಗಳಲ್ಲಿ ಮೂಡಿ ಬಂದಿವೆ. ಅದಲ್ಲದೆ ತಮ್ಮ ಸ್ನೇಹಿತರ ವಿಷಯಗಳ ಬಗ್ಗೆಯೂ ಈ ಪಾತ್ರಗಳು ಮಾತನಾಡುವುದರಿಂದ ಅವರ ವಿಷಯವನ್ನೂ ನಾವು ತಿಳಿಯುತ್ತೇವೆ. ಆದರೆ ನಾವು ಪಾತ್ರಗಳನ್ನು ಹೀಗೆ ಸಂಪೂರ್ಣವಾಗಿ ಕಂಡರೂ ಅವು ಜೀವಂತವೆನಿಸುವುದಿಲ್ಲ, ಎಲ್ಲವೂ ಕೃತಕವೆನಿಸುತ್ತವೆ. ಪಾತ್ರಗಳು ತಮ್ಮದೇ ಆದ ಸ್ವಾಭಾವಿಕ ರೀತಿಯಲ್ಲಿ ಮಾತನಾಡದೆ, ಕಾದಂಬರಿಕಾರಳು ಅವರಿಗಾಗಿ ಸಿದ್ಧಪಡಿಸಿದ ಭಾಷೆಯಲ್ಲಿ ಮಾತನಾಡಿದಂತಿದೆ. ಹೊಸ ತಂತ್ರದ ಅತಿರೇಕದಿಂದ ಮೂಡುವ ಎಲ್ಲ ದೋಷಗಳನ್ನು ನಾವು ಇಲ್ಲಿ ಕಾಣಬಹುದು.

ಈ ಕಾದಂಬರಿಯ ಮತ್ತೊಂದು ಮುಹತ್ತ್ವದ ಲಕ್ಷಣವೆಂದರೆ ಸಂಕೇತಗಳ ಕಲಾತ್ಮಕವಾದ ಉಸಯೋಗ. ಕಾದಂಬರಿಯು ಒಂದು ಬೆಳಗಿನ ವರ್ಣನೆಯೊಡನೆ ಆರಂಭವಾಗುತ್ತದೆ. ಸೂರ್ಯುನ್, ನೆವಿಲ್ ಮತ್ತು ಅವರ ಸಂಗಡಿಗರು ಇರುವ ಮನೆಯು ಸಮುದ್ರದ ತೀರದಲ್ಲಿ ಇರುತ್ತದೆ. ಬೆಳಗನ್ನು ವರ್ಣಿಸುವಾಗ ತೆರೆಗಳು ಮುಂಜಾವಿನ ಮಂದ-ಗಾಳಿಯಲ್ಲಿ ನಿರ್ಮಾಣವಾಗುವ ರೀತಿಯನ್ನು ಬಣ್ಣಿಸಲಾಗಿದೆ. ಸಮುದ್ರದಲ್ಲಿಯ ತೆರೆಗಳು ಕತೆಯಲ್ಲಿ ಬರುವ ಆರು ಮಕ್ಕಳ ಜೀವನದ ಸಂಕೇತವಾಗಿವೆ. ಈ ಮಕ್ಕಳ ಜೀವನದ ಬೇರೆ ಬೇರೆ ಪ್ರಕರಣಗಳನ್ನು ಬಣ್ಣಿಸುವ ಮೊದಲು ಪ್ರತಿಸಲ ವ್ಹರ್ಜಿನಿಯಾ ವೂಲ್ಫಳು ಸಮುದ್ರದ ತೆರೆಗಳನ್ನು ಬಣ್ಣಿಸುತ್ತಾಳೆ. ಉದಾ: ಮಕ್ಕಳು ಮನೆಯನ್ನು ಬಿಟ್ಟು ಹೋಗುವಾಗ "ತೆರೆಗಳು ಅದೇ ಮೇಲೆ ಮೇಲೆ ಬರಲು ಹವಣಿಸುತ್ತಿದ್ದುವು" ಎಂಬ ಅರ್ಥದ ಉತ್ತಮ ವರ್ಣನೆಯು ಬರುತ್ತದೆ. ಪುಸ್ತಕದ ಕೊನೆಗೆ "ತೆರೆಗಳು ದಂಡೆಗೆ ಬಂದು ಅಪ್ಪಳಿಸಿದುವು" ಎಂಬ ವಾಕ್ಯವನ್ನು ಕೂಡಲಾಗಿದೆ. "ತೆರೆಗಳು" ಎಂಬ ಕಾದಂಬರಿಯ ತಿರೋನಾಮವೂ ತುಂಬ ಸಮರ್ಪಕವೆನಿಸುತ್ತದೆ.

ಮನುಷ್ಯನ ಪ್ರಜ್ಞೆಯು ಹೇಗೆ ಬೆಳೆಯುತ್ತ ಹೋಗುತ್ತದೆ ಎಂಬುದನ್ನು ಆರು ಪಾತ್ರಗಳ ಒಂದೇ ತರದ ವಾತಾವರಣದಲ್ಲಿ ಬೆಳೆಯುತ್ತಿರುವುದನ್ನು ತೋರಿಸಿ ವ್ಹರ್ಜಿನಿಯಾ ವೂಲ್ಫಳು ನಮಗೆ ತೋರಿಸಿದ್ದಾಳೆ. ಅವಳ ಕಲೆಯು ಇಲ್ಲಿ ಅತ್ಯಂತ ಸೂಕ್ಷ್ಮವಾಗಿದೆ.

"ತೆರೆಗಳು" ಅನಂತರದ ಕಾದಂಬರಿಯಾದ "ವರ್ಷಗಳು" (The years 1937) ಅಷ್ಟು ಮುಹತ್ತ್ವದ್ದಲ್ಲ. 'ಪಾರ್ಟಿಜರ್' ಎಂಬ ಕುಟುಂಬದ ಜೀವನವನ್ನು ೧೮೪೦ ರಿಂದ ವರ್ತಮಾನ ಕಾಲದ ವರೆಗೆ ಚಿತ್ರಿಸಲಾಗಿದೆ. ವ್ಹರ್ಜಿನಿಯಾ ವೂಲ್ಫಳು ತನ್ನ ಕಾಲದ ಲಂಡನ್ ನಗರದ ಜೀವನವನ್ನು ಚೆನ್ನಾಗಿ ಚಿತ್ರಿಸಿದ್ದಾಳೆ.

ಅವಳ ಕೊನೆಯ ಕಾದಂಬರಿಯಾದ "ಸಂಧಿಗಳ ನಡುವೆ" (Between the Acts) ಎಂಬುದನ್ನು ಅವಳ ಮರಣದನಂತರ ಪ್ರಕಟಿಸಲಾಯಿತು (೧೯೪೧). ಇಂಗ್ಲಂಡಿನಲ್ಲಿ ವರ್ಷಾನುವರ್ಷಗಳಿಂದ ನಡೆದು ಬಂದ ಜನಜೀವನವನ್ನು ಬಣ್ಣಿಸುವುದೇ ಈ ಕಾದಂಬರಿಯ ಮುಖ್ಯ ಉದ್ದೇಶವಾಗಿದೆ. 'ಪಾಂಇಟ್ಸ್‌ಹಾಲ್' ಎಂಬ ಲಿಲಿವ್ಹರ್ ಕುಟುಂಬದ ಮನೆಯಲ್ಲಿ ಒಂದು ಸಮಾರಂಭವು ನಡೆದು, ಆ ಕಾಲಕ್ಕೆ ಗೀತನಾಟಕವೊಂದನ್ನು ಆಡಲಾಗುತ್ತದೆ. ಇಂಗ್ಲಂಡಿನ ನಾಗರಿಕತೆಯು ಹೇಗೆ ಬೆಳೆದು ಬಂದಿತು ಎಂಬುದನ್ನು ಇಬರಲ್ಲಿ ಬಣ್ಣಿಸಲಾಗಿದೆ.

ಮೇಲೆ ಉಲ್ಲೇಖಿಸಿದ ಕಾದಂಬರಿಗಳನ್ನಲ್ಲದೆ ಇನ್ನೂ ಹಲವಾರು ವಿಚಾರಾತ್ಮಕ ಮತ್ತು ವಿಮರ್ಶಾತ್ಮಕ ಪ್ರಬಂಧಗಳನ್ನು ಅವಳು ಬರೆದಳು. ವಿಮರ್ಶಾತ್ಮಕ ಕೃತಿಗಳಲ್ಲಿ ಬೇರೆ ಬೇರೆ ಲೇಖಕರ ವಿಷಯದಲ್ಲಿ ತನಗೆ ಹೊಳೆದ ವಿಚಾರಗಳನ್ನು ಅವಳು ವ್ಯಕ್ತಮಾಡಿದ್ದಾಳೆ. ಉಳಿದ ಲೇಖನಗಳಲ್ಲಿ "ಸ್ವಂತದ ಕೋಣೆ" (A Room of onels own) ಮತ್ತು "ಮೂರು ಕಾಸು" (Three by mined) ಮಹತ್ತ್ವದ ಕೃತಿಗಳು.

"ಸ್ವಂತದ ಕೋಣೆ" ಅವಳು ಹೆಂಗುಸರ ಸಭೆಯೊಂದನ್ನು ಉದ್ದೇಶಿಸಿ ಕೊಟ್ಟ ಭಾಷಣವು. 'ಮಹಿಳೆಯರ ಉನ್ನತಿಯು ಎಲ್ಲ ದೃಷ್ಟಿಯಿಂದಲೂ ಆಗಬೇಕು' ಎಂದು ವ್ಹರ್ಜಿನಿಯಾ ವೂಲ್ಫಳಿಗೆ ತೀವ್ರವಾಗಿ ಅನಿಸುತ್ತಿತ್ತು. ಯಾವ ದೇಶದಲ್ಲಿಯೂ, ಯಾವ ಕಾಲದಲ್ಲಿಯೂ ಹೆಂಗಸರು ಗಂಡಸರಿಗಿಂತ ಕಡಿಮೆಯಿಲ್ಲ. ಆವರಿಂದ ನಾಗರಿಕತೆಯ ಬೆಳೆವಣಿಗೆಗೆ ಸಂಸ್ಕೃತಿಯ ಅಭಿವೃದ್ಧಿಗೆ ಹೆಚ್ಚು ಪ್ರಯೋಜನವಾಗದಿದ್ದರೆ, ಅದಕ್ಕೆ ಅವರು ಇದ್ದ ಸಮಾಜವೇ ಕಾರಣ. ಹೆಂಗುಸರಿಗೆ ಮುಂಜೆ ಬರಲು ಸಾಕಷ್ಟು ಅವಕಾಶ ದೊರೆತಿಲ್ಲ. ಆದುದರಿಂದ ಇನ್ನು ಮುಂದೆಯಾದರೂ ಎಲ್ಲ ಹೆಂಗುಸರಿಗೆ ರಾಜಕೀಯ ಸ್ವಾತಂತ್ರ್ಯಕ್ಕಿಂತಲೂ ಸಾಂಸ್ಕೃತಿಕ ಸ್ವಾತಂತ್ರ್ಯವು ಸಿಕ್ಕಬೇಕು—ಎಂಬ ಅಭಿಪ್ರಾಯವನ್ನು ವ್ಯಕ್ತಮಾಡಿದಳು.

"ಸ್ವಂತದ ಕೋಣೆ" ಪುಸ್ತಕದಲ್ಲಿ ಹೆಂಗುಸರ ಉನ್ನತಿಯ ಸಮಸ್ಯೆಯನ್ನು ಶಾಂತರೀತಿಯಿಂದ ಗಮನಿಸಿದರೆ "ಮೂರು ಕಾಸು" ಎಂಬುದರಲ್ಲಿ ಅವಳು ತುಂಬ ಉಗ್ರವಾದಂತೆ ತೋರುತ್ತದೆ. ಒಂದು ಸಂಸ್ಥೆಯ ಚಾಲಕನು ಜಾಗತಿಕ ಯುದ್ಧವನ್ನು ದೂರ ಮಾಡಲು ಮತ್ತು ಸಂಸ್ಕೃತಿಯನ್ನು ಕಾಪಾಡಿಕೊಳ್ಳಲು ನಡೆಸಿದ ಚಟುವಟಿಕೆಗಳಿಗಾಗಿ ಹಣವನ್ನು ಕೇಳಿದಾಗ ಅದಕ್ಕೆ ಉತ್ತರವೆಂದು ಈ ಪ್ರಬಂಧಗಳನ್ನು ಅವಳು ಬರೆದಳು. ಗಂಡುಸೇ ಸೂತ್ರಧಾರನಾದ ಈ ನಾಗರಿಕತೆಯಲ್ಲಿ ಯುದ್ಧಗಳು ಆದರೆ ಆಶ್ಚರ್ಯವಿಲ್ಲ. ಯುದ್ಧಗಳನ್ನು ದೂರವಾಗಿಸಲು ಒಂದು ಮಾರ್ಗವೆಂದರೆ ಹೆಂಗುಸರಿಗೂ ಶಿಕ್ಷಣವನ್ನು ಕೊಟ್ಟು ಮುಂದೆ ತಂದು ಎಲ್ಲ ಚಟುವಟಿಕೆಗಳಲ್ಲಿಯೂ ಭಾಗವನ್ನು ವಹಿಸುವಂತೆ ಮಾಡುವುದು. ಪ್ರಬಂಧದ ಉದ್ದಕ್ಕೂ ಹೆಂಗಸಿಗೆ ಮುಂದೆ ಬರಲು ಸಾಕಷ್ಟು ಅವಕಾಶ ದೊರೆಯುತ್ತಿಲ್ಲ ಎಂಬುದನ್ನು ಎತ್ತಿ ಎತ್ತಿ ಹೇಳಲಾಗಿದೆ. ವ್ಹರ್ಜಿನಿಯಾ ವೂಲ್ಫಳಿಗೆ ತಾನೇನೋ ತುಂಬ ಸುದೈವಿಯಾದುದರಿಂದ ಎಲ್ಲ ತರದ ಅವಕಾಶಗಳೂ ದೊರೆತಿವೆ; ಆದರೆ ತನ್ನ ಸೋದರಿಯರೇ ಆದ—ಸಮಾಜದಲ್ಲಿಯ ಹಲವಾರು ಮಹಿಳೆಯರಿಗೆ ಈ ಅವಕಾಶವು ದೊರೆತಿಲ್ಲ— ಎಂಬುದರ ಅರಿವು ಕ್ಷಣಕ್ಷಣಕ್ಕೂ ಆಗುತ್ತಿತ್ತು.

ಹೀಗೆ ವ್ಹರ್ಜಿನಿಯಾ ವೂಲ್ಫಳ ಕೃತಿಗಳು ಅನೇಕವಾಗಿವೆ. ಅವಳ ಎಲ್ಲ ಕೃತಿಗಳಲ್ಲಿಯೂ ಕಾಣುವುದು ಅವಳ ಸಾಹಿತ್ಯದಲ್ಲಿಯ ಆಸಕ್ತಿ. ಕಾದಂಬರಿಯೇ ಆಗಲಿ, ಪ್ರಬಂಧವೇ ಆಗಲಿ, ವ್ಹರ್ಜಿನಿಯಾ ವೂಲ್ಫಳು, ಹಾರ್ದಿಕವಾಗಿ, ಶ್ರದ್ಧೆಯಿಂದ ಬರೆದಳು. ಹೊಸ ಮಾದರಿಯ ಕಾದಂಬರಿ ಅಥವಾ ನವ-ಕಾದಂಬರಿಯ ನಿರ್ಮಾಣದಲ್ಲಿ ವ್ಹರ್ಜಿನಿಯಾ ವೂಲ್ಫಳ ಹೆಸರು ಗಣ್ಯವಾಗಿದೆ.

ಇಷ್ಟು ಸಿದ್ಧಿಯನ್ನು ಪಡೆದ ವ್ಹರ್ಜಿನಿಯಾ ವೂಲ್ಫಳ ಜೀವನವು ಸಂಪನ್ನವಾಗಿತ್ತು, ಸಫಲವಾಗಿತ್ತು, ಅವಳ ಸಾಹಿತ್ಯೋಪಾಸನೆಯು ಸಾಕ್ಷಾತ್ಕಾರ ಕಂಡಿತ್ತು ಎಂದರೆ ಅದು ಅತಿಶಯೋಕ್ತಿಯಲ್ಲ! ಮರಣದ ಕಾಲಕ್ಕೆ ಅವಳು ಇಂಗ್ಲಿಷ್ ಸಾಹಿತ್ಯದ ಆಗಸದಲ್ಲಿ ಬೆಳಗುತ್ತಿದ್ದ ತೇಜಸ್ವಿ ತಾರೆಯಾಗಿದ್ದಳು. ಆದರೂ ಅವಳ ಬಾಳು ಅತೃಪ್ತವಾದ, ಅಸಮಾಧಾನದ ಬಾಳಾಗಿತ್ತು. ಬಾಹ್ಯದ ಅವಳ ಜೀವನ ಸಾಹಿತ್ಯೋಪಾಸನೆಯಲ್ಲಿ ಹೆಚ್ಚು ಹೆಚ್ಚು ತಲ್ಲೀನವಾದಂತೆ, ಅವಳ ಅಂತರಾಳವೆಲ್ಲ, ಯಾವುದೋ ಅತೃಪ್ತತೆಯ, ಅಸಮಾಧಾನದ ಹೊಗೆಯಿಂದ ಉದ್ವಿಗ್ನಗೊಳ್ಳುತ್ತಿತ್ತು; ಸಾಹಿತ್ಯಸಿದ್ಧಿಯ ಮೆಟ್ಟಿಲುಗಳನ್ನು ಲೀಲಾಜಾಲವಾಗಿ ಅವಳು ಏರಿದಂತೆಲ್ಲ, "ಬಾಳೆಲ್ಲ ಭಣಭಣಾ—ಏನಿದ್ದರೇನು?" ಎಂಬ ಅಂತರಾಳದ ತುಮುಲ ಅವಳನ್ನು ಹೊಯ್ದಾಡಿಸಿದಂತಿದೆ; ಲಿಓನಾರ್ಡ್ ವೂಲ್ಫನಂತಹ ಪ್ರತಿಭಾವಂತ, ಅಚ್ಚುಮೆಚ್ಚಿನ ಬಾಳಸಂಗಾತಿಯನ್ನು ಪಡೆದುದು ಅವಳ ಸುದೈವವಾದರೂ, ಮಕ್ಕಳನ್ನಾಡಿಸುವ, ಮಕ್ಕಳ ನಗೆಯನ್ನು ಕಾಣುವ ಭಾಗ್ಯ ವ್ಹರ್ಜಿನಿಯಾ ಕಾಣಲಿಲ್ಲ; ಸಾಲದೋ ಎಂಬಂತೆ, ಅವಳ ದೇಹಾರೋಗ್ಯವು ಹೇಳುವಂತಹದಿರಲಿಲ್ಲ, ಅವಳ ಮನಸ್ಸಾದರೋ ಮುಳ್ಳಿನ ಮೊನೆಯ ಹಾಗೆ ನಾಜೂಕಾಗಿತ್ತು. ಅವಳ ದೈಹಿಕ ಆರೋಗ್ಯ ಹದಗೆಟ್ಟಾಗ (ಹಾಗೆ ಮೇಲಿಂದಮೇಲೆ ಆಗುತ್ತಿತ್ತು) ಅವಳ ಮನಸ್ಸು ಅದರಿಂದಾಗಿ ಕಳವಳಗೊಂಡಾಗ, ಅವಳು ಪಟ್ಟ ಪಾಡು ಬಣ್ಣಿಸಲಸದಳ! ಆಗ ಅವಳು ಏನನ್ನೂ ಮಾಡಲಾರದವಳಾಗಿ, ಕಳವಳಗೊಳ್ಳುತ್ತಿದ್ದಳು. "Only the thought of people suffering more than I do at all consoles me" (ನನಗಿಂತಲೂ ಹೆಚ್ಚು ವೇದನೆ ಪಡುವ ಜನರನ್ನು ನೆನೆದಾಗ ಮಾತ್ರ ನನಗೆ ಸಮಾಧಾನವಾಗುತ್ತದೆ.) ಎಂದು ಅವಳೇ ತನ್ನ ದಿನಚರಿಯಲ್ಲಿ ಬರೆದಿದ್ದಾಳೆ.

ವ್ಹರ್ಜಿನಿಯಾಳ ಮನಸ್ಸು ನೋವು-ನಲಿವುಗಳ ತೂಗುಯ್ಯಾಲೆಯಾಡದ ದಿನವಿರಲಿಲ್ಲ. ಕೋಮಲವಾದ ಅವಳ ಮನಸ್ಸಿಗೆ ಅವಳ ಕೃತಿಗಳ ಟೀಕೆಯನ್ನು ಸಹಿಸುವುದು ಆಗುತ್ತಿರಲಿಲ್ಲ. ತನ್ನ ಬರೆಹದಲ್ಲಿ, ತನ್ನ ಕೃತುಶಕ್ತಿಯಲ್ಲ ಅವಳಿಗೇ ಆಗಾಗ ವಿಶ್ವಾಸವೇ ಹಾರುತ್ತಿತ್ತು. ಅವಳ ಮೊದಲನೇ ಕಾದಂಬರಿಯು ಬರೆದು ಮುಗಿದಾಗ, ಅವಳ ದಿನಚರಿಯಲ್ಲಿ ಅವಳು ತನ್ನನ್ನೇ ಕೇಳಿದ್ದಳು: "Is the time comming

when I can endure to read my own writing in print without blushing, shivernig of wishing to take over?" (ನಾನು ನಾಚಿಕೆಪಡದೆ ಮೈಯನ್ನೆಲ್ಲ ನಡುಗಿಸದೆ, ನನ್ನ ಪುಸ್ತಕವನ್ನು ಓದುವ ಕಾಲವು ಎಂದಾದರೂ ಬರಬಹುದೇ?) ಈ ಭಾವನೆಯು ಅವಳಲ್ಲಿ ಮೇಲಿಂದಮೇಲೆ ಮೂಡುತ್ತಿತ್ತು.

ಹಾಗೆಂದು ಈ ಕೋಮಲ ಮನಸ್ಸು ಸಾಹಿತ್ಯಸೃಷ್ಟಿಯಲ್ಲಿ ಸುಖವನ್ನು ಕಾಣಲಿಲ್ಲವೆಂದಲ್ಲ! ಅವಳ ಗಂಡ ಲಿಓನಾರ್ಡನಲ್ಲಿ ಅವಳಿಗೆ ಎಲ್ಲಿಲ್ಲದ ಶ್ರದ್ಧೆ! ಅವನ ಸಹೃದಯತೆ, ಪ್ರೋತ್ಸಾಹ ಹಾಗೂ ಸಹಕಾರ ಇವುಗಳಿಂದ ಅವಳ ಚೇತನ ಚಿಗುರುತ್ತಿತ್ತು, ತನ್ನೆಲ್ಲ ದುರ್ಬಲತೆಯನ್ನು ಮರೆಯುತ್ತಿತ್ತು, ಅಂತೆಯೇ ಸಕ್ರಿಯವಾಗುತ್ತಿತ್ತು. ಸಾಹಿತ್ಯಸೃಷ್ಟಿಯಲ್ಲಿ ತಲ್ಲೀನವಾಗುವುದೆಂದರೆ ಅವಳಿಗೆ ಎಣೆಯಿಲ್ಲದ, ಎಲ್ಲಿಲ್ಲದ ಆನಂದ. ಆಗ, ತಾನೇ ತಾನಾಗಿ ಅವಳ ಚೇತನ ಆನಂದದ ಸಾಮ್ರಾಜ್ಯದಲ್ಲಿ ವಿಹರಿಸುತ್ತಿತ್ತು; ಯಾವ ನೋವು, ಯಾವ ಕೊರತೆ ಆಗ ಅವಳ ಚೇತನವನ್ನು ಸೆಳೆದೀತು? 'ಮಿಸೆಸ್ ಡೆಲೊವೆ' ಎಂಬ ಕಾದಂಬರಿಯನ್ನು ಬರೆಯುತ್ತಿದ್ದಾಗ ಅವಳು ತನ್ನ ದಿನಚರಿಯಲ್ಲಿ ಹೇಳುತ್ತಾಳೆ: "It seems to leave me plunged in the deepest state of my mind. I can write & write & write now: the happiest feeling in the world." (ಆ ಕೆಲಸವು [ಕಾದಂಬರಿಯನ್ನು ಬರೆಯುವ ಕೆಲಸವು) ನನ್ನನ್ನು ನನ್ನ ಮನಸ್ಸಿನ ತಳದಲ್ಲಿ ಮುಳುಗಿಸಿ ಬಿಟ್ಟಂತಿದೆ. ಈಗ ನಾನು ಅಂತವಿಲ್ಲದೆ ಬರೆಯಬಲ್ಲೆ—ಆ ಜಗತ್ತಿನಲ್ಲಿಯೇ ಅತ್ಯಾನಂದಕರವಾದ ಭಾವನೆ ಅದು.)

ಈ ಮನಸ್ಸಿನ ಹೊಯ್ದಾಟದಲ್ಲಿಯೇ, ಈ ಅಂತರಾಳದ ಉದ್ವಿಗ್ನತೆಯಲ್ಲಿಯೇ ಅವಳನ್ನು ಹುಚ್ಚು ಆಗಾಗ ಕವಿಯುತ್ತಿತ್ತು. ಯಾವುದೋ ಕಾಣದ ಕೈಯನ್ನು ಕಂಡು ಬೆದರಿದಂತಿತ್ತು ಅವಳ ಜೀವ. ಆ ಕಾಣದ ಕೈಯನ್ನು ಮತ್ತೆ ಮತ್ತೆ ಕಂಡು, ಅವಳ ಜೀವ ಭಯಗ್ರಸ್ತವಾಯಿತು. ಹಾಗೆ ಭಯವಾವಾಗೆಲ್ಲ ಅವಳು ಹುಚ್ಚಿಯೆನಿಸಿಕೊಳ್ಳುತ್ತಿದ್ದಳು. ಮೊದಲನೆಯ ಮಹಾಯುದ್ಧದ ಕಾಲದಲ್ಲಿ, ಮೊದಲಬಾರಿಗೆ ಹುಚ್ಚು ಅವಳನ್ನು ಬಲುದಿನ ಕಾಡಿತ್ತು. ಆದರೂ ಅವಳು ಮತ್ತೆ ಗುಣ ಹೊಂದಿದಳು. ಹುಚ್ಚಿನ ಭಯ ಮಾತ್ರ ಭೂತದಂತೆ ಅವಳನ್ನು ಬೆನ್ನುಹತ್ತಿತ್ತು. ಈ ಭಯವನ್ನು ನಾಶಗೊಳಿಸಲು ಅವಳು ಎಲ್ಲ ಪ್ರಯತ್ನವನ್ನೂ ಮಾಡಿದಳು. ಆದರೆ ಅದು ಸಫಲವಾಗಲಿಲ್ಲ. ೧೯೪೧ ಮಾರ್ಚ್ ತಿಂಗಳಲ್ಲಿ ವ್ಹರ್ಜಿನಿಯಾ ತನ್ನ ಕೊನೆಯ ಕಾದಂಬರಿಯನ್ನು ಬರೆದು ಮುಗಿಸಿದಳು. ಎಂದಿನಂತೆ ಅವಳ ಮನಸ್ಸಿನಲ್ಲಿ ಈ ಹೊಸ ಕೃತಿಯ ಬಗ್ಗೆ ಅತಿಶಯ ಅಸಮಾಧಾನವು ಉಂಟಾಯಿತು. ಈ ಅಸಮಾಧಾನದೊಡನೆ ಮೊದಲಿನ ಹುಚ್ಚಿನ ಭಯವು ಹೆಚ್ಚಾಗಹತ್ತಿತು. ಇದೇ ಸಮಯಕ್ಕೆ ಎರಡನೆಯ ಮಹಾಯುದ್ಧದ ಅಬ್ಬರವು ಲಂಡನ್ ನಗರಕ್ಕೆ ಬಂದು ತಲ್ಪಿತು. ಲಂಡನ್ ಬೀದಿಗಳಲ್ಲಿ ಬಾಂಬಿನ ಸುರಿಮಳೆಗೈದಾಗ, ವ್ಹರ್ಜಿನಿಯಾಳ ಲಂಡನ್ ಮನೆಯು ಸುಟ್ಟು ಬೂದಿಯಾಯಿತು. ಆ ಸುಟ್ಟ ಮನೆಯ ಬೂದಿಯಲ್ಲಿ, ಅಸಮಾಧಾನದಿಂದ ಬಳಲುತ್ತಿದ್ದ ವ್ಹರ್ಜಿನಿಯಾ ವೂಲ್ಫಳು ಆ ಕಾಣದ ಕೈಯನ್ನು ಮತ್ತೆ ಕಂಡಂತಿದೆ; ಕಂಡು ಬೆದರಿದಂತಿದೆ. ಲಂಡನ್ ನಗರವನ್ನು ಬಿಟ್ಟು ಅವಳು ತನ್ನ ಗಂಡನ ಜತೆಯಲ್ಲಿ ಹಳ್ಳಿಯ ಮನೆಗೆ ಉಳಿಯಲು ಹೋದಳು. ಆದರೂ ಪ್ರಶ್ನೆಯ ಚಿಹ್ನೆಯಂತೆ ಆ ಭಯ ಮತ್ತೆ ಅವಳಲ್ಲಿ ಮೂಡಿತು. ತನಗೆ ಮತ್ತೆ ಹುಚ್ಚು ಹಿಡಿಯಲಿದೆ—ಎಂದು ಅವಳಿಗೆ ಎನಿಸುತ್ತಿತ್ತು. ಹಾಗೆ ಹಿಡಿಯಗೊಡಬಾರದು ಎಂದು ಅವಳೆಷ್ಟೇ ನಿರ್ಧರಿಸಿದರೂ ಕೊನೆಗೂ ತಾನು ಹುಚ್ಚಿಯಾಗಲಿದ್ದೇನೆ ಎಂಬುದು ಅವಳಿಗೆ ಖಚಿತವಾದಂತಿದೆ. ೧೯೪೧ ಮಾರ್ಚ್ ತಿಂಗಳ ಒಂದು ದಿನ ಮುಂಜಾನೆ ತಂಗಾಳಿಗೆ ಮೈಯೊಡ್ಡಿ ಎಂದಿನಂತೆ ತಿರುಗಾದಲು ಒಬ್ಬಳೇ ಹೋದ ವ್ಹರ್ಜಿನಿಯಾ ಮತ್ತೆ ಮನೆ ಸೇರಲಿಲ್ಲ.

ಆ ಹಳ್ಳಿಯ ಹೊರವಲಯದಲ್ಲಿದ್ದ ತೆರೆಯ ದಡದಲ್ಲಿ ಅವಳು ಹಿಡಿದ ಕೈಗೋಲು ದೊರೆಯಿತು. ಮನೆಯಲ್ಲಿ ಅಂದು ಅವಳು ತನ್ನ ಗಂಡನಿಗೆ ಬರೆದಿಟ್ಟ ಕಾಗದವೂ ದೊರೆಯಿತು:

"I feel certain that I am going mad again, I feel we can't go through another of those terible times. And I shan't recover this time." (ನನಗೆ ಮತ್ತೆ ಬೇಗನೆ ಹುಚ್ಚು ಹಿಡಿಯುತ್ತಿದೆ ಎಂದು ಖಂಡಿತವಾಗಿ ಅನಿಸುತ್ತಿದೆ. ಮತ್ತೆ ಆ ಅನುಭವನವನ್ನು ಎದುರಿಸುವುದು ಅಸಾಧ್ಯವೆನಿಸುತ್ತದೆ. ಈಗ ನನಗೆ ಮತ್ತೆ ಹುಚ್ಚು ಹಿಡಿದರೆ ಗುಣವಾಗಲಾರದು—.)

ವ್ಹರ್ಜಿನಿಯಾಳ ಮರಣವು ಆಯುಷ್ಯ ತುಂಬಿದ ಮರಣವಲ್ಲ; ಅವಳ ಮರಣವು ಅಕಾಲಿಕವಾಗಿದೆ; ಅವಳ ಮರಣದ ಬಗೆ ವಿಚಿತ್ರವಾದಂತೆ ಸಂದಿಗ್ಧವೂ ಆಗಿದೆ. ಆದರೂ (ಜೀವನವೆಂದರೆ ಪ್ರಜ್ಞೆಯ ಹೊಳೆ — ಆದರ ನಿರೂಪಣೆಯೇ ಕಲೆ' ಎಂದು ಕೃತಿಗಳಲ್ಲಿ ಸಾರಿದ ಕಲಾವಿದೆ ವ್ಹರ್ಜಿನಿಯಾ, ಹರಿಯುವ ನೀರಿನಲ್ಲಿಯೇ ತನ್ನ ಜೀವನವನ್ನು ಬಲಿಗೊಟ್ಟದು ದುರಂತವಾದರೂ ಅರ್ಥಪೂರ್ಣವಾಗಿದೆ.

ಅವಳ ಜೀವನವನ್ನೇ ಹಿಂಡಿದ ಅವಳ ಹುಚ್ಚು ಸುಪ್ರಸಿದ್ಧ ಫ್ರೆಂಚ್ ಕತೆಗಾರನಾದ ಗಾಯ್. ದಿ. ಮೋಪಾಸಾನ ದುರಂತ ಜೀವನವನ್ನು ನಮಗೆ ನೆನಪು ಮಾಡಿಕೊಟ್ಟಂತೆ, ಅವಳ ದುರಂತವಾದ ಆತ್ಮಬಲಿಯ ಕತೆ ಸುಪ್ರಸಿದ್ಧ ಜರ್ಮನ್ ಸಾಹಿತಿ ಸ್ಟೀಫನ್ ಜ್ವೈಗನ ದುರಂತ ಅವಸಾನದ ನೆನಪನ್ನು ನಮಗೆ ಮಾಡಿಕೊಡುತ್ತದೆ.

● ಮಂಜುಲಾ ●

(ಸಣ್ಣಕಥೆ)

ಶ್ರೀ. ವರಗಿರಿ ಮಾರ್ಕಾಂಡರಾಯರು ಎಂ. ಎ., ಬಿ. ಟಿ. ಧಾರವಾಡ

ಯೋಗಯುಕ್ತನಾಗಿ ಬಾಳಲು ಬಾರದೆ ಮನುಷ್ಯ ತಾನೂ ಕೆಡುತ್ತಾನೆ; ಸಮಾಜವನ್ನೂ ಕೆಡಿಸುತ್ತಾನೆ ಇದ್ದಾಗ ಒಂದು ತುತ್ತು ಅನ್ನಕೊಡದೆ ಕೊಂದು, ಸತ್ತಹೆಣದ ಸಂಸ್ಕಾರಕ್ಕೆ ಕೈತುಂಬ ಹಣ ವೆಚ್ಚಮಾಡುವ ರೀತಿ ಬುದ್ಧಿವಂತಿಕೆಯೆನಿಸೀತೆ ?

ಬೀದಿಯ ಆ ಬದಿಗೆ ರಂಗರಾಯರ ಭವ್ಯವಾದ ಮಂದಿರ; ಈ ಬದಿಗೆ ಶಂಕರದೇವರ ಜೀರ್ಣವಾದ ದೇವಾಲಯ. ನೇಸರನ್ನೇ ಸೆರೆ ಹಿಡಿದು ನೇತು ಬಿಟ್ಟಂತಿತ್ತು. ರಂಗರಾಯರ ನಡುಮನೆಯ ದೀಪ; ಈ ಗುಡಿಯಲ್ಲಿ ಎಲ್ಲಿಯೂ ನೈದಾಳಿ ನಿಂತ ಕತ್ತಲೆಯು. ಹಿಂದೆ ಗರ್ಭಗುಡಿಯಲ್ಲಿ ಕುಡಿಯೊಡೆದು ಮಿಸುಗುದೀವಿಗೆಯೊಂದು ಜೀವ ಹಿಡಿದಿತ್ತು. ಆ ಮನೆಯ ಒಳಕೋಣೆಯೊಂದರಲ್ಲಿ; ರಂಗರಾಯರು ಅದೇ ತಾನೆ ಕೊಂಡು ತಂದ ಅಕ್ಕಿಯ ಚೀಲವನ್ನು ಸಂಭ್ರಮದಿಂದ ಅಳವಡಿಸಿ ಇಡುತ್ತಲಿದ್ದರು. ಹೀಗೆ ಮಾಡುವಾಗ, ಅವರ ಮನ ನಾಳಿನ ಚಿಂತೆಯ ಲವಲೇಶವನ್ನೂ ಅರಿಯದೆ ನಿಶ್ಚಿಂತೆಯಲ್ಲಿ ತೇಲಾಡುತ್ತಲಿತ್ತು; ಅವರ ನಾಲಗೆ 'ತನನ' ಎನ್ನುತ್ತಲಿತ್ತು. ಗುಡಿಯ ಮೂಲೆಯೊಂದರಲ್ಲಿ ಬೇನೆಯಿಂದ ಬೆಂದು, ಹಸಿವೆಯಿಂದ ನೊಂದು, ಬರಿ ಹೊಟ್ಟೆಯ ಅರಿಬಟ್ಟೆಯ ಮುದುಕನೊಬ್ಬ ಎಲುಬಿನ ಪಂಜರಕ್ಕೆ ಹೊದಿಸಿದ ತೊಗಲಿನ ಚೀಲದಂತೆ ಬಿದ್ದಿದ್ದ; ನರಳುತ್ತಲಿದ್ದ.

ಆ ಮುದುಕ ಮೂರು ದಿನಗಳಿಂದಲೂ ಜ್ವರದಿಂದ ಬಳಲುತ್ತಿದ್ದ ನಾದ್ದರಿಂದ, ಮೂರು ದಿನ ತುತ್ತು ಅನ್ನ ಸಹ ಅವನ ಹೊಟ್ಟೆಯಲ್ಲಿ ಹೋಗಿರಲಿಲ್ಲ. ಇತನೊಬ್ಬ ಹಿಂದುಮುಂದಿಲ್ಲದ ಅನಾಥ ತಿರುಕ. ಮಧುಕರಿ ಮಾಡಿದಾಗಲೇ ಅವನ ಹೊಟ್ಟೆಗೆ, ತುಣುಕು ರೊಟ್ಟಿಯೋ, ತುತ್ತು ಅನ್ನವೋ ಉಂಟು. ಗುಡಿಯ ನೆಟ್ಟಲು ದಾಟದೆ ಮೂರು ದಿನ ಸಂದಿದ್ದುವು. ಇತ್ತಿತ್ತಲಾಗಿ ಆತನಿಗೆ ಮಧುಕರಿಯ ಬದಲು ಬಿರುಸು ನುಡಿ, ಕೊಂಕುಮಾತು, ತಾತ್ಸಾರ—ಇವೇ ಹೆಚ್ಚಾಗಿ ಸಿಗುತ್ತಿದ್ದುವಾದ್ದರಿಂದ, ಆತನಿಗೆ ಭಿಕ್ಷೆಯೆಂದರೆ ನೈ ಜುಮ್ಮೆನ್ನ ಹತ್ತಿದ್ದಿತು.

ಆದರೆ ಈ ದಿನ ಆತನ ಹಸಿವೆಯ ದಾಹ ಅಸಹನೀಯವಾಯಿತು.

ಮುದುಕ ಮೆಲ್ಲಗೆ ಎದ್ದು ಕುಳಿತ. ಆತನ ಪೊರೆ ಬಂದ ಕಣ್ಣಿಗೂ ಎದುರಿನ ಮನೆಯ ಢಾಳವಾದ ದೀವಿಗೆ— ಮಖಾಳವಾಗಿಯಾದರೂ—ಕಂಡಿತು. ಸ್ವಲ್ಪ ಧೈನಿಸಿದ; ಕಣ್ಣು ಬಡಿದ; ಅಂಗುಲದುದ್ದ ಬೆಳೆದ ಗಡ್ಡವ ಮೇಲೆ ಕೈಯಾಡಿಸಿದ. ಆತ ಬದಿಯಲ್ಲಿಯೇ ಮೂಲೆಯಲ್ಲಿ ಒರಗಿದ ಕೈಗೋಲನ್ನು ಹಿಡಿದು ಮೇಲೆದ್ದ. ತಲೆಯ ಮೇಲಿನ ಮಾಡದಲ್ಲಿ ಒಣಗಿ ಕಟಿಯಾಗಿದ್ದ ಬಟ್ಟಲ ತೆಗೆದುಕೊಂಡ. ಬಟ್ಟಲ ಹಿಡಿದ ಕೈ ಮುಂದಾಯಿತು. ಕೈಗೋಲು ಕತ್ತಲೆಯಲ್ಲಿಯೇ ಅವನಿಗೆ ದಾರಿದೋರಹತ್ತಿತ್ತು. ಅಶಕ್ತತೆಯಿಂದ ಕಂಪಿಸುತ್ತಿದ್ದ ದೇಹವನ್ನು ಹೊತ್ತ ಕಾಲುಗಳು, ತತ್ತರಿಸುತ್ತ ಕೋಲಿನ ಸುಳಹು ಹಿಡಿದು ಮುಂದೆ ಸಾಗಿದುವು. ಮುಂದಿನ ಮನೆಯ ಬಾಗಿಲ ಮೆಟ್ಟಿಲಿಗೆ ಕೈಗೋಲ ತುದಿ ಬಡಿದು 'ಕಟ್' ಎಂದಾಗ, ಆತ ಎಂದ:

" ಅಂಬಕ್ಕ ! "

ಆ ಶಬ್ದದ ಪ್ರತಿಯೊಂದು ಅಕ್ಷರವೂ ತಂಬೂರಿಯ ತಂತಿಯಂತೆ ಕಂಪಿಸಿತು. ಪ್ರತಿಯೊಂದು ಅಕ್ಷರವೂ ದೀನತೆಯಲ್ಲಿ, ಅಧೈರ್ಯದಲ್ಲಿ, ದಾಕ್ಷಿಣ್ಯದಲ್ಲಿ, ಸಂಕೋಚದಲ್ಲಿ, ತೇಲಿ ಮುಳುಗುತ್ತಿದ್ದಂತೆ ಕೇಳಿತು.

ಒಂದು ಕ್ಷಣ ಸುಮ್ಮನೆ ನಿಂತು, ಆ ಮುದುಕ ಮತ್ತೆ ಎಂದ:

" ಅಂಬಕ್ಕಾ, ಜ್ವರಾ ಬಂದಾವ. ನಾನು ಮುಂದ ಹೋಗೂ-ಹಾಂಗಿಲ್ಲ. ಒಂದು ತುತ್ತು ಅನ್ನ ಇದ್ದರ, ಹಾಕತೀರೇನರಿ ?"

ಕೋಣೆಯಲ್ಲಿದ್ದ ರಂಗರಾಯರಿಗೆ ಕೇಳಿಸಿದರೂ, ಕೇಳಿಸದವರಂತಿದ್ದರು.

ಅದೇ ತಾನೇ ಉಂಡು ಕೈಕೊಳೆದು ಉಟ್ಟ ಪರಕಾರದಿಂದಲೇ ಕೈ ಒರಸಿಕೊಳ್ಳುತ್ತಿದ್ದ ಮಂಜುಲೆ—ರಂಗರಾಯರ ಐದು ವರ್ಷದ ಹುಡುಗಿ—ಈ ದನಿಕೇಳಿ, ಕಿವಿನಿಮಿರಿ, ಚಿಗರೆಯಂತೆ ಬಾಗಿಲತ್ತ ಓಡಿ ಬಂದಳು.

" ಅವ್ವಾ, ಪಾಪ, ಮಾಧುಕರೀ ಆಚ್ಚಾರಪ್ಪ ಬಂದಾನೆ. ಜಡ್ಡು ಆಗೇದ—ಏನಾರೆ ಹಾಕೇ !" ಎಂದಳು ಮಂಜುಲೆ. ಕೋಣೆಯಿಂದ ರಂಗರಾಯರು, " ಮುಂದಕ್ಕ ಹೋಗೊ ! ಇದ್ದದ್ದೆಲ್ಲ ನಿನ್ನ ಹಡಿದಿನಾಲೂ. ರೇಶನ್ ದಿವಸದಾಗ ಮಾರಿ ಮಾರಿ ಕೆರಕೊಂಡರೂ, ಮುಕ್ಕು ಅಕ್ಕಿ ಹುಟ್ಟೂದಿಲ್ಲ. ಅಂಥಾದ್ರಾಗ ನಿನ್ನದೇನು ಕಾಟ? ವರ್ಷಾನುಗಟ್ಟಲೆ ಇದ್ದದ್ದೆಲ್ಲ ಆದ, ನಿಂದು ! ಹೋಗು ಮತ್ತೆಲ್ಲರ" ಎಂದು ಗದರಿಸಿದರು. ಅವರ ಗರ್ಜನೆಯಾದೊಡನೆ, ಅವರೂ ಹೊರಗೆ ಬಂದರು. ಅವರ ಮುಖ ರೌದ್ರಾವತಾರ ತಾಳಿತ್ತು. ಕಣ್ಣು ಕೆಂಪಾಗಿದ್ದುವು.

ಕೈಯಲ್ಲಿಯ ತಬಕದಲ್ಲಿ ಅನ್ನವನ್ನು ಹಾಕಿಕೊಂಡು ಅಡುಗೆಯ ಮನೆಯ ಹೊಸತಿಲ ವರೆಗೂ ಬಂದಿದ್ದ ಅಂಬಕ್ಕ, ಕಾವೇರಿ ನಿಂತಿದ್ದ ಗಂಡನನ್ನು ನೋಡಿ, ಹಿಂದೆ ಸರಿದರು.

" ಮನಿಯಾಗ ಅಕ್ಕಿಲ್ಲ. ಇನ್ಯಾಕ್ಕಲೆ ಬಂದು ಮಾಡು ನಿನ್ನ ದಾನ-ಧರ್ಮ" ಎಂದು ಅವರು ಹೆಂಡತಿಯ ಮೇಲೆ ಏರಿಹೋದರು.

ಮಂಜುಲೆಯ ಅರಳುಗಣ್ಣು ಕೋಣೆಯಲ್ಲಿಯ ಅಕ್ಕಿಯ ಚೀಲದ ಕಡೆಗೆ ಹೋಯಿತು. ಆಕೆಗೆ ತಂದೆಯ ಮಾತು ತಿಳಿಯಲಿಲ್ಲ. ಮುಂಜೆಯ ಕಡೆ ಮತ್ತೆ ನೋಡಿದಾಗ ಆಚಾರಪ್ಪ ಅಲ್ಲಿ ಇರಲಿಲ್ಲ. ಮಂಜುಲೆಯ ಕಣ್ಣಿನ ಅಂಚು ನೀರಿನಿಂದ ಮಿಂಚಿದುವು.

ಆಚಾರಪ್ಪ ಮತ್ತೆ ಎಲ್ಲಿಗೂ ಹೋಗಲಿಲ್ಲ. ತಿರುಗಿ ಗುಡಿಯ ಮೂಲೆಯಲ್ಲಿ ಸುರುಳಿ ಸುತ್ತಿಕೊಂಡು ಮಲಗಿದಾಗ, ಅವನ ಅಶಕ್ತತೆ, ಅಸಾಹಾಯ್ಯತೆ, ಅನಾಥತೆ ಎಲ್ಲವೂ ಒಂದೊಂದಾಗಿ ದ್ರವಣಹೊಂದಿ ಕಣ್ಣಿ ಕೊಳ್ಳವನ್ನು ತುಂಬಿದ್ದುವು.

ಸುತ್ತಲೂ ಜಗತ್ತು ಎಷ್ಟು ವಿಸ್ತಾರವಾಗಿ ಹಬ್ಬಿದರೂ, ತನ್ನ ಪಾಲಿಗೆ ಮಾತ್ರ ಕಗ್ಗತ್ತಲೆಯೊಂದೇ ಇದೆಯಲ್ಲ—ಎಂದು ಆತ ಮಿಡುಕಿದಾಗ, ಗರ್ಭಗುಡಿಯಲ್ಲಿಯ ಪಣತಿಯೂ ಶಾಂತವಾಯಿತು. ಆ ಮುದುಕ ಜಗತ್ತಿನ ಕಠಿಣಹೃದಯವನ್ನು ನೋಡಿ ತಳಮಳಿಸಿದ. 'ಸಹೃದಯತೆ, ಕೋಮಲತೆ, ಅಂತಃಕರಣ ಎಂಬುದು ಎಲ್ಲಿಯೂ ಇಲ್ಲವೆ?' ಎಂದು ನಿರಾಶೆಗೊಳ್ಳುವಾಗ, ಅಂಬಕ್ಕನ ಮಗಳು ಮಂಜುಲೆಯ ಮಾಟಾದ ಮುಖ ಅವನ ಒಳಗಣ್ಣ ಮುಂದೆ ಬಂದು ನಿಂತಿತು. ಒಂದು ಕ್ಷಣ ಹೃದಯ ಅರಳಿತು.

೨

ಮಂಜುಲೆಯೆಂದರೆ ಆಚಾರಪ್ಪನು ಬಿದ್ದು ಸಾಯುತ್ತಿದ್ದನು. ಅವಳಿಗಾದರೂ ಆಚಾರಪ್ಪನೆಂದರೆ ಬಲುಸಲುಗೆ. ಪ್ರತಿದಿನ ನಸುಕಿನಲ್ಲಿ ಆಚಾರಪ್ಪ ಅರ್ಧ ಮುಕ್ಕಾಲು ಗಂಟೆ ಸುಮಧುರವಾಗಿ ಕೊಳಲು ಬಾರಿಸುವ ರೂಢಿ. ಇಟ್ಟುಕೊಂಡಿದ್ದ. ಜಗತ್ತಿನಲ್ಲಿ ತನ್ನದೆನ್ನುವುದೆಂಬುದೇನಾದರೂ ಇದ್ದರೆ, ಅದು ಆ ಕೊಳಲು. ಕೊಳಲ ಗಾನದಲ್ಲಿ ತಾನು ಗಳಿಸಿದ ಪ್ರಾವೀಣ್ಯವೊಂದೇ ಅವನ ಸೊತ್ತು. ಕೊಳಲಿನಲ್ಲಿ ತಾನು ತಲ್ಲೀನನಾದುದೊಂದೇ ಅವನಿಗೆ ರಸನಿಮಿಷ.

ಆತನ ಕೊಳಲ ನಿನಾದ ಕೇಳಿದೊಡನೆಯೇ ಮಂಜುಲೆ ನಿದ್ದೆಯಿಂದೇಳುತ್ತಿದ್ದಳು. ಅವನೆಡೆ ಓಡಿಬಂದು, ಬದಿಯಲ್ಲಿ ಕುಳಿತು ಏಕಚಿತ್ತದಿಂದ ಆಲಿಸುತ್ತಿದ್ದಳು ಅವನೊಡನೆ ಹರಟೆ ಹೊಡೆಯುತ್ತಿದ್ದಳು. ಆತ ಅವಳಿಗೆ ಪುರಾಣದ ಕತೆಗಳನ್ನು ಹೇಳುತ್ತಿದ್ದನು. ಬೇಸರ ಬಂದಾಗ ಅವಳೊಡನೆ ಹುಡುಗನಾಗಿ ಚಿನ್ನಾಟವಾಡುತ್ತಿದ್ದನು. ಹಲವು ಸಲ ಆಕೆ ಅವನ ಹೆಗಲ ಏರಿ, ಚೆಂಡಿಕೆ ಹಿಡಿದು ಕುದುರೆಯ ಆಟ ಆಡಿದ್ದೂ ಉಂಟು.

ಆಚಾರಪ್ಪ ಇದನ್ನೆಲ್ಲ ನೆನೆದುಕೊಂಡ; ನೆನಹಿನ ಸವಿಯುಂಡ. ತಾನೂ ಎಲ್ಲರಂತೆ ಮದುವೆಯಾಗಿದ್ದರೆ? ತನಗೂ ಮಂಜಲೆಯಂತಹ ಮಗು ಇದ್ದರೆ?—ಹೀಗೆಯೇ ಏನೇನೋ ಕನಸು ಕಾಣುತ್ತಿರುವಾಗಲೇ ಅವನ ದಾಹ ಹೆಚ್ಚಾಗಿ, ಅರಳಿದ ಹೃದಯ ಮತ್ತೆ ಕಮರಿತು.

ಮರುದಿನ ಮುಂಜಾನೆ ಆಚಾರಪ್ಪನ ಕೊಳಲು ನುಡಿಯಲಿಲ್ಲ. ಮಂಜುಲೆಯೂ ಬೇಗ ಏಳಲಿಲ್ಲ. ಎಂಟರ ಸುಮಾರಿಗೆ ಹೊಂಬಿಸಿಲು ಗುಡಿಯ ಕಟ್ಟೆಯನ್ನು ಹತ್ತಿದಾಗ, ಹೊಂಬಿಸಿಲಿಗೆ ಅರಳಿದ ಗುಲಾಬಿಯಂತೆ ಮಂಜುಲೆ ಅಲ್ಲಿ ಬಂದು ನಿಂತಳು. ಹರಕು ಪಂಚೆಯೊಂದನ್ನು ಹೊದ್ದುಕೊಂಡು ಮಲಗಿದ ಆಚಾರಪ್ಪನನ್ನು ಅಲುಗಾಡಿಸಿ,

"ಏಳೋ ಆಚಾರಪ್ಪ," ಎಂದಳು. ಮಂಜುಲೆಯನ್ನು ನೋಡೊಡನೆ, ಆಚಾರಪ್ಪ ಮುಸುಕು ತೆರೆದ. ಮುಸಣದಂತಿದ್ದ ಆತನ ಮುಖದ ಮೇಲೆ ನಸುನಗೆ ಮೂಡಿತು.

"ಇವತ್ತ ಯಾಕೋ ಕೊಳಲು ಬಾರಿಸಲಿಲ್ಲಲ್ಲ?" ಎಂದು ಕೇಳಿಳಾಕೆ

"ಹೌದು ಮಂಜುಲಾ, ಜಡ್ಡು ಆಗೇಪ ನನಗ" ಎಂದನಾಕುಗ್ಗಿದ ದನಿಯಲ್ಲಿ.

"ಹೌದು, ಪಾಪ. ನನಗ ಜಡ್ಡಾದರ, ನಮ್ಮ ಅವ್ವ ಹಣ್ಣು ಹಿಂಡಿ ಕೊಡತಾಳ, ಕಾಫೀ ಮಾಡಿಕೊಡತಾಳ. ನಿಮ್ಮ ಅವ್ವ ಇಲ್ಲೇನ ಆಚಾರಪ್ಪ?"

"ಇಲ್ಲನ್ವ! ಅವ್ವನೂ ಇಲ್ಲ, ಯಾರೂ ಇಲ್ಲ."

"ಇರಬೇಕಾಗಿತ್ತು ಅಲ್ಲೇನು? ಇದ್ದರ, ಛೆಲೋ ಆಗತಿತ್ತು ಆಕಿ ನಿನಗೂ ಕಾಫೀ ಮಾಡಿಕೊಡತಿದ್ಲಳು" ಎಂದು ಮಂಜುಲೆ ಮರುಗಿದಾಗ, ಆ ಮುದುಕನ ಮ್ಲಾನವಾದ ಮುಖ ಅರಳಿತು. ಅವನ ನಿಸ್ತೇಜ ನಯನಗಳಲ್ಲಿ ಕೃತಜ್ಞತೆಯ ತೇಜ ಮೂಡಿತು.

ಆತನೆಂದ: "ಮಂಜುಲಾ ಅಪ್ಪ ಇದ್ದಾರೇನು ಮನಿಯಾಗ?"

ಆಕೆ ಕುತೂಹಲದಿಂದ ಕೇಳಿದಳು. "ಇಲ್ಲ, ಯಾಕ?"

"ಬಾಯಿ ಆರೇದ, ಸ್ವಲ್ಪು ನೀರು ತಗೊಂಡು ಬಾ, ಅವ್ವಿ!"

ಆತನ ಮಾತು ಮುಗಿದಿರಲಿಲ್ಲ. ಆಕೆ ಮನೆ ಕಂಡಿದ್ದಳು. ಮರು ಕ್ಷಣದಲ್ಲಿ ಆಕೆ ಗಿಂಡಿಯೊಂದರಲ್ಲಿ ನೀರು ತಂದಳು. ಅದರ ಜೊತೆಗೆ ಎಡಗೈಯಲ್ಲಿ ಜೋಳದ ಟಂಟೊಂದನ್ನೂ ತಂದಿದ್ದಳು. ಆಕೆ ನೀರನ್ನು ಅವನ ನಗ್ಗಿದ ತಂಬಿಗೆಯಲ್ಲಿ ಹಾಕುತ್ತ,

"ಆಚಾರಪ್ಪ, ಇವತ್ತ ಮಧ್ಯಾಹ್ನದಷ್ಟೊತ್ತಿಗೆ ನಿನ್ನ ಜಡ್ಡು ಗುಣ ಆಗತ್ತದಲ್ಲ; ಆವಾಗ ನನಗೆ ಬೆಂಡಿನದು ಭಂಡಿಮಾಡಿ ಕೊಡತೀಯಾ?"

ಎಂದು ಆಕೆ ಅವನ ಬಳಿ ದಂಟನ್ನಿಟ್ಟಳು.

ಆತ "ಆಗಲವ್ವಾ;" ಎನ್ನುವಾಗ, ಗಂಟಲು ಸಂಪೂರ್ಣವಾಗಿ ಒಣಗಿದ್ದಿತು.

ಅಷ್ಟರಲ್ಲಿ ರಂಗರಾಯರ ಧ್ವನಿ ಕೇಳಿತು. ಮಂಜುಲೆ ಗಿಂಡಿಯನ್ನು ಮುಚ್ಚಿಕೊಂಡು ಮನೆಗೆ ಓಡಿದಳು.

ಹತ್ತು ಹೊಡೆಯಿತು. ಹನ್ನೆರಡಾಯಿತು. ಅರ್ಚಕ ಬಂದು ಆಚಾರಪ್ಪನ ಕಡೆಗೆ ಒಮ್ಮೆ ದುರುದುರು ನೋಡಿದ. ಪೂಜೆ ಮುಗಿತಲೆ ತಗ್ಗಿಸಿ ಮನೆಗೆ ಸಾಗಿದ. ಜನ ಬಂದರು; ಗಂಟೆ ಬಡಿದರು; ದೇವಂಗೆ ಕೈಮುಗಿದು, ಮನೆಗೆ ಸಾಗಿದರು. ಆದರೆ ಅಲ್ಲಿಯೇ ಮೂಲೆ

ಯಲ್ಲಿ ಒಂದು ಜೀವ ಮಿಡಿಯುತ್ತದೆ, ತೊಳಲುತ್ತದೆ—ಎಂದು ಯಾರೂ ಗಣನೆಗೆ ತರಲಿಲ್ಲ.

ಕಚೇರಿಯ ಗಂಟೆ ತಾಸಿಗೊಮ್ಮೆ ಬಡಿಯುತ್ತಲೇ ಇತ್ತು.

ಮುಂದೆ ಮತ್ತೆ ರಾತ್ರಿಯೂ ಆಯಿತು.

ಆದರೂ, ಮಂಜುಳೆಯ ತಂದೆ ಇಡೀ ದಿನ ಮಂಜುಳೆಗೆ ಗುಡಿಯಲ್ಲಿ ಹೆಜ್ಜೆ ಇಡಗೊಡಲಿಲ್ಲ.

ಮರುದಿನ ಮುಂಜಾನೆ ಮಂಜುಳೆ ಬೇಗ ಎದ್ದಳು. ಆ ದಿನ ಬೇಗ ಎದ್ದದ್ದು ಆಚಾರಪ್ಪನ ಕೊಳಲ ಗಾನದಿಂದಲ್ಲ. ತನ್ನ ತಂದೆಯ ಅನಿರೀಕ್ಷಿತವಾದ ಗಡಿಬಿಡಿಯಿಂದ; ಚಟುವಟಿಕೆಯಿಂದ. ಆಕೆ ಹಾಸಿಗೆಯ ಮೇಲೆಯೇ ಕುಳಿತು, ತಂದೆಯ ಚಲನವಲನವನ್ನು ನಿರೀಕ್ಷಿಸುತ್ತಿದ್ದಳಾದರೂ, ಆಕೆಗೆ ಏನೂ ಹೊಳೆಯಲಿಲ್ಲ. ಅವರು ಅಂಗಿಯನ್ನು ತೆಗೆದಿದ್ದರು. ಹೆಗಲಮೇಲೆ ಪಂಚೆಯೊಂದನ್ನು ಹೊತ್ತಿದ್ದರು; ಹೊರಗೊಮ್ಮೆ ಒಳಗೊಮ್ಮೆ ಅವಸರದಿಂದ ಓಡಾಡುತ್ತಿದ್ದರು. ಹೆಂಡತಿಯ ಮುಂದೆ ಪೆಟ್ಟಿಗೆಯ ಕೈ ಒಗೆದು "ಒಂದು ಮೂವತ್ತು ರೂಪಾಯಿ ತೆಗೆದು ಕೊಡು" ಎಂದರು.

"ಈಗ ಯಾಕ ?" ಎಂದು ಅಂಬಕ್ಕ ಕೇಳಿದರು.

"ಬೇಕಲ್ಲ ಮತ್ತ. ಪರದೇಶಿಯ ದಹನದ ಖರ್ಚಿಗೆ ಯಾರುಕೊಡಬೇಕು ? ಸುಮ್ಮನೆ ಕೂಡಲಿಕ್ಕೆ ಬರತ್ತದ ? ಪುಣ್ಯದ ಕೆಲಸ."

ಹಣವನ್ನು ಕೊಟ್ಟು, ಗಂಡನನ್ನು ಕಳಿಸಿ, ತಿರುಗಿ ಕೀಲಿ ಹಾಕುವಾಗ, ಅಂಬಕ್ಕ, "ಎಂಥಾ ಮಂದಿ ಇದು ! ಜೀವ ಹೋದ ದೇಹಕ್ಕ ಇಷ್ಟು ಹಣ ಖರ್ಚು ಮಾಡಲಿಕ್ಕೆ ತಿಳೀತದ! ಅದೂ ಒಂದು ಪುಣ್ಯಾನೇ; ಆದರ, ಒಂದು ತುತ್ತು ಅನ್ನಾ ಹಾಕಿದ್ರ, ಆ ಜೀವಾನ್ನೇ ಉಳಿಸೋ ಪುಣ್ಯ ಬರತಿತ್ತು" ಎಂದುಕೊಂಡು ಮರಮರ ಮರುಗಿದರು. ತಲೆಬಾಗಿಲ ಹತ್ತಿರ ಹೋಗಿ ನಿಂತರು.

ಮಂಜುಳೆಯ ಕುತೂಹಲ ಕೆರಳಿತು. ತಲೆಬಾಗಿಲ ವರೆಗೆ ಹೋದಳು. ಗುಡಿಯಲ್ಲಿ, ಗುಡಿಯ ಮುಂದೆ ಹಿಂಡುಗಟ್ಟಲೆ ಜನ ನೆರೆದಿದ್ದರು. ನೋಡಿ ಅಚ್ಚರಿಗೊಂಡಳು. ಅಂಬಕ್ಕ ಆಕೆಯನ್ನು ಒಳಗೆ ಕರೆತಂದರು. ತೊಡೆಯ ಮೇಲೆ ಮಲಗಿಸಿಕೊಂಡರು. ಮಂಜುಳೆಯ ಲಕ್ಷ್ಯ ಗುಡಿಯ ಕಡೆಗೇ ಇದ್ದಿತು. ಜನರ ಗದ್ದಲ ಹೆಚ್ಚಿತು. ಬಾಯಿಮಾತು ಹೆಚ್ಚಿತು.

ಅಂಬಕ್ಕನ ಕಣ್ಣಿನಿಂದ ನೀರು ಉದುರಿದುವು.

ಮಂಜುಳೆ "ಯಾಕವ್ವ ಅಳತೀ" ಎಂದು ಕೇಳಿದಳು.

ಅಂಬಕ್ಕ ಉತ್ತರ ಕೊಡಲಿಲ್ಲ.

ಒಂದು ಕ್ಷಣ ನಿಶ್ಯಬ್ದ.

ಮಂಜುಳೆ ಧೇನಿಸಿದಳು.

ಅಂಬಕ್ಕನ ಕಣ್ಣಿ ಕೋಡಿಯೊಡೆಯಿತು.

ಮಂಜುಳೆ ಮೋರೆ ಸಣ್ಣಗೆ ಮಾಡಿ,

"ಅವರೆಲ್ಲರೂ ಕೂಡಿ ಆಚಾರಪ್ಪನ್ನ ಹೊಡಿತಾರೇನವ್ವಾ ?" ಎಂದಳು.

ಅಂಬಕ್ಕ ಮಂಜುಳೆಯ ಗಲ್ಲ ಹಿಡಿದರು. "ಇಲ್ಲ ಕೂಸು—ಆಚಾರಪ್ಪನ್ನ ತಮ್ಮೂರಿಗೆ ಕಳಿಸತಾರ" ಎಂದರು.

ಜನಸಮೂಹವೆಲ್ಲ ಗುಡಿಯಿಂದ ದೂರ ದೂರ ಹೋಯಿತು. ಮಂಜುಳೆ ಹೊರಗೆ ಬಂದಳು. ಮನೆಯ ಮುಂದೆಯಾಗಲಿ ಗುಡಿಯ ಮುಂದೆಯಾಗಲಿ, ಯಾರೂ ಇರಲಿಲ್ಲ ಗುಡಿಯಲ್ಲಿ ಹೋದಳು.ಆಚಾರಪ್ಪನ ಮೂಲೆ ಬರಿದಾಗಿತ್ತು. ಆಕೆಯ ಮುಖ ಬಾಡಿತು. ಕಣ್ಣುಳನ್ನು ಅತ್ತ ಇತ್ತ ಚೆಲ್ಲಿದಳು. ಕಂಬದಬಳಿ ರವದೆ. ಸಿಬರುಗಳನ್ನು ಕಂಡಳು. ಬದಿಯಲ್ಲಿಯೇ ಬೆಂಡಿನ ಬಂಡಿಯೊಂದು ಬಿದ್ದಿತ್ತು.ಆಚಾರಪ್ಪ ಅದನ್ನು ತನಗಾಗಿ ಮಾಡಿರುವನೆಂದು ಆಕೆಯ ಮುಖ ಹಿಗ್ಗಿತು. ಅದನ್ನು ತೆಗೆದಕೊಳ್ಳಲು ಬಾಗಿದಾಗ, ರವದೆಯಲ್ಲಿ ಹುದುಗಿದ ಆತನ ಕೊಳಲನ್ನು ಕಂಡಳು. ಒಂದು ಕೈಯಲ್ಲಿ ಬಂಡಿಯನ್ನು ಹಿಡಿದುಕೊಂಡು, ಬೀದಿಗುಂಟ ಓಡ ಹತ್ತಿದಳು. ಅಂಬಕ್ಕ ಒದರಿದಳು.

"ಎಲ್ಲಿಗೆ ಹೋಗತಿಯೇ ಮಂಜೂ ?" ಎಂದು.

"ಈಗ ಬಂದೆ, ಅವ್ವಾ. ಪಾಪ ! ಆಚಾರಪ್ಪ ಕೊಳಲು ಬಿಟ್ಟು ಹೋಗ್ಯಾನ. ಕೊಟ್ಟು ಬರತೀನಿ.

ಅಂಬಂಕ್ಕ ಓಡಿ ಹೋಗಿ ಮಂಜುಳೆಯನ್ನು ಹಿಡಿದು ತಂದರು. ಬಲುಮೆಯಿಂದ ಆ ಕೊಳಲನ್ನು ಒಗೆಸಿದರು.

ಮನೆಗೆ ಬರುವಾಗ, ತನ್ನ ಬಂಡಿಯನ್ನು ತಾಯಿಗೆ ತೋರಿಸಿ ಮಂಜುಳೆ, "ಆಚಾರಪ್ಪ ಭಾಳ ಚೆಲೊಂವಾ. ನಿನ್ನೆ ದಂಟು ಕೊಟ್ಟಿದ್ದೆ. ನನಗ ಬಂಡೀಮಾಡಿ ಇಟ್ಟು ಹೋಗ್ಯಾನ ನೋಡವ್ವಾ ?" ಎಂದಳು.

ಅಂಬಕ್ಕ ಮಾತನಾಡಲಿಲ್ಲ.

"ಮತ್ತೆ ಯಾವಾಗ ಬರತಾನವ್ವಾ, ಆತ ?"

"ಇನ್ನ ಬರೋದಿಲ್ಲ, ಮಂಜೂ."

"ನಾವು ಆತಗ ಮಧುಳರಿ ಹಾಕಲಿಲ್ಲ ಅಂತ ಸಿಟ್ಟಿಗೆದ್ದು ಹೋದ್ನಲ್ಲ?" ಎಂದು ಕೇಳುವಾಗ,ಮಂಜುಳೆಯ ಕಣ್ಣು ನೀರೊಡೆದುವು.

"ಹೌದು, ಕೂಸು;" ಎಂದು ಉತ್ತರಿಸುವಾಗ ಅಂಬಕ್ಕ ಕಣ್ಣೊರಸಿಕೊಂಡರು.

(ಎ. ಆಯ್. ಆರ್. ಧಾರವಾಡ ಅವರ ಕೃಪೆಯಿಂದ)

ಅಸೂಯೆ

ಶ್ರೀಮತಿ ಸೌ. ರಾಧಾಬಾಯಿ ಕಮಲಾಪುರೆ, ಧಾರವಾಡ

ಕ್ರೋಧವು ನಾಗರಿಕತೆಯ ಮೂಲಕ ಸಂಸ್ಕಾರಗೊಂಡು ಅಸೂಯೆಯಾಗಿ ಪರಿಣಮಿಸುತ್ತದೆ; ಆದರೆ ಅಸೂಯೆಯಲ್ಲಿ ಅಡಗಿದ ವಿಷವು ತುಂಬ ತೀಕ್ಷ್ಣವಾಗಿರುತ್ತದೆ. ಕುಟುಂಬ-ಕುಟುಂಬಗಳನ್ನೂ ರಾಜ್ಯ-ರಾಜ್ಯಗಳನ್ನೂ ಈ ವಿಷವು ಹುಡಿಗೂಡಿಸಿಬಿಡುತ್ತದೆ.

ಅಸೂಯೆ! ಇದೊಂದು ಮಾನವಕುಲದ ಮನಸ್ಸಿಗೆ ತಗಲುವ ಮಹಾರೋಗ. ಜಗತ್ತಿನಲ್ಲಿ ಹಬ್ಬಿಕೊಂಡಿರುವ ನಿಷ್ಕಾರಣ ದ್ವೇಷ-ಕಲಹಗಳಿಗೆ ಮುಖ್ಯ ಕಾರಣ ಈ ಅಸೂಯಾ ರೋಗವೇ ಎಂಬುದನ್ನು ನಾವು ಮರೆತು ನಡೆಯಲಾಗದು. ಈ ಅಸೂಯೆಗೇ 'ಮತ್ಸರ', 'ಹೊಟ್ಟೆಕಿಚ್ಚು' ಎಂದೂ ಹೇಳಲಾಗುವುದು.

ಸಾಮಾನ್ಯ ಮಾನವನ ಮನಸ್ಸು ಅನೇಕ ವಿಷಯಗಳಿಗಾಗಿ ಆಶೆ ಪಡುವುದು. ಆಶೆಗಳು ಕೊನೆಗಾಣದಾಗ ಮನುಷ್ಯನ ಮನಸ್ಸಿನಲ್ಲಿ ಕ್ರೋಧವು ತಲೆದೋರುವುದು. ಸಾಮಾಜಿಕ, ನೈತಿಕ ನಿಯಮಗಳ ಅಡೆ-ತಡೆಯ ಮೂಲಕ, ಈ ಕ್ರೋಧವನ್ನು ಹೊರಗೆ ಹಾಕಲು ಬಾರದಂತಾದಾಗ, ಅದು ಅಸೂಯೆಯಾಗಿ ರೂಪುಗೊಳ್ಳುವುದು. ಕ್ರೋಧದ ಪ್ರತ್ಯಕ್ಷ ಪರಿಣಾಮವು ಅಷ್ಟೊಂದು ಭೀಕರವೆನಿಸದು; ಆದರೆ ಅಸೂಯೆಯ ಅಪ್ರತ್ಯಕ್ಷ ಅಥವಾ ಪರ್ಯಾಯ ಪರಿಣಾಮಗಳು ಮಹಾಭಯಂಕರವಾಗಿರುತ್ತವೆ. ಇವು ಮಾನವನ ವೈಯಕ್ತಿಕ ಜೀವನಕ್ಕೂ ಅಪಾಯಕಾರಿ; ಸಾಮಾಜಿಕ ಜೀವನಕ್ಕೂ ಅಪಾಯಕಾರಿ.

ಹಣವೇ ಆಗಲಿ, ಗುಣವೇ ಆಗಲಿ, ರೂಪವೇ ಆಗಲಿ—ತನಗಿಂತ ಇನ್ನೊಬ್ಬನಲ್ಲಿ ಹೆಚ್ಚಾಗಿ ಇದೆಯೆಂಬುದನ್ನು ಸ್ವಾಭಾವಿಕವಾಗಿ ಮಾನವನ ಮನಸ್ಸು ಸಹಿಸದು. ತನ್ನಲ್ಲಿ ಇಲ್ಲದುವುಗಳನ್ನು ಪಡೆಯಲು ಅವನು ಪ್ರಾಮಾಣಿಕವಾಗಿ ಪ್ರಯತ್ನಿಸಿದರೆ, ಅದು 'ಸಾತ್ತ್ವಿಕಸ್ಪರ್ಧೆ' ಎನಿಸಿಕೊಳ್ಳುವುದು. ಸಮಾಜದ ಪ್ರಗತಿಗೆ ಇಂತಹ ಸಾತ್ತ್ವಿಕ ಸ್ಪರ್ಧೆ ಅವಶ್ಯವಾದದ್ದು; ಆದರೆ ಅಂತಹ ಪ್ರಯತ್ನವನ್ನೇನೂ ಮಾಡದೆ, ಮನದಲ್ಲಿ ಕುದಿಯುತ್ತಿರುವುದೂ, ತನಗಿಂತ ಶ್ರೇಷ್ಠ ವ್ಯಕ್ತಿಗಳಿಗಾಗಿ ಕೆಡುಕನ್ನು ಚಿಂತಿಸುವುದೂ, ಸಂಧಿ ದೊರೆತಾಗ ಅವರನ್ನು ಅಪಾಯಕ್ಕೆ ಗುರಿಮಾಡಿ ಸಂತೋಷಪಡುವುದೂ ಅಸೂಯಾ ರೋಗಿಯ ಮುಖ್ಯ ಲಕ್ಷಣಗಳಾಗಿವೆ. ಅಸೂಯೆಯಿಂದ ಕೂಡಿದ ಮನುಷ್ಯನ ಕಣ್ಣೆದುರು, ಬೇರೆ ಯಾವ ಉಚ್ಚ ಆದರ್ಶಗಳೂ ನಿಲ್ಲಲಾರವು; ತನಗಿಂತ ಒಳ್ಳೆಯದಾಗಿ ಇರುವುದೆಲ್ಲವೂ ಇಲ್ಲದಂತಾಗಬೇಕು—ಎಂಬುದೊಂದೇ ಒಂದು ದುರಾಶೆಯವನಿಗೆ. ಈ ದುರಾಶೆಯನ್ನು ಸಾಧಿಸುವುದಕ್ಕಾಗಿ ಕಾಲವನ್ನು ನಿರೀಕ್ಷಿಸುವುದೇ ಅವನ ಗುರಿಯಾಗಿರುವುದು.

ಇಂದು ನಮ್ಮ ಸಮಾಜದಲ್ಲಿ ಆಟವಾಡುತ್ತಿರುವ ಅಶ್ಯಿಷ್ಟ-ಅಸಂತೋಷ-ಅಶಾಂತಿಗಳಿಗೆ ಈ ಅಸೂಯೆಯೇ ಮುಖ್ಯ ಕಾರಣವಾಗಿದೆ. ನಮ್ಮ ಜನರ ಸಾಂಸ್ಕೃತಿಕ-ಆರ್ಥಿಕ ವಿಷಮತೆಯು. ಈ ಅಸೂಯೆಯನ್ನು ಸೋಂಕುರೋಗದಂತೆ ಮನೆಮನೆಗಳಲ್ಲಿಯೂ ಹಬ್ಬಿಸುತ್ತಲಿದೆ. ಎಂತಲೆ ನೆರೆಮನೆಯವರು ಒಳ್ಳೆಯ ತರಕಾರಿಯನ್ನು ತಂದರೆ, ಹೊರಮನೆಯವರಿಗೆ ಹೊಟ್ಟೆಕಿಚ್ಚು. ಪಕ್ಕದ ಮನೆಯ ಪದ್ದಕ್ಕ ಒಳ್ಳೆಯ ಉಡಿಗೆ-ತೊಡಿಗೆ ಧರಿಸಿದರೆ, ಈ ಮನೆಯ ಮಾಲಕ್ಷ್ಮಿಗೆ ಅಸಹನೆ. ಮುಂದಿನ ಮನೆಯ ಮಾಧೂ ಪರೀಕ್ಷೆಯಲ್ಲಿ ಪಾಸಾದರೆ, ಎದುರುಮನೆಯ ವೆಂಕಣ್ಣನ ತಾಯಿಗೆ ಮತ್ಸರ. ಮೇಲಿನ ಅಧಿಕಾರಿಗಳನ್ನು ಕಂಡು ಕಾರಕೂನರಲ್ಲಿ ಅಸೂಯೆ; ಕಾರಕೂನರನ್ನು ಕಂಡರೆ ಸೀಪಾಯಿಗೆ ಹೊಟ್ಟೆಕಿಚ್ಚು. ಹೀಗೆಯೆ ಈ ವಿಷಚಕ್ರ, ಪ್ರಾಂತ-ಪ್ರಾಂತಗಳನ್ನೂ, ದೇಶ-ದೇಶಗಳನ್ನೂ, ರಾಷ್ಟ್ರ-ರಾಷ್ಟ್ರಗಳನ್ನೂ ಅಶಾಂತಿಗೆ ಗುರಿ ಮಾಡಿರುವುದು.

ಅಸೂಯೆ ದೊಡ್ಡವರಲ್ಲಿಯೇ ಇರುವುದೆಂದಲ್ಲ. ಚಿಕ್ಕ ಚಿಕ್ಕ ಬಾಲಕರಲ್ಲಿಯೂ ಇದು ಮನೆಮಾಡಿ, ಅವರ ಮನಸ್ಸನ್ನು ಹಾಳು ಮಾಡುತ್ತಿರುವುದು. ಚಿಕ್ಕ ಮಗು ಬೆಳೆದು, ಬುದ್ಧಿಗೆ ಸ್ವಲ್ಪ ಚಲನವಲನ

ದೊರೆತರಾಯಿತು; ಅದರ ಮನಪಲ್ಲಿ ಮೊದಲನೆಯದಾಗಿ ಅಸೂಯೆ ತನ್ನ ಗುಡಿಯನ್ನೆತ್ತಿ ನಿಲ್ಲುವುದು. ಎಲ್ಲರಿಂದಲೂ ಪ್ರೀತಿ-ಪ್ರೇಮಗಳನ್ನು ಅಪೇಕ್ಷಿಸುವ ಮಗು, ಆ ಪ್ರೀತಿ-ಪ್ರೇಮಗಳಲ್ಲಿ ಮತ್ತೊಬ್ಬ ಪಾಲುಗಾರನು ಬಂದರಾಯಿತು; ಆ ಮಗು ಅಸೂಯೆಯಿಂದ ಸಿಡಿಮಿಡಿಗೊಳ್ಳುವುದು. ಮೊದಲು ಹುಟ್ಟಿದ ಮಗು, ಆಮೇಲೆ ಹುಟ್ಟಿದ ತಮ್ಮನನ್ನೋ ತಂಗಿಯನ್ನೋ ಅಸಹನೆಯಿಂದ ಕಾಣುವುದನ್ನು ನಾವು ಎಲ್ಲೆಲ್ಲಿಯೂ ನೋಡುತ್ತೇವೆ. ಇದರಂತೆಯೆ ಕಣ್ಣು-ಮೂಗಿನಿಂದ ಚೆಲುವಾಗಿರುವ ಮಕ್ಕಳ ಸೌಂದರ್ಯವನ್ನು ನೆರೆ-ಹೊರೆಯವರು ಹೊಗಳತೊಡಗಿದರೆ, ಮಿಕ್ಕ ಮಕ್ಕಳು ಚೆಲುವರನ್ನು ಅಸೂಯೆಯಿಂದ ನೋಡುವರು.

ಶಾಲೆಯ ವಿದ್ಯಾರ್ಥಿಗಳಲ್ಲಂತೂ ಈ ಅಸೂಯಾಭಾವ ತುಂಬ ಕಾರ್ಯ ಮಾಡುತ್ತಿರುವುದು. ಬುದ್ಧಿಯಲ್ಲಿ ಎಲ್ಲರೂ ಸಮಾನರಾಗಿರುವುದು ಸಾಧ್ಯವಿಲ್ಲ. ಬುದ್ಧಿವಂತರಾದ ವಿದ್ಯಾರ್ಥಿಗಳು ತಮ್ಮ ಅಭ್ಯಾಸ-ಒಳ್ಳೆಯ ನಡತೆಗಳಿಂದ, ಶಾಲೆಯ ಗುರುಗಳ ಪ್ರೀತಿಗೆ ಪಾತ್ರರಾಗುವರು. ಮಿಕ್ಕ ಸಾಮಾನ್ಯ ವಿದ್ಯಾರ್ಥಿಗಳು ಅವರನ್ನು ಹೊಟ್ಟೆಕಿಚ್ಚಿನಿಂದ ನೋಡತೊಡಗುವರು. ಇದರಿಂದ ತರಗತಿಗಳಲ್ಲಿ ಪಂಗಡಗಳು ತಲೆದೋರಿ, ಶಾಲೆಯ ವಾತಾವರಣವನ್ನೆ ಕೆಡಿಸಿಬಿಡುವುವು.

ಒಬ್ಬ ವಿದ್ಯಾರ್ಥಿ ಚಿತ್ರಕಲೆಯ ಅಭಿರುಚಿಯುಳ್ಳವನಾಗಿರುತ್ತಾನೆ. ಅತನು ಮನಗೊಟ್ಟು ವ್ಯಾಸಂಗಮಾಡಿ ತನ್ನ ಕಲೆಯನ್ನು ಬೆಳೆಸಿಕೊಳ್ಳುತ್ತಾನೆ; ಅನೇಕರ ವಿಶ್ವಾಸಕ್ಕೆ ಪಾತ್ರನಾಗುತ್ತಾನೆ. ಅಂತಹ ವಿದ್ಯಾರ್ಥಿಯನ್ನು ಸಹಾನುಭೂತಿ-ಕೌತುಕಗಳಿಂದ ಕಾಣುವ ಜೊತೆಗಾರರು ತೀರ ಕಡಮೆ. ಎಲ್ಲರೂ ಅವನನ್ನು ಒಂದು ಬಗೆಯ ಮತ್ಸರ-ತಿರಸ್ಕಾರಗಳಿಂದ ನೋಡುವವರೇ! ಹೀಗಾಗಿ ಕಲಾವಿದ ವಿದ್ಯಾರ್ಥಿಯಲ್ಲಿ ಒಂದುಬಗೆಯ ಔದಾಸೀನ್ಯ ಬೆಳೆಯತೊಡಗುವುದು. ಆಟಗಾರ ವಿದ್ಯಾರ್ಥಿಯ ರೀತಿಯೂ ಹೀಗೆಯೆ. ಒಳ್ಳೆಯ ಆಟಗಾರ ವಿದ್ಯಾರ್ಥಿಯನ್ನು ಪ್ರೀತಿಸುವ ಗೆಳೆಯರು ಹೆಚ್ಚಿಗಿರುವುದಿಲ್ಲ; ದ್ವೇಷಿಸುವ ನಿಷ್ಕಾರಣ ವಿರೋಧಿಗಳ ಸಂಖ್ಯೆ ಮಾತ್ರ ಸಾಕಷ್ಟು ಇರುವುದು.

ಅಸೂಯೆಯ ದುಷ್ಪರಿಣಾಮವನ್ನು ಪ್ರಕಟಿಸುವಂತಹ ಘಟನೆಗಳು, ನಮ್ಮ ಪುರಾಣಗಳಲ್ಲಿ ಬೇಕಾದಷ್ಟು ಬಂದಿವೆ. ಮಹಾಭಾರತದಲ್ಲಿ ಬರುವ ಕುರುಕ್ಷೇತ್ರದ ಮಹಾಯುದ್ಧವು, ಕೌರವರಲ್ಲಿರುವ ಪಾಂಡವರ ವಿಷಯಕವಾದ ಅಸೂಯೆಯ ಕಾರಣದಿಂದಲೇ ನಡೆಯಿತು. ಸಂಪೂರ್ಣ ಭರತಖಂಡದ ಕ್ಷತ್ರಿಯರೆಲ್ಲರೂ ಈ ಮಹಾಯುದ್ಧದ ಪ್ರಳಯಕ್ಕೆ ಸಿಕ್ಕಿ ಪಾಳಾಗಿಹೋಗಬೇಕಾಯಿತು.

ಪಾಂಡವರು, ಕೌರವರು ಇನ್ನೂ ಚಿಕ್ಕ ಮಕ್ಕಳಿರುವಾಗಲೇ, ಕೌರವರು ಪಾಂಡವರನ್ನು ಅಸೂಯೆಯಿಂದ ಕಾಣತೊಡಗಿದರು. ಸ್ವಾಭಾವಿಕವಾಗಿ ಸುಂದರರೂ ಬುದ್ಧಿಶಾಲಿಗಳೂ ಆದ ಧರ್ಮ-ಭೀಮಾದಿ ಪಾಂಡವರನ್ನು ಹಿರಿಯರೆಲ್ಲರೂ ಪ್ರೀತಿಯಿಂದ ನೋಡಿಕೊಳ್ಳತೊಡಗಿದರು. ಸರಿ, ದುರ್ಯೋಧನ-ದುಶ್ಶಾಸನ ಮೊದಲಾದ ಕೌರವರಲ್ಲಿ ಆಗಲೆ ಅಸೂಯೆ ಮೂಡಿನಿಂತಿತು. ಆಟದಲ್ಲಿಯೂ ಪಾಠದಲ್ಲಿಯೂ ಯಾವಾಗಲೂ ಪಾಂಡವ ಬಾಲಕರು ಮೇಲುಗೈ ಎನಿಸಿಕೊಂಡರು. ಕೌರವರಲ್ಲಿ ಮೂಡಿದ ಅಸೂಯೆಗೆ ಕುಡಿಯೊಡೆಯಿತು. ದ್ರೋಣಾಚಾರ್ಯರ ಬಳಿ ಶಸ್ತ್ರಾಸ್ತ್ರಗಳನ್ನು ಕಲಿಯುತ್ತಿರುವಾಗಲಂತೂ, ಭೀಮ-ಅರ್ಜುನರು ಅಸಮಬಲರೆಂದು ಎಲ್ಲರಿಂದಲೂ ಹೊಗಳಿಸಿಕೊಂಡರು. ಸರಿ, ಕೌರವರ ಅಸೂಯಾಲತೆ ಹಬ್ಬಿ ಹಂದರವನ್ನೇರಿತು. ಎಂತಲೇ ಇನ್ನೂ ಚಿಕ್ಕವರಾಗಿ ಇರುವಾಗಲೇ ಅವರು, ಭೀಮನನ್ನು ಊಟಕ್ಕೆಂದು ಕರೆದೊಯ್ದು, ವಿಷದ ಲಡ್ಡುಗೆಗಳನ್ನು ತಿನ್ನಿಸಿದರು. ವಿಷದಿಂದ ಅವನಿಗೆ ಮೂರ್ಛೆ ಬಂದಾಗ ಅವನನ್ನು ಹೆಪಮುರಿ ಕಟ್ಟಿ ನದಿಯಲ್ಲಿ ಒಗೆದರು. ಹೀಗೆಯೆ ಚಿಕ್ಕ ಭೀಮನನ್ನು ಕೌರವರು ಅನೇಕ ರೀತಿಯಿಂದ ಹಿಂಸಿಸಿದರು. ಆದರೂ ಅವನು ಇವರಿಗೆ ಮಣಿಯಲಿಲ್ಲ. ಆಗಲೇ ಕೌರವರ ಅಸೂಯಾಲತೆಗೆ ವಿಷದ ಫಲ ಬಿಟ್ಟಿತು. ಈ ವಿಷಫಲವೇ ಮಹಾಭಾರತದ ದುರಂತ ಕಥೆಯನ್ನು ವಿಸ್ತಾರವಾಗಿ ಬೆಳೆಸಿ ಮುಗಿಸಿರುವುದು.

ಮಕ್ಕಳಲ್ಲಿ ಅಸೂಯಾಭಾವ ಉಂಟಾಗದಂತೆ ಮೊದಲಿನಿಂದಲೂ ನೋಡಿಕೊಳ್ಳಬೇಕಾದ ಹೊಣೆ ತಾಯಿ-ತಂದೆಗಳದು; ಮನೆಯಲ್ಲಿಯ ಹಿರಿಯರದು. ಅವರು ಮೂಲದಲ್ಲಿಯೆ ಅಸೂಯೆಯ ಮುಳ್ಳುಗಳನ್ನು ಮುರಿಯುತ್ತಿರಬೇಕು. ಅದಕ್ಕಾಗಿ ಅವರು ಅಸೂಯಾಭಾವ ಬಹಳ ಕೆಟ್ಟದೆನ್ನುವುದನ್ನು, ನೇರವಾದ ಮಾತುಗಳಿಂದಲೂ ನೀತಿಯ ಕಥೆಗಳಿಂದಲೂ ಕಿರಿಯರಿಗೆ ಮನವರಿಕೆ ಮಾಡಿಕೊಡುತ್ತಿರಬೇಕು. ನಮ್ಮ ಮನೆತನಗಳಲ್ಲಿಯೂ ಸಮಾಜದಲ್ಲಿಯೂ ಸುಖ-ಸಮಾಧಾನಗಳು ನೆಲೆಗೊಳ್ಳಬೇಕಾದರೆ, ನಾವೆಲ್ಲರೂ ಮೊದಲು ಈ ಅಸೂಯಾ ಭೂತವನ್ನು ಹೊಡೆದೋಡಿಸಬೇಕು.

———

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

— ಧಾರವಾಡ —

ಗಡಿಯಾರ, ಚಾಳೀಸು, ಕೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,
ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಿಗಿ

ಸುಭಾಸ ರೋಡ್, ಧಾರವಾಡ

ಎರಡು ಚಿತ್ರಗಳು

(ಒಂದು ಜೀವನ ಸಮಸ್ಯೆ)*

ಲೇ. ಮಹಾಲಿಂಗ ಯಾಳಗಿ, ಮುಂಡರಗಿ

'ಬಲ್ಲಿದ ನಾನೆಂದು ಬಡವರ ಬಾಯನು ಬಡಿಯದಿರೆಚ್ಚರಿಕೆ!' ಎಂದು, ಜೀವನ ರಹಸ್ಯ ವಿಜ್ಞಾನಿಗಳು ಎಚ್ಚರಿಕೆ ಕೊಟ್ಟೇ ಕೊಟ್ಟಿರುತ್ತಾರೆ. ಆದರೆ ಆ ಎಚ್ಚರಿಕೆಯನ್ನು ಕವುಡುಗೇಳಿ, ಸಮಾಜ ಜೀವನದಲ್ಲಿ ವೈಷಮ್ಯ ಹರಡುವ ಸಿರಿಗುರುಡರಿಗೆ ಏನು ಮಾಡಬೇಕು?

೧. ಪ್ರಥಮಚಿತ್ರ

ಅವನೊಬ್ಬ ಸಾಮಾನ್ಯ ಕೂಲಿಕಾರ. ಇಡಿ ದಿನವೆಲ್ಲಾ ನುಡಿದು ಬಿದರನ್ನು ಸುರಿಸಿ, ಸಂಜೆಯ ಸಮಯದಲ್ಲಿ ದುಡಿತಕ್ಕೆ ಬಂದ ಎರಡು ಆಣೆಯ ಪ್ರತಿಫಲವನ್ನು ತನ್ನ ಹರಕು ಧೋತರದ ಚುಂಗಿನಲ್ಲಿ ಕಟ್ಟಿಕೊಂಡು, ಪಟ್ಟಣದಿಂದ ತನ್ನ ಕೂಲಿಕಾರರ ವಸತಿಯೆಡೆಗೆ ನಡೆದಿದ್ದ. ಬಹುದೂರದಿಂದಲೇ ತಮ್ಮಂತಹ ಕೂಲಿಕಾರರ ಮುರುಕು ಗುಡಿಸಲುಗಳಿಂದ ಏಳುತ್ತಿದ್ದ ಹೊಗೆ ಆಕಾಶಕ್ಕೆ ಅಡರುತ್ತಿದ್ದುದು ಅವನ ಕಣ್ಣಿಗೆ ಬಿತ್ತು. ಆ ಹೊಗೆಯನ್ನು ಕಂಡಾಗಲೇ ಅವನಲ್ಲಿ, ದುಡಿದು ದಣಿದು ಬರುತ್ತಿರುವ ತನಗಾಗಿ-ತನ್ನ ಮುದಿತಾಯಿ ರೊಟ್ಟಿ ಮಾಡುತ್ತಿರಬಹುದು—ಎಂಬ ಕಲ್ಪನೆಯೊಂದು ಏಳುತ್ತಿ ಮುಂಬರಿದು ಹೋಯಿತು.

ಬರಿಗಾಲು, ಬರಿನೆತ್ತಿಯಿಂದ ಹೊರಟಿದ್ದನಾತ, ತನ್ನ ಮುದಿತಾಯಿಯೊಬ್ಬಳನ್ನು ಬಿಟ್ಟರೆ, ಅವನದೇ ಆದ ಆ ಮುರುಕು ಗುಡಿಸಲಲ್ಲಿ ತನ್ನವರೆಂದು ಹೇಳಿಕೊಳ್ಳುವ ಬೇರೆ ಯಾವ ಸಂಬಂಧಿಕರೂ ಇರಲಿಲ್ಲ. ಆ ಮುರುಕು ಗುಡಿಸಲಿನಲ್ಲಿ ಮೂರು ನಾಲ್ಕು-ಅಡಿಗೆಗಾಗಿ ಎಂದಿದ್ದ ಮಣ್ಣಿನ ಮಡಿಕೆ-ಕುಡಿಕೆಗಳನ್ನು ಬಿಟ್ಟರೆ ಮತ್ತೊಂದಿರಲಿಲ್ಲ. ಆದರೂ ಈ ದಿನ ಆತ ಒಳ್ಳೇ ಆನಂದದಿಂದಿದ್ದ. ಮನಸ್ಸು ಪ್ರಫುಲ್ಲಿತವಾಗಿ ಗರಿಗೆದರಿದ ಹಕ್ಕಿಯಂತೆ ಬಾನಿನಲ್ಲಿ ಹಾರಾಡುತ್ತಿತ್ತು. ಏಕೆ ಗೊತ್ತೆ? ಅವನ ಆ ಹರಕುಚಿಂದಿಯಾದ ಧೋತರದ ಚುಂಗಿನಲ್ಲಿ "ಎರಡಾಣೆಯ ಚೂರೊಂದು" ಬಿಗಿಯಾಗಿ ಕಟ್ಟಲ್ಪಟ್ಟಿತ್ತು.

ಇದುರಿನಲ್ಲಿ ಮದುವೆಯ ಮೆರವಣಿಗೆಯೊಂದು ಬಂದಿತು. ಆ ಕೂಲಿಕಾರ ಅದನ್ನು ನೋಡುತ್ತಲೇ ಭಾವಪರವಶನಾದ, ತಲೆಯಲ್ಲಿ ಒಂದರ ಮೇಲೊಂದರಂತೆ ವಿಚಾರಗಳು ಉರುಳುತ್ತಿದ್ದುವು; "ನನ್ನ ಲಗ್ನವೂ ನಡೆಯುವುದು. ಆಗ ನಾನಾದರೂ ಇದೇ ರೀತಿಯಿಂದ ಮದುವೆಯ ಮೆರವಣಿಗೆಯನ್ನು ಹೊರಡಿಸುವೆನು. ಆಗ ನನಗೆಷ್ಟು ಸಂತೋಷವಾಗುವುದು ಗೊತ್ತೆ?....ನನ್ನ ಮದುವೆಯ ಮೆರವಣಿಗೆಯ ಸಮಯದಲ್ಲಿ....ಇದೇ ರೀತಿಯಾದ ಬ್ಯಾಂಡಿನ ಸುಸ್ವರ ಸಮ್ಮೇಳನ....ಝಗೆಝಗಿಸುವ ಆ ಪೆಟ್ರೊಮ್ಯಾಕ್ಸ್ ದೀಪಗಳು....ನಾನು ಸಾಲಂಕೃತನಾಗಿ ಕುದುರೆಯ ಮೇಲೆ,....ನನ್ನ ವಳು....

"ಏ....ಏ ಕಣ್ಣು ಕಾಣ್ತುವೇ ಇಲ್ಲೊ? ಒಂದು ಬದಿಗೆ ಸರಿಯೋ" ಮೆರವಣಿಗೆಯ ಮುಂದಿದ್ದ ಆ ನೌಕರ ಕೂಗಿದಾಗಲೇ ಅವನು ವಾಸ್ತವಲೋಕಕ್ಕೆ ಇಳಿದ. ಅವನ ಮದುವೆಯ ವೈಭವ-ಮಧುರ ಕಲ್ಪನೆ ಗಾಳಿಗೆ ಸಿಕ್ಕ ತರಗೆಲೆಯಂತೆ ಹಾರಿಹೋಯಿತು.

—ಸ್ವಾಭಿಮಾನವೊಂದು ಅಡ್ಡ ಬಂದಿತು:

"ನಾನೇಕೆ ಸರಿಯಲಿ, ಈ ರಸ್ತೆ ನಿಮ್ಮೊಬ್ಬರದೇನಲ್ಲ. ಇದರ ಮೇಲೆಯೇ ನಾನೂ ನಡೆಯುತ್ತೇನೆ. ಸರಿಯೆಂದು ಹೇಳಲಿಕ್ಕೆ ನೀನಾರು?"

ಮದುವೆಯ ಮೆರವಣಿಗೆಯ ಮುಂಭಾಗದಲ್ಲಿದ್ದ ಜನರಿಗೆ ನಿಟ್ಟು ತಡೆಯುವುದಾಗಲಿಲ್ಲ. ಯಾವನೋ ಒಬ್ಬ ಅವನ ಬೆನ್ನ ಮೇಲೆ ಗುದ್ದಿದ. ಒಬ್ಬ ಧೋತರ ಹಿಡಿದು ಜಗ್ಗಿದ. ಮತ್ತಿಬ್ಬರು ದಾಂಡಿಗರು ಅವನನ್ನೆತ್ತಿ ರಸ್ತೆಯ ಆಚೆಯ ಬದಿಯಲ್ಲಿರುವ ಕಂಟಿಗಳ ಮೇಲೆ ಒಗೆದುಬಿಟ್ಟರು.

ಮೆರವಣಿಗೆ ಮುಂದುವರೆಯಿತು. ಅವರ ಬ್ಯಾಂಡಿನ ಸಪ್ಪಳ ಬರುಬರುತ್ತ ಕಡಿಮೆಯಾಗುತ್ತ ಬಂದಿತು. ಆ ಕಂಟಿಗಳ ಮಧ್ಯದಿಂದ ಆ ಕೂಲಿಗಾರ ಸಾವರಿಸಿಕೊಂಡು ಎದ್ದ. ಸುತ್ತಲೂ ಕತ್ತಲೆ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿತ್ತು. ನಿರಾಶೆಯ ಛಾಯೆ ಎಲ್ಲವನ್ನೂ ಆವರಿಸಿತ್ತು. ದುಃಖದಿಂದ ತುಂಬಿದ ಅವನ ಹೃದಯವು ನಿಡಿದಾದ ನಿಟ್ಟುಸಿರೊಂದನ್ನು ಬಿಟ್ಟಿತು. ಕಣ್ಣೀರಿನಿಂದ ತುಂಬಿದ ತನ್ನ ಕಣ್ಣುಗಳಿಂದ ಆಕಾಶವನ್ನು ನೋಡುತ್ತಾ ಅಂದನು:

"ಅಯ್ಯೋ ದೇವರೆ! ನಮ್ಮ ಹತ್ತಿರ ದುಡ್ಡು-ದುಗ್ಗಾಣಿಯಿಲ್ಲ. ವಾಸಿಸಲು ಬಂಗಲೆ-ಅರಮನೆಗಳಿಲ್ಲ. ಸೇವೆಗಾಗಿ ದಾಸ-ದಾಸಿಯರಂತೂ ಮೊದಲೇ ಇಲ್ಲ. ಇಂತಹ ನಮ್ಮನ್ನು ಈ ಭೂಮಿಯ ಮೇಲೆ ಏಕೆ ಹುಟ್ಟಿಸಿದೆ ದೇವಾ?

ಏನು? ಸಿರಿವಂತರ ಆಳುಗಳು ಬಂದು ನಮ್ಮಂಥ ದೀನ-ದರಿದ್ರರನ್ನು, ಬಡವ-ಕಂಗಾಲದನ್ನು ಯಾವ ಕರುಣೆ-ಕೂರ್ಮೆಗಳಿಲ್ಲದೆ, ದಾರಿಯ ಆಚೆಯ ಬದಿಗಿರುವ ಮುಳ್ಳುಕಂಟಿಗಳ ಮಧ್ಯದಲ್ಲಿ ಒಗೆಯಲೆಂದು ಹುಟ್ಟಿಸಿದೆಯೋ? ಯಾರಿಗೆ ಗೊತ್ತು?

ಇಂಥ ಜಗತ್ತಿಗೆ ನಮ್ಮಂತಹ ದೀನ-ದರಿದ್ರರ, ಬಡವ, ಕಂಗಾಲರ ಅವಶ್ಯಕತೆಯಾದರೂ ಏನಿತ್ತು?

? ? ?

೨. ದ್ವಿತೀಯ ಚಿತ್ರ

ಕತ್ತಲೆ ಹರಿದು, ಬೆಳಕಿಗೆ ದಾರಿ ಮಾಡಿಕೊಟ್ಟಿತ್ತು. ಬೆಳಕು ಸರಿಯಿತು—ರಾತ್ರಿ ಬಂದಿತು.

ಮತ್ತೆ ಹಗಲು, ಮತ್ತೆ ರಾತ್ರಿ, ಹೀಗೆ ಎಷ್ಟೋ ಹಗಲು, ಎಷ್ಟೋ ರಾತ್ರಿಗಳು ಸರಿದು ಹೋದವು. ಋತುಗಳು ಹೋದುವು—ಮತ್ತೆ ಬಂದುವು.

ಹಾಗೆಯೇ ವರುಷಗಳೆಷ್ಟೋ ಕಳೆದುವು. ಆ ಕೂಲಿಕಾರ ಮೈ-ಮನಗಳನ್ನು ತೊಡಗಿಸಿ ದುಡಿದ. ಪ್ರಾಣದ ಪರವೆಯಿಲ್ಲದೆ ಕೆಲಸ ಮಾಡಿದ. ಆರಾಮು ಎಂಬುದನ್ನು ದಿನದಲ್ಲಿ ನುರೆತುಬಿಟ್ಟ, ರಾತ್ರಿ-ಯಲ್ಲಿ ನಿದ್ದೆ ಅವನ ಸನಿಯಕ್ಕೆ ಸುಳಿಯಲಿಲ್ಲ. ಜೀವನವನ್ನು ಒಂದು ಪಗಡೆಯಾಟವೆಂದು ಬಗೆದನು. ನೋಸ, ಅನ್ಯಾಯ, ಅನೀತಿಗಳನ್ನು ದಾರಿ ಮಾಡಿಕೊಂಡ. ಎಲ್ಲ ರೀತಿಯಿಂದಲೂ ದುಡ್ಡನ್ನು ಗಳಿಸಿದ. ಕೆಲಸೇ ದಿನಗಳಲ್ಲಿ ದೊಡ್ಡ ಶ್ರೀಮಂತನಾದ,—ಸಿರಿವಂತನಾದ—ಧನವಂತನಾದ.

ಈಗ.....

ಆತ ಮೊದಲಿನ ಹಾಗೆ "ಸಾಮಾನ್ಯ ಬಡ ಕೂಲಿಕಾರ" ನಾಗಿರಲಿಲ್ಲ. ಪಟ್ಟಣದ ಪೆಸರಾಂತ ಶ್ರೀಮಂತನಾಗಿದ್ದ. ಅವನ ಮನೆಯ ಕತ್ತಲು ಕೊಠಡಿಯ ಕಬ್ಬಿಣದ ಪೆಟ್ಟಿಗೆಗಳಲ್ಲಿ "ಲಕ್ಷ್ಮಿ" ಬಂಧಿತಳಾಗಿದ್ದಳು. ಅವನೀಗ ಮುರುಕು ಗಡಿಸಿಲಿನಲ್ಲಿರಲಿಲ್ಲ. ವಾಸಕ್ಕೆಂದು ದೊಡ್ಡ ಬಂಗಲೆಯೇ ಸಿದ್ಧವಾಗಿತ್ತು. ಅವನ ಸೇವೆಗಾಗಿ ದಾಸ-ದಾಸಿಯರ ತಂಡ ಯಾವಾಗಲೂ ಸಿದ್ಧವಾಗಿಯೇ ನಿಂತಿತ್ತು. ಅವನೀಗ ಬರಿಗಾಲಿನಿಂದ ನಡೆಯುತ್ತಿರಲಿಲ್ಲ. ಕುದುರೆಯ ಮೇಲೆ ಇಲ್ಲವೇ ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಸಾಗುತ್ತಿದ್ದ. ಜನಸಾಮಾನ್ಯರು ಅವನನ್ನೆದುರುಗೊಂಡಾಗ, ತಲೆ ತಗ್ಗಿಸಿ ನೆಮಸ್ಕರಿಸಿ ಮುಂದೆ ಹೋಗುತ್ತಿದ್ದರು.

ಒಂದು ದಿನ—

. . —ಸಂಧ್ಯಾಸಮಯ ಅವನು ಪಲ್ಲಕ್ಕಿಯಲ್ಲಿ ಕುಳಿತುಕೊಂಡು ತನ್ನ ಬಂಗಲೆಯ ಕಡೆಗೆ ಹೊರಟಿದ್ದ. ಹೋಗುತ್ತಿದ್ದ ಪಲ್ಲಕ್ಕಿ ಒಮ್ಮಿಂದೊಮ್ಮೆಲೆ ನಿಂತುಕೊಂಡಿತು. "ಏನು ಏನಾಯಿತು ಏಕೆ ನಿಂತಿರಿ?" ಎಂದು ಆತ ಒಳಗಿನಿಂದಲೇ ಗುಡುಗಿದ.

"ಕೂಲಿಕಾರರ ಮದುವೆಯ ಮೆರವಣಿಗೆಯೊಂದು ಇತ್ತ ಕಡೆಗೆ ಬರುತ್ತಲಿದೆ. ಅದಕ್ಕೆ ನಿಲ್ಲಬೇಕಾಯಿತು" ಎಂದ ನೌಕರ ವಿನಮ್ರ ಧ್ವನಿಯಲ್ಲಿ.

"ಕೂಲಿಕಾರರ ಮದುವೆಯ ಮೆರವಣಿಗೆಯೆ—ಥುತ್! ಒಂದು ಬದಿಯಿಂದ ಹೋಗುವಂತೆ ಹೇಳು" ಎಂದು ಅಪಹಾಸ್ಯದ ರೀತಿಯಲ್ಲಿ ಅಜ್ಞಾಪಿಸಿದ.

"ಈ ರಸ್ತೆಯೇನು ನಿಮ್ಮದಲ್ಲ. ಈ ರಸ್ತೆಯ ಮೇಲೆ ನಡೆ[illegible] ಹಕ್ಕು ನಮಗೂ ಇದೆ. ನಾವು ಸರಿಯುವುದಿಲ್ಲ, ಹೀಗೆಯೇ ಹೋಗುವರು" ಎಂದು ಅನ್ನುತ್ತಿದ್ದಾರೆ ಒಡೆಯಾ ಎಂದುಸುರಿದ ಆಳುಕಿನ ಧ್ವನಿಯಿಂದ ಒಬ್ಬ ನೌಕರ,

ಎಲ್ಲಿಂದಲೋ ಬಂತು ಸಿಟ್ಟು ಆತನಿಗೆ. ಕೆಣಕಿದ ಹಾವಿನಂತೆ ಬುಸುಗುಡುತ್ತಾ

"ಆ ತುಂಟರನ್ನೆಲ್ಲಾ ಜೊಣ್ಣೆಯಿಂದ ಹೊಡೆದು ನಮ್ಮ ದಾರಿ-ಯಿಂದ ಸರಿಸು. ಇವರು ನಮ್ಮ ದಾರಿಯಲ್ಲೇಕೆ ನಡೆಯುತ್ತಿದ್ದಾರೆ?"

ಸಿರಿವಂತನ ಆಜ್ಞೆಯಾಗುವುದೊಂದೇ ತಡ; ಜೊಣ್ಣೆಗಳ ಸುರಿ-ಮಳೆ ಪ್ರಾರಂಭವಾಯಿತು; ಲಾಠಿಗಳ ಪ್ರಹಾರವೂ ಪ್ರಾರಂಭವಾ-ಯಿತು. ಪೆಟ್ಟು ಬಿದ್ದ ಕೂಲಿಕಾರರೆಲ್ಲ ಅತ್ತಿತ್ತ—ಚೀರಾಡುತ್ತ—ಓಡಲಾರಂಭಿಸಿದರು. ಕೆಲ ಕ್ಷಣದಲ್ಲಿಯೇ ಅಲ್ಲಿ ಒಬ್ಬ ಕೂಲಿಕಾರನೂ ಕಣ್ಣಿಗೆ ಬೀಳಲಿಲ್ಲ.

ಆದರೆ ಆ ಕೂಲಿಕಾರರ ಆರ್ತನಾದ ಅವನ ತಲೆಯನ್ನು ಕೆಡಿಸಿಬಿಟ್ಟಿತ್ತು.

"ಪಲ್ಲಕ್ಕಿಯನ್ನು ಕೆಳಗಿಳಿಸಿರಿ. ನನಗೀಗ ಸ್ವಲ್ಪಹೊತ್ತು ಆರಾಮದ ಆವಶ್ಯಕತೆ ಇದೆ" ಎಂದನಾತ ಬೇಸರ ಹಾಗೂ ಜುಗು-ಪ್ಸೆಯ ಧ್ವನಿಯಿಂದ.

ಮೈಯೆಲ್ಲ ಕಾಯ್ದು ಕೆಂಡದಂತೆ ತಪ್ತವಾಗಿತ್ತು. ಅವನಿದುರಿ-ನಲ್ಲಿ ಅವನ ನೌಕರರೆಲ್ಲ ಕೈ ಕಟ್ಟಿ ತಲೆತಗ್ಗಿಸಿಕೊಂಡು ನಿಂತಿದ್ದರು. ಪಟ್ಟಣದ ಮಹಲಿನ ದ್ವಾರವು ಇವನ ಪ್ರತೀಕ್ಷೆಯಲ್ಲಿ ಕಾದು ನಿಂತಿತ್ತು.

ಅವನು ಸುತ್ತಲಿನ ಸೃಷ್ಟಿಯನ್ನೊಮ್ಮೆ ಈಕ್ಷಿಸಿದ. ತನ್ನ ಕೆಂಪಾದ ಕಣ್ಣುಗಳಿರಡನ್ನೂ ಮೇಲಕ್ಕೆತ್ತಿ ಆಕಾಶದೆಡೆಗೆ ದೃಷ್ಟಿ ಬೀರುತ್ತಾ ಎಂದ. "ಎಲೆವೋ ದೇವರೆ; ಈ ಬಡ ಕೂಲಿಕಾರರ ಹತ್ತಿರ ದುಡ್ಡು-ದುಗ್ಗಾಣಿಯಿಲ್ಲ, ಇರಲು ಬಂಗಲೆಗಳಿಲ್ಲ, ನೌಕರ ಚಾಕರರಂತೂ ಮೊದಲೇ ಇಲ್ಲ.

ಹೀಪಿದ್ದೂ ನೀನೇಕೆ ಇವರನ್ನು ಹುಟ್ಟಿಸಿದೆ? ಏನು ನಮ್ಮಂಥ-ವರ ದಾರಿಯಲ್ಲಿ ಅಡ್ಡವಾಗಿ ನಿಲ್ಲಲು ಹಾಗೂ ನಮ್ಮ ವೇಳೆಯನ್ನು ಹಾಳು ಮಾಡಲು ಹುಟ್ಟಿಸಿದೆಯೋ ಏನೋ? ಯಾರಿಗೆ ಗೊತ್ತು?

ಇಂತಹ ಜಗತ್ತಿಗೆ ಇವರಂಥ ದೀನ-ದರಿದ್ರರ, ಬಡವ-ಕಂಗಾ-ಲರ ಆವಶ್ಯಕತೆಯಾವರೂ ಏನಿತ್ತು? ? ?

ಗಾಳಿಯೊಂದು ಅಲೆಅಲೆಯಯಗಿ ತೇಡಿಕೊಂಡು ಹೋಯಿತು. ಅವನ ಮಾತುಗಳು ಮೇಲಿದ್ದ ಆ ಭಗವಂತನ ಕಿವಿಗೆ ಬಿದ್ದುವೋ ಇಲ್ಲವೋ ತಿಳಿಯಲಿಲ್ಲ — ಕ್ಷಣವೊಂದು ಕಳೆದುಹೋಯಿತು.

ಸಿರಿವಂತ ಪಲ್ಲಕ್ಕಿ ಏರಿದ. ಆಳುಗಳು ಹೊತ್ತರು. ಪಲ್ಲಕ್ಕಿ ಮಹಲಿನೆಡೆಗೆ ಸಾವಕಾಶವಾಗಿ ಹೊರಟಿತು. ಆದರೂ ಇಂದಿಗೂ ಆ ಪ್ರಶ್ನೆ ಒಡೆಯದ ಒಗಟಾಗಿದೆ. ಇಂತಹ ಜಗತ್ತಿಗೆ ಇವರಂತಹ ದೀನ-ದರಿದ್ರರ, ಬಡವ-ಕಂಗಾಲರ ಆವಶ್ಯಕತೆಯಾದರೂ ಏನಿತ್ತು??

ಏನಿತ್ತು? ? ? ○

?

ಮೂಲ ಹಿಂದೀ ಲೇಖಕ 'ಸುದರ್ಶನ' ಅವರ ಕೃತಿ.

ಮಳೆ ನಿಂತಮೇಲೆ ಮಲ್ಲಿಗೆ

ಶೀ. ಜ. ಶ್ರೀ. ಜ. ದೇವದುರ್ಗ

೧

ಮಲ್ಲಿಗೆ ಹೂಗಳೆ, ಮಲ್ಲಿಗೆ ಹೂಗಳೆ
ಪಲ್ಲವರಾಶಿಯ ನಡುವಿಹ ಸುಮಗಳೆ,
ಚೆಲುವನು ಚೆಲ್ಲುತ ಶೋಭಿಸುತಿರಲಿಳೆ.
ಗೆಲು-ನಗು ನಗುತಿರುವರಳುಗಳೆ !

೨

ಮಳೆಯಲಿ ನೆನೆಯುತ ಹನಿಗಳ ತುಳುಕಿಸಿ
ಹಾಲುಗುಳುವ ಶಿಶುಲೀಲೆಯ ತೋರಿಸಿ,
ನಲವನು ಪಸರಿಸಿ ದುಗುಡವ ಮರೆಯಿಸಿ
ಮೆರೆವಿರಿ ಸರುವರ ಮೈಮರೆಸಿ.

೩

ನೀಲಿಯ ಬಾನಲಿ ಮಿರುಗುವ ತಾರಗೆ-
ಯಂತಿರೆ ಹಸಿರಲಿ ಬೆಳಗುವ ಮಲ್ಲಿಗೆ,
' ಮಲ್ಲಿಗೆ, ಮಲ್ಲಿಗೆ ' ನುಡಿ ನೀ ಮೆಲ್ಲಗೆ,
ನಲ್ಲೆಯ ಮೆಲ್ನಗೆ ಈ ಮಲ್ಲಿಗೆ.

೪

ಕಮಲದ ತೆರದಲಿ ಪಂಕವ ಸೋಂಕದು,
ಗುಲಾಬಿಯಂದದಿ ಗರ್ವದಿ ಕೊಬ್ಬದು,
ತಿಳಿನಗೆ ತಿಳಿಬಗೆ ಹಿತನುತವಿರುವುದು,
ಈ ಕುಶಲತೆಗೆಲ್ಲಿದೆ ಪಡಿಯದು !

೫

ಮಳೆಯದೆ ನಿಂತಿರೆ, ಮಲ್ಲಿಗೆಯರಳುತಿರೆ,
ಪುಳಕವ ತಳೆದಿರೆ ತಿರೆ, ಹರಿದಿರೆ ತೊರೆ,
ಕರಕರೆ ಮರೆದಿರೆ, ನಲ್ಲೆಯ ನೀ ಕರೆ,
ಅರಳಿದ ಅರಳುವ ಹೂ ತೋರೆ !

* * * *

೬

ನಿಮ್ಮಿಂದಾಯಿತು ಅಂಗಳ ಮಂಗಳ
ಮಕ್ಕಳ ಅಕ್ಕರೆಯುಕ್ಕಿತು ನೋಡಿs
ಆಯಿತು ಮಡದಿಯ ಮುಡಿ, ಕಂಬಿನ ಗುಡಿ;
ಕವಿಮನದಲಿ ಮೂಡಿತು ಸವಿನುಡಿ,

೭

ಮಲ್ಲಿಗೆಯಂತಿರೆ ಬಾಳುವೆ ಶುಭ್ರವು,
ಸುಂದರವಾಗಲು ಸುತ್ತಲು ಸರುವವು,
ಹಗುರಾಗಲು ಭೂಮಿಯ ಬಹು-ಭಾರವು,
ಅಹುದದು ಜೀವನ ಸುಖಸಾರವು.

❋

ಮಣ್ಣು — ಕಲ್ಲು

"ರಂಜನ" ಭಟ್ಟ, ಮದ್ರಾಸ್

❋

ಮಣ್ಣಿನಲ್ಲೂ ನೊಳೆಯಬಹುದು
ಹಸಿರು ಚಿಗುರು ಕಾಣಬಹುದು,
ಕಣಜ ಕಣಜ ಏಳಬಹುದು
ನಾಡೆನಾಡೆ ಉಳಿಯಬಹುದು—

ಕಲ್ಲಿನಲ್ಲೂ ಚಿಮ್ಮಬಹುದು
ಬಾನೆತ್ತರ ಭವ್ಯವು
ಕಲ್ಲಿನಲ್ಲೂ ಬಾಳಬಹುದು
ಶಾಪತಪ್ತ ಜೀವವು;

ಕಲ್ಲಿನಲ್ಲೂ ನೊರೆಯಬಹುದು
ನಾಳೆನಾಳೆ ಗೀತವು.

* * *

ನಾನೆ ಮಣ್ಣು, ನಾನೆ ಕಲ್ಲು
ನನಗೂ ಇರದೆ ಮುಕ್ತಿಯು ?

ಮಣ್ಣಿನಂಥ ಮಣ್ಣು ಕೂಡ
ನೊಳೆತು ಚಿಗಿತು ಅರಳಲು

ಕಲ್ಲಿನಂಥ ಕಲ್ಲುಕೂಡ
ಕೂಗಿಕರೆದು ಸಾರಲು

ನಾನೆ ಮಣ್ಣು ನಾನೆ ಕಲ್ಲು
ನನಗೂ ಇರದೆ ನಾಳೆಯು —

ಸುತ್ತ ಮಣ್ಣು ಹರಡುತಿಹುದು
ತನ್ನ ಇಂದ್ರಜಾಲವ,

ಕಲ್ಲುಕೂಡ ಉಲಿಯುತಿಹುದು
ಯುಗಯುಗಳ ಒಸಗೆಯ—

ಮಣ್ಣಿಗಿಂತ ಮಣ್ಣೆ ನಾನು ?
ಕಲ್ಲಿಗಿಂತ ಕಲ್ಲೆ ನಾನು ?
ನಾನೆ ಮಣ್ಣು, ನಾನೆ ಕಲ್ಲು
ನನಗೂ ಬರದೆ ನಾಳೆಯು ?

ಇತಿಹಾಸದ ತೊಡಕುಗಳನ್ನು ಬಿಡಿಸಬಲ್ಲ ಪರಮಾಣು

(ವೈಜ್ಞಾನಿಕ ಲೇಖನ).

ಮಿ. ಲಿನ್‌ವುಲ್ ಜಾನ್‌ಹಾಪ್‌ಕಿನ್ಸ್ ವಿಶ್ವವಿದ್ಯಾಲಯ, ಅಮೇರಿಕೆ.

ಭಾವನಾತ್ಮಕ ಸತ್ಯಗಳಷ್ಟೇ ಅಲ್ಲ; ಇದುವರೆಗೆ ಕಂಡುಹಿಡಿದಿರುವ ವೈಜ್ಞಾನಿಕ ಸತ್ಯಗಳೂ, ಇಂದಿನ ವೈಜ್ಞಾನಿಕ ಸೂಕ್ಷ್ಮ ಸಂಶೋಧನೆಗಳಿಂದ ತಲೆಕೆಳಗಾಗುತ್ತಲಿವೆ. 'ಇಂಗಾಲ-೧೪' ಇಂದಿನ ವಿಜ್ಞಾನಿಗಳ ಅಂತಹ ಒಂದು ಮಹತ್ತ್ವದ ಸಂಶೋಧನೆ

ಮೂವತ್ತು ಸಹಸ್ರ ವರ್ಷಗಳಷ್ಟು ಹಿಂದೆ ಸಿದ್ಧವಾದ ಪ್ರಾಚೀನ ವಸ್ತುಗಳ ಜನ್ಮದಿನವಷ್ಟು ಕಂಡು ಹಿಡಿಯ ಬಯಸುವ ವಿಜ್ಞಾನಿಗಳಿಗೆ ಬೇಕಾದ ಅಂಶಗಳನ್ನು ಇಂಗಾಲ-೧೪ರ ರೇಡಿಯೋ ವಿಕಿರಣದ ಪರಮಾಣುಗಳಿಂದ ವಿಸರ್ಜಿತವಾಗುವ ಪರಮಾಣು ವಿಕಿರಣಗಳು ಒದಗಿಸಬಲ್ಲವಾಗಿವೆ. ಈ ಶೋಧನಾವಿಧಾನದ ಫಲವಾಗಿ ವಿಸ್ಮಯಕಾರಕವೆನಿಸುವ ಅನೇಕ ಹೊಸ ಸಂಗತಿಗಳು ಬೆಳಕಿಗೆ ಬಂದಿವೆ; ಬಹುಕಾಲದಿಂದ ವಿದ್ವಾಂಸರುಗಳು ಹೊಂದಿದ್ದ ನಂಬುಗೆಗಳು ಬುಡಮೇಲಾಗಿವೆ.

ಕ್ಯಾಲಿಫೋರ್ನಿಯದ ಬರ್ಕ್ಲೆ ವಿಶ್ವವಿದ್ಯಾನಿಲಯದ ಇಬ್ಬರು ವಿಜ್ಞಾನಿಗಳು ೧೯೪೦ರಲ್ಲಿ ಇಂಗಾಲ-೧೪ನ್ನು ಕಂಡುಹಿಡಿದರು. ಏಳು ವರ್ಷಗಳ ನಂತರ ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ರಸಾಯನ-ಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಡಿ. ವಿಲ್ಲರ್ಡ್ ಎಫ್. ಲಿಬ್ಬಿ ಅವರಿಗೆ ಹೊಸ ವಿಚಾರವೊಂದು ಹೊಳೆಯಿತು. ಅನಾದಿ ಕಾಲದಿಂದಲೂ ಹೊರ ಆಕಾಶದ ವಿಶ್ವಕಿರಣಗಳು ಭೂಮಿಯ ವಾತಾವರಣದ ಮೇಲೆ ದಾಳಿ ಮಾಡುತ್ತಿವೆಯೆಂಬ ಸಂಗತಿ ಅವರಿಗೆ ತಿಳಿದಿತ್ತು. ಭೂಮಿಯಿಂದ ಐದು ಮೈಲು ಎತ್ತರದಲ್ಲಿರುವ ಸಸಾರಜನಕದ ಕಿರಣಗಳಿಗೆ ವಿಶ್ವಕಿರಣಗಳು ಡಿಕ್ಕಿ ಹೊಡೆಯುವುದರ ಪರಿಣಾಮವಾಗಿ, ರೇಡಿಯೋ ವಿಕಿರಣದ ಇಂಗಾಲ-೧೪ರ ಪರಮಾಣುಗಳು ಸೃಷ್ಟಿಯಾಗಿ ಅವು ಭೂಸಂಪರ್ಕವನ್ನು ಹೊಂದುತ್ತವೆ. ಇಂಗಾಲದ ಡಯಾಕ್ಸೈಡಿನ ರೂಪದಲ್ಲಿರುವ ಇಂಗಾಲ-೧೪ನ್ನು, ಜೀವಂತವಾಗಿರುವ ಸಸ್ಯಗಳು, ಪ್ರಾಣಿಗಳು ಮತ್ತು ಮನುಷ್ಯರೂ ಹೀರಿಕೊಳ್ಳುತ್ತಾರೆ. ಆದರೆ ಜೀವ ಹೋದೊಡನೆಯೇ ಇಂಗಾಲ-೧೪ರ ಸೇವನೆ ನಿಂತು ಹೋಗುತ್ತದೆ, ಮತ್ತು ನಿರ್ದಿಷ್ಟ ಪ್ರಮಾಣದಲ್ಲಿ ಅದರ ವಿಸರ್ಜನೆ ಆರಂಭವಾಗುತ್ತದೆ. ೫೫೬೦ ವರ್ಷಗಳಲ್ಲಿ ಇಂಗಾಲ-೧೪ರ ಅರ್ಧದಷ್ಟು ವಿಸರ್ಜಿತವಾಗುತ್ತದೆ. ಎಂದರೆ ಸುಮಾರು ೬೦೦೦ ವರ್ಷಗಳಲ್ಲಿ ವಸ್ತುವಿನಲ್ಲಿರುವ ಇಂಗಾಲ-೧೪ರ ಅರ್ಧದಷ್ಟು ಹೊರಬೀಳುತ್ತದೆ.

ಆದುದರಿಂದ ಜೀವಂತವಾಗಿದ್ದಾಗ ಇಂಗಾಲ-೧೪ನ್ನು ಹೀರಿಕೊಂಡ ವಸ್ತುವಿನಲ್ಲಿ ಎಷ್ಟು ಇಂಗಾಲ-೧೪ ಉಳಿದಿದೆ ಎಂಬುದನ್ನು ಅಳತೆ ಮಾಡಬಹುದು. ವಸ್ತುವೊಂದರಲ್ಲಿ ಉಳಿದಿರುವ ಇಂಗಾಲ-೧೪ರ ನೊತ್ತವನ್ನು ಅಳತೆ ಮಾಡಬಲ್ಲ ಸೂಕ್ಷ್ಮ ಉಪಕರಣವೊಂದನ್ನು ಸಿದ್ಧಪಡಿಸಬಹುದಾದರೆ, ಇಂಗಾಲ-೧೪ ಯಾವ ಪ್ರಮಾಣದಲ್ಲಿ ನಷ್ಟವಾಗಿದೆಯೆಂಬ ಸಂಗತಿ ತಿಳಿದುಬರುತ್ತದೆ. ತನ್ಮೂಲಕ ವಸ್ತುವಿನ ವಯಸ್ಸನ್ನು ಲೆಕ್ಕಾಚಾರ ಮಾಡಬಹುದು ಎಂಬ ನಂಬುಗೆ ಡಾ. ಲಿಬ್ಬಿಯವರಲ್ಲಿ ಬೆಳೆದುಬಂತು,

ಡಾ. ಲಿಬ್ಬಿಯವರು ತಮ್ಮ ಆಯೋಜನೆಯನ್ನು ಅಭಿವೃದ್ಧಿಪಡಿಸಿದರು. ಉಪಕರಣವನ್ನು ಸಿದ್ಧಪಡಿಸಿದರು. ಈಜಿಪ್ಟಿನ ಒಂದು ಮರದ ತುಂಡಿನ ಮೇಲೆ ಪ್ರಯೋಗ ನಡೆಸಿದರು. ಆ ಮರದ ತುಂಡು ಕ್ರಿ. ಪೂ. ೩೭೦೦ರಲ್ಲಿ ಮೃತನಾದನೆಂದು ಹೇಳಲಾದ ಈಜಿಪ್ಟಿನ ದೊರೆ ಸ್ಟಿಸ್ ಎಂಬಾತನ ಗೋರಿಯಲ್ಲಿದ್ದ ಸಮಾಧಿಯ ದೋಣಿಯದು. ಆ ಮರದಲ್ಲಿದ್ದ ರೇಡಿಯೋ ವಿಕಿರಣ ಇಂಗಾಲ-೧೪ನ್ನು ಅಳತೆ

ಮಾಡಿತು. ಗಣಿತದ ಪರಿಕರ್ಮಗಳಾದುವು. ಇಂಗಾಲ-೧೪ ರಿಂದ ಗುರುತಿಸಲಾದ ವಿಕಿರಣದಿಂದ ದೊರೆ ಸೆಸೋಸ್ಟ್ರಿಸ್ ಕ್ರಿ. ಪೂ. ಸುಮಾರು ೩೭೦೦ ರಲ್ಲಿ ಮೃತನಾದನೆಂದು ಉತ್ತರ ಬಂತು.

ಪ್ರಪಂಚದ ಎಲ್ಲಾ ಕಡೆಗಳಿಂದ ಮಾದರಿಗಳು ಬರತೊಡಗಿದುವು. ಅವುಗಳ ಮೇಲೆಲ್ಲಾ ಪ್ರಯೋಗಗಳನ್ನು ನಡೆಸಲಾಯಿತು. ಈಜಿಪ್ಟಿನಿಂದ ಬಂದ ಗೋಧಿ ಮತ್ತು ಬಾರ್ಲಿಯ ಬೀಜಗಳು ೫೭೦೦ ವರ್ಷಗಳಷ್ಟು ಹಳೆಯವೆಂದು ತಿಳಿದು ಬಂತು. ಇರಾಕಿನಿಂದ ಬಂದ ಇದ್ದಿಲ ತುಂಡು ೬೬೦೦ ವರ್ಷಗಳಷ್ಟು ಹಳೆಯದಾಗಿತ್ತು. ಚಿಕಾಗೋ ಮರಳಿನಲ್ಲಿ ದೊರೆತ ಪದರವಾಗಿದ್ದ ಮರ, ೪೫೦೦ ವರ್ಷಗಳಷ್ಟು ಹಿಂದಿನದೆಂದು ಸಿದ್ಧವಾಯಿತು. ಕ್ಯಾಲಿಫೋರ್ನಿಯಾದ ಮಾಂಟೆರಿ ಕೌಂಟಿನಲ್ಲಿ ದೊರೆತ ಸಾವಯವ ವಸ್ತು ೧೬೦೦೦ ಸಾವಿರ ವರ್ಷಗಳ ಹಿಂದಿನದೆಂದೂ, ಒರೆಗಾನಿನ ನ್ಯೂಬೆರಿ ಜ್ವಾಲಾಮುಖಿಯ ಬಾಯಿಯಲ್ಲಿದ್ದ ಮಾದರಿ ೨೦,೦೦೦ ವರ್ಷಗಳದೆಂಬೂ ವಿದಿತವಾಯಿತು.

ಈ ಹೊಸ ವಿಧಾನವನ್ನು ಕಂಡು ಪ್ರಾಚ್ಯವಾಸ್ತುಶಾಸ್ತ್ರಜ್ಞರಲ್ಲಿಯೂ, ಮಾನವಶಾಸ್ತ್ರಜ್ಞರಲ್ಲಿಯೂ, ಭೂವಿಜ್ಞಾನಿಗಳಲ್ಲಿಯೂ, ಭೂಗೋಳ ಶಾಸ್ತ್ರಜ್ಞರಲ್ಲಿಯೂ ರೋಮಾಂಚನವಾಯಿತು. ಈ ಮುಂಚೆ ತಿಳಿದು ಬರದಿದ್ದ ಅಂಕಿ ಅಂಶಗಳೂ, ತಾರೀಖುಗಳೂ ಬೆಳಕಿಗೆ ಬಂದುವು. ಜಟಿಲವಾದ ಇತಿಹಾಸದ ವೇಳಾಪಟ್ಟಿಯೊಂದು ಸಿದ್ಧವಾಗತೊಡಗಿತು. ನಿಕರವಾದುವೆಂದುಭಾವಿಸಲಾಗಿದ್ದ ವೇಳಾಪಟ್ಟಿಗಳು ಬುಡಮೇಲಾದವು.

ನ್ಯೂಯಾರ್ಕ್ ಸಂಸ್ಥಾನದ ಉತ್ತರವಿಭಾಗದ ಒಂದು ಕಡೆಯಲ್ಲಿ ಅನೇಕ ವರ್ಷಗಳ ಕೆಳಗೆ ಕೆಲವು ಇಂಡಿಯನ್ ಅವಶೇಷಗಳು ದೊರೆತುವು. ಈ ಅವಶೇಷಗಳು ಯಾವ ಬುಡಕಟ್ಟಿನವರಿಗೆ ಸೇರಿದುವೆಂಬ ಸಂಗತಿ ಪ್ರಾಚ್ಯ ವಾಸ್ತುಶಾಸ್ತ್ರಜ್ಞರಿಗೆ ತಿಳಿದಿತ್ತು. ಕ್ರಿಸ್ತನ ಜನನಾನಂತರದ ತರುಣದಲ್ಲಿ ಅಂದರೆ ಸುಮಾರು ೧೯೦೦ ವರ್ಷಗಳ ಕೆಳಗೆ ಆ ಬುಡಕಟ್ಟಿನವರು ಈ ಪ್ರದೇಶದಲ್ಲಿ ನೆಲೆಗೆದಂಡಿದ್ದರೆಂದು ಅಂದಾಜು ಮಾಡಿದ್ದರು. ಈ ವಿಭಾಗದಲ್ಲಿ ೧೯೫೦ರಲ್ಲಿ ಮತ್ತಷ್ಟು ಅವಶೇಷಗಳು ದೊರೆತುವು. ಅವನ್ನು ಇಂಗಾಲ-೧೪ರ ಪರೀಕ್ಷೆಗೆ ಒಳಪಡಿಸಲಾಯಿತು. ಈ ವಸ್ತುಗಳು ಈಗಾಗಲೇ ಜ್ಞಾತವಾಗಿದ್ದ ಬುಡಕಟ್ಟಿಗೆ ಸೇರಿದುವಲ್ಲ. ಕ್ರಿ. ಶ. ೩೦೦೦ ವರ್ಷಗಳ ಹಿಂದೆ ಆ ಪ್ರದೇಶದಲ್ಲಿ ನೆಲೆಸಿದ್ದ ಬೇರೊಂದು ಬುಡಕಟ್ಟಿಗೆ ಸೇರಿದುವು ಎಂದು ತಿಳಿದುಬಂದಾಗ, ಪ್ರಾಚ್ಯ ವಸ್ತುಶಾಸ್ತ್ರಜ್ಞರಿಗೆ ವಿಸ್ಮಯವಾಯಿತು. ತತ್ಪರಿಣಾಮವಾಗಿ ಈ ಪ್ರದೇಶದ ಚರಿತ್ರೆಯ ವೇಳಾಪಟ್ಟಿಯಲ್ಲಿ ಬಹಳ ಬದಲಾವಣೆಯಾಯಿತು.

ಇಂಗಾಲ-೧೪ರ ಸಂಶೋಧನೆಗಳ ಕತೆ ಪತ್ತೆದಾರಿ ಕತೆಯಂತಿದೆ. ಮಂಚೂರಿಯದ ಪ್ರ-ಲು ಐನ್ ಗ್ರಾಮದ ಹೊರಗೆ ಒಂದಾಗಿ ಹೋದ ಒಂದು ಸರೋವರವಿದೆ. ನೀರು ಯಾವಾಗ ಬತ್ತಿಹೋಯಿತೊ ಯಾರೂ ಅರಿಯರು. ನೀರು ಬತ್ತಿದಾಗ ಕೆಸರಿನಲ್ಲಿ ಉಳಿದ ನೀರಿನ ಕಮಲದ ಕೆಲವು ಬೀಜಗಳು, ಮಣ್ಣನ್ನು ಅಗೆದಾಗ ಜಪಾನಿನ ಸಸ್ಯ ಶಾಸ್ತ್ರಜ್ಞನೊಬ್ಬನಿಗೆ ದೊರೆತುವು. ಈ ಬೀಜಗಳು ೧೦೦೦ ವರ್ಷಗಳಷ್ಟು ಹಳೆಯವೆಂದು ಇಂಗಾಲ-೧೪ರಿಂದ ವ್ಯಕ್ತವಾಯಿತು. ಅಂದರೆ ಸರೋವರ ಬತ್ತಿದ ಕಾಲ ಇದರಿಂದ ತಿಳಿದು ಬಂತು.

ಈ ಬೀಜಗಳಲ್ಲಿ ಕೆಲವು ಮೊಳೆತುವು. ೨೦೦ವರ್ಷಗಳಿಗಿಂತಲೂ ಹಿಂದಿನ ಬೀಜಗಳು ಮೊಳೆಯಲಾರವು ಎಂದು ಭಾವಿಸಿದ್ದ ಸಸ್ಯ ಶಾಸ್ತ್ರಜ್ಞರಿಗೆ ವಿಸ್ಮಯವಾಯಿತು. ಈ ಪರಿಸ್ಥಿತಿಯಲ್ಲಿ ೧೦೦ ವರ್ಷಗಳಷ್ಟು ಹಳೆಯ ಕಮಲದ ಬೀಜಗಳು ಮೊಳೆಯುವುವೆಂಬ ಸಂಗತಿ ಹೊರಬಿತ್ತು.

ಅನೇಕ ಬೀಜಗಳನ್ನು ವಾಷಿಂಗ್‌ಟನ್ ಡಿ. ಸಿ. ಯಲ್ಲಿರುವ ನ್ಯಾಷನಲ್ ಕ್ಯಾಪಿಟಲ್ ಪಾರ್ಕ್‌ಗಳಿಗೆ ಕಳಿಸಲಾಯಿತು. ೧೯೫೫ರ ಫೆಬ್ರುವರಿ ೨೫ನೇ ತಾರೀಖು ಅವುಗಳನ್ನು ಬಿತ್ತನೆಗೆ ಸಿದ್ಧಪಡಿಸಲಾಯಿತು. ಮಾರ್ಚ್ ೩ನೆಯ ತಾರೀಖು ಒಂದು ಬೀಜ ಮೊಳೆಯಿತು. ಎರಡು ದಿನಗಳನಂತರ ಮತ್ತೊಂದು ಮೊಳೆಯಿತು. ಮಾರ್ಚ್ ೬ನೇ ತಾರೀಖು ಸಸಿಗಳನ್ನು ನೆಡಲಾಯಿತು. ೧೯೫೫ನೆಯ ಜೂನ್ ೧೫ನೆಯ ತಾರೀಖು ಗಿಡದಲ್ಲಿ ಮೊಗ್ಗುಗಳು ಬಂದು ೧೬ ಪಟ್ಟಗಳ ಕೆಂಬಣ್ಣದ ಹೂವುಗಳಾಗಿ ಅರಳಿದುವು! ಮೊದಲ ಹೂವುಗಳಿಂದ ಬೀಜಗಳನ್ನು ಸಂಗ್ರಹಿಸಿ ಬಿತ್ತಿ, ಮೊಳಕೆ ಮಾಡಿ, ನೆಟ್ಟು ಬೆಳೆಸಲಾಯಿತು.

ವಾಷಿಂಗ್‌ಟನ್ ಡಿ.ಸಿ. ಯಲ್ಲಿರುವ ಕೆನಿಲ್‌ವರ್ತ್ ಅಕ್ವಾಟಿಕ್ ಗಾರ್ಡನ್ನಿಗೆ ನೀವು ಭೇಟಿ ಇತ್ತರೆ, ಮಂಚೂರಿಯದ ಬಯಲು ಕಾಡಿನಲ್ಲಿ ೧೦೦೦ ವರ್ಷಗಳ ಕಾಲ ತಟಸ್ಥವಾಗಿ ಉಳಿದಿದ್ದ ಬೀಜಗಳಿಂದಬೆಳೆದ ಮನೋಹರವಾದ ಈ ಹೂವುಗಳನ್ನು ನೋಡಬಹುದು. ಪ್ರಾಚೀನತೆಯನ್ನು ಪತ್ತೆಮಾಡುವ ಹಾಗೂ ಮತ್ತಿತರ ವೈಜ್ಞಾನಿಕ ಸಂಶೋಧನೆಗಳಿಗೆ ಉಪಯುಕ್ತವಾದ ಈ ಇಂಗಾಲ—೧೪, ಸೂಕ್ಷ್ಮದರ್ಶಿಯ ನಂತರ ಕಂಡುಹಿಡಿಯಲಾದ ಪ್ರಮುಖ ವೈಜ್ಞಾನಿಕ ಉಪಕರಣವೆಂದು ವಿಜ್ಞಾನಿಗಳು ನಂಬಿದ್ದಾರೆ.

‡ ಯು. ಎಸ್. ಎ. ಇನ್‌ಫರ್ಮೇಶನ್ ಸರ್ವಿಸಿನವರಿಂದ ಬಂದುದು.

◀ ವರದಿಗಾರ ▶

ಬಲ್ಗೇರಿಯದ ಸಣ್ಣ ಕಥೆ

ಹ್ರಿಸ್ತೋ ಸ್ಮಿರ್ನೆನ್ಸ್ಕಿ*

ಬಲ್ಗೇರಿಯಾ ಆದರೇನು, ಭಾರತವಾದರೇನು, ಎಲ್ಲ ಕಡೆಯಲ್ಲಿಯೂ ಮಾನವನ ಜೀವನಸಮಸ್ಯೆಗಳು ಒಂದೆ ಬಗೆಯವಾಗಿರುವುವು. ಹೊಟ್ಟೆಗಾಗಿ ವ್ಯಕ್ತಿತ್ವವನ್ನು ಮಾರಿಕೊಂಡು ಪತ್ರಿಕಾವರದಿಗಾರನಾದ ಒಬ್ಬ ಬಡವನ ಜೀವನ ಚಿತ್ರವಿದು. ಸುಂದರವಾದ ವಿಡಂಬನೆ.

"ನಿನ್ನಿಂದ ನನಗೆ ಬೇಕಾದುದೆಲ್ಲ ಇಷ್ಟೆ. ಎರಡು ಆತ್ಮಹತ್ಯೆ, ಒಂದು ಪ್ರಾಣಹರಣ ಪ್ರಯತ್ನ, ಒಂದು ದುರವಸ್ಥೆಯ ಮರಣ, ಎರಡು ಅಥವಾ ಮೂರು ಕಳ್ಳತನಗಳು, ಇನ್ನೂ ಇಂತಹ ಕೆಲವು ಸಣ್ಣ ವಿಷಯಗಳು. "—ಎಂದು ಸಂಪಾದಕರು ಹೇಳಿದರು.

ನಾನು ಹತಾಶನಾಗಿ ತತ್ತರಿಸಿಹೋಗುತ್ತಾ,—"ಅದು ಹೇಗೆ ಸಾಧ್ಯ?" ನಾನೇನೂ ಅಪರಾಧಿಯಲ್ಲ! ನನ್ನಿಂದ ನೀವು ಒಂದು ಆತ್ಮಹತ್ಯೆ ಪಡೆಯುವುದು ಸಾಧ್ಯವಾಗಬಹುದು! ಆದರೆ ನೀವು ಎರಡು ಕೇಳುತ್ತೀರಿ! ಕೊಲೆ ಮತ್ತು ಕಳ್ಳತನಗಳ ವಿಷಯದಲ್ಲಂತೂ, ಅದು ನನಗೆ ಸಾಧ್ಯವಾಗದ ಮಾತು!" ಎಂದೆನು.

ಸಂಪಾದಕರು ತಮ್ಮ ಚೂಪುಗೊನೆಯ ಚೂರುಗಡ್ಡವನ್ನು ಸವರುತ್ತ, ಅನುಗ್ರಹಪೂರ್ವಕ ದೃಷ್ಟಿಯಿಂದ ಮಂದಹಾಸ ಬೀರುತ್ತ, ನನಗೆ ತಮ್ಮ ಅಭಿಪ್ರಾಯವನ್ನು ವಿವರಿಸಿದರು:

"ಇಂಥಹ ಕೆಲಸ ನೀನೆಂದೂ ಮಾಡಿಲ್ಲಾಂತ ಕಾಣುತ್ತೆ—ಅದು ಸ್ಪಷ್ಟ! ಆದರೆ....ನೀವು ನನ್ನ ಮಾತು ತಪ್ಪಾಗಿ ತಿಳಿದುಕೊಂಡಿದ್ದೀರಿ....

ಅವರು ನನಗೆ ದೀರ್ಘ ವಿವರಣೆಗಳನ್ನಿತ್ತರು. ಆತ್ಮಹತ್ಯೆ ಮಾಡಿಕೊಳ್ಳುವುದಾಗಲೀ, ಅಥವಾ ಕಳ್ಳತನ ಮಾಡುವುದಾಗಲೀ ಅಥವಾ ಬ್ಲೇರಾವುದಾದರೂ ಅಪರಾಧವನ್ನು ಮಾಡುವುದಾಗಲೀ ಅನಾವಶ್ಯಕವೆಂಬುದನ್ನು ನಾನು ಮನಗಂಡೆನು. ನನ್ನ ಲೇಖನಿಯೇ ನನ್ನ ಅನ್ನವನ್ನು ಗಳಿಸುವುದೆಂಬುದನ್ನೂ, ಆ ಕೆಲಸಕ್ಕೆ ಕೋವಿಯು ಬೇಕಾಗಿಲ್ಲವೆಂಬುದನ್ನೂ ನಾನು ಅರಿತುಕೊಂಡೆನು.

* * * *

ನಾನು ಬೀದಿಯಲ್ಲಿ ಸಂಚರಿಸುತ್ತಿದ್ದೆ. ಈ ಹೊತ್ತು ಅದೃಷ್ಟವೇನೂ ಲಭಿಸಲಿಲ್ಲ. ನಾನು ಆರು ತಿಂಗಳಿಂದ ಕೆಲಸ ಮಾಡುತ್ತಿದ್ದೇನೆ. ಯಾವಾಗಲೂ ಸುದ್ದಿಗಳನ್ನು ಒದಗಿಸುತ್ತ ಬಂದಿದ್ದೇನೆ—ಬೇಕಾಗಿದ್ದುದಕ್ಕಿಂತ ಹೆಚ್ಚಾಗಿಯೇ! ಆದರೆ ಈ ದಿನ ಒಂದು ಸಣ್ಣ ತುಂಡು ಸುದ್ದಿ ಕೂಡ ಇಲ್ಲ. ಅತ್ಯಂತ ಸಾಧಾರಣವಾದ ಸುದ್ದಿ ಸಹ ಇಲ್ಲವೇ ಇಲ್ಲ! ನನಗೆ ಕನಿಷ್ಠಪಕ್ಷ ಒಂದಾದರೂ ಕೊಲೆ ಬೇಕಾಗಿತ್ತು! ಹೌದು! ಬೇಕಾಗಿದೆ! ಎಲ್ಲಿ....ಕೊರಳು ಪಟ್ಟಿ ಮೇಲೆತ್ತಿ ಹೋಗುವಾತನೇ, ನಿನ್ನ ಜೇಬಿನಿಂದ 'ರಿವಾಲ್ವರ್' ಹೊರಗೆ ತೆಗೆದು, ಅಲ್ಲಿ ಹೋಗುತ್ತಿರುವ ಆ 'ಬೌಲರ್' ಟೊಪ್ಪಿಗೆಯ ಮಹಾಶಯನಿಗೆ ಗುರಿಯಿಟ್ಟು ಹೊಡೆ. ಊಂ! ಹಾರಿಸು ಗುಂಡು!....ಛಂ! ಆತ ಬಿದ್ದನೆಂದರೆ, ನಾನು ಸೀಸದ ಕಡ್ಡಿಯನ್ನೂ, ಟಿಸ್ಪಣಿ–ಪುಸ್ತಕವನ್ನೂ ಹೊರತೆಗೆದುಕೊಂಡು, ಎಲ್ಲವನ್ನೂ ನಡೆದಂತೆ ಬರೆದುಕೊಳ್ಳುವೆನು. ದೊಡ್ಡ ಸುದ್ದಿ! ಹಾರಿಸು!

* * * *

ಆದರೆ ಆ ಕೊರಳುಪಟ್ಟಿ ಮೇಲೆತ್ತಿದ ಮನುಷ್ಯನು ಒಂದು ಪಾದರಕ್ಷೆ ಅಂಗಡಿಯೊಳಕ್ಕೆ ಪ್ರವೇಶಿಸಿದನು. ಹೇಡಿ! ತುಚ್ಛ ಮನುಷ್ಯ! ಆ 'ಬೌಲರ್' ಟೊಪ್ಪಿಗೆಯ ಮಹಾಶಯನು ತನ್ನ ಪಾಡಿಗೆ ತಾನು ಹೊರಟುಹೋದನು ....ಶಾಂತನಾಗಿ!....ಹಾಳು ಸನ್ನಿವೇಶ! ಸುದ್ದಿ ಸಿಕ್ಕಲಿಲ್ಲ, ಏನೂ ಸುದ್ದಿಯೇ ಇಲ್ಲ!

ತತ್‌ಕ್ಷಣವೇ ಏನೋ ಧಡಧಡ ಶಬ್ದ ಎಲ್ಲಿಂದಲೋ ಬಂದಿತು. ಆ ಬಗ್ಗೆ ಸಂಶಯವೇ ಇಲ್ಲ. ಅವು 'ರಿವಾಲ್ವರಿನ' ಗುಂಡುಗಳೇ ಇರಬೇಕು! ನಾನು ಆ ದಿಶೆಯಲ್ಲಿ ಓಡಿದೆನು. ಅದೊಂದು ಪರಿಪಾಠದ ದೃಶ್ಯ, ಎಂದುಕೊಂಡೆನು. ಅಪ್ಪ ಕುಡುಕ; ಅವನ ಹೆಂಡತಿ ಬಯ್ಯುತ್ತಾಳೆ. ಅವನಿಗೆ ವಿಪರೀತ ಸಿಟ್ಟು. ಮೇಜಿನಿಂದ ಒಂದು 'ರಿವಾಲ್ವರ'ನ್ನು ಹೊರತೆಗೆದು, ಢೆಂಡನ್ಮೆಂಯಂ ಗುಂಡುಹಾರಿಸುತ್ತಾನೆ....ಹೆಂಡತಿ ಬೀಳುತ್ತಾಳೆ. "ಅಯ್ಯೋ, ದೇವರೇ!" ಎನ್ನುತ್ತಾ ಅತ್ತೆ ಕೂಗುತ್ತ ಓಡಿ ಬರುತ್ತಾಳೆ.... ದೊಡ್ಡ ಮಗ ಓಡಿಬರುತ್ತಾನೆ. ಛಂ! ಅವನೂ ಬೀಳುತ್ತಾನೆ. ಭಯೋತ್ಪಾತ, ರಕ್ತಪಾತ, ಕೋಲಾಹಲ!

ಶನಿಕಂಟ! ಕಲ್ಪನೆಯೆಲ್ಲಾ ಸುಳ್ಳಾಯಿತು! ಈ ಸಲವೂ ಏನೂ ಇಲ್ಲ. ಸಣ್ಣ ಹುಡುಗಿಯೊಬ್ಬಳು ಕಂಬಳಿ ಬಿದಿರಿಸುತ್ತಿದ್ದಾಳೆ! ಅದೇ ಧಡಧಡ ಶಬ್ದ!

* * * *

ನಾನಿನ್ನು ಮುಂದಕ್ಕೆ ಹೊರಟೆನು. ನನ್ನ ಜೇಬಿನಲ್ಲಿ ಒಂದೇ ಒಂದು ಲೆವ್ ಉಳಿದಿತ್ತು. ಅದನ್ನು ಹೊರತೆಗೆದು ಅಲ್ಲಿ ನಿಂತಿದ್ದ 'ಜಿಪ್ಸಿ' ಹುಡುಗನೊಬ್ಬನಿಗೆ ಕೊಡುತ್ತಾ, "ಹೋಗು, ಆ ಹುಡುಗನ ಕಪಾಳಕ್ಕೆ ಒಂದೇಟು ಕೊಡು!" ಎಂದು ಹೇಳಿದೆನು.

* ಭಾರತದಲ್ಲಿರು ಬಲ್ಗೇರಿಯಾ ರಾಯಭಾರಿ ಕಾರ್ಯಾಲಯದಿಂದ ಬಂದುದು. ಸಂ.

ನನ್ನ ಟಪ್ಪಣಿಪುಸ್ತಕವನ್ನು ಹೊರತೆಗೆದು, ಪರಿಣಾಮಕ್ಕಾಗಿ ಕಾದು ನೋಡಿದೆನು. ಆ 'ಜಿಪ್ಸಿ' ಹುಡುಗನು ಇನ್ನೊಬ್ಬನನ್ನು ಹೊಡೆಯುವನು. ಆ ಹುಡುಗನು ಇವನಿಗೊಂದು ಒದೆ ಕೊಡುವನು. ಒಬ್ಬ ದೊಡ್ಡ ಮನುಷ್ಯನು ಅಡ್ಡ ಬರುವನು. ಮತ್ತೊಬ್ಬಾತ, ಇನ್ನೊಬ್ಬಾತ, ಒಂದು ಗುಂಪೇ ನೇರುವುದು. ವಾದ-ವಿವಾದಗಳು ನಡೆಯುವುವು. ಆಮೇಲೆ ಅವರ ಪೈಕಿ ಇನ್ನಿಬ್ಬರು ಹೊಡೆದಾಡುವರು, ಇತ್ಯಾದಿ ಯೋಚನೆಗಳು!

ಆ 'ಜಿಪ್ಸಿ' ಹುಡುಗನು ಲೆವ್ ನಾಣ್ಯವನ್ನು ತೆಗೆದುಕೊಂಡು ಆ ಇನ್ನೊಬ್ಬ ಹುಡುಗನವರೆಗೂ ಹೋದನು. ಆಮೇಲೆ ತಕ್ಷಣವೇ ಅಕಡೆ ಪಕ್ಕದಲ್ಲೇ ಇದ್ದ ಗಲ್ಲಿಯೊಳಕ್ಕೆ ನುಗ್ಗಿ ತಪ್ಪಿಸಿಕೊಂಡು ಹೊರಟೇ ಹೋದನು. ತುಂಟ! ವೇಸಗಾರ! ನನಗೇ ಗಸ್ತುಕೊಟ್ಟ.

ಇನ್ನೇನೂ ಮಾಡುವಂತಿಲ್ಲ. ಆಸದ್ದಾಗಿಹೋಯಿತು. ಆ ದಿನ ಏನೂ ಸಂಭವಿಸುವ ಲಕ್ಷಣವೇ ಕಾಣಲಿಲ್ಲ. ಸಂಪಾದಕರಿಗೆ ಸಿಟ್ಟು ನೆತ್ತಿಗೇರುವುದು. ಪ್ರಾಯಶಃ ಆತನು ನನ್ನನ್ನು ಕೆಲಸದಿಂದಲೇ ತೆಗೆದು ಹಾಕುತ್ತಾನೇನೋ! ಒಳ್ಳೆಯದೇ, ತೆಗೆದುಹಾಕಲಿ! ನನ್ನ ಮಿತ್ರ ಗೋಪೋ ವಾಪಸು ಬಂದಿದ್ದಾನೆ; ಸಿಕ್ಕೆಪ್ಪ. ನನಗವನು ತಿಂಡಿ ದೇವಾ ಕೊಡಬೇಕಾದದ್ದಿದೆ. ನಾಳೆ ಭಾನುವಾರ ಖಂಡಿತ ಕೊಡುವುದಾಗಿ ಮಾತು ಕೊಟ್ಟಿದ್ದಾನೆ....ಆ ಹಣ ಬಂದರೆ, ಇನ್ನೊಂದು ಕೆಲಸ ಸಿಕ್ಕೋವರಿಗೂ, ಹೇಗೋ ಕಾಲ ಹಾಕಬಹುದು.

* * * *

ಅದರೆ, ಅದೇನಲ್ಲಿ ಜನಸಂದಣಿ?....ನಾನೂ ಅಲ್ಲಿಗೆ ಧಾವಿಸಿದೆ. ಒಂದು ಬಳಲಿದ ಕುದುರೆ ಬಿದ್ದಿತ್ತು. ಅವರ ಬಾಯಲ್ಲಿ ನೊರೆ ಬರುತ್ತಿತ್ತು. ಬಹುಶಃ ಅದು ಸಾಯಲೂ ಬಹುದು....ಈ ಗಾಡಿ ಹೊಡೆಯುವ ಜನ ಶುದ್ಧ ಕಟುಕಮನಸ್ಸಿನವರು ಮಾರೀ ಲೂಯಿಸೆ ರಸ್ತೆಯಲ್ಲಿ ಹೀಗೆಯೇ ಬಿದ್ದು ಸಾಯುವ ಕುದುರೆಗಳು ಎಷ್ಟೋ! ಇದಕ್ಕೆಲ್ಲ ಇವರೇ"

"ಪಕ್ಕಕ್ಕೆ ಸರಿ!" ಎಂದು ಯಾರೋ ಕೂಗಿದರು. ನಾನು ಬರೆಯುವುದನ್ನು ನಿಲ್ಲಿಸಿ ತಲೆಯೆತ್ತಿ ನೋಡಿದೆನು....ಈ ಅವಕಾಶವೂ ಹೋಗಬೇಕೆ?....ಆ ಹಾಳು ಕುದುರೆ ಎದ್ದೇಬಿಟ್ಟಿತು! ಇಷ್ಟುಮಾತ್ರಕ್ಕೆ ಕೆಳಗೆ ಏಕೆ ಬೀಳಬೇಕಾಗಿತ್ತೋ! ಈ ಜೀವದ ಭಾರವನ್ನೇ ಕಳೆದುಕೊಂಡಿದ್ದರೆ, ಅದಕ್ಕೇ ಚೆನ್ನಾಗಿರುತ್ತಿರಲಿಲ್ಲವೇ?

ನಾನು ಇನ್ನೂ ಮುಂದಕ್ಕೆ ಹೊರಟೆನು ಮುದುಕಿಯೊಬ್ಬಾಕೆ ದಾರಿಯಲ್ಲಿ ಕಾಲು ಜಾರಿ ಕೆಳಗೆ ಬಿದ್ದಳು. ನನ್ನ ಟಪ್ಪಣಿ ಪುಸ್ತಕ ತತ್‌ಕ್ಷಣವೇ ಹೊರಕ್ಕೆ ಬಂದಿತು. ಆಕೆ ಪ್ರಾಯಶಃ ಇನ್ನು ಮೇಲಕ್ಕೆ ಏಳುವುದಿಲ್ಲ.... ಊಹುಂ! ಅದೂ ನಿರಾಸೆಯಾಯಿತು. ಆ ಮುದುಕಿ ಎದ್ದೇ ಎದ್ದಳು! ಇವತ್ತೇನೂ ಅದೃಷ್ಟವೇ ಇಲ್ಲ. ಹಾಗೆಂತಲೇ ಹೇಳಬೇಕಾಗಿದೆ!

"ಏನು?! ಆತ್ಮಹತ್ಯೆ ಎಂದಿರಾ?! ಅರ್ಧ ನಿಮಿಷ ಆಯಿತೆ?! ....ದಾರಿಬಿಡಿ, ದಾರಿಬಿಡಿ!"

"ಇದೇನು ಆತ್ಮಹತ್ಯೆಯೇ?!" ಎಂದು ನಾನು ಹೆಣ್ಣಾಳನ್ನು ಕೇಳಿದೆನು.

"ಹೌದು, ಆ ವಿದ್ಯಾರ್ಥಿ ತನಗೆ ತಾನೇ ಗುಂಡಿಟ್ಟುಕೊಂಡು ಸತ್ತನು!"

"ಒಳ್ಳೆಯದು! ಹಾಗೆಯೇ ಇರಬೇಕು! ಅದೇ ಸರಿ! ಆತನದೇ ಸರಿಯಾದ ಕಲ್ಪನೆ!"— ಎಂದು ನಾನು ಕೂಗಾಡುತ್ತ ಆ ಹೆಣ್ಣಾಳಿಗೆ ಹೃತ್ಪೂರ್ವಕ ಧನ್ಯವಾದ ಹೇಳಿದೆನು. ಆಮೇಲೆ ಅವಸರವಸರವಾಗಿ ನೆಟ್ಟಲುಗಳನ್ನೇರಿ ನಡೆದೆನು.

"ನೀವೀಗ ಬಂದೇನೂ ಪ್ರಯೋಜನವಿಲ್ಲ, ನಿಮಗಿಂತಲೂ ಮೊದಲು ಇನ್ನೂ ಎಷ್ಟೋ ಜನ ಬಂದು ಹೋಗಿದ್ದಾರೆ"— ಎಂದು ಆ ಹೆಣ್ಣಾಳು ಗೊಣಗುಟ್ಟಿದಳು

ನಾನು ನನ್ನ ಟಪ್ಪಣಿ ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ಆ ಕೊಠಡಿಯೊಳಕ್ಕೆ ಹೋದೆನು. ಜನಸಂದಣಿಯಲ್ಲಿ ಒಳನುಗ್ಗಿದೆನು. ಸಂತಸದಿಂದ ನನ್ನ ಮುಖ—ಹೊಳೆಯುತ್ತಿತ್ತು, ಸುದ್ದಿ ಸಿಕ್ಕಿತಲ್ಲಾ ಎಂದು. ಅದರೆ ಇದ್ದಕ್ಕಿದ್ದ ಹಾಗೆಯೇ ನನ್ನ ಮೊಣಕಾಲುಗಳು ಕುಸಿದುಬಿದ್ದವು ನಾನು ನಿಲ್ಲಲಾರದಾದೆನು. ಅಲ್ಲೇ ಇದ್ದ ವಿಶ್ರಾಮಕುರ್ಚಿಯ ಮೇಲೆ ಕುಸಿದುಬಿದ್ದೆನು. ಆತ್ಮಹತ್ಯೆ ಮಾಡಿಕೊಂಡಿದ್ದ ವಿದ್ಯಾರ್ಥಿಯು ಬೇರೆ ಯಾರೂ ಅಲ್ಲ. ಅವನೇ ಗೋಪೋ— ಭಾನುವಾರ ನನ್ನ ಇನ್ನೂರು ಲೇವಾ ನಾಲ ತೀರಿಸುವುದಾಗಿ ಮಾತುಕೊಟ್ಟಿದ್ದ ಗೋಪೋನೇ ಈಗ ಸತ್ತುಬಿದ್ದಿದ್ದ! ನನಗೆ ನಾಲ ತೀರಿಸಬೇಕಾದ ಏಕಮಾತ್ರ ವ್ಯಕ್ತಿ ಗೋಪೋ ಇನ್ನಿಲ್ಲದಾದನು. ಈ ಆತ್ಮಹತ್ಯೆಗೆ ಅವನು ಇಷ್ಟೇಕೆ ಆತುರಪಡಬೇಕಾಗಿತ್ತು? ಸೋಮವಾರದವರೆಗೂ ಸುಮ್ಮನಿರಬಾರದಾಗಿತ್ತೆ?!

ಯಾರೋ ನನ್ನ ಮೇಲೆ ತಣ್ಣೀರೆರಚಿದರು. "ನಿನಗೇನಾಯಿತು?"—ಎಂದು ಯಾರೋ ವ ಹಿಳೆಯು ಅಳುತ್ತಳುತ್ತ ನನ್ನನ್ನು ಕೇಳಿದಳು.

"ಏನೂ ಇಲ್ಲ. ಬಳಲಿ ಬಿದ್ದೆ ಅಷ್ಟೆ!"

* * * *

"ದಯವಿಟ್ಟು ನಿನ್ಹೆಸರೇನು, ತಿಳಿಸುತ್ತೀರಾ? ಮೃತರಿಗೂ ನಿಮಗೂ ಏನು ಸಂಬಂಧ? ನೀವು ಅವರನ್ನು ಎಷ್ಟು ದಿನಗಳಿಂದ ಬಲ್ಲಿರಿ? ಅವರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣ ಏನಿರಬಹುದು, ನಿಮ್ಮ ಅಭಿಪ್ರಾಯದಲ್ಲಿ?"—ಎಂದು ಚೆನ್ನಾಗಿ ಉಡುಪು ಧರಿಸಿದ್ದ ಮಹಾಶಯನೊಬ್ಬನು ನನ್ನನ್ನು ಕೇಳಿದನು.

"ಅದೆಲ್ಲ ನಿಮಗೇಕೆ ಬೇಕು? ನೀವು ಯಾರು?"

"ನಾನೊಬ್ಬ ವರದಿಗಾರ!"

"ನಾವಿಬ್ಬರೂ ಹಾಳಾಡೆವು! ನೀನೂ-ನಾನೂ ಕೂಡ! ನಾನೂ ಕೂಡ ನಿನ್ನ ಹಾಗೆಯೇ....ವರದಿಗಾರ!"

ಸಾಹಿತ್ಯ ವಿಮರ್ಶೆಯ ಶಿಕ್ಷಣ ರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ **'ವರದ ಶಾಪ'** ಕಥೆಯನ್ನು ಕುರಿತು ವಿಮರ್ಶೆಗಳು ೫ ಜನರಿಂದಲೂ, 'ಪದ್ಮಕ್ಕನ ಕೊನೆಯ ದಿನ' ಕಥೆಯ ವಿಮರ್ಶೆ ಒಬ್ಬರಿ ಒಬ್ಬರಿಂದಲೂ ಬಂದಿವೆ. 'ಪದ್ಮಕ್ಕನ ಕೊನೆಯ ದಿನ' ಎಂಬುದರಲ್ಲಿಯ ಸಾಮಾಜಿಕ ಪರಿಸ್ಥಿತಿಯ ಸೂಕ್ಷ್ಮ ವ್ಯಂಗ್ಯ, ಬಹುಜನರ ಮನಸ್ಸನ್ನು ತಟ್ಟಿದಂತೆ ಕಾಣಲಿಲ್ಲ.

'ವರದ ಶಾಪ' ಕಥೆಯ ವಿಮರ್ಶಕರು:

೧ ಶ್ರೀ. ಡಿ. ಸಿ. ದಾನಣ್ಣನವರ ಬಿ. ಎ. (ಆನರ್ಸ್), ಡಿ. ಇಡಿ. ಸೊರಬ. ೨ ಶ್ರೀ. ಜಿ. ಬಿ. ಕುಲಕರ್ಣಿ ಜ್ಯೂ. ಬಿ. ಎ. ಜನತಾ ಕಾಲೇಜ್, ಧಾರವಾಡ. ೩ ಶ್ರೀ. ಕೆ. ರಾಮಚಂದ್ರರಾವ್, ಲಕ್ಷ್ಮೀಪುರಂ, ಮೈಸೂರು. ೪ ಶ್ರೀ. ರಂಗರಾವ ಸ್ವಾಮಿರಾವ ದೇಶಪಾಂಡೆ, ಅಲದಕಟ್ಟಿ. ೫ ಶ್ರೀ. ಕೆ. ವಿ. ತಿರುಮಲೇಶ, ಪನ್ನೆಪ್ಪಲ.

'ಪದ್ಮಕ್ಕನ ಕೊನೆಯ ದಿನ' ಕಥೆಯ ವಿಮರ್ಶಕರು:

೧ ಶ್ರೀ. ಕೆ. ಎನ್. ಭಟ್ಟ, ನೀರ್ಚಾಲು (ದ. ಕ.).

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಸಮಿತಿಯವರೇ ನೋಡಿ ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ:

'ವರದಶಾಪ' ಎಂಬ ಕಥೆಯನ್ನು ಎರಡು ಬಗೆಯ ದೃಷ್ಟಿಗಳಿಂದ ನೋಡುವವರು ನಮ್ಮ ವಾಚಕವರ್ಗದಲ್ಲಿ ಇದ್ದಾರೆ. ಪುರಾಣದ ಕಥೆಗಳಿಗೆ ವಾಸ್ತವ ಜೀವನದ ಅರ್ಥವನ್ನು ಹಚ್ಚಿ, ಅದರಲ್ಲಿಯ ಪಾತ್ರಗಳನ್ನು ಮಾನವ ಸಹಜಭಾವದಿಂದ ಚಿತ್ರಿಸುವ ನವ್ಯ ಕಥೆಗಾರಿಕೆಯನ್ನು ಆಕ್ಷೇಪಿಸುವವರೂ ಇರುವರು; ಕಥೆಯ ಕಲಾನೈಪುಣ್ಯವನ್ನು ಮೆಚ್ಚಿ ಬಣ್ಣಿಸುವವರೂ ಇರುವರು. ಈ ಕಥೆಯ ವಿಮರ್ಶಕರು ಐದೇ ಜನರಿದ್ದರೂ ಅವರಲ್ಲಿ ಇಬ್ಬರು ಸಂಪ್ರದಾಯಿಕ ದೃಷ್ಟಿಯವರಾಗಿರುವರು.

ಎಲ್ಲ ವಿಮರ್ಶಕರೂ ತಮ್ಮ ತಮ್ಮ ದೃಷ್ಟಿಯಿಂದ ಒಳ್ಳೆಯ ವಿಮರ್ಶೆಗಳನ್ನೇ ಬರೆದಿರುವರು. ಕಥೆಗಾರನ ನವ್ಯದೃಷ್ಟಿಯನ್ನು ಆರ್ಥ ಮಾಡಿಕೊಂಡು ಬರೆದ ವಿಮರ್ಶೆಗಳಲ್ಲಿ ಶ್ರೀ. ಜಿ. ಬಿ. ಕುಲಕರ್ಣಿಯವರ ವಿಮರ್ಶೆ ಅತ್ಯುತ್ತಮವಾಗಿದೆ; ಶ್ರೀ. ಡಿ. ಸಿ. ದಾನಣ್ಣನವರ ಅವರ ವಿಮರ್ಶೆ ಉತ್ತಮವಾಗಿದೆ. ಸಾಂಪ್ರದಾಯಿಕ ದೃಷ್ಟಿಯಿಂದ ಬರೆದ ವಿಮರ್ಶೆಗಳಲ್ಲಿ ಶ್ರೀ. ರಂಗರಾವ ಸ್ವಾಮಿರಾವ ದೇಶಪಾಂಡೆ ಅವರ ವಿಮರ್ಶೆ ಉತ್ತಮವಾಗಿದೆ;* ಶ್ರೀ. ಕೆ. ವಿ. ತಿರುಮಲೇಶ ಅವರದು ಒಳ್ಳೆಯವಾಗಿದೆ.

'ಪದ್ಮಕ್ಕನ ಕೊನೆಯ ದಿನ' ಎಂಬ ಕಥೆಯನ್ನು ಕುರಿತು ಬಂದ ವಿಮರ್ಶೆ, ತೀರ ಪ್ರಾರಂಭದ ಪ್ರಯತ್ನವಾಗಿದೆ. ಈ ಮೇಲಾಟದಲ್ಲಿ ಜಯ ದೊರೆಯಲಿಲ್ಲವೆಂದು ಅವರು ಹಿಂಜರಿಯುವ ಕಾರಣವಿಲ್ಲ. ಪ್ರಯತ್ನವನ್ನು ಮುಂದುವರಿಸುತ್ತ ಹೋದರೆ, ಮುಂದೆ ಅವರು ಒಳ್ಳೆಯ ವಿಮರ್ಶಕರಾಗಬಹುದು. ಅವರ ಪ್ರಾರಂಭದ ಪ್ರಯತ್ನಕ್ಕಾಗಿ ಧನ್ಯವಾದಗಳು.

ಮುಂದಿನ ತಿಂಗಳ ವಿಮರ್ಶೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಸೋಮುಣ್ಣಿ ಮಾವ' ಎಂಬ ಕಥೆಯನ್ನಾಗಲಿ 'ಮಂಜುಳಾ' ಎಂಬ ಕಥೆಯನ್ನಾಗಲಿ ವಿಮರ್ಶೆಗೆ ತೆಗೆದುಕೊಳ್ಳಬೇಕು.

— ಸಂಪಾದಕರು

---

* ಈ ವಿಮರ್ಶೆ ಒಂದು ಸ್ವತಂತ್ರ ಲೇಖನದಂತೆ, ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗುವುದು. ಸಂ. ಚ.

ವರದ ಶಾಪ

(ಕಥೆಯ ವಿಮರ್ಶೆ)

ಶ್ರೀ. ಜಿ. ಬಿ. ಕುಲಕರ್ಣಿ, ಜ್ಯೂ. ಬಿ. ಎ.,

ಜನತಾ ಕಾಲೇಜ್, ಧಾರವಾಡ

ಸಮಾಜದ ಸಾಕ್ಷಿಯಾಗಿ ಜನಿಸಿದ ಕನ್ಯೆ, ಅದರ ಸಾಕ್ಷಿಯಾಗಿ ಸಂಸಾರದಲ್ಲಿ ಕಾಲಿರಿಸಿ ಸಂತಾನ ಪಡೆದರೆ ಅದೇ ನಿಜವಾದ ಮಾತೃತ್ವ. ಅದನ್ನೊಂದೆಡೆಗೆ ಮರೆದು, ಸಮಾಜದ ಮರೆಯಲ್ಲಿ ಗುಪ್ತ ಪ್ರಣಯದಿಂದೊಡಗೂಡಿದ ತಾಯ್ತನ—ಎಷ್ಟೇ ದಿನ ಬಾಳಿದರೂ–ಅದು ಬರಡು. ತಾಯ್ತನದ ಕರುಣೆ ಅದರಲ್ಲಿ ಒಡಮೂಡಿಲ್ಲವೆಂದಲ್ಲ. ಒಡಮೂಡಿದರೂ ಅದು ತೆರೆಯಮರೆಯಲ್ಲಿಯ ಅವ್ಯಕ್ತ ಮಮತೆಯಾಗಿ ಪರಿಣಮಿಸುತ್ತದೆ. ಇಂತಹ ಅವ್ಯಕ್ತ ಆದರೆ ಮಮತೆಯಿಂದೊಡಗೂಡಿದ ಮಾತೃತ್ವದ ಅವಾರ ಕರುಣಾಘಾತಕ್ಕೆ ಸಿಲುಕಿ ಸೀಗುರಿಗೊಂಡ ಕುಂತೀಭೋಜನ ಕುವರಿ ಪೃಥಾಕುಮಾರಿಯ ನೊಂದ ಮನದ ಭಾವನೆಗಳು ಈ ಕಥೆಯಲ್ಲಿ ಒಡಮೂಡಿವೆ.

ಜೀವನವನ್ನಿನ್ನೂ ತುಂಬುಗಣ್ಣುಗಳಿಂದ ನೋಡದ ಪೃಥಾ, ಋಷಿವರ್ಯ ದುರ್ವಾಸರಿಗೆ ಭಕ್ತಿಪೂರ್ವಕವಾದ ಆತಿಥ್ಯವಿತ್ತಿದ್ದಾಳೆ. ಅವಳಿಗೆ ಅತಿಥಿ ಸಂತೋಷಗೊಳ್ಳುವ ಬಯಕೆಯೇ ಹೊರತು ಬೇರೆ ಅಭಿಲಾಷೆಯಿಲ್ಲ. ಪಿತನ ಪ್ರಸನ್ನತೆ, ದುರ್ವಾಸನ ಮನದ ಮೋದ, ಇವೆರಡೇ ಪೃಥಾಕುಮಾರಿ ಬಯಸಿದ ಫಲ. ಆದರೆ? ವಿಧಿಯ ಲೀಲೆ ಲಲಾಟದಲ್ಲಿ ಲಾಸ್ಯವಾಡುತ್ತಿರುವಾಗ ಯಾರೇನು ಗೈಯಲು ಸಾಧ್ಯ? ಋಷಿ—ವರದ ಅವಶ್ಯಕತೆಯಿಲ್ಲದ ಕುಂತೀಭೋಜನ ಕುಮಾರಿಗೆ ವರವನ್ನು ಕೊಡಲು ಆತುರರಾಗಿದ್ದಾರೆ. ಆ ವರವೇ ಒಂದು ಭಯಂಕರ ಶಾಪವಾಗಿ ಪರಿಣಮಿಸಿ, ಪೃಥೆಯ ಜೀವನ ಮೊದಲೇ ನೊಂದು ಬೇಯುವ ತೆರನಾಯಿತು. ಇಲ್ಲಿಯೇ ' ವರದ ಶಾಪ ' ಕಥೆಯ ಪ್ರಾರಂಭ.

ದುರ್ವಾಸರು ಕೋಪದ ಅಪರಾವತಾರ. ಅವರು ಪ್ರೀತರಾಗುವುದೇ ಅಪರೂಪ. ಆದರೆ ಸತ್ಕಾರದ ವಿಷಯದಲ್ಲಿ ಉದ್ಭವವಾದ ಪ್ರೀತಿ, ಪೃಥೆಯ ಜೀವನವನ್ನು ಪಾವನಗಂಗೆಯನ್ನಾಗಿಸಿ ಪರಿಪೂರ್ಣಗೊಳಿಸಲಿಲ್ಲ. ಬಿಸಿಗಾಳಿಯ ಸ್ಪರ್ಶ ಬೆಂದ ಹೃದಯಕ್ಕೆ ಸೋಂಕಿದಂತಾಯಿತು. " ಜೀವನಕ್ಕೆ ಅದಾವ ವರ ಬೇಕು? " ಇದೇ ಪೃಥಾಕುಮಾರಿಗೆ ಎದುರಿಸಲಾಗದ ಸಮಸ್ಯೆ. ಆದರೂ ದುರ್ವಾಸರೂ ಹೇಳುತ್ತಿದ್ದಾರೆ, " ಅಗತ್ಯವಿದೆ ಪೃಥಾ " ಸಾಕು, ಇದೊಂದೇ ನುಡಿ, ಪೃಥೆಯ ಬಾಳನ್ನು ಹೊಕ್ಕು ಕೋಲಾಹಲವನ್ನೆಬ್ಬಿಸಿತು. ಬಾಹ್ಯಪ್ರಪಂಚದ ಅರಿವೇ ಗೋಚರಿಸದ ಪೃಥಾಳಿಗೆ, ದುರ್ವಾಸರು ಬಹು ದೂರಭವಿಷ್ಯದ ಬಯಕೆಯ ಅರಿವನ್ನು ಮೂಡಲೆಳಸಿ, ಅವಳ " ಪ್ರಿಯದರ್ಶನ " ನಲಗಮನವನ್ನು ಬರಿಯೆ ಮನದಿಂದಲೇ ಆಹ್ವಾನಿಸುವ ಶಕ್ತಿ ನೀಡಿದರು. ಎಂದೆಂದೂ ಅಭಿಶಾಪವೀಯುತ್ತಿದ್ದ ದೂರ್ವಾಸರು ಅಪ್ಪಿತಪ್ಪಿ ವರವನ್ನಿತ್ತರೂ, ಅದು ಶಾಪವಾಗಿ ಪರಿಣಮಿಸಬೇಕೆ? ವಿಧಿಯ ಕುಣಿತ ದುರ್ವಾಸರ ರಸನಾರಂಗದಿಂದ ಕೆಳಗಿಳಿದು ಕುಮಾರಿಯ ಬಾಳಿನ ಕಡಲಿನಲ್ಲಿ ಧುಮುಕಿತು. ಪ್ರಾರಂಭವಾಯಿತು. ಅದರ ಲಲಿತರೂಪಧಾರಣೆಯ ವಿಕಟಾಟ್ಟಹಾಸ. ಅಮೃತವೆಂದುಸೇವಿಸಿದ ಪೃಥಾ ವಿಷಪಾನದ ಬಾಧೆಯನ್ನನುಭವಿಸುವಳೆಂದು ಯಾರಿಗೆ ಗೊತ್ತು? ವರವನ್ನು ಕೊಟ್ಟ ದುರ್ವಾಸರು, ಅದರ ಪರಿಣಾಮವನ್ನು ನಿರೀಕ್ಷಿಸಲಿಲ್ಲವೇನೋ! ಅದಕ್ಕೆ ಸಿಲುಕಿದ ಬಲಿಮಾತ್ರ ಮುಗ್ಧಹೃದಯದ, ಸಂಸಾರವನ್ನು ನಿರ್ಮಲಭಾವದಿಂದ ಕಂಡ ಪೃಥಾ. ಆದರೆ ಈ ವರದ ಲೀಲಾವಿಲಾಸವನ್ನು ಸಮಾಜವು ಸಹಿಸದಿರುವಾಗ, ಅಬಲೆ ಪೃಥಾ ಸಹಿಸುವುದು ಸಾಧ್ಯವೇ? ಅದಕ್ಕೆ ಉತ್ತರ ಕತೆಯ ಕೊನೆಯಲ್ಲಿ ದೊರೆತರೂ, ಪೃಥಾಳ ಬಾಳು ಮಾತ್ರ ಬಿಸಿಲಿಗೆ ಬಾಡಿದ ಪುಷ್ಪವಾಯಿತು. ನೇಸರಿನ ಉದಯದಿಂದ ವಿಕಸಿತವಾದ ಹೂ, ಅವನ ಉರಿಬಿಸಿಲಿನಿಂದಲೇ ಕಳಚಿಬೀಳುವ ತೆರನಾಯಿತು. ಆಗ ಅವಳಿಗೆ ತಿಳಿಯಿತು, ಋಷಿಯ ವರಪ್ರದಾನ ಶಾಪದ ಬಟ್ಟಲವನ್ನು ಬಚ್ಚಿಟ್ಟಿತ್ತೆಂಬುದು. ಪೂಜ್ಯರ ಬಗೆಗೆ ಪ್ರೀತ್ಯಾದರಗಳನ್ನು ತೋರಿದ ಪೃಥಾ, ಅವರು ನೀಡಿದ ವರಕ್ಕೆ ಅಸವಾದವಾಗಿದ್ದಳು. ಕಾರಣ ಅವಳು ಕುಮಾರಿ, ವಿವಾಹ ಪೇದಿಕೆಯನ್ನೇರದ ವನು.

ದುರ್ವಾಸರೇನೋ ನಿಷ್ಕ್ರಮಿಸಿದರು. ಆದರೆ ಆ 'ವರ' ಮಾತ್ರ ನಿಷ್ಕ್ರಮಿಸಲಾರದು. ಅದು ಮುನಿವಾಣಿ. ಅದಕ್ಕೆ ಬದಲಾಗದ ಸ್ಥಿರತೆಯ ಜೀವನವನ್ನು ಬದಲಿಸುವ ಗತಿಯೂ ಇದೆ. ಆದರೆ ಆ ವರದ ಗತಿಯು ಕುಮಾರಿಯ ಮತಿಗೆ ತೋರಲಿಲ್ಲ. ಕೆಲದಿನಗಳ ನಂತರ ಪೃಥಾಳಿಗೆ ನಿಸರ್ಗ ನಿರೀಕ್ಷಣೆಯಿಂದ ತನ್ನಲ್ಲಿಯ " ಪ್ರಥಮ ಭಾವನೆ " ಯ ಅರಿವಾಯಿತು. ನಿಸರ್ಗದ ರಮ್ಯತೆಯ ಹಿನ್ನೆಲೆಯಲ್ಲಿ ಲೇಖಕರು ಮುಸಿಯ ವರದ ಬಯಕೆ ಮನದಲ್ಲಿ ಜನಿಸುವುದನ್ನು ಒಳ್ಳೇ ಮಾರ್ಮಿಕವಾಗಿ ಕತೆಯಲ್ಲಿ ನಿರ್ಮಿಸಿದ್ದಾರೆನ್ನಲಡ್ಡಿಯಿಲ್ಲ. ನಿಸರ್ಗದ ಅವಲೋಕನದಿಂದ ಪೃಥಾಳಲ್ಲಿ ಉದಯಿಸಿದ ಭಾವ ಬೆಳಕಿಗೆ ಬಂದುದು ಲೇಖಕರ ಕೌಶಲದ ದ್ಯೋತಕ.

ಪ್ರಭಾತದಲ್ಲಿ, ನಸುಗತ್ತಲಿನಲ್ಲಿಯೇ ಸರಸಿಯಲ್ಲಿ ಮಿಂದ ಪೃಥಾ, ಉದಯದೃಶ್ಯಮಣಿಯನ್ನು ವೀಕ್ಷಿಸಿದ್ದೇ ಮನದ ಬಯಕೆಯಾಗಿ ಪರಿ–

ಣಮಿಸಿತು. ಬರಿಯ ನೋಟದಿಂದಲೇ ಮನದ ಬಯಕೆ ಹೊರಬೀಳುತ್ತಿದ್ದರೆ, ಋಷಿಯ ವರದಲ್ಲಿ ಅದೆಂತಹ ಸೂಕ್ಷ್ಮತೆ ಅಡಗಿರಬೇಕು! ಅಂತೂ ದಿನಮಣಿಯನ್ನು ಬಯಸಿದ ಪೃಥಾಳಿದುರಿಗೆ ತಡಮಾಡದೆ ಬಿಜಯಗೈದಿದ್ದಾನೆ ತರಣಿ. ಈ ಸಮಯದಲ್ಲಿ ಅವನ ಮಹಾಮಂಡಲದ ಸೌಂದರ್ಯವರ್ಣನೆ ಚಿಕ್ಕದಾದರೂ ಹೊಕ್ಕವಾಗಿದೆ. ಮಿತಭಾಷೆಯಲ್ಲಿ ಹಿತವಾದ ಸೌಂದರ್ಯದ ತೇಜದ ದಿವ್ಯಪರಿಚಯವನ್ನು ಲೇಖಕರು ಮಾಡಿದುದು ಸಮಂಜಸ.

ಸ್ಯಥಾ ಆ ತೇಜಸ್ವೀ ತರಣಿಯನ್ನು ಕಂಡಳೀನೋ ನಿಜ; ಕ್ಷಣದಲ್ಲಿಯೇ ಮನದ ಕಾಮನೆ ಲಜ್ಜೆಯೊಂದಿಗೆ ಸೆಣಸಿತು. "ಮನವು ಬಯಸಿದವರನ್ನು ಬರೀ ಬಯಕೆಯ ಶಕ್ತಿಯಿಂದಲೇ ಆಹ್ವಾನಿಸುವ. ದುರ್ವಾಸರ ವರ ಧಿಗ್ಗನೆ ಎದುರಿಗೆ ಬಂದು ನಿಂತು, ಕಾಮನೆಯೇ ವಿಜಯಿಯಾಗಿ ಭಾಸ್ಕರನಿಗೆ ಸುಸ್ವಾಗತ ಬಯಸಿತು. ಅವಳು ಕರೆಸಿದ ಕಾರಣ ಕೇಳಿ ಭಾಸ್ಕರನಿಗೂ ಹಾಸ್ಯವೆನಿಸಿತು. ಆದರೆ ಆ ಮುಗ್ಧ ಯೌವನೆಯ ಸರಲ ಸ್ವಭಾವದ ಅರ್ಥವೂ ಆತನಿಗೆ ಹೊಳೆಯದಿರಲಿಲ್ಲ. ಭೀತಿಗೊಂಡ ಪೃಥಾ ನೇಸರನ ನಿರ್ಗಮನ ಬಯಸಿದಳು. ಇದರಿಂದಂತೂ ಪೃಥಾ ಸಂಪೂರ್ಣವಾಗಿ ಅರಿಯದ ಹಸುಳೆ. ಅವಳಲ್ಲೀಗ ಪ್ರಮದೆಯ ಭಾವನೆಯಿದ್ದರೂ ಭಾಸ್ಕರನ ಮುಂದೆ ಅವಳಾಡುವ ಮಾತು ಯಾರಿಗೂ ಆಶ್ಚರ್ಯವನ್ನುಂಟುಮಾಡತಕ್ಕಂತಹುದೇ. ಪೃಥೆಯ ಆಸೆ ಕೊನರದಿದ್ದರೂ ಅವಳ ಕೌಮಾರ್ಯದ ಕೊನೆಯಾಯಿತು. ಆ ಕೊನೆಗೆ ಕಾರಣ ಭಾಸ್ಕರನೇ ಹೌದು. ಆದರೆ ಅವನಾದರೂ ವ್ಯರ್ಥವಾಗಿ ಬಂದನೆ? ಪೃಥಾ ಬೇಕೆಂತಲೇ ಬಯಸಿದಳೇ? ಪೃಥೆಯೇನೋ ಬಯಸಿದ್ದಳೆನ್ನಬಹುದು. ಏತರ ಬಲದಿಂದ? ಆದೇ ವಾಣಿ ದನಿಗೊಡುತ್ತಿದೆ! 'ನಿನ್ನ ಮನಬಂದವನನ್ನು ಬಯಸು!' ಆ ದುರ್ವಾಸರ ಪ್ರೀತ್ಯಾದರದ ಶಾಪಗರ್ಭದ ವರ. ಅದು ಪ್ರಕಟವಾಗಲು ಪರಿಪಕ್ವವಾಗುವ ಸಮಯ ಬಂದೊದಗಿತ್ತು. ಆದರೆ? ಇದೇ ಸ್ವಪ್ನರೂಪವಾಗಿ ಪೃಥೆಯ ಗಾಢನಿದ್ರೆಯಲ್ಲಿ ಪ್ರವೇಶಿಸಿ ಧಾತ್ರೇಯಿಕೆಗೂ ತಿಳಿಯುವ ಹಾಗಾಗಿದೆ.

ಧಾತ್ರೇಯಿಕೆಯೊಬ್ಬ ಸಾಮಾನ್ಯಳಂತಿದ್ದರೂ, ಪೃಥೆಯ ಜೀವನದಲ್ಲಿ ಅವಳ ಪಾತ್ರವು ಯಶಸ್ವಿಯಾಗುವಂತೆ ಲೇಖಕರು ಚಿತ್ರಿಸಿದ್ದಾರೆ. ಚತುರೆ ಧಾತ್ರೇಯಿಕಾ ಸ್ವಪ್ನರೂಪವನ್ನು ಭೇಧಿಸಿ ಅದರ ತಂತಿಯನ್ನು ವೀಣುವ ಪ್ರಯತ್ನಗೈದಿದ್ದಾಳೆ. ಪೃಥೆಯ ಪ್ರಣಯ ಜೀವನ ರಹಸ್ಯ ಗರ್ಭ ತೊರೆದು ಧಾತ್ರೇಯಿಕೆಯೆದುರು ಬಂದು ನಿಂತಿದೆ. ಪ್ರಣಯಿ ಭಾಸ್ಕರನೆಂದು ತಿಳಿದರೂ ಧಾತ್ರೇಯಿಕೆ ಉದ್ವೇಗಗೊಂಡಳು. ಅವಳಾಡುವ ಮಾತು ಇಂದಿನ ಸ್ತ್ರೀ ಜನಾಂಗದ ಸಮಸ್ಯೆಗಳಿಗೆ ಉತ್ತರರೂಪವಾಗಿದೆ. "ಅವಿವಾಹಿತ ಸ್ತ್ರೀಗೆ ಸ್ವ ಇಚ್ಛೆಯಿಂದ ಅಥವಾ ಔಪ್ಯವಾಗಿ ಅಥವಾ ಮನಬ್ಭಯಸಿದವರಿಗೆ ಆತ್ಮದಾನಗೈದು ಸಂತಾನವತಿಯಾಗುವ ಅಧಿಕಾರವಿಲ್ಲ!" ತಾಯ್ತನ ಸ್ತ್ರೀಯ ಹಕ್ಕು. ಆದರೆ ಆ ಮಾತೃತ್ವವೂ ಜನನ ಬಾಲ್ಯ ವಿವಾಹಗಳಂತೆ ಜನಸಾಕ್ಷಿಯನ್ನು ಬೇಡುತ್ತದೆ. ಬಾಹ್ಯಪ್ರಪಂಚದ ಕೈಗೂಸಾಗಿ ಬೆಳೆದ ಪೃಥಾ ಸಂಸಾರದ ಸಾಕ್ಷಿಯಿಲ್ಲದೆ ಮಾತೃತ್ವದ ಅಧಿಕಾರ ಪಡೆದರೆ ಗುಪ್ತ ಪ್ರಪಂಚದಂತೆ, ಬಾಹ್ಯಪ್ರಪಂಚ ಮನ್ನಿಣೆಯೀಯಲಾರದು. ಗುಪ್ತವಾಗಿ ಮಾತೃತ್ವ ಬಯಸಿದರೂ ಅದೊಂದು ಸ್ತ್ರೀಗೆ ಕಲಂಕವಾಗಿ ಪರಿಣಮಿಸುವುದು. ಜನಸಾಕ್ಷಿಯಾಗಿ ನಡೆದುದೇ ಆದರೆ, ಅದರಂತಹ ಮಂಗಲ, ಪವಿತ್ರ ಕಾರ್ಯವಿನ್ನೊಂದಿಲ್ಲ. ಮಾನವನ ಸಾಂಘಿಕ ಜೀವನ, ಸಾಮಾಜಿಕ ಜೀವನಗಳಿಗೆ ಈ ನುಡಿ ಕೈಗನ್ನಡಿ. ಸ್ತ್ರೀ-ಸಮಾಜಕ್ಕೊಂದು ದಾರಿದೀಪವಾಗಿದೆ ಧಾತ್ರೇಯಿಕೆಯ ವಚನ. ಗೃಹದ ಗೌರವಕ್ಕಾಗಿ "ಗುಪ್ತಪ್ರಣಯದ ಫಲ"ವನ್ನು ನೀರಿನಲ್ಲಿ ತೇಲಿಬಿಡುವ ನುಡಿ ಪೃಥೆಯ ಬಾಯಿಂದ ಹೊರಬಿದ್ದರೂ, ಧಾತ್ರೇಯಿಕೆಗೆ ಮಾತ್ರ ಅದು ಅಸಾಧ್ಯದ ಕೆಲಸ. ಮಾತೃತ್ವದ ಮರ್ಮವನ್ನರಿಯದ ಪೃಥಾ ಈ ನುಡಿಯನ್ನಾಡಿದಳೆಂದರೆ ಅವಳ ಮುಗ್ಧ ಸ್ವಭಾವಕ್ಕೇನೆನ್ನಬೇಕು?

ಹೀಗೆ ನುಡಿದ ಪೃಥಾ ಸರೋವರದ ತೀರದಲ್ಲಿ ನಿಶೆಯ ಆವರಣದಲ್ಲಿ "ಗುಪ್ತಪ್ರಣಯದ ಫಲವನ್ನು" ತೇಲಿಬಿಡಲು ಸಿದ್ಧಳಾಗಲಿಲ್ಲ. ನೌಕೆಯಲ್ಲಿ ಮಲಗಿದ ಹಸುಳೆ ಜಗತ್ತನ್ನೇ ಅರಿಯದು. ಅದಕ್ಕೇನು ತಿಳುವಳಿಕೆ ತಾನು ಗುಪ್ತಪ್ರಣಯದ ಫಲನೆಂದು? ನೌಕೆಯೇ ಅದರ ಜಗತ್ತು. ಪಾಪ! ಅದಕ್ಕ್ಯಾರು ದಿಕ್ಕು? ಆದರೂ ನೌಕೆಯ ಹಗ್ಗವನ್ನು ಪೃಥಾ ಹರಿಯಗೊಡಲಿಲ್ಲ. ಧಾತ್ರೇಯಿಕೆಯೇ ಸಿದ್ಧಳಾಗಿದ್ದಾಳೆ. ಇದೆಲ್ಲ ಆ ವರದ, ಅಲ್ಲಲ್ಲ ಅಭಿಶಾಪದ ಫಲ. ಆ ಶಿಶು ಕಲಂಕವಲ್ಲ ಅವಳಿಗೇ "ಪ್ರಿಯದರ್ಶನನಿಂದ ಪಡೆದ ಪ್ರಿಯ ಸಂತಾನ." ಈಗ ನಿಜವಾದ ಮಾತೆಯಾಗಿದ್ದಾಳೆ ಪೃಥಾ. ಅವಳು ಪಡುವ ದುಃಖ ಮನೋಭಾವನೆ ಲೇಖಕರ ಲೇಖನದ ಕೌಶಲ್ಯವನ್ನು ವ್ಯಕ್ತಪಡಿಸಿದೆ. ಹೃದಯಸ್ಪರ್ಶಿಯಾದ ಮನೋಭಾವ ಕೊನೆಯ ದೃಶ್ಯದಲ್ಲಿ ಲಾಸ್ಯವಾಡಿದೆ. ಮಾತೃತ್ವದ ಅರಿವಾದ ಮಾತೆ ಪೃಥಾ, ಶಿಶುವಿನ ನಿರ್ಗಮನ ಸಹಿಸಳು. ಅದೂ ದಿಕ್ಕಿಲ್ಲದಂತೆ ಅದನ್ನು ತೇಲಿಬಿಡುವುದು! ಛೇ, ಛೇ, ಎಂದಿಗೂ ಮಾತೆ ಇಂತಹದನ್ನು ಸಹಿಸಳು. ಅವಳ ಮನ ಕಲ್ಲೋಲವಾಗಿದೆ. "ವಿಜಯಿಯಾದ ಕಥಳನಿಗೆ ತಳಿಗೆಯಲ್ಲಿ ಆರತಿ ಬೆಳಗಿ ತಿಲಕವಿಡುವ ಪ್ರೇಮಮಯಿಮಾತೆ ತಾನಲ್ಲ. ತನ್ನ ಜೀವನ ಸಂಗಾತಿಯೊಡಗೂಡಿ ಅಭಿಮಾನದಿಂದ ಎದುರು ನೋಡುವ ತಾಯಿ ತಾನಲ್ಲ!" ಹಾಗಾದರೆ ಪೃಥಾ ಯಾರು? ಮುಗ್ಧ ಬಾಲೆಯಲ್ಲ. ಬರಿಯ ಕುಂತೀ ಭೋಜನ ಸುತೆಯಲ್ಲ. ಗುಪ್ತಪ್ರಣಯದಿಂದ ಶಿಶುವನ್ನು ಪಡೆದು ಗುಪ್ತಪ್ರಪಂಚದಲ್ಲಿಯೇ ಅದನ್ನು ಒಪ್ಪಿಸುತ್ತಿರುವ ಕರುಣಾಮಯಿ ಆರ್ತಹೃದಯಿ ಮಾತೆಯಾಗಿದ್ದಾಳೆ. ಇಂತಹ ಕರುಳು ಕೊರೆಯುವ ಯಾತನೆ ಸಹಿಸಲು ಸಾಧ್ಯವಿಲ್ಲ. ಆದರೆ ಸಮಾಜ ಇವಳ ಮುಗ್ಧತೆಯನ್ನೊಪ್ಪುವುದೆ? ಎಂದಿಗೂ ಇಲ್ಲ. ಅಥವಾ ನೇಸರನ ದೋಷವೆ? ಎಂದಿಗೂ ಇಲ್ಲ....ಅಥವಾ ಮುನಿವಾಣಿಯ ಪರಿಣಾಮವೆ? ಇರಬಹುದು. ಆದರೆ ಸಮಾಜ ಒಂದು ವೇಳೆ ದೂಷಣೆಗೀಡುಮಾಡಿದರೆ ನಿರ್ಮಲ ಭಾವನೆಯ ರಾಜಕುವರಿ ಪೃಥಾಳನ್ನೇ. ಅವಳು ರಾಜಕುಮಾರಿಯಾದರೇನಾಯಿತು? ದಿನಕರನ ಪ್ರಣಯಿಯಾದರೇನಾಯಿತು? ಮುಗ್ಧ ಶಿಶುವಿನ ಮಾತೆಯಾದರೇನಾಯಿತು? ಅವಳು ಸಮಾಜದ ನೋಟ-

ದಲ್ಲಿ ನಿರ್ದೋಷಿಯಲ್ಲ. ಅರಿಯದೆ ಎಡವಿ ಮಾಡಿದ ತಪ್ಪಿಗೆ ಸಮಾಜದಲ್ಲಿ ಶಿಕ್ಷೆಯಿದೆ. ಕ್ಷಮೆಯಿಲ್ಲ. ನೋಡದೆ ಎಡವಿದ ನಿರ್ಜೀವ ಕಲ್ಲು ಸಹ ನೋವನ್ನುಂಟುಮಾಡಿ ಕಷ್ಟಕ್ಕೆ ಗುರಿಮಾಡಿದರೆ, ಸಜೀವ ಸಮಾಜ ಸುಮ್ಮನಿರುವದೆಂದರೆ ಹೇಗೆ? ಅಲ್ಲಿ ಗುಪ್ತಪ್ರಣಯ ಅಕ್ಷಮ್ಯ ಅಪರಾಧ! ಅದು ಪರಸ್ಪರ ಪ್ರೀತಿ-ಸೌಹಾರ್ದಗಳನ್ನು ನೋಡಬಯಸುವುದಿಲ್ಲ. ಪ್ರಸನ್ನತೆ ಬಯಕೆಗಳನ್ನು ಕಾಣುವುದಿಲ್ಲ. ಅದು ಬೇಡುವದೊಂದೇ. ತನ್ನ ಸಾಕ್ಷಿಯಾಗಿ ಜನಿಸಿದ ಶಿಶು ತನಗರಿವಾಗುವಂತೆ ತನ್ನ ಸಾಕ್ಷಿಯಾಗಿ ವೈವಾಹಜೀವನ ಪ್ರವೇಶಿಸಿದರೇ ಆ ವಧುವಿನ ಮಾತೃತ್ವಕ್ಕೆ ಪಾವನತೆಯ ಮಂಗಲಕರ ಮುದ್ರೆಯೊತ್ತುತ್ತದೆ. ಸಮಾಜಜೀವಿ ಮಾನವ, ಸಮಾಜದ ಮುದ್ರೆ ಧರಿಸದಿದ್ದರೆ ಹೇಗೆ?

ಪ್ರಣಯಪ್ರಭಾತದ ನೆನವು ಮರುಕಳಿಸಿ, ಪುನಃ ಅದೇ ಪ್ರಭಾತದ ಆವರಣದಲ್ಲಿ ಹೊರಟು ಹೋಗಲಿದೆ. ಹಗ್ಗ ಬಿಚ್ಚಿತು. ಯಾರಿಂದ? ಧಾತ್ರೇಯಿಕೆಯಿಂದ. "ತನ್ನ ಗುಪ್ತಪ್ರಣಯವ ಫಲವನ್ನು ನೀರಿನಲ್ಲಿ ತೇಲಿಬಿಟ್ಟು ಗೃಹಗೌರವವನ್ನುಳಿಸುವೆನೆಂದು ಸುಲಭವಾಗಿ ನುಡಿದ ಪೃಥಾ, ಶಿಶುಮಲಗಿದ ನೌಕೆಯ ಹಗ್ಗ ಬಿಚ್ಚಿಯಾಳೆ? ನುಡಿದಂತೆ ನಡೆಯುವುದು ಬಲು ಕಷ್ಟ. ಅದಿನ್ನು ಪೃಥಾಸುತನಲ್ಲ. ನಿಸರ್ಗದ ಶಿಶು.

ಈಗ ಅರಿವಾಗಿದೆ. ಉದಯಿಸಿದ ಸೂರ್ಯನೊಡನೆ ಬೆಳಗಿದ ಬಿಸಿಲಿನಲ್ಲಿ ಪೃಥಾ ತಿಳುವಳಿಕೆಯನ್ನೂ ಹೊಂದಲೇಬೇಕಾಗಿದೆ. ಇದೊಳ್ಳೆಯ ಸನ್ನಿವೇಶ. ವಾಚಕರ ಹೃದಯವನ್ನು ಹಿಡಿದು ಅಲುಗಾಡಿಸುವ ಸನ್ನಿವೇಶ. ಶಿಶುವಿನ ಭಾರ ತೊಲಗಿದರೂ, ಅದರ ನೆನಕೆಯೇನು ಕಡಿಮೆಯದೆ? ಸಮಾಜಕ್ಕೆ ತಿಳಿಯುದಿದ್ದರೂ ಮನಕ್ಕೆ ಮುಚ್ಚುಮರೆಯಿದೆಯೆ? ಅದರ ಮಾರ್ದನಿಯನ್ನು ಕೇಳುವವರಾರು? ಆ ಶಿಶುವಿಗೆ ಅವಳೊಬ್ಬ ತಾಯಿ. ಆದರೆ ಸಮಾಜಕ್ಕೆ ಅವಳೊಬ್ಬ ದೋಷಿ. ಕೌಮಾರ್ಯವನ್ನು ಕೆಣಕಿದ ಅಪರಾಧಿ ಆಗನಳು ಎಂದ ಮಾತು ನೂರಕ್ಕೆ ನೂರು ಸತ್ಯ. "ಋಷಿ ದುರ್ವಾಸರು ವರವನ್ನಲ್ಲ, ಅಭಿಶಾಪವನ್ನಿತ್ತಿದ್ದಾರೆ ನನಗೆ" ಎನ್ನುತ್ತಾಳೆ. ಆ ನುಡಿ ನಿಜ. ಸಾಂಸಾರಿಕ ಪರಿತಾಪ ಪರಿಣಾಮಗಳ ಅನುಭವ ದುರ್ವಾಸರಿಗಿದ್ದರೆ ಈ ಅಭಿಶಾಪ ಅವಳಿಗೆ ದೊರಕುತ್ತಿತ್ತೆ! ಮತ್ತೇನಾದರೂ ವರ ದುರ್ವಾಸರ ಬಳಿಯಿರಲಿಲ್ಲವೆ? ಪೃಥೆಗಾಗಿ ಈ ವರವೇ ಯೋಗ್ಯವಿತ್ತೇ? ಪಾಪ! ಅವಳೇನು ಅಂಥ ಅಪರಾಧ ಮಾಡಿದ್ದಿರಬಹುದು? ಅಪರಾಧ ಸಮಾಜದ ದೃಷ್ಟಿಯಲ್ಲಿ; ಆದರೆ ದುರ್ವಾಸರ ದೃಷ್ಟಿಯಲ್ಲಿ ಅದಕ್ಕಾವ ದೋಷದ ಆರೋಪವಿಲ್ಲ. ವಿಧಿಯ ಲೀಲೆ. ವಿಧಿಯ ದುರ್ವಿಲಾಸವನ್ನನುಭವಿಸಿದ ಪೃಥಾಳ ಜೀವನ, ಮಹಾಭಾರತದ ಕಥೆಯ ಒಂದಂಶ. ಅದನ್ನೇ ವ್ಯಂಗ ಸಾಹಿತ್ಯದಿಂದ ಲೇಖಕರು ಕನ್ನಡಕ್ಕಿಳಿಸಿ ಕನ್ನಡದ ಕಮನೀಯವಾದ ಬೆಡಗಿನ ರೀತಿಯಲ್ಲಿ ಎರಕ ಹೊಯ್ದಿದ್ದಾರೆ. ಭಾಷೆಯ ಸೌಂದರ್ಯ ಅನುಪಮವಾಗಿದೆ. ಸಂಭಾಷಣೆ ಮಿತವಾಗಿದ್ದರೂ ಹಿತವಾಗಿದೆ. ಶೈಲಿ ಲಾಲಿತ್ಯದಿಂದೊಡಗೂಡಿದೆ. ಕೊನೆಯ ದೃಶ್ಯದಲ್ಲಿ ನಾವು ಕಾಣುವ ಕಾರುಣ್ಯಮಯಿಮಾತೆ ಪೃಥಾ ಚಿತ್ರ, ಆ ಸನ್ನಿವೇಶ ಹೃದಯಸ್ಪರ್ಶಿಯಾಗಿದೆ. ಧಾತ್ರೇಯಿಕೆಯು ಸಮಾಜದ ಸಮಸ್ಯೆಗಳನ್ನೆದುರಿಸಿ ಉತ್ತರವೀಯುವ ನುಡಿ, ಕೈಗನ್ನಡಿಯಾಗಿದೆ. ಪ್ರಣಯಫಲ ಮಮತೆಯ ಮಾತಿಗೆ ಸಿಹಿ ಫಲ. ಆದರೆ ಸಮಾಜಕ್ಕೆ? ಬೇವಿನಕಾಯಿ. ಕಹಿ ಹಣ್ಣು! ಪೃಥೆಯ ಮನದಲ್ಲೆಳೆಯುವ ಭಾವನೆಗಳ ಸುಸ್ಪಷ್ಟ ಕಲ್ಪನಾನೈಪುಣಿಯೂ ಲಲಿತವಾಗಿದೆ ಕಥೆಯ ರೀತಿ ನವ್ಯ.

ಇನ್ನು ಶೀರ್ಷಿಕೆಯ ಬಗ್ಗೆ ಹೇಳಬಹುದಾದರೆ ಅದೂ ಉತ್ತಮವೇ. ಕಡೆಯಲ್ಲಿ ಪ್ರತಿಯೊಬ್ಬ ಓದುಗನು ಈ ಮಾತನ್ನು ಸ್ವತಃ ಮನಗಾಣಬಹುದಾಗಿದೆ. ಅದಕ್ಕೆ ನೋವಿಗೀಡಾದ ಪೃಥೆಯೇ ಸಾಕ್ಷಿ. ಆ ಮಜೀವನದಲ್ಲಿ ಜೀವನವನ್ನು ಬರಡು ಮಾಡಿದಮೇಲೆ ಶಾಪವಲ್ಲದೆ ಮತ್ತೇನು? ದೃಶ್ಯ ಜೋಡಣೆ ನವ್ಯ ಹಾಗೂ ಯೋಗ್ಯ. ಚಿಕ್ಕ ಕತೆಯಾದರೂ ಜೊಕ್ಕವಾಗಿ ಮುಂದುವರಿದು, ವ್ಯಂಗ ಸಾಹಿತ್ಯದಿಂದ ಇಳಿದು ಬಂದರೂ, ಕನ್ನಡದಲ್ಲಿ ಶ್ರೀ ಸುಬೋಧ ಘೋಷರ ಕತೆಯ ಅನುವಾದವಾದರೂ, ಸುಶ್ರಾವ್ಯವಿದೆ. ತಮ್ಮ ಸಮರ್ಥ ಶೈಲಿಯಲ್ಲಿ ಕತೆಗೆ ಕನ್ನಡರೂಪುಗೊಟ್ಟ, ಲೇಖಕರಾದ ಶ್ರೀ ಮುದೇನೂರ ಸಂಗಣ್ಣನವರಿಗೆ ಅಭಿನಂದನೆಗಳು. ಸಾವಧಾನವಾಗಿ ಓದುಗರನ್ನು ಕಲ್ಪನಾವಿಲಾಸ ಲೋಕಕ್ಕೊಯ್ಯುವ ಸಾಹಸ ಪ್ರಶಂಸನೀಯ. ಈ ಕತೆ "ಕನ್ನಡಮ್ಮನ ಕೊರಹಾರದ ಸಮವಾಗಿ ಸೊಗಸಾಗಿ ಬೆಳಗಲಿ" ಎಂದು ಹಾರೈಸಿ ಈ ಕತೆಗೆ ಸ್ವಾಗತಬಯಸುವೆ.

ಸಾದರ ಸ್ವೀಕಾರ

೧. **ಯಾರು ಲಕ್ಷಿಸುವರು?** (ಅನುವಾದಿತ ಕಾದಂಬರಿ) ಮೂಲ ಮರಾಠೀ ಲೇಖಕರು ಶ್ರೀ. ಹರಿನಾರಾಯಣ ಆಪಟೆ; ಕನ್ನಡ ಅನುವಾದಕರು ಶ್ರೀಮತಿ ಲೀಲಾ ಕಾರಂತ. ಮತ್ತು ಶ್ರೀ. ಶಿವರಾಮ ಕಾರಂತರು ಪ್ರಕಾಶಕರು (ದಿಲ್ಲಿಯ ಸಾಹಿತ್ಯ ಅಕಾಡಮಿಯ ಕೃಪೆಯಿಂದ) ಪ್ರತಿಭಾ ಗ್ರಂಥನಾಲೆ, ಧಾರವಾಡ ಕ್ರೌ. ಅ. ೫೯೨ ಪುಟಗಳು. ಬೆಲೆ ೬-೦೦.

೨. **ಆಳು-ಕಾಳು** (ವಿನೋದ ನಿಪಂಬನಾತ್ಮಕ ಕಾದಂಬರಿ) ಬರೆದವರು 'ಅಷ್ಟಾವಕ್ರ' ಪ್ರಕಾಶಕರು ಸಮಾಜ ಪುಸ್ತಕಾಲಯ ಧಾರವಾಡ ಕ್ರೌ ಅ. ೧೨೦ ಪುಟಗಳು ಬೆಲೆ ೧-೦೦.

೩. **ಹತ್ತು ಹೆಡೆಯ ಹಾವು** ಸ್ವತಂತ್ರ ಸಾಮಾಜಿಕ ಕಾದಂಬರಿ) ಬರೆದವರು ಶ್ರೀ. ದು. ನಿಂ. ಬೆಳಗಲಿ, ಬನಹಟ್ಟಿ ಪ್ರಕಾಶಕರು ಪ್ರತಿಭಾ ಗ್ರಂಥಮಾಲೆ, ಧಾರವಾಡ ಕ್ರೌ. ಅ. ೧೪೬ ಪುಟಗಳು ಬೆಲೆ ೧-೫೦.

೪. **ಕುಮಾರ ರಾಮನ ದುಂದುಮೆ** (ಜಾನಪದ ಕಥನ ಕಾವ್ಯ) ಸಂಗ್ರಾಹಕರು ಡಾ. ಬಿ. ಎಸ್. ಗದ್ದಿಗಿಮಠ ಎಂ. ಎ., ಪಿ.ಎಚ್.ಡಿ. ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಕ್ರೌ. ಅ. ೩೬ ಪುಟಗಳು. ಬೆಲೆ ೦೦-೭೫.

೫. **ಆರ್ಯರ ದಿನಚರ್ಯೆ** (ಪರಿಚಯ ಗ್ರಂಥ) ಮೂಲ ಮರಾಠೀ ಲೇಖಕರು ಶ್ರೀ. ಹ. ಭ. ಪ. ಡಾಕ್ಟರ್ ವ. ವಿ. ಪಟವರ್ಧನ ವಾಯಿ ಅವರು. ಕನ್ನಡ ಅನುವಾದಕರು ಶ್ರೀ. ವೆಂಕಟದಾಸ ಅಚ್ಯುತ ಕಾವತ, ಯ.ಶೋವಾಭವನ, ಕಾಜುಬಾಗ, ಕಾರವಾರ. ಅನುವಾದಕರೇ ಪ್ರಕಾಶಕರು ಕ್ರೌ. ಅ. ೧೫೮ ಪುಟಗಳು. ಬೆಲೆ ೧-೫೦.

೬. **ಬೆಳಕು** (ಶಾಲೆಯ ವಾರ್ಷಿಕ ಪತ್ರಿಕೆ) ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಸಂಪಾದಕ ಮಂಡಲಿಯಿಂದ ಸಂಪಾದಿತ. ಪ್ರಕಾಶಕರು ಶ್ರೀ. ಎನ್. ಟಿ. ಪುರಾಣಿಕ ಬಿ. ಎ., ಬಿ. ಟಿ. ಮುಖ್ಯಾಧ್ಯಾಪಕರು ಶಂಕರಪ್ಪ ಸಕ್ರಿ ಹೈಸ್ಕೂಲ್, ಬಾಗಲಕೋಟೆ ಕ್ರೌ ಡಿಮಿ ೭೫ ಪುಟಗಳು.

7. The Glorious Journey (ಮಹಾಭಾರತದ ಅಧ್ಯಾತ್ಮಿಕ ವಿವರಣೆ) ಲೇಖಕರು ಶ್ರೀ ಸ್ವಾಮೀ ಶಂಕರಾನಂದರು. ಪ್ರಕಾಶಕರು ದಿ ಯೋಗವೇದಾಂತ ಅರಣ್ಯಮು, ದಿ. ಡಿವೈನ್ ಲೈಫ್ ಸೊಸ್ಯಾಟಿ po. ಶಿವಾನಂದನಗರ, ಋಷಿಕೇಶ—ಹಿಮಾಲಯ ಕ್ರೌ. ಅ. ೧೫೨ ಬೆಲೆ ೨-೦೦.

೮. **ಕಂದರ ಕಣಜ** (ಕಿರಿಯರಿಗಾಗಿ ಲಘುಗೀತ ಸಂಕಲನ) ಬರೆದವರು ಶ್ರೀ. ಸುರೇಶ. ಪ್ರಕಾಶಕರು ವಿಜಯ ಸಾಹಿತ್ಯಮಾಲೆ, ಸುರತ್ಕಲ್ಲು—ದ. ಕ. ಜಿಲ್ಲಾ ಕ್ರೌ. ಅ. ೨೪ ಪುಟಗಳು.

ಮಕ್ಕಳ ಮನಸ್ಸನ್ನು ಕುಣಿಸಿ, ತಣಿಸಿ, ಅವರಿಗೆ ಗೊತ್ತಾಗದಂತೆಯೆ ಬುದ್ಧಿ-ಹೃದಯಗಳನ್ನು ಅರಳಿಸುವ ಮಕ್ಕಳ ಸಾಹಿತ್ಯ ನಮಗೆ ಎಷ್ಟಿದ್ದರೂ ಬೇಕಾಗಿದೆ. ಅದನ್ನು ನಿರ್ಮಿಸುವವರಿಗೆ ಒಂದು ವಿಶಿಷ್ಟವಾದ ದರ್ಶನ-ಪ್ರತಿಭೆಗಳು ಬೇಕು. ಅವಿಲ್ಲದೆ ನಿರ್ಮಿಸಿದ ಮಕ್ಕಳ ಕವನಗಳು ನೀರಸ ಪದಮಾಲೆಗಳಾಗಿ, ಅವು ಮಕ್ಕಳ ಮನಸ್ಸನ್ನು ರಂಜಿಸಲಾರವು. ಈ ಕಂದರ ಕಣಜದಲ್ಲಿಯ ಕೆಲವು ಕವನಗಳು ಮಕ್ಕಳಿಗೆ ರಂಜಕವೆನಿಸುವಂತಿವೆ.

೯ **ಬೆಳಗಾಗಿತ್ತು** (ಸಾಮಾಜಿಕ ಕಾದಂಬರಿ) ಬರೆದವರು ಶ್ರೀಮತಿ 'ನಳಿನಿ' ಪ್ರಕಾಶಕರು ಎಸ್. ಎನ್. ಎಸ್. ಪ್ರಕಾಶನ, ಪ್ರಭುಬಿಲ್ಡಿಂಗ್, ಸೆಕೆಂಡಫ್ಲೋರ್, ಮೊಗಲ್‌ಲೇನ್, ಮಾಹೀಮ್, ಮುಂಬಯಿ ಕ್ರೌ. ಅ. ೧೧೦ ಪುಟಗಳು. ಬೆಲೆ ೧-೫೫.

೧೦ **ಸಚೇತನ** (ಕನ್ನಡ ಮಾಸಪತ್ರಿಕೆ) ಸಂಪಾದಕರು ಶ್ರೀಮಾನ್ ಶಂಕರ ಹೆಜ್ಜುಡಿಯವರು. ಪ್ರಕಾಶಕರು ಚೇತನ ಪಬ್ಲಿಕೇಶನ್ಸ್, ಪೋ. ಬಾ. ನಂ. ೧೦೦೯೦, ಮುಂಬಯಿ ೧ ಕ್ರೌ. ಡಿಮಿ ೪೦ ಪುಟಗಳು. ವಾರ್ಷಿಕ ಚಂದಾ ೫-೦೦; ಬಿಡಿ ಸಂಚಿಕೆಗೆ ೦೦-೫೦.

ಮುಂಬಯಿ ಕನ್ನಡಿಗರ ಮತ್ತೊಂದು ಪ್ರಯತ್ನವಿದು. ಮೊದಲ ಸಂಚಿಕೆಯನ್ನು ನೋಡಿದರೆ, ತರುಣ ಕನ್ನಡಿಗರ ಹೊಸ ಉತ್ಸಾಹವು ಇದರಲ್ಲಿ ತುಂಬಿಕೊಂಡುದು ಕಾಣದಿರದು. ಮುಂಬಯಿಯಂತಹ ಮಹಾನಗರದಲ್ಲಿ ಕನ್ನಡಿಗರ ಅಸ್ತಿತ್ವ-ಸಂಸ್ಕೃತಿಗಳ ಪ್ರದರ್ಶನಕ್ಕಾಗಿ ಒಂದಾದರೂ ಕನ್ನಡ ಪತ್ರಿಕೆ ಸ್ಥಿರವಾಗಿ ನಡೆಯಬೇಕು. ವ್ಯಾವಹಾರಿಕ ದೃಷ್ಟಿಯಿಂದಲೂ ಪತ್ರಿಕಾ ಪ್ರಕಟನೆಗೆ ತರುಣ ಲೇಖಕವರ್ಗ ತನ್ನ ಅಭ್ಯಾಸ-ಅನುಭವಗಳನ್ನು ಹೆಚ್ಚಿಸಿಕೊಂಡು ಬರೆಯತೊಡಗಿದರೆ, ಈ ಪತ್ರಿಕೆಯ ಸಾಹಿತ್ಯಿಕ ಸಾಂಸ್ಕೃತಿಕ ಮಟ್ಟವೂ ಹೆಚ್ಚಾಗಬಹುದು. 'ಸಚೇತನ' ಬಹುಕಾಲ ಬಾಳಲಿ.

(ಇನೇ ಪುಟದಿಂದ ಬಂದುದು)

'ನೇಪಾಳದ ಮೇಲೆ ದಾಳಿ ಮಾಡಿದರೆ, ಅದನ್ನು ಭಾರತದ ಮೇಲೆ ಮಾಡಿದ ದಾಳಿಯೆಂದೇ ಭಾವಿಸಲಾಗುವುದು' ಎಂದು ಭಾರತದ ಪ್ರಧಾನ ಮಂತ್ರಿಗಳು ಆಡಿದ ಆತ್ಮೀಯ ವಿಶ್ವಾಸದ ಮಾತನ್ನು, ಹಲವಾರು ನೇಪಾಳೀ ಸ್ವಾತಂತ್ರ್ಯಪ್ರಿಯರೇ ತಪ್ಪಾಗಿ ಭಾವಿಸಿದುದುಂಟು. ಈಗ ಚೀನೀಯರ ಆಕ್ರಮಣ ನೇಪಾಳ ರಾಜ್ಯದಲ್ಲಿಯೆ ಪ್ರವೇಶಿಸಿಬಿಟ್ಟಿದೆ. ಈಗ ಆ ಅಭಾಸಸ್ವಾತಂತ್ರ್ಯಪ್ರಿಯರಿಗೆ ವಾಸ್ತವದ ಕಲ್ಪನೆಯು ಚೆನ್ನಾಗಿ ಉಂಟಾಗಿ ಭಾರತದ ಪ್ರಧಾನ ಮಂತ್ರಿಗಳು ಆಡಿದ ಮಾತಿನ ಮಹತ್ತ್ವವೆಂತಹದೆಂಬುದು ಗೊತ್ತಾಗಿರಬಹುದು. ○

ಶರತ್‌ಪ್ರಕಾಶನ ಮಂದಿರ, ಶಹಾಪುರ (ಬೆಳಗಾಂವ)

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ ನಾಲ್ಕನೆಯ ಆವೃತ್ತಿ

ರಾಜಯೋಗಿ

ಹೊಸ ಕಾಲಕ್ಕೆ ತಕ್ಕ

ಮುವ್ವಣ-ಬಂಧನಗಳ ಬಿಡಗಿನೊಂದಿಗೆ ಇದೀಗ ಬೆಳಕಿಗೆ ಬಂದಿದೆ.

ಐತಿಹಾಸಿಕ ಕಾದಂಬರಿಯೆಂದರೆ, ಆ ಕಾಲದ ಜನಜೀವನದ ತಮ್ಮೂಪ ಚಿತ್ರಣವಾಗಿರಬೇಕು. ವಾಚಕರಿಗೆ ತಾವು ಐತಿಹಾಸಿಕ ಕಾಲದಲ್ಲಿಯೇ ಇದ್ದೇವೆ, ಘಟನೆ ನಡೆವ ಪ್ರದೇಶದಲ್ಲಿಯೆ ಇದ್ದೇವೆ—ಎನಿಸಬೇಕು. ಪಾತ್ರಗಳು ಐತಿಹಾಸಿಕವಾದರೂ, ಅಂದಿನ ಕಾಲದ ಜೀವನವನ್ನು ಜೀವಂತ ವ್ಯಕ್ತಿಗಳಾಗಿ ವ್ಯಾಪಹರಿಸಿ ತೋರಿಸಬೇಕು.

'ರಾಜಯೋಗಿ' ಕಾದಂಬರಿಯಲ್ಲಿ ಇವೆಲ್ಲ ಗುಣಗಳೂ ಇವೆ. ಎಂತಲೇ ಇದು ಹುಟ್ಟಿ ೫೫ ವರ್ಷಗಳಾದರೂ, ವಾಚಕರಿಗೆ ಹೊಸ ಹೊಸದೇ ಎನಿಸುತ್ತದೆ.

ಪ್ರತಿಯೊಂದು ವಾಚನಮಂದಿರದಲ್ಲಿಯೂ ಇರಲೇಬೇಕಾದ ಕಾದಂಬರಿಯಿದು.

ಕ್ರೌ. ಅ. ೧೪೦ ಪುಟಗಳು. ● **ಬೆಲೆ : ೨ ರೂ. ೨೫ ನಯೇಪೈಸೆ**

ನಮ್ಮ ಮಂದಿರದ ಬೇರೆ ಪ್ರಕಟನೆಗಳು

ಮಗಳ ಮದುವೆ
(ಸಾಮಾಜಿಕ ಕಾದಂಬರಿ)
ಕ್ರೌ. ಅ. ೩೫೦ ಪುಟ * ಬೆಲೆ : ೪ ರೂ.

ಕಾರಹುಣ್ಣಿವೆ
(ಕಾನನಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೨ ರೂ.

ಬೆಳವಡಿ ಮಲ್ಲಮ್ಮ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೫೦

ಬೆಂದ ಹೃದಯ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೨೫

ನಲ್ವಾಡುಗಳು
(ಪ್ರೀತಿ ಗೀತ ಸಂಕಲನ)
ಕ್ರೌ. ಅ. ೭೨ ಪುಟ ● ಬೆಲೆ : ೧.೨೫

'ಆನಂದಕಂದ'ರ ಯಾವ ಪುಸ್ತಕಗಳು ಬೇಕಾದರೂ ನಮಗೆ ಬರೆಯಿರಿ!

ಶರತ್‌ಪ್ರಕಾಶನ ಮಂದಿರ, ಕಚೇರಿಗಲ್ಲಿ, ಶಹಾಪುರ (ಬೆಳಗಾಂವ)

Printed by Basavaraj Horadi at Lalita Mudranalaya, Dharwar &
Published for the Propritors Jayanti Publications by K. S. Betgeri at Jayanti Office, Dharwar.

ಜಯಂತಿ

ಮ ಹಾ ಪ್ರ ಲ ಯ

❋

ಪ್ರಲಯ ಬರುವುದೆಂದು ಜೆದರಿ, ಬಜುಕಿನಾಕೆಯ ವೇದಾಂತಿಗಳು ಗಿರಿಯನೇರಿ ಕುಳಿತಿದ್ದರಂತೆ; ಮಿಕ್ಕವರ ಮರಣಸಂಕಟವನ್ನು ನೋಡುವ ವಿನೋದವಲ್ಲಿ ಯಾವ ವೇದಾಂತತತ್ತ್ವವನ್ನು ಸಾಧಿಸುತ್ತಿದ್ದರೋ ಈ ಜೀವಿತಾಪೇಕ್ಷಿಗಳು; ಪಾಪ, ಅವರು ಹಾರಯಿಸಿದ ಮಹಾಪ್ರಳಯ ಬರಲಿಲ್ಲ; ಅವರ ವಿನೋದ ನಿರೀಕ್ಷಣಾಪೇಕ್ಷೆ ನೆರವೇರಲಿಲ್ಲ.

ಈ ವೇದಾಂತಿಗಳಿಗೆ ಒಳಗಣ್ಣು ನೋಟವಿಲ್ಲವೇನೋ ! ಮುಂಬರುವ ಮಹಾಪ್ರಳಯದ ಆಗಮನಕ್ಕಾಗಿ ಮಾನವಕುಲವೇ ಮನವಾರೆ ಪೆಣಗುತ್ತಲಿದೆ. ಬರಲಿರುವ ಪ್ರಲಯದ ನಿರ್ಮಾಪಕರು ಪ್ರಕೃತಿ-ಪುರುಷರಲ್ಲ; ಆ ಅಧಿಕಾರವನ್ನು ಪಡೆಯಲು ಮಾನವನೇ ಸಿದ್ಧತೆಯನ್ನು ನಡೆಸಿದ್ದಾನೆ.

ಇಂದಿನ ಮಾನವನಿಗೆ ಯಾವುದೇ ಪ್ರಕೃತಿಧರ್ಮದ ಬಂಧನ ಬೇಕಿಲ್ಲ; ಕರುಣೆ-ಪ್ರೀತಿ-ಸ್ನೇಹಗಳ ಹೃದಯಧರ್ಮದ ಸಂಯಮವಿಲ್ಲ. ಅಸೀಮವಾದ ಅವನ ಆಕಾಂಕ್ಷೆ, ಮತ್ಸರ-ಕ್ರೋಧ-ದ್ವೇಷಗಳಿಂದಲೇ ಅತನ ಮನಸ್ಸು-ಬುದ್ಧಿಗಳನ್ನು ರೂಪಿಸಿ ಬಿಟ್ಟಿದೆ. ಈ ಮತ್ಸರ-ಕ್ರೋಧ-ದ್ವೇಷಗಳು ಮಹಾಪ್ರಳಯವನ್ನಲ್ಲದೆ ಮತ್ತೇನನ್ನು ಬೆಳೆದಾವು ?

ವೇದಾಂತಿಗಳೆ, ಮಹಾಪ್ರಳಯವನ್ನು ಉಂಟುಮಾಡಬಲ್ಲ ನಿಮ್ಮ ದೇವರ ಅಧಿಕಾರವನ್ನು ಮಾನವನು ಕಿತ್ತುಕೊಂಡಿದ್ದಾನೆ. ಮಹಾಪ್ರಲಯಕ್ಕಾಗಿ ನೀವು ಮುಗಿಲ ಕಡೆಗೆ ನೋಡದಿರಿ; ಮಾನವಕುಲದ ಕಾರ್ಯದ ಕಡೆಗೇ ನೋಡುತ್ತಲಿರಿ !

— ಸಾಮಾಜಿಕ

JAYANTI

ಈ ಸಂಚಿಕೆಯಲ್ಲಿ

ಭರತ (ಕವಿತೆ)
ಅಂಬಿಕಾತನಯದತ್ತ ... ...

ಮಹಾವ್ಯಕ್ತಿ ಮೊಹರೆ ಹಣಮಂತರಾಯರು (ಸಂಪಾದಕೀಯ)
ಸಂಪಾದಕರು ೩೮

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
ಕಾಲಭೈರವ ೩೯

ಆಭರಣೇಶ್ವರಿ (ಸಣ್ಣಕತೆ)
ಶ್ರೀ. ಮುದೇನೂರ ಸಂಗಣ್ಣ ಚಿಟಗೇರಿ ೪೧

ಆರಿಸ್ಟಾಟಲ್ಲನ ಟ್ರ್ಯಾಜಿಡಿ ಮತ್ತು ಅದರ ಷಡಂಗಗಳು
ಶ್ರೀ. ಬಿ. ಬಿ. ರಾಜಪುರೋಹಿತ ಎಂ. ಎ. ಧಾರವಾಡ ೪೯

ಮುಂಬೈಯಲ್ಲಿ ಕೋಗಿಲೆ (ಕವಿತೆ)
ಶ್ರೀ. 'ಜೀವಿ' ಕುಲಕರ್ಣಿ ಮುಂಬೈ ೫೩

ಧೂಮಕೇತು (ಸಣ್ಣಕತೆ)
ಕು. ಎಂ. ಕೆ ಉಮಾದೇವಿ, ಕನಕಪುರ ೫೫

" ವರದ ಶಾಪ "
ಶ್ರೀ. ರಂಗರಾವ ದೇಶಪಾಂಡೆ, ಆಲದಕಟ್ಟಿ ೫೯

ಮಂಡೋದರಿ (ಕವಿತೆ)
ಶ್ರೀ. ಕೆ. ನಿ. ತಿರುಮಲೇಶ. ಪನ್ನೆಪ್ಪಲ ೬೧

ಸಮ್ರಾಟ ಅಶೋಕನ ಕೊನೆಯ ದಿನಗಳು
ಶ್ರೀ. ಚುಳಕಿ ಗೋವಿಂದರಾಯರು, ಧಾರವಾಡ ೬೨

ಸಮ್ಮೇಲನದ ಸರಂಜಾಮು ಇಲ್ಲವೆ ನಾಟಕದ ನಾಟಕ (ನಾಟ್ಯಛಟಿ)
ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ ೬೫

ಸಾಹಿತ್ಯ ನಿಮರ್ಶೆಯ ಶಿಕ್ಷಣರಂಗ
ಕುಮಾರಿ ಸಿ. ಹೆಚ್. ಲಕ್ಷ್ಮೀಪಾಡಿ, ಕಾಸರಗೋಡು ೬೮
ಶ್ರೀ ಬಿ. ಆರ್. ನಾಹುಲಿ B. Sc. (Hons) ಪುಣೆ ೭೧

ಸಾದರ ಸ್ವೀಕಾರ .... (ಕವರ್ ೩ನೆಯ ಪುಟದಲ್ಲಿ)

ಜಯಂತಿ

ಸಂಪುಟ ೨೬] [ಸಂಚಿಕೆ ೩

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

○

ಸಂಪಾದಕರು :
ಡಾ॥. ಬೆಟಗೇರಿ ಕೃಷ್ಣಶರ್ಮ

○

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೦ ಆಣೆ

○

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

○

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಎಜಂಟರು
ಬೇಕಾಗಿದ್ದಾರೆ.

ಭರತ

ಹುಟ್ಟಿದಾಗಲೇ ವೀಳ್ಯವೆತ್ತಿದನು
ಮುಕ್ತಿಗಾಗಿ ಭರತ—
ತಿಂದ ತಂಬುಲದ ಹಾಗೆ ಉಗುಳಿದನು
ತನುವ ರಸಿಕವಿರತ.

ಎಂದು ಹೋದನೋ; ಎಂದು ಇದ್ದನೋ
ಲೇಖ ಅಡಗಿ ಇಹುದು;
ನೆಲದ ನರುಗಂಪಿನಂತೆ ನೆಲೆಸಿದಾ
ಕೀರ್ತಿ ಇಡುಗಿ ಇಹುದು.

ಭರತಖಂಡವಿದು, ಭಾರತೀಯ ಸಂ-
ತತಿಯು ಅನುರವಾಗಿ—
ಅವನ ರಸಸ್ಮೃತಿಯಂದ ಹಬ್ಬುತಿದೆ
ಈಗ ಕಮರದಾಗಿ.

ಅರಸನಂತೆ ಮನೆಮನೆಯ ಪುರುಷ
ರಸವಂತನಾಗಿ ಬಾಳಿ—
ಪ್ರಕೃತಿಯನ್ನೆ ರಸಮಯವ ಮಾಡನೇ
ದಿವ್ಯ ದೇಹ ತಾಳಿ ?

ಕ್ಷೇತ್ರ ಮರೆಯದಿದೆ, ಬೀಜ ಮರೆಗೆ ಇದೆ
ಕಲ್ಪವೃಕ್ಷನಾಗಿ—
ಸರಿಮುಹೂರ್ತ ಅಂಕುರಿಸಿ ತರದೆ ಅದು
ಬರದೆ ಲಕ್ಷನಾಗಿ!

ಭೂಮಿ ಬಂಜೆಯೇ ? ಬೀಜ ಬರಡೆ ? ಪಡೆ-
ದದ್ದು ಕೂಡಿ ಬರದೇ ?
ಒಕ್ಕಲಾದ ಎದೆಯಲ್ಲಿ ತಪವು ರವಿ-
ಯಾಗಿ ಮೂಡಲಿರದೇ ?

—ಅಂಬಿಕಾತನಯದತ್ತ

ಸಂಪಾದಕೀಯ

ಮಹಾವ್ಯಕ್ತಿ ಮೋಹರೆ ಹಣಮಂತರಾಯರು

ಮೋಹರೇ ಹಣಮಂತರಾಯರ ವಿಯೋಗದ ವರ್ತಮಾನ, ಅವರ ವ್ಯಕ್ತಿತ್ವವನ್ನು ಚೆನ್ನಾಗಿ ಬಲ್ಲ ಕನ್ನಡನಾಡಿನಲ್ಲಿ ಬರಸಿಡಿಲಿನ ಆಘಾತದಂತೆ ಪರಿಣಮಿಸಿರುವುದು. ಹುಬ್ಬಳ್ಳಿಯ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯನ್ನು ಶ್ರೀ. ಮೋಹರೆ ಹಣಮಂತರಾಯರು ಬೆಳೆಸಿದರು; 'ಸಂಯುಕ್ತ ಕರ್ನಾಟಕ' ಪತ್ರಿಕೆ ಶ್ರೀ. ಮೊಹರೆಯವರ ಹೆಸರನ್ನು ನಾಡಿನ ಮೂಲೆಮೂಲೆಗಳಲ್ಲಿಯೂ ಮೊಳಗಿಸಿತು.

ಕನ್ನಡನಾಡಿನಲ್ಲಿ— ಅದರಲ್ಲಿಯೂ— ಉತ್ತರಕರ್ನಾಟಕದಲ್ಲಿ, ಕನ್ನಡ ದೈನಂದಿನ ಪತ್ರಿಕೆಯೊಂದು ಯಶಸ್ವಿಯಾಗಿ ಬದುಕಿ ನಿಲ್ಲಬಹುದೇ ?—ಎಂದು ಸಂಶಯಪಡುವಂತಹ ಕಾಲ. ಈ ಸಂಶಯಕ್ಕೆ ಪೋಷಕವಾಗಿಯೆ ಇದ್ದಿತು ಸಂಯುಕ್ತಕರ್ನಾಟಕದ ಪ್ರಾರಂಭದ ಪರಿಸ್ಥಿತಿ.

ಬೆಳಗಾಂವಿಯ ಕನ್ನಡ ಮುಂದಾಳುಗಳು ಕನ್ನಡ ದಿನಪತ್ರಿಕೆಯೊಂದರ ಅಗತ್ಯವನ್ನು ಅರಿತು, ಉತ್ಸಾಹದಿಂದಲೇ 'ಸಂಯುಕ್ತ ಕರ್ನಾಟಕ' ದೈನಂದಿನ ಪತ್ರಿಕೆಯನ್ನು ಪ್ರಾರಂಭಿಸಿದರು; ಆದರೆ ನಾಡಿನಲ್ಲಿಯ ಜನರ ಉದಾಸೀನ ವೃತ್ತಿ ಸ್ವಲ್ಪಾವಧಿಯಲ್ಲಿಯೆ ಅವರನ್ನು ನಿರ್ವಿಣ್ಣರನ್ನಾಗಿ ಮಾಡಿತು. ಆಗ ಮಾನ್ಯ ದಿವಾಕರರು ಆ ಪತ್ರಿಕೆಯನ್ನು ತಮ್ಮ ಕಡೆಗೆ ತೆಗೆದುಕೊಂಡು, ಅದರ ಹೊಣೆಯನ್ನೆಲ್ಲ ಶ್ರೀ. ಮೋಹರೇ ಹಣಮಂತರಾಯರ ಮೇಲೆ ಹಾಕಿದರು.

ಶ್ರೀ. ಮೋಹರೆಯವರು ಸ್ವಲ್ಪ ಕಾಲದಲ್ಲಿಯೆ ಸಂಯುಕ್ತಕರ್ನಾಟಕವನ್ನು ಲೋಕಪ್ರಿಯಮಾಡಿ, ಅದರ ಬಡಲಿತವು ಸರ್ವಾಂಗ ಸುವ್ಯವಸ್ಥೆಗೊಳ್ಳುವಂತಹ ಸವಾಡವನ್ನು ಮಾಡಿತೋರಿಸಿದರು. ಇಂದು ಪ್ರತಿಯೊಬ್ಬ ಕನ್ನಡಿಗನಿಗೂ 'ತನ್ನ ಪತ್ರಿಕೆ' ಎಂದು ಅಭಿಮಾನವೆನಿಸುವಂತೆ ಸಂಯುಕ್ತಕರ್ನಾಟವನ್ನು ರೂಪುಗೊಳಿಸಿದ ಶ್ರೇಯಸ್ಸಿನ ಬಹುಭಾಗ ಶ್ರೀ. ಮೋಹರೆಯವರಿಗೇ ಸಲ್ಲಬೇಕಾದುದು.

ಶ್ರೀ. ಮೋಹರೆಯವರ ಮಹಾವ್ಯಕ್ತಿತ್ವದ ಪರಿಚಯವು ನಮ್ಮ ಸಕಲ ಜನತೆಗಾದುದು ಸಂಯುಕ್ತಕರ್ನಾಟಕದಿಂದ ಆದರೂ, ಆ ಪರಿಚಯ ಅಪೂರ್ಣವಾದುದು. ಅವರನ್ನು ಮಹಾವ್ಯಕ್ತಿಯನ್ನಾಗಿ ಮಾಡಬಲ್ಲ ಬೇರೆ ಹಲವು ಗುಣಗಳೂ ಮೋಹರೆಯವರಲ್ಲಿ ಅರಳಿ ನಿಂತಿದ್ದುವು.

ಕಪ್ಪಗಿನ ಬಣ್ಣದ ದಪ್ಪಗಿನ ದೇಹವು ಮೋಹರೆಯವರ ಆಂತರಿಕ ಗುಣಸೌಂದರ್ಯದಿಂದಲೇ ಆಕರ್ಷಿತವಾಗಿ ಕಾಣುವಂತಹದು. ಹುಟ್ಟಿದುದು ಸಿರಿವಂತರ ಮನೆತನದಲ್ಲಿ—ಉದಾರಧೀಗಳ ಕುಲದಲ್ಲಿ. ಆದುದರಿಂದಲೆ ಔದಾರ್ಯವು ಮೋಹರೆಯವರ ಹೃದಯದಲ್ಲಿ ಜಾಗೃತವಾಗಿತ್ತು. ಎಂತಲೇ ಅವರು ಲೋಹಚುಂಬಕದಂತೆ, ಅನೇಕ ಸುಸಂಸ್ಕೃತ ಜನರ ಬುದ್ಧಿ–ಮನಸ್ಸುಗಳನ್ನು ಆಕರ್ಷಿಸುತ್ತಿದ್ದರು.

ಅವರ ಜಡವಾದ ದೇಹವನ್ನು ನೋಡಿದವರಿಗೆ, ಒಮ್ಮೆಲೆ ಅವರ ಸಾಂಸ್ಕೃತಿಕ ಜ್ಞಾನದ ಬಗೆಗೆ ಸಂಶಯ ಬರಬಹುದಾಗಿತ್ತು; ಆದರೆ ಅವರ ಹೆಚ್ಚಿನ ಪರಿಚಯವಾದಂತೆ ಅವರೊಂದು ಆಳವಾದ ಸಂಸ್ಕೃತಿ-ಜ್ಞಾನದ ಭಾಂಡಾರವೆಂಬುದು ಕಂಡುಬಾರದೆ ಇರುತ್ತಿರಲಿಲ್ಲ. ರಾಮಾಯಣ, ಮಹಾಭಾರತ, ಸ್ಮೃತಿಗಳು—ಇವುಗಳನ್ನು ಅವರು ಯಾವಾಗ ಅಷ್ಟೊಂದು ಸಮೂಪದುವುಗಳನ್ನಾಗಿಸಿಕೊಂಡಿದ್ದರೊ; ಸಂದರ್ಭ ಬಂದಾಗಲೆಲ್ಲ ಆ ಪುರಾತನ ಗ್ರಂಥಗಳಲ್ಲಿಯ ಉಚಿತ ಅವತರಣಿಕೆಗಳನ್ನು ಮುಯ್ಯೋದ್ಗತವಾಗಿ ಹೇಳುತ್ತಿದ್ದರು. ಕುಮಾರವ್ಯಾಸ, ಹರಿದಾಸರು ಇವರ ಸಾಹಿತ್ಯವನ್ನು ಅವರು ಅಸಕ್ತಿಪೂರ್ವಕ ಅಭ್ಯಾಸ ಮಾಡಿದ್ದರು. ಹಾಗೆಯೆ ದ್ವೈತತತ್ತ್ವಜ್ಞಾನವನ್ನು ಕುರಿತ ಅವರ ಪರಿಚಯವೂ ಅನೇಕರನ್ನು ಆಶ್ಚರ್ಯಗೊಳಿಸುವಂತಹದು.

ಇದೆಲ್ಲವೂ ಪ್ರಾಚೀನ ಸಂಸ್ಕೃತಿ ಜ್ಞಾನವಾಯಿತಲ್ಲ; ಹೊಸಕಾಲದ ರಾಜಕಾರಣ, ಅರ್ಥಶಾಸ್ತ್ರ ಇವುಗಳನ್ನು ಶ್ರೀಯುತರು ಅಂಗೈನೆಲ್ಲಿಯನ್ನಾಗಿ ಮಾಡಿಕೊಂಡಿದ್ದರು. ಇಷ್ಟೆಲ್ಲವಾಗಿ ಉಜ್ವಲ ದೇಶಾಭಿಮಾನಿಗಳು; ಸ್ವಾತಂತ್ರ್ಯ ಸಾಧನೆಗಾಗಿ ಸಲ್ಲಿಸಬೇಕಾದ ತ್ಯಾಗವನ್ನೆಲ್ಲ ಸಲ್ಲಿಸಿದ ವೀರರು. ಇಂತಹರ ವಿಯೋಗವೆಂದರೆ, ನಾಡಿಗೊಂದು ತುಂಬಿ ಬಾರದಂತಹ ಹಾನಿಯೆ! ಶ್ರೀ. ಮೋಹರೆಯವರ ವೇದಾಂತಿಕ ಮನಸ್ಸು ಮರಣಭೀತಿಯನ್ನು ಗೆದ್ದಂತಹದು. ಅವರ ಅಗಲಿಕೆಗಾಗಿ ನಾವು ವ್ಯಥೆಪಡುವುದನ್ನು ನೋಡಿ, ಕರುಣೆಯು ನಗೆಯನ್ನು ನಗುವಂತಹ ದಿವ್ಯಜೀವ ಅವರದು. ಅವರ ಜೀವಕ್ಕೆ ಪರಮಾತ್ಮನು ಸದ್ಗತಿಯನ್ನು ಕೂಡಲೆಂದು ಕೋರುವುದು, ಅದೊಂದು ಸಾಂಪ್ರದಾಯಿಕ ಕರ್ತವ್ಯವೆನಿಸೀತು ಇಷ್ಟೆ !

ಜಯಂತಿಗೆ ಸಹಾಯಧನ

ಈ ತಿಂಗಳಲ್ಲಿ ಜಯಂತಿಯ ಕ್ಷೇಮವನ್ನು ಕೋರಿ, ಇಲ್ಲಿ ಬರೆದ ಹಿರಿಯರು ಸಹಾಯಧನವನ್ನು ಕಳುಹಿಸಿದ್ದಾರೆ. ಅವರ ಧನಕ್ಕಿಂತಲೂ ಸಹಾನುಭೂತಿಯ ಶುಭಾಶೀರ್ವಾದವು ಹೆಚ್ಚಿನದೆಂದು ಜಯಂತಿ ಭಾವಿಸುತ್ತದೆ.

ಶ್ರೀ. ದ. ರಾ. ಬೇಂದ್ರೆಯವರು ೨೫ ರೂ.
ಶ್ರೀ. ಎನ್. ಕೆ. ದೀಕ್ಷಿತ ವಕೀಲರು ೧೦ ರೂ.
ಶ್ರೀ. ರಂ. ಸ್ವಾ. ದೇಶಪಾಂಡೆ, ಬಲದಕಟ್ಟೆ ೧೦ ರೂ.
ಪ್ರೊ. ಎಚ್. ಜೆ. ಉಪಾಧ್ಯಾಯ, ಹೈದರಾಬಾದ್ ೫ ರೂ.
ಶ್ರೀ. ಕೆ. ಎಂ. ಶ್ರೀನಿವಾಸ, ಡಿ. ಎಂಜಿನಿಯರ್ ೫ ರೂ.
ಎಲ್ಲರಿಗೂ ಜಯಂತಿಯ ಹಾರ್ದಿಕ ನಂದನೆಗಳು.

—ಸಂಪಾದಕ

ನಾಡ ನಡೆ

ಮುಸುಕಿದ ನೋಡ ಚದರಿತು

ಕೇಂದ್ರಸರಕಾರದ ಸಿನೆಯ ಳನೆಯ ವರ್ಗದ ನೌಕರರ ಸಂಪಿನ ಕಪ್ಪುಮೋಡ, ಭಾರತದ ಬಾನನ್ನೆಲ್ಲ ವ್ಯಾಪಿಸಿಬಿಟ್ಟಿದ್ದಿತು. ಸರಕಾರ ಎಷ್ಟೊಂದು ಪೂರ್ವ ಜಾಗೃತಿ ವಹಿಸಿದರೂ, ಕಠಿಣ ಶಿಕ್ಷೆಯ ಕಟ್ಟಪ್ಪಣೆ ಹೊರಡಿಸಿದರೂ ಆ ಕಪ್ಪುಮೋಡ, ಕೆಲವು ದಿನ ಭಾರತದ ಜನತೆಯನ್ನೆಲ್ಲ ಕಗ್ಗತ್ತಲೆಯಲ್ಲಿ ಕುಳ್ಳಿರಿಸಿತು. ಸಂಪುಮಾಡಲು ಸಿದ್ಧರಾದ ನೌಕರ ಜನರಿಗೂ, ಅವರನ್ನು ಅವಿವೇಕದ ಅಡ್ಡದಾರಿಗೆ ಎಳೆಯುತ್ತಲಿಪ್ಪ ಪ್ರಚೋದಕ ಧುರೀಣರಿಗೂ ತಾವೆಂತಹ ಜನತಾಹಿತವಿಘಾತಕ ಕಾರ್ಯವನ್ನು ಮಾಡುತ್ತಿರುವೆವೆಂಬ ಅರಿವೇ ಇರಲಿಲ್ಲ.

ಈ ಸಂಪಿನ ಪ್ರಚೋದಕ ಧುರೀಣರೆಂದರೆ, ಸದ್ಯದ ಸರಕಾರಗಳ ವಿರೋಧಿಗಳು. ಯಾವ ಹೀನ-ಘಾತಕ ಚಟುವಟಿಕೆಗಳನ್ನೂ ನಡೆಯಿಸಿ, ಸರಕಾರದ ಪ್ರಗತಿಯ ದಾರಿಯಲ್ಲಿ ಮುಳ್ಳು ಕಲ್ಲುಗಳನ್ನು ಹರಡಬೇಕೆನ್ನುವ ಅವಿವೇಕಿಗಳು. ತಮ್ಮ ಸ್ವಾರ್ಥಪೂರ್ಣ ಗುರಿಯನ್ನು ಸಾಧಿಸಿಕೊಳ್ಳಬೇಕೆನ್ನುವ ಆ ಜನರಿಗೆ, ರಾಷ್ಟ್ರದ ಹಿತಾಹಿತಗಳ ಕಡೆಗೆ ಲಕ್ಷ್ಯವಿಲ್ಲ; ಜನತೆಯ ಸುಖ-ದುಃಖಗಳ ಕಡೆಗೆ ದೃಷ್ಟಿಯಿಲ್ಲ. ಸಂಪುಮಾಡಲು ಸಿದ್ಧರಾದ ಸರಕಾರೀ ನೌಕರರು ಇಂತಹ ಮುಂದಾಳುಗಳ ಮಾತನ್ನು ಕೇಳಿದರು; ತಮ್ಮ ಒಡೆಯನ ಸ್ಥಾನದಲ್ಲಿದ್ದ ಸರಕಾರದ ಮಾತುಗಳನ್ನು ಮೀರಿ ನಡೆದರು.

ಏಕೆ ಮೀರಿ ನಡೆದರು ? ತಮ್ಮ ತಮ್ಮ ಸಂಬಳ ಹೆಚ್ಚಬೇಕೆಂಬ ವೈಯಕ್ತಿಕ ಸ್ವಾರ್ಥದ ಮೂಲಕ. ಈ ಸ್ವಾರ್ಥ ಸಂಪಿನಲ್ಲಿ ಸೇರಿದ ಎಲ್ಲ ಜನರ ವಿವೇಕವನ್ನೂ ಅಡಗಿಸಿಬಿಟ್ಟಿತ್ತು. ಆದರೆ ಸರಕಾರವು ಹೊರಡಿಸಿದ ಉಗ್ರಶಾಸನದ ಶಿಕ್ಷೆಯ ಭೀತಿ—ಅನಿವಾರ್ಯವಾಗಿ—ಅವರಲ್ಲಿ ವಿವೇಕವನ್ನು ಮೂಡಿಸಿತು. ಆ ವಿವೇಕವೂ ರಾಷ್ಟ್ರೀಯ ಭಾವನೆಯದಲ್ಲ; ಸ್ವಂತದ ಜೀವನಭೀತಿಯ ಭಾವನೆ. ಏನೇ ಆಗಲಿ ರಾಷ್ಟ್ರದ ಆಕಾಶವನ್ನು ವ್ಯಾಪಿಸಿನಿಂತ ಕಪ್ಪುಮೋಡವು – ಇದ್ದುದಿದ್ದಲ್ಲಾಗೆಯೆ—ಬಯಲಾಯಿತು. ಜನತೆ ಮತ್ತೆ ಬೆಳಕಿನ ಮುಖವನ್ನು ಕಂಡಿತು. ಇದರಿಂದ ಒಂದು ಮಾತು ಸಿದ್ಧವಾಯಿತು. ನಮ್ಮ ಜನರು ರಾಷ್ಟ್ರೀಯಭಾವನೆಯಿಂದ ಇನ್ನೂ ಬಹಳ ದೂರದಲ್ಲಿಯೆ ಉಳಿದಿದ್ದಾರೆ. ನೈತಿಕ-ಭೀತಿಗಿಂತಲೂ ಅವರು ಪಾಶವ ಶಾಸನದ ಭೀತಿಗೇ ಹೆಚ್ಚು ಹೆದರುತ್ತಾರೆ.

ಸಂಪುಗಳೆಂದರೆ ಆಂತರಿಕ ಯುದ್ಧಗಳೆ !

ದೇಶದಲ್ಲಿ ಹೇಟಿಯ ವರಗಳು ವಿಪರೀತ ಹೆಚ್ಚಿ ಜನತೆಯ ಜೀವನ ಸಮಸ್ಯೆ ಕಷ್ಟತರದ್ದಾಗಿದೆಯೆಂಬುದನ್ನು ಯಾರೂ ಒಪ್ಪಿಕೊಳ್ಳಬಹುದು. ಇಂದು ಪ್ರತಿಯೊಬ್ಬ ಭಾರತೀಯನನ್ನೂ ಈ ಸಮಸ್ಯೆ ಉಗ್ರವಾಗಿ ಪೀಡಿಸುತ್ತಲಿದೆ. ಸರಕಾರದ ನೌಕರಿಗಾಗಿ ಜೀವನವನ್ನು ತೆತ್ತವರ ಜೀವನ ಸಮಸ್ಯೆಯನ್ನು ಬಿಡಿಸಿ, ಅವರನ್ನು ನಿಶ್ಚಿಂತರನ್ನಾಗಿ ಸುವುದು ಸರಕಾರದ ಕರ್ತವ್ಯವಾಗಿದೆ.

ಹೇಟಿಯ ಏರಿಕೆಗೆ ಸರಕಾರವು ಕೆಲವಂಶದಲ್ಲಿ ಕಾರಣವಾಗಿರಬಹುದಾದರೂ, ಅದಕ್ಕೆ ಬಹ್ವಂಶವಾಗಿ ಕಾರಣರೆಂದರೆ—ರಾಷ್ಟ್ರಹಿತದ ಕಡೆಗೆ ದೃಷ್ಟಿಯನ್ನು ಹರಿಸದೆ ಕೇವಲ ಸ್ವಾರ್ಥಸಾಧಿಸಲು ಹಗಲಿರುಳೂ ಹೆಣಗುತ್ತಲಿರುವ ನಮ್ಮ ನಾಡಿನ ಜನತೆ. ಸರಕಿನ ಉತ್ಪಾದಕಸನ್ನು ಮೊದಲು ಪೂರ್ಣ ಹಿಡಿ, ಅದನ್ನು ಗಿರಾಕಿಗಳಿಗೆ ತಲ್ಪಿಸುವ ವ್ಯಾಪಾರೀ ವರ್ಗದ ವರೆಗೆ—ಎಲ್ಲರಿಗೂ ಲಾಭದಾಶೆಯ ಭೂತ ಬಡಿದುಕೊಂಡಿದೆ. ಸಂಪುಗಳನ್ನು ಸಂಘಟಿಸುವ ವಿರೋಧಿಪಕ್ಷದ ರಾಜಕಾರ್ಯ ಧುರೀಣರು, ಈ ಲಾಭದಾಶೆಯ ಭೂತವನ್ನು ಬಿಡಿಸುವ ಚಟುವಟಿಕೆಗಳನ್ನು ಎಂದಾದರೂ ನಡೆಸಿರುವರೇನು ? ಇಂತಹ ವಿಧಾಯಕ ಚಟುವಟಿಕೆಗಳು ಅವರಿಗೆ ಬೇಕಾಗಿಯೇ ಇಲ್ಲ. ಎಂತಹ ಜನ ವಿಘಾತಕವಾಗಿದ್ದರೂ ಅದನ್ನು ಗಣಿಸದೆ, ವಿಧ್ವಂಸಕ ಚಟುವಟಿಕೆಗಳನ್ನು ಅವರು ಹೂಡುತ್ತಿರುವರು; ಪಾಪ, ಮುನ್ನೋಟವಿಲ್ಲದ ಕೂಲಿಕಾರರು, ಸರಕಾರದ ಕೆಳದರ್ಜೆಯ ನೌಕರರು ಇವರ ಮಾತಿನ ಅಮಿಷಗಳಿಗೆ ಒಳಗಾಗಿ, ಬಲೆಗೆ ಬಿದ್ದು ಮಿಡುಕತೊಡಗುವರು.

ಈ ವಿಧ್ವಂಸಕ ಚಟುವಟಿಕೆಗಳಿಂದ ಯಾರಿಗೆ ಸುಖವಿದೆ ? ಸರಕಾರಕ್ಕೆ ಸುಖವಿಲ್ಲ; ಪ್ರಜಾವರ್ಗಕ್ಕೆ ಸುಖವಿಲ್ಲ. ಜನಹಿತಕ್ಕಾಗಿ ವೆಚ್ಚವಾಗಲಿದ್ದ ದುಡ್ಡು, ಈ ವಿಧ್ವಂಸಕ ಚಟುವಟಿಕೆಗಳ ಪರಿಹಾರಕ್ಕಾಗಿ—ವ್ಯರ್ಥ ವ್ಯಯವಾಗುವುದು. ಪ್ರಜಾಪ್ರಭುತ್ವದ ಅಮೃತದೊಂದಿಗೆ ಬೆರೆತಿರುವ ಕಾಲಕೂಟವೆಂದರೆ, ಈ ವಿರೋಧಿಪಕ್ಷದ ಧುರೀಣರ ಸ್ವಾರ್ಥಸಾಧಕ ವಿಧ್ವಂಸಕ ಚಟುವಟಿಕೆಗಳು. ಒಂದು ರೀತಿಯಿಂದ ಇವುಗಳನ್ನು ಆಂತರಿಕ ಯುದ್ಧಗಳೆಂದೇ ಹೇಳಬಹುದು. ಏಕೆಂದರೆ, ರಾಷ್ಟ್ರ-ರಾಷ್ಟ್ರಗಳಲ್ಲಿ ನಡೆಯುವ ಯುದ್ಧಕಾಲದ ಪರಿಣಾಮವನ್ನೇ, ಈ ಆಂತರಿಕ ಯುದ್ಧಗಳೂ ಉಂಟುಮಾಡುವುವು. ನಿಜವಾದ ಯುದ್ಧದಲ್ಲಿ ಸೈನಿಕರು ಶಸ್ತ್ರಾಸ್ತ್ರಗಳಿಂದ ಪೈನೋವು ಮಾಡಿಕೊಂಡರೆ, ಈ ಆಂತರಿಕ ಯುದ್ಧದ ಸೈನಿಕರು ಮನದನೋವನ್ನು ಅನುಭವಿಸುವರು. ಅನೇಕ ಬಗೆಯ ಆರ್ಥಿಕನಷ್ಟಕ್ಕೂ ಒಳಗಾಗುವರು. ಸರಕಾರ ತನ್ನ ಅಧಿಕಾರ ಸಾಮರ್ಥ್ಯದಿಂದ, ತನಗೆ ಒದಗಿದ ಆರ್ಥಿಕ ನಷ್ಟವನ್ನು ಬಗೆಹರಿಸಿಕೊಂಡೀತು. ಆದರೆ ಅದನ್ನು ಎದುರಿಸಿ ವಿರೋಧ ಕಟ್ಟಿಕೊಂಡ ವ್ಯಕ್ತಿಗಳು, ತಮಗೊದಗಿದ ಆರ್ಥಿಕನಷ್ಟವನ್ನು ಹೇಗೆ ಪರಿಹರಿಸಿಕೊಳ್ಳಬೇಕು ? ಮತ್ತೆ ಅವರು ಸರಕಾರದ ದಯೆಯನ್ನು ಅವಲಂಬಿಸಬೇಕು—ಇಷ್ಟೆ ! ಸಂಪಿಗೆ ಪ್ರಚೋದಿಸಿದ ಮುಂದಾಳುಗಳು ಈಗ ಯಾವ ಸಹಾಯವನ್ನೂ ಮಾಡಲಾರರು.

ಎಲ್ಲರೂ ಕೂಡಿ ಮಾಡಬೇಕಾದ ಕಲ್ಯಾಣಕಾರ್ಯ

ಕೇಂದ್ರಸರಕಾರದ ನೌಕರರಿಗೆ ಮಾತ್ರ ಹೊಟ್ಟೆತುಂಬ ಊಟ, ಮೈತುಂಬ ಬಟ್ಟೆಗಳನ್ನು ಕೊಡಿಸಲು ಮುಂದೆ ಬಂದ ಈ ಧುರೀಣಬ್ರು-

ನರು, ಭಾರತದಲ್ಲಿಯ ಬಿಕ್ಕಜನರ ಜೀವನದ ಕಡೆಗೆ ಎಂದಾದರೂ ಕಣ್ಣುಬಿಟ್ಟು ನೋಡಿರುವರೇನು ? ಕೇಂದ್ರಸರಕಾರದ ನೌಕರವರ್ಗ ವಷ್ಟು ಹೊಟ್ಟೆತುಂಬ ಊಟಮಾಡಿದರೆ ಅವರಿಗೆ ಸಾಕೇನು ? ಇಂದು ಭಾರತದಲ್ಲಿ, ಸದ್ಯದ ಆರ್ಥಿಕ ಬಿಕ್ಕಟ್ಟಿನ ಮೂಲಕ, ಜೀವನ-ಮರಣಗಳ ನಡುವೆ ಉಯ್ಯಲೆಯಾಡುವವರ ಸಂಖ್ಯೆಯೇ ಹೆಚ್ಚಾಗಿದೆ. ಈ ಬಿಕ್ಕಟ್ಟು ನಮ್ಮ ನಾಡಿನ ಜನತೆಯಲ್ಲಿ ಸಹಜವಾಗಿ ಬೆಳೆದುಕೊಂಡು ಬಂದಿದ್ದ ಜೀವನಸಂಸ್ಕೃತಿಯನ್ನೇ ಹಾಳುಮಾಡತೊಡಗಿದೆ. ದೈನ್ಯ ಜೀವನದ ಭೀತಿಯಿಂದ ಆತ್ಮಹತ್ಯಮಾಡಿಕೊಳ್ಳುವವರ ಸಂಖ್ಯೆಯೂ ಹೆಚ್ಚತೊಡಗಿದೆ. ಇದ್ದ ವಿದ್ಯೆ-ಕಲೆಗಳನ್ನು ಸಂರಕ್ಷಿಸಿಕೊಂಡು ಹೋಗುವ ಶಕ್ತಿ, ನಮ್ಮ ಬಹುಜನ ಸುಸಂಸ್ಕೃತರಲ್ಲಿ ಉಳಿದಿಲ್ಲ; ಇದಕ್ಕೆ ಉಪಾಯವನ್ನು ನಮ್ಮ ಸಂವುಪ್ರಚೋದಕ ಧುರೀಣರು ಮಾಡಬಾರದೆ ?

ನಿಜವಾಗಿ ನೋಡಿದರೆ ಕೇಂದ್ರಸರಕಾರದ ನೌಕರರಿಗೆ ವಿುಕ್ಕ ರಾಜ್ಯಸರಕಾರಗಳ ನೌಕರರಿಗಿಂತ ಹೆಚ್ಚು ಸಂಬಳವಿದೆ. ಅವರಿಗೇ ಇನ್ನಿಷ್ಟು ಸಂಬಳ ಹೆಚ್ಚಿದ್ದರೆ, ಪೇಟೆಯ ದರಗಳ ಏರಿಕೆಯನ್ನು ಅದು ತಗ್ಗಿಸಲಾರದು; ತಿರುಗಿ ಅವುಗಳ ಹೆಚ್ಚಿನ ಏರಿಕೆಗೆ ಮಾತ್ರ ಕಾರಣವಾಗಬಹುದು. ಏಕೆಂದರೆ ಹತ್ತಿರ ಹಣವಿರುವವನು, ಎಂತಹ ಏರಿದ ದರದಿಂದಲೂ ಪೇಟೆಯಲ್ಲಿ ಮಾಲುಕೊಳ್ಳಲು ಸಿದ್ಧನಾಗುವನು. ಇದರಿಂದ ಹಣವಿಲ್ಲದ ಸಾವಿರಾರು ಜನರು ಉಪವಾಸ ವನವಾಸಗಳನ್ನು ಸಹಿಸಬೇಕಾಗುವುದು. ಇಂದು ಸರಕಾರ, ವಿರೋಧಿಪಕ್ಷಗಳು ಎಲ್ಲವೂ ಕೂಡಿ ಮಾಡಬೇಕಾದ ಬಹುಜನಹಿತದ ಕಾರ್ಯವಾವುದಾದರೂ ಇದ್ದರೆ, ಅದು ಪೇಟೆಯ ದರಗಳು ಇಳಿಯುವಂತೆ ಮಾಡುವುದು. ಇದೇ ಪರಿಸ್ಥಿತಿಯು ಮುಂದುವರಿದರೆ, ಜನಸಾಮಾನ್ಯರ ಬದುಕಿಗೆ ಉಳಿಗಾಲವಿಲ್ಲ. ಸಾಯಲು ಸಿದ್ಧವಾದ ಜನತೆ ಏನು ಮಾಡೀತೆಂಬುದರ ನಿಯಮವೇ ಇರದು. ನಮ್ಮ ಸರಕಾರ, ಜನನಾಯಕರು ಇದರ ಬಗೆಗೆ ಮುನ್ನೆಚ್ಚರಿಕೆ ವಹಿಸಬೇಕಾದುದು ಅತ್ಯಗತ್ಯದ ವಿಷಯವಾಗಿದೆ. 'ಕ್ಷೀಣಾ ನರಾ ನಿಷ್ಕರುಣಾ ಭವಂತಿ' ಎಂಬ ಪಂಚತಂತ್ರದ ವಚನವನ್ನು, ಈಗ ಎಲ್ಲರ ಜ್ಞಾಪಕಕ್ಕೆ ತಂದುಕೊಡಬೇಕಾಗಿದೆ.

ಮುಂಬಯಿ-ಮೈಸೂರು ರಾಜ್ಯಗಳ ಗಡಿವಿವಾದ

ಮಹಾರಾಷ್ಟ್ರದಲ್ಲಿಯ ಬೇರೆ ಕೆಲಸವಿಲ್ಲದ ಸ್ವಯಂಪುಸ್ಯ ಧುರೀಣರು, ಈ ಗಡಿವಿವಾದದ ವಿಷಯವನ್ನೆತ್ತಿ ಆಗಾಗ ದುಡುಕಿನ ನುಡಿಗಳನ್ನು ಆಡಿಯೆ ಆಡುತ್ತಾರೆ. ಕೇಂದ್ರಸರಕಾರದ ಅಭಿಪ್ರಾಯದಂತೆ, ಮುಂಬಯಿ-ಮೈಸೂರು ಸರಕಾರಗಳು, ಸಮಾಧಾನದಿಂದ ಈ ವಿವಾದವನ್ನು ಬಗೆಹರಿಸಿಕೊಳ್ಳಲು ಸಿದ್ಧವಾಗಿವೆ. ಅದಕ್ಕಾಗಿಯೆಂದೇ ಎರಡೂ ರಾಜ್ಯಗಳ ಸಮಸಂಖ್ಯಾ ಸದಸ್ಯರುಳ್ಳ ಸಮಿತಿಯ ನಿರ್ಮಾಣವೂ ಆಗಲಿದೆ. ಆದರೂ ಸಂ. ಮ. ಸಮಿತಿಯ ಮುಂದಾಳುಗಳಿಗೆ ಸಮಾಧಾನವಿಲ್ಲ. ಬಾಯಿಗೆ ಬಂದಂತೆ ಬಡಬಡಿಸುತ್ತಾರೆ; ಕೈಗೆ ಬಂದಂತೆ ಬರಹಗಳನ್ನು ಗೀಚುತ್ತಾರೆ. ಈ ರೀತಿ ಒಳ್ಳೆಯದಲ್ಲವೆಂದು ಮಹಾರಾಷ್ಟ್ರದ ಮುಖ್ಯಮಂತ್ರಿ ಮಾನ್ಯ ಚವ್ಹಾಣರು ವಿವೇಕದ ಮಾತುಗಳನ್ನು ಹೇಳಿದರೂ, ಅವರ ಮಾತಿನ ಕಡೆಗೆ ಆ ಮುಂದಾಳುಗಳು ಲಕ್ಷ್ಯಕೊಡುತ್ತಿಲ್ಲ. ತಮ್ಮ ದುಷ್ಟಮಾತುಗಳನ್ನು ಅವಿರತವಾಗಿ ನಡೆಸಿಯೇ ಇರುವರು.

ಮುಂಬಯಿ ಸಹಿತ ಮಹಾರಾಷ್ಟ್ರದ ರಚನೆಗೆ ಕಾರಣದು ಮಹಾರಾಷ್ಟ್ರದಲ್ಲಿಯ ಕಾಂಗ್ರೆಸ್ ಪಕ್ಷೀಯರೇ ಅಲ್ಲದೆ, ಈ ಬೈಗುಳ ಬಂಟರಲ್ಲ. ತಮ್ಮ ಬೈಗುಳಿಂದಲೇ ಮಹಾರಾಷ್ಟ್ರ ರಾಜ್ಯವನ್ನು ಸಂಪಾದಿಸಿದೆವೆಂಬ ಭ್ರಮೆಯಲ್ಲಿ ಸಂ. ಮ. ಸ. ಮುಂದಾಳುಗಳು ಈಗಲೂ ಇದ್ದಾರೆ.ಅದೇ ಬಲದಿಂದಲೇ ಬೆಳಗಾಂವಿ-ಕಾರವಾರಗಳನ್ನು ಪಡೆಯುವೆವೆಂಬ ಅಂಧ ವಿಶ್ವಾಸವೂ ಅವರಿಗೆ ಇದ್ದಂತಿದೆ. ಕನ್ನಡಿಗರ ಸ್ಥಿರಸಂಕಲ್ಪದ ಕಲ್ಪನೆ ಆ ಭ್ರಮಾಂಧರಿಗೆ ಇದ್ದಂತಿಲ್ಲ. ಮುಂಬಯಿ ಸಹಿತ ಮಹಾರಾಷ್ಟ್ರ ರಾಜ್ಯವು ಮಹಾರಾಷ್ಟ್ರೀಯರಿಗೆ ದೊರೆತುದು ಅಸ್ವಾಭಾವಿಕವಲ್ಲ; ಅನ್ಯಾಯದಿಂದಲೂ ಅಲ್ಲ. ಬೆಳಗಾಂವಿ-ಕಾರವಾರ ಪ್ರದೇಶಗಳನ್ನವರು ಅಪೇಕ್ಷಿಸುವುದು ಅಸ್ವಾಭಾವಿಕವಾದುದು; ಅನ್ಯಾಯವಾದುದು. ಇದರ ಕಲ್ಪನೆ ಸಂಯುಕ್ತಮಹಾರಾಷ್ಟ್ರ ಸಮಿತಿಯ ಮುಂದಾಳುಗಳಿಗೆ ಆಗದೆ ಹೋದಲ್ಲಿ, ಭವಿಷ್ಯವು ಅವರಿಗೆ ಈ ಕಲ್ಪನೆಯನ್ನು ಚೆನ್ನಾಗಿ ಮಾಡಿ ಕೊಡಬಲ್ಲದು; ಅದುವರೆಗೆ ಎಷ್ಟು ಕೂಗಾಡುವರೋ ಕೂಗಾಡಲಿ !

ಕನ್ನಡದ ದ್ವೇಷವಲ್ಲವೇ ಇದು ?

ತನ್ನ ರಾಜ್ಯದಲ್ಲಿ ವಾಸಿಸುವರೆಲ್ಲರಿಗೂ ಕನ್ನಡಭಾಷೆಯ ಪರಿಚಯವಿರಬೇಕೆನ್ನುವ ಸದುದ್ದೇಶದಿಂದ ನಮ್ಮ ರಾಜ್ಯಸರಕಾರದ ವಿದ್ಯಾಶಾಖೆಯ ಮುಖ್ಯಾಧಿಕಾರಿಗಳು, ರಾಜ್ಯದಲ್ಲಿಯ ಎಲ್ಲ ಕನ್ನಡೇತರ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವನ್ನೂ ಕಲಿಸಬೇಕೆಂಬ ಆಜ್ಞೆಯೊಂದನ್ನು ಹೊರಡಿಸಿದ್ದಾರೆ. ಬೆಳಗಾಂವಿಯ ಮರಾಠಿಗರಿಗೆ ಈ ಆಜ್ಞೆ ವಿಷವಾಗಿ ಪರಿಣಮಿಸಿದೆ. 'ಮರಾಠಿಗರ ಮೇಲೆ ಇದೊಂದು ಒತ್ತಾಯ!' ಎಂದು ರಾಜ್ಯಸರಕಾರದ ಈ ಆಜ್ಞೆಯನ್ನು ಕುರಿತು, ಒಂದೆಸವನೆ ಬೆಳಗಾವಿಯ ಮರಾಠಿಗರು ಕೂಗಿಕೊಳ್ಳತೊಡಗಿದ್ದಾರೆ. ಬೆಳಗಾಂವಿಯ ಮರಾಠಿಗರಿಗೆ ಕನ್ನಡಿಗರಿಂದ ದೊರೆಯುವ ಲಾಭ, ಅನುಕೂಲತೆಗಳೆಲ್ಲ ಬೇಕು; ಆದರೆ ಕನ್ನಡಿಗರ ಭಾಷೆ ಮಾತ್ರ ಅವರ ಸಮೀಪ ಸುಳಿಯ ಕೂಡದು. ಈ ವಿಪರೀತ ಬುದ್ಧಿಗೆ ಏನೆನ್ನಬೇಕು ?

ಬೆಳಗಾಂವಿಯ ಮರಾಠಿಗರಿಗೆ ಇಂಗ್ಲಿಷನ್ನು ಕಲಿಯುವುದು ಒತ್ತಾಯವಲ್ಲ; ಹಿಂದಿಯನ್ನು ಕಲಿಯಬೇಕಾದುದು ಒತ್ತಾಯವಲ್ಲ; ಬೇರೆ ಯಾವ ಪರಭಾಷೆಯನ್ನೂ ಅವರು ಪ್ರೀತಿಯಿಂದ ಕಲಿತಾರು. ಕನ್ನಡ ಕಲಿಯಬೇಕೆಂದರೆ ಅವರಿಗೆ ಒತ್ತಾಯದ್ದಾಗಿ ಕಾಣುವುದು. ಕನ್ನಡಭಾಷೆಯ ದ್ವೇಷಭಾವನೆಯ ದುರ್ಲಕ್ಷಣವಲ್ಲವೇ ಇದು ?

★ ಆಭರಣೇಶ್ವರಿ! ★

(ವ್ಯಾಸಕೃತ ಮಹಾಭಾರದ ವನಪರ್ವದಲ್ಲಿಯ ಕಥೆ)*

ಡಿ. ಮುದೇನೂರ ಸಂಗಣ್ಣ, ಚಿಟಗೇರಿ (ಹರಪನಹಳ್ಳಿ)

ವಿದರ್ಭರಾಜಪುತ್ರಿಯಾದ ಲೋಪಾಮುದ್ರೆಗೆ ರತ್ನಾಭರಣಗಳ ಹುಚ್ಚು. ಅವು ಇಲ್ಲದುದರಿಂದ, ಅಗಸ್ತ್ಯ ಋಷಿಗಳ ಆಶ್ರಮದಲ್ಲಿ, ಕರ್ತವ್ಯಬುದ್ಧಿಯ ಉದಾಸೀನ ಜೀವನದಲ್ಲಿ ಕಾಲ ನೂಕುತ್ತಿದ್ದಳು. ಅಗಸ್ತ್ಯರು ಆಕೆಯ ಆಶೆಯನ್ನರಿತು ರತ್ನಾಭರಣಗಳನ್ನು ಒದಗಿಸಿದರು; ಆದರೆ ಅಗ ಲೋಪಾಮುದ್ರೆಗೆ ಅವು ಬೇಕಾದುವೆ? ಹೆಣ್ಣು-ಗಂಡಿನ ಬಾಳಿನಲ್ಲಿಯ ಸೂಕ್ಷ್ಮ ಮನಶ್ಚಿತ್ರಣ ಇದರಲ್ಲಿ ಮೂಡಿನಿಂತಿದೆ.

೧

ವಿದ್ರುಮವನ್ನು ಹೋಲುವ ವರ್ಣಶಿಲೆಯ ಸೋಪಾನ, ವೈಡೂರ್ಯ ಖಚಿತ ಸ್ತಂಭಗಳು! ವಿದರ್ಭರಾಜನ ಆನಯನದಮ್ಯ ನಿಕೇತನದ ಒಂದು ಸ್ಫಟಿಕ ಕುಟ್ಟಿಮದಲ್ಲಿ ಮಣಿನೂಪುರಗಳ ಸೌದಾಮಿನಿಯೊರ್ವಳು ನರ್ತಿಸುತ್ತಿದ್ದಳು. ವಿದರ್ಭರಾಜನ ಪುತ್ರಿ ಲೋಪಾಮುದ್ರೆ. ಕೋಟಿ ವನಚಂಪಕದ ಕಾಂತಿ ಪೀಯೂಷ ಧಾರೆಯಲ್ಲಿ ನೂರು ಸಲ ಸ್ವಚ್ಛಗೊಳಿಸಲ್ಪಟ್ಟ ಬಂಗಾರದ ದೇಹದವಳು. ಕಾಡಿಗೆಗಣ್ಣಿನ ನೂರು ಜನ ದಾಸಿಯರ ಕಲಹಾಸದಿಂದ ಪರಿವೃತಳಾದ ಲೋಪಾಮುದ್ರೆಯ ಅವಿರತ ನೃತ್ಯಾಮೋದದ ಚಂಚಲದೇಹ, ಆ ಸ್ಫಟಿಕ ಕುಟ್ಟಿಮದ ವಕ್ಷದಲ್ಲಿ ಕ್ಷಣ-ಕ್ಷಣಕ್ಕೂ ಸುಲಾಸ್ಯ ಲೀಲಾಮಯದ್ಯುತಿಚಿತ್ರದ ಮಹೇಂದ್ರಜಾಲವನ್ನು ಪ್ರಸರಿಸುತ್ತಿತ್ತು. ಕನಕಕೇಯೂರದ ಪ್ರಭೆ, ರತ್ನದ ಕಾಂಚೀದಾಮದ ವಿಪುಲದೀಪ್ತಿಯ ಲಾಸ್ಯ ಮತ್ತು ಹೊನ್ನಿನ ಕವಿಯೋಲೆಯ ಅನುರಂಜಿಸುವ ರಶ್ಮಿ—ಇವುಗಳಿಂದ ರಚಿತವಾದ ಮೂರ್ತಿಯಂತೆ ಸುಶೋಭಿಸುವ ಕುಮಾರಿ ಲೋಪಾಮುದ್ರೆ, ತನ್ನ ಪಿತ ವಿದರ್ಭರಾಜನ ಸಕಲೈಶ್ವರ್ಯದ ಸ್ನೇಹದಿಂದ ಅಭಿಷಿಕ್ತಳಾದ ಒರ್ವ ಆಭರಣೇಶ್ವರಿಯಂತೆ ಕಾಣುತ್ತಿದ್ದಳು.

ಸ್ಫಟಿಕಕುಟ್ಟಿಮದಲ್ಲಿ ನರ್ತಿಸುತ್ತಲಿದ್ದಳು.... ವಿಕಚಯೌವನೆ ಲೋಪಾಮುದ್ರೆ. ಅವಳ ಲೀಲಾಮಯ ಬಾಹುವಿಕ್ಷೇಪ, ಕಟಿಭಂಗ ಮತ್ತು ಪದಗತಿಗಳ ಉತ್ಸವದಲ್ಲಿ ಒಂದಾಗಲು, ಮಣಿಗುಚ್ಛಗಳಿಂದ ಅಲಂಕೃತವಾದ ಅವಳ ವೇಣಿ ಜೋತುಬಿದ್ದು ನೇತಾಡುತ್ತಿತ್ತು. ನಸುವಿಕಸಿತ ವಕ್ಷದ ಸ್ವಚ್ಛವಾದ ಅಂಶುಕವಸನ ಶಿಥಿಲಗೊಂಡಿತು. ಮೌಕ್ತಿಕ ನಿರ್ಝರದಂತೆ ಹರಿದು ಸಿಡಿಯಿತು....ಕಂಠದ ಏಕಾವಳೀ ರತ್ನಹಾರ.

ಚಂಚಲ ನಿಃಶ್ವಾಸವನ್ನು ತಡೆಹಿಡಿವುದಕ್ಕಾಗಿ ಶಾಂತವಾಗಿ ಒಮ್ಮೆ ತಡೆದು ನಿಂತಳು ಲೋಪಾಮುದ್ರೆ. ಅನಂತರ ಬೆದರಿ ನಡುಗುವ ಭಾಮಿನಿಯಂತೆ ಕೌತುಕತರಲ ರೆಪ್ಪೆಗಳನ್ನು ಸಮುತ್ಥಿತಗೈದು ಸುಹಾಸ ಚಂಚಲಸ್ವರದಲ್ಲಿ ಕೆಂಕರಿಗೆ ಹೇಳಿದಳು:—ನವಾಭರಣಗಳಿಂದ ಸಿಂಗರಿಸು ಸೇವಕಿ, ಇಂದ್ರನೀಲದ ಕಣಗಳಿಂದ ರಚಿತವಾದ ನೂತನ ಕಟಿಮೇಖಲೆಯನ್ನು ತೆಗೆದುಕೊಂಡು ಬಾ.

ವಿಸ್ಮಿತಳಾಗಿ ನುಡಿದಳು ಕೆಂಕರಿ: ಈಗ ನೃತ್ಯವನ್ನು ಸಾಕು ಮಾಡು ರಾಜಕುಮಾರಿ!

ಲೋಪಾಮುದ್ರೆ ಹೇಳಿದಳು:—ಇಲ್ಲ, ತಡಮಾಡದಿರು ಕೆಂಕರೀ, ಈಗಲೇ ತೆಗೆದುಕೊಂಡು ಬಾ; ನನ್ನ ಪದವ್ಯಯಗಳಿಗೆ ಕಲಹಂಸ ಕಂಠಕ್ಕಿಂತಲೂ ನಾದಮಧುರವಾದ ಎರಡು ಸ್ವರ್ಣವಿನಿರ್ಮಿತ ಹಂಸಕಗಳನ್ನು ತಂದು ತೊಡಿಸು. ಈ ಆನಂದೋತ್ಸವವನ್ನು ಈಗಲೇ ನಿಲ್ಲಿಸಲಾಗದು.

ಕೌತುಕಿನಿಯಾದ ಕೆಂಕರಿ ನುಡಿದಳು:—ನೀನಿಂತು ಸಕಲ ರತ್ನಾಭರಣಗಳ ಸಿಂಜನ ಗೈಯುತ್ತಾ ದೇವಸ್ಥಾನದ ದಾಸಿಯಾದ ನರ್ತಕಿಯಂತೆ ಛಂದೋಮಯಿಯಾಗಿ, ಮನೋಮಂದಿರದ ಯಾವ ಸ್ವಪ್ನದ ದೇವರಿಗೆ ವಂದಿಸುತ್ತಲಿರುವೆ—ರತ್ನಾಧಿಕಳಾದ ಲೋಪಾಮುದ್ರೆ?

ಚಕಿತ ವೃಷ್ಟಿಯನ್ನು ಹೊರಳಿಸಿ ನೀಲಾಶೋಕದತ್ತ ನೋಡುತ್ತಾ, ಚಿಂತಾನ್ವಿತಳಂತೆ ಸ್ತಬ್ಧಳಾಗಿ ನಿಂತಳು ಲೋಪಾಮುದ್ರೆ. ವಿಷಣ್ಣ ಹಾಗೂ ಸ್ನಿಗ್ಧ ಸ್ವರದಲ್ಲಿ ಹೇಳಿದಳು:— ನಿನ್ನ ಅನುಮಾನ ನಿಜವಾಗಿಯೂ ಸುಳ್ಳಲ್ಲ ಕೆಂಕರಿ. ಯಾವುದೋ ಒಂದು ಆನಂದೋತ್ಸವದ ಪ್ರದೀಪವು ನನ್ನ ಈ ಮನದ ಸ್ಫಟಿಕಕುಟ್ಟಿಮವೊಂದರ ಏಕಾಂತದಲ್ಲಿ ಜ್ವಲಿಸುತ್ತಲಿದೆ. ದೇವೋಪಮನಾದೊಬ್ಬ ಪ್ರೇಮಿಯ ತೃಷ್ಣಾಮಯ ವಿಶಾಲ ಚಕ್ಷುದ್ವಯದ ಸಮ್ಮುಖದಲ್ಲಿ ನಿಂತಿದ್ದೇನೆ ನಾನು. ಆದರೆ.... ನನ್ನ ಕೇಯೂರ, ಕಾಂಚೀದಾಮ, ಮಂಜೀರ, ಮೌಕ್ತಿಕಹಾರ ಮುಂತಾದ ರತ್ನಾಭರಣಗಳೆಲ್ಲವೂ ಸೋತುಹೋದುವು. ನನ್ನ ಈ ಮಧುರ ಭೀತಿಯನ್ನು ಅರಿತುಕೊಳ್ಳಲಾಗಲೊಲ್ಲದು ಕೆಂಕರಿ!

ಬೆದರಿದನಳಂತೆ ಓಡಿ ಬಂದು, ವಿದರ್ಭಕುವರಿ ಲೋಪಾಮುದ್ರೆಯ ಧಾತ್ರೇಯಿಕೆಯು ಎದುರಿನಲ್ಲಿ ನಿಂತು ಅಶ್ರುನಯನೆಯಾಗಿ ನುಡಿದಳು:— ಆನಂದೋತ್ಸವವನ್ನು ಸಾಕುಮಾಡು ದುರ್ಭಾಗಿನಿ ಕನ್ಯೆ!

ಲೋಪಾಮುದ್ರಾ:—ಏಕೆ?

* ಸುಪ್ರಸಿದ್ಧ ವಂಗಸಾಹಿತ್ಯಿಕ ಶ್ರೀ. ಸುಭೋಧಘೋಷರ ಕಥೆಯೊಂದರ ಅನುವಾದವಿದು. ಸಂ.

ಧಾತ್ರೇಯಿಕಾ— ಸುಮ್ಮನಿರು ಮಾತನಾಡಬೇಡ; ಪ್ರಶ್ನ ವಾಚಾಳಿ ಕನ್ಯೆ! ಸಾವಧಾನ, ನಿನ್ನ ಸ್ವರ್ಣಮಂಜೀರವು ಮರೆತು ಕೂಡ ಯಾವುದೇ ಚಾಂಚಲ್ಯದಿಂದ ಧ್ವನಿಗೈಯದಿರಲಿ.

ಲೋಪಾಮುದ್ರಾ—ಏಕೆ?

ಧಾತ್ರೇಯಿಕಾ—ಸುಮ್ಮನಿರು, ಸುಮ್ಮನಿರು! ಋಷಿ ಅಗಸ್ತ್ಯರಿಗೆ ಕೇಳಿಸದಂತೆ ಗದ್ದಲಗೈಯುವ ನಿನ್ನ ರತ್ನಾಭರಣಗಳನ್ನು ನೀರವಗೊಳಿಸು. ನಿನ್ನ ವೇಣಿ-ಮಣಿಪ್ರಭೆ ಅವರಿಗೆ ಕಾಣದಹಾಗೆ ಅಡಗಿಸಿಟ್ಟುಕೋ.

ವಿಸ್ಮಿತ ಸ್ವರದಲ್ಲಿ ಲೋಪಾಮುದ್ರೆ ನುಡಿದಳು—ಋಷಿ ಅಗಸ್ತ್ಯ?

ಧಾತ್ರೇಯಿಕಾ—ಹೌದು! ನಿರ್ಧನ, ರಿಕ್ತ ಮತ್ತು ಚಿಂದಿಬಟ್ಟೆಯುಟ್ಟ ತಪಸ್ವಿ ಅಗಸ್ತ್ಯರು ಆಗಮಿಸಿ, ವಿದರ್ಭರಾಜರ ಈ ರತ್ನಪುರದ ದ್ವಾರದಲ್ಲಿ ನಿಂತಿದ್ದಾರೆ.

ಆಪತ್ತಿಗೊಳಗಾದವಳಂತೆ ಭೀತಸ್ವರದಲ್ಲಿ ಈ ವಾರ್ತೆಯನ್ನು ತಿಳಿಸಿ, ಮತ್ತೆ ಅಂತಃಪುರದತ್ತ ಹೊರಟುಹೋದಳು ಧಾತ್ರೇಯಿಕಾ. ವಿಸ್ಮಿತಳಾದಳು ಲೋಪಾಮುದ್ರೆ. ಕುಬೇರಸಮಾನ ಧನ ಶಾಲಿಯಾದ ವಿದರ್ಭರಾಜನ ಮೈ್ಯಡೂರ್ಯಖಚಿತ ಭವನದ ಸ್ತಂಭವ ನೆರಳಿನ ನಿಕಟದಲ್ಲಿ ಒರ್ವ ರಿಕ್ತ ಮತ್ತು ನಿರ್ಧನ ತಪಸ್ವಿ ಬಂದು ನಿಂತಿದ್ದಾನೆ. ಆದರೆ ಅದಕ್ಕಾಗಿ ಇಷ್ಟೊಂದು ಭಯಗೊಳ್ಳುವಂಥದೇನಿದೆ? ಈ ರಹಸ್ಯವನ್ನು ಅರಿಯಲಾಗಲಿಲ್ಲ ಸೇವಕಿಯರ ದಲಕ್ಕೆ. ಅವರು ತಮ್ಮ ಕಲಹಾಸವನ್ನು ಸ್ತಬ್ಧಗೈದು ವಿಷಣ್ಣಮುಖಿಗಳಾಗಿ ಲೋಪಾಮುದ್ರೆಯ ವಿಸ್ಮಯಾಪ್ಲುತ ನೋಗದತ್ತ ಕೆಲವು ಕ್ಷಣ ನಿಟ್ಟಿಸಿ ನೋಡಿದರು. ಅನಂತರ ಆ ಅದ್ಭುತ ವಿಪತ್ತಿನ ರಹಸ್ಯವನ್ನರಿಯಲು ಅಂತಃಪುರಕ್ಷಭಿಮುಖ್ಯವಾಗಿ ತ್ವರಿತಗತಿಯಿಂದ ನಿಷ್ಕ್ರಮಿಸಿದರು.

ನೀಲಾಕಾಶದತ್ತ ಮತ್ತೊಮ್ಮೆ ಭ್ರಮರಕೃಷ್ಣ ಚಕ್ಷುದ್ವಯದ ದೃಷ್ಟಿಯನ್ನು ಬೀರಿ, ಅಸ್ಫುಟ ಸ್ವರದಲ್ಲಿ ಹೃದಯದ ವಿಸ್ಮಯವನ್ನು ಧ್ವನಿಗೈದಳು. ಲೋಪಾಮುದ್ರೆ:—ಋಷಿ ಅಗಸ್ತ್ಯ!

ಒರ್ವ ನಿರ್ಧನ ತಪಸ್ವಿಯು ಬಂದು ವಿದರ್ಭರಾಜನ ಭವನದ ದ್ವಾರದಲ್ಲಿ ನಿಂತಿದ್ದಾನೆ; ಆದರೆ ಅದಕ್ಕಾಗಿ ಏಶ್ವರ್ಯಸಮಾಕುಲ—ಈ ವಿರಾಟಭವನದ ಅಂತರಾತ್ಮವೇಕೆ ಈ ರೀತಿ ಭಯಗೊಳ್ಳಬೇಕು? ಈ ವೇಣೀ ಮಣಿಪ್ರಭೆಯನ್ನೇಕೆ ಮುಚ್ಚಿಡಬೇಕು? ಈ ಸ್ವರ್ಣಮಂಜೀರವನ್ನೇಕೆ ನಿಶ್ಯಬ್ದವಾಗಿಡಬೇಕು? ಕಠೋರ ಹೃದಯದ ದರೋಡೆಕೋರನಂತೆಯೇ ಈ ತಪಸ್ವಿಯು, ಕಠೋರವಾದೊಂದು ಬೇಡಿಕೆಯ ಮೂಲಕ ದಾನ ಪುಣ್ಯಪರಾಯಣನಾದ ವಿದರ್ಭರಾಜನ ಈ ಭವನದ ಸಕಲ ರತ್ನಗಳನ್ನೂ ಅಪಹರಿಸಿ ತೆಗೆದುಕೊಂಡು ಹೊರಟುಹೋಗಲಿಕ್ಕಾಗಿಯೇ ಬಂದಿರುವನೇನು? ಅದಕ್ಕಾಗಿಯೇ ಏನು, ಧಾತ್ರೇಯಿಕೆ ಭೀತಳೂ ಹಾಗೂ ವಿಚಲಿತಳೂ ಆದದ್ದು? ಅವಳ ಎರಡೂ ನಯನಗಳು ಕಂಬನಿಯಿಂದ ತುಂಬಿ ತುಳುಕಿದ್ದು?

ನಿರ್ಜನ ಅಶ್ರಮದ ನೆಮ್ಮದಿ ಮತ್ತು ಪ್ರಶಾಂತತೆಗಳನ್ನು ತೊರೆದು ಲುಬ್ಧಪ್ರಾರ್ಥಿಯಂತೆ ನೃಪತಿಯೋರ್ವನ ಭವನದ ದ್ವಾರಪ್ರಾಂತದ ಪಥದಲ್ಲಿ ನಿಂತಿರುವ ಆ ರತ್ನಲೋಭಾತುರ ಋಷಿಯ ರೂಪವನ್ನು ನೋಡಲಿಚ್ಛೆಯಾಯಿತು.

ಯಾವ ಅದ್ಭುತ ತಪಸ್ವಿಯ ಚಿತ್ತದಲ್ಲಿ ತಪಶ್ಚರ್ಯೆಯು ಪರಿವರ್ತಿತವಾಗಿ ರತ್ನ ಕಾಮನೆ ಹೆಚ್ಚಿ ಬೆಳೆಯಿತೋ, ಅಂಥವನ ಪ್ರಾರ್ಥನೆಯಲ್ಲಿ ಭಯಪಡಿಸುವಂಥದಾವುದೂ ಏನಿರುತ್ತದೆ? ಇಂಥ ದುರಾಶೆಯವನ ಕಠೋರ ಪ್ರಾರ್ಥನೆಯನ್ನು ಕಠೋರವಾದೊಂದು ತಿರಸ್ಕಾರದಿಂದ ನಿರಾಕರಿಸಿಕೊಳಿಸಿದರೆ, ಈ ಪೃಥ್ವಿಯ ಯಾವುದಾದರೂ ದಾನವ್ರತದ ಯಶಸ್ಸಿನ ಪುಣ್ಯಕ್ಕೆ ಹಾನಿಯೊದಗಲಾರದು.

ಸ್ಫಟಿಕಕುಟ್ಟಿಮದ ಅಂತರಾಳದಿಂದ—ಕುತೂಹಲದ ಹೆಣ್ಣು ಹಕ್ಕಿಯಂತೆ ನಿವಾಸಿಸಲಾಗದ ವ್ಯಗ್ರತೆಯಿಂದ ಹೊರಬಂದು, ಭವನದ ಪುರೋಭಾಗದ ನೆರೆಯಲ್ಲಿರುವ ನವೀನ ಆವರಣದಿಂದ ಆವೃತವಾದ ಪ್ರಾಂಗಣದ ತುದಿಯಲ್ಲಿ ನಿಂತಳು ಲೋಪಾಮುದ್ರೆ. ಕತ್ತು ತಿರುಗಿಸಿದ್ದರಿಂದ ನಗತೊಡಗಿತು ವೇಣೀಮಣಿಪ್ರಭೆ ವಾಯುವಿನ ಅಲೆತದಿಂದಾಗಿ ತೂಗಾಡಿತು, ಸ್ವಚ್ಛ ಅಂಶುಕವನನದ ಅಂಚು. ಕೇಳಿಮದಮತ್ತ ರಾಜಹಂಸದ ಕಲಸ್ವರದಂತೆ ನುಡಿಯತೊಡಗಿದುವು....ಧೂಸನುತಿ ಲೋಪಾಮುದ್ರೆಯ ಚರಣಕ್ಕೆ ಸುತ್ತಿಕೊಂಡಿದ್ದ ಸ್ವರ್ಣ ಹಂಸಕಗಳು. ಈ ಪೃಥ್ವಿಯ ಕಠೋರ ಲೋಭಿಯೊಬ್ಬನ ಕಣ್ಣು ಮತ್ತು ಕಿವಿಗಳನ್ನು ಉಪೇಕ್ಷೆಗೈಯಲಿಕ್ಕಾಗಿಯೇ ನಡೆದು ಬಂದಿದ್ದಂತಿತ್ತು, ಭೀತಿಲೇಶವಿಹೀನಳಾದ ಲೋಪಾಮುದ್ರೆ.

ಅದೋ, ಅದೇ ಲತಾಗೃಹದ ನೆರೆಯಲ್ಲಿಯೇ ನಿಂತಿದ್ದಾನೆ ಆ ಸ್ವಾರ್ಥಿ. ಒಮ್ಮೆಗೇ ಸ್ತಂಭಿತಗೊಂಡು ನಿಶ್ಚಲಳಾಗಿ ನಿಂತು ನಿಟ್ಟಿಸಿ ನೋಡತೊಡಗಿದಳು ಲೋಪಾಮುದ್ರೆ. ವರ್ಷಾಋತುವಿನಲ್ಲಿ ಜಲರಾಶಿಯಿಂದ ತುಂಬಿ ಹರಿವ ನದಿಯು, ತನ್ನ ವಿಪುಲ ತರಂಗಗಳ ಪ್ರಗಲ್ಭತೆಯನ್ನು ಕ್ಷಣದಮಟ್ಟಿಗೆ ತಡೆಹಿಡಿದು, ತಟಸ್ಥಿತ ದೇವದಾರು ವೃಕ್ಷವತ್ತ ನೋಡುತ್ತಲಿದೆಯೇನೋ ಎನ್ನುವಂತೆ ಕಂಡಿತು. ವ್ಯಾಧನ ಬಾಣದ ಆಘಾತದಿಂದ ಆಹತಗೊಂಡ ಕೂಜನನಿರತ ಪಕ್ಷಿಣಿಯ ಕಂಠವು ರವಹೀನವಾಗುವಂತೆ, ಒಮ್ಮೆಗೇ ನೀರವವಾಯಿತು, ಸ್ವರ್ಣಹಂಸಕದ ತಡೆ ಇಲ್ಲದ-ಮುಖರತೆ. ಯಾವುದೋ ಒಂದು ಲಜ್ಜಾಮಯ ಪ್ರಬಲ ಭಯದಿಂದ ಕಂಪಿತಳಾಗಿ ಲೋಪಾಮುದ್ರೆ ಒಂದು ಕೈಯಿಂದ ತನ್ನ ನೇಣೀ ಬಂಧದ ಮಣಿಗಳನ್ನೂ ಇನ್ನೊಂದು ಕೈಯಿಂದ ತನ್ನ ನಿರ್ಲಜ್ಜ ಅಂಶುಕ ವಸನದ ನಿರುಗೆಗಳನ್ನೂ ಅವುಕೆಹಿಡಿದಿದಳು. ವಿದರ್ಭತನಯೆಯ ರತ್ನಾಭರಣಗಳ ಸಕಲಗರ್ವದ ಉಜ್ವಲತೆಯೂ ಆ ಕ್ಷಣದಲ್ಲಿ ಕ್ಷುದ್ರ ಖದ್ಯೋತದಂತೆ ದುರ್ಬಲತೆಯೊಂದಿಗೆ ಅವಿತುಕೊಳ್ಳುವ ಹಾದಿಯನ್ನು ಹುಡುಕುತ್ತಲಿರುವಂತೆ ಕಾಣುತ್ತಲಿದೆ.

ಇನ್ನಷ್ಟು ಸರಿಯಾಗಿಯೇ ನೋಡಲಾತಿಸಿದಳು. ಈ ಅದ್ಭುತ ಇಚ್ಛೆಯ ಆವೇಗವನ್ನು ಸೈರಿಸಲಾಗಲಿಲ್ಲ ಲೋಪಾಮುದ್ರೆಗೆ. ಒಯ್ಯನೊಯ್ಯನೆ ಯೌವನದ ಪ್ರಥಮ ಲಜ್ಜಾಭಾರದಿಂದ ಅಲಸಿಗಳಾದ ವನನ್ಯಗಿಯಂತೆ, ಸನಿಹದಲ್ಲಿರುವ ಲತಾಗೃಹದ ಶ್ಯಾಮಲತೆಯ ದಿಕ್ಕಿನತ್ತ ಲಕ್ಷ್ಯವಿರಿಸಿ ಸಂತೃಷ್ಣನಯನೆಯಾಗಿ ನಡೆಯುತ್ತಲಿದ್ದಳು

ಆದರೆ ಹೆಚ್ಚು ದೂರ ಹೋಗಲಾಗಲಿಲ್ಲ ಅವಳಿಗೆ ನವೋದ್ಗತ ಕಿಸಲಯದಿಂದ ಸಮಾಕೀರ್ಣವಾದ ಕೋವಿದ ವೃಕ್ಷಗಳ ವೀಥಿಕೆಯ ಅಂತರಾಳದಲ್ಲಿ ಬಂದು ನಿಂತುಬಿಟ್ಟಳು. ಅಭಿಸಾರ ಭೀರು ದುರಾಕಾಂಕ್ಷಿಣಿಯಂತೆ, ಗುಪ್ತವಾಗಿ ನೇಪಥ್ಯದಲ್ಲಿ ನಿಂತು, ತರುಣ ತಪಸ್ವಿಯ ಸೂರ್ಯೋಪಮ ತನುನಿನ ಅನುಪಮ ಶುಚಿಶೋಭಾಸುಧೆಯನ್ನು ಲೋಪಾಮುದ್ರೆಯು ವಿಸ್ಮಯ ವಿಮುಗ್ಧ ನಯನಗಳ ಕೌತೂಹಲ ಸಾನಗೈಯತೊಡಗಿತು.

ಅಗಸ್ತ್ಯ! ನಿರ್ಧನ, ರಿಕ್ತ, ಹರಿದ ಉಡುಗೆಯ ಒಡೆಯ ಋಷಿ ಅಗಸ್ತ್ಯ! ಈ ಜಗತ್ತಿನಲ್ಲಿಯ ಅತ್ಯಂತ ದುರ್ಲಭವಾದ ಯಾವ ರತ್ನದ ಯಾವ ಲೋಭವು ಆ ಎರಡು ಸ್ಮಿತಿಮಯ ಚಕ್ಷುಗಳಲ್ಲಿ ಅಡಗಿದೆಯೋ! ನಂಬುವಂತಿಲ್ಲ. ಆ ರೂಪವಂತನ ಪಾದಸ್ಪರ್ಶವನ್ನು ಪಡೆದು ಎಷ್ಟೋ ತುಚ್ಛ ಧೂಳಿಕಣಗಳು ರತ್ನವಾಗುವಂತೆ ಭಾಸವಾಗುತ್ತಲಿದೆ. ಎಂದಪೇಲೆ ಪಾರ್ಥಿಯಂತೆ ಬಂದೇಕೆ ನಿಂತಿದ್ದಾನೆ ಅಗಸ್ತ್ಯ?

ನೀನೇ ಈ ಜಗದಖಿಲ ರೂಪರುಚಿಯ ಹೃದಯದ ಪರಮ ಪ್ರಾರ್ಥನೀಯ ರತ್ನವಾಗಿರುವಿ; ಆದರೂ ನೀನೇಕೆಂತು ಬಂದು ಪ್ರಾರ್ಥಿಯಂತೆ ನಿಂತಿರುವಿ?

ಕೋವಿದ ಕುಸುಮದ ಕರ್ಣಿಕೆಗಾಗಿ ಆಸಕ್ತವಾಗಿರುವ ಷಟ್ಪದದ ಧ್ವನಿಯಲ್ಲಿ ತನ್ನದೇ ಪಿಪಾಸಿತ ಚಿತ್ತದ ಗುಂಜಾರವನ್ನು ಕೇಳಿ ಸ್ಫುಟನೋನ್ಮುಖ ಶತಪತ್ರದಂತೆ, ಲೋಪಾಮುದ್ರೆಯ ಮುಖಶೋಭೆ ಸುಸ್ಮಿತವಾಗತೊಡಗಿತು.

ಲತಾಗೃಹದ ಶ್ಯಾಮಲತೆಯ ಪಕ್ಕದಲ್ಲಿ ಪ್ರಭಾಮಯಿಯಾಗಿ ನಿಂತಿರುವ ಅವನೇ ತನ್ನ ಅಂತರಾಳದ ಮತ್ತು ಆ ಸ್ಫಟಿಕಕುಟ್ಟಿಮದ ಉತ್ಸವದ ಪ್ರದೀಪವೆಂದು ಅವಳು ಭಾವಿಸಿದಳು. ಮನಹೇಳಿತು:— ನಡೆ ವಿದರ್ಭತನಯೆ ಲೋಪಾ, ಸಕಲ ಸಂಕೋಚವನ್ನೂ ನಿವಾರಿಸಿಕೊಂಡು, ಒಮ್ಮೆಲೇ ಅವನ ಎರಡೂ ಕಣ್ಣುಗಳೆದುರು ಹೋಗಿ ನಿಲ್ಲು, ದೇವದಾಸಿಯಾವ ನರ್ತಕಿಯಂತೆ ನೃತ್ಯ ಭಂಗಿಯಲ್ಲಿ ಸಕಲಾಭರಣಗಳನ್ನೂ ಶಿಂಜಿತಗೊಳಿಸಿ ವಂದನೆಯನ್ನು ತಿಳಿಸಿ ಮರಳಿ ಬಾ.

ಆದರೆ ಅಸಂಭವ; ಅಸಾಧ್ಯ ಮತ್ತು ಅನುಚಿತ. ತನ್ನದೇ ಮನದ ಈ ಲಜ್ಜಾಹೀನ ದುಃಸಾಹಸವನ್ನು ತಾನೇ ಹುಬ್ಬು ಗಂಟಿಕ್ಕಿ ಸುಮ್ಮನಿರಿಸಿದಳು ಲೋಪಾಮುದ್ರೆ. ಕರೆ ಬಾರದೆ ಆ ಮೂರ್ತಿಯ ಹತ್ತಿರ ಹೋಗಿ ನಿಲ್ಲಲು ತನ್ನಿಂದಾಗದೆಂಬುದನ್ನು ನೋಡಿಯೇ ತಿಳಿದು ಕೊಂಡಳು. ಹೋಗಿ ಸಮ್ಮುಖದಲ್ಲಿ ನಿಂತರೂ ಯಾವ ಲಾಭವೂ ಇಲ್ಲವೆಂದು ಭಾಸವಾಯಿತವಳಿಗೆ. ಅತ್ಯಂತ ನಿರ್ವಿಕಾರ—ಆ ತರುಣ ತಪಸ್ವಿಯ ಚಕ್ಷುದ್ವಯಗಳು! ಯಾವ ಸ್ವಪ್ನವೂ ಇಲ್ಲ ಆ ಚಕ್ಷುಗಳಲ್ಲಿ; ಕೇವಲ ಸಂಕಲ್ಪ ಮಾತ್ರ ಇದೆ. ಎಂತಹ ಸಂಕಲ್ಪವೋ, ಯಾರು ಬಲ್ಲರು!

ಮರಳಿ ಹಿಂತಿರುಗಿ ಬಂದಳು ಲೋಪಾಮುದ್ರೆ. ಕೋವಿದ ತರುಗಳ ವೀಥಿಕೆಯ ಛಾಯೆಯಿಂದ ಹೊರನಡೆದು, ನೀರವ ಹಾಗೂ ನಿರ್ಜನ ಸ್ಫಟಿಕ ಕುಟ್ಟಿಮದ ಏಕಾಂತಕ್ಕೆ ಮತ್ತೆ ಬಂದು ನಿಂತಳು. ದುಸ್ಸಹವಾದೊಂದು ಆತ್ಮಸಂಕೋಚದ ವೇದನೆಯನ್ನು ಸಹಿಸಲು ಯತ್ನಿಸಿದಳು ಲೋಪಾ. ಆದರೆ ಆಗಲಿಲ್ಲ. ಹೊರಹೊಮ್ಮಿದ ಅಶ್ರುಧಾರೆಯನ್ನು ಪ್ರತಿಬಂಧಿಸಲಾಗಲಿಲ್ಲ.

ತನ್ನ ಜೀವನದಲ್ಲಿ ಮೊದಲಬಾರಿಗೆ ಒರ್ವ ಪ್ರಿಯದರ್ಶನನ ಮುಖನೋಡಲೆಡೆದೊರೆತಂತೆ, ಹಾಗೂ ಅಂತರ್ಯದಲ್ಲಿ ಅವನಿಗೆ ಹೃದಯದಾನಗೈದು ಹೊರಟು ಬಂದಿರುವಂತೆ ಅವಳಿಗೆ ಭಾಸವಾಯಿತು. ಆದರೆ ಇದು ನೀಲಾಕಾಶದ ವಕ್ಷಕ್ಕೆ ಗುರಿಯಿಟ್ಟ ಕ್ಷುದ್ರವಾದ ಬಾಹುವ್ಯಯಗಳ ಆಲಿಂಗನದ ಬಯಕೆಯಂತೆ; ಚುಂಬನ ರಸದಿಂದ ವಾರಿಧಿಯ ಹೃದಯವನ್ನು ತೇವಗೈಯಲೆಳಸುವ ಕ್ಷುದ್ರವಾದ ಅಧರದ್ವಯದ ಕಂಪನದಂತೆ.

ಅಲಭ್ಯವಾದುದನ್ನು ಪಡೆಯಲಿಕ್ಕಾಗಿ ದುರ್ಬಲತೆಯ ವಾಸನಾ ವಿಲಾಸ!

ಬೇಡಬಂದಿರುವ ಋಷಿ ತಾನು ಬೇಡುವ ಒಂದು ಮುಷ್ಟಿ ರತ್ನವನ್ನು ಪಡೆದು ಹೊರಟು ಹೋಗಿಬಿಡುವನು. ತನ್ನದೇ ಪ್ರೇಮಾಕಾಂಕ್ಷಿಣಿಯಾದ ಒರ್ವ ಮಣಿನೂಪುರಿತ ನಾರಿ ಇಂದು ಅಶ್ರುಸಿಕ್ತಳಾಗಿ ಈ ಜಗದ ಏಕಾಂತ ತಾಣವೊಂದರಲ್ಲಿ ವಾರಿಶಿಲೆಯಿಂದ ಹತವಾದ ಸಸ್ಯ ನುಂಜರಿಯಂತೆ ಬಿದ್ದಿದ್ದಾಳೆ! ಇದರ ಕಲ್ಪನೆಯೇ ಆಗದು ಅಗಸ್ತ್ಯನಿಗೆ.

ಪಿತ ವಿದರ್ಭರಾಜ ಚಿಂತಿಸುತ್ತಿರುವುದೇನನ್ನು? ಋಷಿ ಅಗಸ್ತ್ಯನ ಪ್ರಾರ್ಥನೆಯನ್ನು ಪೂರ್ಣಗೊಳಿಸಲು ಇಂತು ವ್ಯಸ್ತನಾಗಿರುವನೇ? ಶಾಂತಭಾವದಲ್ಲಿಯೇ ಈ ಬಗ್ಗೆ ಚಿಂತಿಸುತ್ತಾ, ಚಿಂತಿಸುತ್ತಾ ಲೋಪಾಮುದ್ರೆ ಹಠಾತ್ತಾಗಿ ವ್ಯಸ್ತಳಾಗಿ ನಿಂತಳು. ಕುತೂಹಲ ಸ್ವರ್ವಸ್ವವೂ ಮಥನಗೊಂಡು ಕೇವಲ ಒಂದೇ ಒಂದು ಪ್ರಶ್ನೆ ಮಾತ್ರ ಅವಳ ಅಂತರಾಳದಲ್ಲಿ ಪ್ರತಿಧ್ವನಿಸತೊಡಗಿತು:

ಯಾವ ವಸ್ತುವನ್ನು ಪ್ರಾರ್ಥಿಸಿದರು ಋಷಿಅಗಸ್ತ್ಯ?

ದ್ರುತಗತಿಯಿಂದ ಅಂತಃಪುರದ ದಿಕ್ಕಿನತ್ತ ಹೊರಟುಹೋದಳು ಲೋಪಾಮುದ್ರಾ.

ಕೋಣೆಯ ದ್ವಾರಪ್ರಾಂತದ ಸನಿಹಕ್ಕೆ ಬಂದೊಡನೆಯೇ, ಹಠಾತ್ತಾಗಿ ವಿಸ್ಮಯದಿಂದ ಸ್ತಬ್ಧಳಾಗಿ ನಿಲ್ಲಬೇಕಾಯಿತು ಅವಳು. ಶೋಕಾಕ್ರಾಂತ ಸ್ವರದಲ್ಲಿ ಮಾತಾಪಿತರು ಸಂಭಾಷಿಸುತ್ತಲಿರುವುದು ಕೇಳುತ್ತಲಿದೆ!

ಅರ್ತನಾದ ಗೈಯುತ್ತಿದ್ದಾಳೆ. ವಿದರ್ಭರಾಜ ಮಹಿಷಿ:— "ಅಗದು, ಎಂದಿಗೂ ಆಗದು, ನನ್ನ ಸುಖಲಾಲಿತ ರತ್ನಮಯಿಯಾದ ಕನ್ಯೆಯನ್ನು, ನಿರ್ಧನ, ರಿಕ್ತ, ಚಿಂದಿಬಟ್ಟೆಯ ಒಡೆಯ ಋಷಿಯ ಕೈಗೆ ಸಂಪ್ರದಾನ ಗೈಯಲಾರೆ. ತಿರಸ್ಕರಿಸಿರಿ ಲುಬ್ಧ ಋಷಿಯ ಸೂಚನೆಯನ್ನು!"

ನೇದನಾವಿಚಲಿತ ಸ್ವರದಲ್ಲಿ, ಉತ್ತರವಿತ್ತ ವಿದರ್ಭರಾಜ:— ಉಪಾಯವಿಲ್ಲ, ಅಗಸ್ತ್ಯರ ಸಮ್ಮುಖದಲ್ಲಿ— ಅವರು ಅಂಗೀಕರಿಸಿದ್ದಕ್ಕೆ ನಾನು ಬದ್ಧನಿರುವೆ.

—ಯಾರ ಅಂಗೀಕಾರ?

"ಒಂದು ಪಕ್ಷ ಎಂದಾದರೂ ಒಂದು ದಿನ ಗಾರ್ಹಸ್ಥ್ಯವ್ರತ ಕೈಕೊಳ್ಳಲು ತಪಸ್ವೀ ಅಗಸ್ತ್ಯರು ಅಭಿಲಾಷೆ ಪಟ್ಟಲ್ಲಿ, ಆಗ ನಾನು ನನ್ನ ಕನ್ಯೆಯನ್ನೇ ಅವರಿಗೆ ಸಂಪ್ರದಾನ ಗೈಯುವುದಾಗಿ ಹೇಳಿದ್ದೇನೆ."

ಧಿಕ್ಕಾರ ಭಾವದಲ್ಲಿ ವೇದನಾಮೂರ್ಛಿತ ಸ್ವರದಲ್ಲಿ ವಿದರ್ಭರಾಜ ಮಹಿಷಿ ಹೇಳಿದಳು:— ಗೃಹಸ್ಥನಾಗಲಿ ತಪಸ್ವೀ ಅಗಸ್ತ್ಯ; ಆದರೆ ಅವನ ಜೀವನಸಂಗಿನಿಯಾಗಲಿ ಯಾರಾದರೊಬ್ಬ ಅನ್ಯರಕನ್ಯೆ. ಸಾಮಾನ್ಯ ದೀನರ ಮಗಳು ರಿಕ್ತನ ಮತ್ತು ನಿರ್ಧನನ ಗೃಹಜೀವನದ ಸಕಲ ಕ್ಲೇಶ ಮತ್ತು ದುಃಖದ ಸಹಭಾಗಿನಿಯಾಗುವಳೇ ಹೊರತು ನನ್ನ ಐಶ್ವರ್ಯಸುಖೀಕನ್ಯೆ ಲೋಪಾಮುದ್ರೆಯಲ್ಲ.

'ಆದರೆ ನೀನು ನನ್ನ ಪ್ರತಿಜ್ಞೆಯ ಸಂಪೂರ್ಣ ಇತಿಹಾಸವನ್ನು ಕೇಳಿಲ್ಲ ಮಹಿಷಿ, ನಿನ್ನ ಕನ್ಯೆ ಲೋಪಾಮುದ್ರೆ, ಆ ಋಷಿ ಅಗಸ್ತ್ಯರದೇ ಕಲ್ಪನೆಯ ಸೃಷ್ಟಿ' ವಿದರ್ಭರಾಜ ನುಡಿದ.

—ಈ ಮಾತಿನ ಅರ್ಥ ?

'ನೆನಪಿದೆಯೇ ಮಹಿಷಿ, ಸಂತಾನಹೀನ ಜೀವನದ ಶೂನ್ಯತೆ ಮತ್ತು ವೇದನೆಗಳಿಂದ ಮುಕ್ತನಾಗಲು ಸಂತಾನ ಲಾಭದ ಕಾಮನೆಯೊಂದಿಗೆ ಒಂದು ದಿನ ನಾನು ವ್ರತ ಕೈಕೊಂಡೆ ?'

—ಹೌದು ನೆನಪಿದೆ.

'ವ್ರತವನ್ನು ಸಾಂಗವಾಗಿ ಮುಗಿಸಿ, ಗಂಗಾದ್ವಾರಕ್ಕೈದಿ ನಿರ್ಝರ ಸ್ನಾನಗೈದನಂತರ, ವಿಸ್ಮಿತನಾಗಿ–ನೋಡಿದೆ; ಒರ್ವ ಕಿಶೋರ ತಪಸ್ವಿ ಪ್ರಭಾತದ ಬಾಲಸೂರ್ಯನ ಬೆಳಕಿನಲ್ಲಿ ಅಶ್ವಮತರುವಿನ ಪುಷ್ಪಿತ ಶಾಖೆಗಳನ್ನು ಸ್ಪರ್ಶಿಸುತ್ತಾ ನಿಂತಿದ್ದಾನೆ; ಸ್ವಪ್ನ ಸ್ನಾತ ದೃಷ್ಟಿಯನ್ನು ಹರಿಯಬಿಟ್ಟು ಖಗ, ಮೃಗ, ಮಧುಪಗಳ ಆಟವನ್ನು ನೋಡುತ್ತಲಿದ್ದಾನೆ.

—ಯಾರು ಆ ತಪಸ್ವಿ ?

—ಇದೇ ಅಗಸ್ತ್ಯ 'ಗೃಹಸ್ಥನಾಗು ಕುಮಾರ. ನಿನ್ನ ಪ್ರಿಯತಮೆಯ ಸೇವೆಯನ್ನು ಸ್ವೀಕರಿಸಿ ಪುತ್ರಲಾಭವನ್ನು ಪಡೆ. ಆಗಲೇ ನಮ್ಮ ಅಂತರಾತ್ಮ ಪರಿತೃಪ್ತಗೊಳ್ಳ ಬಲ್ಲದು; ತನ್ನ ಪಿತೃಗಣದ ಈ ವಿನಂತಿಯನ್ನು ಅಗಸ್ತ್ಯ ಸ್ವಪ್ನದಲ್ಲಿ ಕೇಳಿದ್ದ. ವ್ರತವನ್ನು ಸಮಾಪ್ತಿಗೈದು ನಿರ್ಝರ ಸ್ನಾನದಿಂದ ಪರಿಶುದ್ಧನಾಗಿ, ಅಂದು ಆ ಪ್ರಭಾತದಲ್ಲಿ ಅಶ್ವಮತರುವಿನ ಪುಷ್ಪಿತ ಶಾಖೆಯನ್ನು ಸ್ಪರ್ಶಿಸುತ್ತಾ ತನ್ನ ಜೀವನ ಸಂಗಿನಿಯ ಆವಿರ್ಭಾವವನ್ನು ಬಯಸಿದ ಆ ಕಿಶೋರಿ ತಪಸ್ವಿ.

ಚರಾಚರದ ಪ್ರಾಣಿಸರ್ವಸ್ವದ ದೇಹಶೋಭೆಯಿಂದ ರೂಪವನ್ನು ಸಂಗ್ರಹಿಸಿ, ಈ ಪೃಥ್ವಿಯಲ್ಲಿ ಆವಿರ್ಭವಿಸಲಿ ಒರ್ವ ಸಕಲ ಲೋಚನ ಮನೋಹಾರಿಬೂದ ನಾರಿ. ಭ್ರಮರದ ಕೃಷ್ಣವರ್ಣವನ್ನು ಪಡೆದು ರಚಿತವಾಗಲಿ ಅವಳ ಎರಡು ಕಣ್ಣುಗಳು. ರಾಣಿಹಂಸದ ಮೃದುಲ ಗತಿರಮ್ಯತೆ, ವನನ್ಯಮೃಗಿಯ ನಯನವಿಸ್ತಾರ, ಜೋತ್ಸ್ನಾ ಜೀವಿ ಚಕೋರಿಯ ಕೋಮಲ ತನುಗುಣ ಮತ್ತು ಮೇಘಸಂದರ್ಶನಕ್ಕೆ ಹರ್ಷಾಶ್ರುಗಳನ್ನು ಮಿಡಿಯುವ ಮಯೂರದ ನೃತ್ಯಭಂಗಿ, ಇವು ಗಳನ್ನು ಪಡೆದು ಸುಂದರಿಯೂ ಶೋಭನೆಯೂ ಸುರುಚಿರೆಯೂ ಆಗಲಿ ಆ ವರನಾರಿ ! ಕಿಶೋರ ತಪಸ್ವಿಯ ಈ ಕಲ್ಪನೆಯ ಪರಿಚಯವಾಗಿ ಧನ್ಯನೂ ಮತ್ತು ಮುಗ್ಧನೂ ಆಗಿಬಿಟ್ಟೆ ನಾನು. ನನ್ನ ಸಂತಾನ ಕಾಮನೆಯನ್ನು ಸಫಲಗೊಳಿಸಲಿಕ್ಕಾಗಿಯೇ ಋಷಿಯ ಮಾತುಗಳು ಮಂತ್ರವಾಣಿಯಲ್ಲಿ ಉಚ್ಚರಿತವಾಗುತ್ತಲಿವೆಯೆಂದು ಭಾಸವಾಯಿತು ನನಗೆ.

'ಕಿಶೋರ ತಪಸ್ವಿಯ ಸಂಕಲ್ಪವು ಪನ್ನ ತನಯೆಯ ರೂಪದಲ್ಲಿಯೇ ಆವಿರ್ಭವಿಸಲಿ' ಎಂದು ಪ್ರಾರ್ಥಿಸಿದೆ. 'ಒಂದು ಪಕ್ಷ ಸಂತಾನಹೀನ ವಿದರ್ಭರಾಜನಿಗೆ ಕನ್ಯಾಲಾಭವಾದರೆ, ಆಗ ಕನ್ಯೆಯೇ ಅಗಸ್ತ್ಯರ ಜೀವನ ಸಂಗಾತಿಯಾಗುವಳು' ಎಂದು ಕಿಶೋರ ತಪಸ್ವಿಗೆ ಅಭಿವಚನವಿತ್ತೆ ನಾನು.

ವಿದರ್ಭರಾಜನ ಭಾವನಾಕುಲ ಕಂಠಸ್ವರವೂ ಮತ್ತೆ ಹತಾತ್ತಾಗಿ ವೇದನಾಘಾತದಿಂದ ವಿಚಲಿತವಾಗತೊಡಗಿತು. ಋಷಿ ಅಗಸ್ತ್ಯರ ಸಂಕಲ್ಪವು ಸತ್ಯನಾಗಿದೆ ಮಹಿಷಿ; ನಿಖಿಲ ಜಗತ್ತಿನ ಪ್ರಾಣಿಸರ್ವಸ್ವದ ದೇಹಶೋಭೆಯು, ರೂಪಸಾರದ ಉಡುಗೊರೆ ಮತ್ತು ರೂಪೋತ್ತಮಳಾದ ಲೋಪಾಮುದ್ರೆಯನ್ನು ನಿರ್ಮಾಣ ಮಾಡಿದೆ. ಋಷಿ ಅಗಸ್ತ್ಯರ ಆಕಾಂಕ್ಷಿತಳಾದ, ಋಷಿ ಅಗಸ್ತ್ಯರ ಕಲ್ಪನಾಪುಷ್ಪವಾದ, ಋಷಿ ಅಗಸ್ತ್ಯರ ಕಾಮನಾಭಾಗಿನಿಯಾದ ಲೋಪಾಮುದ್ರೆಯನ್ನು ಋಷಿ ಅಗಸ್ತ್ಯರಿಗೇ ಸಂಪ್ರದಾನಗೈಯಲು ಸಿದ್ಧಳಾಗು ಮಹಿಷಿ ! ಅಕ್ಷೇಪಿಸುವ ಅಧಿಕಾರ ನಮಗಿಲ್ಲ.

ಕ್ರಂದನಗೈದಳು ಮಹಿಷಿ:—'ಆದರೆ ನಿಮ್ಮ ರತ್ನಪ್ರಾಸಾದದಲ್ಲಿ ಲಲಿತಳಾದ ಲೋಪಾಮುದ್ರೆ, ಆ ನಿರ್ಧನನ ಜೀವನ ಸಂಗಾತಿಯಾಗ ಬಯಸುವಳೇನು ?'

ಕೋಣೆಯನ್ನು ಪ್ರವೇಶಿಸಿದಳು ಲೋಪಾ. ವಿದರ್ಭರಾಜ ಮತ್ತು ಅವನ ಮಹಿಷಿಯನ್ನು ನಿಸ್ಮಯಗೊಳಿಸಿ ನುಡಿದಳವಳು—'ಪ್ರತಿಜ್ಞಾಪಾಲನೆ ಮಾಡಿರಿ ತಾತಾ !'

ವಿದರ್ಭರಾಜ ಕೇಳಿದ—'ಯಾರ ಪ್ರತಿಜ್ಞೆ ನೀನು ಬಲ್ಲೆಯಾ?'

ಲೋಪಾಮುದ್ರೆ—'ಹೌದು. ಎಲ್ಲವನ್ನೂ ಕೇಳಿದೆ ತಂದೆ, ಋಷಿ ಅಗಸ್ತ್ಯರ ಸನ್ನುಖವಲ್ಲಿಯ ನಿನ್ನ ಪ್ರತಿಜ್ಞೆ ?

ವಿದರ್ಭರಾಜ— 'ನಿರ್ಧನಋಷಿಯ ಜೀವನಸಂಗಾತಿಯಾಗುವೆಯಾ ನೀನು ?'

ಲೋಪಾಮುದ್ರೆ ಹೇಳಿದಳು—'ಹೌದು ತಾತ !'

೨

ಸಂಪ್ರಪತ್ತಳಾದ ಲೋಪಾಮುದ್ರೆಯ ಆನಂದದೀಪ್ತ ಆಸನವನ್ನು ನೋಡಿ ವಿಸ್ಮಿತನಾದ ವಿದರ್ಭರಾಜ; ವಿಸ್ಮಿತಳಾದಳು ವಿದರ್ಭರಾಜ ಮಹಿಷಿ; ಧಾತ್ರೇಯಿಕೆಯರ ಮತ್ತು ಕೆಂಕರಿಯರ ಸಮೂಹವೂ ವಿಸ್ಮಿತವಾಯಿತು. ನಿರ್ಧನ ಋಷಿಯ ವಧುವಾಗಿ, ಈ ರತ್ನಮಯ ಪ್ರಾಸಾದದ ನೆಲದಿಂದ ವಂಚಿತಳಾಗಿ, ಒಂದು ಪರ್ಣಕುಟೀರಕ್ಕಳಿ-

ಮುಖವಾಗಿ ಈಗಲೇ ತೆರಳಬೇಕಾಗುತ್ತದೆ. ಆ ರತ್ನಸುಖೀಬಾಲೆ. ಯಾವುದೋ ಒಂದು ಆಕಾಂಕ್ಷಿತ ಸ್ವಪ್ನಲೋಕದ ಆಶ್ರಯಪಡೆವ ಲೋಭಕ್ಕಾಗಿ ವ್ಯಸ್ತವಾಗಿ ಸಾಗಿದ್ದಾಳೆ ಆ ಬಾಲೆ. ಅವಳ ಮುಖದಲ್ಲಿಯ ಹಾಸವನ್ನು ನೋಡಿದವರೆಲ್ಲರೂ ಇದನ್ನು ತಿಳಿಸಿದರು. ವಿದ್ಯುಲ್ಲತೆಯೊಂದು ಸೂಕ್ಷ್ಮ ಅಂಶುಕವಸನವನ್ನುಟ್ಟು ಸಜ್ಜಾಗಿ, ಮಣಿನೂಪುರಗಳಿಂದ ಝೇಂಕೃತಗೊಂಡು ಕುಂಕುಮದಿಂದ ರಂಜಿತವಾಗಿ ಮತ್ತು ಸಿತಚಂದನದಿಂದ ಸುರಭಿತವಾಗಿ ಪತಿಗೃಹಕ್ಕೆ ಯಾತ್ರೈಗೈಯಲು ಸಿದ್ಧವಾಗಿದೆ.

ಲತಾಗೃಹದ ಹತ್ತಿರ ಪ್ರತೀಕ್ಷಿಸುತ್ತಾ ನಿಂತಿದ್ದಾನೆ ಋಷಿ ಅಗಸ್ತ್ಯ! ವಿದರ್ಭಭವನದ ಅಶ್ರುಸಿಕ್ತ ವೇದನೆಯ ಹತ್ತಿರದಿಂದ ಬೀಳ್ಕೊಂಡು ಲೋಪಾಮುದ್ರೆ ಒಯ್ಯನೊಯ್ಯನೆ ನಡೆದುಬಂದು, ಋಷಿ ಅಗಸ್ತ್ಯರ ಸಮ್ಮುಖದಲ್ಲಿ ನಿಂತಳು. ಪ್ರಣಾಮಗೈದಳು ಲೋಪಾ. ಸುಸ್ವರದ ಧ್ವನಿಗೈದುವು ರತ್ನಾಭರಣಗಳು. ಯಾವುದೋ ಸಂಗೀತಮಯ ಝೇಂಕಾರವು ಬಂದು ಮೂರ್ತಿಮತಿಯಾಗಿ ಅಗಸ್ತ್ಯರ ಪಾದಗಳ ಸಾನ್ನಿಧ್ಯದಲ್ಲಿ ಬಿದ್ದಿದೆ.

ಅಗಸ್ತ್ಯರು ಕರೆದರು—'ಲೋಪಾಮುದ್ರಾ'

ಸುಸ್ಮಿತ ಅಧರಪುಟದಲ್ಲಿ ಅನುಪಮ ಸೌಂದರ್ಯವನ್ನು ಅರಳಿಸುತ್ತಾ ಅಗಸ್ತ್ಯರ ಮುಖವನ್ನು ನೋಡಿದಳು ಲೋಪಾಮುದ್ರೆ. ಆದರೆ ವಿಷಣ್ಣಳೂ ವಿಸ್ಮಿತಳೂ ಆದಳು. ಆಕಾಂಕ್ಷಿತ ಜೀವನಸಂಗಿನಿಯನ್ನು ನಿಟ್ಟಿಸಿ ನೋಡುತ್ತಲೇ ಇದ್ದಾರೆ ಅಗಸ್ತ್ಯರು; ಆದರೆ ಇದೇನು, ಋಷಿಯ ಆ ಚಕ್ಷುಗಳಲ್ಲಿ ಯಾವ ಪ್ರಣಯಸ್ಮಿತ ಆನಂದವೂ ಉದ್ಭಾವಿತಗೊಂಡಿಲ್ಲ! ಅವೇ ತೀಕ್ಷ್ಣ ಪ್ರಭೆ, ಅವೇ ಶಾಂತ ನಿರ್ವಿಕಾರ ಚಕ್ಷುದ್ವಯ ಮತ್ತು ಪಾಷಾಣದಿಂದ ನಿರ್ಮಿತವಾದ ಮಾಟವಾದ ಸುಂದರ ತುಟಿಗಳೆರಡು!

ಅಗಸ್ತ್ಯರು ಹೇಳಿದರು:—'ಸೂಕ್ಷ್ಮ ಅಂಶುಕವಸನಗಳು ಮಣಿಗಳು ಮತ್ತು ರತ್ನಗಳ ಜಾಲದಲ್ಲಿ ದೇಹವನ್ನು ನಿಲಾಸಕ್ಕೀಡುಮಾಡಿ, ಯಾರ ಗೃಹಜೀವನದಲ್ಲಿ ಆನಂದವನ್ನು ಸೃಷ್ಟಿಸಿ ತುಂಬ ಬಯಸುತ್ತಲಿರುವೆ ನಾರೀ?'

ಲೋಪಾ ನುಡಿದಳು—'ವಿದರ್ಭರಾಜನ ತನಯೆ ಲೋಪಾಳ ಜೀವನಾಧಿಕ ಜೀವನಸಂಗಾತಿಯ ಗೃಹಜೀವನದಲ್ಲಿ?

ಅಗಸ್ತ್ಯ—ಆದರೆ ಈ ಆಭರಣಗಳು ನಿಂದಾಕಾರಕ ವಿಲಾಸ ಭಾರವಾಗಿವೆ. ಋಷಿವನಿತೆಯ ಅಂಗಾಂಗಗಳಲ್ಲಿರುವ ಈ ಧ್ವನಿಮುಖರಿತ ಮಣಿಮಯ ಆಭರಣಗಳು. ಪುಣ್ಯಕ್ಷಯಕಾರಿಯಾದ ವಿಲಾಸದ ವೇಷಭೂಷಣ ಮಾತ್ರ.

ಲೋಪಾ ಆರ್ತಸ್ವರದಲ್ಲಿ ನುಡಿದಳು:—'ವಿಲಾಸದ ಉಡುಗೆ-ತೊಡುಗೆಯಲ್ಲ ಋಷಿ!'

'ಹಾಗಾದರೇನು?'

'ಋಷಿಯ ಪ್ರಣಯಸ್ಪ್ರೀತಳಾದ ಒರ್ವ ಪ್ರೇಮೀ ನಾರಿಯ ಹೃದಯದ ಉತ್ಸವದ ವೇಷಭೂಷಣ!'

'ಉತ್ಸವದ ವೇಷ-ಭೂಷಣ! ಋಷಿಜೀವನದಲ್ಲಿ ಉತ್ಸವದ ಪ್ರಯೋಜನವಿಲ್ಲ—ಉತ್ಸವ ವಿಚಕ್ಷಿಣೆಯಾದ ರಾಜತನಯೆ' ವಿಸ್ಮಯವನ್ನು ಪ್ರಕಟಿಸಿದರು ಅಗಸ್ತ್ಯ.

'ಪ್ರಯೋಜನವಿದೆ ಸ್ವಾಮೀ! ನಿಮ್ಮ ಜೀವನಕ್ಕೆ ನಿಮ್ಮವಳೇ ಆದ ಈ ಪ್ರಣಯಧನ್ಯೆ ನಾರಿಯ ಸ್ಮಿತಹಾಸ, ಪ್ರಿಯವಚನ ಮತ್ತು ನಯನಸ್ಪ್ರೀತಿಗಳ ಪ್ರಯೋಜನವಿದೆ' ಲೋಪಾ ನುಡಿದಳು.

ಜೀವನದ ಒಂದು ಸ್ವಪ್ನಭಂಗದ ವೇದನೆಯಿಂದ ಅವಳ ನಯನಗಳು ಕಂಬನಿದುಂಬಿದುವು.

ಪ್ರಿಯತಮನ ವಿಶಾಲತೃಷ್ಣ ಸುಸ್ಮಿತ ಚಕ್ಷುಗಳ ಸಮ್ಮುಖದಲ್ಲಿ, ಅಲ್ಲಿ, ಒರ್ವ ತಪಸ್ವಿಯ ತೀಕ್ಷ್ಣ ಪ್ರಭಾವಯ ಚಕ್ಷುದ್ವಯದಸಮ್ಮುಖದಲ್ಲಿ ಇಂದು ಲೋಪಾಮುದ್ರಾ ನಿಂತಿದ್ದಾಳೆ; ಆ ತಪಸ್ವಿಯ ಜೀವನದಲ್ಲಿ ಬಾಳಸಂಗಾತಿಯ ಸ್ಮಿತಹಾಸ ಮತ್ತು ನಯನಸ್ಪ್ರೀತಿಗಳ ಯಾವ ಪ್ರಯೋಜನವೂ ಇಲ್ಲ.

ವ್ಯಥಾಪೂರ್ಣ ವಿಪ್ಲವಸ್ವರದಲ್ಲಿ ಲೋಪಾಮುದ್ರೆ ಹೇಳಿದಳು:—'ತನ್ನ ಪ್ರಿಯಕರನ ಸಂಗದ ವಾಸನೆಯೊಂದಿಗೆ ಅರಣ್ಯದ ಹೆಣ್ಣಾನೆ ಕೂಡಾ ಪದ್ಮರೇಣುಭೂಷಿತವಾಗಿ ಹರ್ಷೋತ್ಸವದ ಅನ್ವೇಷಣೆ ಗೈಯುತ್ತದೆ. ಆದರೆ ನಿಮ್ಮವಳೇ ಆದ ಪ್ರೇಮಾಕಾಂಕ್ಷಿಣಿಯ ಕನಕಕೇಯೂರ ಮತ್ತು ಕಬರಿಯ ಮಣಿಪ್ರಭೆಯನ್ನೇಕೆ ಸಹಿಸಲಾಗಲೊಲ್ಲದು ಋಷಿ?'

ಅಗಸ್ತ್ಯ—'ತಿಳಿದೆ ನಾನು ರಾಜತನಯೆ, ರತ್ನಾಭರಣಗಳ ಸಿಂಜನದಿಂದ ಸುಸ್ಮಿತವಾಗುತ್ತದೆ ನಿನ್ನ ಅಧರ!'

ಲೋಪಾ—'ನಿಮ್ಮ ಸ್ವಾಗತಕ್ಕಾಗಿಯೇ ಸ್ವಾಮಿ; ರತ್ನಾಭರಣಗಳ ಝೇಂಕಾರ ಮತ್ತು ದೀಪ್ತಿಗಳಿಂದಲ್ಲ. ನನ್ನ ಅನುರಾಗರಂಜಿತ ಜೀವನದ ಸ್ಮಿತಹಾಸವನ್ನೇ ರತ್ನಾಭರಣಗಳಿಂದ ಅಲಂಕರಿಸಿ ನಿಮಗೆ ಕಾಣಿಕೆಯಾಗಿ ಕೊಡಬಯಸುವೆ. ನನ್ನ ಈ ಸ್ವಪ್ನವನ್ನು ವ್ಯರ್ಥವಾಗಗೊಡಲಾರೆ ಋಷಿ!'

ಅಗಸ್ತ್ಯರು ಹೇಳಿದರು—:'ಋಷಿ ಅಗಸ್ತ್ಯನ ಪುತ್ರರ ಮಾತಿಯಾಗತಕ್ಕದ್ದು ನೀನು. ಇಂದೊಂದು ವ್ರತವನ್ನು ಕೈಕೊಂಡು ನನ್ನ ಏಕ ಮಾತ್ರ ಸಂಕಲ್ಪವನ್ನು ಸತ್ಯವಾಗಿಸತಕ್ಕದ್ದು ನೀನು. ಇದಕ್ಕೋಸ್ಕರವಾಗಿ ನಿನ್ನ ಕಂಠದಲ್ಲಿ ರತ್ನಹಾರದ ಕೋಭೆಯನ್ನು ಧರಿಸುವುದರ ಪ್ರಯೋಜನವೇನಿದೆ ಲೋಪಾ? ನಾರಿಯ ಕುಂಕುಮಚಿತ್ರಿತ ಗಲ್ಲಗಳು ಅಥವಾ ಸಿತಚಂದನಸಿಕ್ತ ತನುವನ್ನು ಬಯಸಿಲ್ಲ ನಾನು. ನಾರಿಯ ಸ್ಮಿತಹಾಸ ಅಥವಾ ನಯನ ಪ್ರೀತಿಗಳನ್ನು ಆಶಿಸಿಲ್ಲ. ಈ ಈ ವಿಲಾಸದ ವೇಷ-ಭೂಷಣಗಳನ್ನು ವರ್ಜಿಸಿಬಿಡು; ವಲ್ಕಲದ ತುಂಡುಗಳನ್ನು ಮತ್ತು ಕೃಷ್ಣಾಜಿನವನ್ನು ಪರಿಗ್ರಹಿಸಿ, ನನ್ನ ಹತ್ತಿರಕ್ಕಾಗಮಿಸಿ ನಿಂತುಕೋ, ಋಷಿ ವಧು ಲೋಪಾಮುದ್ರಾ!

ಲೋಪಾಮುದ್ರೆಯ ಕಂಠದಲ್ಲಿ ಆರ್ತನಾದ ಕಂಸಿಸಿತು:—'ಸ್ವಾಮೀ!'

ಅಗಸ್ತ್ಯ—' ಏನು ? '

ಲೋಪಾಮುದ್ರೆ—' ತುಚ್ಛ ರತ್ನಾಭರಣಗಳನ್ನು ತಿರಸ್ಕರಿಸುವುದರಿಂದ ಯಾವ ನಷ್ಟವೂ ಇಲ್ಲ; ಆದರೆ ನಿಮ್ಮದೇ ಜೀವನದ ಸುಖ-ದುಃಖಭಾಗಿನಿಯಾದ ಈ ನಾರಿಯ ಅಧರಪುಟದಲ್ಲಿ ವಿಕಸಿತವಾದೊಂದು ಕ್ಷುದ್ರ ಸ್ಮಿತಹಾಸವೂ ನಿಮಗೆ ಪ್ರಯೋಜನವಾಗುವುದಿಲ್ಲವೆ ಋಷಿ ? '

ಅಗಸ್ತ್ಯ—'ಇಲ್ಲ, ಪ್ರಯೋಜನ ಇದೆ ಎಂದು ಹೇಳಲಾರೆ !'

ಕಂಬನಿಯನ್ನು ಅಡಗಿಸಿಡಲು ಮುಖ ತಿರುಹಿಕೊಂಡು ಕೆಲವು ಕ್ಷಣ ನಿಂತಳು ಲೋಪಾ. ಹೌದು. ಅವಳ ಕಲ್ಪನೆಯ ಮಧುರ ಯಾತನೆ ಮಾತ್ರವೇ ಸತ್ಯವಾಗಿದೆ; ಮಧುರತೆಯೆಲ್ಲವೂ ಮಿಥ್ಯವಾಗಿ ಬಿಟ್ಟಿದೆ. ವಿದರ್ಭ ರಾಜತನಯೆಯ ಈ ಜೀವಂತ ದೇಹವನ್ನು ಮಾತ್ರ ಕೊಂಡೊಯ್ದು ತಮ್ಮ ಆಶ್ರಮದ ಪರ್ಣ ಕುಟೀರದಲ್ಲಿ ಒಂದು ಸಂಕಲ್ಪದ ವಸ್ತುವನ್ನಾಗಿಸಿ ಇಟ್ಟುಕೊಳ್ಳಬಯಸಿದ್ದಾರೆ ಋಷಿ. ಒಂದು ದಿನ ನಿಖಿಲ ಪ್ರಾಣಿಗಳ ರೂಪವನ್ನು ಸಂಗ್ರಹಿಸಿ ತನ್ನ ಜೀವನಸಂಗಿನಿಯ ತನುವನ್ನು ನಿರ್ಮಿಸಬಯಸಿದ್ದ ಆ ಕಿಶೋರ ಋಷಿಯ ಮನವೆಲ್ಲಿ ಹೋಗಿದೆ? ಯಾರು ರೂಪವನ್ನು ಕಾಮಿಸಿದ್ದರೋ, ಅವರಿಂದು ರೂಪದ ಹಾಸವಿನಿತನ್ನೂ ನೋಡಬಯಸುತ್ತಲಿಲ್ಲ. ಪ್ರೇಮಿಯ ವಿಶಾಲವಾದ ತೃಷಿತ ಹಾಗೂ ಸುಸ್ಮಿತ ಚಕ್ಷುದ್ವಯದೆದುರು ಒಂದು ದಿನ ಬಂದು ನಿಂತು, ಲೋಪಾಮುದ್ರೆಯ ಜೀವನ ಸ್ವಪ್ನವು ಧನ್ಯವಾಗುವುದು' ಎಂಬ ಈ ಕಲ್ಪನೆಯು ನೋಸದ ನಟನೆಯಾಗಿ ಚಿರಕಾಲದವರೆಗೆ ಮಾಯವಾಗಿ ಬಿಟ್ಟಿತೆ ?

ಆಗಲಿ.... ಮತ್ತೆ ಚಿಂತೆಮಾಡಲಿಲ್ಲ, ಮತ್ತು ವಿಲಂಬವನ್ನೂ ಮಾಡಲಿಲ್ಲ ಲೋಪಾ. ಸಕಲ ರತ್ನಾಭರಣಗಳನ್ನೂ ಬಿಚ್ಚಿದಳು. ನಲ್ಲನ ಮೇಲೆ ಚಿತ್ರಿತವಾಗಿದ್ದ ಕುಂಕುಮಬಿಂದುವನ್ನು ಅಳಿಸಿಕೊಂಡಳು. ವಿದರ್ಭರಾಜಭವನದಲ್ಲಿ ಕರುಣಾಮಯ ವಿಲಾಪದ ಕ್ಷೋಭೆಯ ಗದ್ದಲ ವೆದ್ದಿತು. ವಲ್ಕಲದ ಚಿಂದಿ ಮತ್ತು ಅಜಿನಗಳನ್ನು ಧರಿಸಿ, ಋಷಿ-ಸತಿಯ ಸಹಚರಿಯಾಗಿ ಹೊರಬಂ ಹೋದಳು ಲೋಪಾಮುದ್ರೆ.

೩

ಪುಣ್ಯಪ್ರದೆಯಾದ ಭಾಗೀರಥಿಯು ನಭಸ್ಥಲದಲ್ಲಿ ಪವನಧೂತ ಪತಾಕೆಯಂತೆ ಶೋಭಿಸುತ್ತಲಿದ್ದಾಳೆ. ಶಿಖರದಿಂದ ಶಿಖರಾಂತರಕ್ಕೆ ಸಿಡಿದು ಬೀಳುತ್ತಲಿದೆ ಶೀತನಿರ್ಝರ. ಸಲಿಲಧಾರೆಯು ನಾಗವಧುವಿನಂತೆ ಶಿಲಾತಲದ ಅಂತರಾಳದಲ್ಲಿ ಅವಿತುಕೊಳ್ಳಲು ಯತ್ನಿಸುತ್ತಲಿದೆ. ಗಂಗಾದ್ವಾರದ ಈ ರಮಣೀಯ ಶೈಲ ಪ್ರಸ್ಥದಲ್ಲಿ ಅಗಸ್ತ್ಯರ ಆಶ್ರವವಿದೆ. ಈ ಆಶ್ರಮದಲ್ಲಿ ಪ್ರತಿ ಪ್ರಭಾತದಲ್ಲಿಯೂ ಖಗ-ಮೃಗ-ಮಧುಪಗಳ ಆನಂದ ಜಾಗೃತಗೊಳ್ಳುತ್ತದೆ. ಕಲಿಕಾಮಯ ಸಹಕಾರ-ಲತೆ ವಾಯುವಿನ ಮೃದುರಭಸಕ್ಕೆ ಆಂದೋಲಿತವಾಗುತ್ತದೆ. ಉತ್ಪಲ ಕೇಸರಗಳ ಸುರಭಿತ ರೇಣುವನ್ನು ಮೈಗೆ ಲೇಪಿಸಿಕೊಂಡು ಗುಂಜಾರವ ಗೈಯುತ್ತಲಿವೆ ಭೃಂಗಗಳು. ಇಬ್ಬನಿಯಲ್ಲಿ ಮಿಂದ ಹೊಚ್ಚ ಹೊಸ ಶಾದ್ವಲದಲ್ಲಿ ನವಮಿಹಿರನ ರಶ್ಮಿರೇಖೆಗಳು ಪ್ರತಿಬಿಂಬಿತವಾಗಿವೆ. ಗಿರಿಯಿಂದ ಸರಿದು ಬಂದ ಗೈರಿಕದ ಅಲಕ್ತಕದಿಂದ, ಪುಷ್ಪಿತ ಲತಾಕುಂಜದ ಪದತಲಭೂಮಿ ರಂಜಿತವಾಗಿದೆ. ಆಶ್ರಮದ ತರುಲತೆ-ಪಲ್ಲವಗಳು ಉಟ್ಟುತೊಟ್ಟು ಸುಂದರವಾಗಿ ಕಾಣುತ್ತಲಿವೆ. ಅಗಸ್ತ್ಯವಧು ಲೋಪಾ ಮಾತ್ರ ಉಟ್ಟುತೊಟ್ಟು ಸುಂದರವಾಗಿಲ್ಲವಷ್ಟೆ !

ವಲ್ಕಲಿತ ಸೌಹಾಮಿನಿ ! ಕೇವಲ ತನ್ನ ಸ್ವಾಮಿ ನಿರ್ದೇಶಿಸುವ ಗೃಹಕರ್ಮ ಮತ್ತು ವ್ರತಗಳನ್ನು ಮಾತ್ರ ಪಾಲಿಸುತ್ತಲಿದ್ದಾಳೆ ಅಗಸ್ತ್ಯ ವಧು ಲೋಪಾಮುದ್ರೆ. ಋಷಿ ಅಗಸ್ತ್ಯರೂ ತಮ್ಮ ಪ್ರತಿ ದಿನದ ಪೂಜೆ, ಧ್ಯಾನ, ವ್ರತ ಮತ್ತು ತಪಶ್ಚರ್ಯೆಗಳ ಕಠಿಣವಾದೊಂದು ಶಾಂತ ಮತ್ತು ಶುಚಿತಾನಿಷ್ಠ ಜೀವನಯಾಪನೆ ಮಾಡುತ್ತಲಿದ್ದಾರೆ. ಸಂಧ್ಯಾರಾಗದಿಂದ ಅರುಣಿತವಾದ ಆಕಾಶವು ಭೂಮಿಯ ಅಂಚಿನಲ್ಲಿ ಬಿದಿರ ಚಿಗುರನ್ನು ಚುಂಬಿಸುತ್ತಾ, ಮೃಗ ದಂಪತಿ ವಿನೋದ ಕಾತರ-ದಿಂದ ಅತ್ತಿತ್ತ ಓಡಿ ಆಡುತ್ತಲಿವೆ. ಚಂದ್ರಿಕಾಯಾಮಿನಿಯು ಕಿರಣ ಸುಧೆಯ ಪಾನಮಾಡಲು ಶಾಲ್ಮಲಿಯ ಕೋರಕಗಳು ಉನ್ಮುಖವಾಗಿವೆ. ಆದರೆ ಋಷಿ ಅಗಸ್ತ್ಯ ಮತ್ತು ಅಗಸ್ತ್ಯವಧು ಲೋಪಾಮುದ್ರೆ ಆಶ್ರ-ಮದ ಈ ಮಾನವ ಪ್ರಾಣಿಗಳಿರ್ವರ ಜೀವನದಲ್ಲಿ ಮಾತ್ರ ಸ್ಮಿತಹಾಸ ಅಧರದ್ಯುತಿ ಮತ್ತು ನಯನಸ್ನೀತಿಗಳ ಯಾವ ಉತ್ಸವವೂ ಇಲ್ಲ. ಒಂದು ದಿನ ನಿರ್ಝರ ಸಲಿಲದಲ್ಲಿ ಸ್ನಾನವನ್ನು ಮುಗಿಸಿ, ಆಶ್ರಮವನ್ನು ಪ್ರವೇಶಿಸಿದೊಡನೆಯೇ ಕಾಣಿಸಿತು. ಅಗಸ್ತ್ಯರಿಗೆ—ಪುಷ್ಪಿತ ತರು-ಶಾಖೆಯೊಂದನ್ನು ಸ್ಪರ್ಶಿಸುತ್ತಾ ಎನೆಯಿಕ್ಕದ ನೇತ್ರಗಳಿಂದ ನೀಲಾ ಲೋಕವನ್ನೇ ನಿಟ್ಟಿಸುತ್ತಲಿದ್ದಾಳೆ ಲೋಪಾಮುದ್ರೆ. ಯಾವುದೋ ಸ್ವಪ್ನದಲ್ಲಿ ಕಂಡ ಮತ್ತು ಬಹುದೂರದಲ್ಲಿರುವ ಬಯಕೆಯೊಂದನ್ನು ನೋಡಿ, ಆ ನಾರಿಯ ಎರಡೂ ಭ್ರಮರಕೃಷ್ಣನಯನಗಳು ಮುಗ್ಧವಾವಂತಿವೆ. ತಮ್ಮ ಅಂತರಾಳದಲ್ಲಿ ಅದ್ಭುತವಾದೊಂದು ಚಂಚಲತೆಯ ಅನುಭವವಾಯಿತು ಕಠೋರ ತಪಸ್ವಿ ಅಗಸ್ತ್ಯರಿಗೆ. ಜ್ಞಾಪಕಕ್ಕೆ ಬಂದಿತು !— 'ಒಂದು ದಿನ ಇದೇ ಭಾವದಲ್ಲಿಯೇ ಪುಷ್ಪಿತ ತರುಶಾಖೆ-ಯನ್ನು ಸ್ಪರ್ಶಿಸುತ್ತಾ ಜೀವಸಸಂಗಿನಿಯ ಹುಟ್ಟನ್ನು ಬಯಸಿದ್ದಿಲ್ಲವೆ ತಾವು ?

'ಗೃಹಸ್ಥನಾಗು ಕುಮಾರ, ಪುತ್ರಲಾಭ ಪಡೆ ಕುಮಾರ!' ಸ್ವರ್ಗದಲ್ಲಿರುವ ಸಿಶ್ಯಗಣದ ಈ ಬಿನ್ನಹ ಋಷಿ ಅಗಸ್ತ್ಯರ ಹೃತ್ ಪಿಂಡದಲ್ಲಿ ಸ್ವರಮಧುರ ಕಲಕಲ ನಿನಾದದಂತೆ ಬಾಜಿಸತೊಡಗಿತು.

ಅಗಸ್ತ್ಯರು ಕರೆದರು:—' ಲೋಪಾ '

ಚಮಕಿತಳಾಗಿ ನೋಡಿದಳು ಲೋಪಾಮುದ್ರೆ. ಆದರೆ ಶಾಂತ ಸ್ವರದಲ್ಲಿಯೇ ಪ್ರಶ್ನೋತ್ತರವಿತ್ತಳು—' ಅಪ್ಪಣೆಯಾಗಲಿ '

ಹತ್ತಿರಕ್ಕಾಗಮಿಸಿ ಅಗಸ್ತ್ಯರು ಹೇಳಿದರು:— ನೀನು ಈ ತರು ಶಾಖೆಯಂತೆ ವಾತ್ಸಲ್ಯದಿಂದ ಪುಷ್ಪಿತಳಾಗು ಲೋಪಾ; ಇದು ನನ್ನ ಇಚ್ಛೆ.

ಲೋಪಾ—' ನಿಮ್ಮ ಇಚ್ಛೆ ಈಡೇರಿ ಸತ್ಯವಾಗಲಿ. '

ವ್ಯಥಿತಭಾವದಿಂದ ನೋಡುತ್ತಾ ಋಷಿ ನುಡಿದರು:—' ಇದೆಂಥ ನಡತೆ ಲೋಪಾ? ನನ್ನ ಹೃದಯದ ಈ ಮಧುರ ಅಶಾಂತತೆಯ

ಆವೇದನೆಯನ್ನು ಕೇಳಿಯೂ, ಇದೇನು, ಇಷ್ಟೊಂದು ಶಾಂತಸ್ವರದಲ್ಲಿ ಉತ್ತರಿಸುವುದೇ? ಯಾವ ವಿಸ್ಮಯವಾಗಲಿ ಅಥವಾ ಯಾವ ಆನಂದವಾಗಲಿ ಇಲ್ಲವೆ ನನ್ನ ಈ ಆಹ್ವಾನದಲ್ಲಿ?'

ಲೋಪಾ—'ನಾನು ತಮ್ಮ ಆದೇಶದ ದಾಸಿ. ತಮ್ಮ ಇಚ್ಛೆಯ ಸಾನ್ನಿಧ್ಯದಲ್ಲಿಯೇ ಪ್ರತಿಕ್ಷಣವೂ ಸಮರ್ಪಿತಳಾಗಿರುವೆ ನಾನು. ವ್ಯಥಿತರಾಗದಿರಿ ನೀವು ಋಷಿ! ಆದೇಶವನ್ನು ಪಾಲಿಸಬೇಕಾದ ದಾಸಿ, ತನ್ನ ವಕ್ಷದಲ್ಲಿ ವಿಸ್ಮಯ ಮತ್ತು ನಯನದಲ್ಲಿ ಆನಂದಗಳನ್ನು ತುಂಬಿಕೊಂಡು ಬಂದು ತಮ್ಮ ಸಮ್ಮುಖದಲ್ಲಿ ಪ್ರಗಲ್ಭಳಾಗಿ ಎಂದೂ ನಿಲ್ಲಲಾರಳು; ಆ ದುಃಸಾಹಸ ಅವಳಿಗಿಲ್ಲ!'

ಅಗಸ್ತ್ಯ—'ತಪ್ಪು ಮಾಡದಿರು ಲೋಪಾ. ಪುಷ್ಟಿತವಾಗುವ ಆಸಕ್ತಿಯಿಂದ ಲತೆಯು ಯಾವರೀತಿ ಕಾತರವಾಗಿ ಸಮೀರಣದ ಉಲ್ಲಾಸವನ್ನು ತನ್ನ ವಕ್ಷದಲ್ಲಿ ಸಂಗ್ರಹಿಸುವುದೋ, ಅದೇ ರೀತಿ ನೀನು ನನ್ನ ಶಾಂತ ಅಧರಪುಟವನ್ನು ಸ್ಮಿತಹಾಸದಿಂದ ಕಾತರಗೊಳಿಸಿ, ನಿನ್ನ ಸ್ವಾಮಿಯನ್ನಿಂದು ಪರಿಗ್ರಹಿಸು!'

ಲೋಪಾಮುದ್ರೆ—'ನನ್ನಿಂದಾಗದು ಋಷಿ!'

ಆಹತ ವ್ಯಥಿತನಂತೆ ಆರ್ತನಾದ ಮಾಡಿದರು ಅಗಸ್ತ್ಯ:—'ಲೋಪಾ, ಸುಂದರ ದೇಹೀ ಲೋಪಾ!'

ಲೋಪಾ—'ನಿಮ್ಮ ಸಂಕಲ್ಪಕ್ಕೆ ಆತ್ಮಸಮರ್ಪಣೆ ಗೈಯಲಿಕ್ಕಾಗಿ ಸಿದ್ಧವಾಗಿಯೇ ಇದೆ, ನಿಮ್ಮ ಲೋಪಾಮುದ್ರೆಯ ಸುಂದರ ದೇಹ.'

ಅಗಸ್ತ್ಯ—'ಈ ನಿಷ್ಠುರತೆಯನ್ನು ಪರಿತ್ಯಜಿಸು ಅಗಸ್ತ್ಯನ ಬಯಕೆಯ ಲೋಪಾ, ಕೇವಲ ಕ್ಷಣದಮಟ್ಟಿಗೆ ನಿನ್ನ ಆ ಸುಂದರ ಅಧರವನ್ನು ಸ್ಮಿತಹಾಸದೊಂದಿಗೆ ಮಾಯಾಮಯಗೊಳಿಸಿ, ಅಗಸ್ತ್ಯನ ಶುಷ್ಕ ಕಠೋರ ಮತ್ತು ತಪಃಕ್ಲಿಷ್ಟ ಜೀವನದಲ್ಲಿ ಈ ಕಾಮನಾಸ್ಮಿತ ರುಭಸಂದರ್ಭದ ಪ್ರಥಮಯತ್ನವನ್ನು ಸಂತೃಪ್ತಗೊಳಿಸು ಲೋಪಾ!'

ಲೋಪಾ—'ನಾರಿಯ ತುಚ್ಛವಾದೊಂದು ಸ್ಮಿತಹಾಸದ ಸಲುವಾಗಿ ಇಷ್ಟೊಂದು ವ್ಯಾಕುಲತೆ ಏಕೆ ಋಷಿ?'

ಅಗಸ್ತ್ಯ—'ತಿಳಿಯೆ ಲೋಪಾ, ಆದರೆ ಇಷ್ಟು ಮಾತ್ರ ಬಲ್ಲೆ,—ನನ್ನ ವಕ್ಷದ ನಿಃಶ್ವಾಸ ಇಂದು ಪ್ರಿಯ ಲೋಪಾಮುದ್ರೆಯ ಓಷ್ಠ ಪ್ರಭೆಯ ಒಂದು ಸ್ಮಿತಹಾಸಕ್ಕಾಗಿ ತೃಷೆಯಿಂದ ಚಂಚಲಗೊಂಡಿದೆ; ಚೈತ್ರದ ಮಲಯಸಮೀರನು ಸುಮಕುಂಜದ ಸೌರಭವನ್ನು ಪಾನ ಮಾಡಲು ಆಕಸ್ಮಾತ್ ಚಂಚಲಗೊಳ್ಳುವುದಿಲ್ಲವೆ? ಹಾಗೆ.'

ಲೋಪಾ ನುಡಿದಳು—'ನನ್ನಿಂದಾಗದು ಋಷಿ.'

ಅಗಸ್ತ್ಯ—'ಏಕೆ?'

ಲೋಪಾ—'ವಲ್ಕಲವನ್ನುಟ್ಟ ದೇಹದ ಈ ರಾಜತನಯೆಯಲ್ಲಿ ಸ್ಮಿತಹಾಸದ ಆಶೆ ಮಾಡಿದಿರಿ ಋಷಿ!'

ಚಮಕಿತರಾದರು ಅಗಸ್ತ್ಯ—'ಹಾಗಾದರೆ?'

ಲೋಪಾ—'ರತ್ನಾಭರಣಗಳನ್ನು ಬಯಸುವೆ. ಕನಕಕೇಯೂರ-ದಿಂದ—ಸ್ವರ್ಣಕಾಂಚೀನಾಮದಿಂದ ಮುತ್ತು ಮಣಿನೊಪುರಗಳಿಂದ ನನ್ನನ್ನು ಅಲಂಕರಿಸಿದರೆ ಮಾತ್ರ ನಿಮ್ಮ ಲೋಪಾಮುದ್ರೆ ಸ್ಮಿತಹಾಸದೊಂದಿಗೆ ಸುಂದರತರಳಾಗಿ ನಿಮ್ಮ ಈ ಪ್ರಣಯಸಂಗದ ಆಹ್ವಾನಕ್ಕೆ ಪ್ರತಿಕ್ರಿಯೆ ನೀಡಬಲ್ಲಳು. ಒಂದುಪಕ್ಷ ಸಾಧ್ಯವಿಲ್ಲದಿದ್ದಲ್ಲಿ, ಆಗ ಲೋಪಾಮುದ್ರೆಯ ಹೆಸರಿನ ಈ ನಾರಿಯನ್ನು ಮಾತ್ರ ಪಡೆಯುವಿರಿ. ಆದರೆ ಈ ನಾರಿಯ ಅಧರದ ಸ್ಮಿತಹಾಸವನ್ನು ಪಡೆಯಲಾರಿರಿ!'

ಸ್ತಬ್ಧರಾಗಿ ಕೆಲವು ಕ್ಷಣ ನಿಂತೇ ಇದ್ದರು ಋಷಿ ಅಗಸ್ತ್ಯರು, ಅನಂತರ ಶಾಂತಸ್ವರದಲ್ಲಿ ನುಡಿದರು:—'ರತ್ನಾಭರಣಗಳನ್ನು ಇಷ್ಟೊಂದು ಪ್ರೀತಿಸುವಿಯಾ ಲೋಪಾ?'

ಉತ್ತರ ಕೊಡಲಿಲ್ಲ ಲೋಪಾಮುದ್ರೆ.

ಆದರೆ ಮತ್ತಿನ್ನಾವ ಕ್ಷೋಭೆಯೂ ಜಾಗೃತಗೊಳ್ಳಲಿಲ್ಲ ಋಷಿ ಅಗಸ್ತ್ಯರ ದನದಲ್ಲಿ. ನೀರವವಾಗಿಯೇ ಲೋಪಾಳ ಮುಖವನ್ನೇ ಸಮದುಃಖಿಭಾಗಿ ಬಾಂಧವನಂತೆ ವ್ಯಥಿತವೃಷ್ಟಿಯಿಂದ ನಿಟ್ಟಿಸುತ್ತಲೇ ಇದ್ದಾರೆ ಅಗಸ್ತ್ಯ. ಸಟೆಯನ್ನಾಡಲಿಲ್ಲ ಲೋಪಾ, ನಿರ್ಧನ ಋಷಿಯ ನಿರಾಭರಣ ಗೃಹಜೀವನದ ಕ್ಲೇಶ ಮತ್ತು ರಿಕ್ತತೆಗಳನ್ನು ಸಹಿಸುತ್ತಾ ಬಂದು, ಈ ಸುಪ್ರಾಭಿಲಾಷಿಣೀ ಸುಂದರನಾರಿಯ ಶಶಿಕಳೆಯಂಥ ಆ ಎರಡೂ ತುಟಿಗಳ ಚಂದ್ರಿಕೆ ಸ್ತಬ್ಧವಾಗಿ ಬಿಟ್ಟಿದೆ.

ಅಗಸ್ತ್ಯರು ಹೇಳಿದರು:—'ನಿನ್ನ ಅಭಿಲಾಷೆಯ ರತ್ನಾಭರಣಗಳನ್ನು ಪಡೆಯುವಿ ಲೋಪಾ, ನಿರೀಕ್ಷಿಸುತ್ತಿರು! ನಾನು ನನ್ನ ಯಶ, ಮಾನ, ತಪಸ್ಸಿನ ಪುಣ್ಯಗಳನ್ನು ವೆಚ್ಚಮಾಡಿಯಾದರೂ ನಿನಗಾಗಿ ರತ್ನಾಭರಣಗಳನ್ನು ಸಂಗ್ರಹಿಸಿ ತೆಗೆದುಕೊಂಡು ಬರುವೆ.

೪

ರಂಜಿಸತೊಡಗಿತ್ತು. ಅಪರಾಹ್ನದ ಆಕಾಶ. ಆಶ್ರಮುಕ್ಕೆ ಮರಳಿ ಆಗಮಿಸಿದ್ದಾರೆ ಅಗಸ್ತ್ಯರು. ತಂದಿದ್ದಾರೆ ಅಜಸ್ರ ರತ್ನಾಭರಣಗಳನ್ನು.

ಪ್ರಾರ್ಥಿಯಾಗಿ ನೃಪ ಶ್ರುತರ್ವನಲ್ಲಿಗೆ ಹೋಗಿದ್ದರು ಅಗಸ್ತ್ಯ. ಪ್ರಾರ್ಥನೆಯನ್ನು ಪೂರ್ಣಗೊಳಿಸಲಿಲ್ಲ ಶ್ರುತರ್ವ. ವಿಮುಖರಾಗಿ ನೃಪ ವೃಧಶ್ಮನ ಭವನದ್ವಾರಕ್ಕಾಗಮಿಸಿದ್ದರು. ಆದರೆ ತಿರಸ್ಕರಿಸಿದ್ದ ವೃಧಶ್ಮ. ಅನಂತರದ ನೃಪ ಪ್ರಸದರ್ಯುವೂ ನಿರಾಕರಿಸಿದ್ದ. ಆದರೆ ಕೊನೆಗೆ ದಾನವಪತಿ ಇಲ್ವಲನಲ್ಲಿಂದ ಅಜಸ್ರ ರತ್ನ, ಕಾಂಚನ ಮತ್ತು ಮಣಿಯುಕ್ತವಾದ ಆಭರಣಗಳನ್ನು ಪಡೆದುಕೊಂಡು ಹಿಂತಿರುಗಿ ಬಂದಿದ್ದರು ಅಗಸ್ತ್ಯರು. ಸಾಹಸದೊಂದಿಗೆ ಲೋಪಾಮುದ್ರಾಳನ್ನು ನೋಡುತ್ತ ಹೇಳೀದರು:—'ಇವನ್ನು ತೆಗೆದುಕೊಂಡು ಸುಖಿಯಾಗು ಲೋಪಾ, ರತ್ನಾಭರಣಗಳ ಸಿಂಜನವನ್ನು ಕೇಳಿ ಚಮಕಿತಗೊಳ್ಳಲಿ ನಿನ್ನ ಅಧರ ದ್ಯುತಿ, ನಾನಿನ್ನು ತೆರಳುವೆ.'

ಲೋಪಾ ಆರ್ತನಾದ ಮಾಡತೊಡಗಿದಳು—'ಎಲ್ಲಿಗೆ ಹೋಗುವಿರಿ ಸ್ವಾಮೀ?'

ದನಿದ ಹಾಗು ಖಿನ್ನವಾದ ಸ್ವರದಲ್ಲಿ ಮತ್ತು ಮೃದುಹಾಸದೊಂದಿಗೆ ತಮ್ಮ ಅಂತರಾಳದ ವಿಷಣ್ಣವೇದನೆಯನ್ನು ಬೈತಿಟ್ಟು

ಕೊಂಡು ಅಗಸ್ತ್ಯರು ಉತ್ತರವಿತ್ತರು:— 'ಆಶ್ರಮದ ನಿರ್ಝರದ ತಡಿಗೆ, ನೀನೇ ರಚಿಸಿರುವ ಮಲ್ಲಿಕಾ ವಿತಾನದ ಏಕಾಂತಕ್ಕೆ, ನಿನ್ನನ್ನೇ ಪ್ರತೀಕ್ಷಿಸಲಿಕ್ಕೆ!'

ಹೊರಟು ಹೋದರು ಋಷಿ ಅಗಸ್ತ್ಯರು. ಆಶ್ರಮ ನಿರ್ಝರಿಣಿಯ ಹತ್ತಿರಕ್ಕಾಗಮಿಸಿ ನಿಲ್ಲುತ್ತಿರುವಂತೆಯೇ, ದುಃಸಹನಾದ ವೇದನೆಯೊಂದು ಅಂತರ್ಯಾದ ಆಳದಲ್ಲಿ ಪುಂಜೀಭೂತವಾಗುತ್ತಲಿರುವುದರ ಅರಿವಾಯಿತವರಿಗೆ. ಈ ಮಲ್ಲಿಕಾವಿತಾನವು ಲೋಪಾಳದೇ ರಚನೆ. ಆದರೆ ಈ ಮಲ್ಲಿಕಾವಿತಾನದ ಸೌರಭ ಮತ್ತು ಶೋಭೆಗಳು ಪ್ರಾಣವನ್ನೇ ಕಳೆಯುವುವು ಎಂದು ತೋರುತ್ತಲಿದೆ. ತಮ್ಮ ಜೀವನದ ಸಂಗಾತಿಯನ್ನು ಪ್ರಣಯೋತ್ಸವಕ್ಕಾಗಿ ಆಹ್ವಾನಿಸಿದ್ದಾರೆ ಅಗಸ್ತ್ಯರು. ಆದರೆ ಇಂದು ಸಂಧ್ಯೆಯಲ್ಲಿ ಈ ಮಲ್ಲಿಕಾವಿತಾನದ ಪುಷ್ಪ ಮತ್ತು ಲತೆಯ ಮೇಲೆ ಚಂದ್ರರೇಖೆಯ ಹಾಸಜ್ಯೋತಿ ಚಲ್ಲಿಸರಿದು ಬೀಳುವಾಗ, ತಮ್ಮ ಸಮ್ಮುಖದಲ್ಲಿ ಉಪಸ್ಥಿತಳಾಗುವ ಆ ನಾರಿ, ಕೇವಲ ರತ್ನಾಭರಣಗಳನ್ನು ಮಾತ್ರ ಪ್ರೀತಿಸುತ್ತಾಳಷ್ಟೇ. ನಿರ್ಧನ ಋಷಿಯ ಆಹ್ವಾನಕ್ಕಾಗಿ ಅಲ್ಲ, ಋಷಿಯ ದುರಾಯಾಸದಿಂದ ಪ್ರಾಪ್ತವಾದ ರತ್ನ ಕಾಂಚನಗಳ ಸ್ಪರ್ಶವನ್ನು ಪಡೆದು ಜಾಗೃತಗೊಳುತ್ತದೆ. ಆ ನಾರಿಯ ಅಧರ ಜ್ಯೋತ್ಸ್ನೆ!

ವಿಷಣ್ಣಮಯ ತಂದ್ರತೆಯೊಂದರಲ್ಲಿ ತನ್ಮಯರಾಗಿದ್ದ ಅಗಸ್ತ್ಯರು ಕಣ್ಣು ತೆರೆಯುತ್ತಿರುವಂತೆಯೇ, ಸಂತ್ರಸ್ತರಂತೆ ಚಮಕಿತರಾದರು. ಸಂಧ್ಯಾಕಾಶದ ಎದೆಯಲ್ಲಿ ನಗುತ್ತಲಿದೆ ಕ್ಷೀಣ ಹಿಮಕರ ರೇಖೆ. ಲೋಪಾ ಬರುವ ಸಮಯವಾಗಿಬಿಟ್ಟಿದೆ. ಮಿಲನ ಮುಹೂರ್ತದ ಇಂಗಿತವನ್ನು ತಿಳುಹಿ ಹಾರಿ ಅಲೆದಾಡುತ್ತಲಿದೆ ಪ್ರಜಾಪತಿಕೀಟ.

ಆದರೆ ಇವರ ಕಲ್ಪನೆಯಾಗುತ್ತಿರುವಂತೆಯೇ ಅಂತರ್ಯಾದ ಆಳದಲ್ಲಿ ಯಾವುದೋ ಅಗ್ನಿಸ್ಫುಲಿಂಗವೊಂದು ದಂಶನ ಗೈಯುತ್ತಿರುವಂತೆ ಅನುಭವವಾಯಿತು ಅಗಸ್ತ್ಯರಿಗೆ. ಅವರ ಪ್ರಣಯೋತ್ಸುಕ ಜೀವನದ ಅಪಮಾನವು ರತ್ನಾಭರಣಗಳಿಂದ ಝೇಂಕೃತಿ ಗೈಯುತ್ತಾ ತಮ್ಮ ವಕ್ಷದತ್ತ ಅಗಮಿಸುತ್ತಲಿದೆ. ಬರುತ್ತಲಿದ್ದಾಳೆ ಒರ್ವ ರತ್ನಾಭರಣ ಪ್ರೇಮಿನಾರಿ. ಆ ಸ್ಮಿತಹಾಸದ ಬೆಲೆ ಎಷ್ಟಾಗುವುದು? ಆ ನಗುವಾದರೋ ಲೋಪಾ ಎನ್ನುವ ಹೆಸರಿನ ಪ್ರೇಮಿಯ ಮುಖದ್ದಲ್ಲ, ಅದು ರತ್ನಶಿಲೆಯೊಂದರ ನಗೆ!

ಆದರೆ....ಯಾರು ಈ ನಾರಿ? ಒಮ್ಮೆಗೇ ಅಚ್ಚರಿಗೊಂಡರು. ಅಗಸ್ತ್ಯರು. ನೋಡುತ್ತಲಿದ್ದಾರೆ—ಸುಧಾರಸದಿಂದ ತುಂಬಿ ತುಳುಕುವ ನಯನಗಳು; ನುದಾನೇಶವಿಹ್ವಲಳಾದ ಒರ್ವ ನಾರಿಯು ತನ್ನ ಅನಾಚ್ಛಾದಿತ ಅಂಗಶೋಭೆಯ ಜ್ಯೋತ್ಸ್ನೆಯನ್ನು ಉದ್ಭಾಸಿತಗೊಳಿಸುತ್ತಾ ತಮ್ಮ ಸಮ್ಮುಖದಲ್ಲಿ ಬಂದು ನಿಂತಿದ್ದಾಳೆ! ಸ್ವರ್ಣಮಂಜೀರವಿಲ್ಲ, ರತ್ನಮೇಖಲೆ ಇಲ್ಲ! ಕನಕಕೇಯೂರ ಮತ್ತು ಇಂದ್ರನೀಲಮಣಿ-ಹಾರಗಳೂ ಇಲ್ಲ!

ವಿಸ್ಮಿತರಾದ ಅಗಸ್ತ್ಯರು ಪ್ರಶ್ನಿಸಿದರು—'ಯಾರು ನೀನು?'

ನಾರಿ ನುಡಿದಳು 'ಬಯಸಿ ನೋಡಿರಿ.ಯಾರು ನಾನೆಂಬುದನ್ನು.'

ಕಾಣುತ್ತಲಿದೆ ಅಗಸ್ತ್ಯರ ಕಣ್ಣುಗಳಿಗೆ—ಚಂದ್ರಾಂಶುವನ್ನು ಸ್ಪರ್ಧಿಸುವ ಸ್ಮಿತಹಾಸದ ಜ್ಯೋತಿಯೊಂದು ಶರೀರಿಣಿಯಾಗಿ ಸಕಲ ಕಾಂತಿಯನ್ನೂ ಕಲ್ಲೋಲಗೊಳಿಸಿ ತುಂಬುಯೌವನದ ರಾತಿಯನ್ನು ಕೇವಲ ವಲ್ಕಲವೊಂದರಿಂದ ಸುತ್ತಿಕೊಂಡು, ತಮ್ಮ ವಕ್ಷದೊಂದಿಗೆ ಒಂದಾಗುವ ಆಸೆಯಿಂದ ಹತ್ತಿರಕ್ಕಾಗಮಿಸಿ ನಿಂತಿದೆ!

ವಿಸ್ಮಯ ಧ್ವನಿತವಾಯಿತು, ಅಗಸ್ತ್ಯರ ಕಂಠಸ್ವರದಲ್ಲಿ!

ನೀನು ಲೋಪಾಮುದ್ರಾ!

ಹೌದು, ನಾನು ನಿಮ್ಮದೇ ವಲ್ಕಲದ ಉಡುಗೊರೆಯಿಂದ ಧನ್ಯಳಾದ ಲೋಪಾಮುದ್ರೆ.

ಎಲ್ಲಿ ನಿನ್ನ ರತ್ನಾಭರಣಗಳು?

ಬಿದ್ದಿವೆ ನಿಮ್ಮ ಪರ್ಣಕುಟೀರದ ದ್ವಾರದಲ್ಲಿ.

ಏಕೆ?

ರತ್ನಪ್ರೇಮಿಯಲ್ಲ ನಾನು ಋಷಿ!

ವಿಸ್ಮಯ ವಿಹ್ವಲ ನೇತ್ರಗಳಿಂದ ನೋಡುತ್ತಲೇ ಇದ್ದಾರೆ ಅಗಸ್ತ್ಯರು.

ಲೋಪಾ ನುಡಿದಳು:—ನನ್ನ ಓಷ್ಠಪುಟದ ಸ್ಮಿತಹಾಸವನ್ನು ನೋಡಲಿಕ್ಕಾಗಿ ಯಾವ ಋಷಿಯ ಹೃದಯ ಇಂದು ವ್ಯಾಕುಲಗೊಂಡಿದೆಯೋ, ಆ ಋಷಿಯ ಪ್ರಿಯತಮೆ ನಾನು. ಇಷ್ಟು ದಿನಗಳವರೆಗೆ ಪ್ರಿಯತಮನ ಪರೀಕ್ಷೆಯಲ್ಲಿದ್ದೆ ನಾನು; ಇಂದವನ ಹೃದಯವನ್ನು ಪಡೆದಿರುವೆ. ಮತ್ತು ಅವನ ಆ ಹೃದಯದಲ್ಲಿಯೇ ಇದೆ ಋಷಿವಧು ಲೋಪಾಳ ಜೀವನದ ಏಕಮಾತ್ರ ಅಲಂಕಾರ.

ಅಗಸ್ತ್ಯರು ಕರೆದರು—'ಪ್ರಿಯೆ ಲೋಪಾ!'

ಕಾಣುತ್ತಲಿದ್ದಾಳೆ ಲೋಪಾ— ಪ್ರೇಮಿಯ ವಿಶಾಲ ತೃಷ್ಣ ಸುಸ್ಮಿತ ಚಕ್ಷುಗಳೆರಡು ತನ್ನನ್ನು ಆಹ್ವಾನಿಸುತ್ತಲಿವೆ.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

— ಧಾರವಾಡ —

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,

ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಿಗಿ**

ಸುಭಾಸ ರೋಡ್, ಧಾರವಾಡ

ಆ:ರಿಸ್ಟಾಟಲ್ಲನ ಟ್ರ್ಯಾಜಿಡಿ* ಮತ್ತು ಅದರ ಪಡಂಗಗಳು

ಶ್ರೀ. ಬಿ. ಬಿ. ರಾಜಪುರೋಹಿತ ಎಂ. ಎ. ಧಾರವಾಡ

ಇಂದಿನ ಸಾಂಸ್ಕೃತಿಕ ಸಂಗಮತೀವ್ರತೆಯ ಮೂಲಕ, ನಮ್ಮ ಭಾರತೀಯ ರೂಪಕನಿರ್ಮಿತಿಯು, ಅನೇಕ ರೀತಿಯಿಂದ ತನ್ನ ಸ್ವರೂಪ-ಸತ್ತ್ವಗಳನ್ನು ಮಾರ್ಪಡಿಸಿಕೊಂಡಿದೆ. 'ಟ್ರ್ಯಾಜಿಡಿ'ಯ ಪ್ರಭಾವ ನಮ್ಮ ನಾಟಕ ಸಾಹಿತ್ಯದ ಮೇಲೆ ತುಂಬಬೀಳುತ್ತಲಿದೆ. 'ಟ್ರ್ಯಾಜಿಡಿ' ಎಂಬುದರ ಲಕ್ಷಣವೇನು ?

ಇತ್ತೀಚಿನ ವಿಮರ್ಶಕರಿಗೆ Tragedy ಯ ಬಗೆಗೆ ಆರಿಸ್ಟಾಟಲ್ಲನು ಹೇಳಿದ ವಿಚಾರಗಳು ಸಮ್ಮತವಿಲ್ಲದಿದ್ದರೂ Tragedy ಯ ಬಗೆಗೆ ಹೇಳಬೇಕೆಂದರೆ ಅವನಿಂದಲೇ ಪ್ರಾರಂಭಿಸಬೇಕಾಗುತ್ತದೆ. Tragedy ಗಳು ಮೂಲದಲ್ಲಿ ಬೆಳೆದು ಬಂದುದು ಗ್ರೀಕ ಭಾಷೆಯಲ್ಲಿ. ಅಲ್ಲಿ Thespis, Aeschylus Sofuhocles ರಿಂದ Tragedy ಗಳು ಪ್ರಾರಂಭವಾಗಿ ಅವರಿಗೇ ಕೊನೆಗೊಂಡುವು. ಅವರ ನಂತರ ಯಾರೂ ಪ್ರಸಿದ್ಧ Tragedy ಗಳನ್ನು ಕೊಡಲಿಲ್ಲ. ಆದುದರಿಂದ ಆ:ರಿಸ್ಟಾಟಲ್ಲನ ತತ್ತ್ವಗಳು ಆ ಮೂವರು ನಾಟಕಕಾರರಿಗೆ ಅನ್ವಯಿಸುವಂತೆ, ಶೇಕ್ಸಪಿಯರನಿಗಾಗಲಿ, ಇತರ ನಾಟಕಕಾರನಿಗಾಗಲಿ, ಸಂಪೂರ್ಣವಾಗಿ ಅನ್ವಯಿಸುವದಿಲ್ಲ. ಕರುಣೆ ಭಯಗಳನ್ನು ಹುಟ್ಟಿಸುವ ಅದರ ಮೂಲಸ್ವರೂಪ ಶೇಕ್ಸಪಿಯರನಲ್ಲೂ ಒಂದೇ ಇರಬಹುದು. ಆದರೆ ಬೆಳೆದ ರೀತಿ ಭಿನ್ನವಾಗಿದೆ—ಆಗಬೇಕು, ಆಗಿಯೇ ಆಗುತ್ತದೆ. ಶೇಕ್ಸಪಿಯರನು ತನ್ನ ಸುತ್ತಣ ಜೀವನದಿಂದ ಹೀರಿ ಕೊಂಡ ಅನುಭವದ ಶ್ರೀಮಂತಿಕೆ, ಪಾತ್ರಗಳ ಕಲ್ಪನೆಯ ವೈವಿಧ್ಯ ಅಸಾಮಾನ್ಯವಾಗಿವೆ. ಶೇಕ್ಸಪಿಯರನ ಕಾಲದ ಜನಸಾಮಾನ್ಯರ ಸಾಹಿತ್ಯದ ಅಭಿರುಚಿ ಸೋಫೋಕ್ಲೆಸ್ ಮೊದಲಾದವರ ಕಾಲದ ಗ್ರೀಕ ಜನತೆಗಿಂತ ಭಿನ್ನವಾಗಿತ್ತು. ಅದರ ಪರಿಣಾಮವಾಗಿಯೇ ಗ್ರೀಕ ನಾಟಕಗಳಲ್ಲಿ ಉಪಯೋಗಿಸಲ್ಪಟ್ಟ ಅತಿಮಾನವ ಶಕ್ತಿಗಳು ಶೇಕ್ಸಪಿಯರನ ನಾಟಕಗಳಲ್ಲಿ ಕಡಿಮೆಯಾಗಿವೆ. ಅವಕ್ಕೆ ಜನರಲ್ಲಿಯ ನಂಬುಗೆಯ ಅಭಾವವೇ ಕಾರಣ. ಏನೇ ಇದ್ದರೂ ಆ:ರಿಸ್ಟಾಟಲ್ಲನು ತೋರಿಸಿದ Tragedy ಯ ಸ್ವರೂಪ ಮುಂದಿನ ಎಲ್ಲ ಕಟ್ಟಡಕ್ಕೂ ತಳಹದಿಯಾಗಿದೆ.

" ಭಾರತೀಯ ಸಾಹಿತ್ಯವಲ್ಲಿ Tragedy ಹಾಗು Comedy ಗಳಿಗೆ ಯೋಗ್ಯ ಶಬ್ದಗಳಿಲ್ಲವೇನೋ ನಿಜ. ಒಂದು ಭಾಷೆಯಲ್ಲಿಯ ಪದಗಳಿಗೆ ಅದರ ಜಾಕೆವ್ಯಾಪ್ತಿ (Denotation) ಹಾಗು ಗುಣವ್ಯಾಪ್ತಿ (Connotaion) ಗಳಿಗೆ ಪೂರ್ಣವಾಗಿ ಸರಿಹೋಗುವಂಥ ಶಬ್ದಗಳು ಇನ್ನೊಂದು ಭಾಷೆಯಲ್ಲಿ ದೊರೆಯುವದು ಕಷ್ಟ. ಆದರೆ ಭಾರತೀಯ ಸಾಹಿತ್ಯದ ಪದಗಳಾದ ಸುಕುಮಾರ ಪ್ರಯೋಗ, ಮತ್ತು ಆವಿದ್ಧ ಪ್ರಯೋಗಗಳನ್ನು Comedy ಹಾಗು Tragedy ಗಳಿಗೆ ಬಳಸಬಹುದು " ಎಂದು ಶ್ರೀ. ಬೇಂದ್ರೆ ಅವರು ಅಭಿಪ್ರಾಯಪಡುತ್ತಾರೆ. ನಮ್ಮಲ್ಲಿ ಸಿದ್ಧಪದಗಳಿರುವಾಗ ಅವುಗಳನ್ನು ಪೇಕ್ಷಿಸಿದ್ದರಿಂದಲೇ, 'ಭದ್ರ, ರುದ್ರ'; 'ಶೋಭಾಂತ, ಕ್ಲೇಭಾಂತ'; 'ಸುಖಜನ್ಯ, ದುಃಖಜನ್ಯ'; 'ಖೇದಾಂತ, ಖೇದಾಂತ'; ಮೊದಲಾದ ಪದಗಳು ಹುಟ್ಟಿಕೊಂಡಿವೆ.

ಆ:ರಿಸ್ಟಾಟಲ್ಲನು ಹೇಳಿದ Tragedy ಯ ವ್ಯಾಖ್ಯೆ ಇದು: "ಕರುಣೆ ಹಾಗು ಭಯಗಳನ್ನು ಹುಟ್ಟಿಸಲು ಸಾಧ್ಯವಾಗುವಂತೆ ಮನೋಭಾವಗಳಿಗೆ ಕೊಟ್ಟ ಹೊರಮಾರ್ಗ (Catharsis)ವು ನಾಟಕೀಯ ರೂಪದಲ್ಲಿ, ಭಾಷೆಯಿಂದಲೂ ಆನಂದದಾಯಕ ವಾದ್ಯಾದಿಗಳಿಂದಲೂ ಕೂಡಿಕೊಂಡು ಯೋಗ್ಯ ಗಾತ್ರವನ್ನು ಹೊಂದಿಯೂ, ಪರಿಪೂರ್ಣವಾಗಿಯೂ ವ್ಯಕ್ತವಾದ ಗಂಭೀರ ಕೃತಿಯ ಅನುಕರಣೆಯು Tragedy "

ಈ ವ್ಯಾಖ್ಯೆಯಲ್ಲಿ ಆ:ರಿಸ್ಟಾಟಲ್ಲನು ಸಾಲ್ಕು ಮಾತುಗಳನ್ನು ಸ್ಪಷ್ಟಪಡಿಸಿದ್ದಾನೆ. Tragedy ಯು—

---

* ಇಂಗ್ಲೀಷಿನ 'Tragedy' ಎಂಬುದಕ್ಕೆ ಕನ್ನಡ ಅಥವಾ ಸಂಸ್ಕೃತದ ಪಾರಿಭಾಷಿಕ ಶಬ್ದದ ಬಗೆಗೆ ಒಮ್ಮತವಿಲ್ಲದ್ದರಿಂದ, ಮೂಲಪದವನ್ನೇ ಲೇಖನದಲ್ಲಿ ಬಳಸಲಾಗಿದೆ.

—ಲೇ

(೧) ಕರುಣೆ, ಭಯಗಳನ್ನು ಹುಟ್ಟಿಸುವಂಥದು.

(೨) ಗಂಭೀರ ಕೃತಿಯ ಅನುಕರಣೆ.

(೩) ಯೋಗ್ಯ ಗಾತ್ರವುಳ್ಳ ಪರಿಪೂರ್ಣಕೃತಿ.

(೪) ಭಾವಗಳಿಗೆ ಕೊಟ್ಟ ಹೊರಮಾರ್ಗ ಇಲ್ಲವೆ ಭೇದಿ. (Catharsis).

ಅರಿಸ್ಟಾಟಲ್ಲನ Mimaris ಎಂಬ ಪದವನ್ನು ಹ್ಯಾಮಿಲ್ಟನ್ ಫಾಯಿಫನು 'Imitation' (ಅನುಕರಣ) ಎಂದು ಭಾಷಾಂತರಿಸಿದರೆ, ಎಫ್. ಎಲ್. ಲ್ಯೂಕಾಸನು 'Representation' (ಪ್ರತಿನಿಧೀಕರಣ—ಎಂದು ಭಾಷಾಂತರಿಸುತ್ತಾನೆ. ಲ್ಯೂಕಾಸನು ಹೇಳುವಂತೆ "Art is the representation of life" ಕಲೆಯು ಜೀವನವನ್ನು ಪ್ರತಿನಿಧೀಕರಿಸುತ್ತದೆ. ಏಕೆಂದರೆ ಕಲಾಕೃತಿಯಲ್ಲಿ ಜೀವನದಿಂದ ಸ್ಫೂರ್ತಿಪಡೆದ 'ಪ್ರತಿಮೆ' ಇರುತ್ತದೆಯೇ ಹೊರತು, ಛಾಯಾಚಿತ್ರದಂತೆ 'ಪ್ರತಿಕೃತಿ' ಇರುವದಿಲ್ಲ. ಪ್ಲೇಟೋನು "Music is the representative art" ಎಂದು ಹೇಳಿದ ಮಾತು ಗಮನಾರ್ಹವಿದೆ. Tragedy ಯ ವ್ಯಾಖ್ಯೆಯನ್ನು ಲ್ಯೂಕಾಸನು ಬೇರೆ ಮಾತುಗಳಲ್ಲಿ ಹೇಳಿದ್ದಾನೆ:

"A serious drama in a serious representation to arouse pity and fear, by speech and action, of some phase of human life." (ಮಾತು ಹಾಗು ಕೃತಿಗಳಿಂದ, ಕರುಣೆ ಹಾಗು ಭಯಗಳನ್ನು ಹುಟ್ಟಿಸುವಂತೆ, ಗಂಭೀರವಾಗಿ ಪ್ರತಿನಿಧೀಕರಿಸಲ್ಪಟ್ಟ ಮಾನವಜೀವನದ ಯಾವದೋ ಮುಖದ ಗಂಭೀರ ನಾಟಕವು ಟ್ರ್ಯಾಜಿಡಿ)

ಟ್ರ್ಯಾಜಿಡಿಯ ವ್ಯಾಖ್ಯೆಯಲ್ಲಿ catharsis ಬಹು ದೊಡ್ಡ ಪಾತ್ರವನ್ನಾಡಿದೆ. ನಮ್ಮ ಭಾವನೆಗಳಿಗೆ ಹೊರಗೆ ಮಾರ್ಗ ಮಾಡಿಕೊಟ್ಟಾಗ ಅವು ಪ್ರೇಕ್ಷಕರ ಹೃದಯಕ್ಕೆ ಮುಟ್ಟಿ ಕರುಣೆ, ಭಯಗಳನ್ನು ಹುಟ್ಟಿಸುತ್ತವೆ. ಲೆಸ್ಸಿಂಗನು catharsis ಎಂಬದಕ್ಕೆ purification, (ಶುದ್ಧೀಕರಣ) ಎಂದು ಹೇಳಿದ್ದಾನೆ. ಇದು ಅಷ್ಟೊಂದು ಸರಿಯಲ್ಲ. ಏಕೆಂದರೆ ನಮ್ಮ ಮನದಲ್ಲಿಯ ಕಶ್ಮಲಗಳು ಹೊರಗೆ ಹಾಕಲ್ಪಡುತ್ತವೆಯೇ ಹೊರತು ಮನೋಭಾವಗಳಲ್ಲ. ಕಶ್ಮಲಗಳು ಹೋದಮೇಲೆ ಉಳಿಯುವದು ಶುದ್ಧ ಭಾವವಾದರೂ, ಹೊರಗೆ ಹಾಕುವ ಆ ಕಾರ್ಯ ಭೇದಿಯ ಕಾರ್ಯವೇ ಹೊರತು, ಇದ್ದ ಭಾವಗಳ ಶುದ್ಧೀಕರಣವಲ್ಲ. ಆದ್ದರಿಂದ catharsis ಎಂಬುದಕ್ಕೆ ಭೇದಿ (purgation) ಎಂಬುದೇ purification ಕ್ಕಿಂತ ಹೆಚ್ಚು ಸರಿಯಾದ ಭಾಷಾಂತರವಾಗುತ್ತದೆ. ಒಟ್ಟಿನಲ್ಲಿ ಟ್ರ್ಯಾಜಿಡಿಯ ವೀಕ್ಷಣೆಯಿಂದ ಹೃದಯ ಶುದ್ಧವಾಗಿ ಹಗುರಾಗುತ್ತದೆ–ಎಂದು ಮಾತ್ರ ಇಟ್ಟುಕೊಳ್ಳಬಹುದು. ಆನಂದವೇ ಆಗಲಿ ದುಃಖವೇ ಆಗಲಿ, ಒಳಗೆ ಉಳಿದರೆ ಯೋಗ್ಯ ಮಾರ್ಗವಿಲ್ಲದೇ ಒದೆಯುವುದುಂಟು. ಅದಕ್ಕಾಗಿ ಅದನ್ನು ಸಕಾಲಕ್ಕೆ ಹೊರಗೆ ಹಾಕುವದೊಳಿತು.

"All her maidens watching said
She must weep or she will die."

(ಆಕೆ ಈಗ ಅಳದಿದ್ದರೆ ಸಾಯುತ್ತಾಳೆ) ಎಂಬಲ್ಲಿ ಭಾವದ ಒತ್ತಡವನ್ನು ನೋಡಬಹುದು. 'ಉತ್ತರ ರಾಮಚರಿತೆ' ಯಲ್ಲಿಯೂ ರಾಮಚಂದ್ರನು ದುಃಖಿಸಿದುದು ಇದೇ ಕಾರಣಕ್ಕಾಗಿ. ಯಾವ ಭಾವಗಳಿಲ್ಲದ ಮನಃಶಾಂತಿ ಎಲ್ಲರಿಗೂ ಹಿತಕಾರಿ. ಮಿಲ್ಟನ್ನನ "Calm of mind all passions spent" ಎಂಬ ಉಕ್ತಿಯಲ್ಲಿಯೂ ಇದೇ ಭಾವ ವ್ಯಕ್ತವಾಗಿದೆ. ಭಾವರಹಿತ ಆ ಶಾಂತಿಯ ಗರ್ಭದಲ್ಲಿಯ ಆನಂದವೇ ಸೃಷ್ಟಿಯ ಬೀಜ. "ಆನಂದಂ ಬ್ರಹ್ಮೇತಿ ವ್ಯಜಾನಾತ್" ಎಂಬಲ್ಲಿ ಆನಂದವು ಸೃಷ್ಟ್ಯಾತ್ಮಕ ಶಕ್ತಿಯಿಂದ ಕೂಡಿದೆಯೆಂದು ಹೇಳಲ್ಪಟ್ಟಿದೆ. ರೌದ್ರ, ಭಯಾನಕ, ಕರುಣ ರಸಗಳಲ್ಲಿಯೂ ರಸದ ಪ್ರಯೋಜನವಾದ ಆನಂದವೇ ಹುಟ್ಟುತ್ತದೆ ಎಂಬ ಭಾರತೀಯರ ಅಭಿಪ್ರಾಯವೇ ಲ್ಯೂಕಾಸನ "Tragedy is tqe luxury of sorrow" ಎಂಬ ಮಾತಿನಲ್ಲಿ ಧ್ವನಿತವಾಗುತ್ತಿದೆ. ಆಧುನಿಕ ಕಾವ್ಯಶಾಸ್ತ್ರಕಾರರಲ್ಲಿ ಟ್ರ್ಯಾಜಿಡಿಗೆ ದುಃಖಾಂತ ನಾಟಕವೆಂಬ ಅರ್ಥ ಬಂದಿದೆ. ಆದರೆ ಅರಿಸ್ಟಾಟಲ್ಲನು ಟ್ರ್ಯಾಜಿಡಿ ಅಂದರೆ ದುಃಖಾಂತವೆಂದು ಎಲ್ಲಿಯೂ ಹೇಳಿಲ್ಲ.

ಆಯ್. ಎ. ರಿಚಾರ್ಡ್ಸನಿಗೆ ಟ್ರ್ಯಾಜಿಡಿಯು ಕರುಣೆ ಭಯಗಳನ್ನು ಹುಟ್ಟಿಸುವಂಥದು ಎಂಬಲ್ಲಿ ವಿಶ್ವಾಸವಿಲ್ಲ. "ಹೆತ್ತರ ಹೋಗಬೇಕೆನ್ನುವ ಕರುಣೆಗೂ ದೂರ ಹೋಗಬೇಕೆನ್ನುವ ಭಯಕ್ಕೂ ನಡೆಯುವ ಟಗ್-ಆಫ್-ವಾರನ್ನು ಟ್ರ್ಯಾಜಿಡಿಯು ಹೇಗೆ ಸಮನ್ವಯಿಸುತ್ತದೆ?" ಎಂದು ಅವನಿಗೆ ಸಂದೇಹ ಬರುತ್ತದೆ. ಇದಕ್ಕೆ ಉತ್ತರವಿಷ್ಟೇ: ಹ್ಯಾಮ್ಲೆಟ್ ನಾಟಕದಲ್ಲಿಯ ಭೂತಬಂದಾಗಿನ ಭಯವು, ಆಫೀಲಿಯಾಳ ಬಗೆಗಿನ ಕರುಣೆಯ ಜೊತೆಗೆ ಏಕಕಾಲಕ್ಕೆ ಬರುವದಿಲ್ಲ. ಮತ್ತು ನಾಟಕದ ದೃಶ್ಯಗಳನ್ನು ಕಂಡು ಜೀವನದಲ್ಲಿಯಂತೆ ವ್ಯವಹರಿಸುವವನ ರೀತಿ ಅದು ನಿಜವಾದ ರಸಾಸ್ವಾದವಲ್ಲ.

"It is an eye of childhood,
That fears the painted devil"

ಜೀವನವನ್ನು ಸಾಕ್ಷಿಯಾಗಿ ನಿಂತು ಆಟವನ್ನು ನೋಡುವಂತೆ ನೋಡುವದರಿಂದ ಯಾವ ಆನಂದವು ದೊರೆಯಬಹುದೋ ಅದೇ ಆನಂದವು ನಾಟಕಗಳನ್ನು ನೋಡಿದರೆ ದೊರೆಯುತ್ತದೆ.

ಟ್ರ್ಯಾಜಿಡಿಯ ಸ್ವರೂಪವನ್ನು ಹೋಲುವ ಅವಿದ್ಧ ಪ್ರಯೋಗಗಳು ಭಾರತೀಯ ಸಾಹಿತ್ಯದಲ್ಲಿವೆ—ಎಂಬ ಉಲ್ಲೇಖ ಈ ಮೊದಲು ಬಂದಿದೆ. ಭರತನ ನಾಟ್ಯಶಾಸ್ತ್ರದಲ್ಲಿ ಪ್ರಯೋಗಗಳನ್ನು ಕುರಿತು, ಈ ಮಾತುಗಳು ಬಂದಿವೆ:

ಪ್ರಯೋಗೋ ದ್ವಿವಿಧಶ್ಚೈವ ವಿಜ್ಞೇಯೋ ನಾಟಕಾಶ್ರಯಃ ।
ಸುಕುಮಾರಸ್ತಥಾವಿದ್ಧೋ ನಾಟ್ಯಯುಕ್ತೆ ಸಮಾಶ್ರಯಃ
ಡಿಮಃಸಮವಕಾರಶ್ಚ ವ್ಯಾಯೋಗೇಹಾಮೃಗೌ ತಥಾ ।
ಏತಾನ್ಯಾವಿದ್ಧ ಸಂಜ್ಞಾನಿ ವಿಜ್ಞೇಯಾನಿ ಪ್ರಯೋಕ್ತೃಭಿಃ ॥

ನಾಟಕಂ ಸ ಪ್ರಕರಣಂ ಭಾಣೋ ವೀಥ್ಯಂಕ ನಾಟಕೇ ।
ಸುಕುಮಾರ ಪ್ರಯೋಗಾಣಿ ಮಾನುಷೇಷ್ವಾಸ್ತಿ ತಾನಿಚ ॥

"ಸುಕುಮಾರ ಪ್ರಯೋಗದಲ್ಲಿ ರತಿ, ಹಾಸ, ಉತ್ಸಾಹ, ವಿಸ್ಮಯಗಳಿಗೆ ಸ್ಥಾನವಿದ್ದರೆ, ಆವಿದ್ಧದಲ್ಲಿ ಕ್ರೋಧ, ಶೋಕ, ಜುಗುಪ್ಸೆ, ಭೀತಿಗಳಿಗೆ ಸ್ಥಾನವಿದೆ. ಆದೇಕೆ! ವಿಪ್ರಲಂಭ ಶೃಂಗಾರವನ್ನೂ, ಕುಟಿಲ ಹಾಸ್ಯವನ್ನೂ, ದಯಾವೀರನುತ್ಸಾಹವನ್ನೂ, ದೈವವಿಲಸಿತದಭ್ಯತವನ್ನೂ ಆವಿದ್ಧಪ್ರಯೋಗದಲ್ಲಿ ಪ್ರತಿಭಾಬಲದಿಂದ ಯೋಜಿಸಬಹುದು. ಇಂಗ್ಲಿಷಿನಲ್ಲಿ ಯಾವುದಕ್ಕೆ 'Tragic' ಅನ್ನುವರೋ ಅದು 'ಆವಿದ್ಧ'. ಆವಿದ್ಧರೀತಿಯು ಗ್ರೀಕನಾಟಕಕಾರರ ರೀತಿಯಾಗಲಿ, ಶೇಕ್ಸಪಿಯರನ ರೀತಿಯಾಗಲಿ, ಇಬ್ಸನ್ನನ ರೀತಿಯಾಗಲಿ ಮೂಲಭಾವದಲ್ಲಿ ಭೇದವಿಲ್ಲ. ಅವರವರ ರೀತಿಭೇದದಲ್ಲಿ ಹೆಚ್ಚುಕಡಿಮೆ ಪ್ರಭಾವವಿದೆ, ಜಾಸ್ತಿಯಿದೆ. ವ್ಯಾಯೋಗ, ಡಿಮ, ಈಹಾಮೃಗ, ಪ್ರೇಂಖಣ, ಸಂಲಾಪಕ, ಶಿಲ್ಪಕ ಮೊದಲಾದುವು ಆವಿದ್ಧ ಪ್ರಯೋಗಗಳು"* ಎಂಬ ಮಾತುಗಳನ್ನು ಉಲ್ಲೇಖಿಸಬಹುದು.

ಟ್ರ್ಯಾಜಿಡಿಗೆ ಆರಿಸ್ಟಾಟಲ್ಲನು ಹೇಳುವಂತೆ ಆರು ಅಂಗಗಳು: (೧) ಕಥಾವಸ್ತು (೨) ಪಾತ್ರಗಳು (೩) ವಿಚಾರ (೪) ಭಾಷೆ (೫) ಸಂಗೀತ (೬) ರಂಗಪರಿಕರ.

(೧) ಕಥಾವಸ್ತು:—ವಸ್ತುವಿನ ಬಗೆಗೆ ಮುಖ್ಯವಾಗಿ ಮೂರು ಮಾತುಗಳು ತಿಳಿಯುತ್ತವೆ.

(ಅ) ಅದು ನಿರ್ದಿಷ್ಟಗಾತ್ರದ್ದಿರಬೇಕು.

(ಬ) ಅದು ನಿರ್ದಿಷ್ಟ ರೀತಿಯಲ್ಲಿ ಬೆಳೆದು ಬಂದಿರಬೇಕು.

ಮತ್ತು (ಕ) ಟ್ರ್ಯಾಜಿಡಿಯಲ್ಲಿ ವಸ್ತುವು ಅತಿ ಮಹತ್ತ್ವದ್ದು.

ಟ್ರ್ಯಾಜಿಡಿಯ ಆತ್ಮವೆಂದರೆ ಅದರ ಕಥಾವಸ್ತು. ಅದಕ್ಕೆ ಆದಿ, ಮಧ್ಯ, ಅಂತ್ಯಗಳಿರಬೇಕೆಂದು ಆರಿಸ್ಟಾಟಲ್ಲನು ಹೇಳುತ್ತಾನೆ. 'ಪ್ರಾರಂಭ'ಕ್ಕೆ ನಿರ್ದಿಷ್ಟವಾದ ಪರಿಣಾಮಗಳಿರಬೇಕು, ಆದರೆ ಸ್ಪಷ್ಟವಾಗಿ ಕಾಣುವ ಕಾರಣಗಳಿರಬಾರದು. ಹೇಗೆಂದರೆ ಪಾತ್ರಗಳ ಸ್ವಭಾವದಲ್ಲಿಯ ದೋಷಕ್ಕಾಗಲಿ, ಅವು ಮಾಡಿದ ತಪ್ಪುಗಳಿಗಾಗಲಿ ಪರಿಣಾಮ ನಿಶ್ಚಿತವಿರಬೇಕು. ಆದರೆ "ಹೀಕೆ ಇದ್ದಾನೆ, ಹೀಗೇಕೆ ಮಾಡುತ್ತಾನೆ?" ಎಂಬುದಕ್ಕೆ ಉತ್ತರ ದೊರೆಯುವಂತಿರಬಾರದು. ಅಂದರೆ ಆ ಗುಣಕ್ಕೆ–ಮಾಡಿದ ಕಾರ್ಯಕ್ಕೆ ನಿರ್ವಾಹವಿಲ್ಲದೆ ತಲೆಕೊಡಬೇಕಾಗಿ ಬರುವದು. ಪ್ರೇಕ್ಷಕನಲ್ಲಿ ಕರುಣೆ, ಭಯಗಳನ್ನು ಹುಟ್ಟಿಸುತ್ತದೆ. ಮಧ್ಯವು ಕಾರಣಗಳಿಂದ ಬಂದಿರಬೇಕು, ಪರಿಣಾಮಗಳನ್ನು ಹುಟ್ಟಿಸುತ್ತಿರಬೇಕು. ಅಂತ್ಯವು ಮಧ್ಯದ ಪರಿಣಾಮವಾಗಿ ಬಂದಿರಬೇಕು. ಆದರೆ ಮುಂದಿನ ಪ್ರಸಂಗಗಳಿಗೆ ಎಡೆಗೊಡುತ್ತಿರಬಾರದು.

ಟ್ರ್ಯಾಜಿಡಿಯ ವಸ್ತುವಿನಲ್ಲಿ 'Peripety' Discovery ಮತ್ತು Suffering ಇರುತ್ತವೆಯೆಂದು ಆರಿಸ್ಟಾಟಲ್ಲನು ಹೇಳುತ್ತಾನೆ. Peripety, Discovery ಗಳು ವಸ್ತುವಿಗೆ ಸಂಬಂಧಿಸಿದಂತೆ Suffering (ದುಃಖಪಡುವದು) ರಂಗ ಪರಿಕರಕ್ಕೆ ಹೆಚ್ಚು ಸಂಬಂಧಿಸಿದೆ. Peripety ಅಂದರೆ ಕೆಲವು ಕಾರಣಗಳ ಪರಿಣಾಮವಾಗಿ ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಬದಲಾಗುವದು. ಹೆಚ್ಚು ಸ್ಪಷ್ಟಪಡಿಸಬೇಕೆಂದರೆ, ಒಂದು ಕೃತಿಯಿಂದ ಒಂದು ಪರಿಣಾಮವನ್ನು ನಿರೀಕ್ಷಿಸಿದಾಗ, ಪರಿಣಾಮವು ತದ್ವಿರುದ್ಧವಾಗುತ್ತದೆ. ವ್ಯಕ್ತಿಯಲ್ಲಿಯ ಸ್ವಭಾವದೋಷದ ಮೂಲಕ ಮಾಡಿದ ಒಂದು ತಪ್ಪಿಗೆ ಅನರ್ಥ ಪರಂಪರೆಯೇ ಕಾದಿರುವದು peripety. ಹ್ಯಾಮ್ಲೆಟನ ಅನುಮಾನಿಸುವಿಕೆ, ಆಥೆಲೋನ ತೀವ್ರಕೃತಿ, ದುರ್ಯೋಧನನ ಚಲ ಇವು ಅವರವರ ಸ್ವಭಾವಕ್ಕೆ ಹೊಂದಿಕೊಂಡುಬಂದ ಗುಣಗಳು. ಅದರಿಂದುಂಟಾಗುವ ಟ್ರ್ಯಾಜಿಡಿಗೆ "Tragedy of error" ಎಂದು ಹೆಸರು. "Tragedy of simple circumstances" ಎಂಬ ಎರಡನೆಯ ಪ್ರಕಾರದ ಟ್ರ್ಯಾಜಿಡಿಯಲ್ಲಿ ಪರಿಸ್ಥಿತಿಗಳಿಂದ ಅನರ್ಥವುಂಟಾಗಿರುತ್ತದೆ. ಈ ರೀತಿಯನ್ನು ಗ್ರೀಕ ನಾಟಕಗಳಲ್ಲಿ ಹೆಚ್ಚಾಗಿ ನೋಡಬಹುದು. ಯಾವುದೋ ಒಂದು ವಂಶದ ಪೂರ್ವಜರಿಗೆ ಶಾಪವಿದ್ದರೆ, ಆ ವಂಶವೇ ಅದನ್ನು ಅನುಭವಿಸಬೇಕಾಗಿ ಬರುತ್ತದೆ. ತಂದೆ ಹುಣಿಸೆಹಣ್ಣು ತಿಂದರೆ ಮಗನ ಹಲ್ಲು ಏಕೆ ಜಳಿಯಬೇಕೋ? ಆದರೆ ದೈವಕ್ಕೆ ಅದೆಲ್ಲ ಗೊತ್ತಿಲ್ಲ.

ಈ ಎರಡೂ ಪ್ರಕಾರದ ಟ್ರ್ಯಾಜಿಡಿಗಳಿಗೆ 'ಕಿಂಗಲಿಯರ' ದ ಎರಡು ಮಾತುಗಳನ್ನು ಹೇಳಬಹುದು:

> "The Gods are just, and our pleasant vices
> make instruments to plague us"

ಎಂದು 'ಟ್ರ್ಯಾಜಿಡಿ ಆಫ್ ಎರರ್' ಗೆ ಹೇಳಬಹುದಾದರೆ,

> "As flies to wonton boys, are we to Gods
> They kill us for their sport"

ಎಂದು 'ಟ್ರ್ಯಾಜಿಡಿ ಆಫ್ ಸರ್‌ಕಮ್‌ಸ್ಟನ್ಸಿಸ್' ಗೆ ಹೇಳಬಹುದು.

ಕೆಲವು ಪಾತ್ರಗಳು ಇನ್ನುಳಿದ ಪಾತ್ರಗಳನ್ನು ಶೋಧ ಮಾಡುವದು Discovery. ರುಸ್ತುಮನು ಸೊಹ್ರಾಬನು ತನ್ನ ಮಗನೆಂದು ಗುರುತಿಸುವದು, ಕರ್ಣನು ತಾನಾರೆಂದು ಅರಿಯುವದು ಶೋಧ. ಅಲ್ಲಿ ಅಜ್ಞಾನದ ಮುಖಾಂತರ ತಮ್ಮನ್ನು, ತಮ್ಮವರನ್ನು ಕಷ್ಟಕ್ಕೀಡು ಮಾಡುವ ಸನ್ನಿವೇಶಗಳು ಬರುತ್ತವೆ. ಆದರಿಂದ ಕರುಣೆ ಹೆಚ್ಚು ತೀವ್ರವಾಗುತ್ತದೆ. peripety ಯನ್ನು 'ಪರಿವೃತ್ತಿ' ಎಂತಲೂ, Discovery ಗೆ ಆರಿಸ್ಟಾಟಲ್ಲನ ಮೂಲಪದವಾದ Anagnorisis ಎಂಬುದನ್ನು 'ಅನಜ್ಞಾನ' ಎಂತಲೂ ಕೆಲವರು ಭಾಷಾಂತರಿಸುತ್ತಾರೆ.

ಒಟ್ಟಿನಲ್ಲಿ ಆರಿಸ್ಟಾಟಲ್ಲನು ಟ್ರ್ಯಾಜಿಡಿಯ ಕಥಾವಸ್ತುವಿನ ಬಗೆಗೆ ಹೇಳಿದುದನ್ನು ಸಾರದಲ್ಲಿ ಹೀಗೆ ಹೇಳಬಹುದು: ಪಾತ್ರದಲ್ಲಿಯ ಸ್ವಭಾವದೋಷದ ಪರಿಣಾಮವಾಗಿ ನಿರೀಕ್ಷಿತ ಪರಿಣಾಮದ ವಿರುದ್ಧ ದೈವವು ಆಟವಾಡುತ್ತದೆ. ಅಂಥ ದೋಷದಿಂದುಂಟಾದ ಟ್ರ್ಯಾಜಿಡಿಗೆ Tragedy of error ಎಂದು ಹೇಳಬಹುದು. ಆದರೆ ಅಲ್ಲಿಯ

* ಶ್ರೀ. ದ. ರಾ. ಬೇಂದ್ರೆಯವರ 'ಸಾಹಿತ್ಯ ಮತ್ತು ನಿಸರ್ಗ' ಪು. ೧೨೭ ನೋಡಿರಿ.

ದೋಷವು ನೈತಿಕವಿರಬೇಕೆಂಬ ನಿರ್ಬಂಧವಿಲ್ಲ. ಮತ್ತು ಅಂಥ ವಸ್ತುವನ್ನು ಹೆಣೆಯುವಾಗ ಕಲಾತ್ಮಕವಾಗಿ ಮನವೊಲಿಸುವಂತಹ ಸನ್ನಿವೇಶಗಳು ಬರಬೇಕು. Tragedy of error ದಲ್ಲಿ ವ್ಯಕ್ತಿಯು ಮಾಡಿದ ತಪ್ಪು ಉದ್ದೇಶಪೂರ್ವಕವಾಗಿ ಮಾಡಿದ ಪಾಪವೆಂದು ಹೇಳಲಿಕ್ಕಾಗುವುದಿಲ್ಲ. ಆದರೆ ದೈವವು ಯಾವುದನ್ನೂ ಕೇಳುವುದಿಲ್ಲ. ಅದು "ಕಾರಣ—ಅದರಿಂದುಂಟಾಗಬೇಕಾದ ಫಲ" ಇಷ್ಟನ್ನೇ ನೋಡುತ್ತದೆ. Tragedy of circumstances ನಲ್ಲಿ ಸರಿ ತಪ್ಪುಗಳ ವಿಚಾರ ದೈವಕ್ಕಿರುವದಿಲ್ಲ. ಟ್ರ್ಯಾಜಿಡಿಯು ಚಿತ್ರಿಸಿದ ವಿಷಯದಲ್ಲಿ ನ್ಯಾಯಸಮ್ಮತವಾದ ವಿಷಯವಿರಲಿಕ್ಕಿಲ್ಲ, ಆದರೆ ನಿಯಮನ (Law) ಇರುತ್ತದೆ. ಏನೇ ಇದ್ದರೂ ಟ್ರ್ಯಾಜಿಡಿಯ ಗುಣವೆಂದರೆ ಅದು ಮನವೊಲಿಸುವಂತಿರುತ್ತದೆ. (convincing) ಏಕೆಂದರೆ ಅಲ್ಲಿ 'ಅಸಾಧ್ಯ ಸಂಭವನೀಯತೆ' (impossible probability) ಗಿಂತ 'ಸಂಭವನೀಯ ಅಸಾಧ್ಯತೆ' (probable impossibility) ಗೆ ಮಹತ್ತ್ವ ಹೆಚ್ಚು.

(೨) ಪಾತ್ರಗಳು:— ಟ್ರ್ಯಾಜಿಡಿಯ ಪಾತ್ರಗಳು ಗಂಭೀರ ಮನೋವೃತ್ತಿಯವು ಇರಬೇಕು. ಪಾತ್ರಗಳ ಗುಣದಲ್ಲಿಯ ದುಷ್ಟತನಕ್ಕಿಂತ ದೌರ್ಬಲ್ಯವು ಹೆಚ್ಚು ಮನೋವೇಧಕವಾಗಿರುತ್ತದೆ. ಇಯಾಗೋನಿಗಿಂತ ಆಫೆಲೋನ ಪಾತ್ರ ನಮ್ಮ ಮನಸ್ಸು ಹಿಡಿಯಲು ಇದೇ ಕಾರಣ. "ಒಳ್ಳೆಯ ಮನುಷ್ಯ ಪಾಪ!" ಎಂದು ಉದ್ಗಾರ ತೆಗೆಯುವಂತಿರಬೇಕು ಎಂದು ಇಬ್ಸನ್ನನು ಹೇಳುತ್ತಾನೆ. ದೇವದೂತರು (angels) ನಾಟಕದಲ್ಲಿ ಅಷ್ಟೊಂದು ಮನಹಿಡಿಯುವದಿಲ್ಲೆಂದು ಲ್ಯುಕಾಸನ ಮತ. ಏಕೆಂದರೆ ಅವರು ಮಾನವ ಸ್ವಭಾವದ ಹೊರಗಿನವರು. ಪಾತ್ರಗಳು ವಿಶಿಷ್ಟವಾಗಿ (Typical) ಕಾಣುತ್ತಿದ್ದರೂ, ತಮ್ಮ ವ್ಯಕ್ತಿತ್ವವನ್ನು ಕಾಯ್ದುಕೊಂಡಿರಬೇಕು. ಪಾತ್ರಗಳು ರಾಜಮನೆತನದಿಂದಲೋ, ದೊಡ್ಡ ಅಧಿಕಾರವರ್ಗದಿಂದಲೋ ಬಂದಿರದಿದ್ದರೂ; ಟ್ರ್ಯಾಜಿಡಿಯು ಪರಿಣಾಮಕಾರಿಯಾಗಬಲ್ಲದು. ಆದರೆ ಘನತರ ಪಾತ್ರಗಳ ಪತನ ಇನ್ನೂ ಮನೋವೇಧಕವಾಗಿರುತ್ತದೆ. ಕಥೆಯ ಪರಿಪೂರ್ಣತೆಗಿಂತ ಪಾತ್ರಚಿತ್ರಣದಲ್ಲಿಯೇ ಟ್ರ್ಯಾಜಿಡಿಯ ಯಶಸ್ಸು ಅಡಗಿದೆ.

(೩) ವಿಚಾರ:— ವಿಚಾರವು ಟ್ರ್ಯಾಜಿಡಿಗೆ ಪ್ರಾಣಪ್ರತಿಷ್ಠಾಪನೆ ಮಾಡಬಲ್ಲದು. ಏಕೆಂದರೆ ಕವಿಯ ಜೀವನದರ್ಶನಕ್ಕೆ ಅಲ್ಲಿ ಅಭಿವ್ಯಕ್ತಿ ದೊರೆಯುವುದುಂಟು. ಕವಿಯ ಅನುಭವ ವಿಶಾಲವಿದ್ದಷ್ಟೂ ವಿಚಾರವು ವೈವಿಧ್ಯಪೂರ್ಣವಾಗುತ್ತದೆ.

(೪) ಸಂಗೀತ:— ಟ್ರ್ಯಾಜಿಡಿಯು ಅಲ್ಲಲ್ಲಿ ಬರುವ ಮೇಳಗೀತ (chorus) ಹಾಗು ಹಾಡುಗಳಿಂದ ರಂಜಿತವಾಗಿರಬೇಕು. ಏಕೆಂದರೆ ನಾಯಕನ ದುಃಖವನ್ನು ನೋಡುತ್ತಿದ್ದ ಪ್ರೇಕ್ಷಕನಿಗೆ ಇದು ಸಮಾಧಾನವನ್ನು ಒದಗಿಸುತ್ತದೆ. ಗ್ರೀಕರಲ್ಲಿ chorus ಬಹು ಮುಖ್ಯವಾಗಿತ್ತು. ಅದಕ್ಕೆ ಅವರು Lyric relief ಎಂದು ಹೇಳುತ್ತಿದ್ದರು. (Lyric relief in tragic tension) ಶೇಕ್ಸಪಿಯರನ ಕಾಲದ ನಾಟಕಕಾರರು ಗೀತಗಳಿಂದಲೂ ಹಾಸ್ಯಪಾತ್ರಗಳಿಂದಲೂ ಈ ಸಮಾಧಾನವನ್ನು ಒದಗಿಸುತ್ತಿದ್ದರು. ಶೇಕ್ಸಪಿಯರನ ಹ್ಯಾಮ್ಲೆಟ್ ನಾಟಕದಲ್ಲಿ ಬರುವ ಗೀತಗಳನ್ನೂ, ಹೆನ್ರಿ ೪. ರಲ್ಲಿ ಬರುವ ಫಾಲ್‌ಸ್ಟಾಫನ ಪಾತ್ರವನ್ನೂ ನೋಡಬಹುದು.

(೫) ಭಾಷೆ:— ಕವಿಯು ತನ್ನ ವಿಚಾರಗಳನ್ನು ಜನತೆಯ ಮುಂದೆ ಭಾಷೆಯ ಮುಖಾಂತರ ವ್ಯಕ್ತಪಡಿಸುತ್ತಾನೆ. ಜೀವನದ ಬಗೆಗೆ ತನ್ನ ನಿಲುಮೆಯನ್ನು ಸ್ಪಷ್ಟಗೊಳಿಸುತ್ತಾನೆ. ಭಾಷೆಯು ಟ್ರ್ಯಾಜಿಡಿಯ ಹೊರಮೈಯೆಂದು ಹೇಳಬಹುದು. ತನ್ನ ಭಾಷೆಯನ್ನು ಕವಿಯು ಈ ಆರು ರೀತಿಗಳಿಂದ ಪುಷ್ಟೀಕರಿಸುತ್ತಾನೆ:

(ಅ) ಸಾಮಾನ್ಯರ ಬಳಕೆಯಲ್ಲಿದ್ದ ಶಬ್ದಗಳನ್ನು ಉಪಯೋಗಿಸುತ್ತಾನೆ.

(ಬ) ಅನ್ಯಭಾಷಾ ಶಬ್ದಗಳನ್ನು ಪ್ರಯೋಗಿಸಿ ಅರ್ಥವನ್ನು ಬಿಂಬಿಸುತ್ತಾನೆ.

(ಕ) ರೂಪಕಾದಿಗಳನ್ನು ಪ್ರಯೋಗಿಸಿ ವಿಚಾರದ ಪರಿಣಾಮಗಳನ್ನು ತೀವ್ರಗೊಳಿಸುತ್ತಾನೆ.

(ಡ) ಅಲಂಕಾರಿಕ ಭಾಷೆಯನ್ನು ಉಪಯೋಗಿಸುತ್ತಾನೆ.

(ಇ) ವಿಚಾರವನ್ನು ಪೂರ್ಣ ಬಿಂಬಿಸುವುದಕ್ಕಾಗಿ ಹೊಸ ಶಬ್ದಗಳನ್ನು ಸೃಷ್ಟಿಸಿಕೊಳ್ಳುತ್ತಾನೆ.

(ಫ) ಕೆಲವೊಂದು ಶಬ್ದಗಳನ್ನು ತಿದ್ದಿ ಬಳಸಿಕೊಳ್ಳುತ್ತಾನೆ.

(೬) ರಂಗಪರಿಕರ:— (Spectacle) ರಂಗವಸ್ತುಗಳ ಕೊಲೆ ಮೊದಲಾದುವುಗಳನ್ನು ತೋರಿಸುವದರಿಂದ ನಾಟಕವು ರುದ್ರಭಯಾನಕವಾಗುತ್ತದೆ. ಕಥಾವಸ್ತುವಿನಲ್ಲಿ Peripety, Discovery ಗಳ ಜೊತೆಗೆ ಹೇಳಿದ Suffering ಇಲ್ಲಿ ಹೆಚ್ಚು ಅನ್ವಯಿಸುತ್ತದೆ. ಪ್ರೊಮಿಥಿಯಸ್‌ನ ಕಥೆಯಲ್ಲಿ ಅವನ ವ್ಯಕ್ತಿತ್ವದಿಂದ ಪ್ರಭಾವಿತರಾಗುವುದಕ್ಕಿಂತ, ರಣಹದ್ದುಗಳು ಅವನ ತಲೆಯನ್ನು ಕುಕ್ಕುವ ದೃಶ್ಯವನ್ನು ನೋಡಿ ಕನಿಕರಪಡುತ್ತೇವೆ.

ಒಟ್ಟಿನಲ್ಲಿ ಟ್ರ್ಯಾಜಿಡಿಯ ಕಾಲದ ಅಖಂಡತ್ವ, ಸ್ಥಳದ ಅಖಂಡತ್ವ, ಕಾರ್ಯದ ಅಖಂಡತ್ವ (Unity of time, place, oction) ಗಳನ್ನು ಕಾಯ್ದುಕೊಳ್ಳುವದು ಮಹತ್ತ್ವದ್ದು. ಗ್ರೀಕರಲ್ಲಿ ತೆರೆಗಳು ಇರಲಿಲ್ಲವಾದ್ದರಿಂದ, ಅವರಲ್ಲಿ ಅಖಂಡತ್ವದ ಪ್ರಶ್ನೆಯೇ ಬರಲಿಲ್ಲ. ಆದರೆ ಆಧುನಿಕ ಟ್ರ್ಯಾಜಿಡಿಗಳು ಈ ಅಖಂಡತ್ರಯವನ್ನು ಕಾಯ್ದುಕೊಂಡರೆ, ಅವು ಹೆಚ್ಚು ಪರಿಣಾಮಕಾರಿಗಳಾಗಬಲ್ಲವು.

———

ಮುಂಬೈಯಲ್ಲಿ ಕೋಗಿಲೆ

ಶ್ರೀ. 'ಜೀವಿ' ಕುಲಕರ್ಣಿ, ಮುಂಬೈ

೧

ವಸಂತ ಕಳೆಯಿತು, ವರ್ಷಾ ಬಂದಿತು.
ಮೌನವ ಧರಿಸಿತು ಕೋಗಿಲೆಯು—
ವೈಮನ ಮರೆಯುತ ಹಾಡುತಲಿದ್ದಿತು....
ಬಂಧಿಸಿಹುದು ಧೋಧೋ ಮಳೆಯು.

೨

ತಿನ್ನಲು ಮಾವಿನ ಚಿಗುರೇ ಇಲ್ಲ—
ಹಾಡಲು ಗಂಟಲು ಸರಿಯಿಲ್ಲ—
ಹಾಡೇನೆಂದರೆ ಕೇಳುವರಿಲ್ಲ—
ಇದ್ದರು,—ಹಾಡಲು ಮನಸಿಲ್ಲ !

೩

ಹಿಂದಕೆ ಕೋಗಿಲೆ ಹಳ್ಳಿಯೊಳಿತ್ತು,
ಎಲ್ಲೆಡೆ ಸ್ಫೂರ್ತಿಯು ತುಳುಕಿತ್ತು;
ಹಳ್ಳಿಯ ಹುಡುಗಿ,—ದನಗಾಹಿಗಳೋ
ಎಲ್ಲರ ಪರಿಚಯ ಇದಕಿತ್ತು.

೪

ಹಾರುತ ಬಂದಿತು ಮುಂಬೈನಗರಕೆ
ಇಲ್ಲಿ ಗುರುತಿಸವರಾರಿಹರು ?
ಗಿರಣಿಯ ಭೋಂಗಾನಾದದ ಗೊಂದಲ
ತುಂಬಿದೆ, ಯಾರದು ಕೇಳುವರು ?

೫

ಏನು ? ಗಾಯಕನ ಗಂಟಲು ಕೆಟ್ಟರೂ
ಹಾಡಲಾರನೇ ಒಂದು ಪದ ?
ಯಾವ ಕೋಗಿಲೆಯು ಎಲ್ಲಿಯೆ ಇದ್ದರು
ತುಳುಕಲಾರದೇ ಅದರ ಮುದ ?

೬

ಎಲ್ಲಿಗೆ ಹೋದರು ಸ್ಫೂರ್ತಿಯೇ ಇಲ್ಲ—
ಒದ್ದಾಡುತ್ತಿದೆ ದಿನಪೆಲ್ಲಾ;
ಏಳಂತಸ್ತಿನ ಮೇಲೇರಿದರೂ
ಆನಂದದ ಸುಳಿವೇ ಇಲ್ಲ !

೭

ಒಂದೆ ಸವನೆ ಮಳೆಹೊಡೆಯುತಲಿದ್ದರು
ದೇಹಕೆ ಬೆವರೇ ತಪ್ಪಿಲ್ಲ—
ಮುದುಕರು ಓಡುತ ಗಾಡಿಯ ಹಿಡಿವರು,
ಜೀವಕೆ ನೆಮ್ಮದಿ ದೊರೆತಿಲ್ಲ.

೮

ಎಲ್ಲೆಡೆ 'ಕ್ಯೂ'* ಕ್ಯೂ' ಕೂಗೇ ಕೂಗು—
ಕೋಗಿಲೆಯ 'ಕುಹೂ' ಕೇಳುವರಾರು ?
ಸಾಯುವುದೊಂದನು ಬಿಟ್ಟರೆ ಎಲ್ಲಕೆ
ಸಾಲು ಸಾಲಾಗಿ ನಿಲ್ಲುವರು—

೯

ಎಲ್ಲ ದೇಶ-ಭಾಷಾ-ಕುಲಗೋತ್ರವ
ಕುಸುಮ ಕೋಮಲೆಯರು ಇಲ್ಲಿಹರು—
ಮುಗ್ಧ ಹೂಗಳಿಗೆ ಬಣ್ಣವ ಬಳಿಯುತ
ವಾಸನೆ ಹೊಂಡದೊಳಿದ್ದಿಹರು.

೧೦

ಇವರ ತೊಂಡೆದುಟಿ ಕಂಡ ಒಡನೆಯೇ
'ಕಮ್ಯೂನಿಝುಂ' ನೆನಪಾಗುವುದು;
ಕೇಶರಾಶಿಗಳ 'ಬಾಬ್'ಕಟ್' ಕಂಡೊಡೆ
ಏಕೋ ಮನ ತತ್ತರಿಸುವುದು.

---

* Queue.

ಆಗಸ್ಟ್ ೧೯೬೦

೧೧

ಅಂಗಾಂಗದ ಸೌಂದರ್ಯವ ತುಳುಕಿಸಿ-
'ಸ್ಕರ್ಟು' ಬಂದಿತೋ ಎನಿಸುತಿದೆ—
ಅಪ್ಪಿತಪ್ಪಿ ಮಾತಾಡಿಸಿ ನೋಡಲು,
ಭೂ-ಪ್ರದಕ್ಷಣೆಯೆ ಆಗುತಿದೆ.

೧೨

ಹೆದರಬೇಡ ಎಲೆ ಮರಿಕೋಗಿಲೆಯೇ
ನಿನ್ನ ಆಟವೂ ನಡೆಯುವುದು—
'ಮಂಗನ ಆಟಕು' ಸಹಸ್ರ ಜನರಿರೆ
ನಿನ್ನ ಭಾಗ್ಯವೂ ತೆರೆಯುವುದು !

೧೩

ಮಹಡಿಯ ಮೇಲೆ ಮಹಡಿಗಳು ಏರಿವೆ;
ಆದರು ಎಲ್ಲಿಯು ಸ್ಥಳವಿಲ್ಲ—
ಮನೆಗೆ ಅತಿಥಿ ವಾಮನನು ಬಂದರೂ,
ತಲೆಯನೊಡ್ಡದೇ ಗತಿಯಿಲ್ಲ.

೧೪

ಕಸದ-ಸೂಡಿಗೂ ಬಣ್ಣ ಬಳಿದಿಡಲು
ಆಣೆಗೆ ಚವಲಿಗೆ ಮಾರುವುದು;
ಹೊಸ-ಮನ್ವಂತರ, ಹೊಸ ಜೀವನವಿದೆ—
ಅರಿತರೆ, ಬಾಳುವೆ ನಡೆಯುವುದು.

೧೫

ನೆರೆಮನೆಯವರ ಪರಿಚಯವಿಲ್ಲ—
ಯಾರೋ ಎಂತೋ ಗೊತ್ತಿಲ್ಲ—
ಸಂಟರ-ಇಸ್ಪರ ಮುಖವನು ನೋಡಲು
ಸಮಯವೆಂಬುದುಳಿಯುವುದಿಲ್ಲ.

೧೬

ನೀನೂ ಕಾಲಿಗೆ ಗೆಜ್ಜೆಯ ಕಟ್ಟು—
ಹಿತವಾಗುವ ಬಣ್ಣವ ಬಳಿದು,
ಹೊಸ ಜೀವನದೀ ನಾಟ್ಯಾರಂಭದಿ—
ಕುಣಿಯಬೇಕು ನೀ ನಟನೆಂದು.

೧೭

ಹಣವೊಂದಿದ್ದರೆ ಸಾಕೀ ಊರಲಿ—
ಏನು ಬೇಕು ಅದ ಕೊಳಬಹುದು !
ಹೋದಜೀವವೊಂದನ್ನು ಬಿಟ್ಟರೆ—
ಎಲ್ಲವು ಇಲ್ಲಿಯೆ ದೊರೆಯುವುದು.

೧೮

ಕಲ್ಲಿನಲ್ಲಿ ಗಂಗೆಯ ಸೆಲೆ ಹರಿದಿದೆ
ಕಬ್ಬಿಣದಲ್ಲಿಯು ಸಂಗೀತ—
ಅಂಭೋನಿಧಿಯಿದೊ ಆರ್ಭಟಿಸುತ್ತಿದೆ,
ಸೌಂದರ್ಯವು ಇದೆ ಜೀವಂತ!

೧೯

ಕಾಲನ ಚಕ್ರವು ತಿರುಗುತ್ತಿರುವುದು
ಇಮ್ಮಡಿ ನೂರ್ಮಡಿ ವೇಗದಲಿ—
ಬ್ರಹ್ಮಾಂಡದ ಈ ಹಿರಿಯ ಗಾಲಿಯಲಿ
ಮುಂಬೈ ಉಳಿಯಿತೆ ಕೀಲದಲಿ ?

೨೦

ಹಾಡುತಲಿರುವುದೆ ನಿನ್ನಯ ಧರ್ಮ—
ಕೇಳುವವರು ಕೇಳಲಿ ಬಿಡಲಿ—
ಹಳ್ಳಕೊಳ್ಳ ಸಾಗರದ ತೆರೆಗಳಾ,
ಅರುಣ ಕಾಂತಿಗಳ ಕೃಪೆಯಿರಲಿ.

ಧೂಮಕೇತು

(ಸಣ್ಣಕಥೆ)

ಕು. ಎಂ. ಕೆ. ಉಮಾದೇವಿ, ಕನಕಪುರ*

ಕುಲೀನನೆಂದು ಹುಟ್ಟಿದ ಮನುಷ್ಯ, ಸಮಾಜದಲ್ಲಿ ಒಂದು ಬಗೆಯ ಸಾಂಪ್ರದಾಯಿಕ ಮನ್ನಣೆಯನ್ನು ಪಡೆಯುತ್ತ ಬಂದಿದ್ದಾನೆ. ಇಂದಿನ ಲೌಕಿಕಬುದ್ಧಿ ಗುಣಕ್ಕೆ ಮನ್ನಣೆ ಸಲ್ಲಿಸಬೇಕೆನ್ನುತ್ತಿದೆ. ನಡೆದಿದೆ ಹೋರಾಟ! ಯಾರು ಗೆಲ್ಲುವರೋ ನೋಡಬೇಕು.

ನಾನು ಸತ್ಯಕಾಮ ಜಾಬಾಲಿಯ ಕತೆಯನ್ನು ಆಗತಾನೆ ಓದಿ ಮುಗಿಸಿ ಪುಸ್ತಕ ಮುಚ್ಚಿಟ್ಟೆ. ತತ್‌ಕ್ಷಣ ನನಗೆ ಮೂರ್ತಿಯ ನೆನಪಾಯಿತು:—

ಮೂರ್ತಿ ನಾನು ಹೈಸ್ಕೂಲ್ ಗೆಳೆಯರು. ಹೈಸ್ಕೂಲಿಗೆ ಸೇರಿದ ಮೊದಲ ದಿನವೇ ಮೂರ್ತಿ ನನ್ನ ಪಕ್ಕದಲ್ಲಿ ಕುಳಿತ. ಆಗ ಪ್ರಾರಂಭವಾದ ಗೆಳೆತನ ದಿನದಿನಕ್ಕೆ ಬೆಳೆಯಿತು. ಮೂರ್ತಿಯು ಗೆಳೆತನದಿಂದ ನನಗೂ ತುಂಬ ಉಪಕಾರವಿದ್ದಿತು. ಮೂರ್ತಿ ಸಭ್ಯ; ಜಗಳ-ದೊಂಬಿಗೆ ಹೋಗುವವನಲ್ಲ. ಅಲ್ಲದೆ ಎಲ್ಲ ಪಾಠಗಳಲ್ಲೂ ಬುದ್ಧಿವಂತ.

ನನಗೆ ಚರಿತ್ರೆ ಭೂಗೋಳವೆಂದರೆ ಮೊದಲಿನಿಂದಲೂ ತಲೆಶೂಲಿ. ನಮ್ಮ ಭೂಗೋಳದ ಉಪಾಧ್ಯಾಯರು ಬಹು ಶಿಸ್ತಿನವರು; ಉತ್ತರ ಹೇಳದಿದ್ದರೆ ಬೆಂಚಿನ ಮೇಲೆ ನಿಲ್ಲಿಸುತ್ತಿದ್ದರು. ನನ್ನನ್ನು ಪ್ರಶ್ನೆ ಕೇಳಿದಿನ, ಮೂರ್ತಿ ಸರಿಯುತ್ತರವನ್ನು ನೋಟಬುಕ್ಕಿನಲ್ಲಿ ಬರೆದು ನನ್ನೆದುರಿಗಿಡುತ್ತಿದ್ದ.

ಮೂರ್ತಿ ಆಟದಲ್ಲೂ ಗಟ್ಟಿಗ. ಫುಟ್‌ಬಾಲ್ ಅವನ ನೆಚ್ಚಿನ ಆಟ. ನಮ್ಮ ಫುಟ್‌ಬಾಲ್‌ಟೀಮಿಗೆ ಅವನೇ ಕ್ಯಾಪ್ಟನ್.

ಮೂರ್ತಿಯ ವಿನಯ, ವಿಧೇಯತೆ, ಗುರುಹಿರಿಯರಲ್ಲಿದ್ದ ಅವನ ಭಕ್ತಿ—ನೋಡಿ, ನನ್ನ ತಾಯಿ ಸಹ ಮೆಚ್ಚಿಕೊಂಡು, 'ಅವನ ಸಹವಾಸ ಸಿಕ್ಕಿದ್ದು ನನ್ನ ಪುಣ್ಯ ಎನ್ನುತ್ತಿದ್ದರು.

ಈ ಮಧ್ಯೆ, ಮೂರ್ತಿಯ ಬಾಳ ಬಾನಿನಲ್ಲಿ ಧೂಮಕೇತುವಿನಂತೆ ಮೂಡಿಬಂದವನೇ ಮುರಳಿ.

ನಾವು ಹೈಸ್ಕೂಲಿನ ಎರಡನೆಯ ತರಗತಿಯಲ್ಲಿದ್ದಾಗ ಮುರಳಿ ನಮ್ಮ ಶಾಲೆಗೆ ಸೇರಿದ. ಉರಿಗಣ್ಣಿನ ಮುಂಗೋಪಿ, ಚಲವಾದಿ—ಈ ಮುರಳಿ. ಮುಷ್ಕರ ಹೂಡುವುದರಲ್ಲಿ ಉಪಾಧ್ಯಾಯರ ದೋಷಗಳನ್ನು ಎತ್ತಿ ತೋರುವುದರಲ್ಲಿ ಪ್ರವೀಣ. ತರಗತಿಗೆಲ್ಲಾ ತಾನೇ ಮುಖಂಡನಾಗಬೇಕೆಂದು ಅವನ ಹಂಬಲಿಕೆ. ಮೂರ್ತಿಯ ಜನಪ್ರಿಯತೆ ಕಂಡು ಅವನಿಗೆ ತುಂಬಾ ಕರುಬು. ತರಗತಿಯಲ್ಲೂ ಆಟದ ಮೈದಾನಿನಲ್ಲೂ ತನ್ನ ಜಗಳಗಂಟತನದಿಂದ ಬೇಗನೆ ಕುಪ್ರಸಿದ್ಧನಾದ.

ಆಟದ ಮೈದಾನಿನಲ್ಲಿ ಮುರಳಿಯ ಕೀಟಲೆ ಅಸಾಧ್ಯವಾಗಿತ್ತು. ಅನ್ಯಾಯದಾಟವಾಡಿ, ನ್ಯಾಯವೆಂದು ಸಾಧಿಸಿ ಗಲಾಟೆ ಮಾಡುವ. ಮೂರ್ತಿ ಎಷ್ಟೋ ವೇಳೆ ತಾನೇ ಸೋತು ಶಾಂತಿ ಸ್ಥಾಪಿಸುತ್ತಿದ್ದ; ಆದರೆ ಒಮ್ಮೆ ಅವನು ಸಹ ಸೈರಣೆ ಕಳೆದುಕೊಂಡು ಅವನೊಡನೆ ಜಗಳವಾಡಿದ. ಅದೇ ಅವನಿಗೆ ಮೂಲವಾಯಿತು.

ನ್ಯಾಯವಾಗಿ ಮೂರ್ತಿಯದೇನೂ ತಪ್ಪಿರಲಿಲ್ಲ. ಮುರಳಿ, ಮೂರ್ತಿ ಎದುರುಬದುರು ಟೀಮಿನ ಮುಖಂಡರು; ಫುಟ್‌ಬಾಲ್ ಆಡುತ್ತಿದ್ದರು. ಮೂರ್ತಿಯ ಕಡೆಯ ಗೋಪಿ, ಫುಟ್‌ಬಾಲನ್ನು ಕೈಯಿಂದ ಮುಟ್ಟಿ ಕಳಕ್ಕೆ ಕೆಡವಿದನೆಂದು ಮುರಳಿ ಜಗಳ ತೆಗೆದ. ಇಲ್ಲವೆಂದು ವಾದಿಸಿದ ಗೋಪಿ; ಮುರಳಿ ಗೋಪಿಯ ಕೆನ್ನೆಗೆ ನಾಲ್ಕೇಟು ಬಿಗಿದ.

ಮೂರ್ತಿಗೆ ಸಿಟ್ಟುಬಂದುದನ್ನು ನಾನು ಅದೇ ಮೊದಲು ನೋಡಿದ್ದು! ಗೋಪಿಯನ್ನು ಬಿಡಿಸಿ, ಅತ್ತ ಸರಿಸಿ, ಮೂರ್ತಿ ಮುರಳಿಯೊಡನೆ ಕೈಕೈಮಿಲಾಯಿಸಿ ಜಗಳವಾಡಿದ. ಡ್ರಿಲ್ ಮೇಷ್ಟ್ರು ಬಂದು ಜಗಳಬಿಡಿಸಿದರು. ಗೋಪಿಯದು ತಪ್ಪಿಲ್ಲವೆಂದು ಮುರಳಿಯ ಕಡೆಯವರೂ ಹೇಳಿದರು. ಮುರಳಿಗೆ ತುಂಬಾ ಅವಮಾನವಾಯಿತು.

ಮೂರ್ತಿ ಮಾತ್ರ ಪೆಚ್ಚಾಗಿ ನಿಂತಿದ್ದ.

"ಮನೆಗೆ ಹೋಗೋಣ, ನಡಿಯೋ"—ಅಂದೆ.

"ನಾನು ತುಂಬಾ ತಪ್ಪುಮಾಡಿ ಬಿಟ್ಟೆ. ಶ್ಯಾಮು, ನಾನು ಡುಡುಕೆ ಕೈಮಾಡಿದೆ. ಆಟದಲ್ಲಿ ಜಗಳ ಆಡೋದು ಆಟಗಾರರಿಗೆ ಘನತೆಯಲ್ಲ"—ಎಂದ ಪಶ್ಚಾತ್ತಾಪದಿಂದ.

"ಇಲ್ಲ. ನಿನ್ನದಲ್ಲ ತಪ್ಪು, ಮುರಳೀದು! ಗೋಪಿಯ ರಕ್ಷಣೆಗೆ ಧಾವಿಸಿದ್ದು ನಿನ್ನ ಕರ್ತವ್ಯವೇ ಸರಿ."

"ಆದರೆ ನನ್ನದೂ ತಪ್ಪಿದೆ. ಮುರಳಿಯ ಕ್ಷಮೆ ಕೇಳಿ ಅವನ ಸ್ನೇಹಗಳಿಸುವವರೆಗೂ ನನಗೆ ಸಮಾಧಾನವಿಲ್ಲ. ಅವನು ಹಾಸ್ಟೆಲಿನೊಳಕ್ಕೆ ಹೋಗಿದ್ದಾನೆ. ಹೊರಗಡೆಗೆ ಬರಲೀಂತ ಕಾಯ್ತಿದ್ದೇನೆ."

ಮೂರ್ತಿಗೆ ಗಾಂಧೀಸಾಹಿತ್ಯವನ್ನು ಓದಲು ಕೊಟ್ಟಿದ್ದೆ. ಅದರ ಪ್ರಭಾವ—ಎಂದುಕೊಂಡೆ.

ಮುರಳಿ ಮುಖದುಮ್ಮಿಸಿಕೊಂಡೇ ಹೊರಗಡೆಗೆ ಬಂದ. ಮೂರ್ತಿಯನ್ನು ಕಂಡು ಮುಖವನ್ನು ಬೇರೆಡೆಗೆ ತಿರುಗಿಸಿದ. ಮೂರ್ತಿ ತಾನೇ ಹೋಗಿ ಅವನಿಗೆ ಅಡ್ಡಾದ.

* ಈ ಕಥೆಯನ್ನು ಕುಮಾರಿ ಉಮಾದೇವಿಯರೇ ಬರೆದುವಾಗಿದ್ದರಿ ನನಗೆ ತುಂಬ ಸಂತೋಷ. ಸಂ. ಜ. ಧಾ.

"ನನ್ನ ಕ್ಷಮಿಸು ಮುರಳಿ! ನಾನು ಕೋಪದಲ್ಲಿ ನೈಮರೆತು ನಿನಗೆ ನೋವುಮಾಡಿದ್ದೇನೆ. ತಪ್ಪುಗಳಿಗೆ ಎಂದು, ಈ ಘಟನೇನ ಮರೆತು, ಮೊದಲಿನಂತೆ ಗೆಳೆಯರಾಗಿರೋಣ?"

—ಎಂದು ಸ್ನೇಹಹಸ್ತವನ್ನು ನೀಡಿದ.

ಮುರಳಿ ಅನಿಶ್ಚಯತೆಯಿಂದ ಅತ್ತಿತ್ತ ನೋಡಿದ. ಅವನ ಗೆಳೆಯರೆಲ್ಲಾ 'ಒಳ್ಳೆಯ ಆಟಗಾರರಂತೆ ಈ ಕಹಿ ಘಟನೇನ ಮರೆತು ಸ್ನೇಹಿತರಾಗಿರಿ' ಎಂದು ಒತ್ತಾಯಮಾಡಿದರು.

ಬಹು ಔದಾರ್ಯ ತೋರಿಸುವವನಂತೆ ಗತ್ತಿನಿಂದ 'ಅಯ್ತು' ಎಂದು ಕೈಕುಲುಕಿದ. ಮೂರ್ತಿ, ಹೃದಯದ ಹೊರೆ ಕಳೆದುಕೊಂಡಂತೆ ಹರ್ಷಿತನಾಗಿ, ಪಕ್ಕದಂಗಡಿಯಿಂದ ಪೆಪ್ಪರ್‌ಮೆಂಟನ್ನು ತಂದು ನಮಗೆಲ್ಲಾ ಹಂಚಿದ.

ಈ ಸಣ್ಣ ಘಟನೆಯಿಂದ, ಶಾಲೆಯಲ್ಲಿ ಮೂರ್ತಿಯ ಘನತೆ ಮತ್ತೂ ಹೆಚ್ಚಿತು.

ಈ ಕಹಿ ಪ್ರಸಂಗವಾಗಿ ಎರಡು ವಾರವಾಗಿರಬಹುದು. ಮುರಳಿ ಏನೋ ದೊಡ್ಡ ಗುಟ್ಟು ಹೇಳುವವನಂತೆ ನನ್ನನ್ನು ಒತ್ತಟ್ಟಿಗೆ ಕರೆದ:

"ಶ್ಯಾಮೂ, ನಿನಗೂ ಮೂರ್ತಿಗೂ ತುಂಬಾ ಮೋಸ್ತಿ ಅಲ್ಲೇ? ಮೂರ್ತಿಯ ತಾಯೀನ ನೀನು ನೋಡಿದೀಯಾ?"

"ಇಲ್ಲಪ್ಪಾ, ನಾನವನ ಮನೆಗೇ ಹೋಗಿಲ್ಲ."

"ಹೋಗಲಿ, ಅವನ ತಂದೆ ಯಾರು, ಏನು ಗೊತ್ತಾ?"

"ಅವನ ತಂದೆ ಇಲ್ಲ. ಸ್ಕಾಲರ್‌ಷಿಪ್ ಫಾರ್ಮಿನಲ್ಲಿ ತಾಯಿಯೇ ಪೋಷಕರು—ಅಂತಾ ಹಾಕಿದ್ದರು. ನಾನು ಹೆಚ್ಚಾಗಿ ಅದನ್ನೆಲ್ಲಾ ವಿಚಾರಿಸಿಲ್ಲ. ಏಕೆ?"

"ಅಯ್ಯೋ ಬೆಪ್ಪೇ! ನೀನು ಹಸುಗೂಸಿನಂತೋನೋ! ಅವನ ತಂದೆ ಯಾರು ಅಂತಾ ಅವನ ತಾಯಿಗೂ ಗೊತ್ತಿಲ್ಲ. ಅವನ ತಾಯಿ ಸೂಳೆ ಕಣೋ!"

"ಅಂ" ನಾನು ಸಿಡಿಲೆರಗಿದವನಂತೆ ಸ್ತಂಭಿತನಾಗಿ ನಿಂತೆ.

"ಹೌದಪ್ಪಾ. ನಾನೆಲ್ಲಾ ಪತ್ತೆಮಾಡಿದ್ದೇನೆ. ಇವನಿಗೊಬ್ಬ ತಮ್ಮ, ಒಬ್ಬಳು ತಂಗಿ ಇದ್ದಾರೆ. ತಾಯಿ ಸಂಸ್ಥಾದನೆಯಿಂದಲೇ ಇವರ ಜೀವನ ನಡೀತಿದೆ. ಹಾಗಿಲ್ಲದಿದ್ದರೆ ನನ್ಮೇಲೆ ಕೈಮಾಡೋನೆ?"

ಸುಳ್ಳಿರಬೇಕು."

ಇಲ್ಲ. ಸುಳ್ಳಲ್ಲ. ನಮ್ಮನೆ ಕೆಲಸದವಳು ಅವನ ಮನೆಗೆ ಹಾಲು ಹಾಕ್ತಾಳೆ. ಅವಳೆಲ್ಲವನ್ನೂ ಕಣ್ಣಾರ ಕಂಡಿದಾಳಂತೆ. ಸರಿಯಾದ ಅಪ್ಪ ಅಮ್ಮಂದರಿಗೆ ಹುಟ್ಟಿದವನಾಗಿದ್ದರೆ ಹಾಗೇಕೆ ಕಾದಾಡೋನು?"

ನನ್ನ ಸ್ನೇಹಧರ್ಮ ಸುಮ್ಮನಿರಗೊಡಲಿಲ್ಲ.

"ಮೂರ್ತಿ ತುಂಬಾ ಒಳ್ಳೇಯೋನೋ. ಅದೇನೋ ಆ ದಿನ ಮಾತ್ರ ಸಿಟ್ಟಾದ, ಅಷ್ಟೇ."

"ಬಿಡೋ, ಕುಲ ಒಳ್ಳೇದಾದರೆ ಗುಣ ಒಳ್ಳೇದಾಗುತ್ತೆ! ಹೀನಸುಳಿ ಬೋಳಿಸಿದರೆ ಹೋಗುತ್ತೇ?"—ಎಂದು ಅಪಹಾಸ್ಯನಾಗಿ ನಕ್ಕ.

ಮುರಳಿ ಈ ಸುದ್ದಿಯನ್ನು ನನ್ನೊಡನೆ ಹೇಳಿದಂತೆ ಎಲ್ಲರೊಡನೆಯೂ ಹೇಳಿದ್ದ. ಎಲ್ಲರೂ ಕುತೂಹಲದಿಂದ, ಆಸಕ್ತಿಯಿಂದ ಕೇಳಿ, ನಿಜನೆಂದು ನಂಬಿದ್ದರು.

ಮೂರ್ತಿಯ ಮುಖ ಕಂಡೊಡನೆ ಪಿಸಿಪಿಸಿ ಮಾತನಾಡಿಕೊಳ್ಳುವುದು, ಬೆನ್ನಹಿಂದೆ ಅಡಿಕೊಂಡು ನಗುವುದು, ಮುರುಳಿಯ ವ್ಯಂಗ್ಯ ಮಾತುಕತೆ ಎಲ್ಲವನ್ನೂ ನಾನು ಗಮನಿಸಿದೆ. ಆದರೆ ಮೂರ್ತಿಗೆ ಆ ಕಹಿ ವಿಷಯವನ್ನು ಹೇಗೆ ಹೇಳುವುದೆಂದು ಸುಮ್ಮನಿದ್ದೆ.

ಅವನ ತಾಯಿಯನ್ನೊಮ್ಮೆ ಕಂಡುಬರಬೇಕೆಂದು ನನಗೂ ಕುತೂಹಲ. ಅವನ ಮನೆ ಎಲ್ಲಿದೆಯೆಂದು ವಿಚಾರಿಸಿ, ಪುಸ್ತಕ ಕೊಡುವ ನೆಪಮಾಡಿಕೊಂಡು ಅವನ ಮನೆಗೆ ಹೋದೆ. ಮನೆ ಚಿಕ್ಕದಾಗಿದ್ದರೂ ಚೊಕ್ಕವಾಗಿತ್ತು. ಬಾಗಿಲಿಗೆಲ್ಲಾ ಮಣಿಯ ತೋರಣ. ಗೋಡೆಗಳ ಮೇಲೆ ಅಂದವಾದ ಪಟಗಳು.

ಮುರಳಿಯಿಂದ ಮಾತುಗಳು ನನ್ನ ತಲೆಯನ್ನು ಗೊಂದಲಗುಟ್ಟಿದುವು.

ಮೂರ್ತಿಯ ತಾಯಿ ನಾನಿದ್ದ ಕೋಣೆಯೊಳಕ್ಕೆ ಬಂದರು. ನನ್ನ ಅಸಕ್ತಬುದ್ಧಿಗೆ ಸಹ ಅವರ ಚೆಲುವೆ ಎನ್ನಿಸಿತು. ತೆಳ್ಳಗೆ ಎತ್ತರವಾಗಿದ್ದಳು. ಮೂರ್ತಿಯಂತೆಯೇ ಸೌಮ್ಯ ಮುಖಕಳೆ. ನೀಲಿಸೀರೆ ಅವರ ಶುಭ್ರ ವರ್ಣವನ್ನು ಎತ್ತಿ ತೋರಿಸುತ್ತಿತ್ತು. ಎತ್ತರವಾದ ಹಣೆಗೆ ದೃಷ್ಟಿಬಟ್ಟಿನಂತೆ ಸಾದಿನ ತಿಲಕ.

"ನೀನು ಮೂರ್ತಿಯ ಆಪ್ತಸ್ನೇಹಿತನಂತೆ. ತುಂಬಾ ಸಂತೋಷಪ್ಪಾ, ಮೂರ್ತಿ ಜೆನ್ನಾಗಿ ಓದ್ತಾನೆಯೇ? ಅವನ ಮೇಲಿನ ಭರವಸೆಯಿಂದಲೇ ನಾನೂ ಕಾಲ ನೂಕ್ತಾ ಇದೀನಪ್ಪಾ!"

ಅದೇಕೋ, ಆಕೆಯನ್ನು ನೋಡಿ ನನಗೆ ಮುರಳಿಯ ಮಾತೆಲ್ಲಾ ಸುಳ್ಳೆಂದೆನಿಸಿತು. ಎಷ್ಟು ಪ್ರೀತಿ, ಎಷ್ಟು ವಿನಯ, ಮೂರ್ತಿಯ ಬಗ್ಗೆ ಎಷ್ಟು ಪ್ರೀತಿ-ವಿಶ್ವಾಸ, ಮೂರ್ತಿಯ ಬಗ್ಗೆ ಮಾತನಾಡುವಾಗ ಕಣ್ಣುಗಳಲ್ಲಿ ಎಂತಹ ವಾತ್ಸಲ್ಯದ ಜ್ಯೋತಿ!

"ಮೂರ್ತಿಯೇ ಕ್ಲಾಸಿಗೆಲ್ಲಾ ಫಸ್ಟ್. ಇವನ ತಂದೆ ಇಲ್ಲವೆ!"

"ಇಲ್ಲಪ್ಪಾ ನನ್ನ ದುರದೃಷ್ಟ. ಹತ್ತು ವರ್ಷವಾಯ್ತು—ಬಸ್ ಆಕ್ಸಿಡೆಂಟ್‌ನಲ್ಲಿ ಅವರು ಹೋಗ್ಬಿಟ್ರು. ಅವರಿದ್ದರೆ ನನಗೆ ಯಾವ ಯೋಚನೆ ಇರ್ತಾ ಇತ್ತಪ್ಪಾ?"—ಎಂದು ನಿಡುಸುಯ್ದರು. ನೆನಪಿನ ನೋವಿನಿಂದ ಆಕೆಯ ಕಣ್ಣಲ್ಲಿ ನೀರು ಬಂದಿತು.

ಆಕೆಯ ಬಗ್ಗೆ ಮರುಗಿ, ಮುರಳಿಯ ಬಗ್ಗೆ ಸಂತಾಪ ನನ್ನೆದೆಯಲ್ಲಿ ಉಕ್ಕೇರಿತು. ನನ್ನ ತಾಯಿಯೆದುರಿನಲ್ಲಿ ಎಲ್ಲವನ್ನೂ ಹೇಳಿದೆ.

"ಅಮ್ಮಾ, ಮೂರ್ತಿಯ ತಾಯಿಗೆ ಅವನನ್ನು ಕಂಡರೆ ಎಷ್ಟು ಪ್ರೀತಿ ಅಂತೀಯಾ? ನಿನಗೂ ನನ್ಮೇಲೆ ಬಹುಶಃ ಅಷ್ಟಿಲ್ಲ! ಮುರಳಿ

ಆಕೆಯನ್ನೇ ಏನೇನೋ ಅಂತಾನಲ್ಲ—ಅವನ ನಾಲಿಗೇಲಿ ಹುಳು ಸುರಿಯದಿರುತ್ತೆಯೇ!"

ಅಮ್ಮ ಸಹಾನುಭೂತಿ ತೋರುವಳೆಂದಿದ್ದೆ. ಅವಳು ಗಂಭೀರವಾಗಿ "ಸರಿಬಿಡು, ನಿನ್ನ ಮೇಲೂ ಮುಂಕುಬೂದಿ ಎರಚಿದಾಳೆ! ಏನೂ ಅರಿಯದ ನೀನೇ ಆಕೆ ನನಗಿಂತಲೂ ಹೆಚ್ಚು ಪ್ರೀತಿ ಮಾಡ್ತಾಳೆ ಅನ್ನುವಾಗ, ಗಂಡಸರು ಮರುಳಾಗೋದು ಆಶ್ಚರ್ಯವೇನು? ಹಾಲಿನ ಕರಿಯಮ್ಮ ಮೊನ್ನೆ ಹಾಗಂದಳು. ಸುಳ್ಳೋ ನಿಜವೋ ಅಂತ ಅನುಮಾನಿಸುತ್ತಿದ್ದೆ—ನಿಜ ಅಂತ ಆ ದಿನ ನಂಬಿಕೆಯಾಯ್ತು."

—ಎಂದಾಗ ನಾನು ಟಕಮಕ ಕಣ್ಣು ಹೊಡೆದೆ. ಅಮ್ಮನ ಪ್ರೀತಿಯ ಬಗ್ಗೆ ಲಘುವಾಗಿ ಮಾತನಾಡಿದುದರಿಂದ, ಅಮ್ಮನಿಗೆ ಸಿಟ್ಟೇರಿಕೆ! ಪರರ ಕಷ್ಟ ಕಂಡು ಕಣ್ಣೀರಿಡುವ ಅಮ್ಮ, ಇಷ್ಟು ಕಠಿಣವಾಗಿ ಅನ್ನಬೇಕಾದರೆ!

ನನಗೆ ಕರಿಯಮ್ಮನ ಮೇಲೆ ಮಹತ್ತರ ಸಿಟ್ಟು ಬಂದಿತ್ತು. ಇವಳಲ್ಲವೇ ಎಲ್ಲೆಡೆಯೂ ಅಪಪ್ರಚಾರ ಮಾಡುತ್ತಿರುವಳು? ಮುರಳಿಯ ಮನೆಗೆಲಸದವಳೂ ಇವಳೇನೇ! ಸಂಜೆ ಕರಿಯಮ್ಮ ಹಾಲು ಹಾಕಿದ ನಂತರ ಹೊರಗಡೆಗೆ ಕರೆದು ತರಾಟೆಗೆ ತೆಗೆದುಕೊಂಡೆ.

"ನನ್ನ ಮೇಲ್ಯಾಕೆ ಕೋಪಮಾಡ್ತಿ, ಶ್ಯಾಮುಪ್ಪ! ನಾ ಏನು ಹುಟ್ಟಿಸಿಕೊಂಡು ಸುಳ್ಳಾಡಿದೆನೇ? ಆ ರಸ್ತೆಯವರೆಲ್ಲಾ ಹಾಗೇ ಮಾತಾಡೋರು—ಆ ಮೇಲಿನ ಮನೆಯ ಸಾಹುಕಾರ ಸಹಾ ಅಲ್ಲೇ ಸುತ್ತಾಡೋದನ್ನ ನಾ ನೋಡಿಲ್ಲೆ? ಆ ಮನೆ ಕೊಂಡುಕೊಟ್ಟು ಸಂಸಾರ ತೂಗಿಸೋರು ಆ ಸಾಹುಕಾರರಂತೆ." ನಾನು ಸೊಂಡು ಧೈರ್ಯದಿಂದ ಹೇಳಿದೆ:—

"ಗಂಡ ಬಸ್‌ಆಕ್ಸಿಡೆಂಟ್‌ಲಿ ಹೋದ್ಮೇಲೆ, ಇನ್ಶೂರೆನ್ಸ್ ಹಣದಲ್ಲ ಮನೇನ ಕೊಂಡಿದಾರೆ. ಮನುಷ್ಯನಿಗೆ ಮನುಷ್ಯರು ಕಷ್ಟಕ್ಕಾಗದೆ ಮರಗಳಾಗುತ್ತನೇನು? ಸಾಹುಕಾರರು ಸಹಾಯ ಮಾಡ್ತಾ ಇರಬಹುದು; ನೀನು ಅಷ್ಟಕ್ಕೇನೆ ಆಕೆ 'ಸೂಳೆ' ಅಂತಾ ಊರಿಗೆಲ್ಲಾ ಸಾರೋದೇನು?"

ಕರಿಯಮ್ಮ ಜಾಣಾಕ್ಷೆ. ಹಸ್ತನೋಡಿ ಮಸ್ತಿ ಅಳೆಯುವಂತಹವಳು.

"ಇಲ್ಲಪ್ಪಾ, ನಾ ಹಾಗೆಲ್ಲಾ ಅಂದಿಲ್ಲ. ನೀ ಅಂದಂತೆ ಬೇರೆ ಗಂಡು ದಿಕ್ಕಿಲ್ಲ ಅಂತಾ ಆಕೆ ಸಾಹುಕಾರರ ಸಹಾಯ ಕೇಳಿರಬಹುದು. ಆಕೇನೂ ಬಹಳಾ ಧಾರಾಳಿ. ಮೂರ್ತಪ್ಪನೂ ತುಂಬಾ ಯೋಗ್ಯ."

* * * *

ಶಾಲೆಯಲ್ಲಿ ಮೂರ್ತಿ ಮುಂಕಾಗಿರುವುದನ್ನು ಗಮನಿಸಿದೆ. ನಾನು ತುಂಬಾ ಒತ್ತಾಯ ಮಾಡಿದ ಮೇಲೆ, ಮನೆಯ ಮೇಲೆ ನಾಲ್ಕಾರು ದಿನಗಳಿಂದ ಕಲ್ಲುಬೀಳುತ್ತಿರುವುದಾಗಿಯೂ, ರಾತ್ರಿ ಯಾರೋ ಬಾಗಿಲು ತಟ್ಟಿ ಓಡಿಹೋಗುವುದಾಗಿಯೂ ಹೇಳಿದ.

ಇದರಲ್ಲಿ ಮುರಳಿಯ ಕೈವಾಡವಿರಬಹುದೇ—ಎಂದು ನನಗೆ ಅನುಮಾನವಾಯಿತು. ಆದರೆ ನಾನೇನೂ ಮಾತನಾಡಲಿಲ್ಲ.

ಅಕ್ಕನ ಮದುವೆಗೆಂದು ಒಂದುವಾರ ರಜೆತೆಗೆದುಕೊಂಡೆ. ಅನಂತರ ಶಾಲೆಗೆ ಹೋದಾಗ, ಮೂರ್ತಿಯಲ್ಲಾದ ಮಾರ್ಪಾಟನ್ನು ಗಮನಿಸಿ ಗಾಬರಿಯಾದೆ. ಯಾರೊಡನೆಯೂ ಮಾತುಕತೆಯಿಲ್ಲ. ಪಾಠ ಪ್ರವಚನಗಳಲ್ಲೂ ನಿರಾಸಕ್ತ. ಆಟಕ್ಕೆ ನಿಲ್ಲದೆ ಸೀದಾ ಮನೆಗೆ ಹೋಗುತ್ತಿದ್ದ. ಮುರಳಿ ಹೇಳಿದುದನ್ನೆಲ್ಲಾ ಯಾರಾದರೂ ಅವನಿಗೆ ಹೇಳಿರಬಹುದೇ—ಎಂದು ಅನುಮಾನಿಸಿದೆ.

ಮೂರ್ತಿಯ ಕೆಮಿಸ್ಟ್ರಿನೋಟ್ಸನ್ನು ಮನೆಗೆ ತೆಗೆದುಕೊಂಡು ಹೋದೆ; ಕಡೆಯ ಪುಟದಲ್ಲಿ ಸಣ್ಣಗಾದರೂ ಸ್ಪಷ್ಟವಾದ ಬರೆವಣಿಗೆಯಲ್ಲಿದ್ದ ವಾಕ್ಯಕಂಡು ನನಗೆ ಚೇಳುಕುಟುಕಿದಂತಾಯ್ತು.

"ಸಾಲಗಾರನಾದ ತಂದೆ, ಜಾರಿಣಿಯಾದ ತಾಯಿ—ತಾಯಿ ತಂದೆಯರಲ್ಲ—ಮಗನ ಶತ್ರುಗಳು"—ಎಂದಿತ್ತು.

ಮೂರ್ತಿಗೆ ಯಾರೋ ಹೇಳಿರುವುದೇ ನಿಜ. ಮುರಳಿಯೇ ನೇರವಾಗಿ ಅಂದಿರಬಹುದೇ? ಓಹೋ, ಮುರಳಿ ಯಾವ ಕೇಳ್ಕಟ್ಟಿಕ್ಕಾದರೂ ಇಳಿಯಬಲ್ಲ ವ್ಯಕ್ತಿ.

ಮಾರನೆಯ ದಿನ ಇಂಗ್ಲಿಷ್ ಟೀಚರ್ ಟೆಸ್ಟ್ ಅಂಕಗಳನ್ನು ಹೇಳಿದರು. ಮೂರ್ತಿಗೆ ಹದಿನೆಂಟು, ಮುರಳಿಗೆ ಆರು ಬಂದಿತ್ತು. ನಾನು, ಮೂರ್ತಿ ಕಡೆಯಲ್ಲಿ ಕ್ಲಾಸಿನಿಂದ ಹೊರಬರುತ್ತಿದ್ದೆವು. ಮುರಳಿ ಆಕಡೆಯಿಂದ ಬರುತ್ತಾ, ಯಾರಿಗೋ ಅನ್ನುವವನಂತೆ ಅಂದ:

"ಈ ಸೂಳೇ ಮಕ್ಕಳು ತಲೇಲಿ ಮೆರೀತವೆ ಥೂ, ನಾಚಿಗೆಗೆಟ್ಟ ಬಾಳೇ! ಮರ್ಯಾದೆಯಿಂದ ಕೂಲಿನಾಲಿ ಮಾಡಿ, ಬಿಕ್ಷೆಬೇಡಿ ತಿಂದರೆ ಆಗೋದಿಲ್ವೇ?"

—ಎಂದು ಕಿಚಕ್ಕನೆ ಉಗುಳಿ ಹೊರಟುಹೋದ.

ಮೂರ್ತಿ ಗಕ್ಕನೆ ನಿಂತ. ಅವನ ಕೊರಳಸೆರೆಗಳು ಉಬ್ಬಿದ್ದುವು. 'ಮೂರ್ತಿ, ಮೂರ್ತಿ....' ಎಂದು ನಾನು ಕೂಗುತ್ತಿದ್ದರೂ, ಕೇಳದವನಂತೆ ತಲೆತಗ್ಗಿಸಿಕೊಂಡು ಸೀದಾ ಮನೆಗೆ ಹೋಗಿಬಿಟ್ಟ.

ನನ್ನ ದುಃಖೋದ್ವೇಗವನ್ನು ಹಾಗೆಯೇ ಹತ್ತಿಕ್ಕಿಕೊಂಡೆ.

ರಾತ್ರಿ ನಾನು ಅಂಗಡಿಗೆ ಸಾಮಾನು ತರಲು ಹೋಗಿದ್ದೆ. ಆಗ ಮೂರ್ತಿ ಕೆಮಿಸ್ಟ್ರಿ ನೋಟ್ಸ್ ಕೇಳಲು ಬಂದಿದ್ದನಂತೆ. ನಾನು ವಾಪಸ್ ಬಂದನಂತರ ತಿಳಿಯಿತು. ಮಾರನೆಯ ದಿನ ಬೆಳಗ್ಗೆಯೇ ಕರಿಯಮ್ಮ ನೊಡನೆ ಪುಸ್ತಕ ಕಳಿಸಿದೆ.

ಶಾಲೆಯಲ್ಲಿ ಹಿಂಬದಿಯ ಬೆಂಚಿನಲ್ಲಿ ಮೂರ್ತಿ ಕೂತಿದ್ದ. 'ಪುಸ್ತಕ ತಲ್ಪಿತೇ?' ಎಂದು ಕೇಳಿದ್ದಕ್ಕೆ ಬಲವಂತವಾಗಿ ಕ್ಷೀಣ ನಗೆ ನಕ್ಕು ತಲ್ಪಿತೆಂದ. ಅವನ ನಿರಾಸಕ್ತಿ ಕಂಡು ನಾನು ಮಾತು ಬೆಳಸಲಿಲ್ಲ.

ಭೂಗೋಳದ ಮೇಷ್ಟ್ರು ಮೂರ್ತಿಗೆ ಪ್ರಶ್ನೆ ಕೇಳಿದರು. ಎತ್ತಣ ಜ್ಞಾನದಲ್ಲೋ ಇದ್ದ ಮೂರ್ತಿಗೆ ತನ್ನನ್ನೇ ಕೇಳಿದರೆಂಬುದೂ ತಿಳಿಯಲಿಲ್ಲ. ಪಕ್ಕದ ಹುಡುಗ ಭುಜ ಅಲುಗಿಸಿ ಸೂಚನೆ ಕೊಟ್ಟಾಗ ಛಟ್ಟನೆದ್ದ.

"ಏನ್ಸಾರ್ ?"—ಎಂದ—ಪ್ರಶ್ನೆ ತಿಳಿಯಲು.

ಹುಡುಗರೆಲ್ಲಾ ಮುಸಿಮುಸಿ ನಕ್ಕರು. ಮೇಷ್ಟ್ರು ಸಸ್ನೇಹದಿಂದ ತಾವೂ ನಕ್ಕರು.

"ಏನಯ್ಯಾ ಇಷ್ಟು ಅನ್ಯಮನಸ್ಕತೆ ? ನೀನೇನು ಕವಿಯೋ, ವಿರಹಿಯೋ, ಹುಚ್ಚನೋ ? ಖಂಡಾಂತರ ವಾಯುಗುಣಾನ ವಿವರಿಸು."

ಮೂರ್ತಿ ಸರಿಯಾಗಿ ಉತ್ತರಿಸಿದ. 'ಬೇಷ್' ಎಂದರು ಮೇಷ್ಟ್ರು.

"ಈ ಸೂಳೆ ಮಕ್ಕಳಿಗೆ ಪಾಠದ ಮೇಲೆ ನಿಗಾ ಇರುತ್ತೆಯೇ ? ಗಿರಾಕಿಗಳ ಚಿಂತೇನೇ ಸದಾಕಾಲವೂ" ನಮ್ಮ ಬಲಗಡೆ ಬೆಂಚಿನಲ್ಲಿದ್ದ ಮುರಳಿ ನನಗೂ ಕೇಳುವಂತೆ ಗೊಣಗಿದ.

ನನ್ನ ಮೈಮೇಲೆ ಬಿಸಿನೀರುಗ್ದಿದಂತಾಯ್ತು. ಮೃದುಹೃದಯದ ಮೂರ್ತಿ ಎಷ್ಟು ಘಾಸಿಗೊಂಡನೋ !

ಮಧ್ಯಾಹ್ನ ಮೂರ್ತಿ ಶಾಲೆಗೆ ಬರಲಿಲ್ಲ. ಮೈಗೆ ಸರಿಯಿಲ್ಲನೇನೋ ಎಂದುಕೊಂಡೆ. ರಾತ್ರಿ ಎಂಟು ಗಂಟೆಯ ಸಮಯ. ನಾನು ಹೋಂವರ್ಕ್ ಬರೆಯುತ್ತಿದ್ದೆ. ಮೂರ್ತಿಯ ತಮ್ಮ ಓಡೋಡಿ ಬಂದ.

"ಮೂರ್ತಿ ಮಧ್ಯಾಹ್ನ ಊಟ ಮಾಡಿಕೊಂಡು ಹೋದ. ಮನೆಗೆ ಬಂದೇ ಇಲ್ಲ. ಎಲ್ಲಾ ಕಡೆಯೂ ಹುಡುಕಿದೆ. ನಿಮಗೇನಾದರೂ ಗೊತ್ತೆ ?"

ಎಂದಾಗ ನನ್ನೆದೆ ಧಸಕ್ಕೆಂದಿತು. ಕಳವಳದಿಂದ ಭೀಕರ ಶಂಕೆಯಿಂದ ಕ್ಷಣ ಮಾತೇ ಹೊರಡಲಿಲ್ಲ.

ಶಾಲೆಗೂ ಮಧ್ಯಾಹ್ನ ಅವನು ಬಂದಿರಲಿಲ್ಲವೆಂದು ಹೇಳಿಕಳಿಸಿ, ಅಮ್ಮನಿಗೆ ವಿಷಯ ತಿಳಿಸಿದೆ. ಸುಮಾರು ಅರ್ಧ ಗಂಟೆಯಾಗಿರಬಹುದು. ಗೇಟಿನಬಳಿ ಯಾವುದೋ ಕಾರು ನಿಂತಿತು. ಮೂರ್ತಿಯ ತಾಯಿ ಬಿರುಗಾಳಿಯಂತೆ ಮನೆಯೊಳಕ್ಕೆ ನುಗ್ಗಿಬಂದರು. ಅವರ ಕೆಂಗಣ್ಣು, ಕೆಪರಿದ ಕೂದಲು ಕಂಡು ನನಗೆ ಕಸಿವಿಸಿಯಾಯ್ತು.

"ಮೂರ್ತೀನ ಹುಡುಕೋಕೆ ಬರ್ತೀಯಾ ಶ್ಯಾಮೂ ? ಟ್ಯಾಕ್ಸಿ ತಂದಿದೀನೆ"—ಎನ್ನುವ ವೇಳೆಗೆ ಅಮ್ಮ ಒಳಗಿನಿಂದ ಬಂದಳು. ಆಕೆ ಉನ್ಮಾದಿನಿಯಂತೆ ನಮ್ಮ ತಾಯಿಯ ಕಾಲುಗಳನ್ನು ಹಿಡಿದು ಬಿಕ್ಕಿ ಬಿಕ್ಕಿ ಅತ್ತರು. "ಅಮ್ಮಾ, ನನ್ನ ಮೂರ್ತಿ ಸುಖವಾಗಿದಾನೆ ಅನ್ನಿ. ನಿಮ್ಮ ಬಾಯಹರಕ್ಕೆ ನಿಜವಾಗಲಿ! ಅವನಿಗಾಗಿ ನಾನು ಸರ್ವಸ್ವವನ್ನೂ ತ್ಯಾಗ ಮಾಡಿದೀನಿ—ಅವನಿಂದ ನನ್ನದೂ ಒಂದು ಬಾಳು ಅಂತ ನೀರು ಬಾರದ ಕಣ್ಣಲ್ಲಿ ನೆತ್ತರು ಸುರಿಸಿದೇನೆ ....ನಿಮ್ಮ ಮಗನ್ನ ಕಳಿಸಿ. ಮೂರ್ತಿ ಎಲ್ಲಿ ಹೋಗಿದಾನೆ ಹುಡುಕಬೇಕು...."

ಆಕೆಯ ಅಳಲನ್ನು ಕಂಡು ಅಮ್ಮನ ಕಣ್ಣಲ್ಲೂ ನೀರಾಡಿತು. ನನ್ನನ್ನು ಕಳುಹಿಂದಳು. ಪೋಲೀಸ್ ಕಂಪ್ಲೆಂಟ್ ಕೊಟ್ಟು, ಹನ್ನೆರಡು ಗಂಟೆಯವರೆಗೂ ಎಲ್ಲೆಡೆಯೂ ಹುಡುಕಿದೆವು. ನನಗೆ ನಿರಾತೆಯಾದರೂ ಆಕೆಯನ್ನು ಸಂತೈಸಲು 'ಮೂರ್ತಿ ಎಲ್ಲೋ ಬೇಸರದಿಂದ ತಲೆ ಮರೆಸಿಕೊಂಡಿರಬಹುದು' ಎಂದೆ.

ಅಮ್ಮ ನನ್ನ ಬರವನ್ನೇ ನಿರೀಕ್ಷಿಸುತ್ತಿದ್ದಳು. ಮೂರ್ತಿ ಸಿಗಲಿಲ್ಲವೆಂದು ಹೇಳಿದಾಗ ಕಳಕಳಿಯಿಂದ ಅಂದಳು:—

"ಪಾಪ, ಆಕೆಯ ಕಷ್ಟಾನಾ ನೋಡೋಕಾಗಲ್ಲ. ಯಾವ ಕಷ್ಟಕ್ಕೆ ಸಿಕ್ಕಿ ಕಾಲುಜಾರಿದಳೋ; ಅವರವರ ಪಾಪ ಅವರಿಗೆ. ಆದರೆ ಅವಳ ತಾಯಿ ಪ್ರೇಮ ಶುದ್ಧವಾದುದೇ. ನಿನ್ನ ನೋಟ್ಸು ಕೇಳೋಕೆ ನಿನ್ನೆ ಬಂದಾಗ ನಮ್ಮ ಮಾತು ಕೇಳಿತೋ ಏನೋ."

ಎಂದು ಕರಿಯಮ್ಮನೊಡನೆ ಆಡಿದ ಮಾತನ್ನು ಹೇಳಿದರು:—

ಅವನು ಬಂದಿರುವ ವಿಷಯ ತಿಳಿಯದೆ ನನ್ನ ತಾಯಿ, ಕರಿಯಮ್ಮ ಮಾತನಾಡುತ್ತಿದ್ದರಂತೆ. 'ಮೂರ್ತಿಯ ಸಹವಾಸಾನ ದೂರಮಾಡು, ಅವನ ಮನೆಗೆ ಹೋಗ್ಬೇಡ' ಎಂದು ತಾಸೆಷ್ಟು ಹೇಳಿದರೂ—ನಾನು ಕೇಳುವುದಿಲ್ಲನೆಂದು ಅಮ್ಮ ದೂರಿದಳಂತೆ. ಕರಿಯಮ್ಮ "ಬಿಡ್ರವ್ವಾ, ಶ್ಯಾಮಪ್ಪ ಇನ್ನೂ ಅರೀದ ಹುಡುಗ" ಎಂದಾಗ

ಅಷ್ಟು ಕಠಿಣವಾಗಿ ಹೇಳಿದಳಂತೆ—

"ಮುಷ್ಟ ಸಹವಾಸಾನ ದೂರ ಇಡ್ಬೇಕು ಕರಿಯಮ್ಮ ! ಈ ದಿನ ಹುಡುಗ, ನಾಳೆ ಪ್ರಾಯಸ್ಥ. ಗಂಡಸನ್ನ ಮರಳು ಮಾಡೋದೇ ಕಸುಬಾಗಿರೋ ಆಕೇಗೆ ಇವನನ್ನ ಬುಟ್ಟಿಗೆ ಹಾಕಿಕೊಳ್ಳೋದು ದೊಡ್ಡದೇ!"

ಬೀದಿಬಾಗಿಲಬಳಿ ಧಡ್ ಎಂದು ಏನೋ ಬಿದ್ದ ಸದ್ದಾಗಲು ಕರಿಯಮ್ಮ ಓಡಿಹೋಗಿ ನೋಡ್ತಾಳಂತೆ—ಮೂರ್ತಿ !

ಮೂರ್ತಿ ಚೇತರಿಸಿಕೊಂಡು "ಏನೂಇಲ್ಲ; ಹೊಸ್ತಿಲೆದವಿ ಮುಗ್ಗರಿಸಿದೆ. ನಾಳೆ ನನ್ನ ಪುಸ್ತಕ ತರೋಕೆ ಹೇಳಿ" ಎಂದವನೇ ನಿಲ್ಲದೆ ಮನೆಗೇ ಹೋದನಂತೆ.

"ಹಾಗಾದರೆ ಅವನು ಆತ್ಮಹತ್ಯೆ ಮಾಡಿಕೊಂಡಿರೋದೇ ನಿಶ್ಚಯ" ಎಂದೆ.

ನನ್ನ ಊಹೆ ನಿಜವಾಯಿತು. ಮೂರು ನಾಲ್ಕು ದಿನಗಳನಂತರ ಭಾವಿಯಲ್ಲಿ ಅವನ ಶವ ತೇಲಿತು.

ನಾನು ಸಿಟ್ಟು ಸಂತಾಪ ತಡೆಯಲಾರದೆ ಮುರಳಿಯನ್ನು ಬಯ್ದೆ. ಎಲ್ಲರೂ ಮೂರ್ತಿಯ ಗುಣಗಾನಮಾಡಿ, ಮುರಳಿಯ ಅವಮೇಳವ ಮಾಡಿದವರೆ ! ಮುರಳಿ ತಗ್ಗಿಸಿದ ತಲೆಯನ್ನೆತ್ತಲಿಲ್ಲ.

ಮೂರ್ತಿಯ ತಾಯಿ ಊರು ಬಿಟ್ಟು ಡಲ್ಲಿಗೆ ಹೋದರು. ಆಕೆಯ ಬುದ್ಧಿಯೇ ವಿಕಲ್ಪವಾಗಿದೆಯೆಂದು ಸುದ್ದಿ.

ಮೂರ್ತಿ ಸತ್ಯಕಾಮಜಾಬಾಲಿಯ ಕತೆಯನ್ನು ಓದಿರಲಿಕ್ಕಿಲ್ಲ. ಓದಿದ್ದಲ್ಲಿ, ಅದರಿಂದಲಾದರೂ ಸ್ಫೂರ್ತಿಪಡೆದು ತನ್ನ ಬಾಳದುರಂತವನ್ನು ತಪ್ಪಿಸೇತ್ತಿದ್ದನೇನೋ—ಎಂದುಕೊಂಡು ನನ್ನ ಕಣ್ಣು ತೇವವಾಯಿತು.

———

"ವರದ-ಶಾಪ"

(ಕಥೆಯನ್ನು ಕುರಿತು ಕೆಲವು ಮಾತುಗಳು)*

ಶ್ರೀ. ರಂಗರಾವ ದೇಶಪಾಂಡೆ, ಅಲದಕಟ್ಟಿ

ಕುಮಾರಿ ಪೃಥೆಯು ಹೊತ್ತ ಬಸಿರು ಲೌಕಿಕರೀತಿಯಿಂದ ಸಾಮಾಜಿಕ ನಿಯಮಬಾಹಿರವಾದದ್ದು ನಿಜ; ಆದರೆ ಅದು ಪ್ರಥಮ ಪ್ರೇಮದ ಫಲವಾಗಿರಲಿಲ್ಲವೆಂಬದೂ, ಮೂರ್ಖಳಂತೆ ಅವಳು 'ಒಂದು ಹುಡುಗಾಟದ ಆವೇಗದಲ್ಲಿದ್ದಾಗ' ಬಲುಮೆಯಿಂದ ಅವಳ ಮಡಿಲಲ್ಲಿ ಮಡಗಿದ ಫಲವಾಗಿತ್ತೆಂಬುದೂ ಅಷ್ಟೇ ನಿಜ.

ಋಷಿ ದುರ್ವಾಸರು ಅವಳಿಗೆ ವರ ಕರುಣಿಸಿದಾಗ 'ಅದನ್ನು ತಿಳಿದುಕೊಳ್ಳುವ ವಯಸ್ಸು ಅವಳಿಗಾಗಿಲ್ಲ.' 'ಇನ್ನೂ ಇದೀಗ ಕಿಶೋರಿ' 'ಲೀಲಾ-ಚಪಲೆ' ತಾತ 'ಕುಂತೀಭೋಜನ ಸ್ನೇಹದಲ್ಲಿ ಲಾಲಿತಳಾದ ಈ ಲೀಲಾಚಪಲೆ, ಯಾವುದೋ ಒಂದು ಕುತೂಹಲದ ಚಿನ್ನಾಟದ ಆವೇಗದಲ್ಲಿ ಆಹ್ವಾನವನ್ನು ನಿವೇದಿಸಿದಳು.' 'ಅವನು ಬಂದ.' 'ಸಮ್ಮುಖದಲ್ಲಿ ನಿಂತ.' 'ನಿಂತವನು ದೇವಸನ್ನಾಜದ ಭಾಸ್ಕರ.' 'ಹತ್ತರ ಕರೆದದ್ದೇಕೆ?' 'ಇಚ್ಛೆಯಾಯಿತು.' 'ಏಕೆ ಇಚ್ಛೆಯಾಯಿತು?' 'ಕಂಡೆ, ನೀವು ಪ್ರಿಯದರ್ಶನ.ಮನಬಯಸಿತು, ಹತ್ತಿರಕ್ಕೆ ಕರೆದೆ....ನನ್ನ ಕುತೂಹಲ ತೀರಿತು.' 'ಕ್ಷಮಿಸಿರಿ ಹೊರಟು ಹೋಗಿರಿ ಭಾಸ್ಕರ.' 'ಹೊರಟು ಹೋಗಲಾರೆ ಪ್ರಿಯದರ್ಶಿನಿ.' 'ಭಾಸ್ಕರನ ಆಲಿಂಗನದಲ್ಲಿ ಸಮರ್ಪಿತವಾದ ತನು, ಕುಮಾರಿ ಪೃಥೆಯ ಅಸ್ತಿತ್ವವನ್ನು ಪರಮ-ಸ್ಪರ್ಶ ಮಹೋತ್ಸವದಲ್ಲಿ ಕಳೆದುಕೊಂಡಿತು.' ಪ್ರಸ್ತುತ ಕಥೆಯ ಒಂದೆರಡು ಭಾಗಗಳ ಸಾರ ಸಂಗ್ರಹವಿದು.

ಕಥಾಲೇಖಕರ ಕಲ್ಪನೆಯು ಪ್ರೇಮದ ಆಭಾಸವನ್ನು ನಿರ್ಮಿಸಿ, ಅವರೆತ್ತಿಕೊಂಡ ಕಥಾವಸ್ತುವಿನ—ರಾಜಕುಮಾರಿ ಪೃಥೆಗೆ ಘೋರ ಅನ್ಯಾಯ ಮಾಡಿದೆ.

ಲೇಖಕರು ದುರ್ವಾಸರ ಮುಖದಿಂದ ಮಂತ್ರಪ್ರಭಾವವನ್ನು ಕೇಳಿ ಪೃಥೆಯಲ್ಲಿ ಕುತೂಹಲ ಹುಟ್ಟಿದ ಕ್ಷಣದಿಂದ ಅದನ್ನು 'ಯಾವುದೋ ಒಂದು ಕುತೂಹಲದ ಚಿನ್ನಾಟದ ಆವೇಗದಲ್ಲಿ' ಪರೀಕ್ಷಿಸಿ ನೋಡಿದ ಮಧ್ಯಂತರ ಅವಧಿಯನ್ನು ಕಲ್ಪಿಸಿಕೊಂಡು, ಅವಳನ್ನು ಒಂದೆ ಪ್ರೌಢೆಯನ್ನಾಗಿ ಮಾಡಿರುವರು.

ಎರಡನೆಯ ಭಾಗದ ಪ್ರಾರಂಭ " ಈ ಚಂಚಲತೆ ಮೆಲ್ಲನೆಮೆಲ್ಲನೆ ತನ್ನಲ್ಲಿ ಅಗೋಚರವಾಗಿ, ಯೌವನಭಾರದಿಂದ ಮುಂದೀಭೂತವಾಗುತ್ತಿರುವುದನ್ನು ಸ್ವತಃ ಅರಿಯಲಾಗಲಿಲ್ಲ "..... 'ಸುಖತಂದ್ರತೆ ಭಂಗವಾಯಿತು'.... 'ಅಗಸದ ತಾರೆಯಂತೆ ಇರುಳಿನಲ್ಲಿ ಜಾಗೃತಳಾಗಿಯೇ ಇದ್ದಳು'.... ಇವೇ ಮೊದಲಾದ ಉತ್ಪ್ರೇಕ್ಷಾಲಂಕಾರಗಳಿಂದ ಅವಳ ಯೌವನಾವಸ್ಥೆ, ಅವಳಲ್ಲಿ ಪ್ರೇಮಪ್ರಾದುರ್ಭಾವ; ಅವಳ ವಿರಹಾವಸ್ಥೆ, ಪ್ರಿಯಸಂಗನಔತ್ಸುಕ್ಯ ಇತ್ಯಾದಿಗಳಿಂದ ಪ್ರೌಢ ಸ್ತ್ರೀಯನ್ನಾಗಿ ಬೆಳೆಸಿರುವರು. ಅಲ್ಲದೆ ಸೂರ್ಯಬಿಂಬದರ್ಶನದಲ್ಲಿ ಅವಳಿಗೆ 'ತಾರುಣ್ಯದಿಂದ ಮಂಡಿತನಾದ ಒರ್ವ ಪ್ರಿಯದರ್ಶನ ತರುವೀಥಿಕೆಯ ಮಧ್ಯದಲ್ಲಿ ನಿಂತು ತನ್ನನ್ನೇ ನೋಡುತ್ತಿದ್ದಾನೆಂಬುದರಿಂದ ಪ್ರತ್ಯಕ್ಷ 'ಪ್ರಿಯದರ್ಶನ' ಮಾಡಿಸಿ 'ಸಕಲ ಭಯ ಮತ್ತು ಲಜ್ಜೆಗಳನ್ನು ತೊರೆದು ಹಾಕಿ, ತನ್ನ ಜೀವನದ ಪ್ರಥಮ ಪ್ರಿಯದರ್ಶನನಲ್ಲಿ ಆಹ್ವಾನವನ್ನು ನಿವೇದಿಸಿದಳು" ಎಂದು ವರ್ಣಿಸಿರುವರು. ಅನಳನ್ನೊರ್ವ ನಿರ್ಲಜ್ಜ ಅಭಿನಾರಿಕೆಯನ್ನಾಗಿ ಮಾಡಿರುವರು.

ಕೊನೆಯ ಪ್ರತ್ಯಕ್ಷ ಮಿಲನಸಂದರ್ಭದಲ್ಲಿ 'ನೀವಿನ್ನು ಹೋಗಿರಿ'—ಎಂಬ ಪೃಥೆಯ ನಿರಾಕರಣಸೂಚಕ ಉದ್ಗಾರಗಳಿಗೆ ಮೌಲ್ಯವೇನಾದರೂ ಇದೆಯೇ? ಇದ್ದರೆ ಸಂಗನೋತ್ಸುಕ ನಲ್ಲೆಯ " ಒಲ್ಲೆ, ಒಲ್ಲೆ, ಹೋಗಿ "....ಎಂಬ ಲಲ್ಲೆಯ ಮಾತಿನಷ್ಟೇ ಬೆಲೆಯೋ?

ನೈತಿಕ ಅಧಃಪತನದ ಯಾವುದೇ ಪ್ರಸಂಗವು ತರುಣಿಯ ಅಪರಾಧದ ನಿರ್ಣಯ, ಅವಳ ವಯಸ್ಸು, ಮನದೊಲವು, ಪುರುಷನ ಬಳಸಾರುವ ಬಗೆ, ಉದ್ದೇಶ, ಆ ಕಾಲದ ಪರಿಸ್ಥಿತಿ, ಇವೆಲ್ಲವುಗಳ ಮೇಲೆ ಅವಲಂಬಿಸಿರುವುದು.

ಪೃಥೆಯ ಬಸಿರಿನ ವಿಷಯವನ್ನು ಸದ್ಯದ ನನನಾಗರಿಕತೆಯಲ್ಲಿ ಬೆಳೆದ ತರುಣಿಯರ ಪ್ರಥಮದರ್ಶನ ಪ್ರೇಮ (Love at first sight) ಪ್ರಸಂಗಕ್ಕೆ ಹೋಲುವುದೆಂದೋ ಅಥವಾ ಹೋಲಿಸಬೇಕೆಂದೋ, ಅವಳನ್ನು ಯೌವನಸ್ಥಳನ್ನಾಗಿ ಮಾಡಿದ್ದು ಸರಿಯಲ್ಲ. ಮಹಾಭಾರತದಲ್ಲಿಯ ಈ ಸನ್ನಿವೇಶದ ಹಿನ್ನೆಲೆಯ ಯಾಥಾರ್ಥ್ಯವನ್ನು ಗಮನಿಸದಂತಿಲ್ಲ. ಪೃಥೆಯ ವಯೋಮಾನ, ಬಾಲ್ಯಸಹಜ ಮನೋವ್ಯಾಪಾರ ಇವುಗಳ ಕಡೆಗೂ ಲಕ್ಷ್ಯವೀಯದೆ, ಕೇವಲ ದೋಷೈಕದೃಷ್ಟಿಯು ವಿಮರ್ಶೆಯಿಂದಲೇ ಮುಂದುವರೆದಂತೆ ಕಾಣುವುದು.

ದುರ್ವಾಸರ ವ್ಯಕ್ತಿತ್ವವನ್ನು ಸಾಕಷ್ಟು ಅರ್ಥಮಾಡಿಕೊಂಡಂತಿಲ್ಲ. ಋಷಿಗಳು ಬಹು ವಿಕ್ಷಿಪ್ತಸ್ವಭಾವದವರು. ಶೀಘ್ರಕೋಪಿ, ಸ್ವಚ್ಛಂದ ವೃತ್ತಿಯವರು. ಇವರು ವೈಕಾರಿಕ ಮನೋಭಿಮಾನಿ ಮಹಾರುದ್ರದೇವರ ಅಪರಾವತಾರವೆಂದು ಮಹಾಭಾರತದಲ್ಲಿ ಅನೇಕ ಕಡೆಗೆ ಉಲ್ಲೇಖವಿದೆ. ಇಂತಹರು " ಹೋಗುವ ಮುನ್ನ 'ಕುಮಾರಿ ಕಿಶೋರಿಯೊರ್ವಳ' (ಪೃಥಾ) ಮನದಲ್ಲಿ ಯಾವ ಮಂತ್ರ ತುಂಬಿ

---

* ಜೂನ್ ೧೯೬೦ನೆಯ ಸಂಚಿಕೆಯಲ್ಲಿ ಪ್ರಕಟವಾದ ಕಥೆಯನ್ನು ನಮ್ಮ ಸಾಂಪ್ರದಾಯಿಕ ಶ್ರದ್ಧಾವಂತರು ಹೇಗೆ ನೋಡುವರೆಂಬುದೂ ನಮ್ಮ ವಾಚಕವರ್ಗಕ್ಕೆ ತಿಳಿದಿರಬೇಕು. —ಸಂ. ಜ.

ಹೋದರೋ ಅದರ ಪರಿಣಾಮವು ಏನಾಯಿತು,—ಎಂಬುದು ಅವರ ಕಲ್ಪನೆಯ ಅನುಭವಕ್ಕೆ ಬರುವ ಸಂಭವವೇ ಇಲ್ಲ", ಎಂಬ ಲೇಖಕರ ಅಭಿಪ್ರಾಯ ಸತ್ಯಕ್ಕೆ ಬಹುದೂರ ಇದೆ. ಇಂತಹರು ಇನ್ನೂ ಪತ್ನೀಪದವನ್ನೇ ಅಲಂಕರಿಸದ ಕನ್ಯಾಮಣಿಗೆ ಪುತ್ರಪ್ರಾಪ್ತಿಯ ವರದಾನ—ಕೇವಲ ಆಶೀರ್ವಚನಮಾತ್ರದಿಂದಲ್ಲ; ಶೀಘ್ರಫಲಕಾರಿ ಸಿದ್ಧಮಂತ್ರ ಉಪದೇಶದಿಂದಲೂ ಮಾಡಿದುದು ನಿರ್ಹೇತುಕವಾದುದಲ್ಲ.

ದೃಶ್ಯಪ್ರಪಂಚದ ಆಚೆಗಿರುವ ದೈವಿಶಕ್ತಿಯೊಂದರಿಂದ ಮಹಾಭಾರತ ಇತಿಹಾಸದ ಘಟನೆಗಳೆಲ್ಲವೂ ನಡೆದು ಬರಬೇಕಾದುದರಿಂದ, ಅವುಗಳನ್ನು ರೂಪಿಸುವ ಪರಮಾತ್ಮನ ಸಂಕಲ್ಪದ ಪೂರ್ವಭಾವೀ ಯೋಜನೆಯೇ ಇನ್ನೂ ಕನ್ಯಾವಸ್ಥೆಯಲ್ಲಿದ್ದ ಪೃಥೆಗೆ ಮಂತ್ರೋಪದೇಶದಿಂದ ವರಪ್ರದಾನ. ಕನ್ಯಾವಸ್ಥೆಯಲ್ಲಿಯೇ ಅವಳಲ್ಲಿ ಸೂರ್ಯನ ಅಂಶದಿಂದ ಕರ್ಣನೆಂಬ ಮಹಾವೀರನ ಜನನವಾಗಬೇಕಿತ್ತು. ಅಲ್ಲದೇ ಅದೇ ಮಂತ್ರ ಬಲದಿಂದ ದೇವಾಂಶರಾಗಿ ಹುಟ್ಟಿದ ಪಂಚಪಾಂಡವರ ವಿರೋಧಿಗಳಾದ ಕೌರವರೊಡನೆ ಅವನು ಕೂಡಿಕೊಂಡು, ಕುರುಕ್ಷೇತ್ರದಲ್ಲಿ ಕುರುಕುಲದ ನಾಶಕ್ಕೆ ಕಾರಣನಾಗಬೇಕಿತ್ತು. ಅಂತೆಯೇ ಕನ್ಯಾವಸ್ಥೆಯಲ್ಲಿದ್ದ ಪೃಥೆಗೆ—"ಯಾವ ಯಾವ ದೇವತೆಗಳನ್ನು ನೀನು ಪ್ರತ್ಯಕ್ಷೀಕರಿಸಿಕೊಳ್ಳಲು ಈ ಮಂತ್ರದಿಂದ ಆಹ್ವಾನಿಸುವೆಯೋ, ಆ ಆ ದೇವತೆಗಳ ಪ್ರಭಾವದಿಂದ ನಿನಗೆ ಪುತ್ರಲಾಭವಾಗುತ್ತದೆ"—ಎಂದು ತಾವು ಹೊರಡುವ ಮುನ್ನ ಹೇಳಿ ಪ್ರಯಾಣ ಬೆಳೆಸಿದರು. ದೇವತೆಗಳನ್ನು ಪ್ರತ್ಯಾಕ್ಷೀಕರಿಸುವ ಈ ಅದ್ಭುತ ಪ್ರಭಾವದ ಮಂತ್ರ ಪೃಥೆಯ ಹಸ್ತಗತವಾಯಿತು.

ಹಸ್ತಗತವಾದ ವಸ್ತುವಿನ ಗುಣಧರ್ಮದ ಜ್ಞಾನ ಮಾಡಿಕೊಳ್ಳುವಷ್ಟು ಶಕ್ತಿಸಾಲದ ಕಿಶೋರಾವಸ್ಥೆಯಲ್ಲಿ ಒಂದು ಮೋಹಕ, ಕುತೂಹಲ ಕೆರಳಿಸುವ, ನಿಗೂಢಸ್ವಭಾವದ ವಸ್ತು ಕೈಸೇರಿದರೆ, 'ಯಾವಾಗ ಅದನ್ನು ಪರೀಕ್ಷಿಸಿ ನೋಡೇನೋ' ಎಂದು ಮನಸ್ಸಿನಲ್ಲಿ ಔತ್ಸುಕ್ಯ ಹುಟ್ಟಿ, ಗೌಪ್ಯದಲ್ಲಿ ಅದನ್ನು ಪರೀಕ್ಷಿಸ ನೋಡಿಯೆ ಬಿಡಬೇಕೆಂಬುದು ಅನಿವಾರ್ಯವಾಗುವುದು. ಅಲ್ಲದೆ ಭಾವೀದೃಶ್ಯದ ಭವ್ಯತೆಯಲ್ಲಿ ಮುಗ್ಧವಾದ ಮನಸ್ಸು ಪರಿಣಾಮದ ಅರಿವನ್ನೂ ಕಳೆದುಕೊಳ್ಳುವುದು. ಇದು ಬಾಲ್ಯಸಹಜ ಮನಃಪ್ರವೃತ್ತಿ. 'ಸರೋವರದ ನೀರಿನಲ್ಲಿ ಬಿಂಬಿತವಾದ ಛಾಯೆಯೊಂದಿಗೆ ಕೌತುಕದ ಆಟವಾಡುವ ಲೀಲಾಚಪಲ' ವಯಸ್ಸು ಪೃಥೆಯದು. ಅಲ್ಲದೇ ದುರ್ವಾಸರ ಮಂತ್ರದಲ್ಲಿ ಮಾನವರಿಗೆ ದುರ್ಲಭವಾದ ದೇವತಾದರ್ಶನಲಾಭದ ಮೋಹಕತೆಯಿತ್ತು. ದೇವಪೂಜೆ, ಅತಿಥಿಸೇವೆ, ಇಂತಹ ಸತ್ಕಾರ್ಯದಲ್ಲಿ ಕಾಲಕ್ಷೇಪ ಮಾಡುತ್ತ ದುರ್ವಾಸ ಋಷಿಗಳಂತಹ ಮಹಾತ್ಮರ ಸೇವೆಯಲ್ಲಿ ಕಾಲಕಳೆದ ಪುತ್ರಿ ಪೃಥೆಗೆ ದೇವತೆಗಳ ದರ್ಶನಮಾಡಿಕೊಳ್ಳುವ ಇಚ್ಛೆ ಪ್ರಬಲವಾದದ್ದರಲ್ಲಿ ಆಶ್ಚರ್ಯವೇನಿದೆ? ಆದರೆ ಔತ್ಸುಕ್ಯದ ಭರದಲ್ಲಿ 'ದೇವರ ದರ್ಶನದ ಫಲಸಿದ್ಧಿ, ಪುತ್ರಪ್ರಾಪ್ತಿ' ಎಂಬ ಮಂತ್ರದ ಇನ್ನೊಂದು ಅಂಶ ಆಗ ಅವಳ ಲಕ್ಷ್ಯದಲ್ಲಿ ಉಳಿಯಲಿಲ್ಲವಾದ್ದರಿಂದ, ಅದೃಷ್ಟ ಅವಳನ್ನು ಅಕಾಲದಲ್ಲಿ ಮಾತೃಪದಕ್ಕೇರಿಸಿ, ಯಾರಿಗೂ ಎಂದೂ ಹೇಳಲಾಗದ ಕರುಳುರಿಯನ್ನು ಜೀವನದುದ್ದಕ್ಕೂ ಸಹಿಸಬೇಕಾಗುವಂತೆ ಮಾಡಿತು.

ಇಂತು ಕುಂತೀಭೋಜರಾಜ ಕುವರಿಯ ಬಸಿರು ಪೃಥಮವ್ಯೋಮದ ಫಲವಲ್ಲ, ಅವಳ ದುಡುಕಿನ ಫಲ.

(ಮೂರನೆಯ ಭಾಗದಲ್ಲಿ) ಧಾತ್ರೇಯಿಕೆಯ ಪಾತ್ರನಿರ್ಮಾಣದ್ವಾರಾ ಕಥೆಯ ದುರಂತವನ್ನು ವಿಶದೀಕರಿಸಿ ಲೋಕದ ನಿದರ್ಶನಕ್ಕೆ ತಂದುಕೊಡುವುದನ್ನು ಲೇಖಕರು. ಚೆನ್ನಾಗಿ ಸಾಧಿಸಿದ್ದಾರೆಂದು ಹೇಳಬಹುದು.

(ನಾಲ್ಕನೆಯ ಭಾಗದಲ್ಲಿ) ಗುಪ್ತಪ್ರಣಯದ ಪರಿಣಾಮವನ್ನು "ನಾನೇ ಗುಪ್ತವಾಗಿ ನೀರಿನಮೇಲೆ ತೇಲಿಬಿಡುವೆ" ಎಂದು ಧೈರ್ಯವಾಗಿ ಹೇಳಿದ ಪೃಥೆಯು, ಪ್ರತ್ಯಕ್ಷವಾಗಿ ಕೂಸನ್ನು ನೀರುಪಾಲು ಮಾಡುವಾಗ ಮಾತೃವಾತ್ಸಲ್ಯ ಜಾಗೃತವಾಗಿ, ಹುಟ್ಟಿದ ಕೂಸಿನ ಭವಿಷ್ಯವನ್ನು ನೆನಸಿಕೊಂಡು "ಎಲ್ಲಾದರೂ ನನ್ನ ಕೂಸು ಆಯುಷ್ಮಂತನಾಗಿ, ಭಾಗ್ಯವಂತನಾಗಿ ಬಾಳಲೆಂಬ" ತನ್ನ ಸದಿಚ್ಛೆಯನ್ನು, ಆ ಕೂಸಿನ ಭವಿಷ್ಯತ್ತಿನ ಉತ್ಕರ್ಷದ ನುಡಿಗಳಲ್ಲಿ ಆಡಿತೋರಿಸುವ ತಂತ್ರ ಚೆನ್ನಾಗಿದೆ.

ಶಿರೋನಾಮೆಯ ವಿಷಯಕ್ಕೆ:—ವರದ ಶಾಪ—ಎಂಬ ಶಿರೋನಾಮೆ ಕ್ಲಿಷ್ಟಪದವಾಗಿದೆ. **'ವರವಲ್ಲ-ಶಾಪ'** ಎಂದಿದ್ದರೆ ಚೆನ್ನಾಗಿದ್ದಿತೇನೋ. ವರದ ದುರುಪಯೋಗವೆಂದು ಅರ್ಥವಿಟ್ಟುಕೊಂಡರೆ, ಮಾತ್ರ ಸರಿಹೋಗಬಹುದು. ಏನಾದರೂ "ವರದ–ಶಾಪ"ಎಂಬುದು ಕ್ಲಿಷ್ಟಪದವಾದ್ದರಿಂದ ಚೆನ್ನಾಗಿಲ್ಲವೆಂದು ಹೇಳಬೇಕು.

ಕೊನೆಯದಾಗಿ: ಮಹಾಭಾರತ ಇತಿಹಾಸದ ಸನ್ನಿವೇಶಗಳನ್ನು ಕಥಾವಸ್ತುಗಳನ್ನಾಗಿ ಇಟ್ಟುಕೊಂಡು, ಸಣ್ಣ ಕಥಾರೂಪದಲ್ಲಿ ಹೆಣೆಯುವ ಪ್ರಯತ್ನಗಳು ಆಗಬೇಕಾದದ್ದು ಇಷ್ಟ; ಪರಭಾಷೆಯ ಸಾಹಿತ್ಯದಿಂದ ಅನುವಾದಿಸುವುದಕ್ಕಿಂತಲೂ ಮೂಲ ಸಂಸ್ಕೃತಭಾಷೆಯನ್ನೆ ಆಧಾರವಾಗಿಟ್ಟುಕೊಂಡು ಗ್ರಂಥಕಾರರ ತತ್ತ್ವಗಳಿಗೆ ಬಾಧೆ ಬರದಂತೆ ನಿರೂಪಣೆ ಮಾಡುವುದು ಆರ್ಯಸಂಸ್ಕೃತಿಯ ಪೋಷಣೆಗೆ ಸಹಾಯವಾಗುವುದು. ಭಾರತಾದಿ ಪುರಾಣಗಳಲ್ಲಿ ಮಹಾ ಮಹಾ ತತ್ತ್ವಗಳ ಪ್ರದ್ಯೋತದಿಂದ ಬೆಳಗುವ ಸಿದ್ಧಕಥಾವಸ್ತುಗಳನ್ನು ಕಲ್ಪನೆಯ ಕುಟಿಲ ಕೈಗಾರಿಕೆಯಿಂದ ಕೆಡಿಸುವುದು ಮಾತ್ರ ಸರ್ವಥಾ ಸಲ್ಲದು. ಯಾಕೆಂದರೆ ಪ್ರಪಂಚದ ಪ್ರತಿಘಟ್ಟನೆಗೂ ಪಾರಮಾರ್ಥಿಕ ಸಂಬಂಧವಿಲ್ಲದಿಲ್ಲಿಂಬ ಪರಮಸತ್ಯ ಅಡಗಿದೆ ಅವುಗಳಲ್ಲಿ. ಮೂಲ ಬಂಗಾಳೀ ಭಾಷೆಯಲ್ಲಿದ್ದ ಕಥೆಯ ಅನುವಾದ ಮಾಡುವಾಗ, ಮೂಲ ಲೇಖಕರ ಉತ್ಪ್ರೇಕ್ಷಾಲಂಕಾರ ಶಬ್ದಾಡಂಬರಗಳ ಪ್ರಭಾವ ಅನುವಾದಕರ ಮೇಲೂ ಅದಂತೆ ತೋರುವದು. ಇದರಿಂದ ಕಥೆಯ ಓಘ ಅಲ್ಲಲ್ಲಿ ಮುಗ್ಗರಿಸಿದೆ. ಅನುವಾದಕರು ಸ್ವತಂತ್ರವಾಗಿಯೇ ಬರೆದಿದ್ದರೆ ಇದಕ್ಕೂ ರಸವತ್ತಾಗಿರುತ್ತಿತ್ತೋ ಏನೋ!

★ ಮಂಡೋದರಿ ★

ಶ್ರೀ. ಕೆ. ವಿ. ತಿರುಮಲೇಶ, ಪನ್ನೆಪ್ಪಲ

ಹದಿಬದೆಯರಾ ಪಂಚಕನ್ಯೆಯರ ಸಾಲಿನಲಿ
ಇವಳು ದಾನವಶಿಲ್ಪಿ ಮಯನ ಕುವರಿ—
ಶಿಲ್ಪಿವರ್ಯನೆ ಚಂದ್ರಕಾಂತ ಶಿಲೆಯಲಿ ಕಡೆದ
ಲಲಿತತರ ಮೂರ್ತಿಯೆನೆ ಚಿರಸುಂದರಿ;
ಸೌವರ್ಣಸುಮದಲ್ಲಿ ಸೌರಭವು ಸೇರಿದೊಲು
ಮಂಡೋದರಿಯು ತಾನೆ ಗುಣಶಾಲಿನಿ—
ಕಾರಿನಿರುಳಿನ ಬಾನಿನೊಂಟಿತಾರೆಯ ತೆರದಿ
ದಾನವಾನ್ವಯದಲ್ಲಿ ಕರುಣಾಮಣಿ ! ॥ ೧ ॥

ರಾಜರಾಜರನೆಲ್ಲ ಬಾಯ್ಬೇಳಿಸಿದ ಭೂಪ-
ರಾವಣನೆ ಮಯಕುಮಾರಿಯ ಗಂಡನು —
ಈತನೋ ! ಈರೇಳು ಲೋಕವನೆ ನಡುಗಿಸಿದ
ಭುಜದಂಡನುದ್ದಂಡ ದಶರುಂಡನು;
ಉತ್ತರಾಧಿಪನಾ ಕುಬೇರನನ್ನೂ ಗೆಲಿದು
ದ್ವಾರಪಾಲಕನಾಗಿ ಹಿಡಿದು ನಿಲಿಸಿ—
ಕೈಯಿಂದ ಕೈಲಾಸವೆತ್ತಿದ ಮಹಾಬಲಿಗೆ
ಲಲಿತ ಮಂಡೋದರಿಯು ಪಟ್ಟವರಸಿ ! ॥ ೨ ॥

ಮಂಡೋದರಿಯ ಭಾಗ್ಯ ಮಸುಳಿಸಿತು ಮಸುಳಿಸಿತು,
ರಾವಣನ ದುರ್ನೀತಿ ಸೀಮೆ ಮುಟ್ಟಿ—
ಆ ಜಗಜ್ಜ್ಯೋತಿ ಶ್ರೀರಾಮದೇವನ ಪತ್ನಿ
ಸೀತೆಯಲಿ ನೆಟ್ಟತಾ ಖಳನ ದಿಟ್ಟಿ;
ಮಾಯಾಮೃಗವ್ಯಾಜದಿಂದಲಾ ಹದಿಬದೆಯ
ಕದ್ದು ತಂದನು ಮಸ್ತಿ ರಾಮವೈರಿ—
ರಾಮನಾಮಾಮೃತದಿ ಮುಳುಗಿದ್ದ ಸೀತೆಯನು
ಕಂಡು ಕೈ ಮುಗಿಯಲೇ ಮಂಡೋದರಿ ? ॥ ೩ ॥

' ಮಾತೆ ಸೀತಾದೇವಿಯನ್ನು ಪೀಡಿಸುವನಿತು
ದುರ್ಬುದ್ಧಿಗೆಡೆಯಾಯ್ತೆ ನಿಮ್ಮ ಬೋಧೆ—
ಶ್ರೀರಾಮಪದಯುಗಕೆ ಸೀತೆಯನು ಒಪ್ಪಿಸಿರಿ
ತಿಳಿಯಲಾರಿರ ನನ್ನ ಹೃದಯಬಾಧೆ ? '
ಎಂದು ಮಂಡೋದರಿಯು ರಾವಣನ ಪದತಳದಿ
ಹೊರಳಿದಳು ಸೀತೆಯನು ಸಾರಿಸಾರಿ—
ದಿನದಿನವು ಪರಮಾತ್ಮನಲಿ ಬೇಡಿದಳು ಪತಿಗೆ
ಸನ್ಮತಿಯನೀಯೆಂದು ವಿಮಲನಾರಿ ! ॥ ೪ ॥

ಸೀತೆ ದಾರಿಗೆ ಬರುವಳೆಂದು ಕಾಯ್ದಿರಿ ಖಳನು
ಕಾವ ಕಬ್ಬಿಣದಂತೆ ಮನವು ಉರಿದು—
ಕಡಿದು ಚೆಲ್ಲುವೆನಿವಳ ಶಿರವನಿಳೆಗೆನ್ನುತಲಿ
ಸೆಳೆದಡಾಯುಧವನ್ನು ಮುಂದೆ ಜಡಿದು—
ರೋಷರೋಷದಿ ಕೋಪಗಚ್ಚಿ ಭುಗಿಲೇಳುತಿರೆ
ಬಂದನಾ ರಕ್ಕಸನು ಅಬಲೆಯೆದುರು,
ಅದಡವರಿಡೆಗಾಗಿ ಹಾರಿ ಬಂದವಳಾರು ?
ಮಂಡೋದರಿಯೆ ಅಹುದು ಪಾಪಭೀರು ॥ ೫ ॥

ಎನ್ನ ರುಂಡವನಿಲ್ಲಿ ಚೆಲ್ಲಿಹೋಗಿರಿ ಮುಂದೆ
ಇಲ್ಲನಾವಡೆ ಕಾಲರುದ್ರನಾಣೆ—
ಅಯ್ಯೋ ! ಕಡೆಗಾಲದಾ ದುರ್ನೀತಿಯೇ ಇದುವು !
ಎಂದು ನುಡಿದುದು ಹೃದಯರುದ್ರವೀಣೆ !
ರಾಮನಾಮಧ್ಯಾನಯೋಗದಲಿ ಕುಳಿತಂಥ
ಜಾನಕಿಯ ಪದರಜವ ತಲೆಯೊಳಿಟ್ಟು—
' ಆನಿರಲು ನಿನ್ನ ಕೂದಲ ಕೊಂಕಗೊಡೆತಾಯೆ '
ಎಂದಳಾ ಹದಿಬದೆಯು ಅಡಿಗೆ ಪೊಡಮಟ್ಟು. ॥ ೬ ॥

ಆಕಾಶ ಬೀಳುತಿರೆ ಕೈಯೆತ್ತಿ ಫಲವುಂಟೆ ?
ರಾವಣನ ಸರ್ವಾಂಗವೂ ಅಘಮಯ—
ಪರಪೀಡಕನು ಭೋಗಿಯಾಗೆ ಕೇಳುವುದುಂಟೆ ?
ಲಂಕಾಧಿಪನ ರಕ್ತವತಿ ವಿಷಮಯ !
ಮಂಡೋದರಿಯ ನೋಂಪಿ ನೀರಮೇಲಿನ ರೋಮ,
ಸಾಧಕೆಯು ನೇಮವನು ಬಿಡಲಿ ಇಲ್ಲ—
ದಾನವನ ಮಗಳಾಗಿ ರಾವಣನ ಸತಿಯಾಗಿ
ಅವಳ ಆರಾಧನೆಯ ದೇವ ಬಲ್ಲ ! ॥ ೭ ॥

ಜಾರಿದಳೆ ದೂರಿದಳೆ ಆ ಮಹೋನ್ನತ ಮಹಿಮೆ ?
ಸತಿಗೆ ಪತಿಯೇ ದೈವವೆಂದ ಬಾಲೆ—
ರಾವಣನ ಕಾಲಿನೆಯ ಹೃದಯದಲಿ ಬೆಳಕನ್ನು
ತುಂಬಲೆತ್ನಿಸಿದಂಥ ಸುಗುಣಶೀಲೆ—
ಕಣ್ಣಳತೆಯಾಚೆಗೂ ಕಲ್ಮರಳು ಚಾಚಿರುವ
ಮರಳುಗಾಡಿನ ಕಲ್ಪವೃಕ್ಷದಂತೆ—
ತಾಮಸವೆ ಮೈಯ್ಯಾಂತ ಲಂಕಾನಿವಾಸಿಗಳ
ಮಧ್ಯೆ ಮಂಡೋದರಿಯು ಪುಣ್ಯವಂತೆ ! ॥ ೮ ॥

———

ಸಮ್ರಾಟ್ ಅಶೋಕನ ಕೊನೆಯ ದಿನಗಳು

ಶ್ರೀ. ಜುಳಿಕ ಗೋವಿಂದರಾಯರು, ಧಾರವಾಡ

ಅಶೋಕನ ಜೀವನಾದರ್ಶಗಳನ್ನು ಇಂದು ಲೋಕವೆಲ್ಲ ಪ್ರಶಂಸಿಸುತ್ತಿದೆ; ಆದರೆ ಅವನ ಆದರ್ಶಗಳು, ಆತನ ಕಾಲದ ಲೌಕಿಕ ಜೀವಿಗಳಿಗೆ ಒಪ್ಪಿಗೆಯಾದುದರಿಂದ, ಅಶೋಕ ಸಮ್ರಾಟ ತನ್ನ ಕೊನೆಯ ದಿನಗಳನ್ನು ಹೇಗೆ ಕಳೆಯಬೇಕಾಯಿತು, ನೋಡಿ!

ಆದರ್ಶ ಸಮ್ರಾಟನಾಗಿ ರಾಜ್ಯಭಾರ ಮಾಡಿದ ಅಶೋಕನ ಕೊನೆಯ ದಿನಗಳು, ಆತನ ಬಾಳಿನಲ್ಲೇ ಅತ್ಯಂತ ಉಜ್ವಲವಾದ ಒಂದು ಉದಾರಕೃತಿಯಿಂದ ಚಿರಸ್ಮರಣೀಯವಾಗಿವೆ. ವೃದ್ಧ ಅಶೋಕನು ಅದೊಂದು ದಿನ ಶ್ರಾವಕರ ಮಹಾಸಂಘವನ್ನು ಕೂಡಿಸಿ, ಭಕ್ತಿಪೂರ್ವಕವಾಗಿ ಕೇಳಿದನು:—"ಭಿಕ್ಷುಗಳೇ, ಧರ್ಮಸಂಘಗಳಿಗೆ ಎಲ್ಲರಿಗಿಂತಲೂ ಹೆಚ್ಚು ದಾನ ಕೊಟ್ಟವರಾರು?"

ಕೂಡಲೇ ಭಿಕ್ಷುವೊಬ್ಬನು ಎದ್ದುನಿಂತು, "ಸಮ್ರಾಟ್! ಗುಹಪತಿ ಅನಾಥಪಿಂಡನು" ಎಂದು ಉತ್ತರವಿತ್ತನು.

ಆಶ್ಚರ್ಯಚಕಿತನಾದ ಅಶೋಕ ಮಹಾರಾಜನು ಪುನಃ ಪ್ರಶ್ನಿಸಿದನು:—"ಅನಾಥ ಪಿಂಡನು ನೂಡಿದ ದಾನವಾದರೂ ಎಷ್ಟು?"

"ಅನಾಥಪಿಂಡನ ದಾನವು ಒಂದು ಶತಕೋಟಿ, ಸಮ್ರಾಟ್?" ಎಂದು ಆ ಭಿಕ್ಷುವು ಉತ್ತರಿಸಿದನು.

ಇದನ್ನು ಕೇಳಿದ ಅಶೋಕ ಚಕ್ರವರ್ತಿಯು, ಹಣೆಯ ಮೇಲೆ ಕೈಯಿಟ್ಟುಕೊಂಡು ಯೋಚಿಸತೊಡಗಿದನು:—"ಅಹಾ! ಎಷ್ಟೊಂದು ಆಶ್ಚರ್ಯಕರವಾಗಿದೆ ಈ ವೃತ್ತಾಂತ! ಗುಹಪತಿ ಅನಾಥಪಿಂಡನು ಒಂದು ಶತಕೋಟಿ ದಾನಮಾಡಿದನಂತೆ! ನಾನು ಸಮ್ರಾಟನಾಗಿಯೂ ಆತನಷ್ಟು ದಾನಮಾಡಲು ಅಸಮರ್ಥನಾದೆನಲ್ಲ!" ಹೀಗೆ ಕೆಲಕಾಲ ಮೌನವಾಗಿದ್ದ ಅಶೋಕನು ಧಿಗ್ಗನೆ ಎದ್ದು ಗಂಭೀರವಾಣಿಯಿಂದ—"ಭಿಕ್ಷುಗಳೇ, ಇದೋ ಕೇಳಿ, ನಾನೂ ಒಂದು ಶತಕೋಟಿ ದಾನ ಕೊಡುತ್ತೇನೆ! ಇದು ನನ್ನ ದೃಢ ವ್ರತಿಜ್ಞೆ!" ಎಂದು ಸಾರಿದನು.

ಚಕ್ರವರ್ತಿ ಅಶೋಕನ ಮಹಾಪ್ರತಿಜ್ಞೆಯು ಸಾಮ್ರಾಜ್ಯದ ಉದ್ದಗಲಕ್ಕೂ ಪ್ರತಿಧ್ವನಿಸಿತು. ಅಂದಿನಿಂದಲೇ ಆ ಮಹಾಪುರುಷನು ತನ್ನ ಪ್ರತಿಜ್ಞಾಪೂರ್ಣತೆಗಾಗಿ ಅರ್ಥ ದಾನವನ್ನಾರಂಭಿಸಿದನು. ಜನಹಿತಕರವಾದ ವಿದ್ಯಾಲಯಗಳಿಗೂ, ಮಠ-ಚೈತ್ಯಾಲಯಗಳ ನಿರ್ಮಾಣಕ್ಕೂ, ಪುಣ್ಯಕ್ಷೇತ್ರ ಹಾಗು ತೀರ್ಥಸ್ಥಾನಗಳಿಗೂ ಅಶೋಕನು ಉದಾರವಾಗಿ ದಾನಮಾಡತೊಡಗಿದನು. ಹೀಗೆ ದಾನಮಾಡಿ ಮಾಡಿ, ಕೊನೆಗೊಂದು ದಿನ ಎಣಿಸಿ ನೋಡಿದನು; ದಾನಗಳ ಸಂಖ್ಯೆ ತೊಂಬತ್ತಾರು ಕೋಟಿಯಷ್ಟಾಗಿದ್ದಿತು. ಶತಕೋಟಿ ದಾನ ಪೂರಯಿಸಲು ಇನ್ನೂ ನಾಲ್ಕುಕೋಟಿ ದಾನ ಕಡಮೆಯಿದ್ದಿತು.

ಆದೇವೇಳೆಗೆ, ಅಶೋಕನು ಬೇನೆಯಿಂದ ಹಾಸುಗೆ ಹಿಡಿದನು. ಆತನ ಮನಸ್ಸು ನೋವಿನಿಂದ ಸಿಡಿಮಿಡಿಗೊಂಡಿತು. "ಅಯ್ಯೋ! ಈಗೇನು ಮಾಡಲಿ? ಪ್ರತಿಜ್ಞೆಯನ್ನು ಸ್ಥಿರಯಿಸದೆ ಸಾಯುವ ಹೊತ್ತು ಬಂದಿತಲ್ಲಾ?" ಎಂದು ಆತನು ಕೊರಗಿ ಸೊರಗಿದನು.

ಅಶೋಕನ ಆಪ್ತ ಸಚಿವನಾಗಿದ್ದ ಮುಖ್ಯಮಂತ್ರಿ ರಾಧಾಗುಪ್ತನು, ಚಕ್ರವರ್ತಿಯ ರುಗ್ಣಶಯ್ಯೆಯ ಬಳಿಗೆ ಬಂದು ಕೈಜೋಡಿಸಿ ಕೇಳಿದನು:—"ಸಮ್ರಾಟ್, ಇಂದೇಕೋ ತಾವು ಬಹಳ ಖಿನ್ನರಾಗಿರುವಂತೆ ತೋರುವುದಲ್ಲ!"

ಸಮ್ರಾಟನು ಕುಗ್ಗಿದ ದನಿಯಿಂದ ಹೇಳಿದನು— "ರಾಧಾಗುಪ್ತ, ಅರ್ಥನಾಶ, ಪ್ರಾಣನಾಶಗಳ ಸಂಶಯದಿಂದ ಬೆಂದು ಹೋಗಿದ್ದೇನೆ. ಅದರಿಂದ ತಾನಾಗಿಯೇ ಕಣ್ಣೀರು ಕೋಡಿವರಿಯುತ್ತಿದೆ. ಭಗವಾನ್ ಬುದ್ಧನ ಹಾಗು ಆತನ ಶುದ್ಧಾತ್ಮರಾದ ಶ್ರಮಣಸಂಘದ ಸದಿಚ್ಛೆಯ ಸಂಗವು ನನಗಿನ್ನು ಮೇಲಿ ದೊರೆಯಲಾರದೆಂದು ವ್ಯಥಿಸುತ್ತಿದ್ದೇನೆ. ಶ್ರಮಣ ಸಜ್ಜನರ ಸೇವೆಮಾಡುವ ಶಕ್ತಿ ನನ್ನಲ್ಲಿ ತೀರಿತಲ್ಲ!—ಎಂದು ಪರಿತಪಿಸುತ್ತಿದ್ದೇನೆ. ಇದಲ್ಲದೆ, ಧರ್ಮಸಂಘಗಳಿಗೆ ಶತಕೋಟಿ ದಾನ ನೀಡುವೆನೆಂದು ಮಾಡಿದ್ದ ಪ್ರತಿಜ್ಞೆಯು ಭಂಗವಾಗುವ ಹೊತ್ತು ಬಂತಲ್ಲ! ಹೃದಯವು ಈ ಚಿಂತೆಯಿಂದ ಬೆಂದುಹೋಗಿದೆ."

ಹೀಗೆ ಕೊರಗುತ್ತಿದ್ದ ಚಕ್ರವರ್ತಿಯು ತುಸು ಧೈರ್ಯವನ್ನು ತಂದುಕೊಂಡು, ಚೈತನ್ಯಯುಕ್ತನಾಗಿ ಮತ್ತೆ ಹೇಳಿದನು: "ರಾಧಾಗುಪ್ತ, ಇನ್ನುಳಿದ ನಾಲ್ಕು ಕೋಟಿ ದಾನದ ಸಲುವಾಗಿ ಭಾಂಡಾರವನ್ನೆಲ್ಲ ಬರಿದುಮಾಡಿ ಬಿಡುವೆನು. ಇಂದಿನಿಂದ ಭಾಂಡಾರದ ಬಾಗಿಲು ನನ್ನ ಕೈಗೆ ಮುಕ್ತದ್ವಾರವಾಗಲಿ!"

ಚಕ್ರವರ್ತಿ ಅಶೋಕನ ಮೊಮ್ಮಗ—ಕುಣಾಲಪುತ್ರ ಸಂಪದಿಯು—ಯುವರಾಜ ಪಟ್ಟವನ್ನೇರಿ, ಚಕ್ರವರ್ತಿಯ ಆಜ್ಞಾನುಸಾರವಾಗಿ ರಾಜ್ಯಭಾರ ನಡೆಸುತ್ತಿದ್ದನು. ದಿನದಿನವೂ ಭಂಡಾರವೆಲ್ಲ ಬರಿಯದಾಗುತ್ತಿರುವುದನ್ನು ಕಂಡ ಮಂತ್ರಿಗಳು ಯುವರಾಜ ಸಂಪದಿಯ ಬಳಿವಂದು, "ಚಕ್ರವರ್ತಿಗಳಿಗೆ ಮರಣಕಾಲ ಸಮೀಪಿಸಿದಂತಿದೆ. ಅವರು ಅಮಿತವಾಗಿ ದ್ರವ್ಯದಾನ ಮಾಡುತ್ತಿರುವುದರಿಂದ, ಅವರೊಂದಿಗೆ ಈ ರಾಜ್ಯದ ಸಕಲೈಶ್ವರ್ಯವೂ ನಷ್ಟವಾಹೊಂದುವುದೇ ಸರಿ;

ಸಾಮ್ರಾಜ್ಯವು ಹಾಳಾಗಿ ಹೋಗುವುದಲ್ಲಾ !" ಎಂದು ಹೇಳಿ ಕೊಂಡರು.

ಯುವರಾಜ ಸಂಪದಿಯು ಮಂತ್ರಿಗಳ ಮಾತನ್ನು ತೂಗಿನೋಡಿ, ಕೋಶಾಧ್ಯಕ್ಷನನ್ನು ಕರೆದು ಆಜ್ಞೆಮಾಡಿದನು:— "ಇನ್ನು ಮೇಲೆ ಭಂಡಾರದ ಬಾಗಿಲು ಮುಚ್ಚಿರಲಿ !"

ಯುವರಾಜನ ಆಜ್ಞೆಯಿಂದ ಚಕ್ರವರ್ತಿಯ ದ್ರವ್ಯದಾನಕ್ಕೆ ತಡೆಯುಂಟಾಯಿತು. ನಿರುಪಾಯನಾದ ಸಮ್ರಾಟನು, ತನ್ನ ನಿವಾಸದಲ್ಲಿದ್ದ ಸಿತ್ಯೋಪಯೋಗದ ಸುವರ್ಣಪಾತ್ರೆಗಳನ್ನೆಲ್ಲ ಕುಕ್ಕುಟಾರಾಮಕ್ಕೆ ದಾನಮಾಡಿ ಬಿಟ್ಟನು. ಇದನ್ನರಿತ ಯುವರಾಜನು ಬೆಳ್ಳಿಯ ಪಾತ್ರೆ–ಸಲಕರಣೆಗಳನ್ನೊದಗಿಸಿ ಕೊಟ್ಟನು. ಅಶೋಕ ಚಕ್ರವರ್ತಿಯು ಅವುಗಳನ್ನೂ ಆ ವಿಹಾರಕ್ಕೆ ದಾನವಾಗಿ ಕಳುಹಿಬಿಟ್ಟನು.

"ಇನ್ನು ಮೇಲೆ ಸಮ್ರಾಟರ ಉಪಯೋಗಕ್ಕೆ ಬೆಲೆಬಾಳುವ ಲೋಹಪಾತ್ರೆಗಳನ್ನು ಒದಗಿಸ ಕೂಡದು" ಎಂದು ಯುವರಾಜ ಸಂಪದಿಯು ಕಟ್ಟಪ್ಪಣೆ ಮಾಡಿಧನು. ಚಕ್ರವರ್ತಿ ಸಾರ್ವಭೌಮನಿಗೆ (ಮಣ್ಣಿನ ಪಾತ್ರೆ) ಮೃತ್ಪಾತ್ರೆಗಳಲ್ಲಿ ಆಹಾರವನ್ನೊದಗಿಸ ತೊಡಗಿದರು !!

ಶತಕೋಟಿದಾನದ ಪ್ರತಿಜ್ಞೆತೊಟ್ಟ ಚಕ್ರವರ್ತಿಯು ಬಂದುದೆಲ್ಲವನ್ನೂ ದಾನಸೀಡುತ್ತ ಹೋದನು. ಒಂದು ಕವಡೆಯ ಕಾಸೂ ಉಳಿಯಲಿಲ್ಲ !! ಕೊನೆಗೆ ಆ ಸಾರ್ವಭೌಮನಿಗೆ ಆಯಾಹೊತ್ತಿನ ಊಟ–ತಿನಿಸುಗಳಷ್ಟೇ ಒದಗಿಸಲ್ಪಡುತ್ತಿದ್ದುವು. ಪ್ರತಿಜ್ಞೆಯನ್ನು ಪೂರಯಿಸುವ ಚಲದಿಂದಾತನು, ತನ್ನ ಆಹಾರವನ್ನೂ ದಾನನೂಡುವುದರಲ್ಲಿದ್ದನು. ಆದರೆ, ಹಾಗೆ ಮಾಡುವುದರಿಂದ ಆತ್ಮಹತ್ಯೆಯು ಪಾಪಮಾಡಿದಂತಾಗುವುದಾದ್ದರಿಂದ, ಅದು ನಿಷಿದ್ಧಕಾರ್ಯವೆಂದಾತನು ಹಿಂದೆಗೆದನು. 'ಇನ್ನೂ ಶತಕೋಟಿದಾನವ ಗಡಿಮುಟ್ಟಲಿಲ್ಲವಲ್ಲಾ!' ಎಂದು ಆತನು ಅತ್ಯಂತ ತಳಮಳಗೊಂಡನು. 'ದಾನಮಾಡದೆ ಉಳಿದುದೇನಾದರೂ ಇದೆಯೋ ?' ಎಂದು ಆ ಮಹಾನುಭಾವನು ಆಜೀಜಿ ಹುಡುಕಾಡಿದನು. ಒಂದು ನೆಲ್ಲಿಕಾಯಿಯ ಚೂರು ಸಿಕ್ಕಿತು ! ಅಶೋಕ ಚಕ್ರವರ್ತಿಗೆ ತುಸು ಸಮಾಧಾನವಾಯಿತು. ಅದನ್ನೂ ಕುಕ್ಕುಟಾರಾಮಕ್ಕೆ ದಾನವಾಗಿ ಕಳುಹಲು ನಿಶ್ಚಯಿಸಿ, ಮಂತ್ರಿಗಳನ್ನೆಲ್ಲ ಬಳಿಗೆ ಕರೆಸಿಕೊಂಡು ಹೀಗೆಂದನು:— "ಮಂತ್ರಿಗಳೇ, ಈ ಭೂಮಂಡಲದ ಚಕ್ರವರ್ತಿಗಳು ಮತ್ತಾರಿದ್ದಾರೆ ?" ಆಪ್ತಬಂಧುವಿನಂತಿದ್ದ ಅಮಾತ್ಯಶ್ರೇಷ್ಠ ರಾಧಾಗುಪ್ತನು ಅತ್ಯಂತ ಗೌರವದಿಂದ ಬಾಗಿ ನುಡಿದನು: "ಸಮ್ರಾಟ್, ಈ ಧರಿತ್ರಿಗೆ ತಾವಲ್ಲದೆ ಮತ್ತಾರು ಅಧೀಶ್ವರರಿರುವರು ?"

ಅಶೋಕಚಕ್ರವರ್ತಿಯ ಕಣ್ಣಲ್ಲಿ ನೀರು ತುಂಬಿಬಂದಿತು. ಕಂಠ ಗದ್ಗದಿತವಾಯಿತು. ಆ ಮಂತ್ರೀಶನಿಗೆ ಹೀಗೆ ಹೇಳಿದನು:— "ರಾಧಾಗುಪ್ತ, ಇಲ್ಲದ್ದನ್ನೇಕೆ ಹೇಳುತ್ತೀ ? ನನ್ನ ಪ್ರಭುತ್ವ ಈಗೆಲ್ಲಿದೆ ? ನಾನು ರಾಜ್ಯಭ್ರಷ್ಟ, ಸಿಂಹಾಸನ ಭ್ರಷ್ಟ, ಈ ಲೌಕಿಕ ಐಶ್ವರ್ಯಕ್ಕೆ ಧಿಕ್ಕಾರ, ಧಿಕ್ಕಾರ ! ಸಮುದ್ಯಾಂತವಾದ ಈ ಭೂಮಂಡಲಕ್ಕೆ ಅಧಿಪತಿಯಾದ ನನ್ನ ಮನಸ್ಸು ದಾರಿದ್ರ್ಯಭಯದಿಂದ ತಲ್ಲಣಿಸುತ್ತಿದೆ. ನಾನಿಂದು ಭಿಕಾರಿ ! ನನ್ನಬಳಿ ಏನಿದೆ? ಇದೋ, ನೋಡಿ, ಈ ನೆಲ್ಲಿಕಾಯಿಯ ತುಣುಕು ! ಇದಿಷ್ಟೇ ನನ್ನ ಪ್ರಭುತ್ವದಲ್ಲಿರುವ ಐಶ್ವರ್ಯ!...."

ಸಂಪತ್ತು ವಿಪತ್ತಿಗೆ ಮೂಲವೆಂಬ ಭಗವಾನ್ ಬುದ್ಧನ ಉಪದೇಶವಾಣಿಯ ಅರ್ಥವು ಈಗ ನನಗಾಯಿತು. ಯಾವ ಸಮ್ರಾಟನ ಶಾಸನವು ಮಹಾನದಿಯ ಪ್ರವಾಹದಂತೆ ಅಡೆತಡೆಯಿಲ್ಲದೆ ಸಾಗುತ್ತಿದ್ದಿತೋ ಅದು, ಇಂದು ಪರ್ವತಶಿಲೆಗಳಿಗೆ ಸಿಲುಕಿ ಸೀಳು ಸೀಳಾಗಿ ಹೋಗಿದೆ !"

ಕಂಪಿಸುತ್ತಿದ್ದ ಚಕ್ರವರ್ತಿಯು, ರುಗ್ಣಶಯ್ಯೆಯ ದಿಂಬಿಗೆ ಒರಗಿಕೊಂಡನು. ಬಳಿಯಲ್ಲಿಯೇ ನಿಂತಿದ್ದ ರಾಜಸೇವಕನನ್ನು ಕರೆದು ಹೀಗೆಂದನು:— "ಎಲೈ ಭದ್ರನೆ ! ಇಂದು ನಾನು ಸರ್ವಶೂನ್ಯನಾಗಿದ್ದೇನೆ. ಹಿಂದೆ ನಾನು ಮಾಡಿದ್ದ ಉಪಕೃತಿಗಳನ್ನು ನೆನೆದುಕೊಂಡಾದರೂ ಈ ನನ್ನ ಆಜ್ಞೆಯನ್ನು ಪಾಲಿಸು. ಇದೋ, ತೆಗೆದುಕೊ ಈ ನೆಲ್ಲಿಯ ಚೂರನ್ನು! ಇದನ್ನು ಕುಕ್ಕುಟಾರಾಮ ಸಂಘದ ಅಧ್ಯಕ್ಷನಿಗೆ ಕೊಟ್ಟು ಹೀಗೆ ಹೇಳು:— 'ಈ ಜಂಬುದ್ವೀಪಾಧೀಶ್ವರನಾಗಿ ಮೆರೆದ ಚಕ್ರವರ್ತಿ ಅಶೋಕನ ವೈಭವದ ಅವಶೇಷವಾಗಿ ಈಗ ಉಳಿದದ್ದೆಂದರೆ ಈ ನೆಲ್ಲಿಯ ಚೂರು. ಇದನ್ನು ದಾನವಾಗಿ ಸ್ವೀಕರಿಸಬೇಕು. ಇದೇ ನನ್ನ ಕಟ್ಟಕಡೆಯ ದಾನ. ಇದರಿಂದಲೇ ಆ ಸಂಘದ ಸರ್ವ ಸೇವೆಯೂ ಪೂರೈಸಲಿ !"

"ರಾಜಾಜ್ಞೆ" ಎಂದು ನುಡಿದು ಆ ರಾಜಸೇವಕ ಕುಕ್ಕುಟಾರಾಮಕ್ಕೆ ತೆರಳಿ, ಸಂಘಾಧ್ಯಕ್ಷನಿಗೆ ವಂದಿಸಿ, ಅಶೋಕಚಕ್ರವರ್ತಿಯು ಕಳುಹಿಸಿದ "ಅಮಲಕಶೇಷದಾನ"ವನ್ನರ್ಪಿಸಿ, ಆತನೆಂದ ಮಾತನ್ನರುಹಿದನು.

ಆ ಶೇಷದಾನವನ್ನೊಪ್ಪಿಸಿಕೊಳ್ಳುತ್ತ ಸಂಘಾಧ್ಯಕ್ಷನು ಹೀಗೆಂದನು:—

"ಪರರ ಮುಖವನ್ನು ಕಂಡು, ಪರಿತಪಿಸುವುದರಿಂದಲೇ ವೈರಾಗ್ಯ ಉತ್ಪನ್ನವಾಗುತ್ತದೆಂದು ಭಗವಾನ್ ಬುದ್ಧನು ಹೇಳಿರುವನಲ್ಲವೇ ? ಇಂದಿನ ಅಪೂರ್ವ ಘಟನೆಯಿಂದ ಯಾರಿಗೆ ತಾನೇ ವಿಷಯ ವಾಸನೆ ಅಳಿಯದಿದ್ದೀತು ?

ಸಮುದ್ರಾಂಕಿತ ಧರಾಧೀಶ್ವರನಾಗಿದ್ದ ಸಮ್ರಾಟ್ ಅಶೋಕ ನಿಂದು ಕೇವಲ ಒಂದು ಚೂರು ನೆಲ್ಲಿಕಾಯಿಗೆ ಮಾತ್ರವೇ ಒಡೆಯನಾಗಿದ್ದಾನೆ. ಅದನ್ನು ಕೂಡ ಶ್ರದ್ಧಾ ಭಕ್ತಿಯುತನಾಗಿ ದಾನಕೊಟ್ಟಿದ್ದಾನೆ. ಎಂತಹ ಅಭೂತಪೂರ್ವ ಐಶ್ವರ್ಯದ ದಾನವಿದು ! ಧನಗರ್ವಿತರ ಅಭಿಮಾನವನ್ನಿದು ಕುಟ್ಟಿ ಪುಡಿ ಪುಡಿ ಮಾಡಿದೆ."

ಸಂಘಾಧ್ಯಕ್ಷನು ಆ ಮಹಾ"ಶೇಷದಾನ"ವನ್ನು ಚೂರ್ಣಿಸಿ ಪ್ರಸಾದದಲ್ಲಿ ಕಲಿಸಿ, ಸಮಸ್ತ ಭಿಕ್ಷುಗಳಿಗೂ ಹಂಚಿಕೊಟ್ಟನು.

ರಾಜಸೇವಕನು ಚಕ್ರವರ್ತಿಯ ಬಳಿಗೆ ಬಂದು ಈ ಘಟನೆಯನ್ನು ಬಣ್ಣಿಸಿದನು. ರುಗ್ಣಶಯ್ಯೆಯ ಪಕ್ಕದಲ್ಲಿ ನಿಂತಿದ್ದ ಅಮಾತ್ಯಶ್ರೇಷ್ಠ ರಾಧಾಗುಪ್ತನನ್ನು ನೋಡಿ ಚಕ್ರವರ್ತಿಯು ಪ್ರಶ್ನಿಸಿದನು :—ರಾಧಾಗುಪ್ತ, ಈಗಲಾದರೂ ಹೇಳು, ಈ ಭೂಮಂಡಲದ ಅಧಿಪತಿಯಾರು?"

ತಲೆಬಗ್ಗಿಸಿ ವಂದಿಸುತ್ತ ರಾಧಾಗುಪ್ತನೆಂದನು:— "ಮಹಾ ವ್ರಭೋ, ಈ ಧರಿತ್ರಿಗೆಲ್ಲ ತಾವೇ ಚಕ್ರವರ್ತಿಗಳು. ಶಮ್ಮನ್ನು ವಿಾರಿಸುವ ಚಕ್ರವರ್ತಿ ಮತ್ತಾವನಿದ್ದಾನೆ ?"

ಸಮ್ರಾಟನು ಎದ್ದುಕುಳಿತು, ಸುತ್ತಲೂ ನೋಟವನ್ನು ಬೀರಿ, ಮನಸ್ಸಿನಲ್ಲಿಯೆ ಭಿಕ್ಷುಸಂಘವನ್ನು ಸ್ಮರಿಸಿ, ಕೈಜೋಡಿಸಿ ಹೀಗೆ ಪ್ರಾರ್ಥನೆ ಮಾಡಿದನು:—"ಸಾಗರಾಂತವಾದ, ಈ ರತ್ನಗರ್ಭೂಭವಿಯೆಲ್ಲವೂ ಭಗವಂತನು ಅನಾಥರಕ್ಷಣೆಗಾಗಿ, ಧರ್ಮಸಂಘಕ್ಕಾಗಿ, ಲೋಕಸೇವೆಗಾಗಿ ಕೊಟ್ಟಿರುವ ಮಹಾದಾನ. ಯಾವ ಸ್ವಾರ್ಥ ಲಾಭದ ಇಚ್ಛೆಯನ್ನೂ ಇಟ್ಟುಕೊಳ್ಳದೆ, ಇದನ್ನೆಲ್ಲ ಸಂಘಕ್ಕೆ ದಾನ ಮಾಡುತ್ತೇನೆ." ಬಳಿಕ ರಾಧಾಗುಪ್ತ ಅಮಾತ್ಯನನ್ನು ಬಳಿಗೆ ಕರೆಯಿಸಿ, ಸಮ್ರಾಟ ಅಶೋಕನು ತನ್ನ ಅಂಕಿತಹಾಕಿ ದಾನಪತ್ರ ಬರೆಯಿಸಿ ಕೊಟ್ಟನು. ತುಸುಹೊತ್ತಿನಲ್ಲಿಯೆ ಸಮ್ರಾಟ್ ಅಶೋಕನ ಪ್ರಾಣಪಕ್ಷಿ ದೇಹಪಂಜರದಿಂದ ಹಾರಿಹೋಯಿತು.

ಮಂತ್ರಿಮಂಡಲವು ಪ್ರಜಾಗಣದೆದುರು, ಯುವರಾಜ ಸಂಪದಿಗೆ ಚಕ್ರವರ್ತಿ ಪಟ್ಟಕಟ್ಟುತ್ತಿರುವಾಗ, ಮಂತ್ರೀಶ ರಾಧಾಗುಪ್ತನೆಂದನು:— "ಸಮ್ರಾಟ ಅಶೋಕನು ಸಾಮ್ರಾಜ್ಯವನ್ನೇ ಧರ್ಮಸಂಘಗಳಿಗೆ ದಾನಮಾಡಿದ್ದಾನೆ. ಇದೋ, ಆತನ ಸ್ವಹಸ್ತಾಂಕಿತ ದಾನಪತ್ರ."

ವಿಸ್ಮಯಪಟ್ಟು ಅಮಾತ್ಯವೃಂದವು ಕೇಳಿತು: "ಅದೇಕೆ ಹಾಗೆ ಮಾಡಿದರು ಸಮ್ರಾಟರು ?"

" ಸಮ್ರಾಟರು ಧರ್ಮಸಂಘಗಳಿಗೆ ಒಂದು ಶತಕೋಟಿ ದಾನ ನೀಡುವ ಪ್ರತಿಜ್ಞೆಮಾಡಿದರು. ತೊಂಬತ್ತಾರುಕೋಟಿ ದಾನಮಾಡುವ ಸ್ಥರಲ್ಲಿಯೇ ಭಾಂಡಾರವು ಮುಚ್ಚಲ್ಪಟ್ಟಿತು. ಉಳಿದ ನಾಲ್ಕುವರೆ ಕೋಟಿಗಳ ಸಲುವಾಗಿ ಸಾಮ್ರಾಜ್ಯವನ್ನೇ ಸಾರ್ವಭೌಮರು ದಾನ ಮಾಡಿದ್ದಾರೆ" ಎಂದು ರಾಜಗುಪ್ತನು ಸಾರಿದನು.

ಆಗ ಸಮಸ್ತಜನರೂ ಸಮ್ರಾಟನ ಪ್ರತಿಜ್ಞಾಪೂರ್ಣತೆಯ ವೃತ್ತಾಂತದಿಂದ ಪುಲಕಿತರಾಗಿ, ಹರ್ಷೋದ್ಗಾರ ತೆಗೆದರು. ಧರ್ಮಸಂಘಕ್ಕೆ ಇನ್ನೂ ಸಲ್ಲಬೇಕಾಗಿದ್ದ ನಾಲ್ಕುಕೋಟಿ ದಾನವನ್ನು ಕೊಟ್ಟು, ಸಾಮ್ರಾಜ್ಯವನ್ನು ಬಿಡಿಸಿಕೊಂಡರು. ಯುವರಾಜ ಸಂಪದಿಯು ಚಕ್ರವರ್ತಿ ಪೀಠವನ್ನೇರಿದನು.

———

ದಿ ಸದ್ವೈದ್ಯ ಶಾಲಾ [ಪ್ರೈವೇಟ್] ಲಿಮಿಟೆಡ್,

— ಸಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ

ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ

ಅತ್ಯಾಧುನಿಕ ಕ್ರಮದಲ್ಲಿ

ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ

ನಿತ್ಯವೂ ತಯಾರಾಗುತ್ತಲಿವೆ.

॥ ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ ॥

ಶಾಖೆಗಳು :

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು : (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)

(ಕನ್ನಡ ನೀಮೆ ಬಿಟ್ಟು)

ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಸಮ್ಮೇಲನದ ಸರಂಜಾಮು

ಇಲ್ಲವೆ

ನಾಟಕದ ನಾಟಕ!

(ನಾಟ್ಯಛಟ)

ಶ್ರೀ. ಎನ್. ಎಸ್. ಗದಗಕರ, ಬಿ. ಎ. ಧಾರವಾಡ

[ನಿಮುಲಾ ಹೈಸ್ಕೂಲಿನಲ್ಲಿ ಶಿಕ್ಷಿಕೆ. ಜೋಡು ಪದವೀಧರಳು. ಆದರೂ ದರ್ಜೆಗೆ ತಕ್ಕಷ್ಟು ವೇಷಭೂಷಗಳಲ್ಲಿ ಆಡಂಬರವಿಲ್ಲ. ಹಾಗೆ ನೋಡಿದರೆ, ಹಳೆ ಹೊಸದರ ತಿಕ್ಕಾಟದ ಕಲ್ಪನೆಯನ್ನು ಸೂಡಿಕೊಡುವಂತಹದು ಆಕೆಯ ನಡೆನುಡಿ, ವೇಷದ ರೀತಿ. ಇದೀಗ ಶರತ್ಕಾಲದ ಸುಂಜಾವು. ಸೂರ್ಯ ರಶ್ಮಿಗಳಲ್ಲಿ ಅಂತಹ ಚುರುಕು ಕಾಣದಿದ್ದರೂ ಚೈತನ್ಯಕ್ಕೇನೂ ಕೊರತೆ ಇಲ್ಲ. ಅದರ ಪ್ರತೀಕವೇ ನಿಮುಲೆ. ಬಿಡುವಿನ ದಿನವಾದ್ದರಿಂದ ಎಲ್ಲ ಚಟುವಟಿಕೆಗಳಲ್ಲಿಯೂ ಅಂತಹ ದೈವೀ ರಭಸವಿಲ್ಲ. ಹಾಯಾಗಿ ವಿರಾಮಾಸನದಲ್ಲಿ ಕುಳಿತಿರುವಳು—ಪ್ರಸನ್ನ ಮುಖಮುದ್ರೆಯಲ್ಲಿ. ಕೈಯಲ್ಲೊಂದು ಸಾಮಾಜಿಕ ಕಾದಂಬರಿ. ಅರ್ಧ ಮುಗಿದಂತಿದೆ. ಅಷ್ಟರಲ್ಲಿ ತನ್ನ ಜೀವದ ಗೆಳತಿ—ಸುನಂದೆ ಮೊದಲು ಕಾಲೇಜಿನ ಸಹಪಾಠಿಯಾದವಳು - ಹೊರದಿಂದ ಬರುವದನ್ನು ಕಂಡು ಸಾವರಿಸಿಕೊಳ್ಳುತ್ತ]

(ಅತುರತೆಯಲ್ಲಿ) ಅಲೆಲೆಲೆ—ಏನು ನಂದಕ್ಕಾ, ಎಷ್ಟು ದಿವಸಕ್ಕೊಮ್ಮೆ ಬರೋದು ಏನ ತಾನಾ! ಹೋದ ಆದಿತ್ಯವಾರ ನಮ್ಮ ಕಾಕಾ ಆನರ ಹಳ್ಳಿಗೆ ಜ್ವಾಳದ ಬೆಳಸೀ ತಿನ್ನಲಿಕ್ಕೆ ಹೋದಾಗಿನ ಭೆಟ್ಟೀನs ಭೆಟ್ಟಿ. ಏನು ಗಡಿಬಿಡಿ ಅಂದಿಂದು ನಿಂದು! ಒಳೇ ಅವಸರದಲೆ ನಮ್ಮನ್ನ ಸರ್ವೀಸ ಬಸ್ಸಿನ್ಯಾಗ ಹೊರಡಿಸಿದಿ. ಇಲ್ಲದಿದ್ದರ, ಮರುದಿನ ಒಂದು ಇದ್ದು, ಮೇಜವಾನೀ ಮುಗಿಸಿಕೊಂಡು ಬರಲಿಕ್ಕೆ ಬರತಿತ್ತು. ನಮ್ಮ ಮಾಧೂಕಾಕಾ ಬಹಳ ಚಡಪಡಿಸಿದರು—ಅಸಿಗ್ಗೊಮ್ಮೆ ಬ್ಯಾಸಿಗ್ಗೊಮ್ಮೆ ಬರೋ ನಿನ್ನ ಸಲುವಾಗಿ!

.....ಇರಲಿ ಸುತ್ತೀನವಾ ಹಕೀಕತ್ತು? ಏ ಹೀಂಗ ತೋಕ ಮಾತು ಆಡಿದೆ ಅಂತ ಬ್ಯಾಸರೀಬ್ಯಾಡ. ಗೆಳೆತನದ ರೀತಿ ಅದು. ಸಾದಾ ಬಂದರೂ ನನಗ ಅನಂದ. ಆದರ ವಿಶೇಷ ಕೆಲಸ ಇತ್ತೀನು ಅನ್ನಲಿಕ್ಕೆ ಹಾಂಗ ಕೇಳಿದೆನವ್ವಾ. ಏನಂದಿ? ನಿಮ್ಮ ವಿಶೂಗ ಒಂದು ನಾಟಕ ಬೇಕಾಗಿತ್ತುs—ಸಾಲೀ ಗ್ಯಾದರಿಂಗನ್ಯಾಗ ಮಾಡಲಿಕ್ಕೆ? ಒಳೆ ನನ್ನ ಕಡೆ ಬಂದಿ. ನಾ ಏನs ಸಾಹಿತೀನ? ಏನು ಎಂದರs ಬರದಿದ್ದೀನs? ಪಾರ್ಟು ಮಾಡಿದ್ದೀನs? ನಾಲ್ಕು ಬಿಟ್ಟು ಐದು ಮುಂದಿ ಗೆಳತಿಯರ ಮುಂದ ನಾತಾಡೊ ಪ್ರಸಂಗ ಬಂದರs 'Qui vered like an aspen leaf' ಅಂತಾರಲ್ಲಾ ಹಾಂಗವ್ವಾ ನನ್ನ ಪರಿಸ್ಥಿತಿ. ಆದರ ನೋಡವಾ, ಹುಡುಗರೊಳಗ ಅಡ್ಡಾಡೊ ನಶಿಬ ನಿತ್ಯದ್ದು. ಕೇಳಿದಿ, ದೊಡ್ಡ ತಪ್ಪಲ್ಲ!

(ಒಪ್ಪಂದದ ಶೀನಿಯಲ್ಲಿ) ಹಾಂ....ಲೇಖನ ಬರೆಯದಿದ್ದರೂ ಕನ್ನಡ ಸಾಹಿತ್ಯದ ಪಾಸಿಗೀ ಅಭ್ಯಾಸ ನನಗ ಕಡಿಮೆ ಇಲ್ಲ ಅಂತೀಯಾ? ಅನ್ನುಅನ್ನು. ಪರಸ್ಪರ ಪ್ರಶಂಸಾ ಸಂಘ ಆದರ ಆಗವೊಲ್ಲದಾಕ ಇಬ್ಬರದು. ಖರೇನs ನಾ ಓದಿಕೊಂಡಾಕಿ ಅಂತೀಯಾ? ಇರಲಿಬಿಡು. ಆದರ ನೋಡು, ನಂದಕ್ಕಾ, ಎಸ್. ಎಸ್. ಸಿ. ಕನ್ನಡ ಕಲಿಸಲಿಕ್ಕೆ ಹತ್ತಿ ಹತ್ತು ವರ್ಷ ಆದರೂ ನಾ ಬಿ. ಎ. ಕ್ಕ ತೊಗೊಂಡಿದ್ದು ಸಂಸ್ಕೃತ-ಇಂಗ್ಲಿಶ್ ಅಲ್ಲೇನವಾ? ಹೊಟ್ಟಿಕಿಚ್ಚಿಲೆ ಕಲಿಸೊ ರೂಢಿ ಮಾಡಿಕೊಂಡೇನಿ. ಅವೂ ಸುಸೈವದಲೆ ಅಂಥಾ ಮಹತ್ತ್ವಾಕಾಂಕ್ಷಿ ಹುಡುಗರು ಗಂಟುಬಿದ್ದು ಪೀಡಿಸಿಲ್ಲ ಇನ್ನೂತನಕ. ಕಾಲುಸೂಟಿಯಮ್ಯಾಲೆ, ಗತ್ತುಗಾರಿಕೀಲೆ ಪಾರಾಗತೇನಿ; ಸುಳ್ಳಲ್ಲ....

(ತಪ್ಪಿತಸ್ಥಳಂತೆ) ಏನು? ಗಾಡಿ ಹಳಿ ಬಿಟ್ಟಿತು ಅಂತೀಯಾ? ಖರೇನವಾ. ಮತ್ತ ಬರತೇನಿ ತೊಗೊ! ನಾಟಕ ಅಂದ್ಯಾ? ಎಲ್ಲಿ ಅವ ತಂಗೀ ಕನ್ನಡದಾಗ? ಮಾಡಿ ಮಾಡಿ ಹಳೇವು ಆದುವು. ಬರೆ ಮಾಡೊವರು ಯಾಕ ಅವ್ವಾ. ಕೇಳೋವರಿಗೆ ಕೂಡಾ ಪಾಠು ಆದುವು! ಮಾತು ಯಾಕ? ಹಾವಭಾವ ಸಹ ತಪ್ಪಿದರ ಪಾರ್ಟದಾರರಿಗೆ ಹೇಳಿಕೊಡತsದ ಆಡಿಯನ್ಸು! ಕನ್ನಡ ರಂಗಭೂಮಿಗೆ ಅವಮಾನ ಮಾಡೋ ಉದ್ದೇಶ ಇಲ್ಲ ನನಗ. ನನ್ನ ಮನಸು ಅಷ್ಟು ಚಿಲ್ಲರು ಅಲ್ಲಾ ಅಂದೆ!

....ನಾಟಕ ಆಗೀಗ ಚೆಲೋವು ಸಿಕ್ಕರೂ ಮಾಡೋವರಿಗೆ ತೊಡಕು ಭಾಳು ಅಂತೀಯಾ ? ಖರೆ. ಹೆಣ್ಣು ಪಾರ್ಟು ಗಂಡು ಹುಡುಗರು ಹಾಕಲಿಕ್ಕೆ ನಾಚತಾರ ಅಂತೀಯಾ ? ಹೌದವಾ, ಹಾಂಗಾದರ ಹೆಣ್ಣುಹುಡುಗರು ಗಂಡುಪಾರ್ಟು ಹಾಕಲಿಕ್ಕೆ ಹ್ಯಾಂಗ ಮುಂದ ಬರಬೇಕು ಹೇಳು ?

(ಏನೋ ಮರೆತವಳಂತೆ) ನಂದಕ್ಕಾ, ಮಾತಿನ ಮಲಿಕಿನ್ಯಾಗ ಗೃಹಸ್ಥಾನಿಕಿ ಲಕ್ಷಣನs ಮರೆತೆ ನೋಡವ್ವಾ. ನಿನಗ ಚಹಾದ ವ್ಯವಸ್ಥಾದ ಸಲುವಾಗಿ ಒಳಗ ಹೇಳಿಬರತೇನಿ ನಿಂದ್ರು.

....ಏನು ? ಬ್ಯಾಡಾ ಬ್ಯಾಡಾ— ಪರಕೀಯಳೇನು ನಾ ಅಂತೀಯಾ ? ಹೌದs ಹುಡಿಗಿ, ನೀ ಹಾಂಗ ಅನ್ನೋದs ಛಂದಾ. ನಾ ಮುಂಡಾಟಗಿ ಮಾಡಿ ಚಹಾ ಮಾಡಿಸೋದು ಛಂದ. ಆ ವಿಷಯ ಬ್ಯಾರೆ.

....ನಾಟಕ ನೆಟ್ಟಗಿದ್ದವು ಸಿಕ್ಕರೂ ಮಾಡೋವರಿಗೆ ಉತ್ಸಾಹ ಕಡಿಮಿ ಆಗೇದ ಅಂತೀಯಾ ? ಅದಕ್ಕ ಕಾರಣ ಅದೇ ನೋಡು. ಬರೆ ಉದ್ದಕ ನಾಟಕ ಇರಬಾರದು. ಏಕಾಂಕ ಇದ್ದರೇನಾತು ? ಅಲ್ಪ ಸ್ವಲ್ಪ ಹಾಡಿಗೆ ಭಾವಗೀತಕ್ಕ ಅವಕಾಶ ಯಾಕ ಇಡಬಾರದು ನಾಟಕ ಕಾರರು ? ' ನಾಟ್ಯಂ ಭಿನ್ನ ರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ ' ಅಂತ ಕಾಲಿದಾಸ ಆಟಕ್ಕ ಹೇಳಿದನೇನು ಕಲೋಪಾಸಕರಿಗೆ ? ಹತ್ತರಾಗಿನ ಆರು ನಾಟಕದಾಗ ತಂಗಿ,—ನಾ ಓದೇನಿ; ಮಾಡಿಸಿದ್ದು ನೋಡೇನಿ ! ಅಲ್ಲಾs; ಪಂಶುದ್ಧ ವಿನೋದ ಅಂದರ, ಔಷಧಕ್ಕ, ನೋಡು ! ಇದನೆಲ್ಲಾ ನೋಡಿದರ, Julius caesar, Hamlet, Sohrab and Rustum School for Scandal, Doctor's Dilemma ದಂಥಾನಾಟಕದೊಳಗಿನ ದೃಶ್ಯ ಒಳ್ಳೆ ಕನ್ನಡದಾಗ ಮಾಡಬಾರದು ಯಾಕ ಅಂತ ಆಶಾದ ವಾತಾವರಣ ಹುಟ್ಟತದ ಮನಸಿನ್ಯಾಗ. ಮರುಕ್ಷಣಕ್ಕ ನೋಡನಾ, ಮಾತಿನ್ಯಾಗಿನ ಉತ್ಸಾಹ ಕೈಯ್ಯಾಗ ಇಲ್ಲಲ್ಲಾ ಅಂತ ಕೆಡುಕು ಅನಸ್ತದ. ಆದರ ನನ್ನ ವಿಮರ್ಶಾ ಸುಳ್ಳು ಅಂತೀ ಏನು ? ತಂಗಿ ಅನುಭವ ಹೆಚ್ಚಿಂದs, ಬುದ್ಧಿಯೊಳಗ ಏನು ಆದ ಸುಡುಗಾಡು !

(ಆಹ್ವಾನದ ಧರ್ತಿಯಲ್ಲಿ) ಏನು, ಹೀಂಗ ತೊಡಕು ಇದ್ದರ, ಗ್ಯಾದರಿಂಗಿನ್ಯಾಗ ನಾಟಕ ಯಾಕ ಬಿಡಬಾರದು—ಅನಸ್ತದs ನಿನಗ ? ಛೆ ! ನಂದಕ್ಕಾ, ಇದs ತಪ್ಪು ನೋಡು ನಿಂದು. ಅಲ್ಲವಾ, ಈ ಸ್ನೇಹ ಸಮ್ಮೇಲನದ ಮುಖ್ಯ ಅಂಗ ಅಂದರ ನಾಟಕವಾ. ಫೋಟೊ ಏನು ಹೊಸಾದು ? ಟಿಫಿನ್—ಏನು ಅಂಗಡ್ಯಾಗ ೮-೧೦ ಆಣೆ ಚೆಲ್ಲಿದರ ಹೊರಳಾಡಿ ಹೋಗತsದ ಒಬ್ಬರ ಸಲುವಾಗಿ. ಇನ್ನು ಆಟನೋಟಾ ಅಂತೀಯಾ ? ಅದೇನು ? ವರುಷದ ಯಾವ ಋತುಮಾನದಾಗಾದರೂ ಸಾಧಿಸೀತು !

ನನ್ನ ವಕೀಲೀ ಮಾತುಗಾರಿಕೆಗೆ ಬ್ಯಾಸತ್ತಿ ಏನು ? ಬ್ಯಾಸತ್ತರೂ ಬಿಡೊ ಹಾಂಗ ಇಲ್ಲ ...ಚಹಾ ಬರೊತನಕ. (ಚಹ ಬೇರೆ ಉಪಹಾರ ಅಷ್ಟರಲ್ಲಿ ಬರಲು) ಯಾಕ ನಂದಕ್ಕಾ, ಎಷ್ಟ ಬೆಚ್ಚಿ ಬಿದ್ದಿಯಲ್ಲಾ ಈ ಸಾಮಾನಕ್ಕ ? ಮಧ್ಯಾಸ್ತದ ಊಟಾ ಎರಡು ತುತ್ತು ಕಡಿಮಿ ಮಾಡಲಾ ! ಏನು ಕೊಟ್ಟೆ ಸಾಲಾ ? ತೊಗೊ ತೊಗೊ ! ಹಿಂದಕ ಸರಿ ಬ್ಯಾಡಾ ಹೌಹಾರಿ.

(ಉಪಹಾರ ನಡೆದಾಗ) ನಂದಕ್ಕಾ, ನಾಟಕದ ಉದ್ದೇಶನs ಅರ್ಥಾ ಆಗಿಲ್ಲ—ಈಗಿನ ನೋಡೊವರಿಗೆ ಮಾಡೊವರಿಗೆ ! ಬಹಳ ಪಾರ್ಟುದಾರರು ಜನರನ್ನ ನಗಿಸಲಿಕ್ಕೆ ಹಾತೊರಿತಾರ. ನೀತಿಬೋಧನೆ ಇದ್ದ ನಾಟಕ ಆರಿಸಲಿಕ್ಕೇ ಒಲ್ಲರು.ಬರೆ ಮಿಂಚು, ಥಳುಕು, ಶೃಂಗಾರ, ಇರಲಿ ಅಂತಾರ. ಸಮಾಜದ ಮ್ಯಾಲೆ ಆಗೋ ಪರಿಣಾಮದ ಖಬರು ಇಲ್ಲ ಅವಕ್ಕ. ಇಂದ ಕಟ್ಟೆಯಾಡಿಸಿದ್ಹಾಂಗ ಅನಿಸಿದರ ಸಾಕು ! ನಾಳಿನ ಮಾತು ನಾಳೆ !

ಪೌರಾಣಿಕ ನಾಟಕ ಆರಿಸಲಿಕ್ಕೆ ಅಡ್ಡಿ ಇಲ್ಲ ಅಂತೀಯಾ ? ಖರೇನವಾ ನಿನ್ನ ಮಾತು. ಆದರೆ ಅವು ಅತಿ ಸಾಂಪ್ರದಾಯದ್ದವು ಆಗಿ ವಸ್ತು-ಸಮಸ್ಯಾ-ಮಾತು ನೆಲಾಬಿಟ್ಟು ಮ್ಯಾಲಕ್ಕs ಏಳೂದಿಲ್ಲ ! ಅತಿ ಮಡಿವಂತಿಕೆ ! ಸಂಭಾಷಣಾ ನೋಡಿದ್ಯಾ ? ಪಾರ್ಟುದಾರರು ಉಸಿರುಗಟ್ಟಿ ನೀರು ನೀರು ಅಂತ ಬೇಡೊ ಅಷ್ಟ ದೊಡ್ಡ ವಾಕ್ಯ. ಒಳಗ ಜೀವ ? ಸುದ್ದಿ ಇಲ್ಲ ! (ನೆನಪು ಮಾಡಿಕೊಳ್ಳುತ್ತಾ) ಪೊನ್ನೆ ನಮ್ಮ ಕರ್ನಾಟಕ ಸಂಘದ ಉದ್ಘಾಟನಕ್ಕ ಬಂದಿದ್ದರಲ್ಲs ಒಬ್ಬ ಉಪನ್ಯಾಸಕರು—ಅವರು ಹೇಳಿದ್ದು ನೆನಪು ಅದs ಇಲ್ಲೊ ? ಸಂಭಾಷಣದ ಮಾತು ಕಿಡಿಕಿಡಿ ಇರಬೇಕು. ಗತೀನ? ಚಕಚಕ ಸಾಗಬೇಕು. ಬೆಲ್ಲಾ ಬಡಿದ ಕಲ್ಲಿನ್ಹಾಂಗ ಜನಾ ಆಗಿರಬೇಕು. ನೋಡು ಒಟ್ಟು ಅಷ್ಟು ಗರ್ಕ ! ಎಲ್ಲರಿಗೆ ಬುದ್ಧಿ ಹೇಳಲಿಕ್ಕೆ ಬರತದsದ. ಬರದು ತೋರಿಸು ಅಂಥಾ ನಾಟಕ ಅಂತೀಯಾ ನನಗ....ನಂದಾ ? ಅನ್ನು ಅನ್ನು ಖರೇನs ಅದ. ನಾಟಕದ ನಾಟಕವಾ ನಮ್ದು !

....ಹಾಂ ಯಾಕ ಹೊಂಡೋ ತಜವೀಜು ನಡಿಸಿದಿಯಲ್ಲ ! ಖರೇನs ಹೋಗೊವಾಕಿ ಏನು ? ನಿಮ್ಮಣ್ಣಾ, ನಾಡಹಬ್ಬದ ಉಪನ್ಯಾಸಕ್ಕ ಹೋಗೋವಾ ಇದ್ದಾನ ? ಪ್ರವಾಸದ ಸಿದ್ಧತಾ ಮಾಡತೀಯಾ ? ನಡೀಲಿ. ಹೊರಡವಾ. ಮತ್ತ ಬರಲಿಕ್ಕೆ ಮರೀಬ್ಯಾಡಾ. ಇನ್ನೊಮ್ಮೆ ನಿನ್ನ ಮಾತಿಲೆ ಏನು ದಣಿಸೂದಿಲ್ಲ (ಎಂದು ಸಲುಗೆಯಿಂದ ಆಶ್ವಾಸನ ಕೊಡುತ್ತಿರುವಾಗ—)

— ಮಿಂಚಿನಂತೆ ತೆರೆ —

ಸಾಹಿತ್ಯ ವಿಮರ್ಶೆಯ ಶಿಕ್ಷಣ ರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ '**ಸೋಮುಣ್ಣೆವಾವ**' ಕಥೆಯ ವಿಮರ್ಶೆಗಳು ೪ ಜನರಿಂದಲೂ '**ಮಂಜುಳಾ**' ಕಥೆಯ ವಿಮರ್ಶೆಗಳು ೧೧ ಜನರಿಂದಲೂ ಬಂದಿವೆ.

ಅಂಚೆಯ ಕೆಲಸಗಾರರ ಸಂಪಿನ ಪರಿಣಾಮವಾಗಿ, ಈ ಸಲದ ವಿಮರ್ಶೆಯ ಮೇಲಾಟವು ಎಲ್ಲಿ ಕುಸಿದುಬೀಳುವುದೇನೋ—ಎಂಬ ಭೀತಿಯುಂಟಾಗಿತ್ತು. ಆದರೆ ಅಲ್ಪದಿನಗಳಲ್ಲಿಯೆ ಸಂಪು ನಿಂತುಹೋದುದರಿಂದ, ಕೊನೆ-ಕೊನೆಯ ದಿನಗಳಲ್ಲಿಯೆ ವಿಮರ್ಶೆಗಳು ಬಂದು ನಮ್ಮ ಭೀತಿಯನ್ನು ಹುಸಿಗೊಳಿಸಿದುದು ಸಂತೋಷದ ಸಂಗತಿ.

'ಸೋಮುಣ್ಣೆವಾವ' ಕಥೆಯ ವಿಮರ್ಶಕರು:

೧ ಶ್ರೀ. ಪಡಾರು ನರಸಿಂಹಶಾಸ್ತ್ರಿ (ದ. ಕ.) ೨ ಕುಮಾರಿ ಸಿ. ಎಚ್. ಲಕ್ಷ್ಮೀಪಾಡಿ, ಕಾಸರಗೋಡು. ೩ ಶ್ರೀ. ಆರ್. ಜಿ. ನಾಯಿಕ, ಮುಂಬಯಿ. ೪ ಶ್ರೀ. ಎಸ್. ಆರ್. ಪಾಡಿ, 'ವಿಶಾರದ'.

'ಮಂಜುಳಾ' ಕಥೆಯ ವಿಮರ್ಶಕರು:

೧ ಶ್ರೀ. ರಾಘವೇಂದ್ರ ಪಾಂಡುರಂಗಿ, ಧಾರವಾಡ. ೨ ಶ್ರೀ. ಕೆ. ಸತ್ಯನಾರಾಯಣಭಟ್ಟ, ಗಂ. ಕಾಲೇಜ್, ಕಾಸರಗೋಡು. ೩ ಶ್ರೀ. ಕೆ. ವಿ. ತಿರುಮಲೇಶ್ವರಭಟ್ಟ, ಗಂ. ಕಾಲೇಜ್, ಕಾಸರಗೋಡು. ೪ ಶ್ರೀ. ಬಿ. ಆರ್ ಮಾಹುಲಿ ಬಿ. ಎಸ್ಸಿ. (ಆನರ್ಸ್), ಸೋಮವಾರಪೇಠ, ಪುಣೆ. ೫ ಶ್ರೀ. ಎಸ್. ಎ. ಎಕ್ಸಂಬೆ, ವಿಜಾಪುರ. ೬ ಶ್ರೀ. ಆರ್. ಬಿ. ಮಹಿಷಿ, ಧಾರವಾಡ. ೭ ಶ್ರೀ. ಸಿ. ಬಿ. ಮಹೇಂದ್ರ ಕರ, ರಬಕವಿ. ೮ ಶ್ರೀ. ವಿ. ಎ. ಜೋಶಿ, ಜನತಾಕಾಲೇಜ್, ಧಾರವಾಡ. ೯ ಶ್ರೀ. ಬಿ. ಏಕನಾಥರಾವ್, ಬೀಚ್‌ರೋಡ್, ಕಾಸರಗೋಡು. ೧೦ ಜಿ. ಬಿ. ಕುಲಕರ್ಣಿ, ಜ್ಯೂ. ಬಿ. ಎ. ಜನತಾಕಾಲೇಜ್, ಧಾರವಾಡ. ೧೧ ಶ್ರೀ. ದೇವದಾಸ, ಕನವಳ್ಳಿ.

ಈ ಸಲದ ಎಲ್ಲ ವಿಮರ್ಶೆಗಳನ್ನೂ ಹಿರಿಯ ಸಾಹಿತ್ಯಿಕರೊಬ್ಬರ ಕಡೆಗೆ ಪರೀಕ್ಷಿಸಲು ಕೊಡಲಾಗಿತ್ತು. ಅವರು ಜಯಂತಿಯ ಈ ವಿಭಾಗದ ಉಪಯುಕ್ತತೆಯನ್ನು ತುಂಬ ಪ್ರಶಂಸಿಸಿ ಬರೆದಿದ್ದಾರೆ. ಅಲ್ಲದೆ ತಮ್ಮ ನಿರ್ಣಯವನ್ನು ಈ ಬಗೆಯಾಗಿ ಕೊಟ್ಟಿದ್ದಾರೆ:

'**ಸೋಮುಣ್ಣೆವಾವ**' ಕಥೆಯ ವಿಮರ್ಶೆಗಳಲ್ಲಿ **ಕುಮಾರಿ ಸಿ. ಎಚ್. ಲಕ್ಷ್ಮೀಪಾಡಿ**ಯವರದು ಅತ್ಯುತ್ತಮವಾಗಿದೆ. ಶ್ರೀ. ಎಸ್. ಆರ್. ಪಾಡಿಯವರ ವಿಮರ್ಶೆ ಚೆನ್ನಾಗಿದೆ. ಮಿಕ್ಕುವೆರಡು ಸಾಮಾನ್ಯ.

'**ಮಂಜುಳಾ**' ಕಥೆಯ ಬಗೆಗೆ ಅನೇಕರು ಒಳ್ಳೆಯ ವಿಮರ್ಶೆಗಳನ್ನು ಬರೆದಿದ್ದಾರೆ. **ಶ್ರೀ. ಬಿ. ಆರ್. ಮಾಹುಲಿ** ಅವರ ವಿಮರ್ಶೆ ಅತ್ಯುತ್ತಮವಾಗಿದೆ. ಬೇರೆ ಉತ್ತಮ ವಿಮರ್ಶಕರೆಂದರೆ ಶ್ರೀ. ವಿ. ಎ. ಜೋಶಿ, ಶ್ರೀ. ಎಸ್. ಎ. ಎಕ್ಸಂಬೆ, ವಿಜಾಪುರ, ಶ್ರೀ. ರಾಘವೇಂದ್ರ ಪಾಂಡುರಂಗಿ, ಶ್ರೀ. ಬಿ. ಏಕನಾಥರಾವ್ ಇವರು. ಮಿಕ್ಕ ವಿಮರ್ಶೆಗಳು ಸಾಮಾನ್ಯವಾಗಿ ಇವೆ.

ಮುಂದಿನ ತಿಂಗಳ ವಿಮರ್ಶೆಯ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ '**ಧೂಮಕೇತು**' ಎಂಬ ಕಥೆಯನ್ನಾಗಲಿ, 'ಅಭರಣೇಶ್ವರಿ' ಎಂಬ ಕಥೆಯನ್ನಾಗಲಿ ಕುರಿತು ಬರೆದ ವಿಮರ್ಶೆಗಳನ್ನು ಕಳುಹಬೇಕು.

—ಸಂಪಾದಕರು

ಸೋಮುಣ್ಣೆ ಮಾವ

(ಸಣ್ಣ ಕತೆಯ ವಿಮರ್ಶೆ)

ಕುಮಾರಿ ಸಿ. ಹೆಚ್. ಲಕ್ಷ್ಮಿ, ಹಾಡಿ ಕಾಸರಗೋಡು

ಸಮಾಜವನ್ನು 'ಹೃದಯವಿಹೀನ' ಜಾತಿಯೆಂದರೆ ದೋಷವಿಲ್ಲ. ಅದು ತನ್ನದೇ ಆದ ಒಂದು ದೃಷ್ಟಿಕೋನವನ್ನಿಟ್ಟುಕೊಂಡು ಪ್ರತಿಯೊಬ್ಬರ ಬಾಹ್ಯದ ನಡೆನುಡಿಗಳನ್ನು ಮಾತ್ರವೇ ಅಳೆದು ನೋಡುತ್ತಾ, ಅದರಿಂದಲೇ ಅವರ ಸಭ್ಯಾಸಭ್ಯತೆಗಳನ್ನು ನಿರ್ಣಯಿಸುವುದು. ಯಾರೊಬ್ಬನ ಅಂತರ್ಯವನ್ನು ಬೆದಕಿ ನೋಡುವ ಗೋಜಿಗೂ ಹೋಗದೆ, ತನ್ನ ದೃಷ್ಟಿಯ ಅಳತೆಗೆ ಸರಿ ಹೊಂದಿದವರನ್ನು ಮಾತ್ರವೇ ಯೋಗ್ಯರೆಂದೂ, ಇಲ್ಲದವರನ್ನು ಒಂದಲ್ಲ ಒಂದು ರೀತಿಯಿಂದ ಅಯೋಗ್ಯರೆಂದೂ ನಿರ್ದಾಕ್ಷಿಣ್ಯವಾಗಿ ಹಚ್ಚಿಸಿಬಿಡುವುದು. ಅದರೆ ನಿಜವನ್ನರಸಲು ಬಯಸುವವರು ಸ್ವಲ್ಪವೇ ಮಂದಿಗಳು ಮಾತ್ರ. ಸತ್ಯದ ಅಪರಂಜಿಯನ್ನು ಮರೆಮಾಡುವ ಸುಳ್ಳಿನ ಕರಾಳ ಹೊದಿಕೆಯಂತೆ, ವ್ಯಕ್ತಿಯ ನಿಜಸ್ವರೂಪಕ್ಕೆ ತೆರೆಯೆಳೆದು, ಎದುರಿಗೆ ಇನ್ನೊಂದು ಮುಖವನ್ನು ತೋರಲು ಇದೇ ಮುಖ್ಯ ಕಾರಣವಾಗಿದೆ. ಇಂತಹ ಸಮಾಜದ ನೋಟಕ್ಕೆ ಸಿಲುಕಿ ಹಾಸ್ಯಕ್ಕೀಡಾದ-ಆದರೂ ನಿರ್ಲಿಪ್ತ, ನಿರ್ಮಲ ಪ್ರೇಮ ಹೃದಯಿಯಾದ 'ಸೋಮುಣ್ಣೆ ಮಾವ'ನ ಬಾಹ್ಯಾಂತರ್ಮುಖಗಳಿಗೆ ಒಡಿದ ಕನ್ನಡಿಯಂತಿದೆ ಈ ಕಥೆ.

ಮುಖ್ಯವಾಗಿ ಈ ಕಥೆಯಲ್ಲಿ ಎರಡು ವಿಭಾಗಗಳನ್ನು ಮಾಡ ಬಹುದು. ಮೊದಲನೆಯದು-ಸೋಮುಣ್ಣೆ ಮಾವನ ಜೀವನದ, ವ್ಯಕ್ತಿತ್ವದ ಬಹಿರ್ಮುಖ; ಅರ್ಥಾತ್ ಸಮಾಜವು ಅವನನ್ನು ಕಾಣುವ ರೀತಿ. ಎರಡನೆಯದು ಅತನ ವಾಸ್ತವಿಕ ವ್ಯಕ್ತಿತ್ವ, ಆದರ್ಶಪ್ರೇಮದ ಅಚಲವಾದ ನಿರ್ಮಲ ಹೃದಯಗಳ ಪರಿಚಯ.

ಕಥೆಯ ಆದಿಯಲ್ಲಿ ಕತೆಗಾರನ ಬ್ಯಾಡ್ಮಿಂಟನ್ ಆಟದ ಗೆಳೆಯರಲ್ಲಿ 'ಮೈದಾಸನ ಬೊಕ್ಕಸ ಸುಲಿಗೆ'ಯೆಂದು ಸೋಮುಣ್ಣೆ ಮಾವನ ಬಗೆಗೆ ನಡೆಯುವ ಚರ್ಚೆಗಳಿಂದ ಊರವರಿಗೆ ಅವನ ಮೇಲಿರುವ ತಿರಸ್ಕಾರ ಭಾವನೆಗಳು ಕಂಡು ಬರುವುವು. ಸೋಮುಣ್ಣೆಯು 'ಕತ್ತೆಯಂತೆ ದುಡಿದು' ಸಂಪಾದಿಸಿ, ಕಡುಲೋಭಿಯಾಗಿ ಹಣಕೂಡಿಸಿರುವನು. ಎಂಬುದೇ ಅವರ ತಿರಸ್ಕಾರಕ್ಕೆ ಕಾರಣ. ಅವನ ಲೋಭಿತನಕ್ಕೆ ತಕ್ಕ ಶಾಸ್ತಿಯಾಯಿತೆಂದೇ ಅವರೆಲ್ಲರಿಗೆ ಸಮಾಧಾನ; ಚರ್ಚೆಗೆ ಉತ್ಸಾಹ.

ಕತೆಗಾರನ ಊರಾದ ಕೊಡಗೇ ಸೋಮುಣ್ಣೆ ಮಾವನ ಹುಟ್ಟೂರು. ಬಾಲ್ಯದಿಂದಲೇ ತಬ್ಬಲಿಯಾಗಿದ್ದ ಅತನಿಗೆ ದೂರದ ಮಾವನೊಬ್ಬನೇ ನಂಟ. ಸೋಮುಣ್ಣೆ ತನ್ನ ೧೦೦ ಬಟ್ಟಿಗದ್ದೆ, ಹತ್ತೆಂಟು ಎಕರೆ ಖಾಲಿ ಜಾಗವನ್ನು ಗೇಣಿಗೆ ಕೊಟ್ಟು, ಶನಿವಾರ ಸಂತೆಯಲ್ಲಿ ಗುಮಾಸ್ತನಾಗಿಯೂ, ಯುದ್ಧ ಬಂದಾಗ ದಂಡಿನಲ್ಲಿ ಸೇರಿಯೂ, ಯುದ್ಧಾನಂತರ ಕೇಂದ್ರದ ಎಕ್ಸೈಸ್ ಶಾಖೆಯ ಉದ್ಯೋಗದಲ್ಲಿ ಬೆಂಗಳೂರಿನಲ್ಲಿಯೂ ಇರುತ್ತಿದ್ದನು. ಬೆಂಗಳೂರಿನಲ್ಲಿರುವಾಗ ಶಾಲಾಧ್ಯಾಪಿಕೆಯಾಗಿದ್ದ ಬ್ರಾಹ್ಮಣ ಹುಡುಗಿಯನ್ನು ಮದುವೆಯಾಗಿದ್ದನು. ಆಕೆಯನ್ನು ತನ್ನ ಹುಟ್ಟೂರಿಗೆ ಕರೆತಂದಿರಲಿಲ್ಲ ಸೋಮುಣ್ಣೆ ಮಾವ.

ತಾನೊಬ್ಬನೇ ಊರಿಗೆ ಮರಳಿ ಬಂದು ತನ್ನ ಭೂಮಿಯನ್ನು ವಶಪಡಿಸಿಕೊಂಡು, ಆಳುಗಳೊಡನೆ ಆಳಾಗಿ ದುಡಿದು ಧಾರಾಳ ಉತ್ಪತ್ತಿ ಪಡೆಯ ತೊಡಗಿದನು. ಹೆಂಡತಿಯನ್ನು ಕರೆತಾರದಿರುವುದರಿಂದ ಅಚ್ಚರಿಗೊಂಡ ಊರವರಿಗೆ, ಕ್ರಮೇಣ ಅವಳು ಪ್ರಸವ ಕಾಲದಲ್ಲಿ ನಡೆದ ಶಸ್ತ್ರಚಿಕಿತ್ಸೆಯಿಂದ ಶಿಶುಸಂತೋತವಾಗಿ ಮಡಿದಳೆಂದೂ, ಆದರಿಂದ ವೈರಾಗ್ಯಗೊಂಡು ಸೋಮುಣ್ಣೆ ಊರಿಗೆ ಬಂದನೆಂದೂ ತಿಳಿಯಬಹುದು.

ಊರವರೆಲ್ಲ ಅವನು ಮರುಮದುವೆಯಾಗುವನೆಂದು ಭಾವಿಸಿದ್ದು ಸುಳ್ಳಾಯಿತು. ಅವನೊಬ್ಬ ವಿಚಿತ್ರವ್ಯಕ್ತಿಯಾಗಿ ಜನರಿಗೆ ತೋರುವನು. ಎಡೆಬಿಡದೆ ದುಡಿದು ಸಂಪಾದಿಸುತ್ತಾನೆ; ಆದರೂ ಅಲಂಕಾರವಾದ ಉಡುಪು ಧರಿಸುವುದಿಲ್ಲ; ಸ್ನೇಹಿತರನ್ನು ಕರೆದು ಸತ್ಕರಿಸುವುದಿಲ್ಲ; ಜಾತ್ರೆ, ಕೈರ್‌ಮುಹೂರ್ತ, ಹುತ್ತರಿ-ಇತ್ಯಾದಿ ಹಬ್ಬಗಳ ವಿಲಾಸಕ್ಕೂ ನಿನಿಯೋಗಿಸುವುದಿಲ್ಲ. ದಾನಧರ್ಮಗಳಂತೂ ಮೊದಲೇ ಇಲ್ಲ. ಮುಡದಿ ಮಕ್ಕಳಿಲ್ಲದ ಈತನು ಈರೀತಿ ದುಡಿದು ಹಣ ಕೂಡಿಸುವುದಾದರೂ ಏಕೆ ? ಸಹಜ ಕುತೂಹಲೀಯಾದ ಸಮಾಜದಲ್ಲಿ ಇಂತಹಪ್ರಶ್ನೆ ಉಬ್ಬಿನಿಸಿರೆ ಆಶ್ಚರ್ಯವೇನಿಲ್ಲ. ಜನರಲ್ಲಿ ಉಂಟಾದ ಈ ಪ್ರಶ್ನೆಗೆ-ಅವನು ಕೇವಲ ಹೊನ್ನಾಸೆಯ 'ಮೈದಾಸ'ನೆಂದು ಜನರು ತಾವೇ ಕರೆದು, ಹಾಸ್ಯಮಾಡಿ ನಕ್ಕು ಉತ್ತರವನ್ನು ದೊರಕಿಸಿಕೊಂಡಿದ್ದರು. ಇವಿಷ್ಟು ಜನರ ದೃಷ್ಟಿಗೆ ಕಾಣುವ ಅವನ ಜೀವನದ ಒಂದು ಮುಖ್ಯ.

ಆದರೆ ಅವನ ಅಂತರ್ಯವು ಹೇಗಿದೆ?—ಎಂಬುದನ್ನು ವಾಚಕರಿಗೆ ತೆರೆದು ತೋರಿಸಲು ಸಹಾಯಕನಾದವನಿಲ್ಲಿ ಕತೆಗಾರ.

ಬ್ಯಾಡ್ಮಿಂಟನ್ ಆಟದ ಗೆಳೆಯರ ಗುಂಪಿನಲ್ಲಿಯೂ, ಚಹಾ ಹೋಟೆಲಿನಲ್ಲಿ ಸೇರಿದ ಜನಗಳಲ್ಲಿಯೂ ನಡೆದ "ಮೈದಾಸನ ಬೊಕ್ಕಸ ಸುಲಿಗೆ"ಯ ಕುರಿತಾದ ಚರ್ಚಾಭಿಪ್ರಾಯಗಳು—ಒಂದು ವಿಷಯವನ್ನು ಹಲವಾಗಿ ಹಚ್ಚಿಸುವ ಜನರ ಸ್ವಭಾವದ ಒಂದು ಪ್ರವೇಶವಾಗಿದೆ.

ಗೆಳೆಯರನ್ನಗಲಿ ಮನೆಯತ್ತ ಹೊರಟ ಕತೆಗಾರನಿಗೆ ದಾರಿಯಲ್ಲಿ ಸಂದರ್ಭವಶದಿಂದಲೋ ಅಥವಾ ವಿಧಿವಶದಿಂದಲೋ ಪೊದೆಯ ಮರೆಯಲ್ಲಿ ಕರಿಮರದ ಒಂದು ಸಂದೂಕವೂ, ಅಲ್ಲೇ ಚಲ್ಲಾಪಿಲ್ಲಿಯಾಗಿ ಬಿದ್ದಿದ್ದ ೩೦ ಪ್ರೇಮಪತ್ರಗಳೂ ಸಿಗುವುವು. ಅವು ಸೋಮುಣ್ಣೆ ಮಾವನವೆಂದೇ ಖಚಿತವಾಗಿ ಅವನ ಮನೆಗೆ ತಂದುಕೊಡುವನು. ಅಲ್ಲಿಂದ ಅವನ ಜೀವನದ ನಿಜಸ್ವರೂಪ ವಾಚಕರ ಕಣ್ಮುಂದೆ ವ್ಯವೇತಿಸುವುದು.—

ಅವನು ಬೆಂಗಳೂರಿನಲ್ಲಿ ಉದ್ಯೋಗದಲ್ಲಿದ್ದಾಗ ಅಧ್ಯಾಪಿಕೆಯಾಗಿದ್ದ ಜಲಜಾ ಎನ್ನುವ ಬ್ರಾಹ್ಮಣ ಹುಡುಗಿ ಅವನಿಗೆ ಪ್ರೇಮಪತ್ರಗಳನ್ನು ಬರೆದಳು. ಅವರಿಬ್ಬರಿಗೆ ರಿಜಿಸ್ಟ್ರಿ ಮದುವೆಯಾಯಿತು. ಜೀವನ ಸಾಗಿತು. ಸೋಮುಣ್ಣೆಯ ಬಾಳಿನಲ್ಲಿ ಚೈತನ್ಯ ತುಂಬಿದ್ದಿತೆಂದು

ತೋರುವುದು. ವಿಧಿವಿಲಾಸ! ಗರ್ಭಿಣಿಯಾದ ಜಲಜಾಳಿಗೆ ಪ್ರಸವ ಕಾಲದಲ್ಲಿ ಶಸ್ತ್ರಚಿಕಿತ್ಸೆ ನಡೆಸಬೇಕಾಗಿ ಬಂದು ಅವಳು ತೀರಿಹೋಗುವಳು. ನಾಲ್ಕಾಲು ದಿನಗಳಲ್ಲಿ ಹಡೆದಿದ್ದ ಶಿಶುವೂ ಮಡಿದು ಹೋಗುವುದು. ತನ್ನ ಜಲಜಾಳನ್ನೇ ಬಾಳಸರ್ವಸ್ವ, ಜೀವನದ ಜೀವಾಳವಾಗಿ ತಿಳಿದಿದ್ದ ಸೋಮುಣ್ಣಿಗೆ ಆಗ ವೈರಾಗ್ಯ ಹುಟ್ಟಿದ್ದರೆ ಅದರಲ್ಲೇನು ಸೋಜಿಗ?

ಆದರೆ ಆ ವೈರಾಗ್ಯದಿಂದ ಮತಿಹೀನನಾಗಿ ಅವನು ಅಡ್ಡದಾರಿ ಹಿಡಿಯಲಿಲ್ಲ. ಸಕಲವನ್ನು ದೂರವಿಟ್ಟು ತಾಪಸಿಯಂತೆ ಕುಳ್ಳಿರಲೂ ಇಲ್ಲ. ತನ್ನ ಪ್ರೇಮದೇವತೆಯ ಹಿಂದಣ ಪತ್ರಗಳನ್ನು ಅಮರ ಸಂದೇಶಗಳೆಂದು ತಿಳಿದು, ಅವುಗಳಲ್ಲೇ 'ಅವಳ ತಿಳಿಹೃದಯ' ವನ್ನು ಕಾಣುತ್ತಾ ನಿಷ್ಕಾಮ ಕರ್ಮಯೋಗಿಯಂತೆ, ಉತ್ತಮ ಕೃಷಿಮಾಡಿ ಭೂಮಾತೆಗೂ ಸೇವೆಯನ್ನು ಸಲ್ಲಿಸುವನು. ಅಲ್ಲದೆ ಆಧ್ಯಾತ್ಮಿಕ ಗ್ರಂಥಗಳ ನಿತ್ಯಶ್ರವಣದಿಂದ ಪರಮಾತ್ಮನ ಕಡೆಗೂ ಮನವನ್ನೊಲಿಸಿದ್ದನು. ನಡೆಯಲ್ಲಿ, ನುಡಿಯಲ್ಲಿ ಡಾಂಭಿಕತನವಿಲ್ಲ; ವಿಲಾಸ ವಿಷಯಗಳ ಲಾಲಸೆಯಿಲ್ಲ; ಉಪಚಾರದ ಕೃತ್ರಿಮತೆಯಾಗಲೀ, ಸೋಮಾರಿತನದ ಜಾಡ್ಯವಾಗಲೀ ಯಾವುದೂ ಇಲ್ಲ. ಪರರೂ ಹಾಗಾಗುವುದಕ್ಕೆ ತಾನು ಕಾರಣನಾಗಬಾರದೆಂಬ ಮಹಪುದ್ದೇಶವು ಅವನಲ್ಲಿದೆ. ಅದಕ್ಕೊಂದು ಉತ್ತಮ ಉದಾಹರಣೆಯಾಗಿ, ಮನೆಗೆ ಬಂದಿದ್ದ ನೆಂಟನೊಬ್ಬನಿಗೆ ಎರಡು ದಿನ ಸನ್ಮಾನಮಾಡಿ, ಮೂರನೇ ದಿನವೂ ಅವನು ಸುಮ್ಮನೇ ಕುಳಿತಿರಲು 'ಸುಮ್ಮನೇ ಕುಳಿತು ತಿಂದರೆ ಪೈಗೆ ಅನ್ನ ಹಿಡಿಯದು'—ಎಂದು ಕೆಲಸಮಾಡಲು ಅವನ ಕೈಗೆ ಗುದ್ದಲಿ ಕೊಡುವುದನ್ನು ಉಲ್ಲೇಖಿಸಿದ ಸಂದರ್ಭವನ್ನು ತೆಗೆದುಕೊಳ್ಳಬಹುದು. ಸೋಮುಣ್ಣಿ ಒಂದು ಆದರ್ಶವನ್ನಿಟ್ಟುಕೊಂಡು ಹಾಗೆ ಮಾಡಿದ್ದರೆ, ಜನರು ಅದು ಅತನ "ಸತ್ವವನ್ನು ಭರ್ತಿಮಾಡುವ ಲೋಭಿತನ" ಎಂದು ಬೇರೆ ವಿಧವಾಗಿಯೆ ತಿಳಿದುಕೊಳ್ಳುವುದು. ಯಾರೊಡನೆಯೂ ಬೆರೆಯದೆ, ಯಾವ ಸಮ್ಮಾನ ಕೂಟವನ್ನೂ ಏರ್ಪಡಿಸದೆ, ಒಬ್ಬಂಟಿಗನಾಗಿರುವ ಅವನನ್ನು ಜನ 'ಲೋಭಿ' ಯೆಂದು ಮನಸದನೆಯೆ ಸಾರಿ ತೃಪ್ತಿಪಡುತ್ತಿದ್ದರು.

ಏನಾಲೂ ಮಲಗುವ ಸೋಮುಣ್ಣಿ ಮಾವನಿಗೆ ಆ ಪತ್ರಗಳನ್ನು ಓದಿದರೇ ಮನಸ್ಸಿಗೆ ಶಾಂತಿ. ಅದನ್ನು ಭಂಗಾರದ ಒಡವೆಗಳನ್ನು ಇಡುವಂತೆ ಭದ್ರವಾಗಿ ಅಂದವಾದ ಪೆಟ್ಟಿಗೆಯಲ್ಲಿರಿಸಿದ್ದ. ಕಳ್ಳರು ಇದನ್ನು ಹಣವೆಂದು ಭಾವಿಸಿ ಕದ್ದೊಯ್ದರು. ಜನರಾದರೋ ಜಿಪುಣತನದಿಂದ ಅವನು ಕೂಡಿಸಿಟ್ಟ ಹಣದ ಗಂಟನ್ನೇ ಕಳ್ಳರು ಒಯ್ದರೆಂದು ವರ್ತಮಾನ ಹಬ್ಬಿಸುವರು. ಆದರೆ ಸೋಮುಣ್ಣಿಯ ಪಾಲಿಗೆ ಒಂದೊಂದು ಪತ್ರಗಳೇ 'ಒಂದೊಂದು ನೂರು ರೂಪಾಯಿಗಳ ನೋಟಿ' ಗಿಂತ ಮಹತ್ತ್ವದ ಬೆಲೆಯುಳ್ಳವಾಗಿದ್ದುವು!

ಅಂತಹ ಅಪೂರ್ವ ಪತ್ರಗಳ ಕಳವಿನಿಂದ ಸೋಮುಣ್ಣಿಯ ಹೃದಯವೆಷ್ಟು ನೊಂದಿರಬಹುದೆಂಬುದನ್ನು ಹೇಳಲಸದಳ. ಅದನ್ನು ಸಹೃದಯ ವಾಚಕರೇ ಅರ್ಥಮಾಡಿಕೊಳ್ಳಬಲ್ಲರು. ಅವನು ಬಹಳವಾಗಿ ನೊಂದಿದ್ದ—ಅಷ್ಟು ಮಾತ್ರ ನಿಜ.

ಕತೆಗಾರ 'ಅಚ್ಚು' ಅದನ್ನು ತಂದುಕೊಟ್ಟಾಗ, ಅವನಿಗೆ 'ಕಳವಾದ ತನ್ನ ಬೊಕ್ಕಸ'ವನ್ನೇ ಮರಳಿ ತಂದಿತ್ತ ಹಾಗಾಗುವುದು. ಅಲ್ಲಿ ಅವನ ಒಂದೊಂದು ಉದ್ವೇಗ-ಕಂಪನಗಳಿಂದ ಕೂಡಿದ ನಡೆನುಡಿಗಳೂ ಅವನ ಹೃದಯದಲ್ಲಿ ಮಡದಿಯ ಬಗೆಗಿರುವ ಗೌರವಪೂರ್ವಕವಾದ ಪ್ರೇಮವನ್ನು ಸಾರಿಹೇಳುವ ಸಾಕ್ಷಿಗಳು.

ಕತೆಗಾರನಿಗೆ ತಾನು ಬೆಂಗಳೂರಿಗೆ ಹೋದಾಗ ಅದ ಕುಡುಕ ದಂಪತಿಗಳಾದ ಸೋಮುಣ್ಣಿಯ ನಾದಿನಿ ಮತ್ತು ಷಡ್ಡಕನ ಪರಿಚಯವು ಕಥಾವಾಚಕರಿಗೂ ಚೆನ್ನಾಗಿ ಆಗುವುದು. ಇದು ಸೋಮುಣ್ಣಿಯ ಸತಿಯ ಮೇಲೂ ಅಚಲವಾದ ವಿಶ್ವಾಸಕ್ಕೆ ಇನ್ನೊಂದು ಸಾಕ್ಷಿಗಾಗಿ ಬಂದ ಅವತರಣಿಕೆ:—

ಷಡ್ಡಕ ವಾಸುದೇವರಾವ್—ಸೋಮುಣ್ಣಿ ತನ್ನ ನಾದಿನಿ ವನಜಾಳಿಗೆ ಜೀವನನೆಚ್ಚಕ್ಕೆ ಕೊಡುವ ಐನೂರು ರೂಪಾಯಿ ಆವರಿಬ್ಬರ ಪೆಚ್ಚಕ್ಕೆ ಸಾಕಾಗುವುದಿಲ್ಲವಾದ್ದರಿಂದ ಸ್ವಲ್ಪ ಹೆಚ್ಚು ಹಣ ಕಳುಹಿಸಬೇಕೆಂಬ ಸಂದೇಶವನ್ನು ಕತೆಗಾರನೊಡನೆ ಹೇಳಿಕಳಿಸಿದ್ದಾನೆ. ಅದನ್ನೂ ತಿಳಿಸಿ, ತಾನು ಕಂಡಂತೆ ಅವರಿಗೆ ಕಳಿಸುವ ಹಣ ವ್ಯರ್ಥವಾಗಿ ದುರುಪಯೋಗವಾಗುತ್ತದೆ, ಕಳಿಸುವುದನ್ನೇ ನಿಲ್ಲಿಸಿಬಿಡುವುದು ಒಳ್ಳೆಯದು ಎಂದು ತನ್ನ ಅಭಿಪ್ರಾಯವನ್ನೂ ತಿಳಿಸುವನು. ಆದರೆ ಸೋಮುಣ್ಣಿ ಮಾವ ತನ್ನ ಮಡದಿಯ ಪ್ರಾಣಾಂತಿಕ ವೇಳೆಯಲ್ಲಿ ಅವಳ ತಂಗಿಯ ಜೀವನಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದಾಗಿ ತಾನು ಅವಳ ಮುಂದೆ ಪ್ರಮಾಣ ಮಾಡಿದ್ದರಿಂದ ಅದು ಸಾಧ್ಯವಿಲ್ಲವೆನ್ನುವನು. ಮಡದಿಯ ಮೇಲಣ ಪ್ರೇಮವು ಆ ಸಂದರ್ಭವನ್ನೇ ಅವನ ಕಣ್ಮುಂದೆ ನಿಲ್ಲಿಸುವುದು. ಅನಳಿಗೆ ಕೊಟ್ಟ ಭಾಷೆಯನ್ನು ಮರೆಯದವನಾಗಿ ಅವನು ಕೊಡುವ ಹಣ ಎಂತಹ ಹೇಯ ವ್ಯಸನಗಳಿಗೆ ಸಲ್ಲುವುದಿದ್ದರೂ ಕಳಿಸುವುದನ್ನೇ ನಿಲ್ಲಿಸಲು ಒಲ್ಲದಾಗಿದ್ದ.

ಅವನ ಹೃದಯವನ್ನು ತಿಳಿಮ ತಿಳಿದೂ ಕತೆಗಾರ ಅಚ್ಚು ಪರೀಕ್ಷಿಸಲೆಂಬಂತೆ ಪ್ರಶ್ನಿಸುತ್ತಾನೆ—"ಮಾವ, ನಿಮ್ಮ ಮಡದಿ ಇಲ್ಲವಾಗಿದ್ದಾರೆ. ನೀವು ಕೊಟ್ಟ ಮಾತನ್ನು ಮುರಿದಿರಿ ಎಂದು ಅವರು ಹೇಗೆ ತಿಳಿಯಬಲ್ಲರು?" ಎಂದು. ಅದಕ್ಕೀಯುವ ಅವನ ಉದ್ವೇಗಭರಿತ ಉತ್ತರದಿಂದ, ನಿಶ್ಚಲವಾದ ನಿಷ್ಕಲ್ಮಷ ಪ್ರೇಮವು ಅವಿನಾಶಿಯಾಗಿ ಜೈತನ್ಯರೂಪವಾಗಿ ಬಾಳನೊಂದಿಗೆ ಸಾಮರಸ್ಯಗೊಂಡಿರುವುದೆಂಬುದನ್ನು ತಿಳಿಯಬಹುದು. ತನ್ನ ಪ್ರೀತಿಯ ಜಲಜಾಳ ಭೌತಿಕ ಶರೀರವು ಇಲ್ಲವಾಗಿದ್ದರೂ ಅವನು ರಸಯೋಗಿಯಾಗಿ ಎಲ್ಲೆಲ್ಲೂ ಅವಳ ಅವಿನಾಶಿಯಾದ ಅಂತಃಕರಣವನ್ನು ಕಾಣುವನು. ತನ್ನ ಕೃತಿಗಳನ್ನು ಅವಳು ಕಾಣಲಾರಳು ಎಂಬುದನ್ನು ಆತ ನಂಬುವುದಿಲ್ಲ. ಜೈತನ್ಯರೂಪವಾಗಿ ತನ್ನ ಬಳಿಯಲ್ಲೇ ಇರುವ ಅವಳ ಆತ್ಮಕ್ಕೆ—ತಾನಿತ್ತ ಭಾಷೆಯಂತೆ ನಡೆದು ತೃಪ್ತಿಕೊಡಬೇಕು—ಎಂದು ಬಯಸುತ್ತಾನೆ.

ಸೋಮುಣ್ಣಿ ಮಾವನಿಗೆ ಮಾತ್ರವಲ್ಲ—ಅವನ ಮಾತನ್ನು ಕೇಳುತ್ತಿದ್ದ ಕತೆಗಾರ ಅಚ್ಚುವಿಗೂ, ಜಲಜಾಳ ಭಾವಚಿತ್ರದಲ್ಲಿ ಅವನ ಮಾತಿಗೆ ಸಜೀವತೆಯ ಸಾಕ್ಷಿ ಕಂಡುಬರುವುದು. ಅವನ ಉದ್ವೇಗ, ಅವಿನಾಶಿಯಾದ ಆತ್ಮದ ಮೇಲಣ ವಿಶ್ವಾಸಗಳು ಎಷ್ಟು ಅಚಲವಾಗಿ

ದ್ದುವು ಎನ್ನುವುದಕ್ಕೆ ಇದೇ ಸಾಕ್ಷಿ. ಹೀಗೆಯೇ ವಾಚಕರನ್ನು ಭಾವನಾಮಯವಾದ ಜಗತ್ತಿಗೊಯ್ದು ಕತೆಯಲ್ಲಿ ಪೂರ್ಣಗೊಳ್ಳುತ್ತದೆ.

ಕಥಾನಾಯಕನಾದ ಸೋಮುಣ್ಣಿಮಾವ ಜನರ ದೃಷ್ಟಿಯಲ್ಲಿ ಲೋಭಿಯಾಗಿದ್ದಾನೆ. ಮಾತ್ರವಲ್ಲ, ಅತನು ಅಸಭ್ಯನೆನ್ನುವ ಭಾವನೆ ಜನರಲ್ಲಿದೆ. ಅವನ ಜೀವನದ ಮೇಲ್ಪರಿಯಂತಿರುವ ಅಂತಹ ಜನರು ನೋಡಬಲ್ಲ ಸಂಗತಿಗಳನ್ನು ಮಾತ್ರವೇ ಮೊದಲಿಗೆ ಗಮನಿಸುತ್ತಿರುವಾಗಲೂ, "ಅತನ ನಿಜವಾದ ವ್ಯಕ್ತಿತ್ವ ಇದಲ್ಲ, ಏನೋ ಗೂಢತೆಯಲ್ಲಿ ನಿರ್ಮಲ ಸತ್ಯವಿದೆ" ಎಂದು ವಾಚಕರು ಮನಗಾಣುವಂತಹ ಒಂದು ಅವ್ಯಕ್ತ ಚಾತುರ್ಯವು ಕತೆಯಲ್ಲಿ ವ್ಯೆಗೂಡಿರುವುದು. ಓದುತ್ತಿದ್ದಂತೆಯೇ ಅವನ ನಿಜ ಅಂತರಂಗವನ್ನರಿಯಲು ಮತ್ತು ಕಳವಿನ ಯಥಾರ್ಥತೆಯನ್ನರಿಯಲು ಕುತೂಹಲವು ಸ್ವಾಭಾವಿಕವಾಗಿ ಉದ್ಭವಿಸುತ್ತದೆ.

ಅವನ ನಿಜವಾದ ವ್ಯಕ್ತಿತ್ವವನ್ನು ಪೂರ್ಣವಾಗಿ ತಿಳಿದಾಗ ವಾಚಕರಲ್ಲಿ ಅವನ ಬಗೆಗೆ ಒಂದುರೀತಿಯ ಅಭಿಮಾನ ಮೂಡುತ್ತದೆ. 'ಅದು ಎಂತಹ ಅಭಿಮಾನ?' ಎಂದು ಪ್ರಶ್ನಿಸಿದರೆ, ಅದಕ್ಕೆ ಪ್ರತ್ಯೇಕವಾಗಿ ಉತ್ತರ ಬೇಕಿಲ್ಲ. ಕತೆಗಾರ ಅಚ್ಚು ಪ್ರಥಮ ಬಾರಿ ಸೋಮುಣ್ಣಿಮಾವನ ಭೇಟಿಮಾಡಿ ಅಗಲುವಾಗ ಅವನಮೇಲೆ ಅಂಕುರಿಸಿದ ಪೂಜ್ಯ ಭಾವನೆಯಿಂದ ಕಾಲುಮುಟ್ಟಿ ನಮಸ್ಕರಿಸಿದ ಒಂದು ಸಂದರ್ಭದ ಉದಾಹರಣೆ ಮಾತ್ರವೇ ಸಾಕು.

ಯಾರ ಸಂಪರ್ಕವನ್ನೂ ಇಟ್ಟುಕೊಳ್ಳದ ಅತ ಹೃದಯಶೂನ್ಯನಲ್ಲ. ಆದರೆ ಅವನಿಗೆ ಲೋಕದ ಬರಡು ಹೃದಯಿಗಳ ಸಹವಾಸ ಬೇಡವಾಗಿರಬಹುದು. ಸಹೃದಯನಾದ ಕತೆಗಾರನೊಡನೆ ಆತ್ಮೀಯ ವಿಶ್ವಾಸವನ್ನು ಬೆಳೆಸಿಕೊಂಡಿದ್ದಾನೆ. ಅವನ ಸಹವಾಸವು ಸೆಕೆಗಾಲದ ಕಾವನ್ನು ಕಳೆಯುವ ತಣ್ಣೀರ ಮಡುವಾಗಿ ತೋರುತ್ತದೆ ಕತೆಗಾರನಿಗೆ. ಅಂತಹ ಪವಿತ್ರತೆ ಅವನಿಗೆ ಬಂದಿರುವುದು ಜಲಜಾಳ ವಿಯೋಗ—ಅಥವಾ ಅವಳ ಮಧುರ ನಿರ್ಮಲ ಸ್ಮೃತಿಯಿಂದ.

ಸೋಮುಣ್ಣಿಮಾವನ ವ್ಯಕ್ತಿತ್ವ ಮತ್ತು ವಾಸುದೇವರಾಯನ ವ್ಯಕ್ತಿತ್ವಗಳಲ್ಲಿ ಎಷ್ಟು ಅಂತರ! ಅದರಲ್ಲಿ ತೋರಿದ ಮುಖ್ಯ ಅಂಶವೆಂದರೆ ಆದರ್ಶ ಸತೀತ್ವದ ಮಹತ್ತ್ವ. ಜಲಜಾ ಎಂತಹ ಉಚ್ಚಗುಣದ ಆದರ್ಶ ನಡತೆಯ ಸತಿಯಾಗಿರಬಹುದೆಂದು–ಸೋಮುಣ್ಣಿಯು ಅವಳ ಮೇಲಿಟ್ಟಿರುವ ಗೌರವ, ಅಚಲ ವಿಶ್ವಾಸಗಳಿಂದಲ್ಲದೆ, ಆದರ್ಶವನ್ನೊಳಗೊಂಡು ಸಾಗುತ್ತಿರುವ ಅವನ ನಡತೆಯಿಂದಲೂ ತಿಳಿಯಬಹುದು. ಅವಳ ನೆನವು ಕೂಡಾ ಅಷ್ಟು ಚೈತನ್ಯವನ್ನು ಮಾಡುತ್ತಿತ್ತು! ಆದರೆ–ಎಂದೂ ಒಟ್ಟಿಗೇ ಆಲಿಯುತ್ತಿದ್ದರೂ ವನಜಾ—ವಾಸುದೇವರ ಜೀವನ ಎಂತಹ ಬೇಭಕ್ಷ! ಸುಶಿಕ್ಷಿತಳಾದ ಆಕೆ ಪತಿಯನ್ನು ಯೋಗ್ಯನನ್ನಾಗಿಸಲು ಶ್ರಮಿಸುವುದರ ಬದಲು, ತಾನೂ ಅವನೊಡನೆ ಕುಡಿತ-ಜೂಜುಗಳ ಬೆನ್ನುಹಿಡಿದು ಹೇಯಜೀವನದ ನಾಯಕಿಯಾಗಿ ಮುಂದೆ ನಿಂತಿದ್ದಾಳೆ! ಅಂತಹ ದಂಪತಿಗಳ ದುರ್ವ್ಯಯ ಜೀವನಕ್ಕೂ ಹಣ ಕಳಿಸುವುದನ್ನು ನಿಲ್ಲಿಸಲು ಸೋಮುಣ್ಣಿ ಒಪ್ಪದವನಾಗಿದ್ದಾನೆ. ಅದಕ್ಕೆ ಕಾರಣ ಆದರ್ಶಸತಿ ಆ ಜಲಜಾಳ ಗುಣ!

ಸೋಮಾರಿಗಳಾಗಿರದೆ ಶ್ರಮಜೀವನನಡೆಸುವುದನ್ನು ಸೋಮುಣ್ಣಿ ತೋರಿಸಿಕೊಟ್ಟಿದ್ದಾನೆ. ಅದರಲ್ಲಿ ಒಂದುಬಗೆಯ ಅಗೋಚರ ಆನಂದವಿರುವುದನ್ನು ಸ್ವಾನುಭವದಿಂದ ಸಾರಿದ್ದಾನೆ! ನಿಜವಾದ ನಿಷ್ಕಾಮ ಶ್ರಮಜೀವಿಗಳಿದ್ದರೆ ಅವರಿಗೆ ಈ ಸಂದೇಶದ ಯಥಾರ್ಥತೆ ಅರಿವಾಗುವುದು. ಮಡಿದರೂ ಹಣದಲ್ಲಿ ಆತನಿಗೆ ಒಂದಿಷ್ಟು ಆಸೆಯಿಲ್ಲ. "ರೊಕ್ಕ ಬಾಳ್ವೆಯ ತೊತ್ತಲ್ಲದೆ ಬಾಳ್ವೆ ರೊಕ್ಕದ ತೊತ್ತಲ್ಲ" ಎಂದು ಉದ್ವೇಗ ಪೂರಿತನಾಗಿ ಹೇಳಿದ ಮಾತನ್ನೇ ಅದಕ್ಕೆ ಸಾಕ್ಷಿಯಾಗಿಸಬಹುದು.

ಮುಖ್ಯವಾಗಿ ಸೋಮುಣ್ಣಿಮಾವನಲ್ಲಿ ಕಾಣಬಹುದಾದ ಸತ್ತ್ವ-ಪ್ರೇಮದ ಅಚಲತ್ವ. ಇಂದಿನ ಸಮಾಜದ ಎಷ್ಟೋ ಸಂಸಾರಗಳಲ್ಲಿ ಕಾಣಬಹುದಾದ ಅತೀ ನಿರ್ಮಲ ಆದರ್ಶ ಪ್ರೇಮ ಎನ್ನುವುದು ಕೂಡ ಅಂತಹ ಸತ್ಯಸ್ವರೂಪವನ್ನು ಕಂಡವುಗಳಲ್ಲ. ಕೇವಲ ಬಾಹ್ಯದ ವ್ಯಕ್ತಿಗತವಾದ ಶೃಂಗಾರಯುಕ್ತ ಪ್ರೇಮ ಗತಿಸಿದ ವ್ಯಕ್ತಿಯ ನೆನಪು ಮರೆಯಾದಂತೆ ಅದೂ ಮರೆಯಾಗುವುದು. ಹೆಂಡತಿ ಸತ್ತ ಗಂಡಂದಿರು ಮರುಮದುವೆ ಮಾಡಿಕೊಂಡು ಮೊದಲಿನ ಪ್ರೇಮದೇವತೆಯನ್ನೇ ಮರೆತು ವಿಷಯಲೋಲುಪ್ತರಾಗಿರುವುದೇ ಇದಕ್ಕೆ ಸಾಕ್ಷಿ. ಆದರೆ ಸೋಮುಣ್ಣಿಯ ಹೃದಯದಲ್ಲಿ ತುಂಬಿರುವ ಪ್ರೇಮ, ಆತ್ಮದ ಸತ್ಯಸ್ವರೂಪವನ್ನು ಕಂಡಂತಿರುವ ಅವಿನಾಶಿಯಾದ ಪ್ರೇಮ. ಕಪ್ಪು ಕನ್ನಡಕ ಧರಿಸಿದವರಿಗೆ ಕಂಡುದೆಲ್ಲಾ ಕಸ್ಪಾಗಿ ತೋರುವಂತೆ, ಅಂತಹವನು ಜನರ ಕಣ್ಣಿಗೆ ವಿಚಿತ್ರವಾಗಿ ತೋರುವುದು ಅಕ್ಷರಶಃ ಸತ್ಯವಾಗಿದೆ.

ಹಬ್ಬಹುಣ್ಣಿಮೆಗಳ ನೆವವನ್ನೆತ್ತಿ ಜನರಿಂದ ಹಣ ಸುಲಿದು ತಮ್ಮ ವಿಲಾಸಕ್ಕೆ ವಿನಿಯೋಗಿಸುವುದು ನಮ್ಮ ನಾಡಿನ ಹಲಜನರ ದುರಭ್ಯಾಸ. ಅಂತಹ ವಿಚಾರಗಳಲ್ಲಿ ಹೆಚ್ಚಾದ ಗೌರವ ಪಡೆಯುವ ಅಭಿಲಾಷೆಯಿಂದ ಹೆಚ್ಚು ವಂತಿಗೆ ಕೊಡುವವರಿದ್ದಾರೆ. ಅದೊಂದು ಬಗೆಯ ಹುಚ್ಚೆಂದು ಸೋಮುಣ್ಣಿ ಮನಗಂಡಿದ್ದಾನೆ. ಆ ಮೂಲಕ ಸಮಾಜದ ಕಡೆಗೆ ಬೊಟ್ಟುಮಾಡಿ ತೋರಿಸಿದ್ದಾರೆ, ಲೇಖಕರು.

ಬಾಲ್ಯದಲ್ಲಿಯೇ ಹುಟ್ಟೂರನ್ನು ಬಿಟ್ಟು ಉದ್ಯೋಗದಲ್ಲೇ ಇರುತ್ತಿದ್ದ ಸೋಮುಣ್ಣಿಮಾವ ಏಕಾಏಕಿ ಹಳ್ಳಿಗೆ ಬಂದು ನೆಲಸಿ, ಅಲ್ಪ ಕಾಲಾವಧಿಯಲ್ಲೇ ಕೃಷಿಕನಾಗಿ, ಆಳುಗಳಿಗಿಂತಲೂ ಮಿಗಿಲಾಗಿ ದುಡಿಯುವಷ್ಟು ಮಾರ್ಪಾಟು ಹೊಂದಿರುವುದು ತುಸುಮಟ್ಟಿಗೆ ಅತಿಶಯೋಕ್ತಿಯೆನ್ನಬಹುದು. ಚಂದ್ರನ ಮಧ್ಯದಲ್ಲಿರುವ ಕಲೆಯಂತೆ ಇದೊಂದು ಗುಣಗಳ ಮಧ್ಯದಲ್ಲಿರುವ ದೋಷವಾಗಿದೆ. ಅತಿಶಯವಾಗಿದ್ದರೂ ಅನುಭವವಲ್ಲದ ಜೀವನವೊಂದರ ಸುತ್ತು ಹಾಸು-ಹೊಕ್ಕಾಗಿ ಹೆಣೆದ ಈ ಕತೆ ಸರ್ವಾಂಗ ಸುಂದರವಾಗಿದೆ. ನಿರಾಡಂಬರನಾದ ಸರಳ ಶೈಲಿಯಲ್ಲಿ ಸಹಜವಾದ ಮಾತುಗಳಲ್ಲಿ ಕಥೆಯು ರೂಪತಾಳಿದ್ದರೂ ಭಾವನೆ ಮನಮುಟ್ಟುವಂತಿದೆ.

ಪಾತ್ರನಿರೂಪಣೆಯಲ್ಲಿ ನೋಡಿದರೂ ಎಲ್ಲವೂ ಸಾಕಷ್ಟು ಜೀವಕಳೆಯನ್ನು ತಳೆದುನಿಂತಿವೆಯೆನ್ನಲು ಸಂದೇಹವಿಲ್ಲ. ಸರಳವಾದ ಸಣ್ಣ

ಸಣ್ಣ ಮಾತುಗಳಲ್ಲಿಯೇ ಸಂದರ್ಭ, ಸನ್ನಿವೇಶ, ಪಾತ್ರಗಳ ವ್ಯಕ್ತಿತ್ವ-ವನ್ನೂ ಯಶಸ್ವಿಯಾಗಿ ಚಿತ್ರಿಸಿರುವ ಲೇಖಕರ ಕಾರ್ಯವು ಸ್ತುತ್ಯ ವಾಗಿದೆ. ಸಂದರ್ಭಾನುಸಾರ ಸೇರಿಕೊಂಡಿರುವ ಸಂಭಾಷಣೆಗಳು ಸೊಗಸಾಗಿವೆ.

ಆರಂಭ ಶಿಖರಗಳ ಹೊಂದಿಕೆಯು ಉತ್ತಮವಾಗಿದೆ. ಅಲ್ಲದೆ ಆದಿಯಲ್ಲಿ ಕುತೂಹಲವನ್ನು ಸ್ವಾಭಾವಿಕವಾಗಿ ಕೆರಳಿಸಿ ಮುಂದೊತ್ತು-ವಂತೆ—ಕಲಾಪೂರ್ಣವಾಗಿ ಭಾವನಾಮಯ ಲೋಕಕ್ಕೆ ಒಯ್ದು ಅಂತ್ಯಗೊಳ್ಳುವುದರಲ್ಲಿ ಕಥಾಸೂತ್ರದ ಚಾತುರ್ಯವೇ ಅಡಗಿದೆಯೆಂದರೆ ಹೆಚ್ಚಲ್ಲ. ಒಟ್ಟಿನಲ್ಲಿ ಕಥೆ ರಸಪೂರ್ಣವಾಗಿದೆ, ಭಾವಪೂರ್ಣವಾಗಿದೆ.

ವಿಯೋಗದುಃಖದಿಂದ ಅಡ್ಡದಾರಿ ಹಿಡಿದವರೋ, ಪ್ರಾಣ ಘಾತ ಮಾಡಿಕೊಂಡವರೋ ಹೆಚ್ಚು. ಕತೆಗಳಲ್ಲೂ ಅಂತಹವುಗಳದೇ ಮೇಲುಗೈ. ಪ್ರಸ್ತುತ ಕತೆಯು ಹಾಗಿರದೆ, ವಿಯೋಗವಾದರೂ ಹೃದ-ಯದಲ್ಲಿ ಪ್ರತಿಷ್ಠಾಪಿಸಿದ ಅಧಿದೇವತೆಯ ಸತತ ಧ್ಯಾನಚೈತನ್ಯ ದೊಂದಿಗೆ ಪರಿಶುದ್ಧವಾಗಿ, ಆದರ್ಶ ರೀತಿಯಿಂದ ಸಾಗಿದುದನ್ನು ಚಿತ್ರಿ ಸಿರುವುದು ಸಮಾಜಕ್ಕೊಂದು ಮಾರ್ಗದರ್ಶಕವಾಗಿದೆ. ಜನರು ಬಾಯಿಗೆ ಬಂದಂತೆ ಆಡಿಕೊಂಡರೂ ಅದಕ್ಕೆ ಕಿವಿಗೊಡದೆ, ಧೃತಿಗೆಡದೆ, ಪರಿ ಶುದ್ಧ ಜೀವಿಯಾಗಿ ಮನೋನಿರ್ಧಾರದಿಂದ ಸಾಗುವುದು ಆತ್ಮೋ-ದ್ಧಾರದ ದಾರಿಯೆಂದು ಸೂಕ್ಷ್ಮವಾಗಿ ತೋರಿದಂತಿದೆ. ನಿಜವಾದ ಪ್ರೇಮವಿವಾಹದ ಉಚ್ಚ ಆದರ್ಶವನ್ನು ಪ್ರತಿಪಾದಿಸುವುದರೊಂದಿಗೆ ಪ್ರೇಮವಿವಾಹದ ಹೆಸರಿನಲ್ಲಿ ಸಮಾಜದೊಳಗೆ ನಡೆಯುತ್ತಿರುವ ವಿಷಯಲಾಲಸೆಗಳ ಹೇಯವರ್ತನೆಗಳ ಕಡೆಗೂ ಚುಚ್ಚಿದ್ದಾರೆ.

ತನ್ನದೇ ಆದ ಚಿತ್ರಣಕೌಶಲ್ಯ, ವೈಶಿಷ್ಟ್ಯದಿಂದ ಕೂಡಿದ ಈ ಕಥಾಕುಸುಮವು ಕನ್ನಡ ಸಾಹಿತ್ಯಮಾಲೆಯಲ್ಲಿ ಪೋಣಿಕೆಗೊಳ್ಳಲು ಅರ್ಹವಾಗಿದೆಯಲ್ಲದೆ, ಇನ್ನೂ ಶ್ರೇಯಾರ್ಹ ಕೃತಿಗಳನ್ನು ರಚಿಸಲೆಂದು ಕಥೆಗಾರರ ಲೇಖನಿಗೆ ಶುಭವನ್ನು ಹಾರೈಸುವೆ.

❋

ಮಂಜುಳಾ

(ಕತೆಯ ವಿಮರ್ಶೆ)

ಶ್ರೀ. ಬಿ. ಆರ್. ಮಾಹುಲಿ B. Sc. (Hons)

ರಾಸ್ತಾಪೇಠ ಹಾಯಸ್ಕೂಲ್, ಪುಣೆ ೨

ಜೀವಂತ ಹಾವನ್ನು ಹೊಡೆದು ಕಲ್ಲಿನ ಹಾವನ್ನು ಪೂಜಿಸುವುದು. ಇಂದಿನ ನಮ್ಮ ಧರ್ಮವಾಗಿದೆ. ನಿಜವಾದ ಪಾಪ-ಪುಣ್ಯಗಳನ್ನರಿಯದ ನಾವು, ಪುಣ್ಯದ ಹೆಸರಿನಲ್ಲಿ ಪಾಪಗಳನ್ನೇ ಮಾಡುತ್ತಿದ್ದೇವೆ. ಈ ಸ್ವಭಾವವನ್ನು ಸಮಾಜದ ಎದುರು ಇಡಲು ಅನೇಕರು ಅನೇಕ ದಿನ ಗಳಿಂದ ಪ್ರಯತ್ನಿಸುತ್ತಿದ್ದಾರೆ; ಅದರೆ ಸಮಾಜದ ಈ ಸ್ವಭಾವ ಹೆಚ್ಚೆಚ್ಚು ಭದ್ರವಾಗುತ್ತಲೇ ನಡೆದಿದೆ. ಇದನ್ನೇ ನಮಗೆ ಅರಿವು ಮಾಡಿಕೊಡುತ್ತಿದೆ—ಶ್ರೀ. ವರಗಿರಿ ಮಾರ್ತಂಡರಾಯರು ಬರೆದ ಈ 'ಮಂಜುಳಾ' ಕತೆ.

ಆಚಾರಪ್ಪನನ್ನು ಕಳೆದುಕೊಂಡ ಐದು ವರುಷದ ಮುಗ್ಧ ಕನ್ಯೆ ಮಂಜುಳಾ; ಅವನಿಗೆ ಸಹಾಯ ಮಾಡಬೇಕೆಂದು ಮನಸ್ಸಿದ್ದರೂ ಪತಿಗೆ ಹೆದರಿ ಹಿಂಜರಿಯುತ್ತಿದ್ದ ಅಂಬಕ್ಕ; ಮನೆಯಲ್ಲಿ ಅಕ್ಕಿಯ ಚೀಲ ವನ್ನು ಇಟ್ಟು ಧಾನಧರ್ಮಕ್ಕೆ ಒಂದು ಹಿಡಿ ಅಕ್ಕಿ ಇಲ್ಲವೆಂದು ಕೈ ಜಾಡಿಸಿಕೊಂಡು ಅಲೆದಾಡುವ ಮನೆಯ ಯಜಮಾನ ರಂಗರಾಯರು; ಕುರುಡು ಸಮಾಜದ ಸಹಾಯವಿಲ್ಲದೆ ಕುರುಡನಾಗಿ ಅಲೆದಾಡಿ ಪ್ರಾಣ ತೆತ್ತ ಆಚಾರಪ್ಪ—ಇವರೇ ಈ ಕತೆಯಲ್ಲಿ ಬರುವ ಮುಖ್ಯ ಪಾತ್ರಗಳು.

ನಿರ್ದಯವಾದ ಕುರುಡುಸಮಾಜವನ್ನು ನೋಡಬಾರದೆಂದು ಕಣ್ಣಿಗೆ ಪೊರೆ ಬಂದ ಮಧುಕರಿಬೇಡುವ ಮುದುಕ, ಮಂಜುಳೆಯಂತಹ ಕರುಣಾಳು ಕನ್ಯೆಯರು ಸವಿನುಡಿಗಳಿಂದ ಗರ್ಭಗುಡಿಯಲ್ಲಿಯ ಕುಡಿ-ಯೊಡೆದು ಮಿನುಗುವ ದೀವಿಗೆಯಂತೆ ಜೀವವೇನೋ ಹಿಡಿದಿದ್ದ. ಅನಾಥ ! ಪಾಪ ದೈವಬಲವಿಲ್ಲದವ; ಅಲ್ಲದೆ ಬಾಹ್ಯಜಗತ್ತಿನ ಬಲವಿಲ್ಲ-ದವ. ನಮ್ಮ ಕೈಯಿಂದ ಸಹಾಯ ಮಾಡುವುದು ಸಾಧ್ಯವಿಲ್ಲವಾದರೂ ಸವಿಮಾತಿಗೂ ಕೊರತೆಯುಂಟೇ ? ಮಧುಕರಿಯ ಬದಲು ಜನತೆಯ ಬಿರುನುಡಿ, ಕೊಂಕುಮಾತು ಇನ್ನೇ ಹೆಚ್ಚಾಗಿ ಸಿಗುವುದರಿಂದ, ಆತನಿಗೆ ಭಿಕ್ಷೆಯೆಂದರೆ ಮೈಜುಮ್ಮೆನ್ನುವುದು ಆಶ್ಚರ್ಯವೇನಲ್ಲ. ಆದರೆ ಹಸಿದ ಹೊಟ್ಟೆ ಕೇಳಬೇಕಲ್ಲ ! ಕಟಿಯಾಗಿದ್ದ ಬಟ್ಟಲು ಅತನ ಒಂದು ಕೈ ಹಿಡಿದು, ಕೈಗೋಲು ಇನ್ನೊಂದು ಕೈಹಿಡಿದು ಮನಸ್ಸಿಲ್ಲದ ಆತನನ್ನು ಸವಿೀಪದ ರಂಗರಾಯರ ಮನೆಗೆ ಎಳೆತರುವವು. ಜ್ವರ ಬಂದ, ಮೂರು ದಿನಗಳಿಂದಲೂ ಉಪವಾಸದಿಂದ ಕ್ಷೀಣವಾದ ಅವನ ಧ್ವನಿಯು ಯಾರ ಮನಸ್ಸನ್ನೂ ಇರಿಯುವಂತಿದೆ. ಆದರೆ ಕಠೋರವಾದ ಗಂಡುಸು ಇವಕ್ಕೆ ಕರಗುವಂತಹದಲ್ಲ. ಧರ್ಮ ನಮ್ಮ ಭಾರತದಲ್ಲಿ ಇನ್ನೂ ಹೆಣ್ಣುಮಕ್ಕಳಲ್ಲಿ ಮಾತ್ರ ಉಳಿದಿದೆ; ಆದರೆ—ಅದನ್ನೇನು—ಅವಳು ಗಂಡಸಿನ ದಾಸಿಯಲ್ಲವೇ ? ಪತಿಯ ಮಾತು ನಡಿಸಿ ಒಂದು ಪುಣ್ಯ ವನ್ನು ಗಳಿಸಿ, ಇನ್ನೊಂದು ಮಹಾಪಾಪವನ್ನು ಮಾಡಬೇಡವೇ ಅವಳು? ತಳಗೆಯಲ್ಲಿ ಅನ್ನವನ್ನು ಹಾಕಿಕೊಂಡು ಅಡುಗೆಯ ಮನೆಯ ಹೊಸ್ತಿಲ ವರೆಗೂ ಬಂದಿದ್ದ ಅಂಬಕ್ಕ, ಕಾವೇರಿಸಿಂತಿದ್ದ ಗಂಡನನ್ನು ನೋಡಿ ಹಿಂದೆ ಸರಿಯುತ್ತಾಳೆ. ಈ ಸಂಗತಿ ಮನೆ ಮನೆಗಳಲ್ಲಿ ಪ್ರತಿದಿನವೂ ನಡೆದದ್ದೇ. ಮನೆಯಲ್ಲಿ ಸಾಕಷ್ಟು ಆಹಾರವನ್ನು ಇಟ್ಟುಕೊಂಡು, ಹಸಿವೆಯಿಂದ ಕ್ಷೀಣ ಮುಖಮಾಡಿಕೊಂಡು ಬಂದ ಬಡಜನರಿಗೆ "ಮನೆ ಯಲ್ಲಿ ಆಹಾರವಿಲ್ಲ" ಎಂದು ಅವರಿಗಿಂತಲೂ ಕ್ಷೀಣ ಮುಖಮಾಡಿ ಕೊಂಡು ಅವರನ್ನು ಮುಂದಕ್ಕೋಡಿಸುವುದು ನಮ್ಮ ಇಂದಿನ ಧರ್ಮ ವಾಗಿದೆ.

ಆಚಾರಪ್ಪನಿಗೆ ಯಾವ ಸಜೀವಿಯ ಸಹವಾಸ ಸಿಗದಿದ್ದರೂ ನಿರ್ಜೀವ ಕೊಳಲು ಅವನ ಸಂಗಾತಿಯಾಗಿ, ಅವನನ್ನು ಸಜೀವಿ-

(ಕವ್ವರ್ ಮೂರನೆಯ ಪುಟಕ್ಕೆ)

ಶ್ರೀ ಬೆಟಗೇರಿ ಕೃಷ್ಣಶರ್ಮರ ಷಷ್ಟಿಪೂರ್ತಿ ಸತ್ಕಾರ ಸಮಿತಿ ಧಾರವಾಡ

ವಿನಂತಿ

ಕನ್ನಡ ನಾಡಿನ ಸುಪ್ರಸಿದ್ಧ ಕವಿಗಳೂ, ಕತೆಗಾರರೂ, ಕಾದಂಬರಿಕಾರರೂ, ಸಂಶೋಧಕರೂ ಆಗಿರುವ ಶ್ರೀ. ಬೆಟಗೇರಿ ಕೃಷ್ಣಶರ್ಮರಿಗೆ ಕಳೆದ ಚೈತ್ರಮಾಸಕ್ಕೆ ಅರುವತ್ತು ವರುಷಗಳು ತುಂಬಿದವು.

ಬೆಳಗಾವಿ ಜಿಲ್ಲೆಯ ಬೆಟಗೇರಿಯಲ್ಲಿ ಜನ್ಮವೆತ್ತಿ, ರಾಷ್ಟ್ರೀಯ ಶಾಲೆಗಳಲ್ಲಿ ಶಿಕ್ಷಕರೆಂದು ದೇಹವನ್ನು ಸವೆಯಿಸಿ, ಸಾಹಿತ್ಯ ಜಿಜ್ಞಾಸೆಯಿಂದ ಕನ್ನಡ ನೆಲವನ್ನೆಲ್ಲ ಸುತ್ತಾಡಿ, ಸಾಹಿತ್ಯಸೇವೆಯ ಜೊತೆಗೆ ಕಳೆದ ಇಪ್ಪತ್ತೆರಡು ವರುಷಗಳಿಂದಲೂ '**ಜಯಂತಿ**' ಯನ್ನು ನಡೆಯಿಸಿಕೊಂಡು ಬಂದು, ಕನ್ನಡ ನಾಡನುಡಿಗಳಿಗೆ ಅನೋಘ ಸೇವೆ ಸಲ್ಲಿಸಿರುವರು ಶ್ರೀ ಬೆಟಗೇರಿ ಕೃಷ್ಣಶರ್ಮರು! '**ಜಯಂತಿ**' ಯನ್ನು ಸ್ತ್ರೀತಿಯ ಮಗಳಂತೆ ಜೋಪಾನಮಾಡಿ ಫಲಾಪೇಕ್ಷೆಯಿಲ್ಲದೆ ಅದಕ್ಕಾಗಿ ಇರುಳನ್ನು ಹಗಲನ್ನಾಗಿಸಿ ಪರಿಶ್ರಮಿಸಿ, ಅದನ್ನು ಕರ್ನಾಟಕದ ಹೆಮ್ಮೆಯ ಪತ್ರಿಕೆಯನ್ನಾಗಿ ಮಾಡಿದ್ದಾರೆ ಶ್ರೀ ಬೆಟಗೇರಿಯವರು.

ಹಿರಿಯ ಸಾಹಿತ್ಯಜ್ಞರ ಮೊದಲಪಂಕ್ತಿಗೆ ಸೇರಿನ ಶ್ರೀ ಬೆಟಗೇರಿಯವರು, ಸಾಹಿತ್ಯದ ಶ್ರೀಮಂತಿಕೆಯನ್ನು ಪಡೆದು ಬಂದಿದ್ದಾರೆ ವಿನಾ ಜೀವನದಲ್ಲಿ ಶ್ರೀಮಂತಿಕೆಯನ್ನಲ್ಲ. ಅವರ ಮೂಕಸೇವೆಯ ಅರಿವು ಕನ್ನಡ ನಾಡಿಗೆ ಕಂಡಂತಿಲ್ಲ. ಕಂಡಿದ್ದರೂ ನಾಡು ಅದನ್ನು ಗುರುತಿಸಿ ಅವರಿಗೆ ಗೌರನಾದರಗಳನ್ನು ಪ್ರಕಟಿಸುವ ಸುಪ್ರಸಂಗವನ್ನು ತಂದುಕೊಂಡಿಲ್ಲ.

ಶ್ರೀ. ಬೆಟಗೇರಿ ಕೃಷ್ಣಶರ್ಮರು ಹೀಗೆ ಬಾಳಕುಲುಮೆಯಲ್ಲಿ ಬೆಂದು ಬಸ್ಮಪಟ್ಟಿದ್ದರೂ, ವಿಜಯನಗರದ ಇತಿಹಾಸ ಕುರಿತು ಹತ್ತೆಂಟು ಕಾದಂಬರಿಗಳನ್ನು ಬರೆಯುವ, ದಾಸಸಾಹಿತ್ಯ ಕುರಿತು ವಿಮರ್ಶೆ ನಡೆಯಿಸುವ, ಜನಪದ ಜೀವನವನ್ನು ಕುರಿತು ವಿವೇಚಿಸುವ ಹವ್ಯಾಸವನ್ನಿಟ್ಟುಕೊಂಡು, ಈಗಾಗಲೇ ಇಂಥ ವೈದ್ಧಾಹ್ಯದಲ್ಲಿ ಕಾರ್ಯೋನ್ಮುಖರಾಗಿದ್ದಾರೆ. ಅವರ ಸಾಮರ್ಥ್ಯದ ಹಕ್ಕಿಗೆ ಎರಡು ರೆಕ್ಕೆಗಳು ಬಂದು ಅವರ ಅಮೂಲ್ಯ ಜ್ಞಾನ ಕನ್ನಡನಾಡಿನ ಜನರಿಗೆ ಸಿಕ್ಕಬೇಕಾದರೆ, ಅವರ ಬೆನ್ನೆಲುಬು ಗಟ್ಟಿಯಾಗಲು ಕರ್ನಾಟಕದ ಜನರಾದ ನಾವು ಬೆಂಬಲವನ್ನೀಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆದುದರಿಂದಲೇ ಈ ಷಷ್ಟಿಪೂರ್ತಿ ಸಮಾರಂಭದ ಸುಸಂಧಿಯಲ್ಲಿ ವಿಶಾಲಹೃದಯಿಗಳಾದ ತಾವೆಲ್ಲರೂ, ನಾವು ಕೊಡಬೇಕೆಂದು ಯೋಜಿಸಿರುವ ಮತ್ತು ಯೋಚಿಸಿರುವ ಹಮ್ಮಿಣಿಗೆ ಯಥಾಶಕ್ತಿ ಸಹಾಯ ಸಹಕಾರಗಳನ್ನೀಯಬೇಕೆಂದು ಪ್ರಾರ್ಥಿಸುತ್ತೆವೆ. ಧನಸಹಾಯ ಕಳುಹಿಸುವವರು **ಡಾ॥ ಕೆ. ಎಸ್. ಕಮಲಾಪೂರ,** ಕೋಶಾಧ್ಯಕ್ಷರು ಶ್ರೀ. ಬೆ. ಕೃ. ಷ. ಸಮಿತಿ, ದೇಸಾಯಿಓಣಿ ಧಾರವಾಡ ಈ ವಿಳಾಸಕ್ಕೆ ಕಳಿಸಬೇಕು. ಉಳಿದ ಪತ್ರವ್ಯವಹಾರವನ್ನು ಪ್ರೊ. ಸಿ. ಎಸ್. ಕುಲಕರ್ಣಿ ಕಾರ್ಯದರ್ಶಿ Co/ ಮಿಂಚಿನಬಳ್ಳಿ, ಧಾರವಾಡ ಈ ವಿಳಾಸಕ್ಕೆ ಮಾಡಬೇಕು.

ಬಿಂದುಮಾಧವ ಬುರ್ಲಿ
ಕಾರ್ಯಾಧ್ಯಕ್ಷ

ಶ್ರೀ ಸಿ. ಎಸ್. ಕುಲಕರ್ಣಿ ಕಾರ್ಯದರ್ಶಿ	ಡಾ. ಕೆ. ಎಸ್. ಕಮಲಾಪುರ ಕೋಶಾಧ್ಯಕ್ಷರು

— ಕಾರ್ಯಕಾರೀ ಮಂಡಲ —

ಶ್ರೀ ಎಸ್. ಸಿ. ಬಿಕ್ಕಣ್ಣವರ ಪ್ರೊ. ರಾ. ಯ. ಧಾರವಾಡಕರ ಪ್ರೊ. ಎಸ್. ಆರ್. ಮಳಗಿ ಶ್ರೀ ಗಣಪತರಾವ ಜೋಶಿ
ಶ್ರೀ ಸತ್ಯಜ್ಞಾನ ಗುಡಿ ಶ್ರೀ ಗೋವಿಂದಮೂರ್ತಿ ದೇಸಾಯಿ ಶ್ರೀ ಕೆ. ಜಿ. ಹಲಸಗಿ ಶ್ರೀ ಮ. ಗು. ಪಾಟೀಲ

(೭೧ನೇ ಪುಟದಿಂದ ಬಂದೆದು)

ಯನ್ನಾಗಿ ಮಾಡಿತು. ಅದರ ಸುಮಧುರ ನಿನಾದವನ್ನು ಕೇಳಿ ಮಂಜುಳಾ ಅವನೆಡೆಗೆ ಓಡಿಬರುತ್ತಿದ್ದಳು. ಬಾಹ್ಯಲೋಕದ ವರ್ತನೆಯನ್ನರಿಯದ ಆ ಐದು ವರುಷದ ಮಗುವಿಗೇನು ಗೊತ್ತು....ತಾನು ಅವನೆಡೆಗೆ ಹೋಗಬೇಕೋ ಬೇಡವೋ ?— ಎಂಬುದು ! ಅವನ ಕೊಳಲಿನ ನಿನಾದವನ್ನು ಕೇಳಿ ಅವನ ಬಳಿ ಕುಳಿತು, ಏಕಚಿತ್ತದಿಂದ ಅದನ್ನು ಆಲಿಸುತ್ತಿದ್ದಳು. ಅವನ ಕಡೆಯಿಂದ ಪುರಾಣದ ಕತೆಗಳನ್ನು ಕೇಳುತ್ತಿದ್ದಳು. ಅದೇಕೆ ! ಹಲವು ಸಲ ಅವನ ಹೆಗಲ ಏರಿ, ಚೆಂಡಿಕೆ ಹಿಡಿದು ಕುದುರೆಯ ಆಟವಾಡುತ್ತಿದ್ದಳು. ಇಂಥ ಮುಗ್ಧಮಗುವಿನ ಸಹವಾಸ ಯಾರಿಗೆ ಬೇಡ ? ಭಿಕ್ಷುಕನಾದರೇನಾಯಿತು; ಅವನೂ ಮಾನವನಲ್ಲವೇ ? ಅಂದಮೇಲೆ ತಾನೂ ಎಲ್ಲರಂತೆ ಮದುವೆಯಾಗಿ ಮಂಜುಳೆಯಂತಹ ಮಗುವನ್ನು ಪಡೆಯಲು ಆಶಿಸುವುದು ಅವನ ವ್ಯಕ್ತಿತ್ವಕ್ಕೆ ವಿರುದ್ಧವೇ ? ಅಥವಾ ಅವನ ಮೇಲಿನ ಮಮತೆಯಿಂದ ಯಾವುದನ್ನೂ ಅರಿಯದ ಮಂಜುಳೆ ಅವನಿಗೆ ಜಡ್ಡಾದಾಗ "ನಿನಗೆ ಕಾಫಿ ಮಾಡಿಕೊಡಲು ನಿಮ್ಮ ಅವ್ವನಿಲ್ಲವೊ ?" ಎಂದು ಒಂದೆರಡು ಒಳ್ಳೆಯ ಮಾತುಗಳಿಂದ ವಿಚಾರಿಸಿ, ಕೊನೆಗೆ ಒಂದು ತೊಟ್ಟು ನೀರಿನಿಂದಾದರೂ ಹಸಿವೆಯಿಂದ ಕ್ಷೀಣವಾದ ಆ ಬಡ ಶರೀರವನ್ನು ಉಪಚರಿಸುತ್ತಿರುವುದು ಸಮಾಜದ ನೀತಿಯ ವಿರುದ್ಧವೊ ? 'ಚಿಕ್ಕಮಕ್ಕಳೆಂದರೆ ದೇವರ ಹಾಗೆ' ಎಂದು ತಿಳಿದುಕೊಳ್ಳುವುದು ಸ್ವಲ್ಪವೂ ತಪ್ಪಲ್ಲ. ಹೊರಗಿನ ಜಗತ್ತಿನ ಕಪಟತನದ ಗಾಳಿಯು ಇನ್ನೂ ಅವರ ಮೈಗೆ ಸೋಂಕಿರುವುದಿಲ್ಲ. ದರಿದ್ರರು, ಶ್ರೀಮಂತರು ಎಂಬ ಭೇದಭಾವನ್ನರಿಯದ ಈ ಮಂಜುಳೆಯು, ತನ್ನ ತಂದೆ-ತಾಯಿಗಳ ಕಣ್ಣು ತಪ್ಪಿಸಿ, ಆ ಬಡಪಾಯಿಗೆ ಸಹಾಯ ಮಾಡಲು ಪ್ರಯತ್ನಿಸುತ್ತಿದ್ದಾಳೆ.

ಆದರೆ ಮಂಜುಳೆಯಷ್ಟು ಕೂಡ ವಿಚಾರವಿಲ್ಲದ ಸಮಾಜ, ಅವನನ್ನು ನೋಡಿಯೂ ನೋಡದವರ ಹಾಗೆ ದೂರ ಹಾಯ್ದು ಹೋಗುತ್ತವೆ. ಆರ್ಚಕ ಬಂದು ಅವನೆಡೆಗೆ ದುರುದುರು ನೋಡಿ, ಕಲ್ಲಿನ ದೇವರ ಪೂಜೆ ಮುಗಿಸಿ ಜೀವಂತ ದೇವರ ಮೂರ್ತಿಯನ್ನು ತ್ಯಜಿಸಿ ಹೋಗುತ್ತಾನೆ. ಜನರು ಬಂದು ಗುಡಿಯ ಗಂಟೆಯ ಹೊಡೆದು ತಮ್ಮನ್ನು ನೋಡದ ದೇವರಿಗೆ ಕೈಮುಗಿದು, ತಮ್ಮನ್ನೇ ಆಶಾಪೂರಿತ ದೃಷ್ಟಿಯಿಂದ ನೋಡುತ್ತಿರುವ ತೊಳಲುವ ಜೀವಿಯ ಕಡೆಗೆ ಬೆನ್ನುಮಾಡಿ ಹೋಗುತ್ತಾರೆ. ಭಿಕ್ಷುಕನ ನಾಡಿ ತಾಸಿಗೊಮ್ಮೆ ಕಚೇರಿಯ ಗಂಟೆಯಾಗಿ ಬಡಿದುಕೊಳ್ಳಹತ್ತಿದೆ. ಕೊನೆಗೆ ಬೇಸತ್ತು ರಾತ್ರಿಯಲ್ಲಿ ಅವನ ದೇಹವನ್ನು ತ್ಯಜಿಸಿ, ನಿಜವಾಗಿ ಕಚೇರಿಯ ಗಂಟೆಯಾಗಿಯೇ ಹೊಡೆಮಕೊಳ್ಳಹತ್ತಿದೆ. ಆದರೆ ಈ ರಾತ್ರಿಯ ಗಂಟೆಯ ಸಪ್ಪಳ ಕೇಳಬೇಕು ಯಾರು ? ಜನಕ್ಕೆಲ್ಲ ನಿದ್ರೆಯಿಲ್ಲವೇ ?

ಮೂಢ ಸಮಾಜ ! ಆ ಬಡಪಾಯಿ ಇರುವವರೆಗೆ ಅವನ ಬಾಯಲ್ಲಿ ಒಂದು ತೊಟ್ಟು ನೀರು ಹಾಕದೆ ಅವನು ಸತ್ತಮೇಲೆ ಅವನ ಬಾಯಲ್ಲಿ ಕಾಲುವೆಯನ್ನೇ ತಂದುಬಿಡಲು ಪ್ರಯತ್ನಿಸುತ್ತಾರೆ. ಅವನ ಅಂತ್ಯಸಂಸ್ಕಾರ ಕ್ರಿಯೆಗೆ ತಮ್ಮ ಪತ್ನಿಯಿಂದ ರೂಪಾಯಿಗಳನ್ನು ಇಸಿದುಕೊಳ್ಳುತ್ತಾರೆ. ರಂಗರಾಯರು ಪುಣ್ಯಮಾಡುವುದಕ್ಕಾಗಿ. ಯಾರಿಗಾಗಿ ? ತಮಗಾಗಿ—ಅಲ್ಲಲ್ಲ ಅವನು ಹೆಸರಿದು ಬಂದಾಗ ತಮ್ಮ ಪತ್ನಿಗೆ ಅನ್ನಹಾಕಲು ಬೇಡವೆಂದು ಹೇಳಿದ ಪಾಪವನ್ನು ತೊಳೆಯಲು. ಆದರೆ ತಾನು ಪ್ರಾಣವನ್ನು ಬಿಡುವಾಗ ಒಂದು ಹನಿ ನೀರನ್ನು ಹಾಕಿದ ಮಂಜುಳೆಗಾಗಿ ಒಂದು ಬೆಂಡಿನ ಬಂಡಿಯನ್ನು ಮಾಡಿಟ್ಟು ಪ್ರಾಣ ಬಿಟ್ಟಿದ್ದಾನೆ. ಆ ಬಡ ಮುದುಕ ! ಯಾಕೆ ? ಮಂಜುಳೆಯ ಮೇಲಿನ ಮಮತೆಯಿಂದ, ಇಲ್ಲಿಲ್ಲ, ಈ ಜಗತ್ತಿನಲ್ಲಿ ಕರುಣೆಗೆ ಸ್ಥಾನವಿಲ್ಲ. ಮಂಜುಳೆಯಂತಹ ಕರುಣಾಹೃದಯಿಗಳು ಈ ನಿರ್ದಯ ಜಗತ್ತಿನಲ್ಲಿ ಬಾಳಲು ಸಾಧ್ಯವಿಲ್ಲ. ಅವಳೂ ಆ ಬಂಡಿಯಲ್ಲಿ ಕುಳಿತು ಕರುಣೆಯ ಜಗತ್ತನ್ನು ಅರಸುತ್ತ ಹೋಗಬೇಕು ಎಂದು.

ಈ ಮೂಢ ನಂಬಿಗೆಯ ಸಮಾಜದ ಕಣ್ಣೀರು ಮಿಡಿಯುವ ಕರುಣಾಜನಕ ಚಿತ್ರವನ್ನೇ ಓದುಗರ ಕಣ್ಮುಂದೆ ಇಡಲು ಪ್ರಯತ್ನಿಸುತ್ತಿದ್ದಾರೆ ಲೇಖಕರು. ಕತೆಯಲ್ಲಿಯ ಪಾತ್ರಗಳು ತಮ್ಮ ಪಾತ್ರಕ್ಕನುಗುಣವಾಗಿ ವರ್ತಿಸಿವೆ. ಅಲ್ಲಲ್ಲಿ ಬಂದ ಉಪಮೆಗಳೂ ಸರಿಯಾಗಿವೆ. ಉದಾಹರಣಾರ್ಥವಾಗಿ—ಈಗೋ, ಇನ್ನೊಂದು ಕ್ಷಣಕ್ಕೆ ಆರುತ್ತದೆಯೋ ಅನ್ನುವ ಕುಡಿಯೊಡೆದು ನಿನುಗುವ ಗುಡಿಯೊಳಗಿನ ದೀಪ; ಮುಷ್ಟಿಯಲ್ಲಿ ಜೀವಹಿಡಿದು ಸರಳುತ್ತ ಬಿದ್ದ ಭಿಕ್ಷುವಿಗೆ; ತಾಸಿಗೊಮ್ಮೆ ಹೊಡೆಯುತ್ತಿರುವ ಕಚೇರಿಯ ಗಂಟೆಯ ಸಪ್ಪಳ ಅವನ ನಾಡಿಯ ಸಪ್ಪಳಕ್ಕೆ ಇತ್ಯಾದಿ. ಆ ಹುಡುಗಿಯ ಸ್ವಭಾವಕ್ಕನುಗುಣವಾಗಿ "ಮಂಜುಳಾ" ಈ ಹೆಸರು ಅವಳಿಗೇನೋ ಒಪ್ಪುವಂತಹದಿದೆ; ಆದರೆ ಸಮಾಜದ ಸ್ವಭಾವವನ್ನೇ ಕುರಿತು ಬರೆದ ಈ ಕತೆಗೆ ಈ ಹೆಸರು ಅಷ್ಟೊಂದು ಸಮಂಜಸವಾಗುವುದಿಲ್ಲ. ಅದಕ್ಕೆ ಅನುಗುಣವಾದ ಬೇರೆ ಹೆಸರನ್ನು ಕೊಟ್ಟಿದ್ದರೆ ಹೆಚ್ಚು ಪರಿಣಾಮಕಾರಿಯಾಗುತ್ತಿತ್ತು. ಕತೆ ಚಿಕ್ಕದಿದ್ದರೂ ಚೊಕ್ಕಟವಾಗಿದೆ. ಕಿರಿಯಲೇಖನದಲ್ಲಿಯೇ ಹಿರಿಯ ಮಾತನ್ನು ಹೇಳಿ, ಹಿರಿಮೆಯನ್ನು ಪಡೆಯಲು ಯತ್ನಿಸಿದೆ. ಈ ಹಿರಿಮೆ ಲೇಖಕರದ್ದೇ. ಅವರಿಗೆ ಅಭಿನಂದನೆಗಳು. ಚಿಕ್ಕ ಕತೆಗಳನ್ನು ಪ್ರಕಟಿಸಿ ಅಂತಹ ಲೇಖಕರಿಗೆ ಪ್ರೋತ್ಸಾಹನವೀಯುವ "ಜಯಂತಿ" ಪತ್ರಿಕೆಗೂ ಸ್ವಾಗತ.

ಸಾದರ ಸ್ವೀಕಾರ

೧೧. ಪ್ರಭಾತ (ವಾರಪತ್ರಿಕೆಯ ಜಗದ್ಗುರು ವಿಶೇಷಾಂಕ) ಸಂಪಾದಕರು ಶ್ರೀ. ಕುದ್ಪಿ ವಾಸುದೇವ ಶೆಣೈ, ಮಂಗಳೂರು. 'ಪ್ರಭಾತ' ಕಾರ್ಯಾಲಯ, ತೇರುಬೀದಿ, ಮಂಗಳೂರು ಕ್ರೌ. ಫೋ. ೧೬ ಪುಟಗಳು; ಬೆಲೆ ೩ ಆಣೆ.

ಶ್ರೀಜಗದ್ಗುರು ಆದಿಶಂಕರಾಚಾರ್ಯರ ಜೀವನ ತತ್ತ್ವಜ್ಞಾನಗಳನ್ನು ಒಳಗೊಂಡ ಸಚಿತ್ರ ಲೇಖನಗಳು ಇದರಲ್ಲಿವೆ.

೧೨. ದೇವರು ಸತ್ತ (ನಾಸ್ತಿಕತತ್ತ್ವ ಪರಿಚಯಾತ್ಮಕ ಪ್ರಬಂಧ ಸಂಕಲನ) ಲೇಖಕರು ಶ್ರೀಮಾನ್ ವಾಸುದೇವ ಭೂಪಾಲಂ ಎಂ. ಎ. ಪ್ರಕಾಶಕರು ಶಶಿ ಪ್ರಕಾಶನ, ರೇಸ್‌ಕೋರ್ಸ್‌ರೋಡ್, ಬೆಂಗಳೂರು—೧ ಕ್ರೌ. ಅ. ೧೯೦ ಪುಟಗಳು. ಬೆಲೆ ೨.೫೦.

ಶರತ್‌ಪ್ರಕಾಶನ ಮಂದಿರ, ಶಹಾಪುರ (ಬೆಳಗಾಂವ)

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ ನಾಲ್ಕನೆಯ ಆವೃತಿ

ರಾಜಯೋಗಿ

ಹೊಸ ಕಾಲಕ್ಕೆ ತಕ್ಕ

ಮುದ್ರಣ-ಬಂಧನಗಳ ಬಿಡಗಿನೊಂದಿಗೆ ಇದೀಗ ಬೆಳಕಿಗೆ ಬಂದಿದೆ.

ಐತಿಹಾಸಿಕ ಕಾದಂಬರಿಯೆಂದರೆ, ಆ ಕಾಲದ ಜನಜೀವನದ ತದ್ರೂಪ ಚಿತ್ರಣವಾಗಿರಬೇಕು. ವಾಚಕರಿಗೆ ತಾವು ಐತಿಹಾಸಿಕ ಕಾಲದಲ್ಲಿಯೇ ಇದ್ದೇವೆ, ಘಟನೆ ನಡೆವ ಪ್ರದೇಶದಲ್ಲಿಯೆ ಇದ್ದೇವೆ—ಎನಿಸಬೇಕು. ಪಾತ್ರಗಳು ಐತಿಹಾಸಿಕವಾದರೂ, ಅಂದಿನ ಕಾಲದ ಜೀವನವನ್ನು ಜೀವಂತ ವ್ಯಕ್ತಿಗಳಾಗಿ ವ್ಯವಹರಿಸಿ ತೋರಿಸಬೇಕು.

'ರಾಜಯೋಗಿ' ಕಾದಂಬರಿಯಲ್ಲಿ ಇವೆಲ್ಲ ಗುಣಗಳೂ ಇವೆ. ಎಂತಲೇ ಇದು ಹುಟ್ಟಿ ೨೫ ವರ್ಷಗಳಾದರೂ, ವಾಚಕರಿಗೆ ಹೊಸ ಹೊಸದೇ ಎನಿಸುತ್ತದೆ.

ಪ್ರತಿಯೊಂದು ವಾಚನಮಂದಿರದಲ್ಲಿಯೂ ಇರಲೇಬೇಕಾದ ಕಾದಂಬರಿಯಿದು.

ಕ್ರೌ. ಅ. ೧೪೦ ಪುಟಗಳು. ● **ಬೆಲೆ : ೨ ರೂ. ೨೫ ನಯೇಪೈಸೆ**

ನಮ್ಮ ಮುಂದಿರುವ ಬೇರೆ ಪ್ರಕಟನೆಗಳು

ಮಗಳ ಮದುವೆ
(ಸಾಮಾಜಿಕ ಕಾದಂಬರಿ)
ಕ್ರೌ. ಅ. ೩೫೦ ಪುಟ * ಬೆಲೆ : ೪ ರೂ.

ಕಾರಹುಣ್ಣಿವೆ
(ಕಥಾಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೨ ರೂ.

ಬೆಳವಡಿ ಮಲ್ಲಮ್ಮ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೫೦

ಬೆಂಡ ಹೃದಯ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೨೫

ನಲ್ ವಾಡುಗಳು
(ಪ್ರೀತಿ ಗೀತ ಸಂಕಲನ)
ಕ್ರೌ. ಅ. ೭೨ ಪುಟ ● **ಬೆಲೆ : ೧.೨೫**

'ಆನಂದಕಂದ'ರ ಯಾವ ಪುಸ್ತಕಗಳು ಬೇಕಾದರೂ ನಮಗೆ ಬರೆಯಿರಿ !

ಶರತ್‌ಪ್ರಕಾಶನ ಮಂದಿರ, ಕಚೇರಿಗಲ್ಲಿ, ಶಹಾಪುರ (ಬೆಳಗಾಂವ)

Printed by Basavaraj Horadi at Lalita Mudranalaya, Dharwar &
Published for the Propritors Jayanti Publications by K. S. Betgeri at Jayanti Office, Dharwar.



ಜಯಂತಿಗೆ ಚಂದಾದಾರರಾಗಿರಿ !

❋

ಜಯಂತಿಯಂತಹ ಸದಭಿರುಚಿ-ಸಂಸ್ಕೃತಿ ಪ್ರಚಾರಕ ಮಾಸಪತ್ರಿಕೆಯನ್ನು ಬಹುಕಾಲ ಬದುಕಿಸುವುದು ಕನ್ನಡ ಜನತೆಯ ಕರ್ತವ್ಯವಾಗಿದೆ.

* * * *

ಕನ್ನಡ ನಾಡಿನಲ್ಲಿಯ ಪ್ರತಿಯೊಂದು ವಿದ್ಯಾಶಾಲೆಯೂ ಪ್ರತಿಯೊಂದು ವಾಚನಾಲಯವೂ ಜಯಂತಿಯನ್ನು ಬರಮಾಡಿಕೊಳ್ಳಬೇಕು. ಹಿಂದಿನ ಕಾಲದ—ಕನ್ನಡಪ್ರದೇಶವನ್ನು ಒಳಗೊಂಡ—ಎಲ್ಲ ರಾಜ್ಯ ಸರಕಾರಗಳೂ ಜಯಂತಿಗೆ ಮನ್ನಣೆಯನ್ನು ಕೊಟ್ಟಿದ್ದುವು.

ಮೈಸೂರು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್
ಅವರ No. F. Dis. G. L. 4250-48/49. D. 3 rd Aug 1948 ರ
ಪ್ರಕಾರ,
ಜಯಂತಿಯನ್ನು ರಾಜ್ಯದಲ್ಲಿಯ ಎಲ್ಲ ಹೈಸ್ಕೂಲ್,
ಮಿಡಲ್ ಸ್ಕೂಲ್, ಟ್ರೇನಿಂಗ್ ಸ್ಕೂಲ್ ಗಳಿಗೆ ತರಿಸಿಕೊಳ್ಳಬಹುದೆಂಬ
ಮನ್ನಣೆಯ ಒಪ್ಪಿಗೆ ದೊರೆತಿದೆ.

ಎಲ್ಲ ಪಾಠಶಾಲೆಗಳ ಮುಖ್ಯಾಧ್ಯಾಪಕರೂ **ಈ** ಸಂಗತಿಯನ್ನು ಲಕ್ಷ್ಯದಲ್ಲಿ ಇರಿಸಿಕೊಂಡು, ತಮ್ಮ ತಮ್ಮ ಶಾಲೆಯ ವಾಚನಾಲಯಗಳಿಗೆ ಜಯಂತಿಯನ್ನು ತರಿಸಿಕೊಳ್ಳಬೇಕು.

ವಿದ್ಯಾರ್ಥಿಗಳಲ್ಲಿ ಸುಸಂಸ್ಕೃತಿಯನ್ನು ಬೆಳೆಸಿ, ಅವರನ್ನು ಒಳ್ಳೆಯ ನಾಗರಿಕರನ್ನಾಗಿ ಮಾಡಬಲ್ಲ ಮಾಸಪತ್ರಿಕೆ— **'ಜಯಂತಿ.'**

ಈ ಸಂಚಿಕೆಯಲ್ಲಿ

ಕಣ್ಮರೆಯಾದ ಕರ್ನಾಟಕಸಿಂಹ (ಸಂಪಾದಕೀಯ)
ಸಂಪಾದಕರು ೭೩

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೭೫

ಹೆಮ್ಮರಗಳು ತಲೆಯೆತ್ತಿವೆ (ಕವನ)
"ರಂಜನಭಟ್ಟ" ಮದ್ರಾಸು ೭೬

ಮಲಮಗನ ಕರೆ (ಒಂದು ನೀಳ್ಗತೆ)
ಶ್ರೀ. 'ಭಾರತೀಸುತ' ವೀರರಾಜಪೇಟೆ ೭೭

ಡಾಕ್ಟರ್ ನಾಯ್. ಸುಬ್ಬರಾವ್ (ಜೀವನಪರಿಚಯ)
ಶ್ರೀ. ಟಿ. ಆರ್. ನಾಡಗೀರ ಬಿಎಸ್‌ಸಿ. (ಟೆಕ್) ಮುಂಬಯಿ ೮೯

ಭಾರತ ನವೋದಯ (ಕವನ)
ಶ್ರೀ. ಎಚ್. ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದು ೯೩

ನೋಸ (ಚಿಕ್ಕಕತೆ)
ಶ್ರೀ. ಆನಂದ ಪರ್ಟ್ ಮುಂಬಯಿ ೯೫

ಭೂಸಾರ ರಕ್ಷಣೆಯ ಕಾರ್ಯಕ್ರಮ (ಪರಿಚಯಾತ್ಮಕ ಲೇಖನ)
ಶ್ರೀ. ಎಸ್. ವಿ. ರಾಮಮೂರ್ತಿ ೯೯

ಭೃಮಿತ ಭೃಮರ (ಕಥನಪ್ರಬಂಧ)
ಶ್ರೀ. 'ಮಕರಂದ' ಯಾದಗಿರಿ ೧೦೧

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ
ಕುಮಾರಿ ನಾಯಪಾ ಅಕ್ಕಿ ಬ್ಯೂ. ಎಂ. ಎಂ. ಧಾರವಾಡ ೧೦೩
ಶ್ರೀ. ಮಾ. ರಾಮಚಂದ್ರ ಬಿ. ಎ. ಧಾರವಾಡ ....

ಶ್ರೀರಾಮಾಶ್ವಮೇಧದ ರಸತರಂಗಗಳು (ಪುಸ್ತಕಾವಲೋಕನ)
ಶ್ರೀ. ಚಂದ್ರಶೇಖರ ಕಂಬಾರ ಬಿ. ಎ. (ಆನರ್ಸ್), ಧಾರವಾಡ ೧೦೮

ಸಾದರ ಸ್ವೀಕಾರ .... (ಕವ್ವರ್ ೩ನೆಯ ಪುಟದಲ್ಲಿ)

ಜಯಂತಿ

ಸಂಪುಟ ೨೩] [ಸಂಚಿಕೆ ೩

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಕಣ್ಮರೆಯಾದ ' ಕರ್ನಾಟಕಸಿಂಹ '

ದಿವಂಗತ ದೇಶಪಾಂಡೆ ಗಂಗಾಧರರಾಯರು.

ದೇಶಪಾಂಡೆ ಗಂಗಾಧರರಾಯರು, ನಮ್ಮ ದೇಶದ ರಾಜಕೀಯ ಪ್ರಪಂಚದಲ್ಲಿ ಸತ್ತ್ವಯುತವಾದ ಚಟುವಟಿಕೆಗಳನ್ನು ನಡೆಯಿಸಿ, ತಮ್ಮ ಪ್ರದೇಶದಲ್ಲಿಯೂ ಭಾರತದ ಮಿಕ್ಕ ಪ್ರಾಂತಗಳಲ್ಲಿಯೂ ' ಕರ್ನಾಟಕ ಸಿಂಹ ' ಎಂಬ ಸಾರ್ಥ ಬಿರುದನ್ನು ಪಡೆದಿದ್ದರು. ಸಭೆ-ಸಮ್ಮೇಲನಗಳ ವ್ಯಾಸಪೀಠದಮೇಲೆ ನಿಂತು ಈ ಸಿಂಹ ಗುಡುಗುಹಾಕತೊಡಗಿತೊ, ಸ್ವಜಾತಿಜೀವಗಳನ್ನೆಲ್ಲ ಎಚ್ಚರಿಸಿ ಉತ್ಸಾಹಗೊಳಿಸುತ್ತಿತ್ತು; ವಿರೋಧ ಜಾತಿಜೀವಗಳ ಗುಂಡಿಗೆಯನ್ನು ಭೇದಿಸಿ ಗತತ್ರಾಣರನ್ನಾಗಿಸುತ್ತಿತ್ತು. ಗಂಗಾಧರರಾಯರ ರಾಜಕೀಯ ಭಾಷಣಗಳನ್ನು ಕೇಳಿದವರಿಗೆ, ಅದೊಂದು ವೃಗರಾಜಗರ್ಜನೆಯೇ ಎಂದು ಭಾಸವಾಗದೆ ಇರುತ್ತಿರಲಿಲ್ಲ.

ರಾಯರ ಸಾಮಾಜಿಕ ಆಂತಸ್ತು, ಸಿರಿವಂತಿಕೆ, ಉಚ್ಚಶಿಕ್ಷಣ, ದೇಶಭಕ್ತಿ, ಕಾರ್ಯಶಕ್ತಿ ಇವೆಲ್ಲ ಗುಣಗಳು, ಅವರನ್ನು ಸಹಜವಾಗಿಯೆ ಜನನಾಯಕನನ್ನಾಗಿ ಮಾಡಿದುವು. ಇವರು ಕೇವಲ ಸುಖವಿಲಾಸಾಪೇಕ್ಷಿಗಳಾಗಿ ಬಾಳಬೇಕೆಂದು ಮನಸ್ಸು ಮಾಡಿದ್ದರೆ, ಒಬ್ಬ ರಾಜನಂತೆ ಲೌಕಿಕ ಸುಖ-ಸಮಾಧಾನಗಳಲ್ಲಿ ಈಜಾಡಬಹುದಾಗಿತ್ತು. ಆದರೆ ದೇಶದ ಪಾರತಂತ್ರ್ಯ, ಜನತೆಯ ಅಜ್ಞಾನ-ದಾರಿದ್ರ್ಯಗಳು ಇವರ ಹೃದಯವನ್ನು ಬಲವಾಗಿ ಮಿಡಿದುವು. ಇವುಗಳ ನಿವಾರಣೆಯ ಕಾರ್ಯದಲ್ಲಿ ತಾವು ದುಡಿಯಬೇಕೆಂದು, ತಮ್ಮ ತಾರುಣ್ಯಪ್ರಾರಂಭದಲ್ಲಿಯೆ ಗಂಗಾಧರರಾಯರು ಸಂಕಲ್ಪ ಮಾಡಿದರು. ತಮ್ಮ ಉಸಿರ ಕೊನೆಯವರೆಗೂ ಸಂಕಲ್ಪಸಿದ್ಧಿಗಾಗಿ ತನುಮನೋಧನಗಳಿಂದ ಕಾರ್ಯಮಾಡಿದರು.

ಸದ್ಯದ ತಲೆಮಾರಿನ ತರುಣರಿಗೆ ಗಂಗಾಧರರಾಯರ ಪ್ರತ್ಯಕ್ಷದರ್ಶನವು ಇಲ್ಲದಂತಾಗಿತ್ತು. ಆದುದರಿಂದ ಅವರ ಸಾಮರ್ಥ್ಯ-ಕರ್ತೃತ್ವಗಳ ಪರಿಚಯವು ಇವರಿಗೆ ಅಷ್ಟೊಂದು ಇಲ್ಲವೆಂದು ಹೇಳಬಹುದು. ಹಿಂದಿನ ತಲೆಮಾರಿನ ರಾಜಕೀಯಜೀವನದಲ್ಲಿ, ಗಂಗಾಧರರಾಯರೆಂದರೆ ಸ್ಫೂರ್ತಿಪ್ರಸಾರಕ ದೇಶಧುರೀಣರು. ನಾಡಿನಲ್ಲಿಯ ಪ್ರತಿಯೊಬ್ಬ ತರುಣ ರಾಜಕೀಯ ಕಾರ್ಯಕರ್ತನೂ, ಸ್ವಯಂಸ್ಫೂರ್ತಿಯಿಂದ ಅವರ ಧುರೀಣತೆಯನ್ನು ಒಪ್ಪಿಕೊಳ್ಳುತ್ತಿದ್ದನು.

ಧುರೀಣೋಚಿತ ಗಾಂಭೀರ್ಯವು ಗಂಗಾಧರರಾಯರಿಗೆ ಕುಲಪರಂಪರೆಯು ಕೊಟ್ಟ ಕಾಣಿಕೆ. ಅವರ ಭವ್ಯವಾದ ನಿಲುವು, ತೇಜಃಪುಂಜವಾದ ಕಣ್ಣುಗಳಿಂದ ಕೂಡಿದ ಸುಂದರವಾದ ಮುಖ, ಪುಷ್ಟವಾದ ದೇಹ, ಸಿರಿವಂತಿಕೆಯನ್ನು ಪ್ರಕಟಗೊಳಿಸುವಂತಹ ನಿತ್ಯ ಶುಭ್ರಪ್ರಸಾಧನ, ಇವೆಲ್ಲ ಜನರನ್ನು ಅವರತ್ತ ಆಕರ್ಷಿಸುತ್ತಿದ್ದುವು. ಅವರ ಹರಿತವಾದ ಬುದ್ಧಿ, ಅಧಿಕಾರಯುಕ್ತವಾದ ಮಾತು ಇವು ಜನರನ್ನು ಬಂಧಿಸಿಬಿಡುತ್ತಿದ್ದುವು.

ಎಂತಲೇ ಬೆಳಗಾಂವಿಯಲ್ಲಿ ಆ ಕಾಲದಲ್ಲಿ, ಗಂಗಾಧರರಾಯರೆಂದರೆ ಎಲ್ಲರೂ ಗೌರವದಿಂದ ಕಾಣುತ್ತಿದ್ದರು. ಅವರ ಆಜ್ಞೆಗಳನ್ನು ತಲೆಯಲ್ಲಾಂತು ನಡೆಯಿಸುತ್ತಿದ್ದರು. ರಾಯರ ಅನುಯಾಯಿವರ್ಗದಲ್ಲಿ ಬೆಳಗಾಂವಿಯಲ್ಲಿ ಎಲ್ಲಬಗೆಯ ಉದ್ಯೋಗ-ವ್ಯವಸಾಯಿಗಳೂ ಇರುತ್ತಿದ್ದರು. ಸರಕಾರದ ನೌಕರರೂ ಅವರಿಗೆ ನಿಷ್ಠರಾಗಿ ನೆರವಾಗುತ್ತಿದ್ದುದು ರಾಯರದೊಂದು ವೈಶಿಷ್ಟ್ಯವೆಂದೇ ಹೇಳಬೇಕು. ಎಂತಲೇ ಅವರು ಕೈಕೊಂಡ ಪ್ರತಿಯೊಂದು ರಾಜಕೀಯ

ಚಟುವಟಿಕೆಯೂ ವಿಜೃಂಭಣೆಯಿಂದ ನೆರವೇರುತ್ತಿತ್ತು. ೧೯೨೪ನೆಯ ಡಿಸೆಂಬರ್ ಕೊನೆಯ ವಾರದಲ್ಲಿ ಸೇರಿದ ಅಖಿಲಭಾರತ ಕಾಂಗ್ರೆಸ್ ಅಧಿವೇಶನವೆಂದರೆ, ರಾಯರು ತೋರಿಸಿದ ಒಂದು ಅಲೌಕಿಕ ಪವಾಡವೆಂದೇ ಹೇಳಬಹುದಾಗಿದೆ. ಬೆಳಗಾಂವಿ ಕಾಂಗ್ರೆಸ್ಸಿನ ವೈಭವವೆಂದರೆ ಅನನ್ಯವೆನಿಸುವಂತಹದು; ಅವಿಸ್ಮರಣೀಯವಾದುದು.

ಗಂಗಾಧರರಾಯರ ಕರ್ನಾಟಕನಿಷ್ಠೆಯ ಬಗೆಗೆ ಕೆಲವರು ಸಂಶಯ ತಾಳಿದುದುಂಟು. ದೇಶ-ಕಾಲಪರಿಸ್ಥಿತಿಯ ಮೂಲಕ ಅವರ ಪ್ರಾಥಮಿಕ ವಿದ್ಯಾಭ್ಯಾಸ ಮರಾಠಿಯಲ್ಲಿ ನಡೆಯಿತು. ಮಹಾರಾಷ್ಟ್ರದ ಸಾಮಾಜಿಕ-ರಾಜಕೀಯ ಧುರೀಣರ ಪ್ರಭಾವದಲ್ಲಿ ಬೆಳೆದುದರಿಂದ; ರಾಯರ ಸಾಂಸ್ಕೃತಿಕ ಜೀವನವು ಮರಾಠೀ ಭಾಷೆಯೊಂದಿಗೇ ಬೆಳೆಯಿತು. ಹೀಗೆ ವಸ್ತುಸ್ಥಿತಿಯಿದ್ದರೂ, ಅವರು ತಾವು ಮಹಾರಾಷ್ಟ್ರೀಯರೆಂದು ಎಂದೂ ಭಾವಿಸಿರಲಿಲ್ಲ; ಯಾರಾದರೂ ಹಾಗೆ ಎಂದರೆ ಅವನ್ನವರು ಎಂದೂ ಒಪ್ಪುತ್ತಿರಲಿಲ್ಲ. 'ಹದಿನಾರಾಣೆ ಕನ್ನಡಿಗ ನಾನು' ಎಂದು ಆಗಾಗ ಹೆಮ್ಮೆಯಿಂದ ಹೇಳುತ್ತಿದ್ದರು. 'ಇದೊಂದು ಅವರ ರಾಜಕೀಯ ತಂತ್ರ' ಎಂದು ಕೆಲವರು ಹೇಳುತ್ತಿದ್ದರು. ಆದರೆ ಅವರು ಹುಟ್ಟಿ ಬೆಳೆದ ಹಳ್ಳಿ 'ಹುದಲಿ'ಗೆ ಹೋಗಿ ನೋಡಿದವರಿಗೆ, ಗಂಗಾಧರರಾಯರ ಮಾತಿನ ಸತ್ಯತೆ ಸ್ಪಷ್ಟವಾಗಿ ಕಂಡು ಬರುತ್ತಿತ್ತು. ಹುದಲಿಯಲ್ಲಿಯ ರಾಯರ ಪರಿವಾರವೆಲ್ಲ ಕನ್ನಡದ್ದಾಗಿಯೆ ಇದ್ದಿತು. ರಾಯರ ಮನೆಯಲ್ಲಿ ನಡೆಯುತ್ತಿದ್ದ ಸಾಂಪ್ರದಾಯಿಕ ಹಬ್ಬ-ಹರಿದಿನಗಳೆಲ್ಲ ಕನ್ನಡನಾಡಿನವೇ ಆಗಿದ್ದುವು. ಆದರೆ ಅಭಿಮಾನಧನರಾದ ಗಂಗಾಧರರಾಯರು, ತಮ್ಮ ಮೇಲಿನ ಇನ್ನೊಬ್ಬರ ಒತ್ತಾಯವನ್ನು ಸಹಿಸುತ್ತಿರಲಿಲ್ಲ. ಅವರ ಈ ಅತ್ಯಭಿಮಾನವೇ ಅವರನ್ನು ಕನ್ನಡದ ದ್ರೋಹಿಗಳೆಂಬ ಸಂಶಯಕ್ಕೆ ಆಸ್ಪದವನ್ನು ಒದಗಿಸಿಕೊಟ್ಟಿತು.

ಗಂಗಾಧರರಾಯರ ಸಿರಿವಂತಿಕೆಯ ಭೋಗಸಾಧನಗಳ ಭಾಹುಳ್ಯವನ್ನು ನೋಡಿದವರಿಗೆ, ದೇಶಭಕ್ತಿಯ ತ್ಯಾಗಕ್ಕೆ ಅವರು ಹೇಗೆ ಸಿದ್ಧರಾಗಿರಬಹುದೆಂದು ಆಶ್ಚರ್ಯವೆನಿಸುವಂತಿದೆ. ಆದರೆ ಲೋಕಮಾನ್ಯ ತಿಲಕರ ಅನುಯಾಯಿಗಳಾಗಿರುವಾಗ ಇವರು ಅನೇಕ ರಾಜಕೀಯ ಗಂಡಾಂತರಗಳನ್ನು ಧೈರ್ಯದಿಂದ ಎದುರಿಸಿದರು; ಮಹಾತ್ಮರ ಅನುಯಾಯಿಗಳಾದಾಗ, ಪ್ರತ್ಯಕ್ಷವಾಗಿ ಸೆರೆಮನೆಯ ಕಷ್ಟ-ನಷ್ಟಗಳನ್ನು ಸ್ವೇಚ್ಛೆಯಿಂದ ಸಹಿಸಿದರು. ೧೯೦೬-೭ರಲ್ಲಿ ವಂಗಭಂಗದ ಕುರಿತು ನಡೆದ ಉಗ್ರಕ್ರಾಂತಿಯಲ್ಲಿಯೂ ಗಂಗಾಧರರಾಯರ ಅಂಗವಿದ್ದಿತೆಂದು ಹೇಳುವವರಿದ್ದಾರೆ.

ಲೋಕಮಾನ್ಯರೇ ಆಗಲಿ, ಮಹಾತ್ಮಾ ಗಾಂಧಿಯವರೇ ಆಗಲಿ— ಗಂಗಾಧರರಾಯರನ್ನು ತುಂಬ ಗೌರವ-ವಿಶ್ವಾಸಗಳಿಂದ ಕಾಣುತ್ತಿದ್ದರು. ಇವರ ನಿಷ್ಠೆ, ಕಾರ್ಯಶಕ್ತಿಗಳ ಬಗೆಗೆ ಅವರಲ್ಲಿ ಸಂಪೂರ್ಣ ಆದರವಿದ್ದಿತು. ಕರ್ನಾಟಕದಲ್ಲಿಯ ವಿಚಿತ್ರ ರಾಜಕೀಯದ ಮೂಲಕ, ರಾಯರಿಗೆ ಪ್ರತ್ಯಕ್ಷ ರಾಜಕಾರಣದಿಂದ ಹಿಂದೆ ಸರಿಯಬೇಕಾಯಿತಾದರೂ, ಅವರು ಎಂದೂ ಯಾವುದೇ ವ್ಯಕ್ತಿಯನ್ನೂ ಪಂಗಡವನ್ನೂ ದ್ವೇಷಿಸಲಿಲ್ಲ; ಮೇಲಾಟ ಹೂಡಿ ತಮ್ಮ ಗಾಂಭೀರ್ಯದಿಂದ ಚ್ಯುತರಾಗಲಿಲ್ಲ.

ಅವರು ಎಂತಹ ತತ್ತ್ವಪ್ರೇಮಿಗಳೆಂಬುದನ್ನು ಕೇಂದ್ರ ಸರಕಾರದವರು ನಿಯಮಿಸಿದ ಪ್ರಾಂತೀಕರಣಸಮಿತಿಯೆದುರು ಹೇಳಿದ ಅವರ ಸಾಕ್ಷ್ಯವು ಸ್ಪಷ್ಟಪಡಿಸುತ್ತಿದೆ. ಕರ್ಮವೃದ್ಧರಾದ ಗಂಗಾಧರರಾಯರೂ ಬೆಳವಿಯವರೂ ಕರ್ನಾಟಕಕ್ಕೆ ಅನುಕೂಲವಾಗಿ ಸಾಕ್ಷ್ಯನುಡಿದಿರದಿದ್ದರೆ, ಬೆಳಗಾಂವಿ ಇಂದು ಕರ್ನಾಟಕದ್ದಾಗಿ ಉಳಿಯುವ ಸಂಭವವಿರಲಿಲ್ಲ. ರಾಯರ ಹೃದಯ ಕನ್ನಡದ್ದಾಗಿ ಇರದೆ ಇದ್ದರೆ, ಈ ಯೋಗವನ್ನು ಬೇಕಾದಹಾಗೆ ತಮ್ಮ ಅಭಿಮಾನವನ್ನು ಸಾಧಿಸಲು ಉಪಯೋಗಿಸಿಕೊಳ್ಳಬಹುದಾಗಿತ್ತು. ಹಾಗೆ ಮಾಡದುದರಿಂದಲೇ ಅವರು, ಬೆಳಗಾಂವಿಯ ಮರಾಠಿಗರಿಂದ ಅನೇಕ ಬಗೆಯ ಅವಮಾನವನ್ನು ಸಹಿಸಬೇಕಾಯಿತೆಂಬುದು ಬಹುಜನರಿಗೆ ಗೊತ್ತಿದ್ದ ವಿಷಯ.

ಗಂಗಾಧರರಾಯರು ಒಂದು ಬಗೆಯಿಂದ ಕನ್ನಡಿಗರೆಲ್ಲರಿಗೂ ರಾಜಕೀಯ ಗುರುಗಳಾಗಿದ್ದರು. ನಮ್ಮ ನಾಡಿನಲ್ಲಿಯ ಸವ್ಯಪ ವೈಲಕ್ಷಣ್ಯ ಪೂರ್ಣ ರಾಜಕೀಯ, ಗಂಗಾಧರರಾಯರಲ್ಲಿ ಗುರುದ್ರೋಹವನ್ನು ಬಗೆದಿದ್ದೀತು; ಆದರೆ ರಾಯರು ತಮ್ಮ ಶಿಷ್ಯರನ್ನು ಎಂದೂ ದ್ರೋಹಭಾವದಿಂದ ಕಾಣಲಿಲ್ಲ. ಹಾಗೆ ದ್ರೋಹ ಬಗೆಯಲು ಮನಸ್ಸು ಮಾಡಿದ್ದರೆ, ಅವನ್ನು ಸಹಜವಾಗಿ ಸಾಧಿಸಬಲ್ಲಂತಹ ತಂತ್ರ ಸಾಮರ್ಥ್ಯವೂ ರಾಯರ ಬಳಿಯಲ್ಲಿತ್ತು. ಆದರೆ ಅವನ್ನು ಬಳಸುವಂತಹ ಕೀಳುತನಕ್ಕೆ ಎಂದೂ ಇಳಿಯದುದು ರಾಯರ ತತ್ತ್ವನಿಷ್ಠೆಗೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಗಂಗಾಧರರಾಯರಂತಹ ಆದರ್ಶ ಧುರೀಣರನ್ನು ನಾವಿಂದು ಕಳೆದುಕೊಂಡೆವು. ಅನಾಯಾಸಮರಣವನ್ನು ಪಡೆದುದು ಆ ಜೀವದ ಶ್ರೇಷ್ಠತೆಯನ್ನು ಸಾರಿಹೇಳುತ್ತದೆ. ಸುಖ-ಸಮಾಧಾನಗಳಲ್ಲಿಯೆ ಬದುಕನ್ನು ಕಳೆದು, ಸುಖ-ಸಮಾಧಾನದಲ್ಲಿಯೆ ಜೀವನದ ಅಂತ್ಯವನ್ನು ಕಂಡ ರಾಯರ ಪಾರಲೌಕಿಕ ಶಾಂತಿಗಾಗಿ, ಮಿಕ್ಕವರ ಕೋರಿಕೆ-ಬೇಡಿಕೆಗಳ ಅಗತ್ಯವೇನೂ ಇಲ್ಲವಾದರೂ, ಕೇವಲ ಸಂಪ್ರದಾಯವೆಂದು ನಾವು ಅವರ ಆತ್ಮಕ್ಕೆ ಶಾಂತಿಯನ್ನು ಬಯಸುತ್ತೇವೆ.

ಜಯಂತಿಗೆ ಸಹಾಯಧನ

ಈ ತಿಂಗಳಲ್ಲಿ, ಹೊಸದಿಲ್ಲಿಯಲ್ಲಿರುವ ಶ್ರೀ. ಕೆ. ಎಲ್. ಗೋಪಾಲಕೃಷ್ಣರಾವ್ ಎಂಬ ಅಭಿಮಾನಿಗಳೊಬ್ಬರು, ಜಯಂತಿಯ ಒಂದು ವರ್ಷದ ಚಂದಾ ೫೦ ರೂ.ಗಳನ್ನಲ್ಲದೆ, ೨೦ ರೂಪಾಯಿ ಸಹಾಯಧನವನ್ನು ಕಳುಹಿದ್ದಾರೆ. ಜಯಂತಿಯನ್ನು ಪರಿಪುಷ್ಟಿಯಿಂದ ಬದುಕಿಸಬೇಕೆಂದು ಕನ್ನಡ ಭಗ್ಯವಿಧಾತ, ಯಾವ ಯಾವ ಹೃದಯವನ್ನೋ ಪ್ರೇರಿಸುತ್ತಲಿದ್ದಾನೆ. ಜಯಂತಿಯ ಕ್ಷೇಮವನ್ನು ಬಯಸಿ ಸಹಾಯಧನವನ್ನು ಕಳುಹಿದ ಶ್ರೀ. ಗೋಪಾಲ ಕೃಷ್ಣರಾವ್ ಅವರಿಗೆ ನಮ್ಮ ಕೃತಜ್ಞತೆಯ ನಂದನೆಗಳು.

ನಾಡನಡೆ

ಪಠ್ಯಪುಸ್ತಕ ಪ್ರಪಂಚ

ನಮ್ಮ ಸರಕಾರ ಯಾವುದೇ ಹೊಸಪದ್ಧತಿಯನ್ನು ಪ್ರಾರಂಭಿಸಬೇಕೆಂದಿರುವಾಗ, ಅದರ ಉದ್ದೇಶವೇನೋ ಉದಾತ್ತವಾಗಿಯೆ ಇರುತ್ತದೆ; ಆದರೆ ಆ ಪದ್ಧತಿ ರೂಪುಗೊಂಡು ಪ್ರಚಾರದಲ್ಲಿ ಬರುವುದರೊಳಗಾಗಿಯೆ ಅದು ಹದಗೆಟ್ಟುಹೋಗಿರುತ್ತದೆ. ಇದಕ್ಕಾಗಿ ಸರಕಾರದ ಉದ್ದೇಶದ ವ್ಯಾಮಾಣಿಕತೆಯನ್ನು ಕೆಣಕುವ ಕಾರಣವಿಲ್ಲ. ಸರಕಾರ ನಂಬುಗೆಯಿಂದ, ಆ ಪದ್ಧತಿಯನ್ನು ರೂಪುಗೊಳಿಸಲೆಂದು ಅಧಿಕಾರವನ್ನು ಕೊಟ್ಟ ವ್ಯಕ್ತಿಗಳು, ತಮ್ಮ ಅಜ್ಞಾನದ ಕಾರಣದಿಂದಲೋ, ಸ್ವಾರ್ಥ ಸಾಧನೆಯ ಕಾರಣದಿಂದಲೋ, ಆ ಪದ್ಧತಿಯನ್ನೆಲ್ಲ ಹದಗೆಡಿಸಿ, ಅದರ ಪರಿಣಾಮ ಜನತೆಗೆ ಕೆಡಕಾಗುವಂತೆ ಮಾಡಿರುತ್ತಾರೆ. ನಮ್ಮಲ್ಲಿ ಹೊಸತಾಗಿ ಪ್ರಚಾರದಲ್ಲಿ ಬಂದಿರುವ ಪಠ್ಯಪುಸ್ತಕಗಳ ಹಣೆಯ ಬರೆಹವೂ ಹೀಗೆಯೆ ಆಗಿದೆ. ಪಠ್ಯ ಪುಸ್ತಕದಲ್ಲಿ ಕಾಲೋಚಿತ ಬದಲಾವಣೆಯಾಗಬೇಕೆಂಬ ಸರಕಾರದ ಉದ್ದೇಶದಲ್ಲಿ ತಪ್ಪಾವುದೂ ಇಲ್ಲ. ಅದಕ್ಕಾಗಿ ಅಭ್ಯಾಸಪತ್ರಿಕೆಯನ್ನು ತರಗತಿಗನುಸಾರವಾಗಿ ರಚಿಸುವ ಏರ್ಪಾಡನ್ನೂ ಸರಕಾರ ಮಾಡಿತು. ಸಿದ್ಧವಾದ ಅಭ್ಯಾಸ ಪತ್ರಿಕೆ ಅಪರಿಪೂರ್ಣವಾಗಿದೆಯೆಂದು ಅನೇಕ ಜನ ಶಿಕ್ಷಣತಜ್ಞರ ಅಭಿಪ್ರಾಯವಾಗಿದೆ. ಹೀಗಾಗುವುದು ಅಸ್ವಾಭಾವಿಕವೇನೂ ಅಲ್ಲ. ಏಕೆಂದರೆ ಇಂತಹ ವಿಷಯಗಳು ಯಾವಾಗಲೂ ವಿವಾದಾಸ್ಪದವಾಗಿಯೆ ಉಳಿಯುವುವು. ಒಬ್ಬ ತಜ್ಞನ ಘೋರಣೆ, ಇನ್ನೊಬ್ಬ ತಜ್ಞನ ಘೋರಣೆಗೆ ಎಂದೂ ಸರಿಯೆನಿಸಲಾರದು.

ಸರಿ. ಅಭ್ಯಾಸ ಪತ್ರಿಕೆಯಂತೆ ಪಠ್ಯಪುಸ್ತಕಗಳು ಸಿದ್ಧವಾಗಿವೆ. ಪ್ರಾಥಮಿಕ ತರಗತಿಗಳ ಪಠ್ಯಪುಸ್ತಕಗಳನ್ನು ಸಿದ್ಧಗೊಳಿಸುವ ಹೊಣೆಯನ್ನು ಸರಕಾರವ ವಿದ್ಯಾಶಾಖೆ ಹೊತ್ತಿದೆ; ಮಾಧ್ಯಮಿಕ ಶಾಲೆಯ ಪಠ್ಯಪುಸ್ತಕಗಳನ್ನು ತಜ್ಞ ಜನತೆಯ ಕಡೆಗೆ ಒಪ್ಪಿಸಿದೆ. ಇದರಲ್ಲಿಯೂ ಸರಕಾರ ತಪ್ಪುಮಾಡಿದೆಯೆಂದು ಹೇಳಲು ಬರುವುದಿಲ್ಲ. ಆದರೆ ಸಿದ್ಧವಾಗಿ ಬೆಳಕಿಗೆ ಬಂದ ಪಠ್ಯಪುಸ್ತಕಗಳನ್ನು ನೋಡಿದಾಗ, ಸರಕಾರ ಈ ವಿಷಯದಲ್ಲಿ ತುಂಬ ಅಜಾಗರೂಕತೆ ತೋರಿಸಿದೆಯೆಂದು ಹೇಳಬೇಕಾಗುವುದು. ಸರಕಾರದ ವಿದ್ಯಾಶಾಖೆಯವರು ಸಿದ್ಧಗೊಳಿಸಿ ಪ್ರಕಟಿಸಿದ ಪಠ್ಯಪುಸ್ತಕಗಳೂ ದೋಷಪೂರ್ಣವಾಗಿವೆ; ತಜ್ಞಜನರು ಸಿದ್ಧಗೊಳಿಸಿ ಪ್ರಕಟಿಸಿದ ಹಲವಾರು ಪುಸ್ತಕಗಳೂ ದೋಷಪೂರ್ಣವಾಗಿವೆ. ಕೆಲವು ಪುಸ್ತಕಗಳಂತೂ ದೋಷಬಾಹುಲ್ಯದ ಮೂಲಕ ನಗೆಗೀಡಾಗಿ ನಿಂತಿವೆ. ಇಂತಹ ಪುಸ್ತಕಗಳನ್ನೂ ನಮ್ಮ ಸರಕಾರದವರು ಪಠ್ಯ ಪುಸ್ತಕಗಳನ್ನಾಗಿ ನಿಯಮಿಸಿದ್ದಾರಲ್ಲಾ—ಎಂದು ಎಲ್ಲರೂ ಅಚ್ಚರಿಪಡುವಂತಿವೆ.

ಇದಕ್ಕೆ ಹೊಣೆಯಾರು ?

ತಪ್ಪುತಪ್ಪಾಗಿರುವ ಪಠ್ಯಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವುದು ಒಳ್ಳೆಯ ಸಂಪ್ರದಾಯವೂ ಎನಿಸದು; ಹೊಸಪದ್ಧತಿಯೂ ಎನಿಸದು. ಸರಕಾರದ ವಿದ್ಯಾಶಾಖೆ ತಾನೆ ಪ್ರಕಟಿಸಿದ ಪುಸ್ತಕಗಳನ್ನು ಸಿದ್ಧಗೊಳಿಸಲಿಕ್ಕೆ ಯೋಗ್ಯಜನರ ಕಡೆಗೆ ಒಪ್ಪಿಸಿಲ್ಲವೆಂಬುದು ಒಡೆದು ತೋರುವಂತಿದೆ. ಪಾಠಗಳ ವಿಷಯ, ವಾಕ್ಯರಚನೆ, ಶಬ್ದಪ್ರಯೋಗ—ಇವೆಲ್ಲವುಗಳಲ್ಲಿಯೂ ತಪ್ಪುಗಳು ತುಂಬಿರುವುವು. ಕೆಲವು ಪ್ರಕಾಶಕರು ಪ್ರಕಟಿಸಿರುವ ಪುಸ್ತಕಗಳನ್ನು ನೋಡಿದರಂತೂ, ಸರಕಾರ ನಿಯಮಿಸಿದ ಪಠ್ಯಪುಸ್ತಕ ಸಮಿತಿಯವರು ಕಣ್ಣುಮುಚ್ಚಿಯೆ ಅವುಗಳಿಗೆ ಮನ್ನಣೆಯಿತ್ತಿರುವರೆಂಬುದು ಒಡೆದು ಕಾಣುವಂತಿದೆ.

ಈ ಬಗೆಯ ಅಸಡ್ಡೆ (ಪಕ್ಷಪಾತವೂ ಇರಬಹುದು) ನಾಡಿನ ವಿದ್ಯಾರ್ಥಿಗಳ ಪ್ರಗತಿಗೆ ಎಷ್ಟೊಂದು ಘಾತಕವಾಗಿದೆಯೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ಔಷಧಿಯೆಂದು ಕೊಡಬೇಕಾಗಿರುವಲ್ಲಿ ವೈದ್ಯನ ಅಸಡ್ಡೆಯ ಮೂಲಕ ವಿಷವು ರೋಗಿಯ ಬಾಯಲ್ಲಿ ಬಿದ್ದರೆ, ಅದರ ಪರಿಣಾಮವೇನಾದೀತು? ನನಗೆ—ಇಲ್ಲವೆ—ನನ್ನವರಿಗೆ ನಾಲ್ಕು ಕಾಸು ದೊರೆಯುವುವೆಂಬ ತಾತ್ಪೂರ್ತಿಕ ಲಾಭದಕಡೆಗೆ ದೃಷ್ಟಿಯಿಟ್ಟು, ಪ್ರತಿಯೊಂದು ವ್ಯಕ್ತಿ ಕೆಲಸ ಮಾಡತೊಡಗಿದರೆ, ಅದರಿಂದ ಸರಕಾರಕ್ಕೆ ಎಂತಹ ಕೆಟ್ಟ ಹೆಸರು! ದೇಶದ ಜನತೆಗೆ ಎಷ್ಟೊಂದು ಹಾನಿ?

ಇದೀಗ ಪ್ರಜಾಪ್ರಭುತ್ವ. ಪ್ರಜೆಗಳ ಹಿತ ರಾಜನೊಬ್ಬನಿಂದ ಆಗಲಾರದೆಂದೇ ಪ್ರಜಾಪ್ರಭುತ್ವತತ್ತ್ವ ರೂಢಿಯಲ್ಲಿ ಬಂದಿದೆ. ಪ್ರಜಾಪ್ರಭುತ್ವವನ್ನು ಒಪ್ಪಿವ ಸರಕಾರಗಳು, ಪ್ರತಿಯೊಂದು ತಪ್ಪು ಚಟುವಟಿಕೆ ಬಹುಜನರ ಕಲ್ಯಾಣಕ್ಕಾಗಿ ಇರಬೇಕೆಂಬುದರ ಕಡೆಗೆ ಜಾಗೃತಿ ವಹಿಸಬೇಕಲ್ಲದೆ, ಕೆಲವೊಂದು ವ್ಯಕ್ತಿಗಳ ಬೊಜ್ಜನ್ನು ಬೆಳೆಸುವುದರ ಕಡೆಗೆ ಅವರ ದುರುಪಯೋಗವಾಗಬಾರದು. ಆದರೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಹೀಗೆ ದುರುಪಯೋಗವಾಗುತ್ತಿರುವುದು ನಮ್ಮ ನಾಡಿನ ದುರ್ದೈವವಾಗಿದೆ. ಅಧಿಕಾರಸ್ಥಾನಗಳಿಗಾಗಿ ಹೊಡೆದಾಡುವ ಹಿರಿಯರಿಂದ ಜನತೆಯ ಕಲ್ಯಾಣದ ಕಾರ್ಯಗಳು ಹೇಗೆ ನಡೆದಾವು?

ಏನೇ ಆಗಲಿ, ದೋಷಪೂರ್ಣವಾದ ಪಠ್ಯಪುಸ್ತಕಗಳ ಕಡೆಗೆ ಇನ್ನು ಮೇಲಾದರೂ ನಮ್ಮ ಸರಕಾರ ಸಾಕಷ್ಟು ಲಕ್ಷ್ಯಕೊಡಬೇಕು. ಈಗ ಆಗಿರುವ ತಪ್ಪುಗಳಿಗೆ ಹೊಣೆಗಾರರಾರೆಂಬುದನ್ನು ಕಂಡುಹಿಡಿದು ಅವರಿಗೆ ಯೋಗ್ಯ ಪ್ರಾಯಶ್ಚಿತ್ತ ನೀಡಬೇಕು.

ಹೆಮ್ಮರಗಳು ತಲೆಯೆತ್ತಿವೆ

"ರಂಜನ"ಭಟ್ಟ, ಮದ್ರಾಸು.

ಹೆಮ್ಮರಗಳು ತಲೆಯೆತ್ತಿವೆ
ಬಾನಿನೆಡೆಗೆ ನೋಟವು—
"ಸಪ್ತ ಸಾಗರದಾಚೆಯೆಲ್ಲೋ
ಹೇಳದಂತಹ ವೈಭವ
ಮುತ್ತುರತ್ನಗಳೆಲ್ಲ ಚೆಲ್ಲಿನೆ
ಯಾರು ಗೈದರೊ ಮಾಟವ"
—ಬೀಸಿ ಮೂರಿ ಬಂದ ಗಾಳಿಗೆ
ಮೌನವೇ ತಲೆಮಾಗಿತು.
ಮಲಯ ಮಂದಾನಿಲನು ಬಂದನು
ತಂದನೇನನೊ ಒಸಗೆಯ
ಇನಿಯ–ಇನಿಯಳ ಕಣ್ಣುನೋಟವ
ಏನೋ ಎಂತಹ ಬೆಸುಗೆಯ
—ತೂರಿಬಂದಿಹ ಗಾಳಿಗಾಯ್ತು
ತೂಗುತಲೆಯೇ ಉತ್ತರ.
"ಬೆಂಕೆಯೆದ್ದಿದೆ ಏನನರ್ಥವು
ಬಾಳುಬೆಂದಿದೆ ವ್ಯರ್ಥವು–"
—ಕೂಗಿ ಕರೆದಿಹ ಬೀಸುಗಾಳಿಗೆ
ತಲೆಯ ಬಾಗಿತು ಮೌನವು.
ಹೆಮ್ಮರಗಳು ತಲೆಯೆತ್ತಿವೆ
ಬಾನಿನೆಡೆಗೆ ನೋಟವು.
ನುತ್ತುಮುತ್ತ ಅಸ್ತವ್ಯಸ್ತ
ಬಾಳು–ಕಾಳು ಕೆದರಿವೆ.
ಹಾಳುಗೋಳು ಕೂಳುಕಾಳು
ಎಲ್ಲವಿಲ್ಲಿ ಕಲೆತಿವೆ.
ಹೆಮ್ಮರಗಳು ತಲೆಯೆತ್ತಿವೆ
ಬಾನಿನೆಡೆಗೆ ನೋಟವು
ಹಾಗಾಗಲಿ—ಹೀಗಾಗಲಿ
ಎಲ್ಲವಿಲ್ಲಿ ಅಚಲವು—
ನೆಳೆವ ಮಿಂಜೆ ಹೆಪ್ಪಾಗಲಿ
ಕಡಲ ನೀರೆ ಉಪ್ಪಾಗಲಿ
ಚೈತನ್ಯನೆ ಬೆಪ್ಪಾಗಲಿ—
ಹೆಮ್ಮರಗಳು ತಲೆಯೆತ್ತಿವೆ
ಬಾನಿನೆಡೆಗೆ ನೋಟವು!

ಕನ್ನಡ ಭಾಷೆಯ ವ್ಯಾಕರಣಾಭ್ಯಾಸಿಗಳಿಗೆ ತುಂಬ ಸಹಾಯಕಾರಿ!

ಕನ್ನಡ ಕಲ್ಪವಿಡಿ.

ಬರೆದವರು: **ದಿವಂಗತ ಫೋಂಡೋ ನರಸಿಂಹ ಮುಳಬಾಗಲು,**
ಸಂಪಾದಕರು: **ವಿದ್ವಾನ್ ಸೇಡಿಯಾಪು ಕೃಷ್ಣಭಟ್ಟರು,** ಮಂಗಳೂರು.

ಹಳಗನ್ನಡ ಹೊಸಗನ್ನಡ ಎರಡೂ ರೀತಿಯ ವ್ಯಾಕರಣವಿಬೋಧಕ ಗ್ರಂಥವಿದು, ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

ಕನ್ನಡ ವೈಯಾಕರಣಿಪ್ರಮುಖರಾದ **ನಾಗವರ್ಮ, ಕೇಶಿರಾಜ, ಭಟ್ಟಾಕಳಂಕ** ಇವರ ಸಮುಚ್ಚಯವನ್ನು ಏರುವಂತಹ ಸಮರ್ಥರು ದಿ. **ಮುಳಬಾಗಲರು.**

ವ್ಯಾಕರಣ ಕಲಿಸುವ ಅಧ್ಯಾಪಕ ಪ್ರಾಧ್ಯಾಪಕರಿಗೂ, ಕಲಿಯುವ ವಿದ್ಯಾರ್ಥಿಗಳಿಗೂ ತುಂಬ ಪ್ರಯೋಜನಕಾರಿಯಾದ ಸುಲಭ ವ್ಯಾಕರಣವಿದು.

ಒನೆಯ ಭಾಗ, ಕ್ರೌ. ಆ. ೨೩೦ ಪುಟಗಳು, ಬೆಲೆ ೨-೦೦
೨ನೆಯ ಭಾಗ, ಕ್ರೌ. ಆ. ೧೩೦ ಪುಟಗಳು, ಬೆಲೆ ೧-೫೦

ಪ್ರಕಾಶಕರು: ಶಂಭುಲಿಂಗಪ್ಪ ಕುಲಕರ್ಣಿ, ಅಡಿಕೆ ಓಣಿ, ಧಾರವಾಡ.

ಮುಲಮುಗನ ಕರೆ

(ಒಂದು ನೀಳ್ಗತೆ)

ಶ್ರೀ. ' ಭಾರತೀಸುತ ' ವೀರರಾಜಪೇಟೆ

ದೇವತೆಯಂತಿದ್ದ ಜೋಜುವನ್ನು ಪರಿಸ್ಥಿತಿ ದಾನವಿಯನ್ನಾಗಿಸಿತು. ಆದರೆ ಅವಳು ಮಾಡಿದ ಅಪರಾಧ ಅವಳನ್ನು ಸುಖದಿಂದ ಬದುಕಲು ಕೊಟ್ಟಿತೆ? ಭೂತವಾಗಿ ಕಾಡಿ ಅವಳ ಜೀವನವನ್ನು ಪುಡಿಗೊಡಿಸಿತು.

ಹೊರಗಿನ ಕಾಫೀತೋಟವನ್ನು ಮಂಜು ಮುಸುಕಿತ್ತು. ಜೋಜುವಿನ ಮನಸ್ಸಿನೊಳಗೂ ಮಂಜುಕವಿದು ಜೀವವನ್ನು ಕೋಡಿಸಿತ್ತು. ಹೊರಗೆ ಕುಳಿರ್ಗಾಲದ ಶೀತಲ ಗಾಳಿ, ಹಂಗಾರೆ ಮರಗಳ ನಿತ್ರಿಗಳನ್ನು ಅಪ್ಪಳಿಸುತ್ತಾ, ಮುಂಬೆ ಸಾಗುತ್ತಿತ್ತು; ಮನದೊಳಗೆ ಎದ್ದ ಬಿರುಗಾಳಿ ಆಕೆಯ ಮೈಯ ನರನಾಡಿಗಳನ್ನು ಹಿಡಿದು ಅಲುಗಿಸುತಿತ್ತು!

ಹೊರಗೆ ಮಂಜು; ಒಳಗೆ ವಿಹ್ವಲತೆಯ ಹಿಮ! ಹೊರಗೆ ಕುಳಿರ್ಗಾಳಿಯ ಅಬ್ಬರ; ಒಳಗೆ ಅಂಜಿಕೆಯ ಬಿರುಗಾಳಿಯ ಮೊರೆತ!

ಮೇಜಿನ ಮೇಲೆ ಉರಿಯುತ್ತಿದ್ದ ದೀಪ ಆರಿತ್ತು; ಅಗ್ನಿಷ್ಟಿಕೆಯ ಕೆಂಡಗಳನ್ನು ಬೂದಿ ಆವರಿಸಿತ್ತು. ಕೋಣೆಯೊಳಗೆ ಕತ್ತಲು; ಜೋಜುವಿನ ಮನದೊಳಗೂ ಕತ್ತಲು!

"ಅಹಾ! ಹಾ!" ನಗುವಿನ ಅಲೆಯೊಂದು ಎದ್ದು ಬಂದು ಜೋಜುವಿನ ಕಿವಿಗಳನ್ನು ಇರಿಯಿತು.

"ಯಾರದು?" ಜೋಜು ಅದುರುವ ದನಿಯಲ್ಲಿ ಕೇಳಿದಳು.

"ಚಿಕ್ಕವ್ವ, ನೀನು ಆಸು ಬೇಗ ನನ್ನ ಮರೆತುಬಿಟ್ಟಿಯಾ?" ನಗು ಬೆರೆತ ಸ್ವರ ಕೋಣೆಯ ಕತ್ತಲೆಯನ್ನು ಸೀಳಿತು: "ನೀನು ನನ್ನ ಮರೆಯಲು ಪ್ರಯತ್ನಿಸುತ್ತೀಯೆ; ಆದರೆ ನೋಡು, ನಾನು ನಿನ್ನ ಬಿಡಲೊಲ್ಲೆ. ತಿಂಗಳಿಗೆರಡು ಮೂರು ಸಾರಿಯಾದರೂ ಬಂದು ನಿನಗೆ ನೆನಪು ಮಾಡಿಕೊಡುತ್ತೇನೆ!"

ಹೌದು. ಆತನದೇ ಆ ಧ್ವನಿ! ಆ ಕೊರಳುಲಿತವನ್ನು ಅವಳು ಗುರುತಿಸಬಲ್ಲಳು. ಅವಳು ಕೈಯಾರೆ, ಆ ದನಿಯನ್ನೆತ್ತುವ ಮೈಯ್ಯನ್ನು ಇಲ್ಲವಾಗಿಸಿದ್ದಳು; ಆದರೆ ಆಕೆಯ ಕೈಗೆ ಆ ಕೊರಳುಲಿತವನ್ನು ತೊಡೆಮಹಾಕಲು ಆಗಲಿಲ್ಲ.

ಎರಡು ರಗ್ಗುಗಳನ್ನು ಹೊದೆದಿದ್ದರೂ ಜೋಜುವಿನ ಮೈ ಕೋಡಿನಡುಗಿತು. ಅವಳು "ಬೇಡ. ನೀನು ಹೋಗು. ನಿನ್ನ ನೆನಹು ನನಗೆ ಬೇಡ" ಎಂದು ಹೇಳಲು ಬಾಯ್ದೆರೆದಳು. ಆದರೆ ಆಕೆಯ ಕೊರಳಿಂದ ದನಿ ಹೊರಡಲಿಲ್ಲ.

"ಚಿಕ್ಕವ್ವ, ನಿನಗೆ ನಾನೆಂದರೆ ತುಂಬಾ ಅಕ್ಕರೆ. ಆ ಅಕ್ಕರೆಯ ಸಕ್ಕರೆಯನ್ನು ಮೆಲ್ಲಲೆಂದು ಈಗ ನಿನ್ನೆಡೆಗೆ ಬಂದೆ!"

ಆ ನುಡಿಯಲ್ಲಿ ವ್ಯಂಗ್ಯ ತುಂಬಿತ್ತು.

ಜೋಜು ತಲೆದಿಂಬಿನ ಅಡಿಗೆ ಕೈಹಾಕಿ ಟಾರ್ಚನ್ನು ಎತ್ತಿದಳು. ಅವಳು ಅದರ ಗುಂಡಿಯನ್ನೊತ್ತಿ ಕೋಣೆಯೊಳಗೆ ಬೆಳಕನ್ನು ಹರಿಯಿಸಿದಳು. ಕೋಣೆಯೊಳಗೆ ಯಾರೂ ಇರಲಿಲ್ಲ. ಅವಳು ಕೇಳುತ್ತಲಿದ್ದ ಉಲಿತವೂ ನಿಂತಿತು. ತಾನು ಕೇಳಿದ ಉಲಿತ ಮನಸ್ಸಿನ ಸುಂಕುತನದ ಪ್ರಭಾವವೆಂದು ಆಲೋಚಿಸಿ, ಅವಳು ಎದೆಯೊಳಗೆ ತುಂಬಿದ ಅಂಜಿಕೆಯನ್ನು ಹೊರಗಟ್ಟಲು ಪೇರುಸಿರೊಂದನ್ನು ಹೊರಚೆಲ್ಲಿದಳು. ಅವಳು ದಿಂಬಿನಡಿಯಿಂದ ಕಡ್ಡಿಪೆಟ್ಟಿಗೆಯನ್ನು ತೆಗೆದು, ಕಡ್ಡಿಯನ್ನೊರೆದು ಮೇಜಿನ ಮೇಲಿದ್ದ ಕಿರುದೀಪವನ್ನು ಹಚ್ಚಿದಳು. ದೀಪದ ಮಂದಪ್ರಕಾಶ ಕೋಣೆಯೊಳಗೆ ತುಂಬಿದ ಕತ್ತಲೆಯನ್ನು ಕೆತ್ತೊಗೆಯಿತು.

ಜೋಜು ಅದೇ ದನಿಯನ್ನು ಹಿಂದೆ ನಾಲ್ಕು ಬಾರಿ ಕೇಳಿದ್ದಳು. ಇದು ಐದನೆಯ ಸಲ. ಹಿಂದೆ ನಾಲ್ಕು ಸಲವೂ ಆಕೆಯ ಜತೆಯಲ್ಲಿ ಗಂಡ ಬಿದ್ದಪ್ಪನಿದ್ದ; ಆ ದನಿಯನ್ನು ಕೇಳಿದಾಗ ಅವಳು ಹೆದರಿ ಕೆಳದುಟಿಯನ್ನು ಕಚ್ಚಿ, ತೋಳುಗಳಿಂದ ಪತಿಯನ್ನು ಅಪ್ಪಿಕೊಳ್ಳುತ್ತಿದ್ದಳು. ಆ ದನಿ ನಿಲ್ಲುವತನಕ ಆಕೆ ತನ್ನ ತೋಳುಗಳ ಬಿಗಿತವನ್ನು ಸಡಲಿಸುತ್ತಿರಲಿಲ್ಲ.

"ಜೋಜು, ಇದೇನು ಬಿಗಿತ ನಿನ್ನದು! ನನ್ನ ಉಸಿರುಕಟ್ಟಿ ಹೋಗಿದೆ" ಎಂದು ಹೇಳುತ್ತಾ ಬಿದ್ದ ತನ್ನ ಕೊರಳನ್ನು ಸುತ್ತಿದ ತೋಳನ್ನು ಸಡಲಿಸಿ ಮೇಲೆತ್ತುತ್ತಲಿದ್ದ.

ಆತನ ದನಿಯನ್ನು ಕೇಳಿದಾಗ ಜೋಜು, ತನ್ನ ಮುಚ್ಚಿದ ಕಣ್ಣುಗಳನ್ನು ತೆರೆಯುತಿದ್ದಳು. ಬಿದ್ದು ಆಕೆಯ ಮೆದುಗಲ್ಲದ ಮೇಲೆ ಬೆರಳಾಡಿಸುತ್ತಾ, "ಜೋಜ, ನೀನು ನಿದ್ದೆಯಲ್ಲಿ ಯಾವ ಕನಸು ಕಂಡೆ? ನೀನು ಹೆದರಿ ಹಿಸ್ಪೆಯಾಗಿ ಹೋಗಿರುವೆ. ಕೆನ್ನೆಯ ಮೇಲೆ ಮೂಡಿದ ಬೆವರಹನಿಗಳು ನನ್ನ ಬೆರಳಿಗೆ ಅಂಟುತ್ತಿವೆ!" ಎಂದು ಹೇಳುತಿದ್ದ.

ತಾನು ಆ ಉಲಿತವನ್ನು ಕೇಳಿದುದು ಕನಸಿನಲ್ಲಿ—ಎಂದು ಸಮಾಧಾನ ತಾಳಿ ಜೋಜು ಮರಳಿ ನಿದ್ದೆಹೋಗಲು ಪ್ರಯತ್ನಿಸುತಿದ್ದಳು.

ಇಂದು ಕನಿದುಬಂದ ಅಂಜಿಕೆಯಿಂದ ಪಾರಾಗಲು ಪಕ್ಕದಲ್ಲಿ ಬಿದ್ದುವಿರಲಿಲ್ಲ. ಅವನು ಅಂದು ಮುಂಜಾನೆ ತೋಟಕ್ಕೆ ಸೀನುಗೊಬ್ಬರವನ್ನು ತರಲೆಂದು, ಲಾರಿಯನ್ನು ತೆಗೆದುಕೊಂಡು ಮೈಸೂರಿಗೆ ಹೋಗಿದ್ದ; ಇರುಳಾಗುವ ಮುನ್ನ ಬಂಗ್ಲೆಗೆ ಮರಳಿ ಬರುವೆನೆಂದು ಹೇಳಿದ್ದ; ಆದರೆ ಕೊಟ್ಟ ಮಾತಿನಂತೆ ಬಂಗ್ಲೆಯನ್ನು ಸೇರಿರಲಿಲ್ಲ. ಕೋಣೆಯಲ್ಲಿ ಜೋಜುವೊಬ್ಬಳೇ ನಿದ್ರಿಸಬೇಕಾಗಿ ಬಂತು.

ಆ ಉಲಿತವನ್ನು ಜೋಜು ಕೇಳಿದುದು ಇದು ಐದನೆಯ ಸಲ. ಅದು ಕನಸಲ್ಲ; ದಿಟ!

ಹೌದು. ಡಾಲಿ ಹೊರಟುಹೋಗಿ ಆ ಇರುಳಿಗೆ ಆರು ತಿಂಗಳು ತುಂಬಿದ್ದುವು.

ಡಾಲಿಯ ನೆನಪು ಚಿತ್ರದಲ್ಲಿ ಸುಳಿಸೊಡನೆ, ಬೋಜುವಿನ ಮೈಯಲ್ಲಿ ನಡುಕ ಹುಟ್ಟಿತು.

"ಚಿಕ್ಕವ್ವ, ನಾನು ಹೊರಟುಹೋಗಬೇಕೆಂದು ನೀನು ಬಯಸಿದೆ; ನನ್ನನ್ನು ದೂರ ಅಟ್ಟಿದೆ; ಆನಂತೆ ನಾನು ಅಕ್ಕರೆಯ ಚಿಕ್ಕವ್ವ ನನ್ನು ಬಿಟ್ಟು ಹೋಗಲೊಲ್ಲೆ!" ಎಂಬ ದನಿ ಆಕೆಯ ಕಿವಿಗಳಿಗೆ ಕೇಳಿಸಿದಂತಾಯಿತು.

ಬೋಜು ದಿಂಬಿನಿಂದ ಕೊರಳೆತ್ತಿ ನೋಡಿದಳು. ಕೋಣೆಯೊಳಗೆ ಯಾರೂ ಇರಲಿಲ್ಲ. ತಾನು ಕೇಳಿದುದು ಮನಸ್ಸಿನ ಮಾಯಕವೆಂದು ತಿಳಿದು ಅವಳು ನಕ್ಕಳು. ಆದರೆ ಎದೆಯೊಳಗೆ ಹೆಪ್ಪುಗಟ್ಟಿದ ಅಂಜಿಕೆ ಕರಗಲೊಲ್ಲದು.

ಬೋಜು ಹಾಸಿಗೆಯ ಮೇಲೆ ಎದ್ದು ಕುಳಿತಳು. ಪಕ್ಕದಲ್ಲಿನ್ದ ಕೆರುಮಂಚದೆಡೆಗೆ ಕಣ್ಣೋಡಿಸಿದಳು. ಅಲ್ಲಿ ಆಕೆಯ ಮುದ್ದುಕಂದ ಐದು ವರ್ಷದ ಚೆಂಗುಮಣಿ ನಿದ್ದಿಸುತಿದ್ದ. ಆತ ತನ್ನ ಎರಡು ಕೈಗಳನ್ನು ಮೇಲೆ ಚಾಚಿದ್ದ. ಆತನ ಅರಿದೆರೆದ ತುಟಿಗಳ ಮೇಲೆ ಏಳನಗೆಯ ಬೆಳುದಿಂಗಳು ಕುಣಿದಾಡುತ್ತಿದ್ದಿತು. ಆತ ಅಗಲಿದ ಅಣ್ಣನೊಡನೆ ಆಟವಾಡುವ ಕನಸನ್ನು ಕಾಣುತ್ತಿರುವನೇನೋ!

ಆ ಆಲೋಚನೆ ಬೋಜುವಿನ ಎದೆಯನ್ನು ಕೂರಲಗಿನಂತೆ ಇರಿಯಿತು.

ಬೋಜು ಹಾಸಿಗೆಯಿಂದೆದ್ದು ಬಾಗಿ ಕಂದನ ಹಣೆಯನ್ನು ಮಿದುವಾಗಿ ಚುಂಬಿಸಿದಳು. ಕೂಸಿನ ಮೈಯ ಬಿಸುಪು ಆಕೆಯ ಕೋಡಿದ ಮೈಗೆ ಶಾಖವನ್ನೊದಗಿಸಿತು.

ಅವಳು ಮರಳಿ ಹಾಸಿಗೆಯ ಮೇಲೆ ಹೊರಳಿದಳು. ರಗ್ಗನ್ನು ಮೈಮೇಲೆ ಎಳೆದುಕೊಂಡು ನಿದ್ದೆಹೋಗಲು ಪ್ರಯತ್ನಿಸಿದಳು.

ಆದರೆ ಬೋಜುವಿನ ಕಣ್ಣುಗಳಲ್ಲಿ ನಿದ್ದೆ ಸುಳಿಯಲೊಲ್ಲದು. ಆಕೆಯ ಮನಸ್ಸು ಚಿಂತೆಗಳ ಆಗರವಾಯಿತು.

* * * *

ಕಳೆದ ಐದು ವರ್ಷಗಳ ಹಿಂದಿನ ಬದುಕು ಆಕೆಯ ಮನಸ್ಸಿನೊಳಗೆ ನುಗ್ಗಿತು. ಅಂದು ಅವಳು ಗಂಡನನ್ನು ಕಳೆದುಕೊಂಡು ವಿಧವೆಯಾಗಿದ್ದಳು. ಹೊಟ್ಟೆ ಹೊರೆಯಲು ಸಾಕಾಗುವಷ್ಟು ಭೂಮಿ-ಕಾಣಿಗಳೂ ಇರಲಿಲ್ಲ. ತಂದೆ ಅವಳನ್ನು ಎಸ್. ಎಸ್. ಎಲ್. ಸಿಯ ತನಕ ಓದಿಸಿದ್ದ. ಅವಳು, ಗಂಡ ಮಡಿದಮೇಲೆ ಉಪಜೀವನಕ್ಕೆ ಅಧ್ಯಾಪಿಕೆಯ ವೃತ್ತಿಯನ್ನು ಕೈಗೊಂಡಳು. ಶಾಲೆಯ ಪಕ್ಕದಲ್ಲಿ ಪುಟ್ಟ ಮನೆಯೊಂದನ್ನು ಬಾಡಿಗೆಗೆ ಹಿಡಿದಳು; ಮಗಳಿಗೆ ನೆರವಾಗಲೆಂದು ತಾಯಿ ಬಂದು ಮಗಳ ಜತೆಯಲ್ಲಿ ನೆಲಸಿದಳು.

ಬೋಜು ಅಧ್ಯಾಪಿಕೆಯಾಗಿದ್ದಾಗ ಆಕೆಗೆ ಬಿದ್ದುವಿನ ಪರಿಚಯವಾಯಿತು. ಶಾಲೆಯಿಂದ ಒಂದು ಮೈಲು ದೂರದಲ್ಲಿ ಆತನ ಕಾಫಿ ತೋಟವಿತ್ತು. ಬೋಜುವಿನ ಪರಿಚಯವಾದ ನಾಲ್ಕೈಂಟು ದಿನಗಳಲ್ಲಿ ಬಿದ್ದು ಆ ತಾಯಿ-ಮಗಳಂದಿರಿಗೆ, ತನ್ನ ಬಂಗ್ಲೆಗೆ ಬರಬೇಕೆಂದು ಆದರದ ಆಮಂತ್ರಣ ನೀಡಿದ.

ಒಂದು ಭಾನುವಾರ ಬೋಜೂ ಜತೆಯಲ್ಲಿ ತಾಯಿಯನ್ನು ಕರೆದುಕೊಂಡು ಬಿದ್ದುವಿನ ಬಂಗ್ಲೆಗೆ ಹೋದಳು. ಅಲ್ಲಿ ಆಕೆ ಆತನ ಮಡದಿ ದೇಚುವಿನ ಪರಿಚಯ ಮಾಡಿಕೊಂಡಳು. ದೇಚು ರೂಪವತಿಯಲ್ಲ. ಸೆಣಕಲು ಮೈಯ ಕಪ್ಪುಬಣ್ಣದ ಹೆಣ್ಣು ಆಕೆ. ಮೂಗು ನಸುಡೊಂಕು. ಹಲ್ಲುಗಳ ಸಾಲು ಓರೆಕೋರೆಯಾಗಿತ್ತು. 'ಈ ಕುರೂಪಿ ಹೆಣ್ಣನ್ನು ಬೋಜುಗಾರ ಬಿದ್ದುವೇಕೆ ಮದುವೆಯಾದ?' ಎಂದು ಅವಳಿಗೆ ಆಶ್ಚರ್ಯವಾಯಿತು. ಬಿದ್ದುವಿನ ಕಣ್ಣನೋಟದಿಂದಲೇ ಆ ಗಂಡ-ಹೆಂಡಿರಲ್ಲಿ ಪ್ರೀತಿಯ ಬೆಸುಗೆ ಇಲ್ಲವೆಂದು ಬೋಜು ಗ್ರಹಿಸಿದಳು.

ಬಿದ್ದು ದೇಚುವನ್ನು ಪ್ರೀತಿಯಿಂದಲ್ಲ; ಆಸ್ತಿಯ ಮೇಲಿನ ಲೋಭದಿಂದ ಮದುವೆಯಾದನೆಂಬುದು, ಆಮೇಲೆ ಬೋಜುವಿಗೆ ತಿಳಿಯಿತು. ಬಿದ್ದುವಿಗೆ ಹೇಳಿಕೊಳ್ಳುವಂತಹ ಆಸ್ತಿ-ಪಾಸ್ತಿಗಳೇನೂ ಇರಲಿಲ್ಲ. ಗಟ್ಟಿಮುಟ್ಟಾದ ಮೈ, ಸ್ಫುರದ್ರೂಪ, ಹೆಣ್ಣುಗಳ ಬಗೆಯನ್ನು ಕೆರಳಿಸುವ ಹಸನ್ಮುಖ—ಇವೇ ಅವನ ಸಂಪತ್ತು. ಹುಡುಗಿಯ ತಂದೆ ಬಳುವಳಿಯಾಗಿ ಕೊಡುತ್ತೇನೆಂದು ಹೇಳಿದ ಇಪ್ಪತ್ತು ಎಕರೆ ಕಾಫಿ ತೋಟದ ಲೋಭಕ್ಕೆ ಬಲಿಬಿದ್ದು, ಆತ ದೇಚುವಿನ ಕೈ ಹಿಡಿದಿದ್ದ.

ದೇಚುವನ್ನು ಮದುವೆಯಾದ ಮೇಲೆ ಬಿದ್ದು ಒಬ್ಬ ಮನುಷ್ಯನಾದ. ಆತ ಕಾಡುಕಡಿಸಿ ತೋಟವನ್ನು ವಿಸ್ತರಿಸಿದ. ಕಾಫಿಗೂ ಒಳ್ಳೆಯ ಬೆಲೆ ಬಂತು. ಈಗ ಅವನು ಓಡಾಟಕ್ಕೆಂದು ಕಾರು ಬೇರೆ ಇರಿಸಿಕೊಂಡ. ಊರಿನ ಗಣ್ಯವ್ಯಕ್ತಿಗಳ ಸಾಲಿಗೆ ಅವನ ಹೆಸರೂ ಸೇರಿತು

ದೇಚು ಆತನಿಗೆ ಗಂಡು ಕೂಸೊಂದನ್ನುಕೊಟ್ಟಳು. ಆದರೆ ಡಾಲಿ ಹುಟ್ಟಿದ ಮೇಲೆ ಆಕೆಯ ದೇಹಸ್ಥಿತಿ ಕುಗ್ಗಿತು. ಪಿತ್ತಜನತಾಂಗಕ್ಕೆ ಸಂಬಂಧಿಸಿದ ಕಾಹಿಲೆ, ವಾಯುವಿನ ಉಪದ್ರವ, ದಮ್ಮು, ಹೀಗೆ ನಾಲ್ಕೈಂಟು ಬಗೆಯ ಕೋಟಲೆಗಳು ಜತೆಸೇರಿಕೊಂಡು, ಆಕೆಯನ್ನು ಕಾಡಿ, ಹಿಂಡಿ ಹಿಪ್ಪೆಯಾಗಿಸಿದುವು. ಮೂವತ್ತು ವರುಷ ವಯಸ್ಸಿನ ಆ ಹೆಣ್ಣು ಐವತ್ತರ ಗಡಿಯನ್ನು ದಾಟಿದವಳಂತೆ ತೋರತೊಡಗಿದಳು. ಬಿದ್ದುವಿನ ಬಂಗ್ಲೆಯೇ ಒಂದು ಆಸ್ಪತ್ರೆಯಾಗಿ ಪರಿಣಮಿಸಿತು. ವಾರಕ್ಕೆರಡು ಸಲ ಮಡಿಕೇರಿಯಿಂದ ವೈದ್ಯರು ದೇಚುವಿನ ದೇಹಸ್ಥಿತಿಯನ್ನು ಪರೀಕ್ಷಿಸಿ ಔಷಧಿ ಕೊಡಲೆಂದು ಬರುತಿದ್ದರು.

ಹೆಣವನ್ನು ಬೆನ್ನಟ್ಟಿ ದೇಚುವಿನ ಕೈಹಿಡಿದ ಬಿದ್ದುವಿನ ಎದೆಯಲ್ಲಿ ಸುಖದ ಗೂಡುಗಟ್ಟಿಲಿಲ್ಲವೆಂಬುದನ್ನು, ಬೋಜು ಆತನ ಮುಖಭಾವದಿಂದ ಗ್ರಹಿಸಿದಳು. ಚಿಂತೆ ತುಂಬಿದ ಆ ಕಣ್ಣುಗಳು ಅಸಂತೃಪ್ತಿಯನ್ನು ಸೂಚಿಸುತಿದ್ದುವು.

ಬೋಜುವಿನ ಹರಯ ಇಪ್ಪತ್ತೈದರ ಮನೆಯನ್ನು ದಾಟಿದ್ದರೂ, ಆಕೆಯ ಮೈಯ ಮಾಟಕ್ಕೆ ಊನ ತಟ್ಟಿರಲಿಲ್ಲ. ಆಕೆಯ ಉದ್ದನೆಯ

ಬಿಳಿಯ ಮೋರೆ ಎಳದಳಿರಂತೆ ನಳನಳಿಸುತಿತ್ತು. ಕಣ್ಣುಗಳು ಹೊಳ ಪುಳ್ಳವುಗಳು; ಮೂಗು ಉದ್ದವಾಗಿ ಮಾಟವಾಗಿತ್ತು. ಆಕೆಯ ಉಬ್ಬು ಎದೆಯ ಏರಿಳಿತಗಳು ಕಾಮುಕರ ಎದೆಗಳನ್ನು ಕದಡುತಿದ್ದುವು. ಆಕೆಯ ದುಂಡಗಿನ ತೋಳುಗಳು ಬಾಳೆದಿಂಡಿನ ನುಣುಪನ್ನು ತಳೆದಿದ್ದುವು.

ಅಂದು ಬಿದ್ದು ಆಶೆತುಂಬಿದ ಕಣ್ಣುಗಳಿಂದ ಬೋಜುವನ್ನು ನೋಡಿದ; ಆತನ ನೋಟದ ತೀಕ್ಷ್ಣತೆಯನ್ನು ತಾಳಲಾಗದೆ ಕುರ್ಚಿಯ ಮೇಲೆ ಕುಳಿತ ಬೋಜು ತಲೆಯನ್ನು ತಗ್ಗಿಸಿದಳು. ಆತ ದೃಷ್ಟಿಜಲವನ್ನು ಆಕೆಯ ಮೈಮೇಲೆ ಅಭಿಷೇಚಿಸುತಿದ್ದ; ಆಕೆಯ ಮೈಮುಳ್ಳುಗಳೆಲ್ಲ ನಿಮಿರಿದುವು. ಕವಿದು ಬಂದ ಲಜ್ಜೆ ಆಕೆಯ ಗಲ್ಲಗಳಿಗೆ ಕೆಂಬಣ್ಣವನ್ನು ಮೆತ್ತಿತು. ಅಂತರಂಗದಲ್ಲಿ ಮಧುರಭಾವದ ತರಂಗವೊಂದು ಎದ್ದಿತು.

ಆ ಕಣ್ಣನೋಟದ ಕೂರಂಬೊಂದು ಆಕೆಯ ಜೀವವನ್ನು ತಿವಿದು ಘಾತಿಗೊಳಿಸಿತು.

ಅಂದಿನಿಂದ ಬಿದ್ದು ಏನಾದರೂ ಒಂದು ನೆಪಮಾಡಿ, ವಾರಕ್ಕೆ ಎರಡು ಮೂರು ಸಲ ಬೋಜುವಿನ ಮನೆಗೆ ಬರತೊಡಗಿದ; ಏನಾದರೂ ಒಂದು ಸಂಗತಿಯನ್ನೆತ್ತಿ ಬೋಜುವಿನ ಜತೆಯಲ್ಲಿ ಹರಟೆ ಹೊಡೆಯುತ್ತಾ ಕಾಲಕಳೆಯುತ್ತಿದ್ದ. ಅವನು ಬಂದುದೇಕೆಂದು ಬಾಯಿಬಿಟ್ಟು ಹೇಳದಿದ್ದರೂ ಆತನ ಕಣ್ಣುಗಳು ಆತನ ಉದ್ದೇಶವನ್ನು ಬೋಜುವಿಗೆ ಅರುಹುತಿದ್ದುವು.

ಬೋಜು ಕಾಫಿ ತುಂಬಿದ ಕಪ್ಪು ಮತ್ತು ಬಸಿಗಳನ್ನು ಆತನೆಡೆಗೆ ಚಾಚಿದಾಗ, ಅವಳ ಕೈಗಳು ನಡುಗುತ್ತಿದ್ದವು. ಹೃದಯದಲ್ಲಿ ಅಮಿತ ಸುಖದ ಸಂವೇದನೆಯಾಗುತ್ತಿತ್ತು. ತಾನು ಬರೀ ಕಾಫಿ ತುಂಬಿದ ಕಪ್ಪನ್ನು ಮಾತ್ರವಲ್ಲ ಆತನೆಡೆಗೆ ಚಾಚುತ್ತಿರುವುದು; ಅದರ ಜತೆಯಲ್ಲಿ ತನ್ನ ಹೃದಯವನ್ನೇ ನೀಡುತ್ತಿದ್ದೇನೆ—ಎಂಬ ಭಾವ ಆಕೆಯ ಅಂತರಂಗದಲ್ಲಿ ಸುಳಿಯುತಿತ್ತು. ಆಕೆ ಆತನ ಮೋರೆಯನ್ನು ನೋಡಲಾರದೆ ಕೊರಳನ್ನು ಬೇರೊಂದು ದಿಕ್ಕಿಗೆ ತಿರುಗಿಸುತಿದ್ದಳು.

"ಚಳಿಗಾಳಿ ಬೀಸುತ್ತಿದೆ!" ಬಿದ್ದು ಬೋಜುವಿನ ನಡುಗುತ್ತಿರುವ ಕೈಗಳನ್ನು ಕಂಡು ಉದ್ಗಾರವೆತ್ತುತ್ತಿದ್ದ.

ಚಳಿಗಾಳಿಯಲ್ಲ ಅಲುಗಿಸಿದುದು; ಹೃದಯದಲ್ಲಿದ್ದ ಬಿರುಗಾಳಿ ಅವಳ ಜೀವವನ್ನು ಹಿಡಿದು ಅಲುಗಾಡಿಸುತಿದ್ದಿತು.

ಬಿದ್ದು ಮಾತಾಡುವುದು ವಿರಳ. ಅವನು ಕುರ್ಚಿಯಮೇಲೆ ಕುಳಿತು ಆಕೆಯ ರೂಪವನ್ನು ಹೀರಿ ಎದೆಯ ಬಟ್ಟಲಲ್ಲಿ ತುಂಬಿಕೊಳ್ಳುತಿದ್ದ. "ಇಗೋ, ನಾಲ್ಕಾರು ಹಣ್ಣು ತಂದಿದ್ದೇನೆ." ಎಂದು ಹೇಳಿ, ತನ್ನ ಸಂಚಿಯೊಳಗಿಂದ ಕೆತ್ತಳಿ ಹಣ್ಣುಗಳನ್ನು ತೆಗೆದು ಮೇಜಿನ ಮೇಲಿಡುತ್ತಿದ್ದ; ಕಿರುನಗೆಯ ಮುಗುಳೊಂದನ್ನು ಆಕೆಯ ಮೇಲೆ ಎಸೆಯುತಿದ್ದ.

ಆತನ ಕಣ್ಣುಗಳ ಕುಡಿನೋಟ, ತುಟಿಗಳ ಮೇಲೆ ಕುಣಿವ ಎಳನಗು, ಮಾತುಗಳಿಗೆ ನಿಲುಕದ ಆ ನವಿರು—ಸಂಗತಿಗಳನ್ನು ಆಕೆಗೆ ಅರುಹುತಿದ್ದುವು; ಹುಬ್ಬುಗಳ ಕುಣಿತ, ರೆಪ್ಪೆಗಳ ಮಿಡಿತ ಇವುಗಳನ್ನು ಬಳಸಿ ಆಕೆ ಅವನಿಗೆ ಉತ್ತರಿಸುತಿದ್ದಳು.

ದೇಚುವನ್ನು ಬಾಧಿಸಿದ ರೋಗ ಉಲ್ಬಣ ಸ್ಥಿತಿಗೆ ತಲುಪಿತು. ಆಕೆಯ ರೋಗ ಮಡಿಕೇರಿಯ ಡಾಕ್ಟರರುಗಳಿಂದ ವಾಸಿಯಾಗದೆಂದು ಖಚಿತವಾಗಿ ಹೋಯಿತು. ಬಿದ್ದು ಮಡದಿಯನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಸ್ಪೆಷಲ್ ವಾರ್ಡಿಗೆ ಸೇರಿಸಿದ.

ದೇಚುವನ್ನು ಮೈಸೂರು ಆಸ್ಪತ್ರೆಗೆ ಸೇರಿಸಿದ ಮೇಲೆ, ಬಿದ್ದು ಒಮ್ಮೆ ಸಂಜೆ ಹೊತ್ತು ಬೋಜುವಿನ ಮನೆಗೆ ಬಂದ. ಅವನ ಮೋರೆ ಚಿಂತೆಯ ಬೆಂಕಿಯಲ್ಲಿ ಬೆಂದು ಕಂದಿ ಹೋಗಿತ್ತು. ಅಂದು ಬೋಜುವಿನ ತಾಯಿಯೂ ಮನೆಯಲ್ಲಿರಲಿಲ್ಲ. ಎರಡು ದಿನ ಇದ್ದು ಬರಲೆಂದು ಅಣ್ಣನ ಮನೆಗೆ ಹೋಗಿದ್ದಳು.

"ದೇಚು ಹೇಗಿದ್ದಾಳೆ?" ಬೋಜು ಕೇಳಿದಳು,

"ನನ್ನ ಜೀವವನ್ನು ಮುಷ್ಟಿಯಲ್ಲಿ ಹಿಡಿದು ಹಿಂಡಿ ಹಿಪ್ಪೆ ಮಾಡುತಿದ್ದಾಳೆ!"

ಬೇಸರಿಕೆ, ನಿರಾಶೆ ಮತ್ತು ದ್ವೇಷಗಳು ಆ ಉಲಿತದಲ್ಲಿ ತುಂಬಿದ್ದುವು.

"ಮೈಸೂರು ಆಸ್ಪತ್ರೆಯಲ್ಲಿ ದೇಹಸ್ಥಿತಿ ಸುಧಾರಿಸಲಿಲ್ಲವೇ?" ಬೋಜು ಆತನ ಅಂತರಂಗದ ಕುದಿತವನ್ನು ತಿಳಿಯದೆ ಪ್ರಶ್ನಿಸಿದಳು.

"ಆಕೆಯ ದೇಹಸ್ಥಿತಿ ಈ ಜನ್ಮದಲ್ಲಿ ಸುಧಾರಿಸದು." ಬಿದ್ದು ಪೇರುಸಿರೊಂದನ್ನು ಹೊರಚೆಲ್ಲಿದನು "ಹೊನ್ನ ಕೊಪ್ಪರಿಗೆಗೆ ಆಸೆಪಟ್ಟುಕೊಂಡು ಉರಿವ ಮನೆಯೊಳಗೆ ನುಗ್ಗಿದೆ. ಕೊಪ್ಪರಿಗೆ ಏನೋ ಕೈಗೆ ಸಿಕ್ಕಿತು. ಆದರೆ ಹೊರಗೆ ಬರಲು ದಾರಿಯಿಲ್ಲ. ಉರಿವ ಮನೆಯೊಡನೆ ನಾನೂ ಬೆಂದು ಬೂದಿಯಾಗಬೇಕು!"

ಬೋಜುವಿಗೆ ಏನು ಹೇಳಬೇಕೆಂಬುದು ತಿಳಿಯಲಿಲ್ಲ.

"ಬೋಜು!" ಬಿದ್ದು ಕಾತರ ವನಿಯಲ್ಲಿ ಉಸುರಿದ: "ಹಣ ಸುಖ ಕೊಟ್ಟೇತೆಂದು ಎಣಿಸಿದೆ; ಹಣ ಬಂದು ನನ್ನ ಕೈಸೇರಿತು. ಆದರೆ ಅದರ ಹಿಂದೆ ಸುಖ ಮಾತ್ರ ಬರಲಲ್ಲ. ಸುಖ ನನ್ನ ಪಾಲಿಗೆ ಬಿಸಿಲ್ಗುದುರೆ!"

"ಬಿದ್ದು, ನಿನಗೇನು ಕೊರತೆ?" ಬೋಜು ನುಡಿದಳು: "ಹಣ ಇದೆ; ತೋಟ ಇದೆ; ಕಾರಿದೆ; ಮಡದಿ ಮಕ್ಕಳು....."

"ಎಲ್ಲಾ ಇವೆ!" ಬಿದ್ದು ನಡುವೆ ಬಾಯಿ ಹಾಕಿದ: "ಪ್ರೀತಿಯೊಂದಿಲ್ಲ! ಅದು ಬೆಲೆಗೆ ದೊರಕುವ ಸರಕಲ್ಲ!"

"ಪ್ರೀತಿ!" ಬೋಜು ವಿಸ್ಮಯದಿಂದ ಕಣ್ಣುಗೆಳನ್ನಗಲಿಸಿದಳು.

"ಹೌದು. ನಾನು ಆ ರೋಗದ ಮುದ್ದೆಯನ್ನು ಪ್ರೀತಿಸುತ್ತಿರುವೆನೆಂದು ತಿಳಿದೆಯಾ?" ಬಿದ್ದು ಬಿಸಿಯುಸಿರೊಂದನ್ನು ಹೊರಚೆಲ್ಲಿದ: "ನೀನು.....ಅಲ್ಲ ನಿನ್ನಂತಹಳೊಬ್ಬಳು ನನ್ನ ಕೈಹಿಡಿದರೆ ಸಾಕಿತ್ತು! ಈ ತೋಟ, ಕಾರು ಮತ್ತು ಹಣಗಳಿಂದ ದೊರೆಯದ ಸುಖವನ್ನು ಉಣುತಿದ್ದೆ."

ಈ ಮಾತನ್ನು ಕೇಳಿದಾಗ ಬೋಜುವಿನ ಪೋರೆ ಕೆಂಪೇರಿತು. ಅವಳು ಆತನ ಮುಂದೆ ನಿಲ್ಲಲೆ ಅಡುಗೆ ಕೋಣೆಗೆ ಓಡಿದಳು.

ಆ ಇರುಳು ಬಿದ್ದು ಬೋಜುವಿನ ಮನೆಯಿಂದ ತನ್ನ ತೋಟಕ್ಕೆ ಮರಳಿದಾಗ, ಬೆಳಗಿನ ಜಾವದ ಕೋಳಿ ಕೂಗುತಿತ್ತು.

ಮೈಸೂರು ಆಸ್ಪತ್ರೆಯನ್ನು ಸೇರಿದ ದೇಚು ಆರೋಗ್ಯವಂತೆಯಾಗಿ ಮರಳಿ ಮನೆಯನ್ನು ಸೇರಲಿಲ್ಲ. ಆಕೆಯ ಪಿತ್ತಜನಕಾಂಗಕ್ಕೆ ಕೆನ್ಸರ್ ರೋಗ ತಟ್ಟಿದೆ — ಎಂದು ತಿಳಿದುಬಂತು. ಅವಳು ಮೈಸೂರು ಆಸ್ಪತ್ರೆಯಲ್ಲಿಯೇ ಕೊನೆಯುಸಿರನ್ನೆಳೆದಳು.

ದೇಚು ಮಡಿದು ಆರು ತಿಂಗಳು ಕಳೆಯುವಷ್ಟರಲ್ಲಿ ಬಿದ್ದು, ಬೋಜುವನ್ನು ಕೂಡಾವಳಿ ಮಾಡಿಕೊಂಡ. ಬೋಜು ತನ್ನ ಉದ್ಯೋಗವನ್ನು ತೊರೆದಳು. ಈಗ ಅವಳು ಬಿದ್ದುವಿನ ನೈಮನಗಳೆರಡಕ್ಕೂ ಒಡತಿಯಾದಳು.

* * * *

ತನ್ನ ಬಾಳ್ವೆಯ ದೋಣಿ ಹಾಲಿನ ಹೊಸಲಲ್ಲಿ ತೇಲುತಿದ್ದಂತೆ ಬೋಜುವಿಗೆ ತೋರಿತು. ಕಷ್ಟ-ಕಾರ್ಪಣ್ಯಗಳ ಸುಳಿಯಿಲ್ಲದ ಚೆಂದನ ಬಾಳ್ಕೆಯದು. ಆಕೆಯ ಧಣಿವ ಮೈಗೆ ಅಸರೆಯಾಗಿ ಬಿದ್ದುವಿನ ಪ್ರೇಮಹಸ್ತವಿತ್ತು. ಎದೆಯ ಅಕ್ಕರೆಯನ್ನೆರೆಯಲು ಡಾಲಿ ಇದ್ದ. ಉಡಲು ಪೆಟ್ಟಿಗೆಯ ತುಂಬಾ ಪಟ್ಟಿಸೀರೆಗಳಿದ್ದುವು. ಮೆಟ್ಟಲು ಮಲ್ಲಿಗೆ ಹೂಗಳಿಗಿಂತ ಮಿದುವಾದ ಚಪ್ಪಲಿಗಳಿದ್ದುವು. ಊಣಲು ರಸಕವಳವಿತ್ತು. ಆಕೆಗೆ ಯಾವ ಕೊರತೆಯೂ ಇರಲಿಲ್ಲ. ಬಿದ್ದುವಿನ ಕೈಹಿಡಿದ ತಾನು ಭಾಗ್ಯ ಶಾಲಿನಿ—ಎಂದು ಅವಳು ಹಿಗ್ಗಿದಳು.

ಡಾಲಿಯ ಮೈ ದುರ್ಬಲ ಪ್ರಕೃತಿಯದು. ಅನಾರೋಗ್ಯ ಮತ್ತು ಜಾಡ್ಯಗಳು ಆತನಿಗೆ ತಾಯಿಯಿಂದಲೇ ಬಳುವಳಿಯಾಗಿ ಬಂದಿದ್ದುವು. ಶೀತ, ನೆಗಡಿ, ಕೆಮ್ಮು, ಹೊಟ್ಟೆಯುಬ್ಬರ, ಅಜೀರ್ಣ ಹೀಗೆ ಒಂದಲ್ಲದಿದ್ದರೆ ಮಗುವೊಂದು ಕುತ್ತ, ದಿನ ನಿತ್ಯ ಅವನನ್ನು ಕಾಡುತಿತ್ತು.

ಬೋಜು ಡಾಲಿಯನ್ನು ಸವತಿಯಮಗನೆಂದು ದೂರವಿರಿಸಲಿಲ್ಲ. ಅವಳು ಆತನನ್ನು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆ ಪ್ರೀತಿಸಿದಳು. ಆತನ ಊಟ ಉಪಚಾರ, ಉಡುಗೆ-ತೊಡುಗೆಗಳ ಎಚ್ಚರಿಕೆಯನ್ನು ತಾನೇ ತೆಗೆದುಕೊಳ್ಳುತ್ತಿದ್ದಳು. ಬಂಗ್ಲೆಯಲ್ಲಿ ಆಳು ಕಾಳುಗಳಿದ್ದರೂ ಹುಡುಗನನ್ನು ತಾನೇ ನೀಯಿಸುತಿದ್ದಳು; ಆತನ ವಸ್ತ್ರಗಳನ್ನು ತಾನೇ ಒಗೆಯುತ್ತಿದ್ದಳು. ಅವನ ಬೇಸರ ಕಳೆಯಲು, ತಾನೂ ಒಂದು ಮಗುವಾಗಿ ಅವನ ಜತೆಯಲ್ಲಿ ಆಟವಾಡುತಿದ್ದಳು. ಇರುಳುಹೊತ್ತು ಹತ್ತು ವರುಷದ ಆ 'ಹಸುಳೆ' ಯನ್ನು ತನ್ನ ಪಕ್ಕದಲ್ಲಿ ಮಲಗಿಸಿಕೊಳ್ಳುತಿದ್ದಳು.

ಡಾಲಿ ತಾಯಿಯ ಒಲವೇನೆಂಬುದನ್ನು ಕಂಡರಿಯ. ಬೋಜು ಬಿದ್ದುವಿನ ಬಂಗ್ಲೆಯನ್ನು ಬೆಳಗಲೆಂದು ಬಂದ ನಾಲ್ಕು ದಿನಗಳಲ್ಲಿಯೇ ಅವಳು ಡಾಲಿಗೆ ಒಗ್ಗಿ ಹೋದಳು. ಆತ ತನ್ನ ತಾಯಿಗಿಂತ ಮಿಗಿಲಾಗಿ ಬೋಜುವನ್ನು ಪ್ರೀತಿಸತೊಡಗಿದ. ಅವನು "ಚಿಕ್ಕವ್ವ, ಚಿಕ್ಕವ್ವ" ಎಂದು ಹೇಳಿ, ಆಕೆಯ ಹಿಂದುಮುಂದೆ ಓಡಾಡುತಿದ್ದ. ತನಗೆ ಆಡಲು ಚೆಂಡು ಬೇಕಾದಾಗ, ತೊಡಲು ಹೊಸ ನಿಕ್ಕರು ಬೇಕಾದಾಗ, ಮೆಟ್ಟಲು ಹೊಸ ಬೂಟ್ಸ್ ಬೇಕಾದಾಗ, ಅವನು ಚಿಕ್ಕವ್ವನ ಹತ್ತಿರ ಓಡಿ ಬರುತಿದ್ದ. ಬೋಜು ಆವನು ಬೇಡಿದ ವಸ್ತುಗಳನ್ನು ತಪ್ಪದೆ ಮಡಿಕೇರಿಯಿಂದ ತರಿಸಿಕೊಡುತಿದ್ದಳು.

ಬೋಜು ಮಲಮಗನನ್ನು ಈಸೊಂದು ಪ್ರೀತಿಸುವುದನ್ನು ಕಂಡು ಬಿದ್ದುವಿಗೆ ಆಶ್ಚರ್ಯವಾಗುತ್ತಿತ್ತು. ಅವನು "ಬೋಜು, ದೇಚು ಸಹ ಡಾಲಿಯನ್ನು ಈ ಪಾಟಿ ಪ್ರೀತಿಸಿ ಮುದ್ದಿಸುತ್ತಿರಲಿಲ್ಲ." ಎಂದು ಉದ್ಗಾರವೆತ್ತುತಿದ್ದ.

"ತಾಯಿ ಇಲ್ಲದ ತಬ್ಬಲಿ ಮಗು!" ಬೋಜು ಮರುಕದ ನನಿಯನ್ನೆತ್ತಿದಳು: "ನಾನು ಆತನನ್ನು ಸರಿಯಾಗಿ ನೋಡಿಕೊಳ್ಳದೆ ಹೋದರೆ, ನಾಳೆ ಜನ ಮಲಮಗನನ್ನು ಹುರಿದು ಮುಕ್ಕುತಿದ್ದಳು ಏಂದು ಕೊಂಡಾರು!"

"ನೋಡು, ನಿನ್ನ ಪ್ರೀತಿಯನ್ನೆಲ್ಲಾ ಡಾಲಿಗೇ ಮೀಸಲಾಗಿಸಬೇಡ." ಬಿದ್ದು ಕೊಂಕುಸಗುವೊಂದನ್ನು ಬೀರಿದ: "ನನಗೂ ಎಂದು ಪಾಲಿರಲಿ."

"ನಿನಗೆ ಅಸೂಯೆ ಏನೋ!" ಬೋಜು ಮೆಲ್ಲನೆ ಗಂಡನ ಕೆನ್ನೆಯನ್ನು ಜಿಗುಟಿ ಹೇಳಿದಳು: "ಮಗುವಿಗೆ ಸಲ್ಲಬೆಕಾದುದು. ಮಗುವಿಗೆ; ರಾಜನಿಗೆ ಸಲ್ಲಬೇಕಾದುದು ರಾಜನಿಗೆ!"

ಡಾಲಿ ಬೋಜುವಿನ ಅಕ್ಕರೆಯ ಹಾಲನ್ನುಂಡು ಬಳೆಯ ತೊಡಗಿದ; ಆತನ ಸೊರಗಿನ ಮೈಕೈಗಳು ತುಂಬಿಕೊಂಡುವು. ಆತನಿಗಂಟಿದ ಜಾಡ್ಯ-ಜಾಪತ್ತುಗಳು ದೂರ ಸರಿದುವು. ಆತನ ಮೋರೆ ಕಳೆಗೊಂಡಿತು; ಕಣ್ಣುಗಳು ಹೊಳಪನ್ನು ತಳೆದುವು.

ಮಗನ ದೇಹಪ್ರಕೃತಿ ಸುಧಾರಿಸಿದುದು ಬಿದ್ದುವಿನ ಕಣ್ಣುಗಳಿಗೆ ಬೀಳೆಪೆ ಇರಲಿಲ್ಲ. ಅವನು "ಬೋಜು, ನಿನ್ನ ಕೈಯ ಆರೈಕೆಯಿಂದ ಡಾಲಿಯ ಮೈಕೈಗಳು ತುಂಬಿಕೊಂಡುವು. ಆತ ನೋಡುವಂತಾದ!!" ಎಂದು ಹೇಳಿದ. ಸವತಿಯ ಮಗನ ಆರೈಕೆಯಲ್ಲಿ ಅಕ್ಕರೆಯುಳ್ಳ ಮಡದಿಯ ಬಗ್ಗೆ ಅವನು ಅಭಿಮಾನ ತಳೆದ.

* * * *

ವರ್ಷಗಳೆರಡು ಉರುಳಿದುವು. ಬೋಜು ಬಸಿರಾಗಿ ಚಂದದ ಗಂಡು ಕೂಸೊಂದನ್ನು ಹಡೆದು, ಗಂಡನಿಗೆ ಕಾಣಿಕೆ ಕೊಟ್ಟಳು. ಶಿಶುವಿಗೆ ಚಿಂಗಪ್ಪ ಎಂದು ನಾಮಕರಣ ಮಾಡಿದರು. ಬೋಜು ಮುದ್ದಿಗೋಸುಗ ಹುಡುಗನನ್ನು 'ಚೆಂಗುಮಣಿ' ಎಂದು ಕರೆದಳು.

ಡಾಲಿ ತಮ್ಮನನ್ನು ಪ್ರೀತಿಯಿಂದ ಕಂಡಾನು ಎಂದು ಬೋಜುವಿನ ಎಣಿಕೆಯಾಗಿತ್ತು; ಆಕೆ ಆರುತಿಂಗಳ ಕೂಸನ್ನು ಡಾಲಿಯ ಮುಂದೆ ಹಿಡಿದು "ಡಾಲಿ, ಇಲ್ಲಿ ನೋಡು, ನಿನ್ನ ಪುಟ್ಟ ತಮ್ಮ! ನಿನ್ನ ಮಾತಾಡಿಸ್ತಾನೆ; ನಿನ್ನ 'ಬೇ ಬೇ' ಅಂತ ಕರೆಯುತ್ತಾನೆ!" ಎಂದು ಹೇಳುತಳು.

ಡಾಲಿ ಕಣ್ಣರಳಿಸಿ ಶಿಶುವನ್ನೊಮ್ಮೆ ನೋಡುವನು; ಆದರೆ ಆತನ ಕಣ್ಣುಗಳಲ್ಲಿ ಪ್ರೀತಿಯ ಸೆಲೆ ಚಿಮ್ಮುತ್ತಿರಲಿಲ್ಲ. ಆತನ ತುಟಿಗಳ ಮೇಲೆ ನಲವಿನ ಮೆಲುನಗೆ ಸುಳಿಯುತ್ತಿರಲಿಲ್ಲ. ಅಲ್ಲಿ ನಿಲ್ಲದೆ ಬೇರೆಡೆಗೆ ಸರಸರನೆ ಅವನು ಹೋಗಿಬಿಡುವ.

ಬೋಜು ಚೆಂಗುಮಣಿಗೆ ಹಾಲೂಡಲೆಂದು ಹೀರುಕುಪ್ಪಿಗೆ ಹಾಲು ತುಂಬಿದಾಗ ಡಾಲಿ "ಚಿಕ್ಕವ್ವ, ನನಗೆ ಹಾಲು" ಎಂದು ರಗಳೆ ಎಬ್ಬಿಸುವನು. ಗ್ಲಾಸಿಗೆ ಬೇರೆ ಹಾಲು ಹಾಕಿ ಸಕ್ಕರೆ ಬೆರಸಿಕೊಟ್ಟರೆ ಆದು ಆತನಿಗೆ ಆಗದು. ಚೆಂಗುಮಣಿಯ ಹಾಲುಕುಪ್ಪಿಯನ್ನು ಆತನ ಕೈಗೆ ಕೊಟ್ಟಲ್ಲದೆ ಆತನ ಸಿಟ್ಟು ಶಾಂತವಾಗಲೊಲ್ಲದು.

ಚೆಂಗುಮಣಿಗೆ ತಾಯಿ ಕೆತ್ತಳಿಹಣ್ಣು ಸುಲಿದು ಕೊಟ್ಟಾಗ, ಆ ಆ ಕಿತ್ತಳೇ ಹಣ್ಣೇ ಡಾಲಿಗೆ ಆಗಬೇಕು. ಬೋಜು ಎಷ್ಟು ಸಂತೈಸಿದರೂ ಆತನ ಸಿಟ್ಟು ಶಾಂತವಾಗದು. ಆತನ ಚಂಡಿತನವನ್ನು ಕಂಡು ಬೋಜುವಿಗೆ ಸಿಟ್ಟು ಬರುತ್ತಿತ್ತು; ಆದರೆ ಅವಳು ಉಕ್ಕಿಬಂದ ಮುನಿಸನ್ನು ಅದುಮಿಕೊಳ್ಳುತ್ತಿದ್ದಳು.

ಒಂದು ದಿನ ಹರಿದಾಡತೊಡಗಿದ ಚೆಂಗುಮಣಿಯ ಕೈಯಲ್ಲಿದ್ದ ಒಂದು ಬಿಸ್ಕತ್ತನ್ನು ಕಿತ್ತು ಅಂಗಳಕ್ಕೆ ಎಸೆದು ಬಿಟ್ಟ. ಚೆಂಗುಮಣಿ ಕಿಟಾರನೆ ಚೀರಿದ. ಮಗನ ಅಳಲನ್ನು ಕೇಳಿ, ಬೋಜು ಓಡಿ ಬಂದು ನೋಡಿದಳು. ಅಂಗಳದಲ್ಲಿ ಬಿದ್ದ ಬಿಸ್ಕತ್ತನ್ನು ಗುಬ್ಬಚ್ಚಿಯೊಂದು ಕುಟುಕುತಿತ್ತು.

"ಮಗುವಿನ ಕೈಯಿಂದ ಬಿಸ್ಕತ್ತನ್ನು ಕಿತ್ತಿಸಿದವರು ಯಾರು?" ಬೋಜು ಡಾಲಿಯ ಮೋರೆಯನ್ನು ನೋಡುತ್ತಾ ಕೇಳಿದಳು.

"ನಾನು!" ಡಾಲಿ ಕುಂಬಳಕಾಯಿ ಗಾತ್ರ ಮೋರೆಯನ್ನು ಮಾಡಿಕೊಂಡು ಹೇಳಿದ.

"ಏಕೆ?"

"ನಂಗೆ ಬಿಸ್ಕತ್ತು ಬೇಕು."

"ಕೇಳಿದ್ದರೆ ನಾನು ಕೊಡುತ್ತಿದ್ದೆನಲ್ಲ." ಬೋಜು ಗದರಿಕೆಯ ದನಿಯನ್ನೆತ್ತಿದಳು: "ನೀನೇಕೆ ಚೆಂಗುಮಣಿಯ ಕೈಯಿಂದ ಕಿತ್ತಿಸಿದೆ?"

ಬೋಜು ಸಿಟ್ಟಿನ ಭರವಸ್ಸಲ್ಲಿ ಕೈ ಎತ್ತಿ ಡಾಲಿಯ ಬೆನ್ನಮೇಲೆ ಗುದ್ದಿದಳು. ಪುಲಮಗನ ಮೇಲೆ ಆಕೆ ಕೈ ಎತ್ತಿದುದು ಅದೇ ಮೊದಲು!

"ನೀನು ನನ್ನ ಅವ್ವನಲ್ಲ!" ಡಾಲಿ ದೊಡ್ಡ ದನಿಯಲ್ಲಿ ಚೀರಿದ: "ನನ್ನ ಕಂಡರೆ ನಿನಗೆ ಆಗೋದಿಲ್ಲ; ನನ್ನ ಮೇಲೆ ನಿಂಗೆ ಪ್ರೀತಿ ಇಲ್ಲ!*

ಡಾಲಿಯ ಮಾತು ಬೋಜುವಿನ ಪಾಲಿಗೆ ಬರಸಿಡಿಲಾಯಿತು. ತಾನು ಕನಸಿನಲ್ಲಿಯೂ ಎಣಿಸದ ಸಂಗತಿಯನ್ನು ಡಾಲಿ ಆಡಿಮಧನ್ನು ಕಂಡು ಅವಳು ಸ್ತಂಭಿತಳಾಗಿ ಹೋದಳು. ಮನಸ್ಸಿನಲ್ಲೆದ್ದ ಮುನಿಸು ತಗ್ಗಿತು. ಅದರ ಸ್ಥಾನವನ್ನು ದುಃಖ ಆಕ್ರಮಿಸಿತು. ಅವಳ ಕಣ್ಣುಗಳಿಂದ ಹನಿಗಳು ಉದುರಿದುವು.

"ಇಲ್ಲ, ಡಾಲಿ. ಇನ್ನು ಮುಂದೆ ನಾನು ನಿನ್ನ ಹೊಡೆಯೋದಿಲ್ಲ. ಬಾ, ಬಿಸ್ಕತ್ತು ಕೊಡುತ್ತೇನೆ." ಬೋಜು ತೋಳು ಚಾಚಿ ಡಾಲಿಯನ್ನು ತಬ್ಬಿಕೊಂಡಳು.

ಆ ಹುಡುಗನ ಕಣ್ಣುಗಳಲ್ಲಿ ತುಳುಕುತಿದ್ದ ದ್ವೇಷ-ಈರ್ಷೆಗಳನ್ನು ಕಂಡು ಬೋಜು ಬೆಚ್ಚಿದಳು.

ಒಂದು ದಿನ ನೆರೆಯ ಗ್ರಾಮದ ಕುಟ್ಟಪ್ಪನಿಂದ-ತನ್ನ ಮಗುವಿನ ಹೆಸರಿಡುವ ಹಬ್ಬಕ್ಕೆ ಬರಬೇಕೆಂದು ಬಿದ್ದು ಬೋಜು ಇವರಿಗೆ ಆಮಂತ್ರಣ ಬಂತು. ಬಿದ್ದು ತೋಟದಲ್ಲಿ ಗೇಯಲು ಆಳುಗಳನ್ನು ಕರೆತರಲು ಕನ್ನಡಜಿಲ್ಲೆಗೆ ಹೋಗಿದ್ದ. ಆದುದರಿಂದ ಬೋಜು ಒಬ್ಬಳೇ ಹೆಸರಿಡುವ ಹಬ್ಬಕ್ಕೆ ಹೋಗಬೇಕಾಯಿತು. ಆಕೆ ಅಂದು ಚೆಂದದ ಪಟ್ಟಿ ಸೀರೆಯುಟ್ಟು, ಹೆರಳು ಹಾಕಿ ಅಲಂಕಾರ ಮಾಡಿಕೊಂಡು ಹೊರಟಳು. ಜತೆಯಲ್ಲಿ ಡಾಲಿ ಇದ್ದ. ದಾರಿ ತೋರಿಸಲು ಆಳೊಬ್ಬ ಇದ್ದ. ಆಕೆಯ ಕಂಕುಳಲ್ಲಿ ಪುಟ್ಟ ಚೆಂಗುಮಣಿ ಇದ್ದ.

ಬಂಗ್ಲೆಯಿಂದ ಅರೆಮೈಲು ದೂರ ಹೋದೊಡನೆ ಡಾಲಿ ಹಿಂದೆ ನಿಂತು "ಚಿಕ್ಕವ್ವಾ" ಎಂದು ಕೂಗಿದ.

"ಡಾಲಿ, ಏನಾಯಿತು?"

"ಚಿಕ್ಕವ್ವ, ಕಾಲು ನೋಯುತ್ತೆ. ನನ್ನ ಎತ್ತಿಕೋ!"

ಓಡಾಡಿ ನಲಿಯಬೇಕಾದ ಹತ್ತು ವರ್ಷದ ಹುಡುಗ "ನನ್ನನ್ನು ಎತ್ತಿಕೋ" ಎಂದು ಹಟ ಹಿಡಿದು ಅಳುವುದನ್ನು ಕಂಡು, ಬೋಜು ಆಶ್ಚರ್ಯಚಕಿತಳಾದಳು. ಅವಳು ಅಳು ಕೆಂಪನ ಮೋರೆಯನ್ನು ನೋಡಿ "ಕೆಂಪ, ನೀನು ಹುಡುಗನನ್ನು ಎತ್ತಿಕೊ!" ಎಂದು ಆಜ್ಞಾಪಿಸಿದಳು. ಕೆಂಪ ಜಂಡೆ ಸರಿದು ಡಾಲಿಯನ್ನು ಎತ್ತಿಕೊಳ್ಳಲೆಂದು ಕೈ ಚಾಚಿದ.

"ಚಿಕ್ಕವ್ವ; ಕೆಂಪ ಎತ್ತೋದು ಬೇಡ. ನೀನು ಎತ್ತಿಕೋ." ಡಾಲಿ ಶಂಖವಾದ್ಯವನ್ನು ಬಾರಿಸತೊಡಗಿದ.

"ನನ್ನ ಕೈಯಲ್ಲಿ ಪಾಪ ಇದ್ದಾನೆ."

"ಪಾಪನ್ನ ಕೆಂಪನ ಕೈಗೆ ಕೊಡು." ಡಾಲಿ ನೆಲದ ಮೇಲೆ ಕುಕ್ಕುರಿಸಿ ಚೀರಲಾಂಭಿಸಿದ.

ಹುಡುಗನ ಹಟವನ್ನು ಕಂಡು ಬೋಜುವಿಗೆ ಸಿಟ್ಟುಬಂತು. ಅವಳು ಚೆಂಗುಮಣಿಯನ್ನು ಆಳಿನ ಕೈಗೆ ಕೊಟ್ಟಳು; ಡಾಲಿಯನ್ನು ಎತ್ತಿಕೊಳ್ಳುತ್ತಾ "ನನ್ನ ಜೀವ ಹಿಂಡೋಕೆ ಇರೋನು ನೀನು!" ಎಂದಳು.

* * *

ಡಾಲಿಗೆ ಹನ್ನೆರಡು ವರ್ಷ ಪ್ರಾಯವಾಯಿತು. ತಂದೆ ಮಗನನ್ನು ಓದಲೆಂದು ಮಡಿಕೇರಿ ಹಾಸ್ಟೆಲಿಗೆ ಸೇರಿಸಿದ. ಹಾಸ್ಟೆಲಿನಲ್ಲಿ ಡಾಲಿ ಇತರ ಹುಡುಗರ ಒಡನಾಟದಿಂದ ಸುಧಾರಣೆ ಹೊಂದಿಯಾನು; ತನ್ನ ಹಟಮಾರಿತನವನ್ನು ತೊರೆದಾನು—ಎಂದು ಬೋಜು ಗ್ರಹಿಸಿದ್ದಳು. ಆದರೆ ಡಾಲಿ ಹಾಸ್ಟೆಲಿನ ಹುಡುಗರೊಡನೆ ಗೆಳೆತನ-ಸಲುಗೆಗಳನ್ನು ಬೆಳಸಲಿಲ್ಲ. ಉಳಿದ ಹುಡುಗರು ಆಟ-ವಿನೋದಗಳಲ್ಲಿ ಮಗ್ನರಾಗಿದ್ದಾಗ, ಡಾಲಿ ಗುಡಿಗುಮ್ಮನಂತೆ ಮೂಲೆಯೊಂದನ್ನು ಸೇರಿಕೊಳ್ಳುತಿದ್ದ.

ರಜೆಯಲ್ಲಿ ಡಾಲಿ ಮನೆಗೆ ಬಂದ. ಹಾಸ್ಟೆಲ್ ವಾಸದಿಂದ ಆತನ ಹಟಮಾರಿತನ-ಈರ್ಷೆಗಳು ಕಡಿಮೆಯಾಗುವುದರ ಬದಲು ಹೆಚ್ಚಿದಂತೆ ಬೋಜುವಿಗೆ ತೋರಿತು. ಅವನು ಇದು ಬೇಕು ಇದು ಬೇಕು

ಎಂದು ಚಿಕ್ಕವ್ವನನ್ನು ಕಾಡುತ್ತಿದ್ದ. ಅವನ ಬೇಕು - ಬಯಕೆಗಳಿಗೆ ಅಡ್ಡಿ ತಾರದೆ ಬೋಜು, ಅವನು ಹೇಳಿದ ತಿಂಡಿ - ತಿನಿಸುಗಳನ್ನೆಲ್ಲಾ ಆಟ್ಟು ಉಣಬಡಿಸುತಿದ್ದಳು.

ಚಿಕ್ಕವ್ವ ಚೆಂಗುಮಣಿಯನ್ನು ಮುದ್ದಾಡುವುದನ್ನು ಕಂಡಾಗ, ಆಕ್ಕರೆಯಿಂದ ಮಾತಾಡಿಸುವುದನ್ನು ಕಂಡಾಗ, ಡಾಲಿಗೆ ಸಹನೆಯಾಗ ಲೊಲ್ಲದು. ತನ್ನ ಹಕ್ಕಾದ ಆಕ್ಕರೆಯನ್ನು ಚೆಂಗುಮಣಿ ಕಸಿದುಕೊಳ್ಳು ತ್ತಿರುವನು—ಎಂದು ಡಾಲಿಯ ಎಣಿಕೆಯಾಗಿತ್ತು. ಅವನು ಚಿಕ್ಕವ್ವನ ಕಣ್ಣು ತಪ್ಪಿಸಿ, ನಾಲ್ಕುವರುಷದ ಚೆಂಗುಮಣಿಗೆ ಕೀಟಲೆ ಮಾಡತೊಡ ಗಿದ.

ಒಮ್ಮೆ ಚೆಂಗುಮಣಿ "ಅವ್ವ ನನ್ನ ಹೊರಗೆ ಕರೆದುಕೊಂಡು ಹೋಗು." ಎಂದು ಅತ್ತು ಕಾಡಿದ. ಬೋಜುವಿಗೆ, ಅಳುಗಳು ನಿವಿನು ತಂದ ಆಕ್ಕಿಯನ್ನು ಆಳೆದು ಆಚ್ಚುಕಟ್ಟಾಗಿ ಇರಿಸುವ ಕೆಲಸವಿತ್ತು. ಅವಳು ಡಾಲಿಯನ್ನು ಕರೆದು "ನೋಡು, ನೀನು ಚೆಂಗುಮಣಿಯನ್ನು ಸ್ವಲ್ಪ ಅಡ್ಡಾಡಿಸಿಕೊಂಡು ಬಾ" ಎಂದು ಹೇಳಿದಳು.

ಡಾಲಿ ಚೆಂಗುಮಣಿಯ ಕೈಹಿಡಿದು ಬಂಗ್ಲೆಯಿಂದ ಹೊರಗೆ ನಡೆಸಿಕೊಂಡು ಹೋದ. ಚಿಕ್ಕವ್ವ ಮಗುವನ್ನು ನೋಡಿಕೊಳ್ಳಲು ಹೇಳಿದಳಲ್ಲ—ಎಂದು, ಅವನ ಮನಸ್ಸು ಉರಿದೆದ್ದಿತು. ಅವನು ಹುಡು ಗನ ಕೈಹಿಡಿದು ನಡೆಸಿಕೊಂಡು ಹೋಗುತಿದ್ದಾಗ, ಕಾಫಿ ಗಿಡಗಳ ನಂದಿ ನಲ್ಲಿ ಬೆಳೆದು ನಿಂತ ತುರುಚೆ ಗಿಡವನ್ನು ನೋಡಿದ. ಗಿಡದ ನೆತ್ತಿಯಲ್ಲಿ ಹೂಗಳು ಗೊಂಡೆಗೊಂಡೆಯಾಗಿ ಬೆಳೆದಿದ್ದುವು. ಅವುಗಳನ್ನು ಕಾಣು ತ್ತಲೆ ಡಾಲಿಯ ಮನಸ್ಸಿನಲ್ಲಿ ಕಿಡಿಗೇಡಿತನದ ಆಲೋಚನೆಯೊಂದು ಸುಳಿಯಿತು. ಅವನು ಕೈಚಾಚಿ ಬೆರಳತುದಿಯಿಂದ ತುರುಚೆಗೊಂಡೆಗಳ ದಂಟನ್ನು ಹಿಡಿದು ಕೆತ್ತ; ಅದನ್ನು ಚೆಂಗುಮಣಿಯ ಕಣ್ಣಿನಮುಂದೆ ಹಿಡಿದು "ಹಣ್ಣು; ಹಣ್ಣು!" ಎಂದು ಹೇಳಿದ.

"ಶಾ, ತಾ!" ಚೆಂಗುಮಣಿ ಆ ಹಸಿರುಗೊಂಡೆಗಳನ್ನು ಕಣ್ಣು ಗಲಿಸಿ ನೋಡುತ್ತಾ ಕೈ ಚಾಚಿದ.

"ಬಾಯಿಯನ್ನು ಆ ಅನ್ನು. ಬಾಯೊಳಗೆ ಹಾಕುತ್ತೇನೆ."

ಚೆಂಗುಮಣಿ ಆ ಗೊಂಡೆಹೂಗಳನ್ನು ಹಣ್ಣೆಂದೇ ಗ್ರಹಿಸಿದ. ಅವನು ಆ ಎಂದು ಬಾಯ್ದೆರೆದ. ಡಾಲಿ ಬೆರಳತುದಿಯಲ್ಲಿ ಹಿಡಿದ ತುರುಚೆ ಹೂವನ್ನು ಹಸುಳೆಯ ಬಾಯೊಳಗೆ ತುರುಕಿಬಿಟ್ಟ. ಚೆಂಗು ಮಣಿ ಅದನ್ನು ಹಣ್ಣೆಂದೇ ಭಾವಿಸಿ ಹಲ್ಲುಗಳಿಂದ ಕಡಿದು ಜಗಿದು ಬಿಟ್ಟ.

ತುರುಚೆಹೂವಿನ ಮುಳ್ಳುಗಳು ಚೆಂಗುಮಣಿಯ ನಾಲಗೆ, ಅಂಗಲು, ಒಳದವಡೆಗಳಿಗೆ ಚುಚ್ಚಿಕೊಂಡುವು. ಇನ್ನೊಂದು ಕ್ಷಣದಲ್ಲಿ, ಆತನ ಬಾಯೊಳಗೆ ಉರಿ-ನವೆತಗಳೆದ್ದುವು. ಅವನು ಉರಿತವನ್ನು ತಾಳ ಲಾಗದೆ ದೊಡ್ಡದನಿಯಲ್ಲಿ ಎದೆಯೊಡೆಯುವಂತೆ ಚೀರಿದ.

ಚೆಂಗುಮಣಿ ಎಬ್ಬಿಸಿದ ಬೊಬ್ಬೆ ಹಸನುಗೊಳಿಸಿದ ಆಕ್ಕಿಯನ್ನು ಡಬ್ಬಿಗಳಿಗೆ ತುಂಬುತಿದ್ದ ಬೋಜುವಿಗೆ ಕೇಳಿಸಿತು. ಹುಡುಗ ಏನೋ ಒಂದು ಅಪಾಯವನ್ನು ಎಳೆದು ವೈನೇಲೆ ಹಾಕಿಕೊಂಡನೆಂದೆಣಿಸಿ, ಅವಳು ತನ್ನ ಕೆಲಸವನ್ನು ಅರ್ಧದಲ್ಲಿ ತೊರೆದು ಓಡಿಬಂದಳು.

ಚೆಂಗುಮಣಿ ನೆಲದ ಮೇಲೆ ಬಿದ್ದು ಹೊರಳಾಡುತಿದ್ದ. ಅವನ ತುಟಿಗಳಿಗೆ ತುರುಚೆ ಹೂವಿನ ಮುಳ್ಳುಗಳು ಅಂಟಿಕೊಂಡಿದ್ದುವು.

"ಡಾಲಿ, ಏನಾಯಿತು?" ಬೋಜು ಮಗುವನ್ನೆತ್ತಿಕೊಳ್ಳುತ್ತಾ ಕೇಳಿದಳು.

"ಚೆಂಗುಮಣಿ ತುರುಚೆಹೂವನ್ನು ಕೆತ್ತು ಬಾಯೊಳಗೆ ಹಾಕಿ ಕೊಂಡು ಬಿಟ್ಟ." ಡಾಲಿ ಸುಳ್ಳು ಹೇಳಿದ.

ಬೋಜು ಸೀರೆಯ ಸೆರಗಿನಿಂದ ಚೆಂಗುಮಣಿಯ ಬಾಯಿ ಮತ್ತು ತುಟಿಗಳನ್ನು ಒರೆಸಿ, ಮುಳ್ಳುಗಳನ್ನು ತೆಗೆದಳು. ಬಂಗ್ಲೆಗೆ ಕರೆದು ಕೊಂಡು ಹೋಗಿ ತುಟಿಬಾಯಿಗಳಿಗೆ ಬೆಣ್ಣೆಯನ್ನು ಲೇಪಿಸಿದಳು.

ಚೆಂಗುಮಣಿಯ ಬಾಯಿ ಉರಿಯುವುದು ನಿಂತಿತು. ಅವನು ಅಳು ನಿಲ್ಲಿಸಿದ. ಬೋಜು "ಚೆಂಗುಮಣಿ, ನೀನೇಕೆ ತುರುಚೆ ಹೂವನ್ನು ಬಾಯೊಳಗೆ ಹಾಕಿಕೊಂಡೆ?" ಎಂದು ಕೇಳಿದಳು.

"ಅಣ್ಣ ಕೊತ್ತ; ಅಣ್ಣ ಕೊತ್ತ." ಚೆಂಗುಮಣಿ ತೊದಲು ದನಿಯನ್ನೆತ್ತಿ ಡಾಲಿಯ ಕಡೆ ಬೆರಳು ತೋರಿಸಿದ.

"ಸುಳ್ಳು; ಸುಳ್ಳು!" ಡಾಲಿ ದೊಡ್ಡ ದನಿಯಲ್ಲಿ ಅಬ್ಬರಿಸಿದ; "ನಾನು ತುರುಚೆಹೂವನ್ನು ಕೊಡಲಿಲ್ಲ; ಚೆಂಗುಮಣಿಯೇ ಕೆತ್ತು ಬಾಯೊಳಗೆ ಹಾಕಿಕೊಂಡ."

ಡಾಲಿಯೇ ತುರುಚೆ ಹೂವನ್ನು ಕೆತ್ತು ಚೆಂಗುಮಣಿಯ ಬಾಯಿಗೆ ಹಾಕಿರಬೇಕೆಂದು ಬೋಜುವಿನ ಅಂತರಂಗ ಹೇಳಿತು; ಆದರೆ ಅವಳು ವಿಚಾರಿಸಿ ಮಲಮಗನನ್ನು ದಂಡಿಸುವ ಗೋಜಿಗೆ ಹೋಗಲಿಲ್ಲ.

ಇನ್ನೊಂದು ದಿನ ಬೋಜು ಹುಡುಗರಿಬ್ಬರನ್ನು ಮೀಯಿಸಲೆಂದು ಮೈಗೆ ಎಣ್ಣೆಯುದ್ದಿ ಬಿಟ್ಟವ್ವಳು. ಅವರು ಬಚ್ಚಲಿಗಿಳಿದು ತೊಟ್ಟಿಯಿಂದ ನೀರು ತೆಗೆದು ಪರಸ್ಪರ ಎರಚಾಡಿದರು. ಡಾಲಿ ಡಬ್ಬಿಯಲ್ಲಿ ತುಂಬಿದ ನೀರನ್ನೆತ್ತಿ ಚೆಂಗುಮಣಿಯ ಮೇರೆಗೆ ಸೇಚಿಸಿದ.

ಚೆಂಗುಮಣಿ ಎರಡು ಕೈಗಳಿಂದಲೂ ಕಣ್ಣುಗಳನ್ನು ಉಜ್ಜಿ ಕೊಂಡು "ಉರಿ; ಉರಿ!" ಎಂದು ಕಿರುಚಿದ.

ಬೋಜು ಮಧ್ಯಾಹ್ನ ಸಾರುಮಾಡಲೆಂದು ಕೋಳಿ ಕುಯ್ದು ತುಪ್ಪಳ ಕೀಳುತಿದ್ದಳು. ಮಗನ ಕಿರುಚಲನ್ನು ಕೇಳಿ, ಅವಳು ಆ ಕೆಲಸ ವನ್ನು ಅರ್ಧದಲ್ಲಿ ಬಿಟ್ಟು ನೀರಮನೆಗೆ ಓಡಿಬಂದಳು. ಅವಳು ಗಾಬರಿ ಯಿಂದ ಹುಡುಗನನ್ನು ಎತ್ತಿಕೊಂಡು "ಚೆಂಗುಮಣಿ, ಏನಾಯಿತು?" ಎಂದು ಕೇಳಿದಳು.

"ಅವ್ವಾ, ಕಣ್ಣುರಿಯುತ್ತೆ; ಕಣ್ಣೊಳಗೆ ಕೆಚ್ಚು!" ಕೆಂಪಡರಿದ ಕಣ್ಣು ಗಳಿಂದ ನೀರು ಸುರಿಸುತ್ತಾ ಚೆಂಗುಮಣಿ ಉಸುರಿದ.

"ಡಾಲಿ, ನೀನೇನು ಮಾಡಿದೆ?" ಬೋಜು ಮಲಮಗನ ಕಡೆ ದೃಷ್ಟಿ ಹೊರಳಿಸಿದಳು.

"ನಾನೇನೂ ಮಾಡಿಲ್ಲ." ಡಾಲಿ ತಾನು ಅಪರಾಧಿಯಲ್ಲನೆಂಬ ದನಿಯಲ್ಲಿ ಉಸುರಿದ: "ನಾನಿಬ್ಬರೂ ತೊಟ್ಟಿಯಿಂದ ನೀರು ತೆಗೆದು ಎರಚಾಡುತ್ತಿದ್ದೆವು."

ಬೋಜು, ಹುಡುಗನ ಕಣ್ಣೊಳಗೆ ನೀರಲ್ಲಿದ್ದ ಕಸ ಬಿದ್ದಿರಬಹುದೆಂದು ಊಹಿಸಿದಳು. ಅವಳು ತಿಳಿನೀರಿಂದ ಚೆಂಗುಮಣಿಯ ಕಣ್ಣುಗಳನ್ನು ತೊಳೆದಳು. ತಿಳಿನೀರಿನ ಸೋಂಕಿನಿಂದ ಅತನ ಕಣ್ಣುರಿ ಶಾಂತವಾಯಿತು.

ಬೋಜು ಮಗುವನ್ನು ಮೀಯಿಸಲು ನೀರು ತೆಗೆಯಲೆಂದು ಡಬ್ಬಿಯನ್ನು ಎತ್ತಿಕೊಂಡಳು. ಡಬ್ಬಿಯ ತಳದಲ್ಲಿ ನಾಲ್ಕು ಚಪ್ಪಟೆ ಬೀಜಗಳು ತೋರಿದುವು. ಅವೇನೆಂದು ಅವಳು ಬೆರಳುಗಳಿಂದ ಹೆಕ್ಕಿ ಪರೀಕ್ಷಿಸಿದಳು. ಅವು ಮೆಣಸಿನ ಬೀಜಗಳಾಗಿದ್ದುವು.

ಬೋಜುವಿನ ಚಿತ್ತದಲ್ಲಿ ಸಂದೇಹ ಸುಳಿಯಿತು. ಅವಳು ಡಬ್ಬಿಯನ್ನೆತ್ತಿ ತಳದಲ್ಲಿ ಉಳಿದ ನಾಲ್ಕು ಹನಿಗಳನ್ನು ನಾಲಗೆ ತುದಿಗೆ ಸುರಿದುಕೊಂಡಳು. ಆಕೆಯ ನಾಲಗೆ ಚುರ್ರೆಂದಿತು. ಅದು ಮೆಣಸಿನ ನೀರೆಂದು ಅವಳಿಗೆ ಹೊಲಬಾಯಿತು.

"ಡಾಲಿ, ಡಬ್ಬಿಯ ನೀರಲ್ಲಿ ಮೆಣಸಿನಕಾಯಿ ನುರಿದವರು ಯಾರು?" ಬೋಜು ತಲೆ ಎತ್ತಿ ಡಾಲಿಯ ಮೋರೆಯನ್ನು ನೋಡಿದಳು.

"ನಾನೇನು ಬಲ್ಲೆ?" ಡಾಲಿ ಚಿಕ್ಕವ್ವನಿಗೆ ಮೋರೆಗೊಡದೆ ತಲೆ ತಗ್ಗಿಸಿ ಮಾನ್ರುಡಿದಳು: "ಡಬ್ಬಿಯಲ್ಲಿ ನೀರಿತ್ತು. ಅಟಕ್ಕೆಂದು ಚೆಂಗು ಮಣಿಯ ಮೈಮೇಲೆ ಸುರಿದೆ."

ಅತನ ದನಿಯಲ್ಲಿ ತುಂಬಿದ ನಡುಕ, ಬಿಳುಪೇರಿದ ಅತನ ಮೋರೆ,— ಇವು ಡಾಲಿಯಾಡಿದ ಮಾತು ಹುಸಿ ಎಂದು ಬೋಜುವಿಗೆ ಅರುಹಿದುವು.

ಬೋಜುವಿನ ಅಂತರಂಗದಿಂದ ಮುನಿಸಿನ ಜ್ವಾಲಾಮುಖಿ ಸಿಡಿದೆದ್ದಿತು. ಅವಳು ಕೈಯಲ್ಲಿ ಹಿಡಿದ ಡಬ್ಬಿಯನ್ನು ಡಾಲಿಯ ನೆತ್ತಿಗೆ ಜಿಪ್ಪಿ, ಕೈಯಿಂದ ಡಬಡಬನೆ ಗುದ್ದ ತೊಡಗಿದಳು.

ಡಾಲಿ ಬಚ್ಚಲುಮನೆಯ ಹಂಚುಗಳೆಲ್ಲ ಸಿಡಿದು ಹಾರಿ ಹೋಗುವಂತೆ ಕಿರುಚಿದ. ಅತನ ಕಿರುಚಲು ಆಗ ತಾನೇ ತೋಟದಿಂದ ಮನೆಗೆ ಮರಳುತ್ತಿದ್ದ ಬಿದ್ದುವಿಗೆ ಕೇಳಿಸಿತು. ಅವನು ನೇರಾಗಿ ಬಚ್ಚಲು ಮನೆಗೆ ಓಡಿಬಂದ. ಬೋಜು ಕೋಣನನ್ನು ಬಡಿಯುವಂತೆ ಡಾಲಿಯನ್ನು ಹಿಡಿದು ಹೊಡೆಯುವುದನ್ನು ಕಂಡು ಅವನಿಗೆ ಆಶ್ಚರ್ಯವಾಯಿತು.

"ಬೋಜು, ಇದೇನು ನೀನು ಮಾಡುತ್ತಿರುವುದು?" ಬಿದ್ದು ಮಡದಿಯ ಕೈ ಹಿಡಿದು ತಡೆಯುತ್ತಾ ಹೇಳಿದ: "ನೀನು ಹುಡುಗನನ್ನು ಹೊಡೆದು ಕೊಂದು ಬಿಡುವೆಯಲ್ಲ!"

"ಮಾಡಿದ ಕೇಡಿಗೆ ಹೊಡೆದು ಕೊಂದರೂ ತಪ್ಪಾಗದು." ಬೋಜು ಕೆರಳಿದ ಹುಲಿಯಂತೆ ಅಬ್ಬರಿಸಿದಳು.

"ಅವನು ಮಾಡಿದ ಕೇಡಾದರೂ ಏನು?" ಬದ್ದು ವಿಸ್ಮಯದ ದನಿಯಲ್ಲಿ ಕೇಳಿದ.

"ಇನ್ನೇನು ಮಾಡಬೇಕಾಗಿದೆ!" ಬೋಜು ಸಿಡುಕುದನಿಯಲ್ಲಿ ಮಾರುಲಿದಳು: "ನೀರಿಗೆ ಗಾಂಧಾರಿಮೆಣಸು ಮುರಿದು ಚೆಂಗುಮಣಿಯ ಕಣ್ಣು-ಮೋರೆಗಳ ಮೇಲೆ ಸುರಿದಿದ್ದಾನೆ!"

"ಬೋಜು, ಅಷ್ಟೊಂದು ಕೋಪ ಬೇಡ." ಬಿದ್ದು ಮಡದಿಗೆ ಸಂತೈಸುವ ಸ್ವರದಲ್ಲಿ ಹೇಳಿದ: "ಅದು ತಾಯಿ ಇಲ್ಲದ ತಬ್ಬಲಿ ಮಗು."

ತಾಯಿ ಇಲ್ಲದ ತಬ್ಬಲಿ ಮಗು!

ಈ ನುಡಿ ಬೋಜುವಿನ ಎದೆಯನ್ನು ಇರಿಯುವ ಈಟಿಯಾಯಿತು. ತಬ್ಬಲಿ ಮಗು ಚೆಂಗುಮಣಿಯ ಬಾಯಿಗೆ ತುರುಚೆಹೂವನ್ನು ತುರುಕಬಹುದು; ಕಣ್ಣುಗಳಿಗೆ ಮೆಣಸಿನ ನೀರನ್ನು ಎರಚಬಹುದು; ಕಾಡಿ ತನ್ನನ್ನು ಹಿಂಡಿ ಹಿಪ್ಪೆ ಮಾಡಬಹುದು! ಅದು ತಪ್ಪಲ್ಲ; ತಾನು ಅತನಿಗೆ ಹೊಡೆದುದು ಮಾತ್ರ ಮಹಾಪರಾಧ!

ಬೋಜುವಿಗೆ ತಾಳಿಕೊಳ್ಳಲಾಗಲಿಲ್ಲ. ಅವಳು ಮುಲಗುವ ಕೋಣೆಯೊಳಗೆ ಓಡಿ ಹೋದಳು; ಮಂಚದ ಮೇಲೆ ಹೊರಳಿ ಕಣ್ಣೀರು ಸುರಿಸಿದಳು. ಎದೆ ತೆರವಾಗುವ ತನಕ ಅತ್ತಳು.

* * * *

ರಜ ಮುಗಿದು ಡಾಲಿ ಯಾವಾಗ ಹಾಸ್ಟೆಲಿಗೆ ಹೋದಾನೆಂದು ಬೋಜು ಉತ್ಸುಕತೆಯಿಂದ ನಿರೀಕ್ಷಿಸತೊಡಗಿದಳು. ಶಾಲೆ ತೆರೆಯಲು ಇನ್ನೂ ಒಂದು ವಾರವಿದೆ ಎನ್ನುವಾಗ, ಡಾಲಿ ಜ್ವರ ಹಿಡಿದು ಮಲಗಿದ. ಮಲೇರಿಯ ಜ್ವರವಿರಬಹುದೆಂದು ಭಾವಿಸಿ ಆತನಿಗೆ ಆಸ್ಪತ್ರೆಯಿಂದ ಮಿಕ್ಸ್‌ಚರ್ ತರಿಸಿಕೊಟ್ಟರು.

ನಾಲ್ಕು ದಿನ ಕಳೆದರೂ ಜ್ವರ ಬಿಡಲಿಲ್ಲ. ಬಿದ್ದುವಿಗೆ ಗಾಬರಿಯಾಯಿತು. ಅವನು ಮಡಿಕೇರಿಗೆ ಕಾರು ತೆಗೆದುಕೊಂಡು ಹೋಗಿ ಡಾಕ್ಟರನ್ನು ಕರೆದುಕೊಂಡು ಬಂದ. ಡಾಕ್ಟರರು ಹುಡುಗನ ಮೈಯನ್ನು ಪರೀಕ್ಷೆಮಾಡಿ "ಟಾಯ್‌ಫಾಯ್ಡ್ ಜ್ವರದ ಲಕ್ಷಣ ಕಂಡು ಬರುತ್ತಿದೆ." ಎಂದು ಗಂಭೀರಧ್ವನಿಯಲ್ಲಿ ಹೇಳಿದರು.

"ಟಾಯ್‌ಫಾಯ್ಡ್ ಅಂಟುರೋಗ." ಬಿದ್ದು ಉಸುರಿದ: "ಆಸ್ಪತ್ರೆಗೆ ಸಾಗಿಸಿ ಬಿಡುವುದು ಉತ್ತಮ."

"ಆಸ್ಪತ್ರೆಯಲ್ಲಿ ಹುಡುಗನನ್ನು ನೋಡಿಕೊಂಡು ಆರೈಕೆ ಮಾಡುವವರು ಯಾರಿದ್ದಾರೆ?" ಬೋಜು ಪ್ರಶ್ನಿಸಿದಳು.

"ಟಾಯ್‌ಫಾಯ್ಡ್ ಇನಾಕ್ಯುಲೇಶನ್ ಮಾಡಿಸಿಕೊಂಡರೆ ಸಾಕು. ರೋಗ ಅಂಟಲಾರದು." ಡಾಕ್ಟರರು ನುಡಿದರು: "ರೋಗಿಯನ್ನು ಆಸ್ಪತ್ರೆಗೆ ಸಾಗಿಸಿದರೆ ಅಲ್ಲಿ ಆರೈಕೆಗೆ ಒಬ್ಬರು ನಿಲ್ಲ ಬೇಕಾಗುವುದು. ಟಾಯ್‌ಫಾಯ್ಡ್ ಜ್ವರಕ್ಕೆ ಆರೈಕೆ ಮತ್ತು ಪಥ್ಯಗಳೇ ಮುಖ್ಯ. ನಾನು ಎರಡು ಮೂರು ದಿನಗಳಿಗೊಮ್ಮೆ ಬಂದು ರೋಗಿಯನ್ನು ನೋಡಿಕೊಳ್ಳುವೆನು."

ಡಾಲಿಯನ್ನು ಮನೆಯಲ್ಲಿಯೇ ಇರಿಸಿಕೊಂಡು ಆರೈಕೆ ಮಾಡುವುದೆಂದು ಆ ದಂಪತಿಗಳು ನಿಶ್ಚಯಿಸಿದರು. ಡಾಕ್ಟರರು ಮನೆಯವರಿಗೆಲ್ಲ ಟಾಯ್‌ಫಾಯ್ಡ್ ಇನಾಕ್ಯುಲೇಶನ್ ಮಾಡಿದರು. ಅವರು "ಡಾಲಿಗೆ ನೀ ನೀರು ಮತ್ತು ಕಿತ್ತಳೆ ಹಣ್ಣಿನ ರಸ ಮಾತ್ರ ಕೊಟ್ಟರೆ ಸಾಕು." ಎಂದು ಪಥ್ಯ ಹೇಳಿದರು. ಅವರು ಆಸ್ಪತ್ರೆಗೆ ಹೋದ ಮೇಲೆ ರೋಗಿಗೆ ಟಾಯ್‌ಫಾಯ್ಡ್ ಮಿಕ್ಸ್‌ಚರ್ ಕೊಟ್ಟು ಕಳುಹಿದರು.

ತಾಲಿಯ ಆರೈಕೆಗೆ ಬೋಜುನೇ ಸೊಂಟಕಟ್ಟಿ ನಿಂತಳು. ಆತನ ಆರೈಕೆಯಲ್ಲಿ ಅವಳು ಯಾವ ಬಗೆಯ ಉಪೇಕ್ಷೆಯನ್ನೂ ತೋರಿಸಲಿಲ್ಲ. ಅವನ ಉಡುಪು ಮತ್ತು ಹೊದಿಕೆಗಳನ್ನು ತಾನೇ ಮಡಿ ಮಾಡುತ್ತಿದ್ದಳು; ಆತನ ಮಲಮೂತ್ರಗಳನ್ನು ತಾನೇ ಗೋಚಿ ಚೆಲ್ಲಿ, ಮಲಗುವ ಕೋಣೆಯನ್ನು ಶುಚಿಗೊಳಿಸುತ್ತಿದ್ದಳು.

ಬಾಧಿಸಿದ ವಿಷಮಜ್ವರ ಡಾಲಿಯ ನೈಯನ್ನು ಹಿಂಡಿ ಹಿಪ್ಪೆಯಾಗಿಸಿತು. ಅವನ ಶಕ್ತಿಯನ್ನು ಪೂರ್ತಿ ಕುಂದಿಸಿತು. ಆತ ಹಾಸಿಗೆಯಲ್ಲಿ ಕುಳ್ಳಿರುವಷ್ಟು ಸಹ ಚೈತನ್ಯವಿಲ್ಲದಾವ. ದೇಹದ ತ್ರಾಣ ಕುಂದಿದಂತೆ ಆತನಲ್ಲಿ ಸಿಡುಕು ಮತ್ತು ಹಟಗಳು ಇಮ್ಮಡಿಸಿದವು.

ಅಂದು ರಾತ್ರಿಯ ಊಟಕ್ಕೆ ಸಂಜಿಕೊಳ್ಳಲೆಂದು ಬೋಜು ಕೋಳಿಮಾಂಸವನ್ನು ಕತ್ತರಿಸಿ ಮೈದಾಹಿಟ್ಟಿನಲ್ಲಿ ಅದ್ದಿ ಎಣ್ಣೆಗೆ ಹಾಕಿ ಕರಿಯುತ್ತಿದ್ದಳು. ಕರಿದ ಮಾಂಸದ ಕಂಪು ಘನ್ಮೆಂದು ಮನೆಯೊಳಗೆಲ್ಲಾ ತುಂಬಿಕೊಂಡಿತು.

ಮಾಂಸವನ್ನು ಕರಿದು ಮುಗಿಸಿದ ಮೇಲೆ ಬೋಜು ಒಂದು ಗ್ಲಾಸು ಬೇನೀರಿಗೆ ಒಂದು ಚಮ್ಚ ಗ್ಲುಕೋಸು ಸಕ್ಕರೆಯನ್ನು ಬೆರಸಿ, ಡಾಲಿಯ ಕೋಣೆಗೆ ತಂದಳು.

ಡಾಲಿ ನಿದ್ದಿಸುತ್ತಿರಲಿಲ್ಲ. ಹೆಜ್ಜೆಯ ಸದ್ದು ಕೇಳಿದೊಡನೆ ಆತ ಬಾಗಿಲ ಕಡೆಗೆ ಕಣ್ಣೋಡಿಸಿದ. ಅವನು ಚಿಕ್ಕವ್ವ ಬರುತ್ತಿರುವುದನ್ನು ಕಂಡ. ಅವನು "ಚಿಕ್ಕವ್ವ, ನನಗೇನು ತಂದೆ?" ಎಂದು ಕೇಳಿದ

"ನೋಡು, ನೇ ನೀರು ತಂದಿದ್ದೇನೆ." ಬೋಜು ಉಸುರಿದಳು: "ಸಿಹಿ ಆಗುವ ಹಾಗೆ ಗ್ಲುಕೋಸು ಹಾಕಿದ್ದೇನೆ; ಆ ಮೇಲೆ ಕಿತ್ತಳೆ ಹಣ್ಣಿನ ರಸ ಕೊಡುತ್ತೇನೆ."

"ಚಿಕ್ಕವ್ವ, ನನಗೆ ನೇ ನೀರು ಬೇಡ." ಗ್ಲಾಸನ್ನು ಕೈಯಲ್ಲಿ ಹಿಡಿದುಕೊಂಡು ಡಾಲಿ ನುಡಿದ: "ಅದನ್ನು ಕುಡಿದರೆ ನನಗೆ ವಾಂತಿ ಬರುತ್ತೆ."

"ಹೆಚ್ಚು ತರಲಿಲ್ಲ. ಇರುವುದು ಎರಡೇ ಗುಟುಕು. ಬೇಗ ಕುಡಿದು ಬಿಡು."

"ಚಿಕ್ಕವ್ವ, ನೀನು ಕೋಳಿ ಮಾಂಸವನ್ನು ಕರಿದೆ. ನನಗೆ ಎರಡು ತುಕ್ಕಡ ಕರಿದ ಮಾಂಸವನ್ನು ತಂದುಕೊಡು."

"ಡಾಲಿ, ನಿನ್ನ ಜ್ವರ ಒಮ್ಮೆ ಬಿಡಲಿ; ಬೇಕಾದಷ್ಟು ಮಾಂಸ ಕರಿದು ತಂದುಕೊಟ್ಟೇನು."

ಬೋಜು ಡಾಲಿಯ ಹಣೆಯ ಮೇಲೆ ಕೈಯಿರಿಸಿ ನೋಡಿದಳು. ಜ್ವರದ ತಾಪದಿಂದ ಆತನ ಹಣೆ ಸುಡುತ್ತಲಿತ್ತು.

"ಚಿಕ್ಕವ್ವ, ಈ ಜ್ವರ ಬಿಡಲೊಲ್ಲದು; ನೀನು ಕರಿದ ಮಾಂಸವನ್ನು ತಂದುಕೊಡಲೊಲ್ಲೆ."

"ಬೇಡ ಕಂದ. ನೀನು ಜಾಣ. ಬೇಗ ಕುಡಿದು ಬಿಡು." ಬೋಜು ಹುಡುಗನ ನೆತ್ತಿಯನ್ನು ನೇವರಿಸುತ್ತಾ ಉಸುರಿದಳು.

"ಚಿಕ್ಕವ್ವ, ನಾನು ನೇ ನೀರು ಕುಡಿಯೋಲ್ಲ. ನೀನು ಬೇಗ ಕರಿದ ಮಾಂಸವನ್ನು ತಂದುಕೊಡು."

"ನಿನಗೆ ಕರಿದ ಮಾಂಸ ಕೊಡಬಾರದೂಂತ ಡಾಕ್ಟರು ಹೇಳಿದ್ದಾರೆ."

"ನನಗೆ ಈ ಹಾಳು ನೇ ನೀರು ಬೇಡ." ಎಂದು ಹೇಳಿ ಡಾಲಿ ಕೈಯಿಲ್ಲಿ ಹಿಡಿದ ಗ್ಲಾಸನ್ನೆತ್ತಿ ಬೋಜುವಿನ ಮೋರೆಯ ಮೇಲೆ ಎರಚಿ ಬಿಟ್ಟ.

ನೀರ ಹನಿಗಳು ಬೋಜುವಿನ ಕಣ್ಣುಗಳಿಗೆ ಬಿದ್ದುವು. ಆಕೆಯ ಕಣ್ಣುಗಳು ಉರಿದುವು; ನೀರೆಯ ಸೆರಗಿನಿಂದ ಕಣ್ಣುಗಳನ್ನು ಒರೆಸಿಕೊಂಡಳು.

ಬೋಜು ಡಾಲಿಯ ಕೈಯಿಂದ ಗ್ಲಾಸನ್ನು ತೆಗೆದುಕೊಂಡಳು. ಅವಳು ಮರಳಿ ನೇ ನೀರುಮಾಡಿ ತಂದಳು.

"ಡಾಲಿ, ನೀನು ಜಾಣ. ನಿನಗೆ ಕರಿದ ಮಾಂಸದ ತುಂಡುಗಳನ್ನು ಕೊಡುವೆನು. ಮೊದಲು ನೇ ನೀರನ್ನು ಕುಡಿ."

"ನಿಜನೇ ಚಿಕ್ಕವ್ವಾ?" ಡಾಲಿ ಸಂದೇಹ ತುಂಬಿದ ಕಣ್ಣುಗಳಿಂದ ಬೋಜುವಿನ ಮೋರೆಯನ್ನು ನೋಡಿದ.

"ನಿಜ."

ಹುಡುಗ ಬೋಜುವಿನ ಮಾತನ್ನು ದಿಟವೆಂದು ನಂಬಿ ನೇ ನೀರನ್ನು ಗಟಗಟನೆ ಹೀರಿದ. ಅವನು ತುಟಿಯ ಮೇಲಿಂದ ಗ್ಲಾಸನ್ನು ತೆಗೆದು "ಚಿಕ್ಕವ್ವ, ಬೇಗ ಕರಿದ ಮಾಂಸವನ್ನು ತಂದು ಕೊಡು." ಎಂದು ಅತುರದ ದನಿಯಲ್ಲಿ ಹೇಳಿದ.

"ಡಾಲಿ, ಮೊದಲು ನಿನ್ನ ಜ್ವರ ಬಿಡಲಿ." ಬೋಜು ಉತ್ತರಿಸಿದಳು: "ಆ ಮೇಲೆ ಖಂಡಿತ ಕೊಡುತ್ತೇನೆ."

"ಚಿಕ್ಕವ್ವ, ನೀನು ಸುಳ್ಳು ಹೇಳಿದೆ; ನನಗೆ ಮೋಸ ಮಾಡಿದೆ!" ಡಾಲಿ ಗಂಟಲು ಹರಿದು ಹೋಗುವಂತೆ ಅರಚಿದ.

ಅವನು ಸೋತು ಸೊರಗುವ ವರೆಗೆ ಅಳು ನಿಲ್ಲಿಸಲಿಲ್ಲ.

* * * *

ಎರಡು ದಿನಗಳ ಅನಂತರ ಒಂದಿರುಳು ಬೋಜು ಡಾಲಿಗೆ ಕಿತ್ತಳೆ ಹಣ್ಣಿನ ರಸವನ್ನು ಕುಡಿಸಲು ಹೆಣಗುತ್ತಿದ್ದಳು. ಆ ವೇಳೆಗೆ ಚೆಂಗುಮಣಿ ಒಂದು ಕೈಯಲ್ಲಿ ಬಿಸ್ಕತ್ತನ್ನೂ, ಇನ್ನೊಂದು ಕೈಯಲ್ಲಿ ಬಾಳೆಯ ಹಣ್ಣನ್ನೂ ಹಿಡಿದುಕೊಂಡು ತಾಯನ್ನು ಹುಡುಕುತ್ತಾ ರೋಗಿ ಇದ್ದ ಕೋಣೆಯೊಳಗೆ ನುಗ್ಗಿದ.

ಡಾಲಿಯ ದೃಷ್ಟಿ ಚೆಂಗುಮಣಿಯ ಕೈಗಳಲ್ಲಿದ್ದ ಬಿಸ್ಕತ್ತು ಬಾಳೆ ಹಣ್ಣುಗಳ ಮೇಲೆ ನೆಲಸಿತು. ಅವನು ಕಿತ್ತಳೆರಸದ ಗ್ಲಾಸನ್ನು ತುಟಿಯ ಮೇಲಿಂದ ತೆಗೆದು "ಚಿಕ್ಕವ್ವ, ನನಗೆ ಕೊಡು." ಎಂದು ದನಿ ಎತ್ತಿದ.

"ಏನನ್ನು ಡಾಲಿ?"

"ಬಾಳೆ ಹಣ್ಣು; ಬಿಸ್ಕತ್ತು."

"ನಿನ್ನ ಜ್ವರ ಬಿಡಲಿ."

"ಚಿಕ್ಕವ್ವ, ನೀನು ನನಗೆ ತಿನ್ನೋಕೆ ಕೊಡೋದಿಲ್ಲ; ನನ್ನ ಉಪವಾಸ ಕೆಡುಹುತ್ತಿ."

"ನಿನಗೆ ಕಿತ್ತಳೆ ಹಣ್ಣುರಸ ಕೊಟ್ಟಿದ್ದೇನಲ್ಲ!"

" ಅದು ಬೇಡ. "

" ಬೇರೇನನ್ನೂ ಕೊಡಲಾಗದೆಂದು ಡಾಕ್ಟರರು ಹೇಳಿದ್ದಾರೆ. "

" ಸುಳ್ಳು ! "

" ದಿಟ ಮಗು. "

" ನನಗೆ ಈ ಹಾಳು ಕಿತ್ತಳೆ ಹೆಣ್ಣಿನ ರಸ ಬೇಡ. "

ಎಂದು ಹೇಳಿ ಡಾಲಿ, ರುಂ ಎಂದು ಕೈಯಲ್ಲಿ ಹಿಡಿದ ಗ್ಲಾಸನ್ನು ಗುರಿಯಿಟ್ಟು ಚೆಂಗುಮಣಿಯ ಮೈಮೇಲೆ ಎಸೆದ.

ಬೆಚ್ಚಿಬಿದ್ದ ಚೆಂಗುಮಣಿ ತಾಯ ಆಸರೆ ಪಡೆಯಲೆಂದು ಬೋಜುವಿನ ಪಕ್ಕಕ್ಕೆ ಸರಿದ. ಗ್ಲಾಸು ಪಟಾರನೆ ನೆಲದ ಮೇಲೆ ಬಿದ್ದು ಹತ್ತು ಚೂರಾಯಿತು. ಗಾಜಿನ ತುಂಡೊಂದು ಸಿಡಿದು ಚೆಂಗುಮಣಿಯ ಕಾಲಿಗೆ ತಗಲಿ ಗಾಯಮಾಡಿತು.

" ಅವ್ವಯ್ಯಾ ! " ಚೆಂಗುಮಣಿ ನೆಲದ ಮೇಲೆ ಬಿದ್ದು ಹೊರಳಿದ.

ಬೋಜುವಿನ ಸಹನೆ ಕಟ್ಟಿಯೊಡೆದು ತುಂಡಾಯಿತು. ಅವಳು " ನೀನು ನನ್ನ ಗೋಳು ಹುಯ್ದು ಮಕ್ಕಲಿಕ್ಕೆ ಇರುವ ಮಾರಿ ! " ಎಂದು ಡಾಲಿಯನ್ನು ಶಪಿಸಿದಳು.

ಬೋಜು ಬಿದ್ದ ಹುಡುಗನನ್ನು ಎತ್ತಿಕೊಂಡಳು. ಅವಳು ಚೆಂಗುಮಣಿಯ ಕಾಲಿಗೆ ತಗಲಿದ ಗಾಜಿನ ಚೂರನ್ನು ಕಿತ್ತು ತೆಗೆದಳು. ಗಾಯದಿಂದ ನೆತ್ತರು ಬುಳುಬುಳನೆ ಒಸರಿತು. ಗಾಯವನ್ನು ಕಟ್ಟಿ ರಕ್ತದ ಹರಿತವನ್ನು ನಿಲ್ಲಿಸಬೇಕಾದರೆ ಅವಳು ತುಂಬಾ ಪಾಡುಪಟ್ಟಳು.

ಬೋಜು ಡಾಲಿ ಎಸಗಿದ ಕೇಡನ್ನು ಬಿದ್ದುವಿಗೆ ಉಸುರಿದಳು.

" ಜೋಜು, ನಿನ್ನ ಅತಿ ಮುದ್ದಾಟದಿಂದ ಹುಡುಗ ಹಟಮಾರಿಯಾಗಿ ಹೋದ. "

ಬಿದ್ದು ತಪ್ಪನ್ನು ಆಕೆಯ ಮೇಲೆಯೇ ಹೊರಿಸಿದ.

" ಮುದ್ದಿಸದೆ ಏನು ಮಾಡಲಿ ! " ಬೋಜು ನಿಸ್ಸಹಾಯಕತೆಯ ದನಿಯನ್ನೆತ್ತಿದಳು: " ತಾಯಿ ಇಲ್ಲದ ತಬ್ಬಲಿ ಹುಡುಗ; ಮಲತಾಯಿ ಗೋಳು ಹುಯ್ವಳು—ಎಂಬ ದೂರು ನಿನ್ನ ತಲೆಗೆ ಸುತ್ತಿಕೊಳ್ಳುವುದು! "

" ನೀನು ಡಾಲಿಯನ್ನು ಗೋಳು ಹುಯ್ಯುತ್ತೀಯೆ ಎಂದು ನಾನು ಹೇಳಲಿಲ್ಲವಲ್ಲ. "

" ನೀನು ಹೇಳಲೊಲ್ಲೆ. " ಬೋಜು ಪೇರುಸಿರೊಂದನ್ನು ಹೊರಚೆಲ್ಲಿದಳು : " ಆದರೆ ಜನ ಇದ್ದಾರಲ್ಲ. "

* * * *

ಆ ಇರುಳು ಬೋಜುವಿಗೆ ನಿದ್ದೆ ಹತ್ತಲಿಲ್ಲ. ಅವಳು ಹಾಸಿಗೆಯ ಮೇಲೆ ಅತ್ತಲಿಂದಿತ್ತ ಹೊರಳುತ್ತಾ ಸಮಯವನ್ನು ದೂಡಿದಳು. ಮೇಜಿನ ಮೇಲೆ ಕಿರುದೀಪವೊಂದು ಉರಿದು ಮಬ್ಬು ಬೆಳಕನ್ನು ಹರಸುತಿದ್ದಿತು. ಪಕ್ಕದಲ್ಲಿ ಮಲಗಿದ್ದ ಬಿದ್ದು ಗೊರಕೆ ಹೊಡೆಯುತಿದ್ದ. ಕನಸು ಕಾಣುತ್ತಿದ್ದ ಚೆಂಗುಮಣಿಯ ತುಟಿಯ ಮೇಲೆ ಕಿರುನಗೆ ಮೂಡಿತ್ತು. ಪಕ್ಕದ ಕೋಣೆಯಿಂದ ಡಾಲಿಯ ನರಳಿಕೆಯ ಸದ್ದು ಕೇಳಿಸುತಿತ್ತು.

ಹಳೆಯ ನೆನಪುಗಳೆಲ್ಲ ಬೋಜುವಿನ ಚಿತ್ತವಾಹಿನಿಯಲ್ಲಿ ತೇಲುವ ಕಿರುದೋಣಿಗಳಾದುವು. ಡಾಲಿ ಚೆಂಗುಮಣಿಯ ಹೀರುಕುಪ್ಪಿಯ ಪಾಲುಬೇಕೆಂದು ಹಟಹಿಡಿದುದು, ಆತನ ಕೈಯಿಂದ ಬಿಸ್ಕತ್ತು ಕಸಿದುಕೊಂಡುದು, ಚೆಂಗುಮಣಿಯನ್ನು ಬಿಟ್ಟು ತನ್ನನ್ನು ಎತ್ತಿಕೋ ಎಂದು ಹಟ ಹಿಡಿದುದು, ಆತನ ಬಾಯೊಳಗೆ ತುರುಚೆ ಹೂ ತುರುಕಿದುದು, ಆತನ ಮೋರೆಗೆ ಮೆಣಸಿನ ನೀರು ಎರೆದುದು,— ಬಾವಿಗೆ ಚೆಂಗುಮಣಿಯನ್ನು ದೂಡಿದುದು,— ಹೀಗೆ ಡಾಲಿ ಎಸಗಿದ ಹತ್ತಾರು ಕೇಡುಗಳು ಆಕೆಯ ಸ್ಮೃತಿಪಥದಲ್ಲಿ ನುಗ್ಗಿದುವು.

ಆ ಕೇಡುಗಳನ್ನು ನೆನೆದಾಗ ಬೋಜುವಿನ ಎದೆ ಜಲ್ಲೆಂದಿತು. ಭೀತಿಯ ಹಸ್ತ ಅವಳ ಜೀವವನ್ನು ಹಿಡಿದು ಅಲುಗಾಡಿಸಿತು.

ಡಾಲಿ ಚೆಂಗುಮಣಿಯನ್ನು ಪ್ರೀತಿಸುವುದಿಲ್ಲ; ತಮ್ಮನ ಬಗ್ಗೆ ಆತನ ಎದೆಯಲ್ಲಿ ಎಳ್ಳಷ್ಟೂ ಅಕ್ಕರೆಯಿಲ್ಲ. ಆತನ ಕಣ್ಣುಗಳು ದ್ವೇಷ. ಅಸೂಯೆಗಳ ಅಗ್ನಿಕುಂಡಗಳಾಗಿವೆ !

'ನಾಳೆ ಡಾಲಿ ಬಳೆದು ದೊಡ್ಡವನಾದರೆ ! ' ಎಂಬ ಪ್ರಶ್ನೆ ಬೋಜುವಿನ ಮುಂದೆ ಬಂದು ನಿಂತಿತು.

ಮನೆ ಕುರುಕ್ಷೇತ್ರವಾಗುವುದು; ಚೆಂಗುಮಣಿಯನ್ನು ಸುಖದಲ್ಲಿ ಬಾಳಲು ಬಿಡುವಂತಿಲ್ಲ. ಇಂದು ಹಸುಳೆಯ ಬಾಯಿಗೆ ತುರುಚೆ ಹೂವನ್ನು ತುರುಕಿದವನು, ನಾಳೆ ಬಡಿದು ಜೀವ ತೆಗೆಯಲು ಹಿಂಜರಿಯಲಾರ. ಹೂವೆಂದು ನಂಬಿದುದು ಹಾವಾಗಿದೆ !

ಭವಿಷ್ಯದ ಭಯಾನಕ ಚಿತ್ರ ಬೋಜುವಿನ ಮನಸ್ಸಿನಲ್ಲಿ ಸುಳಿಯಿತು. ಅದನ್ನು ನೋಡಲಾರೆನೆಂಬಂತೆ ಅವಳು ಕಣ್ಣುಗಳನ್ನು ಮುಚ್ಚಿಕೊಂಡಳು.

ಪರಿಹಾರ !

ಹೊದಿಕೆಯೊಳಗೆ ಹೊಕ್ಕ ಹುಳುವನ್ನು ಕಿತ್ತು ತೆಗೆದು ಹಿಸುಕಿ ಹಾಕು !— ಬುದ್ಧಿ ಸಲಹೆಯನ್ನು ನೀಡಿತು.

ಆ ಯೋಚನೆ ಮೂಡಿದಾಗ ಅವಳ ಮೈ ನಡುಗಿತು.

" ಒಲ್ಲೆ; ಒಲ್ಲೆ ! ಆ ಪಾಪದ ಕೆಲಸವನ್ನು ಮಾಡಲಾರೆ ! " ಬೋಜು ತನ್ನಲ್ಲಿಯೇ ಹೇಳಿಕೊಂಡಳು.

" ಉಡಿಯಲ್ಲಿ ಚೇಳುಕಟ್ಟಿಕೊಂಡು ತಿರುಗಾಡಿದರೆ ಅದು ಮೈಮೇಲೆ ಕೊಂಡಿಯನ್ನೂರದೆ ಇರುವುದೇ ? " ಬುದ್ಧಿ ಆಕೆಯನ್ನು ಕೆಣಕಿ ಕೇಳಿತು.

ಬೋಜುವಿಗೆ ಉತ್ತರಿಸಲಾಗಲಿಲ್ಲ.

" ಈ ಮನೆಯಲ್ಲಿ ಇಬ್ಬರಿಗೆ ಬಾಳಲು ಎಡೆಯಿಲ್ಲ. ಇಂದು ಡಾಲಿಯುಳಿದರೆ, ನಾಳೆ ಚೆಂಗುಮಣಿಯ ಅಳಿವು ! ಇಬ್ಬರಲ್ಲಿ ಯಾರನ್ನು ಉಳಿಸಿಕೊಳ್ಳುವೆ ? "

" ಚೆಂಗುಮಣಿ ಬೇಕು; ಚೆಂಗುಮಣಿ ಬೇಕು ! " ತಾಯ ಎದೆ ನುಡಿದಿತು.

" ಆತನನ್ನು ಉಳಿಸಿಕೊಳ್ಳುವ ದಾರಿಯನ್ನು ಹುಡುಕು ! " ಬುದ್ಧಿ ಉಪದೇಶಿಸಿತು.

ಗೋಡೆಯ ಹಲಗೆಯ ಮೇಲೆ ಸಾಲಾಗಿ ನಿಂತಿದ್ದ ಶೀಸೆಗಳ ಪೈಕಿ ಒಂದು ಕಿರುಶೀಸೆ "ನಾನು ಇಲ್ಲಿದ್ದೇನೆ." ಎಂದು ಬೋಜುವನ್ನು ನೋಡಿ ಹೇಳಿತು.

ಅದು ಯಾವ ಶೀಸೆ?— ಎಂದು ಬೋಜು ಆಲೋಚಿಸಿದಳು.

ಅದು 'ಫಾಲಿಡಾಲ' ಶೀಸೆ. ಮಾತೆಯಲ್ಲಿ ಒಗ್ಗುಹಾಕಿದ ಕಿತ್ತಳೆ ಸಸಿಗಳನ್ನು ಬಾಧಿಸುತ್ತಿದ್ದ ಕ್ರಿಮಿಕೀಟಗಳನ್ನು ತೊಡೆದು ಹಾಕಲೆಂದು, ಬಿದ್ದು ಆರುತಿಂಗಳ ಹಿಂದೆ ಆ ಶೀಸೆಯನ್ನು ತಂದಿದ್ದ. ಆ ಔಷಧಿಯನ್ನು ನೀರಲ್ಲಿ ಬೆರಸಿ ಕಿತ್ತಳೆ ಸಸಿಗಳಿಗೆ ಸೇಚಿಸಿದ್ದ. ಈಗ ಆ ಶೀಸೆ "ನಾನು ನಿನ್ನ ನೆರವಿಗಿದ್ದೇನೆ." ಎಂದು ಬೋಜುವನ್ನು ಕರೆದು ಹೇಳಿತು.

'ಫಾಲಿಡಾಲ' ಶೀಸೆಯ ಕರೆಯನ್ನು ಕಡೆಗಣಿಸಲು ಬೋಜುವಿನಿಂದ ಆಗಲಿಲ್ಲ. ಅವಳು ಪಕ್ಕವಲ್ಲಿ ಮಲಗಿದ್ದ ಬಿದ್ದುವಿನ ಕಡೆಗೆ ಕಣ್ಣು ಹೊರಳಿಸಿದಳು. ಆತ ನಿದ್ದೆಯ ಮಡುವಲ್ಲಿ ಕೇಲುತಿದ್ದ. ಅವಳು ಹಾಸಿಗೆಯಿಂದ ಎದ್ದು ಮೆಲ್ಲನೆ ಹಲಗೆಯ ಕಡೆಗೆ ಸರಿದಳು. ಅವಳು ಆ ಕಿರುಶೀಸೆಯನ್ನು ಎತ್ತಿಕೊಂಡಳು.

ಬೋಜು ಕಿರುದೀಪದ ಮುಂದೆ ನಿಂತು ಆ ಶೀಸೆಯ ಬಿರುಡೆಯನ್ನು ತಗೆದಳು. ಅದು ಖಾಲಿಯಾಗಿತ್ತು. ತಲೆ ಬಾಗಿಸಿ ಶೀಸೆಯೊಳಗೆ ನೋಡಿದಳು; ಶೀಸೆಯ ತಳದಲ್ಲಿ ಎರಡು ಹನಿಗಳು ಉಳಿದಿದ್ದುವು.

"ನೋಡು, ನಿನ್ನ ಚಿಂತೆಯನ್ನು ತೊಡೆದು ಹಾಕಲು ಆ ಎರಡು ಹನಿಗಳೇ ಸಾಕು!" ಬುದ್ಧಿ ಹೇಳಿತು: "ಆ ಎರಡು ಹನಿಗಳು ಚೆಂಗುಮಣಿಗೆ ಒದಗಲಿರುವ ವಿಪತ್ತನ್ನು ಇಲ್ಲವಾಗಿಸುವುವು."

"ಚಿಕ್ಕವ್ವ, ಚಿಕ್ಕವ್ವ" ಪಕ್ಕದ ಕೋಣೆಯಲ್ಲಿದ್ದ ಡಾಲಿ ದನಿ ಎತ್ತಿದ.

"ಏನು ಮಗು?" ಆತನ ಕೋಣೆಗೆ ಹೆಜ್ಜೆ ಇರಿಸುತ್ತಾ ಬೋಜು ಕೇಳಿದಳು.

"ನೀರಡಿಕೆ; ಬಾಯಿ ಒಣಗಿದೆ!" ಡಾಲಿ ಸಂಕಟಗ್ರಸ್ತ ದನಿಯಲ್ಲಿ ಒದರಿದ.

ಬೋಜು ಡಾಲಿಯ ಹಣೆಯನ್ನು ಹಣೆಯನ್ನು ಮುಟ್ಟಿ ನೋಡಿದಳು. ಅದು ನೆಲ್ಲು ಎರಚಿದರೆ ಅರಳಾಗುವಷ್ಟು ಬಿಸಿ ಏರಿತ್ತು. ಆಗ ಅವನು ಜ್ವರದ ತಾಪ ತಾಳಲಾಗದೆ ಹಲ್ಲು ಕಡಿಯುತ್ತಿದ್ದ.

ಬೋಜು ಉಷ್ಣಮಾಪಕವನ್ನು ತೆಗೆದು ಹುಡುಗನ ಕಂಕುಳಲ್ಲಿಟ್ಟು ನೋಡಿದಳು. ಜ್ವರ ನೂರನಾಲ್ಕು ಡಿಗ್ರಿಗೆ ಏರಿತ್ತು.

"ಬಾಯಾರಿಕೆ; ಬಾಯಾರಿಕೆ!" ಡಾಲಿ ತೊದಲುದನಿಯಲ್ಲಿ ಹೇಳಿದ.

"ಈಗ ತಂದೆ." ಎಂದು ಹೇಳಿ ಬೋಜು ಗ್ಲಾಸು ತರಲು ಹೋದಳು. ಫಾಲಿಡಾಲ್ ಶೀಸೆ "ಇಲ್ಲಿ ನಾನಿದ್ದೇನೆ." ಎಂದು ಹೇಳಿತು. ಅವಳು ನಡುಗುವ ಕೈಯುಂದ ಶೀಸೆಯ ತಳದಲ್ಲಿ ಉಳಿದಿದ್ದ ಎರಡು ಹನಿಗಳನ್ನು ಗ್ಲಾಸಿಗೆ ಸುರಿದಳು. ಶೀಸೆಗೆ ಬಿರುಡೆ ಹಾಕಿ ಮೊದಲಿನ ಸ್ಥಾನದಲ್ಲಿ ಇರಿಸಿದಳು

ಬೋಜು ಫ್ಲಾಸ್ಕಿನಿಂದ ಬೇ ನೀರನ್ನು ಗ್ಲಾಸಿಗೆ ಬಗ್ಗಿಸಿದಳು. ಅವಳು ಎರಡು ಚಮ್ಮಚ ಗ್ಲುಕೋಸು ಹಾಕಿ ನೀರನ್ನು ಕದಡಿದಳು.

ಮಲಗಿದ್ದ ಡಾಲಿಯನ್ನು ಅವಳು ಎತ್ತಿ ಕುಳ್ಳಿರಿಸಿದಳು. ಅವನು ಬೋಜುವಿನ ಮೈಗೆ ಆತುಕೊಂಡ. ಅವಳು ಗ್ಲಾಸನ್ನೆತ್ತಿ ಹುಡುಗನ ಬಾಯಿಗೆ ಹಿಡಿದಳು. ಆಕೆಯ ಕೈ ನಡುಗುತ್ತಿತ್ತು; ಎದೆ ಡಬಡಬನೆ ಹಾರಿಕೊಳ್ಳುತಿತ್ತು. ಆಕೆಗೆ ಡಾಲಿಯ ಕಣ್ಣುಗಳನ್ನೆದುರಿಸಲು ಧೈರ್ಯವಿಲ್ಲವಾಯಿತು.

ಬಾಯಾರಿ ಕಂಗಾಲಾಗಿದ್ದ ಡಾಲಿ ಗಟಗಟನೇ ನೀರನ್ನು ಹೀರಿಯೇ ಬಿಟ್ಟ. ಅವನು ಉಸ್ಸೆಂದು ಪೇರುಸಿರನ್ನು ಹೊರಜೆಲ್ಲಿ ಹಾಸಿಗೆಯ ಮೇಲೆ ಹೊರಳಿದ. ಬೋಜು ರಗ್ಗನ್ನು ಎಳೆದು ಆತನ ನೈಗೆ ಹೊದೆಸಿದಳು.

ಬೋಜುವಿಗೆ ಒಂದೊಂದು ನಿಮಿಷವೂ ಒಂದೊಂದು ಯುಗವಂತೆ ತೋರಿತು. ಅವಳಿಗೆ ಡಾಲಿಯನ್ನು ಬಿಟ್ಟು ಹೋಗಿ ಪತಿಯ ಪಕ್ಕವಲ್ಲಿ ಪವಡಿಸಲು ಧೈರ್ಯ ಬರಲಿಲ್ಲ. ಅವಳು ಡಾಲಿಯ ಮುಂಚಿನ ಪಕ್ಕವಲ್ಲಿಯೇ ಕುಳಿತಳು.

ಡಾಲಿಗೆ ಮುಂಕು ಕವಿಯಿತು. ಆತ ನಿಧಾನವಾಗಿ ಉಸಿರಾಡತೊಡಗಿದ. ಅವಳು ಅವನ ಉಸಿರಾಟವನ್ನು ಎಣಿಸ ತೊಡಗಿದಳು. ಅರೆತಾಸು ಕಳೆಯಿತು. ಡಾಲಿಯೊಸ್ಮೈ ಕಣ್ಣೆರೆದ. ಅವನು ಒಡಲೊಳಗೆ ಕಿಚ್ಚು ಬಿದ್ದಂತೆ ಹಾಸಿಗೆಯ ಮೇಲೆ ಹೊರಳಾಡಿದ. ಅವನು "ಚಿಕ್ಕವ್ವ, ಉರಿ; ಹೊಟ್ಟೆಯೊಳಗೆ ಉರಿ!" ಎಂದು ಸಂಕಟದ ಉದ್ಗಾರವನ್ನೆತ್ತಿದ.

ಅವನ ಹಣೆಯ ಮೇಲೆ ಬೆವರ ಹನಿಗಳು ಮೂಡಿದುವು. ವಾಕರಿಕೆ ಬಂತು. ಬೋಜು ಮುಂಚದಡಿಯಿಂದ ತಾಂಬಾಳೆಯನ್ನೆತ್ತಿ ಒಡ್ಡಿದಳು. ಡಾಲಿ ಕುಡಿದ ನೀರನ್ನೆಲ್ಲಾ ವಾಂತಿಮಾಡಿದ.

ಈಗ ಡಾಲಿಯ ಒಡಲ ಉರಿ ನಸು ಶಾಂತವಾಯಿತು. ಅವನು ಮರಳಿ ಹಾಸಿಗೆಯ ಮೇಲೆ ಹೊರಳಿದ. ಬೋಜು ಉಷ್ಣಮಾಪಕವನ್ನು ತೆಗೆದು ಅವನ ಕಂಕುಳಲ್ಲಿಟ್ಟು ನೋಡಿದಳು. ಈಗ ಜ್ವರ ನೂರಒರು ಡಿಗ್ರಿಗೆ ಏರಿತ್ತು.

ಬೋಜುವಿಗೆ ಗಾಬರಿಯಾಯಿತು. ಅವಳು ಹೋಗಿ ಗಂಡನನ್ನು ಕರೆದೆಬ್ಬಿಸಿದಳು. ಬಿದ್ದು "ಬೋಜು, ಏನಾಯಿತು?" ಎಂದು ಅಕಳಿಸುತ್ತಾ ಕೇಳಿದ.

"ಡಾಲಿಗೆ ಮುಂಕು ಕವಿದಿದೆ." ಬೋಜು ನಡುಗುವ ದನಿಯಲ್ಲಿ ಹೇಳಿದಳು: "ಜ್ವರ ನೂರ ಆರಕ್ಕೆ ಏರಿದೆ. ಡಾಕ್ಟರನ್ನು ಕರೆತರುವುದು ಲೇಸು."

"ಇಗೋ ಹೊರಟೆ." ಎಂದು ಹೇಳಿ ಬಿದ್ದು ವಸ್ತ್ರಗಳನ್ನು ತೊಟ್ಟುಕೊಂಡ.

ಬಿದ್ದು ಡಾಕ್ಟರನ್ನು ಕರೆತರಲೆಂದು ಆ ಇರುಳು ಕಾರು ತೆಗೆದುಕೊಂಡು ಬರುವ ವೇಳೆಗೆ, ಡಾಲಿ ಕೊನೆಯುಸಿರನ್ನೆಳೆದು ತನ್ನ ಜೀವನಯಾತ್ರೆಯನ್ನು ಮುಗಿಸಿದ್ದ.

* * * *

ಮಂಜುಗಡ್ಡೆಯಂತೆ ಕೊರೆಯುವ ಕೈಯನ್ನೆತ್ತಿ ಹೆಣೆಯ ಮೇಲೆ ಇರಿಸಿದಂತೆ ಎನಿಸಿತು ಬೋಜುವಿಗೆ. ಅವಳು ಬೆಚ್ಚಿ ಬಿದ್ದು ಕಣ್ಬೆರೆದಳು. ಮೇಜಿನ ಮೇಲೆ ಉರಿಯುತ್ತಿದ್ದ ಕಿರುದೀಪ ಪುನಃ ನುಂದಿಹೋಗಿತ್ತು. ಕವಿದ ಕತ್ತಲಲ್ಲಿ ಬಿಳಿಯ ಆಕೃತಿಯೊಂದು ಎದ್ದು ತೋರುತ್ತಿದ್ದಿತು. ಅದೇ ಆಕೆಯ ಹೆಣೆಯನ್ನು ಮುಟ್ಟಿ ಎಚ್ಚರಿಸಿದುದು!

ಬೋಜುವಿನ ಗಾಬರಿ ಇಮ್ಮಡಿಸಿತು. ಆ ಬಿಳಿಯ ಆಕೃತಿ ತನ್ನ ಕೆಂಗಣ್ಣುಗಳಿಂದ ಅವಳನ್ನು ನಿಟ್ಟಿಸಿ ನೋಡಿ ನಕ್ಕಿತು ಆ ನಗೆಯ ತೆರೆಗಳನ್ನು ತಡೆದ ಗೋಡೆಗಳು ಕುಸಿದು ಬೀಳುವಂತೆ ಅಲುಗಾಡಿದುವು.

"ನೀನು ಇಲ್ಲಿ ನಿಲ್ಲಬೇಡ. ದೂರ ಹೋಗು!" ಎಂದು ಹೇಳಬೇಕೆದು ಬೋಜು ಬಾಯ್ದೆರೆದಳು. ಆದರೆ ತೆರೆದ ಬಾಯಿಂದ ದನಿ ಹೊರಡಲಿಲ್ಲ.

"ಚಿಕ್ಕವ್ವ, ನೀನು ನನ್ನ ನೆಲದಡಿಯಲ್ಲಿ ಸೆರೆ ಇಟ್ಟರೂ ನಾನು ಎದ್ದು ಬಂದೆ; ಬಾಗಿಲಿಗೆ ಅಗುಳಿ ಹಾಕಿದರೂ ಕಿಟಕಿಯಿಂದ ನುಸುಳಿ ಬಂದೆ; ಕವಿದ ಮಂಜನ್ನು ದಾಟಿ ಬಂದೆ!"

ಹೌದು. ಅದು ಡಾಲಿಯ ಸ್ವರ. ಸತ್ತು ಮಣ್ಣಡಿಯನ್ನು ಸೇರಿದ ಡಾಲಿ ಬೋಜುವನ್ನು ಕಾಡಲೆಂದು ಎದ್ದು ಬಂದಿದ್ದಾನೆ!

"ಬೇಡ. ನೀನು ದೂರ ಹೋಗು!" ಬೋಜು ಭೀತಿಯಿಂದ ತೊದಲು ದನಿಯಲ್ಲಿ ಉಸುರಿದಳು: "ನೀನು ನನ್ನ ಹತ್ತಿರ ಸುಳಿಯಬೇಡ."

"ಪ್ರೀತಿಯ ಚಿಕ್ಕವ್ವನನ್ನು ತೊರೆದು ನಾನು ಅಲ್ಲಿ ಒಬ್ಬಂಟಿಗನಾಗಿ ಹೇಗೆ ಇರಲಿ?" ಡಾಲಿಯ ಕೊರಳಿಂದ ಆಣಕ ಸ್ವರವು ಹೊರಟಿತು: "ಅಲ್ಲಿ ನನಗೆ ಕಾಫಿ ತಿಂಡಿಗಳನ್ನು ಕೊಡುವವರು ಯಾರು? ಹಣ್ಣು ಬಿಸ್ಕತ್ತುಗಳನ್ನು ಕೊಡುವವರು ಯಾರು? ಎಣ್ಣೆ ಉದ್ದಿ ನನ್ನ ಮೀಯಿಸುವವರು ಯಾರು?"

"ಡಾಲಿ, ಅವನ್ನೆಲ್ಲಾ ನಾನು ಮಾಡಲೊಲ್ಲೆ. ನಾನು ನಿನ್ನ ಚಿಕ್ಕವ್ವನಲ್ಲ; ನಿನ್ನ ಪಾಲಿನ ಮಾರಿ!"

"ಚಿಕ್ಕವ್ವ, ನೀನು ಹಾಗೆನಬೇಡ. ನೀನು ತುಂಬಾ ಚಾಣೆ!"

ಚಿಕ್ಕವ್ವ ಎಂಬ ಕರೆ ಕೂರಲಗಿನಂತೆ ಬೋಜುವಿನ ಎದೆಯನ್ನು ಇರಿಯಿತು.

"ನೋಡು, ಜೆಂಗುಮಣಿಯ ಹಾದಿಯಲ್ಲಿ ನಾನು ಮುಳ್ಳಾದೇನೂಂತ ನನ್ನ ನೀನು ಸುಲಭದಲ್ಲಿ ಕಿತ್ತುಹಾಕಿ ಬಿಟ್ಟೆ." ಡಾಲಿ ಉಸುರಿದ: "ಬಹಳ ಮುಂದಾಲೋಚನೆಯುಳ್ಳವನು ನೀನು!"

"ನೀನು ಇರುವಷ್ಟು ದಿನ ಜೆಂಗುಮಣಿಯನ್ನು ಗೋಳು ಹುಯ್ದುಕೊಂಡೆ."

"ಚಿಕ್ಕವ್ವ, ನನ್ನ ಆಣೆ ಇದೆ. ಇನ್ನುಮುಂದೆ ನಾನು ಜೆಂಗುಮಣಿಯನ್ನು ಮುಟ್ಟೋದಿಲ್ಲ." ಡಾಲಿ ಭೀಷಣ ನಗುವೊಂದನ್ನು ಚೆಲ್ಲಿದ. "ಆದರೆ ಇನ್ನುಮುಂದೆ ನಿನ್ನ ಗೋಳು ಹುಯ್ಯುತ್ತೇನೆ!"

ಆ ನಗು ಒಂದು ಅಗ್ನಿಜ್ವಾಲೆಯಂತೆ ಬೋಜುವಿನ ಮೈಯನ್ನು ಬಳಸಿತು. ಅವಳು ಎದ್ದು ಡಾಲಿಯನ್ನು ಹೊಡೆದು ಹೊರಗಟ್ಟಬೇಕೆಂದು ಆಲೋಚಿಸಿದಳು. ಆದರೆ ಆಕೆಗೆ ಕೈಕಾಲುಗಳನ್ನು ಅಲುಗಾಡಿಸಲಾಗಲಿಲ್ಲ. ಅವು ಮುರದ ಕೊರಡಿನಂತಾಗಿದ್ದುವು.

"ಡಾಲಿ, ದಮ್ಮಯ್ಯ! ನೀನೊಮ್ಮೆ ಹೋಗು." ಬೋಜು ಅಂಗಲಾಚಿ ಬೇಡಿದಳು.

"ಚಿಕ್ಕವ್ವ, ನಾನು ನಿನ್ನ ಕರೆದುಕೊಂಡು ಹೋಗಲೆಂದೇ ಬಂದೆ." ಡಾಲಿ ಹೇಳಿದ: "ನೀನೆ ನನ್ನ ಅಲ್ಲಿಗೆ ಕಳುಹಿಕೊಟ್ಟೆ. ಅಲ್ಲಿ ಒಬ್ಬೊಂಟಿಗನಾಗಿ ನಾನೇನು ಮಾಡಲಿ?"

"ಏನು ಬೇಕಾದರೂ ಮಾಡು. ನೀನು ಬಂದು ನನ್ನ ಕಾಡದಿದ್ದರೆ ಸಾಕು."

"ನನಗೆ ಹಾಲು, ಹಣ್ಣು, ತಿಂಡಿ-ತಿನಸುಗಳನ್ನು ಕೊಡಲು ನೀನು ಬರಬೇಕು."

"ಇಲ್ಲ. ನಾನು ಬರಲೊಲ್ಲೆ."

"ಚಿಕ್ಕವ್ವ, ನೀನು ನನ್ನ ಜತೆಯಲ್ಲಿ ಬಂದೇಬರುವೆ!" ಡಾಲಿ ದೊಡ್ಡ ನಗುವೊಂದನ್ನು ಹೊರಚೆಲ್ಲಿದ.

ಡಾಲಿ ಮಲಗಿದ್ದ ಬೋಜುವನ್ನು ದೃಷ್ಟಿಸಿ ನೋಡಿದ; ಆತನ ಕಣ್ಣುಗಳಿಂದ ಬೆಂಕಿಯ ನಾಲಗೆಗಳು ಹೊಮ್ಮಿದುವು. ಅವು ಅಗ್ನಿಜ್ವಾಲೆಗಳಲ್ಲಿ; ಬೋಜುವನ್ನು ಕಟ್ಟಿ ಸೆಳೆದುಕೊಂಡು ಹೋಗಲು, ಆತ ತಂದ ಬೆಂಕಿಯ ಹಗ್ಗಗಳು!

ಆ ಬೆಂಕಿಯ ಹಗ್ಗಗಳು ಬಂದು ಬೋಜುವಿನ ಮೈಯನ್ನು ಸುತ್ತಿದುವು. ಅವಳ ಮೈಯನ್ನು ಕುದಿಯುವ ಎಣ್ಣೆಯಲ್ಲಿ ಅದ್ದಿದಂತಾಯಿತು. ಆ ಹಗ್ಗಗಳು ಆಕೆಯ ಮೈಯನ್ನು ಸುತ್ತಿ ಹಾಸಿಗೆಯಿಂದ ಎಳೆದುವು.

ಬೋಜು ಹಾಸಿಗೆಯಿಂದ ಎದ್ದಳು. ಡಾಲಿ "ಚಿಕ್ಕವ್ವ, ಬಾ. ನಾನು ನಿನಗೆ ದಾರಿ ತೋರಿಸೇನು." ಎಂದು ಹೇಳಿ ಕೈ ಚಾಚಿದ. ಆ ಕೈ ಹಿಮಗಡ್ಡೆಯಿಂದ ನಿರ್ಮಿತವಾದುದು. ಅದು ಅವಳ ಮೈಯನ್ನು ಕೊರೆದು ನಡುಗಿಸಿತು.

ಕಣ್ಣುಗಳಲ್ಲಿ ಬೆಂಕಿಯ ನೋಟ; ಕೈಯ ಸೋಂಕು ಹಿಮಗಡ್ಡೆಯ ಸ್ಪರ್ಶ; ಇದೇನು ವಿಚಿತ್ರ!—ಎಂದು ಬೋಜು ಆಲೋಚಿಸಿದಳು.

ಡಾಲಿ ಮುಂದೆ ಹೆಜ್ಜೆಗಳನ್ನಿರಿಸಿದ. ಬೋಜು ನಿದ್ದೆಯಲ್ಲಿ ನಡೆಯುವವಳಂತೆ ಅಡಿಗಳನ್ನಿರಿಸುತ್ತಾ ಆತನನ್ನು ಹಿಂಬಾಲಿಸಿದಳು. ಅವನು ಬಂಗ್ಲೆಯ ಮುಂಬಾಗಿಲಿಗೆ ಬಂದ. ಅವನು ಬಾಗಿಲನ್ನು ತೆರೆಯಲಿಲ್ಲ. ಆದರೆ ಅಗುಳಿ ಸರಿಯಿತು, ಕದಗಳು ತೆರೆದುವು. ಅವನು ಹೊರಗಿನ ಕಾಫಿ ತೋಟಕ್ಕೆ ಇಳಿದ. ಬೋಜುವೂ ಅನುಸರಿಸಿದಳು.

ಕಾಫಿಗಿಡಗಳು ಮಂಜು ಹೊದಿಕೆಯನ್ನು ಹೊದೆದು ನಿದ್ದಿಸುತ್ತಿದ್ದುವು. ಮರಗಳಿಂದ ತಟಪಟನೆ ಇಬ್ಬನಿಗಳು ಉದುರುತ್ತಿದ್ದುವು.

ಡಾಲಿ ಕಾಫಿಗಿಡಗಳ ಎಡೆಯಲ್ಲಿ ನುಸುಳಿದ. ಬೋಜು ಬೆನ್ನು ಬಾಗಿಸಿ ಆತನನ್ನು ಅನುಸರಿಸಿದಳು. ಕಾಫಿಗಿಡದ ಕಿರುಗೆಲ್ಲುಗಳು

ಆಕೆಯ ಜೋರಿಗೆ ತಗಲಿದುವು. ಸೀರೆಯ ನೆರಿಗೆ ಗಿಡಗಳ ಗೆಲ್ಲುಗಳಿಗೆ ಸಿಕ್ಕಿಕೊಳ್ಳುತಿತ್ತು. ಗಿಡದ ಗೆಲ್ಲುಗಳಿಂದ ಸೆರಗನ್ನು ಬಿಡಿಸಿಕೊಳ್ಳಲು ಕೈಗಳು ಅಲುಗಾಡುತ್ತಿರಲಿಲ್ಲ. ಅವಳು ಸೆರಗನ್ನೆಳೆದುಕೊಂಡು ಮುಂದೆ ಹೋಗುತಿದ್ದಳು. ಅದು ಹರಿದು ಕಿತ್ತು ಬರುತಿತ್ತು.

ಪಾದಗಳಿಗೆ ಮುಳ್ಳುಗಳು ನಾಟುತಿದ್ದುವು. ಅವರೆ ಅಡಿಗಳಿಗೆ ಚುಚ್ಚಿದ ಮುಳ್ಳುಗಳನ್ನು ಕೀಳಲೆಂದು ಅವಳು ನಿಲ್ಲಲಿಲ್ಲ. ಹಂಗಾರೆಯ ಮುಳ್ಳುಗಳು ಆಕೆಯ ಕಾಲುಗಳನ್ನು ಗೀರಿ ನೆತ್ತರು ಹರಿಸಿದುವು. ಕಾಲುಗಳು ನೋಯುತ್ತಿವೆ ಎಂದು ಅವಳು ಅರೆಚಣ ನಿಂತಳು.

ಮುಂದೆ ಸಾಗುತಿದ್ದ ಡಾಲಿ ಹಿಂದಿರುಗಿ ನೋಡಿದ. ಅವನು ಕಣ್ಣುಗಳಿಂದ ಬೆಳಕಿನ ಬಳ್ಳಿಯೊಂದನ್ನು ಎಸೆದು ಆಕೆಯ ನೈಯನ್ನು ಸುತ್ತಿ ಎಳೆದ.

ಅವನು ಹೆಜ್ಜೆಗಳನ್ನಿರಿಸುವಾಗ ಗಿಡಗಳಿಂದ ಉದುರಿದ ತರಗೆಲೆಗಳು ಸದ್ದಾಗುತ್ತಿರಲಿಲ್ಲ. ಕಾಫಿಗಿಡಗಳು ಅಲುಗಾಡುತ್ತಿರಲಿಲ್ಲ. ಅವನು ಗಾಳಿಯಲ್ಲಿ ಅಡಿಗಳನ್ನಿರಿಸಿಕೊಂಡು ಹೋಗುತಿದ್ದ.

ಮಂಜು ಬೀಳುತಿತ್ತು; ಗಾಳಿ ಬೀಸುತಿತ್ತು. ಮರಗಳಿಂದ ಇಬ್ಬನಿಗಳು ಉದುರುತಿದ್ದುವು. ದೂರದ ನಂದಿಮರದ ಕೊಂಬೆಯ ಮೇಲೆ ಕುಳಿತ ಗೂಬೆಯೊಂದು ಘೂಂಕರಿಸುತಿತ್ತು.

ಆದರೆ ಜೋಜುವಿಗೆ ಇವು ಯಾವುದರ ಲಕ್ಷ್ಯವೂ ಇಲ್ಲ. ಅವಳ ಕಣ್ಣುಗಳು ಮುಂದೆ ಸಾಗುತಿದ್ದ ಡಾಲಿಯ ಮೇಲೆ; ಕಿವಿಗಳು ಅತನ ದನಿಕೇಳಲು ಮೀಸಲು! ಅತನಲ್ಲದೆ ಬೇರಾವುದೂ ಆಕೆಗೆ ಕಾಣಿಸದು.

ಈಗ ಅವರು ತೋಟದ ಅಂಚಿಗೆ ಬಂದರು. ತೋಟದ ಬೇಲಿಯನ್ನು ದಾಟಿದರೆ ಐವತ್ತಡಿ ತಗ್ಗಾದ ಒಂದು ಕೊಳ್ಳ ಸಿಕ್ಕುವುದು. ಅದರಾಚೆ ಡಾಲಿಯನ್ನು ಮಣ್ಣು ಗೂಡಿಸಿದ ಸ್ಥಳವಿತ್ತು.

ಡಾಲಿ ಹಕ್ಕಿಯಂತೆ ಹಾರಿ ಬೇಲಿಯನ್ನು ನೆಗೆದ. ಜೋಜು ಬೇಲಿಯನ್ನು ಮೆಟ್ಟಿ ದಾಟಿದಳು. ಡಾಲಿ ಕೆಳಗಿನ ಕೊಳ್ಳದಲ್ಲಿ ಹೆಜ್ಜೆಗಳನ್ನಿರಿಸಿದ. ಅವನು ಉರುಳಿ ಕೆಳಗಿನ ಪ್ರಪಾತಕ್ಕೆ ಬೀಳಲಿಲ್ಲ. ಅವನು ಗಾಳಿಯಲ್ಲಿ ತೇಲುತಿದ್ದ.

ಜೋಜು ಕೆಳಗಿನ ಪ್ರಪಾತವನ್ನು ನೋಡಿದಳು. ಅವಳ ತಲೆ ತಿರುಗಿತು. ಅವಳು ಮುಂದೆ ಅಡಿಯಿರಿಸದೆ ಕೊಳ್ಳದ ಅಂಚಿನಲ್ಲಿ ನಿಂತಳು.

"ಚಿಕ್ಕವ್ವ, ನನ್ನ ಸಂಗಾತ ಬಾ." ಡಾಲಿ ಕೂಗಿ ಹೇಳಿದ.

"ಕೊಳ್ಳದಲ್ಲಿ ಬಿದ್ದು ನನ್ನ ಕೈಕಾಲುಗಳು ಮುರಿದಾವು!" ಜೋಜು ಭೀತಸ್ವರದಲ್ಲಿ ಉದ್ಗಾರವೆತ್ತಿದಳು.

"ನೋಡು ನಾನು ಗಾಳಿಯಲ್ಲಿ ತೇಲುತಿದ್ದೇನೆ; ಚಿಕ್ಕವ್ವ, ನೀನೂ ತೇಲಬಲ್ಲೆ!"

ಡಾಲಿ ಕಣ್ಣರಳಿಸಿ ಚಿಕ್ಕವ್ವನನ್ನು ನೋಡಿದ. ಆ ದೃಷ್ಟಿ ಜೋಜುವಿನ ದೇಹ-ಜೀವಗಳೆರಡನ್ನೂ ಸೆಳೆಯಿತು.

ಜೋಜು ಕನಸಿನಲ್ಲಿರುವವಳಂತೆ ಮುಂದೆ ಅಡಿಗಳನ್ನಿರಿಸಿದಳು. ಅವಳು ಡಾಲಿಯಂತೆ ಗಾಳಿಯಲ್ಲಿ ತೇಲಲಿಲ್ಲ. ಭೂಮಿಯ ಗುರುತ್ವ ಆಕೆಯನ್ನು ಕೆಳಗೆ ಸೆಳೆಯಿತು.

ಜೋಜು ಧೊಪ್ಪನೆ ಕೆಳಗಿನ ಪ್ರಪಾತದಲ್ಲಿ ಬಿದ್ದು ಬಿಟ್ಟಳು.

ಜೋಜುವಿಗೆ ಎಚ್ಚರವಾಯಿತು. ಹಾರೆಯಿಂದ ಬಡಿದಂತೆ ಆಕೆಯ ಬೆನ್ನು ನೋಯುತಿತ್ತು. ಕೆಳಗಿದ್ದ ಕಲ್ಲುಗಳು ಆಕೆಯ ನೈಯನ್ನು ಒತ್ತುತಿದ್ದುವು. ಆಕೆಯ ತಲೆಯನ್ನು ನೂರು ಸೂಜಿಗಳು ಇರಿಯುತಿದ್ದುವು.

"ಚಿಕ್ಕವ್ವ, ಜೆಂಗುಮಣಿಗೊಬ್ಬನಿಗೇ ನಿನ್ನ ಪ್ರೀತಿಯನ್ನೆರೆಯಬೇಕೆಂದು ನೀನು ನನ್ನ ಕಳುಹಿಸಿಬಿಟ್ಟೆ." ಕತ್ತಲೆಯನ್ನು ಸೀಳಿಕೊಂಡು ಡಾಲಿಯ ದನಿ ಬಂತು: "ನನ್ನ ಪ್ರೀತಿ ಜೆಂಗುಮಣಿಯ ಪ್ರೀತಿಗಿಂತ ಮಿಗಿಲು; ನೋಡು, ಅದು ಸಿನ್ನನ್ನು ನಾಸಿರುವಲ್ಲಿಗೆ ಕರೆತಂದಿತು!"

ಮರುಕ್ಷಣದಲ್ಲಿ ಜೋಜು ವಿಸ್ಮೃತಿಯ ಕಡಲಲ್ಲಿ ಮುಳುಗಿ ಹೋದಳು;

* * * *

ಮರುದಿನ ಮುಂಜಾವದಲ್ಲಿ ಬಿದ್ದು ಮೈಸೂರಿನಿಂದ ಸೀಮೆಗೊಬ್ಬರವನ್ನು ಲಾರಿಯಲ್ಲಿ ತುಂಬಿಕೊಂಡು ಬಂದ. ಬಂಗ್ಲೆಯಲ್ಲಿ ಜೋಜು ಇಲ್ಲದುದನ್ನು ಕಂಡು ಆತನಿಗೆ ವಿಗಿಲಾಯಿತು.

ಆತ ಆಳುಗಳನ್ನು ಕಟ್ಟಿಕೊಂಡು ತೋಟ ಮತ್ತು ಸುತ್ತುಮುತ್ತಲಿನ ಎಡೆಗಳಲ್ಲಿ ಜೋಜುವನ್ನು ಅರಸಿದ. ಕೊನೆಗೆ ಅವರು ತೋಟದ ಅಂಚಿನಲ್ಲಿರುವ ಕೊಳ್ಳದೆಡೆಗೆ ಬಂದರು.

ಬಿದ್ದು, ಐವತ್ತಡಿ ಆಳದ ಕೊಳ್ಳದ ತಳದಲ್ಲಿ ಬೋಜು ಮುದ್ದೆಯಾಗಿ ಬಿದ್ದಿರುವುದನ್ನು ಕಂಡ. ಅವನು ಬಳಸುದಾರಿಯಿಂದ ಕೊಳ್ಳಕ್ಕೆ ಇಳಿದು ಹೋದ.

ಜೋಜುವಿನ ಮೈಕೊರೆತು ಹೋಗಿತ್ತು. ಬೆನ್ನೆಲುಬು ಮತ್ತು ಕಾಲುಗಳು ಉಡಿದು ಹೋಗಿದ್ದುವು. ಮೊಗ ಕಳೆಗೆಟ್ಟಿತ್ತು. ಆದರೆ ಆಕೆಯ ತೆರೆದ ಕಣ್ಣುಗಳಲ್ಲಿ ಇನ್ನೂ ಭಯ-ವಿಸ್ಮಯಗಳು ಉಳ್ಕುತಿದ್ದುವು.

ಜೋಜು ನಡುವಿರುಳು ಬಂಗ್ಲೆಯಿಂದ ಹೊರಬಿದ್ದು ಕೊಳ್ಳಕ್ಕೇಕೆ ಬಂದಳು?—ಎಂಬುದು ಬಿದ್ದುವಿಗೆ ಬಗೆಹರಿಸಲಾಗದ ಸಮಸ್ಯೆಯಾಯಿತು.

ಡಾಕ್ಟರ್ ವಾಯ್. ಸುಬ್ಬರಾವ್

(ಜೀವನಪರಿಚಯ)

ಶ್ರೀ. ಟೀ. ಆರ್. ನಾಡಗೀರ ಬಿ. ಎಸ್ಸಿ. (ಟೆಕ್), ಮುಂಬಯಿ

ಆಂಧ್ರದೇಶದ ಬಡ ಕುಟುಂಬವೊಂದರಲ್ಲಿ ಹುಟ್ಟಿದ—ವಿರೋಧಕ ಪರಿಸ್ಥಿತಿಯನ್ನೆದುರಿಸುತ್ತಲೇ ಬೆಳೆದ—ವಿದ್ಯಾರ್ಥಿಯೊಬ್ಬ, ತನ್ನ ಜ್ಞಾನಲಾಲಸೆ, ಕರ್ತೃತ್ವಶಕ್ತಿಗಳಿಂದ ಅಮೇರಿಕೆಯಲ್ಲಿ ಹೊಳಗಿ ಬೆಳಗಿದ; ಅಮೃತಸಮಾನವಾದ ಅನೇಕ ಔಷಧಿಗಳನ್ನು ಕಂಡುಹಿಡಿದ.

'ವೇಳೆ ಅಮೂಲ್ಯವಾದುದು. ಸಮಗಿರುವ ಅವಕಾಶ ಅತ್ಯಲ್ಪ. ಇಂದು ಜನ ಪಟಪಟನೆ ಸಾಯುತ್ತಿದ್ದರೆ, ನಾಳೆ ನರಳಿ ಸಾಯಬಹುದು. ಈ ಬಗೆಯ ಕಾಲನ ತಾಂಡವನೃತ್ಯವನ್ನು ನಾವು ತಡೆಗಟ್ಟಬೇಕು. ನಮಗಿರುವ ಜೀವಿತದ ಎಲ್ಲ ವೇಳೆಯನ್ನು ಈ ಮಹಾಕಾರ್ಯಕ್ಕೆ ಮೀಸಲಾಗಿಡಬೇಕು'—ಇದು ಡಾ. ರಾವ್ ಇರಿಸಿಕೊಂಡ ಧ್ಯೇಯವಾಗಿತ್ತು. ಈ ಧ್ಯೇಯಸಾಧನೆಗಾಗಿ ಅವರು ಆತ್ಮಾರ್ಪಣೆ ಮಾಡಿದರು. ಅಮೇರಿಕೆಯಲ್ಲಿ ಅವರು ಕಳೆದ ಕಾಲುಶತಮಾನದ ಅವಧಿಯಲ್ಲಿ ಆ ಮಹಾರಾಷ್ಟ್ರ ಪಡೆದ ಶ್ರೇಯಸ್ಸು ಅಸಾಧಾರಣವಾದುದು; ಅಪೂರ್ವವಾದುದು. ಅದೆಷ್ಟೋ ಜನ ಕೆಲ ವಿಜ್ಞಾನಿಗಳೂ ಕೂಡ, ಮೊದಮೊದಲು ಡಾ. ರಾವ್ ಅವರ ಸಂಶೋಧನೆಗಳ ಮೌಲಿಕತೆಯನ್ನರಿತಿರಲಿಲ್ಲ.

ವೈಜ್ಞಾನಿಕ ಕ್ಷೇತ್ರದಲ್ಲಿ ಹೀಳಿಕೊಳ್ಳುವಂತಹ ಕಾಣಿಕೆ ಈ ಮೊದಲು ಭಾರತದಿಂದ ದೊರೆತಿರಲಿಲ್ಲ. ಅಲ್ಲೊಬ್ಬ ಡಾ. ಜಗದೀಶಚಂದ್ರ ಬೋಸ್, ಇಲ್ಲೊಬ್ಬ ಡಾ. ರಾಮನ್ ಇವರು ಅಪೂರ್ವ ಸಂಶೋಧನೆಗಳಿಂದ ವಿಶ್ವವಿಖ್ಯಾತರಾಗಿದ್ದಾರೆ. ಇವರ ಪ್ರತಿಭೆ ನಿಂಚಿನಂತಹದು. ಇಂತಹ ಪ್ರತಿಭಾಸಂಪನ್ನವಲಯಕ್ಕೆ ಸೇರಲರ್ಹರು ಡಾ. ಸುಬ್ಬರಾವ್. ಡಾ. ರಾವ್ ಹುಟ್ಟಿನಿಂದ ಭಾರತೀಯರಾದರೂ, ಅವರ ಕಾರ್ಯಕ್ಷೇತ್ರವಾಗಿತ್ತು ಅಮೇರಿಕೆ.

ಯೆಲ್ಲಪ್ರಗಡ ಸುಬ್ಬರಾವ್ ೧೮೯೫ರಲ್ಲಿ, ಪೂರ್ವ ಗೋದಾವರೀ ಜಿಲ್ಲೆಯಲ್ಲಿ ಜನಿಸಿದರು. ಇವರ ಪೂರ್ವೇತಿಹಾಸದ ವಿವರಗಳು ಲಭ್ಯವಿಲ್ಲದುದು ದುರ್ದೈವದ ಸಂಗತಿ. ರಾಯರ ಮನೆತನ ಶ್ರೀಮಂತರದಲ್ಲ. ಇವರ ತಂದೆ ಸರಕಾರೀ ಕೆಲಸದಲ್ಲಿದ್ದರೆಂಬುದಷ್ಟು ನಿಜ. ಇನ್ನೂ ಹೇಳಬೇಕೆಂದರೆ ಕಾರಕೂನಿಕೆಯ ಕೆಲಸ. ಸಾಕಲ್ಲವೇ ಇಷ್ಟು ವಿವರ? ಕಾರಕೂನರ ವೇತನದ ಕಲ್ಪನೆ ಯಾರಿಗಿಲ್ಲ! ಇವರ ತಾಯಿ ಧೈರ್ಯಶಾಲಿನಿ! ದೊರೆಯುತ್ತಿದ್ದ ವೇತನದಲ್ಲಿಯೇ ಸಂಸಾರದ ರಥವನ್ನು ಸಾಗಿಸುತ್ತಿದ್ದರು. ಆದರೆ ದೈವಕ್ಕೆ ಕಣ್ಣಿಲ್ಲವೇನೊ! ರಾಯರ ಬಾಲ್ಯದಲ್ಲಿಯೇ ತಂದೆ ಕಣ್ಣುಮುಚ್ಚಿದರು. ಇಷ್ಟು ಸಾಲವೆನ್ನುವಂತೆ, ತಂದೆಯ ನಂತರ ಸಂಸಾರ ರಥವ ಸಾರಥಿಯಾಗಬೇಕಿದ್ದ ಇವರ ಅಣ್ಣ Sprue ಬೇನೆಗೆ ಬಲಿಯಾಗಿ, ಬಲು ನರಳಿ, ಕೊನೆಗೆ ಬೇನೆಗೆ ಬಲಿಯಾದರು. ಆವರ ಅಣ್ಣನ ನರಳುವಿಕೆ ರಾಯರ ಸುಪ್ತಶಕ್ತಿಯನ್ನು ಬಡಿದೆಬ್ಬಿಸಿತು. ಯೋಗವೊದಗಿದಲ್ಲಿ ಈ ಬೇನೆಗೆ ಕರಣ ಕೋಧಿಸಿ, ಪರಿಹಾರ ಕಾಣುವ ಹವ್ಯಾಸವನ್ನು ಮನೋಭಿತ್ತಿಯಲ್ಲಿ ಚಿತ್ರಿಸಿಕೊಂಡರು. ಒಂದು ರೀತಿಯಲ್ಲಿ ರಾಯರ ತಂದೆ-ತಾಯಿಗಳು ಸುದೈವಿಗಳು. ಭವಿಷ್ಯದಲ್ಲಿ ಬೆಳಗುವ ಪುತ್ರರತ್ನನಿಗೆ ಜನ್ಮದಾನವನ್ನಿತ್ತ ಮಹಾಭಾಗ್ಯ ಅವರದು.

ರಾಯರಿಗೆ ಧರ್ಮದಲ್ಲಿ ತುಂಬ ಶ್ರದ್ಧೆ. ಉಪನಿಷತ್ತು, ಭಗವದ್ಗೀತೆ, ಹಾಗೆಯೇ ಬಾಯಿಬಲ್ ಮುತ್ತು ಕುರಾನಗಳನ್ನು ಆಳವಾಗಿ ಅಭ್ಯಾಸಿಸಿದರು. ಈ ಅಭ್ಯಾಸದ ಫಲವಾಗಿ ಶ್ರೀರಾಮಕೃಷ್ಣ ಆಶ್ರಮ ಸೇರಿ, ಜನತಾ ಜನಾರ್ದನನ ಸೇವೆಯಲ್ಲಿ ತಲ್ಲೀನರಾಗಬಯಸಿದ್ದರು. ಜೀವನದ ಮೊದಲಲ್ಲಿಯೇ ಕಷ್ಟ-ಕಾರ್ಪಣ್ಯಗಳನ್ನು ಕಂಡ ರಾಯರು, ಸಂಸಾರದ ನಿಃಸಾರತೆಯನ್ನರಿತು ಸಂನ್ಯಾಸಿಯಾಗಬಯಸಿದ್ದರು.

ಆದರೆ ಅದೊಂದು ದಿನ ಕ್ರೈಸ್ತನ್ ಪಾದ್ರಿಯೊಬ್ಬನ ಸಂಪರ್ಕದಿಂದಾಗಿ, ಇವರ ಜೀವನಚಕ್ರ ಬದಲಾಯಿಸಿತು. ವೈದ್ಯಕೀಯ ಶಿಕ್ಷಣ ಪಡೆದು ಜನತೆಗೆ ಸೇವೆ ಸಲ್ಲಿಸಲು ಕಂಕಣಬದ್ಧರಾದರು. ಗಣಿತ ಇವರ ಪ್ರಿಯವಿಷಯವಾಗಿತ್ತು. ಮದ್ರಾಸಿನ ವೈದ್ಯಕೀಯ ಕಾಲೇಜನ್ನು ಸೇರಿದರು. ಅದೊಂದು ದಿನ ತಮ್ಮ ಪ್ರಾಧ್ಯಾಪಕರಿಗೆ, ರಾಯರು Spure ದ ಬಗ್ಗೆ ಅನ್ವೇಷಣೆಯ ಬಗ್ಗೆ ಅಭಿಲಾಷೆ ವ್ಯಕ್ತಪಡಿಸಿದರು. ಆದರೆ ಆ ಪ್ರಾಧ್ಯಾಪಕ ಮಹಾಶಯರು ರಾಯರಿಗೆ ದಿಗ್ದರ್ಶನಮಾಡದೆ, ತಣ್ಣೀರೆರಚಿದರು. ಆಗ ರಾಯರು ಧೃತಿಗೆಡಲಿಲ್ಲ. ಜ್ಞಾನ ಪಿಪಾಸೆ ಇದ್ದ ಅವರಿಗೆ ಇಂತಹ ತಡೆಯಿಂದ ಹಿಂದೆಗೆಯುವ ಕಾರಣವಿರಲಿಲ್ಲ. ೧೯೨೨ರಲ್ಲಿ ವೈದ್ಯಕೀಯ ವಿಭಾಗದ ಪ್ರಯೋಗಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು.

ರಾಯರ ಜ್ಞಾನದಾಹವನ್ನು ಆವರ ಕಕ್ಕ ಅರಿತುಕೊಂಡಿದ್ದರು. ಅವರ ಮತ್ತು ಅವರ ಮಿತ್ರರ ಸಹಾಯದಿಂದ ರಾಯರ ವಿದೇಶಯಾತ್ರೆ ನಿಶ್ಚಯವಾಯಿತು. ಇದೇ ವೇಳೆಗೆ ಕಾಕಿನಾಡಿನ ಮಲ್ಲಾಡಿ ಸತ್ಯಲಿಂಗಮ್ ನಾಯಕರ ನಿಧಿಯಿಂದ ಸಹಾಯಧನ ದೊರೆಯಿತು. ಆದರ ಫಲವಾಗಿ ರಾಯರು ಇಂಗ್ಲಂಡಿಗೆ ಬಂದಿಳಿದರು.

ಡಾ. ರಾವ್ ಸೇರಿದ್ದು ಸುಪ್ರಸಿದ್ಧವಾದ ಲಂಡನ್ನಿನ School of Tropical Medicine; ಈ ಶಾಲೆಯಿಂದ ಡಿಪ್ಲೋಮಾಪಡೆದರು. ಇಲ್ಲಿ ಅಭ್ಯಾಸ ಸಾಗಿದಾಗ, ಡಾ. ರಾವ್ ಅವರಿಗೆ ಹಾರ್ವರ್ಡ್ ವಿದ್ಯಾ-

ಲಯದ ಡಾ. ರಿಚಾರ್ಡ್ ಸ್ಟ್ಯಾಂಗ್‌ರೊಂದಿಗೆ ನೇರವಾದ ಸಂಪರ್ಕ ಬಂದಿತು. ಸಂಪರ್ಕ ಅಲ್ಪಾವಧಿಯದಾದರೂ, ರಾಯರು ಡಾ. ಸ್ಟ್ಯಾಂಗರನ್ನು ಆಕರ್ಷಿಸಿದರು. ಡಾ. ಸ್ಟ್ಯಾಂಗರಿಗೆ ಇವರು ಕೇಳಿದ ಸಲಹೆಗಳಲ್ಲಿಯೇ ಇವರ ಪ್ರತಿಭಾ ಸಂಪನ್ನತೆ ವ್ಯಕ್ತವಾಯಿತು. 'ಡಾ. ಸುಬ್ಬರಾವ್ ಅವರ ಪ್ರಶ್ನೆಗಳಿಗೆ ನಾನು ಉತ್ತರಕೊಡಲಾರದೆ ದಿಙ್ಮೂಢನಾದೆ. ಈ ಬಗೆಯ ಆಳವಾದ ಅಭ್ಯಾಸಿಗಳನ್ನು ಮತ್ತು ಚಿಕಿತ್ಸಕರನ್ನು ನಾನು ಕಂಡುವಿಲ್ಲ' ಎಂದಿದ್ದಾರೆ ಡಾ. ಸ್ಟ್ಯಾಂಗರು. ರಾಯರ ಬುದ್ಧಿವಿಕಾಸಕ್ಕೆ ಬೋಸ್ಟನಿನಲ್ಲಿ ಅನುಕೂಲವಿರುವುದಾಗಿ ಹೇಳಿ, ಅಲ್ಲಿ ಬಂದರೆ ತಮ್ಮಿಂದ ಸರ್ವವಿಧದಲ್ಲಿ ಸಹಾಯ ದೊರೆಯುವುದೆಂದು ಭರವಸೆಯನ್ನಿತ್ತರು.

ಡಾ. ರಾವ್ ಡಾ. ಸ್ಟ್ಯಾಂಗರ ಸಲಹೆಯನ್ನು ಸಹರ್ಷ ಸ್ವೀಕರಿಸಿದರು. ಕೆಲದಿನಗಳಲ್ಲಿಯೇ ಅಮೇರಿಕೆಗೆ ಪ್ರಯಾಣ ಬೆಳೆಸಲು ನಿರ್ಧರಿಸಿದರು. ರಾಯರು ಎಂಬಾ ಧೈರ್ಯಶಾಲಿಗಳು. ಇದಕ್ಕೆ ಹೆಚ್ಚಾಗಿ ಆತ್ಮಬಲದ ಮೇಲೆ ಸಂಪೂರ್ಣ ಭರವಸೆಯುಳ್ಳವರು. ಸಪ್ಟೆಂಬರ್ ೧೯೩೮ರಲ್ಲಿ ರಾವ್ ಅಮೇರಿಗೆ ಪ್ರಯಾಣ ಬೆಳೆಸಿದರು.

ಇಂದು ಅನೇಕ ಜನ ಉಚ್ಚ ಶಿಕ್ಷಣಕ್ಕಾಗಿ ವಿದೇಶಯಾತ್ರೆ ಕೈಕೊಳ್ಳುವುದುಂಟು. ಕೆಲ ಜನರಿಗೆ ವಿದೇಶದಲ್ಲಿ ಆರ್ಥಿಕ ನೆರವೂ ದೊರೆಯುತ್ತಿರುವುದುಂಟು. ಆದರೆ ಡಾ. ರಾವ್ ಪಟ್ಟಪಾಡು ಹೇಳಲಾಸಲ್ಲ. ಅಮೇರಿಕೆಯಲ್ಲಿ ಪ್ರಾರಂಭದ ಜೀವನದ ಬಗ್ಗೆ ಆಪ್ತ ವರ್ಗಕ್ಕೆ ಬರೆದ ಪತ್ರವೊಂದು ಗಮನಾರ್ಹವಾದೆ :— 'ನಾನು ಬಹುವಾಗಿ ಬಳಲಿದ್ದೇನೆ. ನಾನು ಪಟ್ಟಪಾಡು ಊಹಾತೀತ. ನಾನು ಅಮೇರಿಕೆಯಲ್ಲಿ ಕಾಲಿಟ್ಟಾಗ ನನ್ನ ಬಳಿಯಲ್ಲಿದ್ದುದು ಎಂಥ ಅಮೂಲ್ಯ ಧನ—ರೂ. ೨೫೫! ಎಂಥ ದೊಡ್ಡ ಸೊತ್ತ ? ಜೀವನ ನಿರ್ವಹಣೆಗಾಗಿ ೮ ತಿಂಗಳ ಕಾಲ ಆಸ್ಪತ್ರೆಗಳಲ್ಲಿ ರೋಗಿಗಳ ಮಲಮೂತ್ರಗಳನ್ನು ಎತ್ತಿದ್ದೇನೆ. ಪ್ರಯೋಗಶಾಲೆಗಳಿಗಾಗಿ ಬೆಕ್ಕುಗಳನ್ನು ಹಿಡಿದು ಅವುಗಳನ್ನು ಮಾರಿದ್ದೇನೆ. ನನ್ನ ವೇತನಪತ್ರಿಕೆ ಗೊತ್ತೇ ? ಇದೋ ಇಲ್ಲಿದೆ—ಹಗಲಿನಲ್ಲಿ ಕಾಲೇಜಿನಲ್ಲಿ ದುಡಿತ; ರಾತ್ರಿ ೨ ಗಂಟೆಯವರೆಗೆ ಆಸ್ಪತ್ರೆಯಲ್ಲಿ ದುಡಿತ. ನನಗೆ ವಿಶ್ರಾಂತಿ ಎಂಬುದು ದೊರೆಯುತ್ತಿದ್ದುದು ೫-೬ ಗಂಟೆ ಮಾತ್ರ. ಪ್ರಾಧ್ಯಾಪಕರ ನೆರವಿನಿಂದಾಗಿ ಹಾರವರ್ಡ್ ಮೆಡಿಕಲ್ ಸ್ಕೂಲಿನ ವಾಚನಾಲಯದಲ್ಲಿ ಸಹಾಯಕ ಭಂಡಾರಿಯ ಕೆಲಸ ದೊರೆಯಿತು. ಅಲ್ಲಿ ಸಂಜೆ ೬-೧೦ರವರೆಗೆ ಸೇವೆ. ಹಾಗೆ ನೋಡಿದರೆ, ನಾನು ನಿಜವಾಗಿ ಕೆಲಸ ಮಾಡುತ್ತಿದ್ದುದು ೧೫-೩೦ ನಿಮಿಷ ಮಾತ್ರ. ಉಳಿದ ೩॥ ಗಂಟೆಗಳನ್ನು ಅಧ್ಯಯನದಲ್ಲಿ ಕಳೆಯುತ್ತಿದ್ದೆ. ಅನಂತರ ಪ್ರಯೋಗಶಾಲೆಯಲ್ಲಿ ರಾತ್ರಿ ೧೧ರವರೆಗೆ ಪ್ರಯೋಗದಲ್ಲಿ ಮಗ್ನನಾಗುವುದು. ಈ ಬಗೆಯ ಚಟುವಟಿಕೆಯಿಂದ ಬೇಜಾರವೆಂದಿರಾ ? ಊಹೂಂ ನಾನು ಇದರಲ್ಲಿ ಸುಖಿ '' ಎಂಥ ಜ್ಞಾನತೃಷೆ ಇವರದು ! ಅದೆಂಥ ಛಲವಾದಿ ಇವರು ! ಲಕ್ಷ್ಮೀ-ಸರಸ್ವತಿಯರು ಒಂದಾಗಿರುವುದು ಅಪರೂಪವೇ ಸರಿ. ಇಚ್ಛಾಶಕ್ತಿಯ ಮುಂದೆ ಎಂಥ ಆನಂದಗಳೂ ನಿರ್ನಾಮವಾಗುವುದೆಂಬುದನ್ನು ಇವರ ಸಾಧನೆಗಳಿಂದ ಕಾಣಬಹುದು. ಈ ಬಗೆಯ ಪರಿಶ್ರಮದಿಂದಾಗಿ ಕೆಲ ದಿನಗಳಲ್ಲಿ ವಿದ್ಯೆಯ ಖಣಿಯಾದರು. ಇವರ ವಾಸಸ್ಥಳವಾದರೂ ಎಂಥದು ? ಗಾಳಿ ಬೆಳಕು ಇಣಿಕಿ ಹಾಕಲೂ ಹಿಂಜರಿಯುತ್ತಿದ್ದ—ವಾಸಕ್ಕೆ ಅನಾರ್ಹವಾದ ಒಂದು ಚಿಕ್ಕ ಕೋಣೆ. ಇನ್ನು ಬಟ್ಟೆ—ಒಂದು ನೈಮೇಲಿದ್ದರೆ ಇನ್ನೊಂದು ಕೋಲಿನ ಮೇಲೆ—ಎಂಬಂತೆ. ಆಹಾರವೋ ? ಇಂತಹದೇ ಎಂಬುದಿಲ್ಲ. ಬೇಯಿಸಿದ ಅನ್ನಕಾಳನ್ನೋ ಅಥವಾ ಹಾಲನ್ನೋ ತೆಗೆದುಕೊಂಡು, ಉಳಿದ ಹಸಿವನ್ನು ನೀರಿನಿಂದ ಹಿಂಗಿಸಿಕೊಳ್ಳುವುದು. ಇಂತಹ ಕಷ್ಟಜೀವನವನ್ನು ನಗುನಗುತ್ತಾ ಕಳೆದರು. ಡಾ. ರಾವ್ ಅವರ ಮನದಾಳದಲ್ಲಿ ಒಂದೇ ಒಂದು ವಿಚಾರ ಡಾಂಗುಡಿ ಇಟ್ಟಿತು: ಅವರ ಅಣ್ಣನನ್ನು ಬಲಿ ತೆಗೆದುಕೊಂಡ Sprue ದ ನಿರ್ಮೂಲನ.

ಡಾ. ಸ್ಟ್ಯಾಂಗರ ನೇತೃತ್ವದಲ್ಲಿ ೧೯೩೩-೩೪ರಲ್ಲಿ ಹಾರವರ್ಡ್‌ನಲ್ಲಿ ಅಭ್ಯಸಿಸುತ್ತಿದ್ದಂತೆ, ಜೀವ ರಸಾಯನಶಾಸ್ತ್ರದ ಅಧ್ಯಯನದ ಅವಶ್ಯಕತೆಯನ್ನರಿತರು. ಆದರೆ ಆ ವಿಷಯದಲ್ಲಿ ಸಂಶೋಧನೆಗಳನ್ನು ಕೈಕೊಳ್ಳಲು ಇವರಿಗೆ ಪ್ರವೇಶ ಸಿಗಲಿಲ್ಲ. ಏಕೆಂದರೆ ಜೀವ ರಸಾಯನ ಶಾಸ್ತ್ರದಲ್ಲಿ ಇವರು ಸ್ನಾತಕರಾಗಿದ್ದಿಲ್ಲ. ಬಹು ಪರಿಶ್ರಮದಿಂದ ಡಾ. ಫಾಲಿನ್‌ರ ಆಶ್ರಯದಲ್ಲಿ, ಆ ವಿಷಯದ ಅಧ್ಯಯನ ಸಾಗಿಸಿ ಸ್ನಾತಕರಾದರು. ೧೯೩೦ರಲ್ಲಿ ಹಾರವರ್ಡ್ ವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದರು. ಈಗಾಗಲೇ ಈ ಜ್ಯೋತಿ ಪ್ರಕಾಶ ಬೀರ ತೊಡಗಿತ್ತು.

೧೯೩೫ರಲ್ಲಿ ರಂಜಕದ ಘಟನೆಯನ್ನು ನಿರ್ಧರಿಸುವ ಬಗೆಯನ್ನು ಡಾ. ಫಿಸ್ಕರೊಂದಿಗೆ ಕಂಡು ಹಿಡಿದರು. ೧೯೩೬ರಲ್ಲಿ ಸ್ನಾಯುಗಳಿಂದ Phospho-creatinine ಪೃಥಕ್ಕರಿಸಿದರು. ತನ್ಮೂಲಕ A. T. P. ಯ ಶೋಧನಾದಿಯು. ಇವರೀ ಸಂಶೋಧನೆಗಳಿಂದ ಪ್ರಭಾವಿತರಾಗಿ, ಲೋಕವಿಖ್ಯಾತರಾದ ಹಾಗೂ ಕೊಡುಗೈ ದೊರೆಗಳಾದ ರಾಕ್‌ಫೆಲ್ಲರ್ ಸಂಸ್ಥೆಯವರು, ಡಾ. ರಾವ್ ಅವರಿಗೆ ೨ ವರುಷಗಳ ವಿಶ್ವವೃತ್ತಿಯನ್ನು ನಯವಾಲಿಸಿದರು.

ಈಗ್ಗೆಯೇ ಕಲಕತ್ತೆಯಲ್ಲಿ, ರಾಕಫೆಲ್ಲರ್ ಸಂಸ್ಥೆಯ ಉದಾರ ಕೊಡುಗೆಯಿಂದ Institute of Hygiene & Public Health ನಲ್ಲಿ, ಜೀವ ರಸಾಯನ ವಿಭಾಗ ತೆರೆಯಲಾಗಿತ್ತು. ಈ ವಿಭಾಗವನ್ನು ಭೂಷಿಸುವ ಅಭಿಲಾಷೆಯನ್ನು ವ್ಯಕ್ತಪಡಿಸಿದರು ಡಾ. ರಾವ್. ಈ ಅಭಿಲಾಷೆಯು ಮೂಲೋದ್ದೇಶ ಸೇವೆಯಾಗಿತ್ತು. ಆದರೆ ಆ ಮಹತ್ಪದ ಸ್ಥಾನ ವಿದೇಶೀಯರಿಗೆ ವಿನಿಯೋಗವಾಗಿತ್ತು. ರಾಯರ ಅರ್ಹತೆಗೆ ರಾಕಫೆಲ್ಲರ್ ಸಂಸ್ಥೆಯವರ ಬೆಂಬಲವಿದ್ದರೂ, ರಾಯರಿಗೆ ಆಸ್ಥಾನ ಲಭಿಸಲಿಲ್ಲ. ಆ ಸಂಸ್ಥೆಯಲ್ಲಿಯೇ ಸೇವೆ ಸಲ್ಲಿಸುವ ಅಭಿಲಾಷೆ ಇದ್ದಲ್ಲಿ, ಉಪ-ಪ್ರಾಧ್ಯಾಪಕರ ಸ್ಥಾನ ಸಿಗಬಹುದಾಗಿ ತಿಳಿಸಲಾಯಿತು. ಆದರೆ ಪ್ರಯೋಗಗಳಿಗಾಗಿ ಇಲ್ಲಿ ಸೊನ್ನೆ ಇತ್ತು. ರಾಯರು ಈ ಕೊಡುಗೆಯನ್ನು ಭಾರವಾದ ಹೃದಯದಿಂದ ನಿರಾಕರಿಸಿದರು. ಮಾತೃಭೂಮಿಗೆ ಬರುವ ಯೋಗ ಅವರಿಗಿರಲಿಲ್ಲ. ಅವರ ಸೇವೆಯಿಂದ ಸಂಪನ್ನವಾಗುವ ಭಾಗ್ಯ ಭಾರತಮಾತೆಗಿರಲಿಲ್ಲ.

ಡಾ. ಸುಬ್ಬಾರಾವ್ ಅವರಿಗೆ ಕಾಂಚನದ ಮೋಹವಿರಲಿಲ್ಲ. ಉಚ್ಚ ಶಿಕ್ಷಣ ಹೆಚ್ಚು ವೇತನಕ್ಕೆ ಮಾರ್ಗವೆಂದೂ ಅವರು ತಿಳಿದಿದ್ದಿಲ್ಲ. ಸಂಶೋಧನೆಗಳಿಗೆ ಅವಕಾಶವಿರದ ಅತಿ ಹೆಚ್ಚು ವೇತನವಿರುವ ನೌಕರಿಗಿಂತ, ಸಂಶೋಧನೆಗೆ ಸರ್ವಾವಕಾಶವಿರುವ ಅತಿ ಕಡಿಮೆ ವೇತನದ ನೌಕರಿ ಅವರಿಗೆ ಮಾನ್ಯವಿತ್ತು. ಎಷ್ಟು ವಿಚಿತ್ರ! ತತ್ತ್ವಕ್ಕಾಗಿ ಎಂಥ ತ್ಯಾಗ? 'ಜ್ಞಾನ ಜ್ಞಾನಾರ್ಜನೆಗಾಗಿದೆಯಲ್ಲದೆ ಉದರಂಭರಣಕ್ಕಾಗಿಯಲ್ಲ' ಎಂಬುದು ಅವರ ತತ್ತ್ವಜ್ಞಾನ. ಡಾ. ರಾವ್ ಒಂದೆಡೆಗೆ ಹೇಳಿದ್ದಾರೆ: 'ನನಗೆ ಹಣದ ಮೋಹವಿಲ್ಲ. ನನಗಿರುವುದು ಪಿಂಗಲಾರದ ಹಸಿವು....ಅದುವೇ ಜ್ಞಾನಾರ್ಜನೆ. ತಣಿಸಲಾರದೆ ತೃಷೆ....ಅದುವೇ ಸಂಶೋಧನೆ! ಈ ಅತೃಪ್ತ ಹಸಿವು, ನೀರಡಿಕೆಗಳ ಮೂಲಕವಾಗಿಯೇ ಮಾನವಕುಲಕ್ಕೆ ಫಾಲಿಕ್‌ಆಮ್ಲ ಹಾಗು ಬಿ೧೨ ಮೊದಲಾದ ಕೊಡುಗೆಗಳು ದೊರೆತುದು. ನಿಷ್ಕಾಮಕರ್ಮಯೋಗಿಗಳು ಎಷ್ಟು ಜನ ಲಭಿಸಬಹುದು?

ಹಾರ್‌ವರ್ಡ್‌ನಲ್ಲಿ ಡಾ. ಸುಬ್ಬರಾವ್ ಅವರ ಕಾರ್ಯ ತ್ರಿವಿಧವಾಗಿತ್ತು: ಸಂಶೋಧನೆ, ಅಧ್ಯಯನ ಹಾಗೂ ಅಧ್ಯಾಪನೆ. ಈ ಮೂರೂ ಕಾರ್ಯಗಳಿಗಾಗಿ ಅವರು ವಿನಿಯೋಗಿಸುತ್ತಿದ್ದುದು ದಿನದ ೨೨ ಗಂಟೆ. ಬಹುಬೇಗ ವಿದ್ಯಾರ್ಥಿಗಳಿಗೆ ಪ್ರಿಯರಾದರು. ೧೯೩೧-೩೬ ರ ವರೆಗೆ ಆಸ್ಟಿನ್ ಶಿಷ್ಯವೃತ್ತಿ ದೊರೆತಿತ್ತು. ಹಾರ್‌ವರ್ಡಿನಲ್ಲಿ ೧೯೪೦ರವರೆಗೆ ಉಪ-ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಕೆಲ ದಿನಗಳಲ್ಲಿಯೇ ಉತ್ತಮ ಮೊತ್ತ ದೊರೆಯಬಹುದಾದ ಪ್ರಾಧ್ಯಾಪಕತ್ವವು ದೊರೆಯಿತು. ಕಾಂಚನಪ್ರೇಮಿಗಳಲ್ಲದ ಡಾ. ರಾವ್ ಅದನ್ನು ಧಿಕ್ಕರಿಸಿ, ಸುಪ್ರಸಿದ್ಧವಾದ ಲಾಡರ್ಲಿ ಪ್ರಯೋಗಶಾಲೆಯಲ್ಲಿ ಪ್ರವೇಶಿಸಿದರು.

೧೯೩೩ರಲ್ಲಿ ಡಾ. ರಾವ್ ಅವರಿಗೆ ಲಾಡರ್ಲಿ ಪ್ರಯೋಗಶಾಲೆಯ ಡಾ. ಕ್ಲಾರ್ಕ್‌ರೊಂದಿಗೆ ಸಂಪರ್ಕ ಬೆಳೆಯಿತು. ಅವರಾಗ Liver Extract ದ ಅಭ್ಯಾಸ ಕೈಕೊಂಡಿದ್ದರು. ಅವರೀ ಅಭ್ಯಾಸದಲ್ಲಿ ಡಾ. ರಾವ್ ಸಹಕರಿಸಿದ್ದರು. ಪ್ಲೀಹದ ವಿಶ್ಲೇಷಣೆಯಲ್ಲಿಯೇ sprue ನಿವಾರಕ ಔಷಧಿ ದೊರೆಯುವ ಸಂಭವ ಕಂಡುಬಂದಿತವರಿಗೆ. ಎಂತಲೇ ಅವರು ಲಾಡರ್ಲಿ ಪ್ರಯೋಗಶಾಲೆಯನ್ನು ಸೇರಿದರು. ಇಲ್ಲಿಯೇ ಇವರು ಅಪೂರ್ವ ಯಶಸ್ಸನ್ನು ಪಡೆದುದು. ಇವರೀ ಯಶಸ್ಸಿನಿಂದ ಸಂಸ್ಥೆ ಶೋಭಿತವಾಯಿತು. ಇಂಥವರನ್ನು ಪಡೆದ ಸಂಸ್ಥೆ ಧನ್ಯತೆ ಪಡೆಯಿತು. ಲಾಡರ್ಲಿ ಪ್ರಯೋಗಶಾಲೆಯಲ್ಲಿ ಇವರು ನಿಯಾಮಕರಾದುದು ಅಸಿಸ್ಟಂಟ್ ಡಿರೆಕ್ಟರರಾಗಿ; ಅದು ಸಂಶೋಧನಾ ವಿಭಾಗಕ್ಕೆ. ೧೯೪೨ರಲ್ಲಿ ಆ ವಿಭಾಗಕ್ಕೆ ಡಿರೆಕ್ಟರರಾದರು. ಈ ಸಂಸ್ಥೆಯಲ್ಲಿ ಇವರಿಗೆ ಬೇಕಾದ ಸಲಕರಣೆ, ಕೇಳಿದ ಹಣ ಹಾಗೂ ಸಹಾಯ, ವಿಜ್ಞಾನಿಗಳ ತಂಡ ಲಭ್ಯವಿತ್ತು. ಯಾವುದೇ ಸಮಸ್ಯೆಯನ್ನಾಗಲಿ, ಡಾ. ರಾವ್ ಆಳವಾಗಿ ಅಭ್ಯಸಿಸಿ, ಲಭ್ಯವಿರುವ ಸಾಹಿತ್ಯವನ್ನು ಪರಿಶೋಧಿಸಿ, ಆಮೇಲೆ ತಮಗೆ ಸರಿತೋರಿದ ಯೋಜನೆಗಳನ್ನು ರಚಿಸುತ್ತಿದ್ದರು. ಒಂದೊಮ್ಮೆ ಸಮಸ್ಯೆಯನ್ನೆತ್ತಿಕೊಂಡರೆ, ಅದಕ್ಕೆ ಪರಿಹಾರ ಕಾಣದ ವಿನಾ ಇವರ ಮನಸ್ಸಿಗೆ ಶಾಂತಿ ಇಲ್ಲ; ಹಸಿವೆ ನೀರಡಿಕೆ ಹಣಿಕಿಕ್ಕುವಂತಿಲ್ಲ....ಇವರ ಬಳಿ.

ಈ ಸಂಸ್ಥೆಯಲ್ಲಿಯೇ sprue ನಿವಾರಣೆಗೆ ಮದ್ದನ್ನು ಕಂಡು ಹಿಡಿದರು. ಇವರ ಸಂಶೋಧನೆಗಳಿಗಾಗಿ ೩೦ ಲಕ್ಷ ರೂಪಾಯಿ ಹಣದ ಸಹಾಯವನ್ನಿತ್ತು, ಇವರ ನೇತೃತ್ವದಲ್ಲಿ ೩೦ ಜನರ ಸಂಪನ್ನ ಸ್ನಾತಕತಂಡ ನಿಯಮಿಸಲಾಯಿತು. ಡಾ. ರಾವ್‌ರಿಂದಾಗಿ ಸುಸಜ್ಜಿತ ಪಾಚನಾಲಯ ಈ ಸಂಸ್ಥೆಯಲ್ಲಿ ಮೈವೆತ್ತಿತು. ಈಗಲೂ ಆ ವಾಚನಾಲಯ ಅವರ ಶುಭನಾಮವನ್ನು ಹೊತ್ತುಕೊಂಡಿದೆ.

ಇನ್ನೇಕೆ ವಿಲಂಬ? ತಮಗೆ ಬೇಡಿದಷ್ಟು ದ್ರವ್ಯ ವಿನಿಯೋಗಕ್ಕೆ ಲಭ್ಯವಿತ್ತು. ಕೈಕೊಂಡ ಯೋಜನೆಯನ್ನು ಕಾರ್ಯಕಾರಿಯಾಗಿಸಲು ಸಹಾಯಕ್ಕೆ ತಂಡ ಸಿದ್ಧವಿತ್ತು. ಮೇಲಾಗಿ ತಮಗೆ ಪ್ರಿಯವಾದ sprue ನಿವಾರಣೆಯ ಔಷಧಿ ಕಂಡುಹಿಡಿಯುವುದು. ಕೆಲದಿನಗಳಲ್ಲಿಯೇ sprue ನಿವಾರಿಸಬಲ್ಲ ರಾಸಾಯನ-ಫಾಲಿಕ್ ಆಮ್ಲದ ಜನ್ಮವಾಯಿತು. ಆದರೆ ಅದರ ಪ್ರಾರಂಭದ ತಯಾರಿಕೆಗೆ ತಗಲಿದ ವೆಚ್ಚ ಗ್ರಾಮಿಗೆ ೨೦೦೦ ಡಾಲರು. ಜನಸಾಮಾನ್ಯರಿಗೆ ಲಭ್ಯವಾಗುವಂತೆ ಈ ರಾಸಾಯನದ ಬೆಲೆ ಇರಬೇಕಷ್ಟೆ? ೨ ವರುಷಗಳಲ್ಲಿಯೇ ಫಾಲಿಕ್ ಆಮ್ಲ ಗ್ರಾಮಿಗೆ ೧೫ ಸೆಂಟುಗಳಷ್ಟು ಅಗ್ಗವಾಯಿತು. ದಿನಗಳೆದಂತೆ ಈ ಫಾಲಿಕ್‌ಆಮ್ಲ ಓ ಜೀವಸತ್ತ್ವಕ್ಕೆ ಸೇರಿದ್ದೆಂದು ಗೊತ್ತಾಯಿತು. ಹಾಗೆಯೆ ಪಾಂಡುರೋಗ ನಿವಾರಿಸಲು ಸಮರ್ಥವೆಂದು ಪ್ರಯೋಗಾಂತ್ಯದಲ್ಲಿ ಕಂಡುಬಂದಿತು. ಬಿ೧೨ ಜೀವನಸತ್ತ್ವವನ್ನು ಪೃಥಕ್ಕರಿಸುವುದರಲ್ಲಿ ಡಾ. ರಾವ್ ಸಾಕಷ್ಟು ಮುನ್ನಡೆದಿದ್ದರು; ಆದರೆ ಅದರ ಸಂಪೂರ್ಣ ಶ್ರೇಯ ಇಂಗ್ಲಂಡಿನ ಲೆಸ್ಟರ್ ಸ್ಮಿಥರದಿತ್ತು.

ಫಿಲಾರಿಯಾ ಹಾಗೂ ಅಸ್ಥಮಾದ ಮೇಲೆ ಈಗ ಸುಲಭವಾಗಿ ಉಪಯೋಗಿಸಲ್ಪಡುತ್ತಿರುವ ಹೆಟ್ರಾಝನ್ (Hetrazan) ಕಂಡು ಹಿಡಿಯುವ ಭಾಗ್ಯ ಡಾ ರಾವ್ ಅವರ ತಂಡಕ್ಕಿತ್ತು.

ಕ್ಷಯರೋಗ ಚಿಕಿತ್ಸೆಯಲ್ಲಿ Nialinamide ಬಹು ಮುಖ್ಯ ಪಾತ್ರವನ್ನು ವಹಿಸುತ್ತಿದೆಂದು ಡಾ. ರಾವ್ ಸಪ್ರಯೋಗವಾಗಿ ತೋರಿಸಿದರು. ಅಲ್ಪಾವಧಿಯಲ್ಲಿಯೇ ಇವರ ನೇತೃತ್ವದಲ್ಲಿಯೇ ಸುಪ್ರಸಿದ್ಧ ಔಷಧಿಯಾದ II N. H. ಬೆಳಕಿಗೆ ಬಂದಿತು. ಹಾಗೆಯೇ ಇವರ ತಂಡಕ್ಕೆ ಸೇರಿದ ಡಾ. ಡಗ್ಗರಿಂದ ಅರಿಯೋಮಾಯಿಸಿನ್ (Aureomycon) ಶೋಧವಾದುದು.

ಡಾ. ಸುಬ್ಬರಾವ್ ಪ್ರಸಿದ್ಧಿಪ್ರಿಯರಲ್ಲ; ಅವರ ನೇತೃತ್ವದಲ್ಲಿ ಕೈಕೊಂಡ ಸಂಶೋಧನೆಗಳ ವರದಿ ಪ್ರಕಟವಾಗುವಾಗ, ಅವರೊಂದಿಗೆ ಕಾರ್ಯಮಾಡಿದ ಶಾಸ್ತ್ರಜ್ಞರ ತಂಡದ ಹೆಸರು ಇರಬೇಕಷ್ಟೇ. ಆ ಹೆಸರಿನ ಪಟ್ಟಿಯಲ್ಲಿ ಡಾ. ರಾವ್ ಅವರ ಹೆಸರು ಕೊನೆಗೆ ಇರುತ್ತಿದ್ದುದು ಎಂಥ ಆಶ್ಚರ್ಯದ ಸಂಗತಿ? ಎಂಥ ಉದಾರಿಗಳವರು! ಇಂದು ಯಾರೋ ಮಾಡಿದ ಪ್ರಯೋಗಗಳ ಫಲಿತಾಂಶವನ್ನು ಇನ್ನಾರೋ ತಮ್ಮ ಹೆಸರಿನೊಂದಿಗೆ ಜೋಡಿಸಿಕೊಂಡು ಮೆರೆಯುತ್ತಿಲ್ಲವೆ?

ಡಾ. ಸುಬ್ಬರಾವ್ ವಿಜ್ಞಾನಿ ಮಾತ್ರವಾಗಿರಲಿಲ್ಲ. ಉತ್ತಮ ಶಿಕ್ಷಕರು, ವೇದಾಂತಿಗಳು, ಅದಕ್ಕೂ ಹೆಚ್ಚಾಗಿ ಮಾನವತಾ ಪ್ರೇಮಿ.

ಹಾಗೆ ನೋಡಿದರೆ ಡಾ. ರಾವ್ ಹುಟ್ಟು ವಿಜ್ಞಾನಿ. ಆಗಾಗಿನ ಅನನುಕೂಲತೆಗಳು ಅವರ ಧೀಃಶಕ್ತಿಯನ್ನು ತೂಗಿ ನೋಡಿದುವು. ಅವರ ಜೀವನದ ಸಾರಸರ್ವಸ್ವ ಜ್ಞಾನಾರ್ಜನೆ ಮತ್ತು ಸಂಶೋಧನೆಗಳಾಗಿದ್ದುವು.

ಡಾ. ಸುಬ್ಬರಾವ್ ತುಂಬಾ ಸಂಕೋಚಸ್ವಭಾವದವರು. ಹಾಗೆ ನೋಡಿದರೆ ಸಂನ್ಯಾಸಿಯಂತಿದ್ದರು. ಅವರಿಗೆ ಧರ್ಮದಲ್ಲಿ ಶ್ರದ್ಧೆ ಇತ್ತು; ಆದರೆ ಆಷಾಢಭೂತಿತನದ ಬಗ್ಗೆ ಅಸಡ್ಡೆ ಇತ್ತು. ತಾಸೆರಡು ತಾಸು ಧ್ಯಾನಸ್ಥರಾಗಿರುತ್ತಿದ್ದರು. ಈ ಧ್ಯಾನದಿಂದಾಗಿ ಅವರಿಗೆ ಮಾನಸಿಕ ಶಾಂತಿ ಲಭಿಸುತ್ತಿತ್ತು.

ಡಾಕ್ಟರರಿಗೆ ಮಕ್ಕಳನ್ನು ಕಂಡರೆ ತುಂಬ ಮಮತೆ. ತಮ್ಮ ವಯೋಮಾನವನ್ನು ಮರೆತು ಮಕ್ಕಳೊಂದಿಗೆ ಮಕ್ಕಳಾಗಿ ಸಮರಸರಾಗುತ್ತಿದ್ದರು. ಅವರಲ್ಲಿಯೇ ದೇವರ ಸಾಕಾರ ಸ್ವರೂಪವನ್ನು ಕಾಣುತ್ತಿದ್ದರು. ಕ್ರಿಸ್ತಮಸ್‌ನಲ್ಲಿ ಬಡಮಕ್ಕಳಿಗೆ ಬೊಂಬೆ ಮತ್ತು ಮಿಠಾಯಿಗಳಿಗಾಗಿ ಹಣ ನೀರಿನಂತೆ ಖರ್ಚು ಮಾಡುತ್ತಿದ್ದರು. ತುಂಬ ಉದಾರಿ ಡಾ. ಸುಬ್ಬರಾವ್. ತನುಗಾಗಿ ಹೆಚ್ಚಿನವನ್ನು ಇಟ್ಟುಕೊಳ್ಳುತ್ತಿರಲಿಲ್ಲ. ತಮ್ಮ ಜೀವನಕ್ಕೆ ಸಾಕಾಗುವಷ್ಟನ್ನು ಮಾತ್ರ ಇಟ್ಟು ಉಳಿದದ್ದನ್ನು ಧರ್ಮಾರ್ಥ ಕಾರ್ಯಕ್ಕಾಗಿ ಕಾದಿರಿಸುತ್ತಿದ್ದರು. ಇವೇ ಮನೋಭಾವಕ್ಕ ಹಿನ್ನೆಲೆ ಇರದಿಲ್ಲ. 'ನಾನು ಹುಟ್ಟಿದ್ದು ಬಡತನದಲ್ಲಿ; ಸಾಯುವಾಗ ಹಣವನ್ನು ಹೊತ್ತುಕೊಂಡು ಹೋಗಲೆ?'

ಒಂದೊಮ್ಮೆ ಅವರ ವಿದ್ಯಾರ್ಥಿನಿಯೊಬ್ಬಳು ಕ್ಷಯದಿಂದ ಬಳಲುತ್ತಿದ್ದಳು. ಅವಳೋ ಬಡವಿ, ನೇಲಾಗಿ ಹತ್ತಿರದ ಬಂಧುಗಳು ಅವಳಿಗಿರಲಿಲ್ಲ. ಡಾ. ಸುಬ್ಬರಾವ್ ಅವಳ ಬಂಧುವಾದರು. ಅವಳ ಆರೈಕೆಗಾಗಿ ತಮ್ಮ ವೇತನದ ಅರ್ಧಭಾಗವನ್ನು ತೆಗೆದಿರಿಸಿದರು. ಅವಳ ಆರೈಕೆ ೮ ವರ್ಷಗಳ ಕಾಲ ನಡೆಯಿತು. ಡಾ. ರಾವ್ ಈ ಪರೋಪಕಾರದ ಬಗ್ಗೆ ಚಕಾರ ಶಬ್ದ ಎತ್ತಿದ್ದಿಲ್ಲ. ಇಂಥ ಪರೋಪಕಾರಗಳನ್ನೆಸ್ಟೋ ಮಾಡಿದ್ದಾರೆ ರಾಯರು. ಅದೆಷ್ಟೊ ಆಸ್ಪತ್ರೆಗಳು, ಚರ್ಚುಗಳು ಮತ್ತು ಅಮೇರಿಕೆಯಲ್ಲಿಯ ರಾಮಕೃಷ್ಣಾಶ್ರಮ ಇವರ ಧನಸಹಾಯ ಪಡೆದಿವೆ.

ಈ ಜಾಜ್ವಲ್ಯದೀಪ ಎಷ್ಟು ಕಾಲ ಬೆಳಗೀತು! ೧೯೪೮ನೆಯ ಇಸ್ವಿಯ ಆಗಸ್ಟ್ ೯ರಂದು–ಸೋಮವಾರ ಮುಂಜಾನೆ–ಇವರ ಜೀವಪಕ್ಷಿ ಹಾರಿ ಹೋಯಿತು. ಚಿರನಿದ್ರೆಯಲ್ಲಿ ಇವರನ್ನು ಸಹಕಾರಿಗಳು ಕಂಡರಂದು. ಆ ದಿನದ ಮುನ್ನಿನ ದಿನ Coronary Thrombosis ದ ಆಘಾತವಾಗಿತ್ತು. ೫೨ ವರುಷ ಮಾತ್ರ ಜೀವಿಸಿ, ಇಚ್ಛಿಸಿದ ವಸ್ತುವನ್ನು ಕಂಡುಹಿಡಿದು, ಲೋಕಕಲ್ಯಾಣ ಸಾಧಿಸಿದ ತೃಪ್ತಿ ಅವರಿಗಿತ್ತು. ಜಗತ್ತು ಅವರಿಗೆ ಕೊಟ್ಟದ್ದಕ್ಕಿಂತ ಹೆಚ್ಚಿಗೆ ಅವರಿಂದ ಕೊಂಡಿದೆ. ಭಾರತದ ಬಡ ಕುಟುಂಬದಲ್ಲಿ ಜನಿಸಿ, ಕಷ್ಟಪಟ್ಟು ವಿದೇಶದಲ್ಲಿ ಪ್ರವೇಶಿಸಿ, ಬಹು ಯಾತನೆಯ ಜೀವನ ಸಾಗಿಸುತ್ತ ಜ್ಞಾನ ಸಂಪಾದಿಸಿ, ಜಗತ್ತಿನ ನಾನಾಂಕಿತ ಪ್ರಯೋಗಶಾಲೆಯಲ್ಲಿ ಮುಖ್ಯ ಪದಾಧಿಕಾರಿಗಳಾಗಿ ಶ್ರೇಯೋಭಾಗಿಗಳಾದರು. ಇದು ಭಾರತದ ಭಾಗ್ಯವೆನ್ನಬಹುದೆ?

ನಮ್ಮ ಮನೆಯ ಕುಡಿ, ಇನ್ನೊಬ್ಬರ ದ್ರಾವಕದಲ್ಲಿ ಮಿಂದು, ಅವರ ಮನೆಯನ್ನು ಬೆಳಗಿತು. ಅವರೋ ತುಂಬ ಉದಾರಿಗಳು. ತಮಗೆ ಮೊತೆತ ಪ್ರಭೆಯಲ್ಲಿ ನಮಗೂ ಪಾಲುಕೊಡಬಯಸಿದರು. ಇವರ ಸವಿನೆನಪಿಗಾಗಿ ಆ ಮಹಾಸಂಸ್ಥೆಯು ಭಾರತದಲ್ಲಿ ತನ್ನ ಶಾಖೆಯನ್ನು ತೆರೆದಿದೆ. Lederle Laboratores ದವರ ಬುಲಸಾರದಲ್ಲಿರುವ ತನ್ನ ಶಾಖೆಯಲ್ಲಿ ಡಾ. ಸುಬ್ಬಾರಾವರ ಪುತ್ಥಳಿಯ ಅನಾವರಣಕ್ಕೆ ಅವರ ತಾಯಿಯನ್ನು ಆಮಂತ್ರಿಸಲಾಗಿತ್ತು. ಆ ಮಹಾತಾಯಿ ಎಂಥ ಅಶ್ರುಗಳನ್ನು ಕರೆದಿರಬಹುದು?

ಮಾನವಕುಟುಂಬಕ್ಕೆ ಬಹು ಪ್ರಯೋಜನಕಾರಿಯಾದ ಔಷಧಿಗಳನ್ನು ಕಂಡುಹಿಡಿದ ಡಾ. ಸುಬ್ಬರಾವ್ ಧನ್ಯರು!

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಗಣಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು! ಶ್ರಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,

ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಿಗಿ

ಸುಭಾಸ ರೋಡ್, ಧಾರವಾಡ

ಭಾರತ ನವೋದಯ

ಡಿ. ಎಚ್. ಜೆ. ಉಪಾಧ್ಯಾಯ, ಎಂ. ಎ., ಹೈದರಾಬಾದು-ದಕ್ಷಿಣ

(೧)

ಭುವನ ಭಾಗ್ಯದ ರವಿಯು—ಭಾರತ ನವೋದಯವು
ಮೂಡಣದಿ ಮೂಡಿಹುದು ಮತ್ತೆ ನೋಡು,
ಭಾರತದ ಪ್ರಾಂಗಣದಿ ಹೊಂಬೆಳಕ ಹೊನಲಾಡಿ
ಉದಯವನು ಹಾಡಿಹವು ಕಾಡುಬೀಡು.

(೨)

ವೇದಘೋಷವ ಗೈದು ಉದಯವಾಗಿಹ ನಾಡು
ಉಪನಿಷತ್ತಿನ ದಿವ್ಯ ಬೋಧಗಳ ಗೂಡು;
ಧರ್ಮಮರ್ಮದ ಬೀಡು, ಶಾಸ್ತ್ರಕಲೆಗಳ ಮೂಡು
ಜಗದ್ವಂದ್ಯ ಗುರುವರರ ಪಡೆವ ನಾಡು.

(೩)

ಜ್ಞಾನನಿಧಿಗಳ ಬೀಡು, ಮಾನನಿಧಿಗಳ ನಾಡು:
ತ್ಯಾಗಯೋಗದ ನಿಧಿಗೆ ಆಗಿ ನೆಲೆವೀಡು;
ತತ್ತ್ವವೇತ್ತರ ಬೀಡು, ಮುಕ್ತಿಮಾತೆಯ ಮೂಡು
ಭಕ್ತಿಸೌರಭ ಸುರಿದ ಭವದ ಜಾಡು.

(೪)

ಜೀವಜಾತಗಳಲ್ಲಿ ದೇವಭಾವವನರಸಿ
ದೇವಲೀಲೆಯನೊರೆದ ಅಮರೆ ನುಡಿಯು,
ಧರ್ಮಕುರುಕ್ಷೇತ್ರದಲಿ ನಿಯತಕರ್ಮವನೊರೆವ
ನಿಷ್ಕಾಮ ಕರ್ಮದ ಗುರಿಯ ಅಭಯ ನುಡಿಯು.

(೫)

ದಾರಿದ್ರ್ಯದೌರ್ಭಾಗ್ಯ ದೌಷ್ಟ್ಯಹಿಂಸೆಯ ತೊಡೆದು
ಭದ್ರ ಜೀವನವಿತ್ತ ಮಂಗಲದ ನಾಡು,
ಕಾರುಣ್ಯದಕ್ಷಯದ ಅಮೃತ ರಕ್ಷೆಯನಿತ್ತ
ತ್ಯಾಗಯೋಗದ ಸಿರಿಯ ಸಂಗಮದ ಬೀಡು.

(೬)

ದೇವಮಾನವ ನಡೆಯ ಮಧುರ ಆದರ್ಶಗಳ
ಮೂರ್ತಿಸಿದ ವಾಲ್ಮೀಕಿ ಕವಿಕೋಕಿಲ;
ಧರ್ಮದಿಂದಲೆ ಅರ್ಥ, ಧರ್ಮದಿಂದಲೆ ಕಾಮ
ಎಂಬ ಮರ್ಮವನೊರೆದ ವ್ಯಾಸನತುಲ.

(೭)

ಮಧುಮಧುರ ಭಾವಗಳ ಮಧುರತರ ಛಂದದಲಿ
ರಸಿಕರೆದೆ ಮಿಡಿದಿರುವ ಕವಿ ಕಾಳಿದಾಸ;
ನನ್ನಯ್ಯ, ಕವಿಕಂಬ, ಕುವರ ವ್ಯಾಸರು ಮತ್ತೆ
ಸಂತ-ತುಕ, ಗಾಲಿಬನು, ತುಳಸಿದಾಸ,

(೮)

ದೇವವಾಣಿಯಲೊಮ್ಮೆ, ದೇಶವಾಣಿಯಲೊಮ್ಮೆ
ಜೀವವೀಣೆಯ ಮಿಡಿದ ರಸವಾಣಿಯು,
ಸರ್ವ ಭಾಷಾಸ್ನೇಹ ಸುಮನ ಸೌರಭಸೂತ್ರ-
ವಾಗಿರಲಿ ಋಷಿವಾಣಿ ಜನವಾಣಿಯು.

(೯)

ಸತ್ಯಸಮರಾಂಗಣದಿ ನಿರ್ಭಯದ ಶರತೊಟ್ಟು
ಹಿಂಸೆಯನು ಹಿಂಸಿಸದೆ ಗೆಲಿದ ಆರ್ಯ,
ಮುರಿದು ಮುಕ್ಕಾಗಿರ್ದ ನಾಡಸಿರಿ ಮೂರುತಿಗೆ
ಭದ್ರದರ್ಶನವಿತ್ತ ಶಿಲ್ಪಿವರ್ಯ.

(೧೦)

ಶೀತಯುದ್ಧದಿ ಒಗೆದ ಮಂಜುಮುಸುಕನು ತೆರೆದು
ಶಾಂತಿಸುಧೆಯನು ಕರೆವ ಶಾಂತಧೀರ—
ಸಮಭೋಗ ಸಂಪದಕೆ ಜನಮನವ ನೂಳುತಿಹ
ಸಾಮ್ಯಯೋಗದ ಕೃಷಿಕ ಕ್ರಾಂತಿವೀರ.

(೧೧)

ಜನರಾಜ್ಯದುದಯದಲಿ ಪ್ರಗತಿಗೀತವ ಹಾಡಿ
ಸಮಸಮಾಜದ ಸಿರಿಗೆ ದುಡಿಯುತಿದೆ ಜನವು,
ಪರರ ಆಳ್ಕೆಯ ನೊಗವ ಕೊಡಹಿ ಎದ್ದೇಳುತಿವೆ
ಸ್ವಾತಂತ್ರ್ಯ ಸಾಹಸದಿ ವಿವಿಧ ಜನಪದವು.

(೧೨)

ಅರಸುಮನೆ, ಆಳುಮನೆ, ಧನಿಕಜನವಸತಿಗಳ
ಹಿಗ್ಗು ತಗ್ಗನು ಒಂದೆ ಸಮತಲಕೆ ನಿಲಿಸಿ;
ಹೊಸಯುಗದ ಸಿರಿಮನೆಯ ಕಟ್ಟಲಣಿಯಾಗಿಹರು
ಬಿರುಕು-ಮುರುಕುಗಳೆಲ್ಲು ಬರದಂತೆ ತಪಿಸಿ.

(೧೩)

ನಾಡಕಟ್ಟುತಲಿಹರು ಸ್ವಚ್ಛಂದ ಛಂದನಲಿ
ಸ್ವಾತಂತ್ರ್ಯದಂದವೇ ಸ್ನೇಹಬಂಧ;
ಪ್ರೇರಣೆಯು ಸ್ವಚ್ಛಂದ, ಅನುಕರಣೆ ನಿರ್ಬಂಧ
ಓರಣೆಯು ಮನೆಮನೆಗು ಅಂದಚೆಂದ.

(೧೪)

ಸುಪ್ತ ಈಜಿಪ್ತರಿದೊ ಎಚ್ಚತ್ತು ಬಾಳಿಹರು
ಅರೆಬಿಯರು ಕಳೆದರಿವ ನುರಳಿ ಪಡೆದಿಹರು;
ಫ್ರೆಂಚ ಚೀನರ ಸ್ವಾರ್ಥ ಸಂಚಯನ ಹೊಂಚಿಕೆಗೆ
ಆಲ್ಜೀರಿಯಾ ತಿಬೇಟರು ಕೂಗುತಿಹರು.

(೧೫)

ಶಾಂತಿ ಸಹಜೀವನದ ಸವಿಯೆಡೆಯನಿಕ್ಕುತಿದೆ
ಭಾರತದ ಶಮೆದಮೆಯ ನೀತಿ ನೆಲೆಗಟ್ಟು;
ನೋವು-ನರಳಿಕೆಯಲ್ಲು ಸ್ನೇಹಭಾವವ ತಳೆದು
ಬಾಡುವುದೆ ಸೈರಣೆಯ ಗೆಲವುಗುಟ್ಟು.

(೧೬)

ಪಂಚವಾರ್ಷಿಕವೆರಡುಯೋಜನೆಯಯಾಗದಲಿ
ಸುಸ್ಥಿತಿಗೆ ವಂಚಿತರು ಬಡಜನತೆಯು,
ಕೂಲಿನಾಲಿಯು ಸಾಲದಿವೆ ಬದುಕು ಬಾಳುವೆಗೆ
ದುಡಿವವರ ದಣುವಿಕೆಗೆ ಇಲ್ಲ ಬೆಲೆಯು.

(೧೭)

ನೊನ್ನ ಹೊಳೆಯಲಿ ಅನ್ನ ಹಡಗಗಳು ಬಂದರೂ
ಬನ್ನಬಡುತಿದೆ ಜನವು ಅನ್ನಕಾಗಿನ್ನು,
ಕಾಯಲಿಹ ಬೇಲಿಗಳೆ ಬೆಳೆಯೆಲ್ಲ ಮೇದು ಬರೆ
ಉರಿದೆದ್ದು ಬಂದಾರು ಬಡಬಗ್ಗರಿನ್ನು.

(೧೮)

ಬಡಜನರ ಹೆಸರಿನಲಿ ನಡೆವ ಪ್ರಸ್ತಗಳಲ್ಲಿ
ಬಕ-ಹಿಡಂಬಕಸುತರೆ ತಿಂದು ತೇಗಿಹರು,
ನಾಡಿನರ್ಥದ ಅನ್ನ ಕಳ್ಳಪೇಟೆಗೆ ಅಗಿ
ದುಡಿವವರ ಅರಿಹೊಟ್ಟೆಗಿಹುದು ಬಿಸಿಯುಸಿರು.

(೧೯)

ಸಮತೆ ಎಂಬುದು ಎಲ್ಲೊ ಒಬ್ಬನಾಚರಿಪ ವ್ರತ
ಸುಲಿಗೆಯೇ ಬಹುಜನದ ನಿತ್ಯಾಚರಣೆಯು,
ಸಿರಿತನವು ಹಲಜನರ ತೊತ್ತಾಗಿ ಸೊತ್ತಾಗಿ
ಬಡವರಲಿ ಉಳಿದಿರುವುದೊಂದೆ ಸೈರಣೆಯು.

(೨೦)

ಏಳಿ ! ಮಕ್ಕಳೆ ಏಳಿ ! ಭಾರತನವೋದಯದ
ಹೊಂಬೆಳಕ ಹೊನಲಿನಲಿ ಮುಡಿಯಾಗಿ ಮಿಂದು,
ಸಮಭೋಗ ಸಂಪದದ, ಸರ್ವ ಮಾನವಹಿತದ
ಕೃಷಿಯ ಹೆಲಧರರಾಗಿ ನೆರವಾಗಿರಿಂದು !

ದಿ ಸದ್ವೈದ್ಯ ಶಾಲಾ (ಪ್ರೈವೇಟ್) ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನಸೇವೆಯಲ್ಲಿ ತೊಡಗಿರುವ

ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ,

ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ

ಅತ್ಯಾಧುನಿಕ ಕ್ರಮದಲ್ಲಿ

ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ

ನಿತ್ಯವೂ ತಯಾರಾಗುತ್ತಲಿವೆ.

॥ ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ ॥

ಶಾಖೆಗಳು:

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)

(ಕನ್ನಡ ನೀಷು ಬಿಟ್ಟು)

ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ್

'ಮೋಸ'

(ಚಿಕ್ಕಕತೆ)

ಡಿ. ಆನಂದ ವರ್ಧ, ಮುಂಬಯಿ

ಅಪೂರ್ಣಜ್ಞಾನ, ಭಾವನಾತ್ಮಕ ಮನಸ್ಸು— ಇವು ಇರುವವರೆಲ್ಲರೂ ಜೀವನಯಾತ್ರೆಯಲ್ಲಿ ಸುಮಿತ್ರೆಯಂತೆ ಮೋಸಹೋಗುವವರೆ ! ಕಾರಣವಿಲ್ಲದೆ ಕರುಳನ್ನು ಕದಡಿಕೊಳ್ಳುವವರೇ !

'ಕಾ ಕಾ' ಎಂದು ಚೀರುತ್ತ 'ಓ' ರೂಟಿನ— ಎತ್ತರ ಕೆಂಪು ಬಸ್ಸು ಬಿನ್ನಾಣಗಿತ್ತಿಯಂತೆ ಬಳುಕುತ್ತ, ಫ್ಲೋರಾಫೌಂಟನ್ನಿನ ಸ್ಟಾಪಿನ ಬಳಿ ಬಂದು ನಿಂತಿತು. ದಿನದಂತೆಯೇ ಹನುಮಂತನ ಬಾಲದಂತೆ ಬೆಳೆಯುತ್ತ ಹೋಗುವ 'ಕ್ಯೂ', ದೀಪದ ಕಂಬವನ್ನು ಸುತ್ತುಹಾಕಿ ಬೆಳೆಯುತ್ತ ನಡೆದಿತ್ತು.

"ಸಿಫ್ಟ್ ಚಾರ್ ಸೀಟ್" ಕಂಡಕ್ಟರು ಒದರಿದ.

ಸುಮಿತ್ರೆಯೇ ಮೂರನೆಯವಳು; ಲಗುಬಗೆಯಿಂದ ಆಕೆ ತನ್ನ ಪರ್ಸನ್ನು ಸಾವರಿಸಿದಳು, ಹೆಗಲಮೇಲಿನ ಸೆರಗನ್ನು ಸರಿಪಡಿಸಿದಳು; ಮತ್ತು ಮುಂದೆ ಸರಿಯುತ್ತಿರುವ ಸಾಲಿನೊಂದಿಗೆ ಬಸ್ಸಿನ ಒಳಗೆ ಹೊಕ್ಕಳು. ಆಕೆಯ ಸುದೈವದಿಂದ ಕಿಟಕಿಯ ಬದಿಯ ಸೀಟೇ ಸಿಕ್ಕಿತು ಆಕೆಗೆ.

'ಝಿಪ್'ನ್ನು ಸರಿಸಿ ಸುಮಿತ್ರೆ ಪರ್ಸನ್ನು ತೆರೆದಳು. ಒಳಗಿದ್ದ ಪುಟ್ಟ ಕೈವಸ್ತ್ರವನ್ನು ಹೊರದೆಗೆದು, ಆಕೆ ತನ್ನ ಬೆವೆತ ಮುಖವನ್ನು ಒರಸಿಕೊಂಡಳು. ಬಸ್ ಬಿಟ್ಟಿತು. ಕೈಯಲ್ಲಿಯ 'ಪಂಚ್'ನ್ನು ಕಟ್‌ಕಟ್ ಬಾರಿಸುತ್ತ ಬಳಿಗೆ ಬಂದ ಕಂಡಕ್ಟರನ ಕೈಯಲ್ಲಿ ಆರು ಆಣೆಯನ್ನು ತುರುಕಿ, ಆಕೆ ತಿಕೀಟು ಕೊಂಡಳು. ತನ್ನ ರಿಸ್ಟ್‌ವಾಚಿನ ನಾಜೂಕಾದ ಚೇನಿನಲ್ಲಿ ಅದನ್ನು 'ಕಾಳಜಿ'ಪೂರ್ವಕವಾಗಿ ಮಡಿಚಿ ಇಟ್ಟು, ಕೈವಸ್ತ್ರವನ್ನು ಎದೆಯ ಮುಂದೆ ಬೀಸಿ ಗಾಳಿ ಹಾಕಿಕೊಂಡಳು. ಫೋರ್ಟ್‌ವಿಭಾಗದಲ್ಲಿಯ ಆ ಅಜಸ್ರವಾದ ಪಂಜರದಿಂದ ಸಾವಿರಾರು ಜೀವಿಗಳು, ಬಿಡುಗಡೆಯ ನಿಟ್ಟುಸಿರನ್ನು ಬಿಡುತ್ತ, ವಿಶ್ರಾಂತಿಗಾಗಿ— ಬೆಂದ ಬೆವೆತ ಮನಸ್ಸಿಗೆ ಮತ್ತು ಬಣಿದ ದೇಹಕ್ಕೆ ನಾಳೆಯ ಉದ್ಯೋಗಕ್ಕಾಗಿ ಉರುವಲನ್ನು ಹಾಕಲಿಕ್ಕೆ— ಮನೆಯಕಡೆ ಓಡುತ್ತಿದ್ದುವು. ಜನರಿಂದ ಕಿಕ್ಕಿರಿದ ಫ್ಲೋರಾ ಫೌಂಟನ್ನಿನ ಆ ವಿಶಾಲವಾದ ರಸ್ತೆಯು ಕೂಟ ಸಾವಕಾಶವಾಗಿ ಹಿಂದೆ ಬೀಳುತ್ತಿತ್ತು.

ಸುಮಿತ್ರೆ ನಿಟ್ಟುಸಿರು ಬಿಟ್ಟಳು. ಕಾಲಲ್ಲಿಯ ಸೆಂಡಲ್ಸ್‌ಗಳನ್ನು ಸಡಿಲಿಸಿದಳು. ಮೆತ್ತಗಿನ ಗಾದೆಯ ಮೇಲೆ ಹಾಯಾಗಿ ಕುಳಿತುಕೊಂಡಾಗ, ಆಕೆಯ ಕುಳಿತ ಅವಯವಗಳಿಗೆ ಸ್ವಲ್ಪ ನೆಮ್ಮದಿಯಾದಂತಾಯಿತು. ಈಗ ಮಾಹೀಮಿನ ಕೊನೆಯ ಸ್ಟಾಪ್ ಬರುವತನಕ, ಆಕೆ ಮನಸಿನಲ್ಲಿ ಯಾವ ವಿಚಾರವನ್ನೂ ತರದೆ, ಕಿಟಕಿಯಿಂದ ಬರುವ ಗಾಳಿಯ ಸುಖವನ್ನು ಅನುಭವಿಸುತ್ತ ಶಾಂತಚಿತ್ತಳಾಗಿ ಕುಳಿತುಕೊಳ್ಳುವವಳಿದ್ದಳು. ನರಗಳಲ್ಲಿ ಹೆಪ್ಪುಗಟ್ಟಿದ ಇಡಿಯ ದಿನದ ಶ್ರಮದ ವಿಷವು ಅದರಿಂದ ಮೆಲ್ಲನೆ ಕರಗಬಹುದಿತ್ತು; ಅದರ ಪರಿಣಾಮವಾಗಿ ಮನೆಯನ್ನು ಸೇರುವಾಗ ಆಕೆ ದಿನದಂತೆಯೇ ಪ್ರಸನ್ನಚಿತ್ತದಿಂದ ಕಳ್ಳಸಿಳ್ಳನ್ನು ಹಾಕಬಹುದಾಗಿತ್ತು.

ಇದು ಸುಮಿತ್ರೆಯ ದಿನದ ಕಾರ್ಯಕ್ರಮ. ಲೋಕಲ್ ರೇಲ್ವೆ ಪ್ರವಾಸದ ತ್ರಾಸ ಮತ್ತು ಓಡಾಟಗಳಿಂದ ಬೇಸರಪಟ್ಟು ಆಕೆ, ದಿನವೂ ಬಸ್ಸಿನಿಂದಲೇ ಮನೆಗೆ ಹೋಗುತ್ತಿದ್ದಳು. ಬಸ್ಸಿನ ಗತಿಯೂ ಆಕೆಯ ಪ್ರಕೃತಿಗೆ ಹಿಡಿದಿತ್ತು. ಸಂಜೆಯ ಸಮಯದಲ್ಲಿ ಬಣ್ಣಬಣ್ಣದ ಚಿತ್ರ-ನಿಚಿತ್ರ ಮುಂಬಯಿಯ ಬಿಂಕದ ಲೀಲೆಗಳನ್ನು ಕಿಟಕಿಯಿಂದ ಬಯಕೆಯ ಕಣ್ಣುಗಳಿಂದ ನೋಡುತ್ತ ಹೋಗುತ್ತಿದ್ದಂತೆ, ಆಕೆ ಒಂದು ಬಗೆಯ ಸುಖ ಅನುಭವಿಸುತ್ತಿದ್ದಳು. ವೇಳೆ ಕಳೆದದ್ದೇ ಆಕೆಗೆ ತಿಳಿಯುತ್ತಿರಲಿಲ್ಲ. ಮುಂಬಯಿಯ ವೈಭವಶಾಲಿ ಕಟ್ಟಡಗಳು, ಸುಂದರ ಉಡುಪಿನಲ್ಲಿಯ ಉತ್ಸಾಹೀಜನರು, ಬಣ್ಣಬಣ್ಣದ ಸಾಮಾನುಗಳನ್ನು ಆಕರ್ಷಕವಾಗಿ ಪ್ರದರ್ಶಿಸಿ ಮನಸ್ಸನ್ನು ಸೆಳೆದುಕೊಳ್ಳುವ ಅಂಗಡಿಗಳು, ಮಿರಮಿರನೆ ಮಿರುಗುವ ನ್ಯೂಆನ್ ಸಾಯಿನ್ಸ್ ಮತ್ತು ರಜತ ಜಗತ್ತಿನ ಆಧುನಿಕ ಒಡವೆಗಳ ಜಾಹೀರಾತನ್ನು ಮಾಡುತ್ತಿರುವ ಉದ್ದೀಪಕ, ಉತ್ತೇಜಕ, ಕೆಣಕುವ ಸಪ್ತರಂಗಿ ಚಿತ್ರಗಳು..... ಕಿಟಕಿಯಿಂದ ಕಾಣುವ ಈ ದೃಶ್ಯಗಳು, ಆಕೆಯ ದೃಷ್ಟಿಯ ಮೇಲೆ ಮಂಕುಬೂದಿಯನ್ನು ಊದಿಬಿಡುತ್ತಿದ್ದುವು. ಆಕೆಯ ದಣಿದ ಮಿದುಳು ಮೆಲ್ಲನೆ ಕಲ್ಪನೆಯ ತರಲ ತೆರೆಗಳ— ಮೇಲೆ ತೇಲುತ್ತಿತ್ತು ಮತ್ತು ಈ ಸುಖಕರ ಅನುಭವಗಳಿಂದ ಆಕೆಗೆ ಹಗುರು-ಹಗುರಾದಂತೆ ಎನಿಸುತ್ತಿತ್ತು.....

ಮುಂಬಯಿಯಲ್ಲಿ ಈಹೊತ್ತು ಚೆನ್ನಾಗಿಯೇ ಸೆಕೆಯಿತ್ತು. ಸುಮಿತ್ರೆ ಪುನಃ ತನ್ನ ಪರ್ಸನ್ನು ತೆರೆದಳು; ಪುಟ್ಟ ಕೈವಸ್ತ್ರವನ್ನು ಹೊರದೆಗೆದಳು; ಕೆನ್ನೆಯ ಮೇಲೆ ಕೂಡುತ್ತಿದ್ದ ಬೆವರಿನ ಹನಿಗಳನ್ನು ಆಕೆ ಅವರಿಂದ ಮೆಲ್ಲನೆ ಹೀರಿಕೊಂಡಳು. ಹಣೆಯನ್ನು ಮುತ್ತಿಡುತ್ತಿದ್ದ ಕೂದಲಿನ ಒಂದು ಎಳೆಯನ್ನು ತರ್ಜನಿಯಿಂದ ಮೆಲ್ಲನೆ ಹಿಂದೆ ಸರಿಸಿದಳು. ಬದಿಯ ಕಿಟಕಿಯ ಮಿನುಗುವ ಚೌಕಟ್ಟಿನ ಮೇಲೆ ಬಿದ್ದ ಬಂಗಾರದ ಬಿಸಿಲಿನ ಒಂದು ಕಿರಣವು, ಪರಾವರ್ತನೆಗೊಂಡು ಆಕೆಯ ಕೆನ್ನೆಗಳನ್ನು ಕೆಂಪೇರಿಸಿತ್ತು. ಆ ಬಂಗಾರದ ಕಿರಣದ ಕಡೆಗೆ ಆಕೆ ಒಂದು ಓರೆನೋಟ ಬಿಟ್ಟಳು; ಮತ್ತು ತನ್ನ ಎಡಗೈಯನ್ನು ಅದಕ್ಕೆ ಅಡ್ಡವಾಗಿ ಹಿಡಿದಳು.

ಹೇಗೆ ಏನೋ ಯಾರಿಗೆ ಗೊತ್ತು....ಆಕೆಯ ಲಕ್ಷ್ಯವು ಮುಂದೆ ಕುಳಿತುಕೊಂಡಿದ್ದ ವ್ಯಕ್ತಿಯ ಕಡೆ ಹರಿಯಿತು. ವಂಗು ಬಡಿದಂತಾಯಿತು ಸುಮಿತ್ರೆಗೆ.

ರಮೇಶನಿರಬಹುದೇ ?

ಆಕೆ ದಿಟ್ಟಿಸಿ ನೋಡಿದಳು. ಪುಷ್ಟವಾದ ದೇಹದ ಕಟ್ಟಿನ ಆ ಹರೆಯದ ಪುರುಷ, ಶೀವಿಯಿಂದ ಕೂತುಕೊಂಡಿದ್ದ. ಶುಭ್ರವಾದ ಪೊಪಲಿನ್ನಿನ ಸ್ಟಾರ್ಚ್ ಮಾಡಿದ ಶರ್ಟನ್ನು ಅವನು ಧರಿಸಿದ್ದ. ಕಿಟಕಿಯ ಚೌಕಟ್ಟಿನ ಮೇಲೆ ಅವನು ಕೈ ಇಟ್ಟ ರೀತಿ ಎಷ್ಟು ಸೊಗಸಿನದಾಗಿತ್ತು! ಅವನ ಮಣಿಕಟ್ಟಿನ ಮೇಲಿನ ಗಡಿಯಾರವು ಸೂರ್ಯನ ಸೊಟ್ಟ ಕಿರಣಗಳಿಂದ ಹೊಳೆಯುತ್ತಿತ್ತು; ಮತ್ತು ಹೊರಗಿಂದ ಬರುವ ಗಾಳಿಯಲ್ಲಿ ಅವನ ಮಣಿಕಟ್ಟಿನ ಮೇಲಿನ ನಟ್ಟನಾಗಿ ಬೆಳೆದ ಕಪ್ಪು ಕೂದಲುಗಳು ಥರಥರ ಹಾರುತ್ತಿದ್ದುವು.

ಸುಮಿತ್ರೆಗೆ ಕಾಣುತ್ತಿದ್ದುದು ಅವನ ಬೆನ್ನೋಟ ಮಾತ್ರ. ಅದರಿ ಅಷ್ಟರಿಂದಲೇ ಆಕೆಯ ಚಿತ್ತವೃತ್ತಿಗಳು ವಿಚಲಿತಗೊಂಡುವು. ರಮೇಶನೇ ಇರಬೇಕು ಆತ. ಕುತ್ತಿಗೆಯ ಆ ಮಣಿತ, ಹರವಾದ ಕಿವಿ, ಕೂದಲಿನ ಆ ಮೋಹಕ ಏರಿಳಿತಗಳು, ಛೇ ರಮೇಶ ಎಷ್ಟು ಬದಲಾಗಿದ್ದಾನೆ!

ಆಕೆಯ ಉತ್ಸುಕತೆ ಕ್ಷಣಕ್ಷಣಕ್ಕೆ ಏರತೊಡಗಿತು. ಸ್ವಪ್ನಮಯ ನೆನಪುಗಳ ಇಂದ್ರಧನುಷ್ಯ ಮಣಿಯುತ್ತ ಕುಣಿಯುತ್ತ ಆಕೆಯ ಕಣ್ಮುಂದಿನಿಂದ ಭುರ್ರನೆ ಹಾರಿಹೋಯಿತು. ರಮೇಶನ ನೆನಪಿನಿಂದ ಆಕೆಯ ಎಲ್ಲ ದನಿವು ಓಡಿತು. ಒಂದರಹಿಂದೊಂದು ಸವಿಯಾದ ತೆರೆಗಳು ಆಕೆಯ ಹೃದಯದಲ್ಲಿ ಉಕ್ಕೇರಿ ಬರತೊಡಗಿದುವು; ಮತ್ತು ಸುಡುತ್ತಿರುವ ಮೈಮೇಲೆ ತಂಪಾದ ಚಂದನವ ಲೇಪ ಹಚ್ಚಿದಂತೆ ಆಕೆಯ ಮನಸ್ಸಿನ ಮೇಲೆ ಸುಖದ ಸಿಂಚನೆ ಮಾಡತೊಡಗಿದುವು.....

" ತಮ್ಮ ಹೆಸರು ? "

" ಸುಮಿತ್ರಾ ಕುಲಕರ್ಣಿ "

" ಹಾಗಾದರೆ ತಮ್ಮ ಮತ ನನಗೇ ಕೊಡಬೇಕು ನೋಡ್ರಿ. ನಾನು 'ಡಿಬೇಟಿಂಗ್ ಸೊಸ್ಯಾಟಿ'ಯ ಸೆಕ್ರೆಟರಿಶಿಪ್‌ಗಾಗಿ ನಿಂತಿದ್ದೇನೆ. ಡೋಂಟ್ ಫೊರಗೆಟ್ ಮಿ. "

" ಹಾಂ, ಆಗಬಹುದು. "

ಮತ್ತು ಶೀವಿಯಿಂದ ಹೆಜ್ಜೆ ಹಾಕುತ್ತ ಅವನು ಹೋಗಿದ್ದ; ತನ್ನ ಹೃದಯದ ಮೇಲೆ ಗಾಯ ಮಾಡುತ್ತ.....

" Congratulations ಮಿಸ್ ಕುಲಕರ್ಣಿ "

" Thank you "

" ನಮ್ಮ ಕಾಲೇಜಿನ ಹೆಸರನ್ನು ಉಳಿಸಿದಿರಿ. "

ಇಂಟರಿನಲ್ಲಿ ತಾನು ಮೊದಲ ನಂಬರು ಪಡೆದಾಗ ಅವನು ಮುದ್ದಾಂ ಬಂದು ತನ್ನ ಅಭಿನಂದನೆ ನೀಡಿದ್ದ. ತಮ್ಮಿಬ್ಬರಲ್ಲಿ ಅಭ್ಯಾಸದ ವಿಷಯದಲ್ಲಿ ತುರುಸಿನ ಸ್ಪರ್ಧೆ ಇದ್ದರೂ, ಅವನು ಹುರುಪಿನಿಂದ ಬಂದು ತನ್ನ ಕೌತುಕ ಮಾಡಿದ್ದ. A sport indeed.....

.....ಇಂತಹ ಎಷ್ಟೋ ನೆನಪುಗಳು ಒಂದರ ಹಿಂದೊಂದು.... ಸಿಹಿ ಸಿಹಿ....ಮೊದ-ಮೊದಲು ಕೇವಲ ಮುಗುಳುನಗೆಯಿಂದ ಸಿಗುತ್ತಿದ್ದ ಗುರುತು ಮುಂದೆ ಮುಂದೆ ಒಂದೆರಡು ಶಬ್ದಗಳ ವಿನಿಮಯದವರೆಗೆ ಮುಟ್ಟಿತು. ಕ್ಲಾಸಿನಲ್ಲಿ ಪ್ರಾಧ್ಯಾಪಕರು ಮಾಡಿದ ವಿನೋದದಿಂದ ನಗುವು ಮೊಳಗಿದರೆ, ತಮ್ಮಿಬ್ಬರ ದೃಷ್ಟಿಗಳು ತಮಗೆ ತಿಳಿಯದಂತೆಯೇ ಒಂದಾಗುತ್ತಿದ್ದುವು; ಮತ್ತು ಇದರಿಂದ ಆ ಹಾಸ್ಯದ ರುಚಿ ಇಮ್ಮಡಿಯಾಗುತ್ತಿತ್ತು. ತನ್ನ ಉತ್ಸಾಹಿ, ಬಿಚ್ಚು ಮನಸ್ಸಿನ ಸ್ವಭಾವದಿಂದ ಅವನು ಇಡಿಯ ಕ್ಲಾಸಿನ ಮೇಲೆ 'ಇಂಪ್ರೇಶನ್' ಹೊಡೆದಿದ್ದ. ಎಲ್ಲ ವಿದ್ಯಾರ್ಥಿಗಳಿಗೆ ಮತ್ತು ಪ್ರಾಧ್ಯಾಪಕರಿಗೆ ಬೇಕಾಗಿದ್ದ. ತಾನು ಸ್ವಾಭಾವಿಕವಾಗಿಯೇ ಅವನ ಕಡೆ ಆಕರ್ಷಿತಳಾದೆ, ತಮ್ಮಿಬ್ಬರ ಭೆಟ್ಟಿಗಳೂ ಮೇಲಿಂದಮೇಲೆ ಆಗತೊಡಗಿದುವು.....

ಸುಮಿತ್ರೆಗೆ ಉಸುರುಗಟ್ಟಿದಂತಾಯಿತು. ರಮೇಶನ ನೆನಪು ಬಂದರೆ ಆಕೆಗೆ ಹೀಗೆಯೇ ಉಸುರುಗಟ್ಟಿದಂತಾಗುತ್ತಿತ್ತು. ಅವನ ಬಗೆಗಿದ್ದ ಭಾವನೆಗಳನ್ನು ಆಕೆ ಎಂದಿಗೂ ಬಯಲು ಮಾಡಿದ್ದಿಲ್ಲ. ಕೊನೆಯವರೆಗೂ ಅವು ಹಾಗೆಯೇ ಮೂಕವಾಗಿದ್ದುವು. ಅವನನ್ನು ಬಿಚ್ಚುವ ಧೈರ್ಯ ಆಕೆಗೆ ಆಗಿರಲಿಲ್ಲ. ರಮೇಶನೂ ಎಷ್ಟು ತುಂಟನಾಗಿದ್ದನು.

ಆಕೆ ಮುಂದೆ ನೋಡಿದಳು.

ಅವನು ಯಾವುದೋ ಒಂದು ಪುಸ್ತಕವನ್ನು ಓದುವುದರಲ್ಲಿ ಮಗ್ನನಾಗಿದ್ದ. ಅವನ ಕೆನ್ನೆಯಮೇಲಿನ ಕೂದಲುಗಳು ಗಾಳಿಯಿಂದ ಭುರಭುರನೆ ಹಾರಾಡುತ್ತಿದ್ದುವು. ಅವನ ಮುಖ ಕೊಂಚ ಹೊರಳಿತ್ತು. ಮೂಗಿನ ಸುಂದರವಾದ ಪರಿಚಿತ ಮಣಿತ ಆಕೆಗೆ ಕಾಣುತ್ತಿತ್ತು. ರಮೇಶನೇ ಆಗಿರಬೇಕು.

ಅವನಿಗೆ ಸನ್ನೆ ಮಾಡಬೇಕು, ಅವನ ಹೆಗಲಿಗೆ ತನ್ನ ಬೆರಳುಗಳಿಂದ ಮಿದುವಾದ ಸ್ಪರ್ಶ ಮಾಡಬೇಕು— ಎಂದು ಸುಮಿತ್ರೆಗೆ ಅನಿಸಿತು. ಆಶ್ಚರ್ಯದಿಂದ ಅವನು ತನ್ನೆಡೆ ನೋಡಿದಾಗ, ಸನಿಯಾಗಿ ನಗುತ್ತ ಕನ್ನಬೇಕು.

" ಗುರುತಿಸಿದೆಯಾ ? "

ಆಗ ಎಷ್ಟು ಮಜವಾಗಬಹುದು! ಅರಳಿದ ಕಣ್ಣುಗಳಿಂದ ಅವನು ತನ್ನೆಡೆಗೆ ನೋಡುವನು. ತುಟಿಗಳನ್ನು ಅಂದವಾಗಿ ಮಣಿಸಿ ಅನ್ನುವನು:

" ಸುಮಿತ್ರಾ, ನೀನು? ಇಲ್ಲಿ ? "

ಅನಂತರ ತಮ್ಮ ಹರಟೆ ಪ್ರಾರಂಭವಾಗುವುದು. ಹಿಂದಿನ ಎಲ್ಲ ನೆನಪುಗಳಿಗೆ ಹೊಸಕಳೆ ಬರುವುದು. ತಾನು ಅವನನ್ನು ಕರೆದು ಮನೆಗೊಯ್ಯುವೆನು. ತಾಯಿಯೊಂದಿಗೆ ಅವನ ಗುರುತು ಮಾಡಿಕೊಡುವೆನು. ಚಹ ಕುಡಿಯುತ್ತಿದ್ದಂತೆ ತಮ್ಮ ಸುಖದುಃಖದ ಮಾತುಗಳನ್ನಾಡುವೆವು.

ಸುಮಿತ್ರೆಯು ಸ್ವಲ್ಪ ಮುಂದೆ ಸರಿದಳು. ತೊಡೆಯಮೇಲಿನ ಸರ್ಸನ್ನು ಬದಿಗೆ ಸರಿಸಿದಳು; ಮತ್ತು ಆಕೆಗೆ ಒಮ್ಮೆಲೇ ಅನಪೇಕ್ಷಿತ-

ವಾದ ದೃಶ್ಯ ಕಣ್ಣಿಗೆ ಬಿತ್ತು. ಅವನ ಪಕ್ಕದಲ್ಲಿ ಕೂತ ಹೆಂಗುಸು ಮೆಲ್ಲನೆ ಅವನ ಬದಿಗೆ ಸರಿದಳು. ಅವನ ಮೈಗೆ ಮೈ ತಾಗಿಸಿ, ಅವನ ಕಿವಿಯಲ್ಲಿ ಏನೋ ಉಸುರಿದಳು; ಮತ್ತು ನಯವಾಗಿ ತನ್ನ ಕೈಯನ್ನೆತ್ತಿ ಅವನ ಹೆಗಲಮೇಲಿಟ್ಟಳು. ಹಸಿರು ಬಳೆಗಳಿಂದ ತುಂಬಿದ ಅವಳ ಕೈ ಮತ್ತು ನೀಳವಾದ ಆಕೆಯ ಗೌರ ಬೆರಳುಗಳ ತುದಿಯ ಮೇಲಿನ ಹೊಳೆಯುವ ಕೆಂಪು 'ಮೇಂದಿ' (ಮದರಂಗಿ) ಸುಮಿತ್ರೆಯ ಕಣ್ಣಲ್ಲಿ ನೆಟ್ಟುವು.

ಅವನ ಹೆಗಲನ್ನು ತಟ್ಟಲು ಏರಿಸಿದ ಕೈ ಒಮ್ಮಿಂದೊಮ್ಮೆ ಸುಮಿತ್ರೆಗೆ ತಿಳಿಯದಂತೆಯೇ ಹಿಂದೆ ಸರಿಯಿತು. ಹಿಡಿಯಲು ಹೋದ ಪಾತರಗಿತ್ತಿಯು ಸರ್ರನೆ ಕೈಯಿಂದ ನುಸುಳಿಹೋದ ಭಾಸ ಸುಮಿತ್ರೆಗಾಯಿತು. ಆ ಹಸಿರು ಬಳೆಗಳ ಬಗ್ಗೆ ಆಕೆಯ ಮನಸ್ಸಿನಲ್ಲಿ ಸಂತಾಪ ಚಿಗುರಿತು. ತನ್ನ ರಮೇಶನ ಮಗ್ಗುಲಲ್ಲಿ ಕೂತ ಆ ಗೌರಮುಗ್ಧೆಯಬಗ್ಗೆ ಆಕೆಯ ಮನಸ್ಸಿನಲ್ಲಿ ಸಿಟ್ಟುಮೂಡಿತು ಸಕ್ಕರೆ ಎಂದು ತಿಳಿದು ಬಾಯಲ್ಲಿ ಹಾಕಿದ ಪುಡಿ ಉಪ್ಪಿನದಾದಂತೆ ಆಕೆಗೆ ಎನಿಸಿತು. ಆ ತರುಣಿಯನ್ನು ಆಕೆ ದಿಟ್ಟಿಸಿ ನೋಡಿದಳು. ಶೀಪಂತಿಗೆಯ ದಟ್ಟಹಳದಿ ಹೂವಿನ ಮಾಲೆಯನ್ನು ಆಕೆ ತನ್ನ ಹೆಳಲಮೇಲೆ ಚೆಂದವಾಗಿ ಮುಡಿದಿದ್ದಳು. 'ಸ್ಲಿ' ಕಟ್ಟಿನ ಆಕೆಯ ಕುಪ್ಪಸದಿಂದ ತೆರವು ಬಿದ್ದ ಕೊರಳ ಭಾಗವು ಎಷ್ಟು ಗೌರವಾಗಿತ್ತು, ಮಾಂಸಲವಾಗಿತ್ತು. ಆ ಭಾಗದ ಮೇಲೆ ಕಪ್ಪು ಮಣಿಗಳ ಸುಂದರ ಮುಂಗಳಸೂತ್ರ ಎದ್ದು ಕಾಣುತ್ತಿತ್ತು. ನವವಧುವಿನ ಬಿಂಕ ಆಕೆಯ ಅಂಗಾಂಗಗಳಲ್ಲಿ ತುಂಬಿ ತುಳುಕುತ್ತಿತ್ತು.

ಸುಮಿತ್ರೆಗೆ ಒಮ್ಮೆಲೇ ನಿರ್ವಿಣ್ಣವಾದಂತಾಯಿತು. ಆಕೆಯು ರಮೇಶನ ಹೆಂಡತಿಯೇ ಆಗಿರಬೇಕು. ತನ್ನ ರಮೇಶನನ್ನು ತನ್ನಿಂದ ಸೆಳೆದುಕೊಂಡ ಆ ವೈರಿಣಿಯ ಕಡೆಗೆ ಸುಮಿತ್ರೆಯು ಒಂದು ಹರಿತಾದ ನೋಟವನ್ನು ಬೀರಿದಳು. ನೊಂದ ಹಾಣಿನ ವ್ಯಥೆ ಆ ನೋಟವಲ್ಲಿ ತುಂಬಿತ್ತು.

ರಮೇಶನು ತನ್ನಿಂದ ದೂರವಾಗಿದ್ದಾನೆ, ಅವನ ಆಯುಷ್ಯ ಈಗ ಆ ಹೆಂಗುಸಿನೊಂದಿಗೆ ಬಂಧಿತವಾಗಿದೆ— ಈ ಕಲ್ಪನೆಯಿಂದ ಆಕೆಗೆ ಕೆಡುಕೆನಿಸಿತು. ಏನೋ ಕಳೆದುಹೋದಂತೆ ಆಕೆಗೆ ಎನಿಸತೊಡಗಿತು. ರಮೇಶನಿಗೆ ತನ್ನ ಗುರುತು ಕೊಟ್ಟರೆ, ಅವನಿಗೆ ಈಗ ಆನಂದವಾಗುವುದೇ ? ಅಥವಾ ತನ್ನ ದರ್ಶನ ಅವನಿಗೆ ಈಗ ಬೇಡವಾಗುವುದು. ತನಗಿಂತ ಆ ಹೆಂಗುಸು ನಿಜಕ್ಕೂ ಸುಂದರಳಾಗಿದ್ದಾಳೆ. ರಮೇಶನು ಆಕೆಯ ಸಹವಾಸದಲ್ಲಿ ರಮಿಸಿರಬೇಕು. ತನ್ನೆಡೆಗೆ ನೋಡಲೂ ಅವನು ಈಗ ಸಿದ್ಧನಿರದಿದ್ದರೆ....ಯಾರು ಹೇಳಬೇಕು? ಯಾವುದೋ ದೊಡ್ಡ ಕಂಪನಿಯಲ್ಲಿ ಅವನು ಒಳ್ಳೆಯ ಸ್ಥಾನದಲ್ಲಿ ಕೆಲಸಕ್ಕಿರಬಹುದು. ತುಂಬ ಹಣ ಗಳಿಸುತ್ತಿರಬಹುದು. ಉತ್ತಮವಾದ, ಪ್ರಶಸ್ತ ಫ್ಲೆಟ್, ಕೆಲಸಕ್ಕೆ ಆಳು, ರೆಡಿಓಗ್ರೆಮ್....ಮತ್ತು ಛೇ, ಅವನು ಈಗ ತನ್ನನ್ನೇಕೆ ನೋಡುತ್ತಾನೆ? ಕಾಲೇಜಿನಲ್ಲಿದ್ದಾಗ ಅಭ್ಯಾಸದ ನಿಮಿತ್ತದಿಂದ ಒಂದೆಡೆ ಬಂದವರು ನಾವು. ನಾಲ್ಕು ದಿನಗಳ ಸಹವಾಸ; ಎಲ್ಲರೂ ಕೂಡಿ ಮಾತಾಡಿದೆವು, ಆಡಿದವು, ಮತ್ತು ಜಗಳಾಡಿದೆವು ಕೂಡ. ಆದರೆ ಈಗ ಕಾಲೇಜಿನಲ್ಲಿಯ ಆ ಚಕ್ಕಂದದ ಚಿಕ್ಕಂದಿನ ದಿನಗಳು ಮುಗಿದುವು. ಒಬ್ಬೊಬ್ಬರು ಒಂದೊಂದು ದಿಶೆಗೆ ಹೋಗಿಬಿಟ್ಟೆವು....

'ಓ' ರೂಟಿನ ಬಸ್ ಚರ್ನಿರೋಡ್ ಸ್ಟೇಶನ್ನಿನ ಬಳಿ ನಿಂತಿತು. ಇಳಿಯುವವರ ಏರುವವರ ಗೊಂದಲ ಸುರುವಾಯಿತು. ಅಕಸ್ಮಾತ್ತಾಗಿ ಬಂದ ಮಳೆಯು ತುಂತುರುತುಂತುರಾಗಿತ್ತು. ಎಲ್ಲಿಂದಲೋ ದೂರದಿಂದ ಹಾಡು ಕೇಳಿ ಬರುತ್ತಿತ್ತು.

"ಓಓ ಓಓ ಬಚಪನಕೇ ದಿನ ಭುಲಾ ನ ದೇನಾ!"

ಸುಮಿತ್ರೆಯ ಮೆಚ್ಚಿನ ಆ ಹಾಡು ಈಗ ಹಳೆಯದಾಗಿತ್ತು. ಆದರೆ ಇಂದಿಗೂ ಅದು ಎಲ್ಲಿಯಾದರೂ ಕೇಳಿಬಂದರೆ, ಸುಮಿತ್ರೆ ಅದನ್ನು ಕಿವಿಗೊಟ್ಟು ಕೇಳುತ್ತಿದ್ದಳು. ಆದರೆ ಈಗ ಮಾತ್ರ ಆಕೆಗೆ ಅದನ್ನು ಕೇಳುವ ಮನಸ್ಸಾಗಲಿಲ್ಲ. ಆಕೆಯ ವೃತ್ತಿಗಳೆಲ್ಲವೂ ಬಧಿರವಾಗಿದ್ದುವು. ಕಾಲೇಜಿನಲ್ಲಿಯ ನೆನಪುಗಳು —ಅದು ಕೂಡ ಕಾಲೇಜಿನಲ್ಲಿಯ ತನ್ನ ಮಿತ್ರನು ಮುಂಬೆ ಕುಳಿತುಕೊಂಡಾಗ— ಸುಮಿತ್ರೆಗೆ ಚುಚ್ಚತೊಡಗಿದುವು. ಹಿಂದೆ ಸರಿಸಿದ್ದಂತೆ ಅವು ಪುನಃ ಪುನಃ ಮೇಲಕ್ಕೆ ಪುಟಿದು ಬರತೊಡಗಿದುವು.....

" ಸುಮಿತ್ರಾ, ಇಂದಿನ ನಾಟಕದಲ್ಲಿಯ ನಿನ್ನ ಕೆಲಸ ನನಗೆ ಬಹಳ ಸೇರಿತು. ನಾನು ಅಪೇಕ್ಷಿಸಿದ್ದಿಲ್ಲ—ಇಷ್ಟು ಚೆನ್ನಾಗುವುದೆಂದು."

" ನೀನೇ ಬರೆದಿದ್ದೀಯಲ್ಲ ನಾಟಕಾ. ಅದಕ್ಕಾಗಿಯೇ...."

ರಮೇಶನ ಗೆಳೆಯನ ಆ ಮಾತುಗಳಿಂದ ತನಗೆ ಕಚಕುಳಿಯಾದಂತಾಗಿತ್ತು.

.... ಆ ಪಾರಿಜಾತಕದ ಗಿಡ; ಮಳೆಯ ಹನಿಗಳು ಟಪ್‌ಪಟ್ಟೆ ಉದುರುತ್ತಿದ್ದುವು. ಸಂಜೆಯ ಎಳೆಯ ಬಿಸಿಲಿನ ಹಳದಿ ಕಿರಣಗುಡುವ ಆ ಹನಿಗಳನ್ನು ಛೇದಿಸಿ ಹೋದದ್ದರಿಂದ, ಹೊಂಬಣ್ಣದ ವಾತಾವರಣತ್ತಮ ನಿರ್ಮಾಣವಾಗಿತ್ತು. ರಮೇಶನನ್ನು ಬೀಳ್ಕೊಡಲು ತಾನು ಅಲ್ಲಿವರೆಗೆ ನಡೆಯುತ್ತ ಹೋಗಿದ್ದೆ. ರಮೇಶನ ತಂದೆಗೆ ಮುಂಬಯಿ. ವರ್ಗವಾದ್ದರಿಂದ, ಅವನು ಹೋಗುವವನಿದ್ದ. ತನಗೆ ಎಷ್ಟು ಕೆಡುಕೆನಿಸಿತ್ತು. ಉಕ್ಕಿಬರುತ್ತಿದ್ದ ಬಿಕ್ಕನ್ನು ತಾನು ಪ್ರಯತ್ನಪೂರ್ವಕವಾಗಿ ನುಂಗಿದ್ದೆ. ತುಂಬಿ ಬಂದ ಕಂಠದಿಂದ ಅವನು ಅಂದಿದ್ದನು :

" ಸುಮಿತ್ರಾ ಮರೆಯಬೇಡ, ನನ್ನ ನೆನಪಿಗೆಂದು ಇದು ನಿನಗಿರಲಿ. ಪತ್ರಗಿತ್ರ ಬರೆಯುತ್ತಿರು ಮೇಲಿಂದಮೇಲೆ."

ಮತ್ತು ತನ್ನ ಪ್ಯಾಂಟಿನ ಕಿಸೆಯಿಂದ ಒಂದು ಪಾಕೇಟನ್ನು ಹೊರದೆಗೆದು, ತನ್ನ ಒಂದು ಫೋಟೋವನ್ನು ತನಗೆ ಕೊಟ್ಟಿದ್ದ.

ತನಗೆ ಏನೂ ತೋಚದಂತಾಗಿತ್ತು.

ಏನನ್ನೂ ಮಾತನಾಡದೆ ತಾನು ತನ್ನ ಕೈವಸ್ತ್ರವನ್ನು ಅವನ ಮುಂದೆ ಹಿಡಿದಿದ್ದೆ.

ಅದನ್ನು ಸ್ವೀಕರಿಸಿ ಅವನು ಸಿಹಿಯಾಗಿ ನಕ್ಕಿದ್ದ....

ಮುಂದೆ ಕೂತಿದ್ದ ಆ ಪುರುಷನು ಕಿಟಕಿಯ ಚೌಕಟ್ಟಿನ ಮೇಲಿಟ್ಟ ತನ್ನ ಕೈ ಎತ್ತಿದ. ಪುಸ್ತಕವ ಪುಟತಿರುವಿದ. ಒಂದು ಕ್ಷಣ ಮಣಿಕಟ್ಟಿನ ಮೇಲಿನ ಗಡಿಯಾರವನ್ನು ನೋಡಿದ ಮತ್ತು ಪುನಃ ಮುಂಚಿನಂತೆಯೇ ಕೈಯನ್ನಿಟ್ಟ.

ರಮೇಶನೇ ಆಗಿರಬೇಕು. ಅದೇ ಠೀವಿ. ಅದೇ ಜೌಲು. ಆದರೆ ಸುಮಿತ್ರೆಗೆ ಈಗ ಅವನಿಗೆ ತನ್ನ ಗುರುತು ಕೊಡಬೇಕೆಂದು ಎನಿಸಲಿಲ್ಲ. ರಮೇಶ ತನ್ನನ್ನು ಆಸ್ಥೆಯಿಂದ ಮಾತನಾಡಿಸುವನೇ ? ಈ ಹೆಂಗುಸು ತಮ್ಮ ಮೈತ್ರಿಯನ್ನು ಬೇರೆ ಏನಾದರೂ ತಿಳಿದುಕೊಂಡರೆ ? ಛೇ ಬೇಡವೇ ಬೇಡ. ರಮೇಶನನ್ನು ಏಕೆ ಸುಮ್ಮನೆ ತೊಂದರೆಯಲ್ಲಿ ಸಿಕುವುದು ?

ಸುಮಿತ್ರೆಗೆ ತನ್ನ ಮದುವೆಯ ನೆನಪಾಯಿತು.... ಲಗ್ನದ ನಂತರದ ಸುಖದ ದಿನಗಳು ನೆನಪಾದುವು. ಆ ಸುಖದ ದಿನಗಳಲ್ಲಿ ಎಂದಿಗೂ ಆಕೆಗೆ ರಮೇಶನ ನೆನಪಾಗಿದ್ದಿಲ್ಲ. ಮತ್ತು ಈ ಹೊತ್ತು ಇಂತಹ ವೇಳೆಯಲ್ಲಿ; ಇಂತಹ ಪರಿಸ್ಥಿತಿಯಲ್ಲಿ.

ಮದುವೆಯಾಗಿ ಮೂರೇ ತಿಂಗಳ ನಂತರ ತನಗೆ ಒದಗಿದ ವೈಧವ್ಯದ ದುಃಖದ ಕತೆ....

ಸುಮಿತ್ರೆಗೆ ಆ ನೆನಪು ಬೇಡವೆಂದೆನಿಸಿತು. ಸ್ಯೆನೇಲ್ ಜಿಗಿದ ಜಿಟ್ಟಿಯನ್ನು ಜಾಡಿಸುವಂತೆ ಆಕೆ ಆ ನೆನಪನ್ನು ತೂರಿದಳು.

....ಮತ್ತು ಈ ಹೊತ್ತು ಇಂತಹ ವೇಳೆಯಲ್ಲಿ—ಪರಿಸ್ಥಿತಿಯಲ್ಲಿ—ರಮೇಶನು ಭೆಟ್ಟಿಯಾಗುತ್ತಿದ್ದಾನೆ; ಅವು ಕೂಡ ಅವನ ನೆನಪಿನಿಂದಿಗೆ; ತನ್ನ ಬಿಳಿಯ ಹಣೆಯನ್ನು ನೋಡಿದಾಗ ಅವನೇನೆನ್ನುವನು? ತನ್ನ ದುಃಖದ ಅರಿವನ್ನು ಅವನಿಗೇಕೆ ಮಾಡಿಕೊಡಬೇಕು ? ಅವನ ಸುಖ-ಸಮಾಧಾನದ ಜೀವನದಲ್ಲಿ. ತನ್ನ ವ್ಯಥೆಯ ಕರುಣಸ್ವರವನ್ನು ಅದೇಕೆ ಕೂಡಿಸುವುದು ? ಅವನ ಆನಂದಪೂರ್ಣವಾದ ಜೀವನದಲ್ಲಿ ಸ್ಪರ್ಧೇಶವಾಡುವ ಯೋಗ್ಯತೆ ತನಗೆಲ್ಲಿದೆ ? ಎಂತಹ ಅಧಿಕಾರವಿದೆ ತನಗೆ ?

" ಸುಮಿತ್ರೆಯ ಮನಸ್ಸಿನ ಶಾಂತತೆ ಹಾರಿಹೋಯಿತು. ರಮೇಶನ ದೃಷ್ಟಿಗೆ ತಾನು ಬೀಳದಿದ್ದರೆ ಚೆನ್ನಾದೀತು—ಎಂದು ಅವಳಿಗೆ ಈಗ ಅನಿಸಹತ್ತಿತು. ಅವನ ಹೆಗಲಮೇಲೆ ಮೆಲ್ಲನೆ ಕೈ ಇಡಬೇಕು ಮತ್ತು ರಮೇಶ್' ಎಂದು ಕರೆಯಬೇಕು—ಎಂದು ಆದ ಇಚ್ಛೆಯನ್ನು ಆಕೆ ಹಾಗೆಯೇ ಒತ್ತಿಬಿಟ್ಟಳು.

ಬಸ್ ಭರದಿಂದ ಓಡುತ್ತಿತ್ತು. ಸುಮಿತ್ರೆಯ ಎದೆ ಜಡಜಡನೆ ಬಡಿಯುತ್ತಿತ್ತು. ತನ್ನ ಬಾಲಮಿತ್ರ ಮುಂದೆ ಕೂತುಕೊಂಡಿದ್ದಾನೆ. ತನ್ನ ಸುಂದರ ಹೆಂಡತಿಯೊಡನೆ.... ಗುರುತು ತೋರಿಸದೆ.... ಮತ್ತು ತಾನು ಅವನ ಹಿಂದೆ.... ತಾನೇಕೆ ಹೀಗೆ ಗುರುತುಕೊಡುವುದಿಲ್ಲ ? ತನ್ನಲ್ಲಿಯ ಪ್ರಸನ್ನತೆ, ಚಟುವಟಿಕೆ ಹೀಗೇಕೆ ಒಮ್ಮೆಲೇ ಬತ್ತಿಹೋಯಿತು ? ಸುಮಿತ್ರೆಗೆ ತನ್ನದೇ ಆಶ್ಚರ್ಯವಾಯಿತು.

ಮನಸ್ಸಿನಲ್ಲಿಯ ಗೊಂದಲವನ್ನು ನಿಲ್ಲಿಸಲು ಆಕೆ ಪರ್ಸ್ ತೆರೆದಳು. ಒಳಗಿಟ್ಟ ಹೊಸ ಮಾಸಪತ್ರಿಕೆಯನ್ನು ಹೊರಗೆ ತೆಗೆದಳು. ಪುಟಗಳನ್ನು ತಿರುವಿ ಹಾಕಿ, ಆಕೆ ಚೌಕಟ್ಟುಗಳಲ್ಲಿ ಅಚ್ಚಾಗಿದ್ದ ಚುಟಕಗಳನ್ನು ಓದತೊಡಗಿದಳು. ಅವರೂ ಆ ವಿನೋದದಿಂದ ಆಕೆಗೆ ನಗು ಬರಲಿಲ್ಲ. ರಮೇಶನು ಅವಳ ಮುಂದಿದ್ದಾಗ, ಹಾಗೆ ಪರಿವೆ ಇಲ್ಲದೆ ಹಾಯಾಗಿ ಓದುವುದು ಅವಳಿಗೆ ಸಾಧ್ಯವಿದ್ದಿಲ್ಲ. ಒಂದುಸಾರಿ ಆಕೆಗೆ ಎನಿಸಿತು: ಹೀಗೆಯೇ ಕೆಳಗಿಳಿಯಬೇಕು. ಮುಂದಿನ ಬಸ್ಸಿನಿಂದ ಮನೆಗೆ ಹೋಗಬೇಕು. ಆದರೆ ಆ ಧೈರ್ಯ ಆಕೆಗೆ ಆಗಲಿಲ್ಲ. ಅಲ್ಲದೆ ಅದರಿಂದ ಮನೆಯನ್ನು ನುಟ್ಟಲು ತಡವಾಗಬಹುದಿತ್ತು....

ಜೋಕಾಲಿಯ ಮೇಲೆ ಕೂತಂತೆ ಆಕೆಯ ಮನಸ್ಸು ಜೋಲಿ ಹೊಡೆಯಹತ್ತಿತ್ತು. ಆಕೆಯ ಹೃದಯ ಬಡಿದುಕೊಳ್ಳುತ್ತಿತ್ತು. ಸುಮ್ಮನೇ ಆಕೆ ಮೈ ಕದಿಯುತ್ತಿದ್ದಳು.

ಹಾಜಿ ಅಲಿ ಸ್ಟಾಪ್ ಸಮೀಪ ಬಂತು. ಮುಂದಿನ ಸೀಟಿನ ಮೇಲೆ ಕುಳಿತ ಆ ತರುಣಿ ಎದ್ದು ನಿಂತಳು. ಆ ಪುರುಷನೂ ಸ್ವಲ್ಪ ಸರಿದಾಡಿದನು. ಬಲಗೈಯಲ್ಲಿದ್ದ ಪುಸ್ತಕವನ್ನು ಅವನು ಮುಚ್ಚಿದನು. ಮಣಿಕಟ್ಟನ್ನು ಸ್ವಲ್ಪ ತಿರುವಿಸಿ ಗಡಿಯಾರವನ್ನು ನೋಡಿದನು; ಮತ್ತು ಎದ್ದು ನಿಂತನು.

ಸುಮಿತ್ರೆಯು ಮೆಲ್ಲನೆ ಅವನ ಬೆನ್ನ ಕಡೆಗೆ ನೋಡಿದಳು. ಎತ್ತರ-ಆಳು.... ಕೆನೆಯ ಕೆಂಪಗಿನ ತುದಿ; ಸುಮಿತ್ರೆಯ ಮುಖ ಕೆಂಪೇರಿತು. ಈಗ ಬಸ್ಸಿನಿಂದ ಕೆಳಗಿಳಿಯಲು ಅವನು ಹಿಂತಿರುಗುವಷ್ಟಿದ್ದ. ಅವರಿಬ್ಬರ ದೃಷ್ಟಿ ಒಂದಾಗುವುದಿದ್ದುವು. ಅವನು ಗುರುತಿಸುವನೇ ತನ್ನನ್ನು ? ತನ್ನ ಬರಿದಾದ ಬಿಳಿಯ ಹಣೆಯನ್ನು ನೋಡಿ ಅವನಿಗೇನು ಎನಿಸುವುದು ? ತಾನು ಇಷ್ಟು ಹೊತ್ತು ಸ್ವಸ್ಥ ಕೂತಿದ್ದಕ್ಕೆ ಅವನು ತನಗೆ ಹುಸಿಸಿಟ್ಟನ್ನು ತೋರಿಸುವನೇ ? ತನ್ನೊಂದಿಗೆ ಕೆಳಗಿಳಿಯುವ ಅಗ್ರಹವನ್ನು ಮಾಡಿದರೂ ಮಾಡಬಹುದು. ತನ್ನ ಮುಖವು ಬಣ್ಣಗೆಟ್ಟಂತೆ ಸುಮಿತ್ರೆಗೆ ಭಾಸವಾಯಿತು. ಕಳ್ಳತನದ ಭಾವನೆ ಅವಳನು ಆವರಿಸಿತು. ಕೈಯಲ್ಲಿಯ ಮಾಸಪತ್ರಿಕೆಯನ್ನು ಮೇಲೆತ್ತಿ ಅದರ ಹಿಂದೆ ಆಕೆ ತನ್ನ ಮುಖವನ್ನು ಅಡಗಿಸಿದಳು.

ಆ ಪುರುಷನು ಆ ಹೆಂಗುಸಿನೊಡನೆ ಏನೋ ಏಸುಗುಟ್ಟಿದ. ಆಕೆ 'ಖುಕ್ಕ'ನೆ ನಕ್ಕಳು.

'ಟಣ್'.

ಬಸ್ ನಿಂತಿತು. ಪ್ರಯಾಣಿಕರು ಕೆಳಗಿಳಿಯತೊಡಗಿದರು. ಆ ಜಂಟಿಯೂ ಅವರವರ ಜನರವಾಗಿ ಕೆಳಗಿಳಿಯತೊಡಗಿತು.

ಸುಮಿತ್ರೆಗೆ ಉತ್ಪಕತೆ ತಡೆಯಲಾಗಲಿಲ್ಲ. ಮಾಸಪತ್ರಿಕೆಯ ಹಿಂದಿನಿಂದ ಆಕೆ ಮೆಲ್ಲಗೆ ಕಳ್ಳನೋಟ ಬೀರಿದಳು. ಹಸಿರು ಬಳೆಗಳನ್ನಿಟ್ಟ ಕೈಯನ್ನು ಅವನು ಹಿಡಿದಿದ್ದನು. ರಮೇಶನನ್ನು ನೋಡುವ ಭಾಗ್ಯ ಹೀಗೆ ಅಕಸ್ಮಾತ್ತಾಗಿ ಸುಮಿತ್ರೆಗೆ ದೊರಕಿತ್ತು. ಒಂದೇ ಕ್ಷಣ; ಆಕೆಗೆ ಅವನ ನಗುಮುಖದ ದರ್ಶನವಾಗಬಹುದಿತ್ತು. ಈ ನೆನಪಿನ ಸುಗಂಧವನ್ನು ಆಕೆ ತನ್ನ ಮನಸ್ಸಿನ ಸೀಸೆಯಲ್ಲಿ ತುಂಬಿ ಕೊನೆಯವರೆಗೆ ಜಪ್ಪಿಸಿ ಇಡುವವಳಿದ್ದಳು.

ಬಡಿಯುತ್ತಿರುವ ಹೃದಯದಿಂದ ಸುಮಿತ್ರೆ ಅವನ ಮುಖದಕಡೆ ದೃಷ್ಟಿ ಬೀರಿದಳು. ಅನಪೇಕ್ಷಿತವಾದ ನೋಟ ಆಕೆಯನ್ನು ದಿಗಿಲುಗೊಳಿಸಿತು.

ಅವನು ರಮೇಶನಾಗಿರಲಿಲ್ಲ. ಯಾರೋ ಪಂಜಾಬಿ ಅಥವಾ ಸಿಂಧೀ ಗೃಹಸ್ಥನಾಗಿರಬೇಕು....

....ಪರಳಿಯ ಸಮುದ್ರದ ಮೇಲಿಂದ ಸುಯ್ ಗುಡುತ್ತ ಬರುವ ಮಂದ ಗಾಳಿ, ಈ ದಿನ ಸುಮಿತ್ರೆಗೆ ತಂಪಾಗಿ ತೋರಲಿಲ್ಲ.

ಭೂಸಾರ ರಕ್ಷಣೆಯ ಕಾರ್ಯಕ್ರಮ

(ಪರಿಚಯಾತ್ಮಕ ಲೇಖನ)*

ಶ್ರೀ. ಎಸ್. ಪ್ಹಿ. ರಾಮಮೂರ್ತಿ,

ಸಲಹೆಗಾರರು : ಯೋಜನಾ ಆಯೋಗ

ಭಾರತದ ಸರಂಪರಾಗತ ಉದಾಸೀನಕೃಷಿಯ ನೂಲಕ, ಭೂಸಾರ ರಕ್ಷಣೆಯ ಕಡೆಗೆ ಲಕ್ಷ್ಯವನ್ನೇ ಯಾರೂ ಕೊಟ್ಟಿಲ್ಲ. ಆಹಾರ ಧಾನ್ಯಗಳು ನಮ್ಮ ಭೂಮಿಯಲ್ಲಿ ಹೆಚ್ಚು ಹೆಚ್ಚು ಬೆಳೆಯಬೇಕಾದರೆ, ಅಮೆರಿಕೆಯಲ್ಲಿಯಂತೆ, ಭೂಸಾರ ರಕ್ಷಣೆಯ ಕಡೆಗೆ ನಾವು ದೃಷ್ಟಿ ಹರಿಸಬೇಕು.

ನಾನು ಇತ್ತೀಚೆಗೆ ಅಮೆರಿಕಾವ ಸಂಯುಕ್ತ ಸಂಸ್ಥಾನಗಳಿಗೆ ಹೋಗಿದ್ದ ಸಮಯದಲ್ಲಿ, ಬೇಸಾಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅನೇಕ ಮಂದಿ ಬೇಸಾಯವಿಜ್ಞಾನಿಗಳು ಮತ್ತು ಅಧಿಕಾರಿಗಳ ಜೊತೆಗೆ ವಿಚಾರವಿನಿಮಯ ನಡೆಸುವ ಅವಕಾಶ ದೊರಕಿತು. ಅಮೆರಿಕಾದಲ್ಲಿ ಬೇಸಾಯ ಕಾರ್ಯ ತುಂಬಾ ಯಶಸ್ವಿಯಾಗಿ ನಡೆಯುತ್ತಿದ್ದರೆ, ಬೇಸಾಯಕ್ಕೆ ಸಂಬಂಧಿಸಿದಂತೆ ಎಲ್ಲಾ ಅಂಶಗಳ ಸಂಘಟನೆ ಅದಕ್ಕೆ ಬಹುಮಟ್ಟಿಗೆ ಕಾರಣವಾಗಿದೆ. ಜಪಾನೀ ವಿಧಾನದ ಮೂಲಕ ನಡೆಯುವ ಭತ್ತದ ಬೆಳೆಗೂ ಇದೇ ಮಾತು ಅನ್ವಯಿಸುತ್ತದೆ. ಎಲ್ಲಾ ಅಂತಗಳಿಗೆ ಸಮಾನಗಮನ ಕೊಡುವುದರಿಂದ, ಬೆಳೆ ಸಾಮಾನ್ಯ ರೀತಿಯಲ್ಲಿ ಅಧಿಕವಾಗುವುದಷ್ಟೇ ಅಲ್ಲ, ಗುಣಾಕಾರ ಫಲದ ರೀತಿಯಲ್ಲಿ ಅಧಿಕವಾಗುತ್ತಾ ಹೋಗುತ್ತದೆ.

ಭೂಸಾರ ಸಂರಕ್ಷಣೆಗೆ ಬೇಸಾಯ ಕಾರ್ಯದಲ್ಲಿ ವಿಶೇಷ ರೀತಿಯ ಗಮನ ಕೊಡಬೇಕಾಗುತ್ತದೆ. ಕಳೆದ ಒಂದು ದಶಕದ ಪರಿಗೂ ಅಮೆರಿಕಾದಲ್ಲಿ ಬಿತ್ತನೆ ಬೀಜದ ಉತ್ತಮಗುಣ, ಕ್ರಿಮಿನಾಶಕ ಕ್ರಮ ಇತ್ಯಾದಿಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತಿದ್ದಿತೇ ಹೊರತು ಭೂಸಾರರಕ್ಷಣೆಗೆ ಇಷ್ಟಾಗಿ ಗಮನ ಕೊಡಲಾಗುತ್ತಿರಲಿಲ್ಲ ಎನ್ನಬಹುದು.

ಆದರೆ ಈ ಪರಿಸ್ಥಿತಿ ಬದಲಾಗಿದೆ; ತಪ್ಪನ್ನು ತಿದ್ದಿಕೊಳ್ಳಲಾಗಿದೆ. ಇದರ ಫಲವಾಗಿ ಬೇಸಾಯಕ್ಷೇತ್ರದ ಒಂದೊಂದು ಜಿಲ್ಲೆಗೂ ಒಂದೊಂದು ಭೂಸಾರ ಸಂರಕ್ಷಣ ಕೇಂದ್ರ ಕೆಲಸ ಮಾಡುತ್ತಿದೆ. ರೈತರು ಈ ಕೇಂದ್ರದ ಅಧಿಕಾರಿಗಳಿಗೆ ಬರೆದುಕೊಂಡು, ಭೂಸಾರ ಸಂರಕ್ಷಣಾ ಸಮಸ್ಯೆಗಳ ವಿಷಯವಾಗಿ ಅವರ ಸಲಹೆ ಸಹಕಾರಗಳನ್ನು ಪಡೆಯಬಹುದು. ಕೇಂದ್ರದ ಭೂಸಾರ ಸಂರಕ್ಷಣಾಧಿಕಾರಿ, ಹಾಗೆ ಅರ್ಜಿ ಹಾಕಿಕೊಳ್ಳುವ ರೈತರ ಜಮೀನಿನ ಸಮೀಕ್ಷೆ ನಡೆಸಿ, ಭೂಸಾರವ ಪರಿಶೀಲನೆ ನಡೆಸುವರು. ಮತ್ತು ಭೂಸಾರ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಸೂಚಿಸಿ ಯಾವ ಬೆಳೆ ತೆಗೆಯುವುದು ಉಚಿತವೆಂಬುದನ್ನೂ ಸಲಹೆ ಮಾಡುವರು.

ರೈತರು ಈ ಸಲಹೆಯನ್ನು ಕಾರ್ಯಗತ ಮಾಡಲು ಅನುಕೂಲವಾಗುವಂತಹ ನೆರವನ್ನು ಬೇರೊಂದು (ಅಗ್ರಿಕಲ್ಚರಲ್ ಸ್ಟಾಬಿಲೈಸೇಷನ್ ಅಂಡ್ ಕನ್ಸರ್ವೇಷನ್ ಆರ್ಗನೈಸೇಷನ್) ನೀಡುವುದು.

ಸುಧಾರಣೆಗೆ ಕಾರ್ಯಯೋಜನೆಯನ್ನು ಸೂಚಿಸುವ ಭೂಸಾರ ಸಂರಕ್ಷಣಾಧಿಕಾರಿ, ರೈತನ ಆಗತ್ಯಗಳಿಗನುಗುಣವಾದ ಅಲ್ಪಸ್ವಲ್ಪ ಬದಲಾವಣೆಗಳನ್ನೂ ಆಗತ್ಯಬೀಳುವ ಹಂತಗಳಲ್ಲಿ ಸಲಹೆ ಮಾಡುವರು.

ಬಿತ್ತನೆ ಬೀಜಕ್ಕೆ ಎಷ್ಟರ ಮಟ್ಟಿನ ಗಮನ ಆಗತ್ಯವೋ ಅಷ್ಟೆ ಗಮನ ಭೂಸಾರ ಸಂರಕ್ಷಣೆಗೂ ಆವಶ್ಯಕವಾಗಿದೆ ಎಂಬ ಮೂಲತತ್ತ್ವವನ್ನು ಈಗ ಮಾನ್ಯ ಮಾಡಲಾಗಿದೆ. ಉತ್ತಮ ಫಸಲು ಕೊಡುವ ಬಿತ್ತನೆ ಬೀಜ 'ತಂದೆ' ಯಾದರೆ ಭೂಸಾರ 'ತಾಯಿ'! ಉತ್ತಮ ಫಸಲಿನ ದೃಷ್ಟಿಯಿಂದ ಎರಡೂ ಅಷ್ಟೆ ಮುಖ್ಯ.

ಗಂಡುಸಿಗೆ ಪ್ರಾಮುಖ್ಯತೆಕೊಡುವುದು ನಮ್ಮ ನಾಗರಿಕತೆಯ ಲಕ್ಷಣ. ಹೆಂಗುಸಿಗೆ ಕೊಡಬೇಕಾದ ಪ್ರಾಮುಖ್ಯತೆಯನ್ನು ನಾವು ಕೊಡಲು ಮರೆಯುತ್ತೇವೆಂದೇ ಪರಿಸ್ಥಿತಿ ಎಷ್ಟೋ ವೇಳೆ ಸಮಸ್ಯಾತ್ಮಕವಾಗುತ್ತದೆ. ಸಂಸ್ಕೃತದಲ್ಲಿ ಪಂಡಿತಪುತ್ರ ಎಂಬುದರ ಅರ್ಥ ಪೆದ್ದ ಶಿಖಾಮಣಿ. ಪಂಡಿತ ಮತ್ತು ಅವನ ಮಗ, ಇವರಲ್ಲಿನ ವ್ಯತ್ಯಾಸವನ್ನು ಅಳೆದು ನೋಡಿ ಮಾತನಾಡುವಾಗ ನಾವು ಅವರಿಬ್ಬರ ಮಧ್ಯದ ಕೊಂಡಿಯಾವ ತಾಯಿಯನ್ನು— ಶ್ರೀಮತಿ ಪಂಡಿತ್‌ಜೀ— ಬಹು ಸುಲಭವಾಗಿ ಮರೆತುಬಿಡುತ್ತೇವೆ. ಫಸಲು ಹೇಗೆ ಬೀಜ ಮತ್ತು ಭೂಸಾರ ಎರಡರ ಗುಣಗಳನ್ನೂ ಗ್ರಹಿಸಿಕೊಂಡು ಬರುತ್ತದೆಯೋ, ಹಾಗೆಯೇ ಪಂಡಿತಪುತ್ರ ತನ್ನ ತಂದೆತಾಯಿಗಳಿಬ್ಬರ ಗುಣಗಳನ್ನೂ ಗ್ರಹಿಸಿಕೊಂಡು ಬರುತ್ತಾನೆ. ತಂದೆ ಮತ್ತು ತಾಯಿ ಇಬ್ಬರೂ ಉತ್ತಮ ವಂಶವಾದರೆ ಮಗನ ಬೆಳೆವಣಿಗೆ ಅವೆರಡನ್ನೂ ಪೈಗೂಡಿಸಿಕೊಂಡು ನಡೆಯುತ್ತದೆ. ಅಂತೆಯೇ ಉತ್ತಮ ಬೆಳೆಯನ್ನು ಖಾತ್ರಿ

---

* ಭಾರತ ಸರಕಾರದ ಪ್ರಚಾರ ಶಾಖೆಯಿಂದ ಬಂದ ಲೇಖನವಿದು. —ಸಂ.

ಮಾಡಬೇಕಾದರೆ ಭೂಸಾರ ಮತ್ತು ಬಿತ್ತನೆ ಬೀಜ ಇವೆರಡಕ್ಕೂ ವಿಶೇಷ ರೀತಿಯಲ್ಲಿ ಗಮನಕೊಡಬೇಕಾಗುತ್ತದೆ.

ಅಮೆರಿಕಾದಲ್ಲಿ ಹೇಗೆಯೋ ಹಾಗೆಯೇ ಭಾರತದಲ್ಲಿಯೂ ಭೂಸಾರ ಸಂರಕ್ಷಣೆಯ ಕಡೆಗೆ ಲಕ್ಷ್ಯಕೊಡುವ ರೀತಿಯಲ್ಲಿ ಅದನ್ನು ಹೀರಿಹಿಪ್ಪೆಮಾಡಲಾಗಿದೆ ಯೂರೋಪಿನಿಂದ ವಲಸೆ ಬಂದ ಜನರಿಗೆ ಈ ವಿಚಾರದಲ್ಲಿ ಗಮನವೇ ಇರಲಿಲ್ಲ. ಆದರೆ ಅನುಭವ ಬಂದಂತೆ ಕಾಲಕ್ರಮೇಣ ಇವರ ಅರಿವು ಉಂಟಾಗಿ ಭೂಮಿಸಾರವನ್ನು ಸಂರಕ್ಷಿಸಿಕೊಂಡು ಬೇಸಾಯಕ್ಕೆ ತೊಡಗುವ ನಿವೇಚನೆ ಮಾಡತೊಡಗಿನೆ.

ಭಾರತದಲ್ಲಿ ಭೂಸಾರಸಂರಕ್ಷಣೆಯ ಕಾರ್ಯಕ್ಕೆ ಪ್ರಥಮತಃ ಮೂವತ್ತು ವರ್ಷಗಳಷ್ಟು ಹಿಂದೆ ನಿಗಾಕೊಡಲಾಯಿತು. ಮುಂಬೈ-ಕರ್ನಾಟಕಕ್ಕೆ ಸೇರಿದ ಬಿಜಾಪುರ ಜಿಲ್ಲೆಯಲ್ಲಿ ಒಬ್ಬ ಅರಣ್ಯ ಅಧಿಕಾರಿಗೆ ಈ ಯೋಜನೆ ಹೊಳೆದು, ಬರಡು ಬರಡಾಗಿ ಕಾಣುತ್ತಿದ್ದ ಬೆಟ್ಟದ ಇಳುಕಲು ಪ್ರದೇಶಗಳಲ್ಲೆಲ್ಲಾ ಆತ ಅರಣ್ಯ ಬೆಳಸಲು ಮನಸ್ಸು ಮಾಡಿದನು.

ಅಲ್ಲಲ್ಲೇ ಒಂದೊಂದು ದಿಣ್ಣೆಯ ಅಂಚಿನಲ್ಲೂ ಕಾಲುವೆಗಳನ್ನು ಅಗೆದು, ದಂಡೆಯನ್ನು ನಿರ್ಮಿಸಿ ವೃಕ್ಷಬೀಜಗಳನ್ನು ಬಿತ್ತಿ ಕೈಗೊಂಡ (ಅರಣ್ಯ ಬೆಳೆಸುವ) ಕಾರ್ಯದಿಂದಾಗಿ ಒಂದು ವರ್ಷದ ಅವಧಿಯಲ್ಲಿ ಅಲ್ಲೆಲ್ಲಾ ೪-೫ ಅಡಿಗಳ ಎತ್ತರದ ಮರಗಳು ಎದ್ದು ನಿಂತುವು.

ಇದನ್ನು ಹೋಗಿ ನೋಡಿದ ನಾನು ಮದರಾಸ್-ಆಂಧ್ರಪ್ರದೇಶದ ಅಷ್ಟೇ ಬೆಂಗಾಡು ಪ್ರದೇಶದಲ್ಲಿ ಅದೇ ಕಾರ್ಯಕ್ರಮವನ್ನು ನಾನೂ ಕೈಗೊಂಡೆ.

ಮಣ್ಣಿನ ಸಾರ ಸಂರಕ್ಷಣೆ ಮತ್ತು ಮಳೆ ನೀರಿನ ಸದುಪಯೋಗ, ಈ ದೃಷ್ಟಿಯಿಂದ ಕೈಗೊಳ್ಳುವ 'ಕಾಂಟೂರ್ ಬಂಡಿಂಗ್' ಅಥವಾ ಅಲ್ಲಲ್ಲೇ ದಂಡೆಗಳನ್ನು ಕಟ್ಟಿ ಮಣ್ಣು ಮತ್ತು ಮಳೆಯ ನೀರು ಹರಿದು ಹೋಗದಂತೆ ಮಾಡುವ ಕಾರ್ಯವನ್ನು ಕ್ರಮವಾಗಿ ಅನುಸರಿಸುತ್ತಾ ಬರಲಾಗಿದೆ. ಹಳೆಯ ಮುಂಬೈ ರಾಜ್ಯದಲ್ಲಿ ಈ ಕಾರ್ಯ ಆರಂಭವಾಯಿತು. ಇಂದು ಭಾರತದಲ್ಲಿ ಅದರಲ್ಲೂ ಮುಖ್ಯವಾಗಿ ಮುಂಬೈ-ಮಹಾರಾಷ್ಟ್ರ ಪ್ರದೇಶದಲ್ಲಿ, ಸುಮಾರು ಇಪ್ಪತ್ತು ಲಕ್ಷ ಎಕರೆಗಳಷ್ಟು ಭೂಮಿ ಇಂತಹ ಭೂಸಾರ ಸಂರಕ್ಷಣಾಕಾರ್ಯಕ್ಕೆ ಗುರಿಯಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಸಂಘಗಳು ಈ ಕಾರ್ಯ ಕೈಗೊಳ್ಳಲು ಉತ್ತೇಜನ ನೀಡಲಾಗಿದೆ.

ಈ 'ಕಾಂಟೂರ್ ಬಂಡಿಂಗ್' ಕಾರ್ಯಕ್ರಮದಿಂದಾಗಿ ಹಲವು ಭೂಮಿಗಳಿಗೆ ಪ್ರಯೋಜನವಾಗುವುದೆಂಬ ಭಾವನೆ ಹೋಗಿ, ಈ ಕಾರ್ಯ ಕೈಗೊಳ್ಳುವುದರಿಂದ ಇಡೀ ಗ್ರಾಮಕ್ಕೆ ಪ್ರಯೋಜನವಿದೆಯೆಂಬ ಭಾವನೆ ಜನರಲ್ಲಿ ಬೆಳೆಯುತ್ತಿದೆ. ಇಡೀ ಗ್ರಾಮದ ಭೂಮಿಗಳಿಗೆ ಭೂಗತಮೂಲದಿಂದ ಜಲಸರಬರಾಜು ಒದಗಿ ಬರುತ್ತದೆ. ಎತ್ತರದಲ್ಲಿ ಕಾಲುವೆಗಳನ್ನು ತೋಡಿ ನೀರಿನ ಸಂಗ್ರಹಣಕ್ಕೆ ಹಾವಿ ಮಾಡುವುದರಿಂದಾಗಿ, ಮಳೆಯ ನೀರು ಆವಿಯಾಗಿ ಹೋಗುವ ಬದಲು ಭೂಮಿಯ ಒಳಹೊಕ್ಕು ಪ್ರದೇಶದ ಸುತ್ತುಮುತ್ತಲೆಲ್ಲಾ ಹರಿಯುವ ಕಾರಣದಿಂದಾಗಿ, ಜಮೀನುಗಳ ಭೂಮಿ ಕ್ರಮೇಣ ಹದಗೊಂಡು, ಬಾವಿ ಅಗೆದಾಗ ನೀರು ಬೇಗ ಚಿಮ್ಮಿ ಬರುತ್ತದೆ.

ದೊಡ್ಡ ಪ್ರಮಾಣದ ಮಧ್ಯಮ ಪ್ರಮಾಣ ಮತ್ತು ಕಿರಿಯ ಪ್ರಮಾಣದ ನೀರಾವರಿ ಯೋಜನೆಗಳಿಗೆ ಪೂರಕವಾಗಿ ಈ ನಾಲ್ಕನೆಯ ಕ್ರಮವನ ಪ್ರಾಮುಖ್ಯತೆ ಬಹಳಸೆಂದೇ 'ಕಾಂಟೂರ್ ಬಂಡಿಂಗ್' ಕಾರ್ಯವಫಲವಾಗಿ ಜಮೀನುಗಳಲ್ಲಿ ಸುಲಭವಾಗಿ ನಿರ್ಮಾಣಗೊಳ್ಳುವ ಬಾವಿಗಳನ್ನೇ ನೀರಾವರಿ ಮೂಲಗಳ ಪೈಕಿ "ನಾಲ್ಕನೆಯ ಮುಖ್ಯ ಅಂಗ" ಎಂದು ನಾನು ಕರೆಯಬಯಸುತ್ತೇನೆ.

ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ೧೩೦ ಲಕ್ಷ ಎಕರೆಗಳಷ್ಟು ಭೂಮಿಯನ್ನು "ಕಾಂಟೂರ್ ಬಂಡಿಂಗ್" ಅಥವಾ ತತ್ಸಂಬಂಧ ನಿಧಾನಗಳ ಮೂಲಕ ಬೇಸಾಯಕ್ಕೊದಗಿಸುವ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ.

ಭೂಸಾರ ಸಂರಕ್ಷಣೆಯ ಅರ್ಥ ಭೂಮಿಯ ಗುಣ ರಕ್ಷಿಸುವುದಷ್ಟೇ ಅಲ್ಲ; ಭೂಮಿಯನ್ನು ಸದುಪಯೋಗಕ್ಕೆ ತರುವುದು ಮತ್ತು ಅತ್ಯಂತ ಪ್ರಯೋಜನಕಾರಿ ರೀತಿಯಲ್ಲಿ ರೂಢಿಸಿಕೊಳ್ಳುವುದೂ ಆಗಿದೆ.

ಭೂಸಾರ ಸಂರಕ್ಷಣೆ ವಿಧಾನವನ್ನು ಭಾರತದಲ್ಲಿ ಹೊಲಗಳ ನಿಷಯದ ಮಟ್ಟಿಗೆ ರೂಢಿಸಿಕೊಳ್ಳಲಾಗುತ್ತಿದೆ. ಗದ್ದೆ ಇತ್ಯಾದಿ ತರಿ ಜಮೀನಿನಲ್ಲಿ ಬೇಸಾಯ ಮಾಡುವಾಗಲೂ ಇವನ್ನು ಅನುಸರಿಸಬಹುದಾಗಿದೆ. ಕೃತಕ ವಿಧಾನಗಳ ಮೂಲಕ ನೀರು ಒದಗಿಸಿಕೊಂಡು ಗದ್ದೆ ಮಾಡುವ ಪದ್ಧತಿ ಹೆಚ್ಚು ಹೆಚ್ಚು ಬಳಕೆಗೆ ಬರುತ್ತಿದೆ. ಕಳೆದ ಎರಡು ಯೋಜನೆಗಳ ಅವಧಿಯಲ್ಲಿ ನೀರಾವರಿ ಸೌಲಭ್ಯಗಳು ತುಂಬಾ ಹೆಚ್ಚಿರುವುದು ಕಂಡು ಬರುತ್ತದೆ. ನೀರಾವರಿ ಸೌಲಭ್ಯವಿರುವ ಭೂಮಿಯ ಪ್ರಮಾಣ ಶೇ. ೧೨ರಿಂದ ೨೫ಕ್ಕೆ ಹೆಚ್ಚಿದೆ. ಈ ಪ್ರಮಾಣವನ್ನು ಶೇ. ೫೦ಕ್ಕೆ ಹೆಚ್ಚಿಸುವುದು ಯೋಜನೆಯ ಗುರಿಯಾಗಿದೆ. ತುಂಗಭದ್ರಾ ಮತ್ತಿತರ ಯೋಜನೆಗಳ ಫಲವಾಗಿ ನೀರಿಲ್ಲದೆ ಬಾಯಿ ಬಿಟ್ಟು ನಿಂತಿದ್ದ ಭೂಮಿಯಲ್ಲೀಗ ನೀರು ಹರಿಯತೊಡಗಿದೆ. ದಂಡೆಗಳನ್ನು ಕಟ್ಟಿ ಅಲ್ಲಲ್ಲೇ ಮಣ್ಣು ಕೊಚ್ಚಿ ಹೋಗದಂತೆ ಮಾಡದಿದ್ದರೆ, ಭೂಮಿಸಾರ ಕಡಿಮೆಯಾಗಲು ಅವಕಾಶವಾಗುತ್ತದೆ.

ಅಂತೆಯೇ ಭೂಸಾರ ಸಂರಕ್ಷಣೆಯ ಕ್ರಮಗಳಿಗೆ ಬೇಸಾಯ-ಸಂಬಂಧವಾದ ಯಾವುದೇ ಕಾರ್ಯಯೋಜನೆಯಲ್ಲಿ ವಿಶೇಷ ರೀತಿಯ ಪ್ರಾಮುಖ್ಯತೆಯನ್ನು ಕೊಡಬೇಕಾಗುತ್ತದೆ.

ಭ್ರಮಿತ ಭ್ರಮರ

(ಕಥನ ಪ್ರಬಂಧ)

ಶ್ರೀ. ' ಮಕರಂದ ' ಯಾದಗಿರಿ

ಚಕ್ರವರ್ತಿ ದುಷ್ಮಂತರಾಜನಿಗಾಗಿ ವಿಧಿ ನಿರ್ಮಿಸಿದ ಸುಂದರಿ ಶಕುಂತಲೆಯ ಬಿಂಬಾಧರವನ್ನು, ಕ್ಷುದ್ರ ಕೀಟ ಭ್ರಮರವೊಂದು ಭೋಗಿಸಲು ಹವಣಿಸಿ, ಮರಿಯಲಾರದಂತಹ ಬಿಟನ್ನು ತಿಂದಿತು.

ಉಷಃಕಾಲ. ಮೂಡಣವು ವರ್ಣರಂಜಿತವಾಗುತ್ತಲಿದೆ. ಅಲ್ಲಲ್ಲಿ ಶುಭ್ರವಾಗಿದ್ದ ನೀಲಾಕಾಶದಲ್ಲಿ ಶ್ವೇತವರ್ಣದ ಮೇಘಗಳು ಮೆಲ್ಲನೆ ತೇಲಿಹೋಗುತ್ತಲಿವೆ. ಶಶಿಯ ಶೀತಲಕಿರಣಗಳಿಗೆ ಮೈಯೊಡ್ಡಿ-ಮಲಗಿದ್ದ ಪೃಥ್ವೀದೇವಿಯು ಮಂದಮಾರುತನ ಮೃದುಸ್ಪರ್ಶದಿಂದ ಎಚ್ಚರಗೊಂಡಂತಿದೆ. ಇನ್ನೇನು, ಬಾಲಭಾಸ್ಕರನು ತನ್ನ ಮಂಗಳ-ಮಯ ಸ್ವರ್ಣಕಿರಣಗಳನ್ನು ಬಾಹುಗಳಂತೆ ಬಾಚಿ ಆಕೆಯನ್ನು ಆಲಿಂಗಿಸಿ ಚುಂಬಿಸಬೇಕು! ದಿಗಂತದಲ್ಲಿ ಅರುಣಚ್ಛಾಯೆಯನ್ನು ಕಂಡ ಹಕ್ಕಿಗಳು ತಮ್ಮ ತಮ್ಮ ಗೂಡುಗಳಿಂದ ಹೊರಬಿದ್ದು ಗಾನಾಲಾಪನೆ ಮಾಡುತ್ತ ಗಗನದೆಡೆಗೆ ಹಾರಿಹೊರಟಿವೆ. ಅವುಗಳ ಇಂಚರವು ವಾತಾವರಣದಲ್ಲಿ ಪಸರಿಸಿ ಅದಕ್ಕೊಂದು ಮಾಧುರ್ಯವನ್ನೊಡ್ಡುತ್ತ-ಲಿದೆ. ಸಾಧುಮೃಗವಾದ ಜಿಂಕೆಗಳು ಜಿಗಿದಾಡುತ್ತ ವಿಹರಿಸುತ್ತಲಿವೆ.

ಇತ್ತ ವಸಶ್ರೀಯು ಸಿದ್ಧಗೊಳಿಸಿದ ಶೃಂಗಾರ ಸಾಮಗ್ರಿಗಳಿಂದ ಧರಣೀದೇವಿಯು ತನ್ನ ತನುವನ್ನಲಂಕರಿಸಿದಂತಿದೆ— ಉಟ್ಟ ಆಕೆಯ ಹಸುರು ಹುಲ್ಲಿನ ಸೀರೆ, ಅದರಲ್ಲಿ ಮಿನುಗುವ ಮಂಜಿನ ಮುತ್ತುಗಳು, ಮುಡಿಯನ್ನಲಂಕರಿಸಲು ಬಾಗಿ ನಾನಾಬಗೆಯ ಪುಷ್ಪಲತೆಗಳು, ಎದೆಯಮೇಲಿಂದ ಹಾದು ಕೊರಳನ್ನು ಬಳಸುವ ಚಿನ್ನದ ಹಾರದಂತೆ ಎರಡೂ ಬೆಟ್ಟಗಳ ಮಧ್ಯದಿಂದ ಹಾದು ಹೋಗುವ ಮಾಲಿನೀ ನದಿಯ ಹೇಮವರ್ಣದ ನೀರು— ಎಲ್ಲವೂ ಆಕೆಗಿಂದು ಅನುಪಮ ಲಾವಣ್ಯ-ವನ್ನು ತಂದೊಡ್ಡಿವೆ.

ಮಾಲಿನೀ ನದಿಯಿಂದ ಸ್ವಲ್ಪ ದೂರದಲ್ಲಿಯೇ, ನಾನಾಬಗೆಯ ಫಲಪುಷ್ಪಗಳಿಂದ ತುಂಬಿದ ತರುಗಳ ತೋಪೊಂದಿದೆ. ಆ ತೋಪಿನ ಗರ್ಭದಲ್ಲಿ ಕೆಲವು ಸುಶೋಭಿಸುವ ಕುಟೀರಗಳು ಕಾಣುತ್ತಲಿವೆ. ಮನೋಹರವಾದ ಸ್ಥಳದಲ್ಲಿ ಮನುಷ್ಯನು ಮಾಡಿದ ಆ ಚಿಕ್ಕ ಮನೆ-ಗಳು,— ಅಲ್ಲ ಕುಟೀರಗಳು— ಒಂದಕ್ಕೊಂದು ಹೊಂದಿಕೊಂಡು, 'ಮಾನವನು ಸಾಮಾಜಿಕ ಪ್ರಾಣಿ' ಎನ್ನುವುದನ್ನು ಸಮರ್ಥಿಸುವಂತಿದೆ. ಅವುಗಳ ಮಧ್ಯದಿಂದ ಹಾಯ್ದುಬರುವ ಸೀಳುದಾರಿಗಳೆಲ್ಲ ಸೇರುವಲ್ಲಿ, ಚಿಕ್ಕದಾದರೂ ಅಚ್ಚುಕಟ್ಟಾದ ಕೊಳವಿದೆ. ಆ ಕೊಳವು ತಾವರೆಗಳ ತವರಾಗಿದೆ. ಬಗೆಬಗೆಯ ಮತ್ಸ್ಯಗಳಿಂದ ತುಂಬಿದ ಕೊಳದಲ್ಲಿ ಜಲ-ಕ್ರೀಡೆಯಲ್ಲಿ ಮಗ್ನವಾದ ಹಂಸಗಳೂ ಕಾಣುತ್ತಿವೆ. ಅರಳಲನುವಾದ ತಾವರೆಗಳು, ತೀಡುವ ತಂಗಾಳಿಗೆ ತುತ್ತಾದಾಗ, ನಿರ್ಮಲವಾದ ಕೊಳದ ನೀರು ಅಲೆಯಲೆಯಾಗಿ ಕುಲುಕುಲು ನಗುತ್ತದೆ. ಇದೇ ಮಹರ್ಷಿ ಕಣ್ವರ ಆಶ್ರಮ; ತಪೋಭೂಮಿ!

ಇರುಳಾಗುತ್ತಿದ್ದರೂ ಲಕ್ಷ್ಯಿಸದೆ ಮರುಳರಂತೆ ಮಧುಸ್ಪಾದನದಲ್ಲಿ ಮೈಮರೆತ ತಮ್ಮ ಅತಿಥಿಗಳನ್ನು ಹೃದಯಮಂಡಳದಲ್ಲಡಗಿಸಿಟ್ಟ ಕಮಲ ಗಳು, ರವಿಯ ರಕ್ತವರ್ಣಮುಖವನ್ನು ಕಂಡು ಪುಲಕಿತವಾಗಿ ಅರಳಿ-ದುವು. ಅದರೊಂದಿಗೆ ಭ್ರಮರಗಳ ಝೇಂಕಾರವು ಆರಂಭವಾಯಿತು.

ಆಗಲೇ ಎದ್ದ ಆಶ್ರಮವಾಸಿಗಳು ತಮ್ಮ ತಮ್ಮ ದೈನಂದಿನ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ತಪಸ್ವಿಗಳು ಸ್ನಾನಾಹ್ನೀಕಗಳನ್ನು ತೀರಿಸಿ ಜಪವನ್ನಾಚರಿಸುತ್ತಲಿದ್ದಾರೆ. ತಾಪಸ ಕನ್ಯೆಯರು ತಾವು ಅಕ್ಕರೆಯಿಂದ ಬೆಳೆಸಿದ ಗಿಡಬಳ್ಳಿಗಳಿಗೆ ನೀರೆರೆಯುತ್ತಿದ್ದಾರೆ. ಅವರಲ್ಲಿ ಕೆಲವರು ಹೂಗಳನ್ನು ಬಿಡಿಸಿ ಬುಟ್ಟಿಗೆ ತುಂಬುತ್ತಿದ್ದಾರೆ. ನಡುನಡುವೆ ಅಪರ ಮಂಜುಳಗಾನವು ಮಧುರ ನಗೆಯೊಡನೆ ಬೆರೆತು ವಾತಾವರಣ-ದಲ್ಲಿ ತೇಲಿ ಮಾಯವಾಗುತ್ತಲಿದೆ. ಅವರೆಲ್ಲರೂ ತರುಣಿಯರೆ! ಬಾಲ್ಯವನ್ನು ಬಿಟ್ಟು ತಾರುಣ್ಯದಲ್ಲಿ ಕಾಲಿಟ್ಟವರು. ತಾರುಣ್ಯಕ್ಕೆ ತಕ್ಕ ಅಂಗ ಸೌಷ್ಠವ,ಸೌಂದರ್ಯ, ಸೌಜನ್ಯ, ನಯ, ಭಯ, ಲಜ್ಜೆ ಮತ್ತು ತೇಜದಿಂದ ಯುಕ್ತರಾದ ಅವರು ಆಭರಣಗಳಿಲ್ಲದಿದ್ದರೂ ಅಮರಾ-ವತಿಯ ಅಪ್ಸರೆಯರನ್ನು ಮೀರಿಸುತ್ತಿದ್ದರು. ಅದೋ ನೋಡಿ, ಉಪ-ವನದ ದಕ್ಷಿಣಭಾಗದಿಂದ ಕಣ್ವಕುವರಿ, ಶಕುಂತಲೆ ತನ್ನ ನಚ್ಚಿನ ಗೆಳತಿಯರಾದ ಅನಸೂಯೆ ಮತ್ತು ಪ್ರಿಯಂವದೆಯರಿಂದೊಡಗೂಡಿ ಬರುತ್ತಿದ್ದಾಳೆ. ಗೆಳತಿಯರಿಬ್ಬರು ಸರಸಸಲ್ಲಾಪದ ಮಾತಿನಿಂದ ಆಕೆಗೆ ಕೀಟಲೆ ಕೊಡುತ್ತಿದ್ದಾರೆ.

ಇದೆಲ್ಲವನ್ನು ನೋಡುತ್ತಿದ್ದ ನಾನು, ಅದೇ ಬಂದು ಬಳಿಯಲಿದ್ದ ಕೆಂದಾವರೆಯ ಮೇಲೆ ಕುಳಿತೆನು. ಸಾಕಷ್ಟು ವಯಸ್ಸಾಗಿದ್ದ ನನಗೆ ಆಶ್ರಮವು ಚಿರಪರಿಚಿತವಾಗಿತ್ತು. ಅಲ್ಲಿಯ ಸಂಯಮ ನಿಯಮಗಳ-ನ್ನೆಲ್ಲವನ್ನು ನಾನು ಚೆನ್ನಾಗಿ ಬಲ್ಲೆನು. ಹೊತ್ತೇರುತ್ತಲಿತ್ತು. ಕಣ್ವರು ಆಶ್ರಮದಲ್ಲಿಲ್ಲದಿದ್ದುದರಿಂದಲೋ ಏನೋ, ಅಂದು ಶಕುಂತಲೆ ಹೆಚ್ಚುಹೊತ್ತು ಉಪವನದಲ್ಲಿ ಕಳೆಯುತ್ತಿದ್ದಾಳೆ. ಜಲಯುಕ್ತ ಕೊಡ-ವನ್ನು ಬಗಲಲ್ಲಿಟ್ಟುಕೊಂಡು ಬಳುಕುತ್ತ, ಬಾಗುತ್ತ,ಮಂದಗಮನೆಯು ಮೆಲ್ಲನೆಮೆಲ್ಲನೆ ಮಲ್ಲಿಗೆಯ ಲತೆಗಳಿಗೆ ನೀರೆರೆಯುತ್ತಿದ್ದಾಳೆ. ಕಣ್ವರು ಪ್ರೀತಿಯಿಂದ ಪಾಲಿಸಿ, ಲಾಲಿಸಿ ಬೆಳೆಸಿದ ಆಕೆಯ ಅಂಗಾಂಗಗಳಲ್ಲಿ

ತಾರುಣ್ಯವನ್ನು ಹಿಂಬಾಲಿಸಿ ಬರುವ ಸಹಜವಾದ ಸೌಂದರ್ಯವು ಸೇರಿಕೊಂಡಿತ್ತು. ನಾನು ಆಕೆಯನ್ನು ಎಷ್ಟೋ ಸಾರೆ ನೋಡಿದ್ದೇನಾದರೂ, ಅದೇಕೋ—ಅಂದು ಆಕೆಯನ್ನು ಪುನಃ ಪುನಃ ನೋಡಲು ಹೃದಯವು ಹಾತೊರೆಯುತ್ತಿತ್ತು. ತೀರ ತೆಳುವೆನಿಸದ ಗೌರವರ್ಣದ ಸ್ವಲ್ಪ ಎತ್ತರವಾದ ಆಕೆಯ ನಿಲುವಿಗೆ ಒಪ್ಪುವ ಉದ್ದನೆಯ ಕೇರಾಶಿಯು ಅಂದು ಮುಡಿಯಲ್ಲಿ ಪರಿವರ್ತಿತವಾಗಿತ್ತು. ಕಲಾತ್ಮಕವಾಗಿ ಕಟ್ಟಿದ ಆ ಮುಡಿಯಲ್ಲಿ ಗೆಳತಿಯರ ಕಲಾಭಿರುಚಿಯು ವ್ಯಕ್ತವಾಗಿತ್ತು. ದುಂಡಾದ ಮುಖದಲ್ಲಿ ನಸು ನೀಳವಾದ ಮೂಗು ಎದ್ದು ಕಾಣುತ್ತಿತ್ತು. ನೇತ್ರಗಳಲ್ಲಿಯು ಚಾಂಚಲ್ಯವು ಹೆಚ್ಚಿತ್ತು. ಆಕೆಯ ಕಂಬುಕಂಠವನ್ನು ಆರೆಯರಳಿದ ಮಲ್ಲಿಗೆಯ ಏಕಾವಳಿಯು ಬಳಸಿತ್ತು. ಎಳೆಯ ನಡುವನ್ನು ಉಟ್ಟುಸೀರೆಯು ಸುತ್ತುಗಟ್ಟಿ, ಆಕರ್ಷಣೀಯವಾದ ಕುಚವ್ಯಯಗಳಿಂದ ಶೋಭಿಸುವ ಎದೆಯ ಮೇಲಿಂದ ಹಾದು ಬೆನ್ನಿನ ಮೇಲೆ ಬಾಗಿ ಬಿದ್ದಿತ್ತು. ಸಖಿಯರ ಸಲ್ಲಾಪಕ್ಕೆ ಒಮ್ಮೊಮ್ಮೆ ಮುನಿಸು ತೋರುತ್ತಿದ್ದರೂ, ಆಗಾಗ ಕಿರುನಗೆಯ ಕೋಲ್ಮಿಂಚೊಂದು ಆಕೆಯ ಮುಖದ ಮೇಲೆ ಮೂಡಿ ಮಾಯವಾಗುತ್ತಿತ್ತು.

ಅನಸೂಯೆ ಕಣ್ಣಿರನ್ನು ಆಕ್ಷೇಪಿಸುವ ಸ್ವರದಲ್ಲಿ— "ಗಿಡಗಳಿಗೆ ನೀರೆರೆಯುವ ಕಷ್ಟವಾದ ಕೆಲಸಕ್ಕೆ ಕುಲಪತಿಗಳು ಸುಕುಮಾರಿಯಾದ ನಿನ್ನನ್ನೇಕೆ ನೇಮಿಸಿದರೋ ನಾ ಕಾಣೆ!" ಎಂದು ಮೆಲ್ಲನೆ ಶಕುಂತಲೆಯನ್ನು ಕೆಣಕಿದಳು. "ಇದು ತಂದೆಯವರ ಆಜ್ಞೆ ಯಷ್ಟೇ ಅಲ್ಲ; ಇವುಗಳ ಬಗ್ಗೆ ನನ್ನಲ್ಲಿಯೂ ಸಹೋದರ ಪ್ರೇಮವಿದೆ." ಎನ್ನುತ್ತ ಶಕುಂತಲೆ ಸಮಾಪದಲ್ಲಿದ್ದ ಬಳ್ಳಿಯೊಂದಕ್ಕೆ ಉದಕವೆರೆಚಿದಳು.

ನಾನು ಕುಳಿತ ಸ್ಥಳವನ್ನು ಬಿಟ್ಟು ಇನ್ನೊಂದು ಪುಷ್ಪವನ್ನು ಸೇರುವಮೊದಲು, ನನ್ನ ದೃಷ್ಟಿ ಅಲ್ಲಿಯೇ ಇದ್ದ ವೃಕ್ಷವೆಡೆಗೆ ಹೋಯಿತು. ಅಲ್ಲಿ ಅಡಗಿನಿಂತಿದ್ದ ವ್ಯಕ್ತಿಯನ್ನು ಕಂಡೆ. ಸ್ವಲ್ಪ ಹೊತ್ತು ನನಗೆ ಆತನ ಗುರುತೇ ಸಿಕ್ಕಲಿಲ್ಲ. ಆತನ ಎತ್ತರವಾದ ನಿಲುವು, ವಿಶಾಲವಾದ ಎದೆ, ತುಂಬಿದ ತೋಳುಗಳು, ಮುಖದಲ್ಲಿ ರಾರಾಜಿಸುವ ಕ್ಷಾತ್ರತೇಜ ಮತ್ತು ಮೂಗಿನ ಕೆಳಗೆ ಎದ್ದು ಕಾಣುವ—ಗಾಟಣಾದ ಮಿಸೆ, ನಿಂತ ಶೈವಿ ಮತ್ತು ಗಾಂಭೀರ್ಯವನ್ನು ಕಂಡು, ಯಾರೋ ರಾಜನಿರಬಹುದು, ಎಂದುಕೊಂಡೆ. ಆದರೆ ನನ್ನ ಉಹೆಗೆ ತಕ್ಕ ಉಡುಪು ಆತನ ಶರೀರದ ಮೇಲೆ ಇರಲಿಲ್ಲ. ಸಾದಾ ಉಡುಪನ್ನು ಧರಿಸಿದ್ದರೂ, ಧರಣೀಪತಿಯೆಂದು ಸಹಜವಾಗಿಯೇ ನಂಬುವಂತಿದ್ದನು. ಕೊನೆಗೆ ಹಸ್ತಿನಾವತಿಯ ದೊರೆ ದುಷ್ಯಂತನೇಕಾಗಬಾರದೆಂದು ಯೋಚಿಸಿದೆ. ಮನಸ್ಸೇಕೋ ನಿಜವೆಂದು ಮಾನ್ಯುಡಿಯಿತು. ಆದರೆ 'ಆತನು ಗಿಡದ ಮರೆಯಲ್ಲಿ ನಿಂತುಕೊಂಡು ಮಾಡುವುದಾದರೂ ಏನು?' ಎನ್ನುವ ಯೋಚನೆ ತಲೆಸೇರಲು "ಹಾಳಾಗಿ ಹೋಗಲಿ ನನಗೇಕೆ, ಆತನ ಗೊಡವೆ" ಎಂದುಕೊಂಡು, ನಾನು ಸುಮ್ಮನೆ ಅತ್ತಿತ್ತ ಹಾರುತ್ತ ತಿರುಗಾಡಿದೆ.

ಅಷ್ಟರಲ್ಲಿ ಅನಸೂಯೆ ಮತ್ತು ಪ್ರಿಯಂವದೆಯರಿಂದೊಡಗೂಡಿ ಬರುತ್ತಿರುವ ಶಕುಂತಲೆಯನ್ನು, ಎತ್ತಲಿಂದಲೋ ಹಾರಿಬಂದ ಭ್ರಮರ ಒಂದು ಮುತ್ತಿತು. ಅದು ಮತ್ತೆ ಮತ್ತೆ ಆಕೆಯ ಅಂದವಾದ ಅಧರಗಳೆಡೆಗೆ ಹಾರಿಹೋಗಿ ಕೂಡುವ ಪ್ರಯತ್ನ ಮಾಡುತ್ತಿತ್ತು. ಪ್ರಯತ್ನವು ಫಲಿಸದೇ ಹೋಗಲು ಮರಳಿ ಬರುತ್ತಿತ್ತು. ಅದೇಕೆ ಹಾಗೆ ಮಾಡುತಿತ್ತೋ ನಾ ಕಾಣೆ. ಆದರೆ ನನಗೇನೋ ಸೋಜಿಗವೆನಿಸಿತು. ಅಂತೆಯೇ ನಾನು ನಿಂತ ಸ್ಥಳದಿಂದ ಕದಲದೆ, ಎಲ್ಲವನ್ನೂ ನೋಡಲಾರಂಭಿಸಿದೆ. ಝೆಂಕರಿಸುವ ಭ್ರಮರದ ಕಾಟವನ್ನು ತಾಳಲಾರದೆ ಶಕುಂತಲೆಯು ಕೊಡವನ್ನು ಕೆಳಗಿಳುಹಿ ಅತ್ತಿಂದಿತ್ತ ಓಡಾಡಲಾರಂಭಿಸಿದಳು. ಆದರೆ ಆ ತುಂಟ ಭ್ರಮರವು ಬಿಡಬೇಕಲ್ಲವೇ? ಅದು ಆಕೆಯ ಕಿವಿಯಿಂದ ಮೂಗಿಗೆ, ಮೂಗಿನಿಂದ ಬಾಯಿಗೆ ಈ ರೀತಿಯಾಗಿ ಹಾರಿಹಾರಿ ಹೋಗುತ್ತಿತ್ತು. ಅತ್ತಿಂದಿತ್ತ ಅಡ್ಡಾಡುವಾಗ, ಶಕುಂತಲೆಯ ಮುಡಿ ಸಡಲಿ ಮುಂಗುರುಳು ಬಿಚ್ಚಿದುವು. ಭಯಗೊಂಡು ಬೆಮರಿದಳು. ಕೊರಳಮಾಲೆಯು ಅಲ್ಲಾಡಿತು. ಸೆರಗು ಕೊಂಚ ಜಾರಿತು.

ನಾನೆಷ್ಟೋ ಬಳುಕುವ ಲತೆಗಳನ್ನು ಕಂಡಿದ್ದೇನಾದರೂ, ಅಂದಿನ ಆಕೆಯ ಅಡ್ಡಾಟ ಪುನೋರಂಜಕ ನೃತ್ಯದಂತೆ ಕಾಣುತ್ತಿತ್ತು. ಶಕುಂತಲೆಯ ಸಖಿಯರು ಸಹ ಆಕೆಯ ಈ ಸ್ಥಿತಿಯನ್ನು ಕಂಡು ನಗಲಾರಂಭಿಸಿದ್ದರು. ಅವರಿಗೆ ಆಟವಾಗಿದ್ದರೆ, ಶಕುಂತಲೆಗೆ ಪ್ರಾಣಸಂಕಟವಾಗಿತ್ತು. ಭ್ರಮರದ ಬಾಧೆಯನ್ನು ತಾಳಲಾರದೆ ಆಕೆ ಸಖಿಯರ ಸಹಾಯವನ್ನು ಕೋರಿದಳು. ಆದರೆ ಅವರು, "ದುಷ್ಟರ ಶಿಕ್ಷಣವು ರಾಜನ ಕೆಲಸವಾದ್ದರಿಂದ, ಧರಣೀಶನಾದ ದುಷ್ಯಂತನಿಗೆ ಮೊರೆಯಿಡು" ಎಂದು ನಗೆಯಾಡಿದರು.

ಅಷ್ಟರಲ್ಲಿ ಮರದ ಮರೆಯಲ್ಲಡಗಿದ್ದ ಆ ವ್ಯಕ್ತಿ ಅವರೆದುರಿಗೆ ಕಾಣಿಸಿಕೊಂಡನು. ಸಖಿಯರು ವಿಸ್ಮಯಗೊಂಡರು. ಪ್ರಿಯಂವದೆಯು ಸಾವರಿಸಿಕೊಂಡು "ನಮ್ಮ ಸಖಿಯು ಭ್ರಮರದ ಬಾಧೆಯನ್ನು ಸಹಿಸಲಾರದೇ ಕೂಗಿಕೊಂಡಳು." ಎಂದು ಹೇಳುವ ಮೊದಲೆ, ಆತನು ತನ್ನ ಬಲತೋಳನ್ನು ಮೇಲೆತ್ತಿ, ಬಲವಾಗಿ ಭ್ರಮರವನ್ನು ಬಡಿದನು. ಅದು "ಅಯ್ಯೋ ಸತ್ತೇ—" ಎಂದು ಕೆರುಚಿ ದೊಪ್ಪನೆ ನೆಲಕ್ಕೆ ಬಿತ್ತು.

ಇದುವರೆಗೆ ಪ್ರೇಕ್ಷಕನಾಗಿದ್ದ ನನಗೆ ಸಹಿಸಲಾಗಲಿಲ್ಲ. ನನ್ನ ಸಜಾತಿಯ ಜಂತುವಿಗೆ ಎಟು ಬಿಟ್ಟ ಆತನನ್ನು ಶಿಕ್ಷಿಸುವ ಸಮಯ ಅದಾಗಿರಲಿಲ್ಲ. ಆಗಿದ್ದರೂ, ನಾನು ಶಿಕ್ಷಿಸುವ ಗೋಜಿಗೆ ಹೋಗುತ್ತಿರಲಿಲ್ಲ. ಏಕೆಂದರೆ ಆ ಭ್ರಮರದ ಸ್ಥಿತಿಯೇ ನನಗಾಗಬಹುದೆಂಬ ಭಯವು ನನಗಿತ್ತು. ಅಂತೆಯೇ ನಾನು ನೆಲಕ್ಕೆ ಅಪ್ಪಳಿಸಿದ್ದ ಭ್ರಮರ ನನ್ನು ಸಮೀಪಿಸಿ ನೋಡಲು ಗುರುತು ಸಿಕ್ಕಿತು. ಅವನು ನನ್ನ ನೆಚ್ಚಿನ ಗೆಳೆಯ! ಪಾಪ, ಮೂರ್ಛೆಹೋದಂತಿತ್ತು. ಮುಖದಲ್ಲಿ ಮುಖವನ್ನಿಟ್ಟು ಮಾತನಾಡಿಸಿದರೂ, ಮಾತನಾಡದೇ ಮೌನವಾಗಿ ಮಲಗಿದ್ದ ಮಿತ್ರನನ್ನು ಕಂಡು ಕಳವಳವಾಯಿತು. ಕೂಡಲೆ ಕೊಳಕ್ಕೆ ಹಾರಿಹೋಗಿ ಉದಕವನ್ನು ತಂದು, ಶೀತೋಪಚಾರವನ್ನು ಕೈಗೊಂಡೆನು. ಎಷ್ಟೋ ಹೊತ್ತಿನವರೆಗೆ ಅವನಿಗೆ ಎಚ್ಚರವೇ ಬರಲಿಲ್ಲ. ಎದೆಮುಟ್ಟಿ ನೋಡಿದೆನು. ಅದು ಇನ್ನೂ ಬಡಿದುಕೊಳ್ಳುತ್ತಿತ್ತು. ಪ್ರಾಣವಿದೆ ಎಂದು ನಾನು ಸಂತಸಗೊಂಡೆನು. ಕೊನೆಗೆ ನನ್ನ ಶುಶ್ರೂಷೆ ಫಲಿಸಿತು. ನನ್ನ ಮಿತ್ರನು ಕಣ್ಣು ತೆರೆದನು. ನನ್ನನ್ನು ನೋಡಿ ಮಗ್ಗುಲಾಗಲು

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಕೇಳಿಕೊಂಡಂತೆ **'ಧೂಮಕೇತು'** ಕಥೆಯನ್ನು ಕುರಿತ ವಿಮರ್ಶೆಗಳು ೫ ಜನರಿಂದಲೂ **'ಆಭರಣೇಶ್ವರಿ'** ಕಥೆಯನ್ನು ಕುರಿತ ವಿಮರ್ಶೆ ಕೇವಲ ಒಬ್ಬರಿಂದಲೂ ಬಂದಿವೆ.

'ಧೂಮಕೇತು' ಕಥೆಯ ವಿಮರ್ಶಕರು :

೧. ಶ್ರೀ. ಕಳಿಯಿತ್ತೋಡಿ ನರಸಿಂಹಭಟ್ಟ, ಬಿ. ಇ. ಎಂ. ಸ್ಕೂಲ್, ಕಾಸರಗೋಡು. ೨. ಕೆ. ಶಿವರಾಮಭಟ್ಟ, ಬಿ. ಇ. ಎಂ. ಸ್ಕೂಲ್, ಕಾಸರಗೋಡು. ೩. ಕುಮಾರಿ ಮಾಯಾ ಅಕ್ಕಿ ಜ್ಯೂ. ಎಂ. ಎ. ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ. ೪. ಶ್ರೀ. ಎಚ್. ಆರ್. ನರಸಿಂಹ, ಚಿಕ್ಕಮಗಳೂರು. ೫. ಶ್ರೀ. ಆರ್. ಕೆ. ದೇಶಪಾಂಡೆ, ಮುಂಬಯಿ.

'ಆಭರಣೇಶ್ವರಿ' ಕಥೆಯ ವಿಮರ್ಶಕರು :

ಶ್ರೀ. ಮಾ. ರಾಮಚಂದ್ರ ಬಿ. ಎ. ಧಾರವಾಡ

ಎಂದಿನಂತೆ ಸಂಪಾದಕ ಮಂಡಲಿಯವರೇ ವಿಮರ್ಶೆಗಳನ್ನು ಪರೀಕ್ಷಿಸಿ ನಿರ್ಣಯವಿತ್ತಿದ್ದಾರೆ.

'ಧೂಮಕೇತು' ಕಥೆಯ ವಿಮರ್ಶೆಗಳಲ್ಲಿ **ಕುಮಾರಿ ಮಾಯಾ ಅಕ್ಕಿ** ಅವರ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀ. ನರಸಿಂಹಭಟ್ಟ, ಶ್ರೀ. ಶಿವರಾಮಭಟ್ಟ ಅವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕುವೆರಡು ಸಾಮಾನ್ಯವಾಗಿವೆ.

'ಆಭರಣೇಶ್ವರಿ' ಯನ್ನು ಕುರಿತ ವಿಮರ್ಶೆ ಒಂದೆ ಬಂದಿದ್ದರೂ ಅದು ಉತ್ತಮ ವಿಮರ್ಶೆಯಾಗಿದೆ.

ಮುಂದಿನ ತಿಂಗಳ ವಿಮರ್ಶೆಯ ಮೇಲಾಟಕ್ಕಾಗಿ, **ಈ** ಸಂಚಿಕೆಯಲ್ಲಿ ಪ್ರಕಟವಾದ **'ಮೋಸ'** ಎಂಬ ಕಥೆಯ ಕುರಿತಾಗಲಿ, **'ಮಲಮಗನ ಕರಿ'** ಕಥೆಯ ಕುರಿತಾಗಲಿ, ವಿಮರ್ಶೆಗಳನ್ನು ಬರೆದು ಕಳುಹಬೇಕು.

ಹೊರಳಿದಾಗ ಮತ್ತೆ "ಅಯ್ಯೋ!ss—" ಎಂದು ಆರ್ತಸ್ವರದಲ್ಲಿ ಕೂಗಿ ಕೊಂಡನು. ನಾನು ಮೆಲ್ಲನೆ ಅವನನ್ನೆಬ್ಬಿಸಿ ಕೂಡಿಸಿದೆನು. ಅವನ ಮೈಯೆಲ್ಲ ನೋವಿಗೊಳಗಾದಂತೆ ಕಾಣುತ್ತಿತ್ತು. ಕಾಲಿನ ಮುಂಭಾಗವು ನುಗುಚಿಕೊಂಡಿತ್ತು. ಅವನು ಸಾವರಿಸಿಕೊಂಡು ಎದ್ದು ಕುಳಿತ ಮೇಲೆ, ನಾನು ಏನೂ ಅರಿಯದವನಂತೆ ಮೆಲ್ಲನೆ "ಅದೇಕೆ ಹೀಗಾಯಿತು?" ಎಂದು ಕೇಳಿದೆನು.

"ಅದೆಲ್ಲ ತಕ್ಕೊಂಡೇನು ಮಾಡುವೆ? ಮುಖ್ಯ ನನ್ನ ಕರ್ಮ!" ಎಂದು ಕಣ್ಣೀರು ಹಾಕಲಾರಂಭಿಸಿದ ಮಿತ್ರನನ್ನು, ನಾನು ಪರಿಪರಿಯಿಂದ ಸಂತೈಸಿದೆನು. ಕಣ್ಣೊರಸಿಕೊಂಡು ಅತ್ತಿತ್ತ ನೋಡಿ, "ಅದೋ ನೋಡು, ಆ ಹೂವು ಚೆನ್ನಾಗಿ ಕಂಡಿತೆಂದು ಅತ್ತಹಾರಿ-ಹೋದೆನು" ಎಂದು ಶಕುಂತಲೆಯ ಮುಖವನ್ನು ತೋರಿಸಿದನು.

ನನಗೆ ತಡೆಯಲಾರದಷ್ಟು ನಗೆ ಬಂದಿತು. ನಕ್ಕರೆ ಅವನು ಅನ್ಯಥಾ ಭಾವಿಸುವನೆಂದು ಅತಿ ಶ್ರಮಪಟ್ಟು ನಗೆಯನ್ನು ತಡೆಹಿಡಿದೆನು. ಆಮೇಲೆ ನಾನು ಅವನಿಗೆ, "ಎಲೋ, ಅದು ಹೂವೆ? ಚೆನ್ನಾಗಿ ನೋಡು" ಎಂದೆ. ಅವನು ಪುನಃ ಶಕುಂತಲೆಯತ್ತ ನೋಡಿದನು. ಅವನ ಮುಖವು ಕಳೆಗುಂದಿತು. "ಅಯ್ಯೋ, ನಾನೆಂಥ ನೂರ್ಮ. ಮಾನವನ ಮುಖವನ್ನು ಹೂವೆಂದು ತಿಳಿದೆ!" ಎಂದು ಎಳೆಯ ನಿಟ್ಟುಸಿರನ್ನು ಬಿಟ್ಟನು.

ಪುನಃ ನಾನು ಅವನನ್ನು, "ಅದೇಕೆ ಹಾಗೆ ತಿಳಿದೆ?" ಎಂದು ಪ್ರಶ್ನಿಸಲು, ಅವನು "ಅದೋ ಆ ದುಂಡುಮುಖ, ಕೆಂಪನೆಯ ಕೆನ್ನೆಗಳು, ಅಂದವಾದ ಅಧರಗಳು. ಎಲ್ಲಕ್ಕೂ ಮಿಗಿಲಾಗಿ ಕಣ್ಣುಗಳೆರಡು ಕಪ್ಪು ದುಂಬಿಗಳಂತೆ ಕಂಡವು. ಮುಖವು ಅತ್ತಿತ್ತ ಹೊರಳಿದಾಗ ಗಾಳಿಯ ರಭಸಕ್ಕೆ ತುತ್ತಾಗಿ ಹೂವು ಅಲುಗಾಡುತ್ತಿರಬಹುದೆಂದೆನ್ನಿಸಿತು. ಎಲ್ಲವೂ ನನ್ನ ಭ್ರಮೆ." ಎಂದನು.

"ಅಲ್ಲವೋ, ಆಕೆ ಶಕುಂತಲೆ, ಕಣ್ವಕುವರಿ. ಇಂದುವದನೆ. ಮಂದಗಮನೆ. ಅತ್ತ ನೋಡು ಕ್ಷಾತ್ರತೇಜದಿಂದ ತುಂಬಿದ ಆ ವ್ಯಕ್ತಿ ಆಕೆಯ ಸಮಾಪದಲ್ಲಿ ನಿಂತಿದ್ದಾನೆ. ಆತನೇ ಆಕೆಯ ಅಧರಾಮೃತವನ್ನು ಪಾನಮಾಡಲು ಯೋಗ್ಯ. ಸಿನ್ನಂಥ ಶುದ್ಧ ಅವಿವೇಕ ಮತ್ತು ಅಯೋಗ್ಯನಿಗೆ ಅದು ಲಭಿಸುವುದಾದರೂ ಹೇಗೆ ಹೇಳು?" ಎಂದ ನನ್ನನ್ನು ನನ್ನ ಮಿತ್ರನು ಅರ್ಥಪೂರ್ಣ ದೃಷ್ಟಿಯಿಂದ ನೋಡಿದನು. ಆವನ ಆ ನೋಟವು ನಾನು ಹೇಳಿದ್ದೆಲ್ಲವೂ ಅಕ್ಷರಶಃ ನಿಜವೆಂದು ಸಾರಿ ಹೇಳುತ್ತಿತ್ತು.

ಅಷ್ಟರಲ್ಲಿ ಶಕುಂತಲೆ ನೆಲದ ಮೇಲಿದ್ದ ಕೊಡವನ್ನು ಬಗಲಲ್ಲಿಟ್ಟು, ಹಣೆಯ ಕೆರುಬೆಮರನ್ನು ಸೆರಗಿನ ಕೊನೆಯಲ್ಲಿ ಇಂಗಿಸಿ, ಲಜ್ಜೆಯ ಭಾರದಿಂದ ಕತ್ತು ತಗ್ಗಿಸಿ, 'ಯಾರಾದರೂ ನೋಡಿದರೆ ಏನು ಗತಿ' ಎನ್ನುವ ಭಯದಿಂದ, ಭಾರವಾದ ಕಾಲುಗಳನ್ನು ಮನಸ್ಸಿಲ್ಲದೇ ಎತ್ತಿಡುತ್ತ, ಚಂಚಲ ನೋಟದಿಂದ ಆ ಕ್ಷಾತ್ರತೇಜಯುಕ್ತ ವ್ಯಕ್ತಿಯನ್ನು ನೋಡಿದಳು. ಕೂಡಲೆ ಎಳೆಯ ಸುಳನಗೆಯೊಂದು ಆಕೆಯ ಅಧರಗಳನ್ನು ಹೊಕ್ಕು ಅರೆಯರಳಿಸಿತು. ಮೆಲ್ಲನೆಮೆಲ್ಲನೆ ಹೆಜ್ಜೆಹಾಕುತ್ತ ಮರಳಿ ಮರಳಿ ಆತನನ್ನೇ ನೋಡಿ ನಡೆಯುತ್ತಲಿದ್ದ ಶಕುಂತಲೆಯನ್ನು ಕಂಡು ನಾನು, "ಅವರ ಗೊಡವೆ ನಮಗೇಕೆ? ಏಳು ಮೆಲ್ಲನೆ ನಮನೆಗೆ ಹೋಗುವ." ಎಂದು ಮಿತ್ರನನ್ನು ಎಬ್ಬಿಸಿದೆನು. ಅವನು ಮರುಮಾತನಾಡದೆ ರೆಕ್ಕೆಬಿಚ್ಚಿ ನನ್ನನ್ನು ಹಿಂಬಾಲಿಸಿದನು. ❀

ಧೂಮಕೇತು

(ಕಥಾವಿಮರ್ಶೆ)

ಕುಮಾರಿ ಮಾಯಾ ಅಕ್ಕಿ ಜ್ಯೂ. ಎಂ. ಎ. ಕ. ವಿ.ವಿ. ಧಾರವಾಡ

" ಕುಲಂ ಕುಲಮಲ್ತು ಚಲಂ ಕುಲಂ, ಗುಣಂ ಕುಲಂ "— ಎಂದು ಕರ್ಣ ಕುಲವನ್ನು ಪ್ರತಿಭಟಿಸಿ ಶೌರ್ಯವನ್ನು ನೆರೆದಿದ್ದಾನೆ. ಆದರೂ ಅವನ ಕುಲಕಲಂಕ ಅವನನ್ನು ಸಾಕಷ್ಟು ಕೊರಗಿಸಿತ್ತು. ಅದೇ ಅವನನ್ನು ದುರಂತಕ್ಕೀಡುಮಾಡಿತು. ಕುಲೀನನೆಂದು ಹುಟ್ಟಿದ ಮನುಷ್ಯ ಸಮಾಜದಲ್ಲಿ ಒಂದು ಬಗೆಯ ಸಾಂಪ್ರದಾಯಿಕ ಮನ್ನಣೆಯನ್ನು ಪಡೆಯುತ್ತ ಬಂದಿದ್ದಾನೆ. ಕೆಸರಿನೊಳಗೆ ಹುಟ್ಟಿದರೇನಾಯಿತು; ಕಮಲ ಕಮಲವೇ ಅಲ್ಲವೆ ? ಗುಣಕ್ಕೆ ಮನ್ನಣೆ ಸಲ್ಲಿಸಬೇಕು, ಗುಣವು ಎಲ್ಲಿದ್ದರೇನು ನಾವು ಪೂಜಿಸಬೇಕು,ಅದನ್ನು ಬಿಟ್ಟು ಕೇವಲ ಆ ವ್ಯಕ್ತಿಯ ಕುಲವನ್ನೇ ಎತ್ತಿ ಎತ್ತಿ ನಾವು ಚಲ ಸಾಧಿಸಿದುದಾದರೆ ಮಾನವ ಪ್ರಪಂಚದ ಒಂದು ಹಿರಿಯ ವ್ಯಕ್ತಿಯನ್ನು ಕಳೆದುಕೊಳ್ಳುತ್ತೇವೆ.

ಈ ತತ್ತ್ವವನ್ನೇ ಪ್ರತಿಬಿಂಬಿಸುತ್ತದೆ ಕು.ಎಂ.ಕೆ. ಉಮಾದೇವಿಯವರು ಬರೆದ 'ಧೂಮಕೇತು' ಕಥೆ. ಕಥೆ ನೆನಪಿನ ಸಾಮ್ರಾಜ್ಯದ ಮರುಚಿತ್ರವಾಗಿ ಮೂಡಿಬಂದಿದೆ. ಹೈಸ್ಕೂಲಿನ ಚಿಕ್ಕ ವಿದ್ಯಾರ್ಥಿಯ ದುರಂತಜೀವನದ ಚಿತ್ರವನ್ನೆ ಕತೆಗಾರ್ತಿಯರು ಚಿತ್ರಿಸಿದ್ದಾರೆ. ಕತೆ ಹೇಳುವ ಶ್ಯಾಮು ಸತ್ಯಕಾಮ ಜಾಬಾಲಿಯ ಕತೆ ಓದಿದಾಗ, ಸಹಜವಾಗಿ ತನ್ನ ಗೆಳೆಯ ಮೂರ್ತಿಯ ದುರಂತ ಜೀವನ ಚಿತ್ರ ಕಣ್ಣೆದುರಿಗೆ ಬರುತ್ತದೆ.

ಶ್ಯಾಮು–ಮೂರ್ತಿ ಇಬ್ಬರೂ ಹೈಸ್ಕೂಲು ಗೆಳೆಯರು. ಸಭ್ಯತೆ, ಸರಳತೆ, ವಿನಯಗಳ ಮೂರ್ತಿಯೇ ಆ ಮೂರ್ತಿ. ಇಂಥ ಮೂರ್ತಿಯ ಬಾಳಬಾನಿನಲ್ಲಿ ಧೂಮಕೇತುವಿನಂತೆ ಮೂಡಿಬಂದವನೇ ಮುರಳಿ. ಕುಲೀನನಾದ ಮುರಳಿ ಕುಲಹೀನನಾದ ಮೂರ್ತಿಯೊಡನೆ ಸ್ನೇಹ ಸಾಧಿಸಿ, ಕೊನೆಗೊಮ್ಮೆ ಅವನನ್ನು ನುಂಗಿದ. ಶಾಲೆಯಲ್ಲಿ ಎಲ್ಲರಿಗೂ ಅವನ ತಾಯಿ ಸೂಳೆ ಎಂದು ಡಂಗುರಸಾರಿ, ಮೂರ್ತಿಯ ಕುಲವನ್ನೇ ಎತ್ತಿ ಮಾತನಾಡಿದ. ಈ ಕುಲಕಲಂಕನೇ ಅವನನ್ನು ಭಾವಿಗೆ ತಳ್ಳಿತು—ಇದಿಷ್ಟು ಕಥೆಯ ಸಾರ–ಸಾರಾಂಶ.

ಕಥೆಯಲ್ಲಿ ಸುಳಿದಾಡುವ ವ್ಯಕ್ತಿಗಳೆಂದರೆ ಮುಖ್ಯವಾಗಿ ಮೂರ್ತಿ, ಆನಂತರ ಶ್ಯಾಮು, ಮುರಳಿ. ಮುರಳಿಗೆ ಮೂರ್ತಿಯ ಕುಲದ ವಿಷಯವನ್ನು ಹೇಳಿದ ಕರಿಯಮ್ಮ, ಮೂರ್ತಿಯ ತಾಯಿ, ಶ್ಯಾಮುವಿನ ತಾಯಿ–ಇಷ್ಟು ಜನ ಮಾತ್ರ.

ಮೂರ್ತಿ ಕೆಸರಿನಲ್ಲಿ ಹುಟ್ಟಿದ ಕಮಲ. ಮುಳ್ಳುಗಿಡದಲ್ಲಿ ಮೂಡಿಬಂದ ಸೌರಭಯುಕ್ತ ಸುಂದರ ಪುಷ್ಪ. ಚಿಕ್ಕ ವಯಸ್ಸಿನಲ್ಲಿಯೇ ಅತನ ಗುಣಗಳನ್ನು ನಾವು ಕಾಣಬಹುದಾಗಿದೆ. ಪಾಠದಲ್ಲಿ ಮೊದಲಿಗ. ಆಟದಲ್ಲಿ ಗಟ್ಟಿಗ. ಶ್ಯಾಮುವಿನ ತಾಯಿ "ಅವನ ಸಹವಾಸ ಸಿಕ್ಕಿದ್ದು ನಿನ್ನ ಪುಣ್ಯ" ಎಂದೆನ್ನುತ್ತಿದ್ದರಂತೆ ಶ್ಯಾಮುವಿಗೆ. ಈ ಒಂದು ಮಾತೇ ಸಾಕು, ಮೂರ್ತಿಯ ಗುಣವಿಶೇಷಗಳನ್ನು ಹೇಳಲು

ಶ್ಯಾಮು ಒಬ್ಬನೆ ಮೂರ್ತಿಯ ಹೃದಯವನ್ನು ಕಂಡಿದ್ದನೇನೊ ಎನ್ನುವಂತಹ ಗೆಳೆಯ. ಅವನ ಮೃದುಹೃದಯಕ್ಕೆ ನೋವಾದೀತು ಎಂದು ಅರಿತು, ಅವನ ಕುಲವಿಷಯವನ್ನು ಅವನಿಂದ ಕೇಳದೆ, ಅದು ತಿಳಿದಾಗಲೂ ಮೊದಲಿನಂತೆಯೇ ಸ್ನೇಹಿತನಾಗಿದ್ದವ. ಅವನು ಅಳಿದು ಹೋದರೂ ಅವನ ದುರಂತಜೀವನದ ಚಿತ್ರವನ್ನು ನೆನೆಸಿ ಕಣ್ಣೀರಿಡುವ ನಿಜವಾದ ಸ್ನೇಹಿತ.

ಧೂಮಕೇತು ಮುರಳಿ, ಕೇವಲ ಅವನನ್ನು ಕಾಡಿಬಿಡಲಿಲ್ಲ; ನುಂಗಿಯೇ ಬಿಟ್ಟ. ಮುರಳಿಯಂತಹ ವಿದ್ಯಾರ್ಥಿಗಳು ಇಂದಿಗೂ ನಮ್ಮ ವಿದ್ಯಾರ್ಥಿ ಸಮಾಜದಲ್ಲಿದ್ದಾರೆ.ಕೇವಲ ಕುಲದ ಬಲದಿಂದ ಶ್ರೇಷ್ಠರೆಂದು ಹೇಳಿಕೊಂಡು, ಒಳಗೆ ಕಾಪಟ್ಯ, ಮೋಸಗಳನ್ನು ತುಂಬಿಟ್ಟುಕೊಂಡು, ಗುಣವಂತರ ಹೆಚ್ಚಳವನ್ನು ಸಹಿಸದೆ ಸದಾಕಾಲವೂ ಅವರನ್ನು ಅಧೋಗತಿಗಿಳಿಸಲು, ಎಂಥ ನೀಚ ಕೃತ್ಯಕ್ಕೂ ಹೇಸದ ಜನರ ಪ್ರತೀಕನಾಗಿ ನಿಂತಿದ್ದಾನೆ ಮುರಳಿ. ಶಾಲೆಗೆ ಸೇರಿದಂದಿನಿಂದಲೇ ಮೂರ್ತಿಯ ಜನಪ್ರಿಯತೆಯನ್ನು ಕಂಡು ಆತನಿಗೆ ಹೊಟ್ಟೆಯಲ್ಲಿ ಕಿಚ್ಚು ಉರಿಯುತ್ತಲೆ ಇತ್ತು. ಅದನ್ನು ವ್ಯಕ್ತಪಡಿಸಲು ದಾರಿಕಾಯುತ್ತಿದ್ದ. ಆದಕ್ಕೆ ಆವರ ಮನೆಗೆಲಸದ ಕರಿಯಮ್ಮ ಹೇಳಿದ ಸುದ್ದಿಯನ್ನು ಉಪಯೋಗಿಸಿಕೊಂಡ. ಮೂರ್ತಿಯ ತಾಯಿ ವಿಧವೆ. ಇಲ್ಲಿ ಕತೆಗಾರರು ಸಮಾಜವನ್ನು ಸೂಕ್ಷ್ಮವಾಗಿ ಟೀಕಿಸಿದ್ದಾರೆ. ವಿಧವೆಗೆ ಯಾರಾದರೂ ಏನಾದರೂ ಸಹಾಯ ಸಲ್ಲಿಸಿದರೆ, ಸಲ್ಲದ ಆರೋಪ ಹೊರಿಸುತ್ತದೆ ನಮ್ಮ ಸಮಾಜ. ಯಾವಾಗಲೂ ಜನತೆಗೆ ಆಡಿಕೊಳ್ಳಲು ಒಂದು ವಿಷಯ ಬೇಕಾಗಿರುತ್ತದೆ. ಅಂಥ ಸಂದರ್ಭದಲ್ಲಿ ಹೀಗೆ ಅಧೋಗತಿಗೆ ಇಳಿದವರು ಅವರ ತುತ್ತಾಗುತ್ತಾರೆ. ಮುಕ್ಕಳ ಉನ್ನತಿಗಾಗಿ ಹೆಣಗುವ ತಾಯಿಯನ್ನು ಕಂಡು ಕನಿಕರಪಡದೆ, ಅವಳು 'ಸೂಳೆ' ಎಂಬ ಅಪವಾದ ಹೊರಿಸಿ ಮೂಲೆಗೆ ಕೂಡಿಸುತ್ತಾರೆ. ಅದರಲ್ಲಿಯೂ ಆ ವಿಧವೆ ಚೆಲುವೆಯಾಗಿದ್ದರಂತೂ ಅವಳ ಪಾಡು ಹೇಳಲಸಾಧ್ಯ. ಇಂಥ ಒಂದು ಪಾಡೇ ಮೂರ್ತಿಯ ತಾಯಿಯದು.

ಮೂರ್ತಿಯ ಮನೆತನದ ಸುದ್ದಿಯನ್ನು ಎಲ್ಲೆಡೆಗೂ ಹಬ್ಬಿಸಿದವಳು ಕರಿಯಮ್ಮನೇ. ನಿಜವಾಗಿ ಒಂದು ದೃಷ್ಟಿಯಿಂದ ಮೂರ್ತಿಯ ದುರಂತಕ್ಕೆ ಈಕೆಯೇ ಮೂಲ. ಕೇವಲ ತನ್ನ ಕೆಲಸವನ್ನು ಮಾಡಿಕೊಂಡು ತನ್ನ ಮನೆಯ ದಾರಿಹುಡಿಯುವವಳಲ್ಲ ಈಕೆ. " ಗೂಳಿಬಿದ್ದರೆ ಆಳಿಗೊಂದು ಕಲ್ಲು" ಎಂದಂತೆ, ದುರ್ದೈವಿ ಮೂರ್ತಿಯ ತಾಯಿಯ ವಿಷಯವನ್ನು ಇವಳೇ ಊರಲ್ಲೆಲ್ಲ ಸಾರುತ್ತಾಳೆ.

ಕತೆಗಾರ್ತಿ ಮೂರ್ತಿಯ ತಾಯಿಯ ಚಿತ್ರವನ್ನು,ಚಿಕ್ಕದಾದರೂ ಚೊಕ್ಕವಾಗಿ ಕೊಟ್ಟಿದ್ದಾರೆ. ಶ್ಯಾಮು ಮೊದಲು ಏನೂ ನೆಪಮಾಡಿಕೊಂಡು ಅವರ ಮನೆಗೆ ಹೋಗುತ್ತಾನೆ. ಆಗ ಆಕೆ ಮನೆಯನ್ನು ಅಚ್ಚುಕಟ್ಟಾಗಿ ಇಟ್ಟ ರೀತಿ, ಆಕೆ ಸದ್ಗೃಹಿಣಿ ಎಂಬುನ್ನು ತಿಳಿಸುತ್ತದೆ. ಆಕೆಯ ರೂಪವನ್ನು ಕೂಡ ಎರಡೇ ಮಾತಿನಲ್ಲಿ ಸುಂದರವಾಗಿ ಹೇಳಿ-

ದ್ದಾರೆ. ಆಕೆಯ ಮುಖದಲ್ಲಿಯ ಸೌಮ್ಯಕಳೆ ಹೆಚ್ಚಿನ ಶೋಭೆಯನ್ನು ತಂದುಕೊಟ್ಟಿತ್ತು. "ಮೂರ್ತಿಯ ಮೇಲಿನ ಭರವಸೆಯಿಂದಲೇ ನಾನು ಕಾಲ ನೂಕ್ತಾ ಇದೇನಪ್ಪಾ" ಎಂದು ಅಂದಾಗ,ಹೃದಯದಲ್ಲಿ ಕರುಣೆ ಸೆಲೆಯೊಡೆಯುತ್ತದೆ. ಮೂರ್ತಿಯ ಬಗ್ಗೆ ಅವಳಲ್ಲಿ ಮಿನುಗುತ್ತಿದ್ದ ವಾತ್ಸಲ್ಯಜ್ಯೋತಿ ಅವಳ ಪುತ್ರವಾತ್ಸಲ್ಯವನ್ನು ಕಣ್ಣು ಮುಂದಿಡುತ್ತದೆ. ಕತೆಯಲ್ಲಿ ಮತ್ತೆ ಆಕೆ ಸುಳಿಯುವುದು ಕೊನೆಯ ಹಂತದಲ್ಲಿ. ಮೂರ್ತಿ ಕಣ್ಮರೆಯಾದಾಗ.ಆತನನ್ನು ಹುಡುಕಲುಶ್ಯಾಮನನ್ನು ಕರೆದೊಯ್ಯಲು ಆತನ ಮನೆಗೆ ಬಂದಾಗ,ಶ್ಯಾಮನ ತಾಯಿಯ ಕಾಲು ಹಿಡಿದು ಒಂದು ಒಳ್ಳೆ ಸುದಿಯನ್ನು ಹರಕೆ ಎಂದು ಬೇಡುವಾಗ, ಕಣ್ಣೀರು ತಡೆಯುವುದಿಲ್ಲ. ಅಯ್ಯೋ ಪಾಪ!—ಎನ್ನಿಸುತ್ತದೆ. ಆ ವಿಧವೆಗೆ ಊರುಗೋಲಾಗಿದ್ದ, ಒಂದೇ ಒಂದು ಆಧಾರವಾಗಿದ್ದ ಮೂರ್ತಿ ಕಣ್ಮರೆಯಾದಾಗ ಅವಳ ಹೃದಯದ ಕಳವಳ ಕರುಣೆಯನ್ನು ಕೆರಳಿಸುತ್ತದೆ. ಅವಳ ಬಾಳ ಬಾನಿನಲ್ಲಿ ಧ್ರುವತಾರೆಯಂತಿದ್ದ ಮೂರ್ತಿಯೇ ಅಡಗಿದಾಗ ಅವಳು ಯಾವುದನ್ನು ನೋಡಿ ಬದುಕಬೇಕು? ಬಾಳನ್ನು ನೂಕಬೇಕು? ಕತೆಗಾರ್ತಿ ಕೊನೆಗೆ ಸಹಜವಾದ ಪರಿಣಾಮನ್ನೇ ಹೇಳಿದ್ದಾರೆ. ಬಾಳನುದ್ದಕ್ಕೂ ಒಂದು ಜೀವ ಇಷ್ಟೊಂದು ಕಷ್ಟ ಸಂಕಟಗಳನ್ನು ಅನುಭವಿಸಿದಾಗ, ಮರಣವೇ ಲೇಸು ಎನಿಸುತ್ತದೆ. ಸಾಮಾನ್ಯವಾಗಿ ಮರಣಹೊಂದಿದವರು ಇನ್ನೂ ಪುಣ್ಯವಂತರೆ;ಉಳಿದರೆ ಆ ಕ್ರೂರ ವಿಧಿ ಕೆಲವರಿಗೆ ಉದನ್ನು ದಯಪಾಲಿಸದೇ ಉದಕ್ಕೂ ಹೆಚ್ಚಿನ ಪಾಪಕೂಪಕ್ಕೆ ನೂಕಿ ಹುಚ್ಚೆಂಬೊ, ಬುದ್ಧಿಭ್ರಮಣೆ ಎಂದೊ ಕಾಡುತ್ತದೆ. ಅಂಥ ಒಂದು ಬುದ್ಧಿಭ್ರಮಣೆ ಮೂರ್ತಿಯ ತಾಯಿಗಾಗುತ್ತದೆ. ಅವಳ ಚಿತ್ರ ಓದುಗರಲ್ಲಿ ಕರುಣಾರಸದ ಹೊನಲನ್ನೇ ಹರಿಸುತ್ತದೆ. ಅನತಿದೂರದಲ್ಲೇ ಸಮುದ್ರಲಗ್ನೆಯಾಗಲಿರುವ ತರಂಗಿಣಿಯಂತೆ, ಕರುಣಾರಸಸ್ರವಣಾಹ ಉಕ್ಕೇರಿ ಹರಿಯುತ್ತದೆ, ಕತೆಯ ಕೊನೆಯ ಭಾಗದಲ್ಲಿ.

ಶ್ಯಾಮನ ತಾಯಿ ತಿಳಿದೋ, ತಿಳಿಯದೆಯೊ ಮೂರ್ತಿಯ ದುರಂತಕ್ಕೆ ಕಾರಣಳಾಗುತ್ತಾಳೆ: "ಅಮ್ಮಾ, ಮೂರ್ತಿಯ ತಾಯಿಗೆ ಅವನನ್ನು ಕಂಡರೆ ಎಷ್ಟು ಪ್ರೀತಿ ಅಂತೀಯಾ? ನಿನಗೂ ಸನ್ಮೇಲೆ ಬಹುಶಃ ಅಷ್ಟಿಲ್ಲ" ಎಂದಾಗ,ಅವಳ ಅಭಿಮಾನಕ್ಕೆ ಧಕ್ಕೆ ತಗಲಿದಂತಾಗಿ ಅದು ಅಪ್ರತ್ಯಕ್ಷವಾಗಿ ಮೂರ್ತಿಯ ತಾಯಿಯ ಮೇಲೆ ಎಲ್ಲರಂತೆ ಸಂಶಯವನ್ನು ತಳಿಯುವಂತಾಯಿತು. ನಿಜವಾಗಿ ಶ್ಯಾಮನ ತಾಯಿಯ ಹೃದಯ, ಆಕೆಯ ದುಃಖವನ್ನು, ಪುತ್ರವಾತ್ಸಲ್ಯವನ್ನು ಅರಿತಿತ್ತು. ಆದರೂ ಕರಿಯಮ್ಮ ಹೇಳಿದ್ದು ನಿಜವಿರಬಹುದೇನೊ ಎಂಬ ಶಂಕೆ ಆಗಾಗ ತಲೆಯೆತ್ತುತ್ತಿತ್ತು. ಅಲ್ಲದೆ ಮೂರ್ತಿಗೂ ಸುತ್ತು ತನ್ನ ಮಗ ಶ್ಯಾಮನಿಗೂ ಇದ್ದ ಸ್ನೇಹಲತೆಯನ್ನು ಕಿತ್ತು ಒಗೆಯಲು ಹವಣಿಸುತ್ತಿದ್ದಳು. ಶ್ಯಾಮನ ತಾಯಿ ಸಾಮಾನ್ಯ ತಾಯಿಯರಿಗಿರುವ ಮನೋಭೂಮಿಕೆಯನ್ನೇ ಚಿತ್ರಿಸಿ ತೋರುತ್ತಾಳೆ. ಎಲ್ಲ ತಾಯಂದಿರೂ ತಮ್ಮ ಮಕ್ಕಳು ಒಳ್ಳೇ ಕುಲೀನರ ಗೆಳೆತನದಲ್ಲಿ ಸಹವಾಸದಲ್ಲಿರಬೇಕು—ಎಂದು ಬಯಸುತ್ತಾರೆ.

ಮೂರ್ತಿಯನ್ನು ಹುಡುಕಿ ನಿರಾಶನಾಗಿ ಶ್ಯಾಮ ಮನೆಗೆ ತಿರುಗಿ ಬಂದಾಗ, ಅವನ ತಾಯಿ ನಡೆದ ನಿಜಸಂಗತಿಯನ್ನು ಅರಹುತ್ತಾಳೆ." "ದುಷ್ಟ ಸಹವಾಸಾನ ದೂರ ಇಟ್ಟೀಕು ಕರಿಯಮ್ಮ! ಈ ದಿನ ಹುಡುಗ, ನಾಳೆ ಪ್ರಾಯಸ್ಥ. ಗಂಡಸನ್ನ ಮರುಳು ಮಾಡೋದೇ ಕಸಬಾಗಿರೊ ಆಕೇಗೆ ಇವನನ್ನು ಬುಟ್ಟಿಗೆ ಹಾಕಿಕೊಳ್ಳೋದು ದೊಡ್ಡದೆ?" ಎಂದು ಕರಿಯಮ್ಮನೊಡನೆ ಶ್ಯಾಮನ ತಾಯಿ ಮಾತನಾಡುತ್ತಿರುವುದನ್ನು, ಯಾವುದಕ್ಕೋ ಶ್ಯಾಮನ ಮನೆಗೆ ಬಂದ. ಮೂರ್ತಿ ಕೇಳಿ ಮೂರ್ಛೆ ಹೋಗಿ ಬೀಳುತ್ತಾನೆ. ಆಗಲೇ ಆತನಿಗೆ ಆತ್ಮಹತ್ಯೆಯ ವಿಚಾರ ಬಂದಿರಬೇಕು. ಮೂರ್ತಿಯ ಶವ ಸಿಕ್ಕಾಗ,ಎಲ್ಲರೂ ಅವನ ಗುಣಗಾನ ಮಾಡುತ್ತಾರೆ. ಮುರಳಿಯನ್ನು ತೆಗಳುತ್ತಾರೆ. ಕೆಳಗೆ ಹಾಕಿದ ತಲೆಯನ್ನು ಮೇಲೆತ್ತಲಿಲ್ಲ ಮುರಳಿ ಮುಂದೆ. ಆದರೆ ಮೂರ್ತಿ ಮಾತ್ರ—ಜಾರಿಣಿಯ ಮಗ ಹೀನಕುಲಾಧಮ ಎಂಬ ಕಲಂಕ ಕೇಳಿ, ಕೇಳಿ ಸಾವನ್ನಪ್ಪಿದ. ಮುಂದೆ ಎಂದೂ ಆ ಶಬ್ದ ಕಿವಿಗೆ ಬೀಳದಲ್ಲಿ ಹೊರಟು ಹೋದ. ಹೀಗೆ ಮುರಳಿ ಗೆದ್ದರೂ ಸೋತ. ಮೂರ್ತಿ ಅಳಿದರೂ ಕೀರ್ತಿ ಉಳಿಸಿಕೊಂಡ.

ಇಷ್ಟು ಪಾತ್ರಗಳು ಕಥೆಯಲ್ಲಿ ಸುಳಿದಾಡುತ್ತವೆ. ತನ್ಮತನ್ಮ ಪಾತ್ರವನ್ನು ಆಡುತ್ತವೆ. ಕತೆಗಾರ್ತಿಯರು ಪಾತ್ರ ಪರಿಪೋಷಣೆಯನ್ನು ಸುಂದರವಾಗಿ ಮಾಡಿದ್ದಾರೆ. ಮಾತುಗಳು ವ್ಯಕ್ತಿಗಳ ಅಂತರಂಗವನ್ನೇ ಬಿಚ್ಚಿ ತೋರುವಂತೆ ಸಹಜವಾಗಿ, ಮಾರ್ಮಿಕವಾಗಿ ಬರುತ್ತವೆ. ಆಟದಲ್ಲಿ ಮೂರ್ತಿಗೂ ಮುರಳಿಗೂ ನಡೆದ ಕಹಿ ಪ್ರಸಂಗವಲ್ಲಿ, ಮೂರ್ತಿಯ ನಡತೆ ಅವನ ಘನತೆಯನ್ನು ಎತ್ತಿ ತೋರಿಸುತ್ತದೆ. ಆದರ್ಶ ಆಟಗಾರ. ಆದರ್ಶ ವಿದ್ಯಾರ್ಥಿ. ಇಂದಿನ ವಿದ್ಯಾರ್ಥಿಗಳಿಗೆ ಮೂರ್ತಿ ಮಾದರಿ.

ಕಥೆಯಲ್ಲಿ ಕಥೆಗಾರ್ತಿಯರು ಸೂಕ್ಷ್ಮವಾಗಿ ಸಮಾಜದ ಟೀಕೆಯನ್ನು ಮಾಡಿದ್ದಾರೆ. ನೀತಿಮಾರ್ಗದಿಂದ ದೂರವಾದ ತಂದೆ-ತಾಯಿಗಳಿಂದ ಹುಟ್ಟಿದ ಮಗುವಿನ ಭವಿಷತ್ಯವೇನು? ಎಂಬುದನ್ನು ಚಿತ್ರಿಸಿದ್ದಾರೆ. ತಂದೆತಾಯಿಗಳ ಶೀಲವೇ ಮುಂದೆ ಮಗುವಿನ ಜೀವನ ಕುಸುಮಕ್ಕೆ ಮುಳುವಾಗುತ್ತದೆ, ಮುಳ್ಳಾಗುತ್ತದೆ. ಮುರಳಿಯ ಬಾಯಿಂದ ಕತೆಗಾರ್ತಿಯರು ಆಡಿಸಿದ ಕೆಲವು ಮಾತುಗಳು, ಕ್ರೂರ ಸಮಾಜವನ್ನೇ ಚಿತ್ರಿಸುತ್ತವೆ. "ಕುಲ ಒಳ್ಳೆದಾದರೆ ಗುಣ ಒಳ್ಳೆಯದಾಗುತ್ತೆ. ಹೀನ ಸುಳಿ ಜೋಳಿಸಿದರೆ ಹೋಗುತ್ತೆಯೇ?" "ಅವನ ತಂದೆ ಯಾರು ಅಂತ ಅವನ ತಾಯಿಗೂ ಗೊತ್ತಿಲ್ಲ. ಅವನ ತಾಯಿಸೂಳೆ ಕಣೊ!" "ಸೂಳೆಮಕ್ಕಳು. ಯಾವ ತಲೇಲಿ ಮೆರಿತವೆ? ಥೂ ನಾಚಿಗೆಗೆಟ್ಟ ಬಾಳೇ! ಮರ್ಯಾದೆಯಿಂದ ಕೂಲಿನಾಲಿ ಮಾಡಿ ಭಿಕ್ಷೆ ಬೇಡಿ ತಿಂದರೆ ಆಗೋದಿಲ್ವೆ?" "ಈ 'ಸೂಳೆಮಕ್ಕಳಿಗೆ ಪಾಠದ ಮೇಲೆ ನಿಗಾ ಇರುತ್ತೆಯೆ? ಗಿರಾಕಿಗಳ ಚಿಂತೇನೇ ಸದಾಕಾಲವು!" ಮುಂತಾದ ಮಾತುಗಳು ಮೂರ್ತಿಯ ಹೃದಯವನ್ನು ಪೂರ್ತಿಯಾಗಿ ಘಾಸಿಗೊಳಿಸಿದ್ದುವು.

ಕಥೆಯನ್ನು ಹೇಳುವ ತಂತ್ರ, ಕಥಾಸಂವಿಧಾನ ಚೆನ್ನಾಗಿದೆ. ಶೈಲಿ ಸರಳ ಸುಂದರವಾಗಿದೆ. ಭಾಷೆಯ ಓಟ ನಿರರ್ಗಳವಾಗಿದೆ.

ಸನ್ನಿವೇಶ ರಚನೆ ಕತೆಯ ಕೊನೆಯ ಭಾಗದಲ್ಲಿ ಸುಂದರವಾಗಿದೆ. ದುರಂತತೆ ಹೃದಯಸ್ಪರ್ಶಯಾಗಿ ಮೂಡಿ ಬಂದಿದೆ.

ಇನ್ನು ತಲೆಬರಹದ ಬಗ್ಗೆ ಹೇಳುವುದಾದರೆ "ಧೂಮಕೇತು" ಎಂಬ ಹೆಸರು ಉಚಿತವಾಗಿದೆ. ಆದರೆ ಇಷ್ಟೇ: ಕತೆಗಾರ್ತಿಯರು ಕೇವಲ ಮುರಳಿಯೇ ಮೂರ್ತಿಯು ಬಾಳಿನ ಧೂಮಕೇತುವಾಗಿ ಪರಿಣಮಿಸಿದ–ಎಂದು ಹೇಳಿದ್ದಾರೆ. ಆದರೆ ಅಪ್ರತ್ಯಕ್ಷವಾಗಿ ಕರಿಯಮ್ಮ, ಶ್ಯಾಮನ ತಾಯಿಯರು ಕೂಡ ಮೂರ್ತಿಯ ಮರಣಕ್ಕೆ ಕಾರಣರಾಗುತ್ತಾರೆ. ಇದನ್ನು ಒಳಗೊಳ್ಳುವಂತೆ ಬೇರೆ ನಿರ್ದಿಷ್ಟವಾದ ನಾಮಕರಣ ಮಾಡಿದ್ದರೆ ಚೆನ್ನಾಗಿತ್ತೇನೊ ? ಕತೆ ಚಿಕ್ಕದಾದರೂ ಜೊಕ್ಕವಾಗಿದೆ. ಉಮಾದೇವಿಯವರ ಈ ಕತೆ ಸ್ವಾಗತಾರ್ಹ, ಇಂಥ ಇನ್ನೂ ಹಲವಾರು ಕೃತಿಗಳು ಅವರಿಂದ ಕನ್ನಡಸಾಹಿತ್ಯಕ್ಕೆ ಮೊರೆಯಲಿ.

ಆಭರಣೇಶ್ವರಿ

(ಅನುವಾದಿತ ಕಥೆಯ ವಿಮರ್ಶೆ)

ಶ್ರೀ. ನೂ. ರಾಮಚಂದ್ರ ಬಿ. ಎ. ಧಾರವಾಡ

'ಜಯಂತಿ' ಯಲ್ಲಿ ಪ್ರಕಟವಾಗುತ್ತಿರುವ ಅನುವಾದಿತ ಕಥೆಗಳನ್ನೋದಿ, ಅವುಗಳ ಮೂಲದ ಸವಿಯನ್ನು ಅನುಭವಿಸಲು ಯತ್ನಿಸುವವರಲ್ಲಿ ನಾನೂ ಒಬ್ಬನೆಂದು ಮೊದಲಲ್ಲೇ ಹೇಳಿಬಿಡುತ್ತೇನೆ. ಆಂಗ್ಲ ಸಾಹಿತ್ಯದ ಸಂಪರ್ಕದ ಫಲದಿಂದ ಭಾರತ ದೇಶದಲ್ಲಿ ಮೊಟ್ಟಮೊದಲು ಸಣ್ಣಕತೆಗಳ ಕುಡಿಯೊಡೆದುದು ಬಂಗದೇಶದಲ್ಲಿ. ಸಣ್ಣಕತೆಯು ಸಾಹಿತ್ಯಪ್ರಕಾರಗಳಲ್ಲಿ ಪ್ರಾಧಾನ್ಯವನ್ನು ಪಡೆದು ಎಷ್ಟೋ ಕಾಲಗಳು ಸಂದುಹೋಗಿವೆ. ಈ ಅವಧಿಯಲ್ಲಿ ಬಂಗಾಳದ ಕಥಾಕ್ಷೇತ್ರವು ಬಹಳಷ್ಟು ವಿಸ್ತರಿಸಿರಬಹುದು, ಫಲಪ್ರದವಾಗಿರಬಹುದು, ವೈವಿಧ್ಯಪೂರ್ಣವಾಗಿರಬಹುದೆಂದು ನಂಬಬಹುದು. ತಾಕೂರರಂತಹವರ ಸ್ಪರ್ಶದಿಂದ ಹೊನ್ನಾದ ಬಂಗಾಳದ ಮಣ್ಣಿನಲ್ಲೇ ಹುಟ್ಟಿದ ಇನ್ನೊಬ್ಬ ಸಾಹಿತಿಯು ಕತೆ—'ಆಭರಣೇಶ್ವರಿ' ಎಂದಾಗ, ಓದುಗನು ಹೊಸತನ್ನು ಬಯಸುವುದು ಸಹಜವೇ.

ಕಥೆಯಾದರೋ ಪೌರಾಣಿಕ; ವ್ಯಾಸಕೃತ ಮಹಾಭಾರತಕ್ಕೆ ಸಂಬಂಧಿಸಿದುದು. ಮಹರ್ಷಿ ಅಗಸ್ತ್ಯ, ಅವನ ಸತೀಮಣಿ ಲೋಪಾಮುದ್ರೆ ಇವರ ದಾಂಪತ್ಯದ ಪ್ರಥಮಪರಿಚ್ಛೇದವನ್ನು ಬಿಡಿಸಿ ತೋರುವುದೇ ಈ ಕತೆಯ ಗುರಿ. ಎಂದೆಂದಿಗೂ ರತ್ನಾಭರಣಗಳಿಂದಲೇ ಅಲಂಕೃತೆಯಾಗಿರಬಯಸಿದ್ದ ಲೋಪಾಮುದ್ರೆ, ವಲ್ಕಲಧಾರಿಣಿಯಾಗಿ, ನಿರ್ಧನನಾದ ಅಗಸ್ತ್ಯನ ಹೃದಯದ ಶ್ರೀಮಂತಿಕೆಯನ್ನು ಗುರುತಿಸಿಕೊಂಡಾಗ, ಕಥೆಯು ಕೊನೆಗೊಳ್ಳುತ್ತದೆ; ಅವರ ದಾಂಪತ್ಯವು ಚಿರನೂತನವಾಗುತ್ತದೆ.

ಈ ಕತೆಯನ್ನು ನಾಲ್ಕು ಘಟ್ಟಗಳಾಗಿ ವಿಂಗಡಿಸಿಕೊಳ್ಳಬಹುದು. ವಿದರ್ಭರಾಜನ ನಯನರಮ್ಯ ನಿಕೇತನವೊಂದರಲ್ಲಿ ನರ್ತಿಸುತ್ತಿದ್ದ ರಾಜಪುತ್ರಿ ಲೋಪಾಮುದ್ರೆ, ತರುಣ ತಪಸ್ವಿ ಅಗಸ್ತ್ಯನ ಅಗಮನದ ವಾರ್ತೆಯನ್ನು ಕೇಳಿ, ಅವನನ್ನು ಮರೆಯಿಂದ ನೋಡಿ, ಮೂರುಪೋಗಿ ಚಿತ್ತಚಾಂಚಲ್ಯಕ್ಕೆ ಜೆಡೆಗೊಡುವುದು ಮೊದಲ ಘಟ್ಟ. ರಾಜದ್ವಾರದ ಬಳಿಯಲ್ಲಿ ನಿಂತಿರುವ ಅಗಸ್ತ್ಯನಿಗೆ ಬೇಕಾದುದು ರತ್ನಾಭರಣಗಳಲ್ಲ, ವಿದರ್ಭರಾಜ–ರಾಜ್ಞಿಯರ ಜೀವನ ಸರ್ವಸ್ವ—ಎಂಬುದನ್ನು ಮಾತಾ ಪಿತರ ಮಾತಿನಿಂದ ಊಹಿಸಿದ ಲೋಪಾ, ಪ್ರತ್ಯಕ್ಷವಾಗಿ ತನ್ನನ್ನು ನಿರ್ಧನಋಷಿಯ ಜೀವನಸಂಗಾತಿಯಾಗಗೊಡಿರೆನ್ನುವಲ್ಲಿಗೆ ಎರಡನೆಯ ಘಟ್ಟನ ಮುಗಿತಾಯ. ಋಷಿಸಮ್ಮುಖದಲ್ಲಿ ಆತನ ಇಚ್ಛೆಯ ಅನುಸಾರವಾಗಿ, ತನ್ನಿಚ್ಛೆಯ ವಿರುದ್ಧವಾಗಿ ಲೋಪಾಮುದ್ರೆಯು ರತ್ನಾಭರಣಗಳನ್ನು ಕಿತ್ತೊಗೆಯುವಲ್ಲಿಗೆ ಮೂರನೆಯ ಘಟ್ಟವು ಕೊನೆಗೊಳ್ಳುತ್ತದೆ. ಲೋಪಾಳ ಆಭರಣವ್ಯಾಮೋಹವನ್ನು ಪಡೆಗಟ್ಟಲಾರದೆ, ಅಗಸ್ತ್ಯನು ಕಷ್ಟದಿಂದ ಆಭರಣಗಳನ್ನು ಸಂಪಾದಿಸಿ, ಆಕೆಯನ್ನು ಪ್ರಣಯಕೇಳಿಗೆ ಆಹ್ವಾನಿಸುವಲ್ಲಿ ಮೂರನೆಯ ಘಟ್ಟದ ಅಂತ್ಯ ನಾಲ್ಕನೆಯ ಘಟ್ಟದ ಆರಂಭ. ಮೊದಲಿನ ಮೂರು ಘಟ್ಟಗಳು ಲೋಪಾಮುದ್ರೆಯು ಕಾಣುತ್ತಿರುವ ಒಂದು ಮಧುರಸ್ವಪ್ನವಾದರೆ, ಮೂರನೆಯ ಘಟ್ಟದ ಅಂತ್ಯದಲ್ಲಿ ಸ್ವಪ್ನಭಂಗವಾಗುತ್ತದೆ. ಆದರೆ ನಾಲ್ಕನೆಯ ಹಂತವನ್ನು ತಲುಪಿದಾಗ, ತಂದ್ರಾವಸ್ಥೆಯನ್ನು ಕಳೆದು, ಜೀವನಪ್ರಭಾತದ ಹೊಂಗಿರಣಗಳನ್ನು ಕಂಡುಕೊಂಡ ಲೋಪಾಮುದ್ರೆಯನ್ನು ಕಾಣುತ್ತೇವೆ.

'ವಿವಾಹವು ನೆರವೇರುವುದು ಪರಲೋಕದಲ್ಲಿ' ಎಂಬ ಒಂದು ಮಾತಿದೆ ನಿಜವಾಗಿಯೂ ಪತಿಪತ್ನಿಯರ ಆಯ್ಕೆಯು ಲೌಕಿಕವಾದ ಪಾಣಿಗ್ರಹಣಕ್ಕೆ ಮುನ್ನವೇ ನಡೆದಿರುತ್ತದೆ—ಎಂಬುದೇ ಈ ಮಾತಿನ ತಾತ್ಪರ್ಯ. ಈ ಮಾತಿನ ಸತ್ಯತೆಯನ್ನು ಅಗಸ್ತ್ಯ-ಲೋಪಾಮುದ್ರೆಯರ ಉದಹರಣದಿಂದ ಮನಗಾಣಬಹುದು. ಅಗಸ್ತ್ಯನಾದರೋ ಅರಣ್ಯವಾಸಿಯಾದ ಋಷಿ, ನಿರ್ಧನ, ಜೀರ್ಣವಸನಧಾರಿ. ಆದರೆ ಆ ಲೋಪಾಮುದ್ರೆ, ಅವಳ ಹೆತ್ತವರ ಕಣ್ಮಿಂಬೆ; ಸ್ವರ್ಣಸಾಲಭಂಜಿಕೆ! ಇವರೊಳಗೆ ದಾಂಪತ್ಯಜೇರ್ಪಟ್ಟಿದುದು ಪೂರ್ವಸಿದ್ಧತೆಯಿಂದಲೇ ಅಲ್ಲವೇ ? ಲೋಪಾಮುದ್ರೆಯ ಜನನವಾದುದೇ ಅಗಸ್ತ್ಯನ ಕೈವಿಡಿಯುವುದಕ್ಕಾಗಿ. ಅದನ್ನು ಪಡೆಯುವ ಅಧಿಕಾರವು ಯಾರಿಗಿದೆ ?

ಕಾಮವು ಪ್ರೇಮವಾಗಿ ಪರಿವರ್ತನೆಗೊಂಡಾಗಲೇ ಮಧುರ ದಾಂಪತ್ಯಸಿದ್ಧಿ. ಪತಿಪತಿಯರು ಒಬ್ಬರನ್ನೊಬ್ಬರು ಅರಿತುಕೊಂಡು ಬಾಳುವುದೇ ದಾಂಪತ್ಯದ ಗುಟ್ಟು. ಬಾಹ್ಯಾಕರ್ಷಣೆಗೆ ಒಳಗಾಗಿ ಕ್ಷಣಮಾತ್ರದಲ್ಲಿ ಮನಸ್ಸನ್ನು ಪರಸ್ಪರರಿಗೆ ತೆತ್ತು ಬಿಡುವುದು ಸ್ತ್ರೀಗಾಗಲಿ, ಪುರುಷನಿಗಾಗಲಿ ಶಾಶ್ವತಸುಖವನ್ನುಂಟು ಮಾಡುವುದಿಲ್ಲ. ಈ ಬಾಹ್ಯಾಕರ್ಷಣೆಯು ಹೃದಯಕ್ಕೆ ನಾಟಿ, ಪ್ರೇಮಪೂರ್ಣವಾಗಬೇಕಿದ್ದರೆ, ಪ್ರೇಮಿಗಳು ಹಲವಾರು ಸಂಕಷ್ಟಗಳ ಕುಲುಮೆಯಲ್ಲಿ ಕಾಯಬೇಕು. ಪ್ರಣಯಜ್ವಾಲೆಯು ತನ್ನ ಪ್ರಖರತೆಯನ್ನು ಕಳೆದುಕೊಂಡಾಗಲೇ ಆತ್ಮಪ್ರಣತಿಗೆ ಪ್ರಶಾಂತದೀಪ್ತಿಯೊದಗುವುದು. ಲೋಪಾಮುದ್ರೆ ಆಭರಣವಸನವನ್ನು ಕಾಮಿಸಿದ್ದವಳು; ಅದರೊಡನೆ ಅಗಸ್ತ್ಯನಿಗೂ ಮಾರು ಹೋದಳು. ಋಷಿಪತ್ನಿಯಾದರೂ ಸರ್ವಾಲಂಕಾರಭೂಷಿತೆಯಾಗಿರ

ಬೇಕೆಂಬುದೇ ಆಕೆಯ ಹೆಬ್ಬಯಕೆ. ಕತೆಯ ಮೂರನೆಯ ಘಟ್ಟದ ಪರ್ಯಂತ ನಾವು ಅವಳಲ್ಲಿ ಋಷಿಪತ್ನಿಯ ಗುಣಗಳನ್ನು ಕಾಣಲಾರೆವು. ಆದರೆ, ಆಭರಣಗಳ ಝಣತ್ಕಾರವೇ ಪ್ರೇಮಗಾನಕ್ಕೆ ಹಿಮ್ಮೇಳವಾಗಬೇಕಿಲ್ಲ, ವಲ್ಕಲವನ್ನು ಧರಿಸಿದಾಗಲೂ ಹೃದಯವು ಪ್ರೇಮಪೂರ್ಣವಾಗಿರಬಲ್ಲದು, ಹೃದಯದ ಶ್ರೀಮಂತಿಕೆಯೇ ಶಾಶ್ವತ ಎಂಬುದನ್ನು ಯಾವಾಗ ಲೋಪಾಮುದ್ರೆಯು ಗುರುತಿಸಿಕೊಳ್ಳುವಳೋ, ಆಗಲೇ ಅವಳಲ್ಲಿ ಋಷಿಪತ್ನಿಯ ಲಕ್ಷಣಗಳು ಮೂಡ ಲಾರಂಭಿಸುತ್ತವೆ.

ಇನ್ನೊಂದು ಸಂಗತಿ!—ಋಷಿ ಅಗಸ್ತ್ಯನು ರಾಜದ್ವಾರದಲ್ಲಿ ಬಂದು ನಿಂತಿದ್ದಾನೆ ಎಂಬುದನ್ನು ಕೇಳಿದಾಗ, ಲೋಪಾಳ ಮನಃಪಟಲದಲ್ಲಿ ಮೊತ್ತಮೊದಲು ಬಿಂಬಿತವಾಗುವುದು ಐಶ್ವರ್ಯಾಕಾಂಕ್ಷಿಯೊಬ್ಬನ ಚಿತ್ರ. ಲೋಪಾಮುದ್ರೆ ಸ್ವತಃ ಆಭರಣೇಶ್ವರಿಯಾಗಿರುತ್ತ ಅವನನ್ನು ಆ ರೀತಿ ಕಲ್ಪಿಸಿಕೊಳ್ಳುವಲ್ಲಿ, ಅವಳ ಮನೋಭಾವದ ಒಂದಂಶವನ್ನು ಕಾಣಬಹುದು. ಆದರೆ ನಿಜದಲ್ಲಿ ಲೋಪಾಮುದ್ರೆಯೇ ಒಂದು 'ರತ್ನಶಿಲೆ'. ಅವಳಲ್ಲಿ ನೆಲೆಗೊಂಡಿದ್ದ ಚಪಲತೆಯು ದೂರವಾಗಿ ಸ್ಥಿರಬುದ್ಧಿಯು ಪ್ರಾಪ್ತವಾಗಬೇಕಿದ್ದರೆ ಕೆಲವು ಕಾಲಗಳೇ ಬೇಕಾದುವು! ಇಲ್ಲಿ ಚಿತ್ರಿತವಾದಷ್ಟು ಮಟ್ಟಿಗೆ, ಅಗಸ್ತ್ಯನ ಪಾತ್ರವು ಗಂಭೀರವಾಗಿಯೇ ಇದೆ.

ಅನುವಾದದ ಕುರಿತು ನಾಲ್ಕು ಮಾತುಗಳನ್ನು ಬರೆಯಬಹುದು. ಡಿ.ವಿ.ಜಿ. ಯವರೆಂದಂತೆ 'ಅನುವಾದ ಕಾರ್ಯವು ಪರಕಾಯ ಪ್ರವೇಶ ಮಾಡಿಸುವಷ್ಟು ಕಷ್ಟ' ಎಂಬುದನ್ನು ಒಪ್ಪಲೇಬೇಕಾಗಿದೆ. ಅನುವಾದವೆಂದರೆ ಕೇವಲ ಭಾಷೆಯನ್ನು ಅಂತರಗೊಳಿಸುವುದಲ್ಲ; ಒಂದು ಭಾಷೆಯಲ್ಲಿರುವ ಭಾವವನ್ನು ಇನ್ನೊಂದು ಭಾಷೆಯಲ್ಲಿ ತುಂಬುವುದು. ಶ್ರೀ. ಮುದೇನೂರರು ಕೈಕೊಂಡ ಅನುವಾದಕಾರ್ಯವು ಪ್ರಾಮಾಣಿಕವಾದೊಂದು ಪ್ರಯತ್ನವೆನ್ನಬಹುದಾದರೂ, ಕೆಲವೆಡೆ ಕೆಲವೊಂದು ಲೋಪದೋಷಗಳು ಎದ್ದು ಕಾಣುವಂತಿವೆ. ಹಿಂದಿ ಹಾಗೂ ಬಂಗಾಳಿ ಲೇಖಕರಲ್ಲಿ ಹಲವರಲ್ಲಿ ಸಂಸ್ಕೃತದ ಪ್ರಭಾವವು ಅತ್ಯಧಿಕವಾಗಿರುತ್ತದೆ. ಅಂತಹವರ ಕತೆಗಳನ್ನು ಅನುವಾದಿಸುವಾಗ, ಮೂಲದಲ್ಲಿ ಬಂದಿರುವ ಸಂಸ್ಕೃತ ಪದಗಳು (ಅಂತಹ ಪದಗಳು ಅನುವಾದಿಸಲ್ಪಡುವ ಭಾಷೆಯಲ್ಲಿ ಉಪಯೋಗದಲ್ಲಿವೆಯಾದರೂ) ಪುನರಾವೃತ್ತಿಯಿಂದ ಅರ್ಥವು ಕ್ಲಿಷ್ಟವಾಗದಂತೆಯೂ, ಶೈಲಿಯಲ್ಲಿ ಕೃತ್ರಿಮತೆಯು ತಲೆದೋರದಂತೆಯೂ ಅನುವಾದಕನು ಎಚ್ಚರದಿಂದಿರಬೇಕು. ಮೂಲದಲ್ಲಿರುವ ಸಂಸ್ಕೃತ ಪದಗಳನ್ನೇ, ಅನುವಾದದಲ್ಲೂ 'ಮಕ್ಕ ಮಕ್ಕಿ'ಯಾಗಿ ಬಳಸಿಕೊಂಡರೆ, ಅನುವಾದ ಕಾರ್ಯವು ಸುಲಭವಾಗುವುದೆಂಬ ಭ್ರಾಂತಿ ಅನುವಾದಕನಲ್ಲಿರಬಾರದು. ಪ್ರಸ್ತುತದ ಕತೆಯಲ್ಲಿ (ಅನಾವಶ್ಯಕವಾಗಿ) ಬಂದಿರುವ ಸಂಸ್ಕೃತಪದಗಳ ಬದಲಾಗಿ, ಕನ್ನಡ ಪದಗಳನ್ನೇ ಬಳಸಿಕೊಂಡಿರುತ್ತಿದ್ದರೆ, ಕತೆಯು ಹೆಚ್ಚು ಸುಂದರವಾಗಿರುತ್ತಿತ್ತೇನೋ!

ಅನುವಾದಿತ ಕೃತಿಯೊಂದನ್ನು ವಿಮರ್ಶಿಸುವುದೆಂದರೆ, ಮೂಲ ಕೃತಿಯನ್ನೇ ಪರೋಕ್ಷವಾಗಿ ವಿಮರ್ಶಿಸುವುದು. ಆದರೆ ಅನುವಾದದಲ್ಲೇನಾದರೂ ಲೋಪಕ್ಕೆಡೆಯಿದ್ದರೆ ಅದು ಮೂಲದಲ್ಲೂ ಇರಬೇಕೆಂದಿಲ್ಲ. ಅದಕ್ಕೆ ಕಾರಣವು ಅನುವಾದಕನ ಪರಿಮಿತಿಯಾಗಿರಬಹುದು. ಇನ್ನೂ ಮುಂದುವರಿದು ಎನ್ನುವುದಾದರೆ ಪ್ರಾಯಃ ಮೂಲ ಕೃತಿಯಲ್ಲೂ ಕೆಲವು ದೋಷಗಳಿರಬಹುದು. ಆಂತಾದರೆ ಅನುವಾದದಲ್ಲಾಗಿರುವ ದೋಷಗಳು ಕ್ಷಮ್ಯ!

"ಪರಭಾಷೆಯ ಸಾಹಿತ್ಯದಿಂದ ಅನುವಾದಿಸುವುದಕ್ಕಿಂತಲೂ ಮೂಲ ಸಂಸ್ಕೃತ ಭಾಷೆಯನ್ನೇ ಆಧಾರವಾಗಿಟ್ಟುಕೊಂಡು ಗ್ರಂಥತತ್ತ್ವಗಳಿಗೆ ಬಾಧೆಬಾರದಂತೆ ನಿರೂಪಣೆ ಮಾಡುವುದು ಆರ್ಯ ಸಂಸ್ಕೃತಿಯ ಪೋಷಣೆಗೆ ಸಹಾಯಕವಾಗುವುದು." (ಜಯಂತಿ ಅಗಸ್ಟ್ ಸಂಚಿಕೆ, ಪುಟ ೬೦) ವ್ಯಾಸ ಪ್ರಣೀತ ಮಹಾಭಾರತವು ವಿಶಾಲವಾದೊಂದು ವಟವೃಕ್ಷ, ಅದರ ಕಾಂಡ, ಕೊಂಬೆ, ಎಲೆ, ಚಿಗುರು—ಇವೆಲ್ಲವುಗಳ ಸುತ್ತಲೂ ಸುಂದರವಾದ ಕತೆಗಳನ್ನು ಹೆಣೆಯಬಹುದು. ಆಂತಹದೊಂದು ಪ್ರಯತ್ನವನ್ನು 'ಆಭರಣೇಶ್ವರಿ' ಯಲ್ಲಿ ಕಾಣುತ್ತೇವೆ.

೨೩ನೆಯ ವರ್ಷದಲ್ಲಿ

ಜಯಂತಿಗೆ ಚಂದಾದಾರರ ಬಳಗ ಬೆಳೆಯಲಿ!

ಜಯಂತಿಯನ್ನು ಪೋಷಿಸಿದರೆ

ಅದು ಜನರ ಹೃದಯ-ಮನಗಳನ್ನು ತೋಷಿಸುವುದು.

"ಶ್ರೀ ರಾಮಾಶ್ವಮೇಧದ ರಸತರಂಗಗಳು" *

(ಪುಸ್ತಕಾವಲೋಕನ)

ಶ್ರೀ ಚಂದ್ರಶೇಖರ ಕಂಬಾರ, ಬಿ. ಎ. (ಆನರ್ಸ್), ಧಾರವಾಡ

ಕನ್ನಡದಲ್ಲಿ ಒಳ್ಳೆಯ ವಿಮರ್ಶೆ ಬೆಳೆದು ಬರಬೇಕಾಗಿದೆಯೆಂಬ ಕೋರಿಕೆ ಹಿರಿದಾಗುತ್ತಿರುವಂತೆ, ಅದರ ಕೊರತೆಯೂ ಹಿರಿದಾಗುತ್ತಿದೆ. ಪಾಶ್ಚಾತ್ಯರಲ್ಲಿಯಾದರೋ ಒಬ್ಬೊಬ್ಬ ಪುಡಿಕವಿಯ ಬಗೆಗೂ ಅಭ್ಯುತ ಶೋಧನೆ—ವಿಶ್ಲೇಷಣೆಗಳು ನಡೆದು, ಆ ಕವಿಯ ವ್ಯಕ್ತಿತ್ವ ಅಂತರಂಗಗಳನ್ನು ಪ್ರದರ್ಶಿಸಿದ್ದುಂಟು; ಕವಿಯ ಎದೆಯ ಸೌಂದರ್ಯಕ್ಕೆ ಮುಸ್ಸುಡಿ ಬರೆದುದುಂಟು. ನಮ್ಮಲ್ಲಿ ಇಲ್ಲವೆಂದಲ್ಲ; ಇವೆ. ಆದರೆ ಅಲ್ಪ. ಇದ್ದ ಅಲ್ಪದರಲ್ಲಿ ಅರ್ಧಸೇರು ಮತೀಯ ಅಭಿಮಾನ—ಇನ್ನರ್ಧ ಸೇರು ಮೆಚ್ಚುಗೆ, ನಿಜವಾಗಿಯೂ ಸಹೃದಯತೆಯಿಂದೋದಿ ದೇವರಾಣೆಗೂ ರಸಾನುಭೂತಿ ಪಡೆದು ಬರೆವ ಪ್ರಾಮಾಣಿಕ ವಿಮರ್ಶೆ ಇನ್ನೂ ಅಲ್ಪ. ಆ ಅಲ್ಪದರಲ್ಲಿ ಶ್ರೀ. ಏರ್ಯ ಲಕ್ಷ್ಮೀ ನಾರಾಯಣ ಅಳ್ವರ 'ಶ್ರೀ ರಾಮಾಶ್ವಮೇಧದ ರಸತರಂಗಗಳು' ಎಂಬುದನ್ನು ಸೇರಿಸಬೇಕು.

ಮುದ್ದಣ ಎಂದಿನವ? ಎಷ್ಟರವ?—ಎಂಬುದರ ಚಾರಿತ್ರಿಕ ಹೊರಗೆರೆ ನಮಗೆ ಗೊತ್ತಾದರೂ, ಮುದ್ದಣ ಮುಳುಗಿದ ನೀರಿನ ಆಳ ನಮ್ಮಲ್ಲಿ ಎಷ್ಟು ಜನರಿಗೆ ಗೊತ್ತು? ಆತನ 'ರಾಮಾಶ್ವಮೇಧ'ದ ಒಡೆದು ಕಾಣುವ ದಿನ್ನೆಗಳೇ ಹೊರತು ತಗ್ಗಿನಲ್ಲಿರುವ ಸೌಂದರ್ಯ ಎಷ್ಟು ಜನರಿಗೆ ಕಂಡಿದೆ? ಅದರ ಸಮರ್ಪಕ ನಿರೂಪಣೆಯೇ ಈ ಪುಸ್ತಕದ ಉದ್ದಕ್ಕೂ ಹಿಡಿದುಬಂದ ಸ್ಥಾಯಿ; ಸಂಚಾರಿಯಾಗಿ ವಿಮರ್ಶೆ ಬಂದಿದೆಯಷ್ಟೆ.

ಇದರಲ್ಲಿ ನಾಲ್ಕು ಭಾಗಗಳಿದ್ದು, ಮೊದಲ ಮೂರರಲ್ಲಿ ಕಾವ್ಯದ ವಿಚಾರವಿದ್ದರೆ ಕೊನೆಯದರಲ್ಲಿ ಕವಿ-ಕಾವ್ಯದ ಮಾನಸಿಕ ಹಿನ್ನೆಲೆಯಿಂದ 'ರಸಿಕ ಮುದ್ದಣ, ಮುಗುದೆ ಮನೋರಮೆ' ಈ ಪುಸ್ತಕದ ಮೊದಲ ಆಕರ್ಷಣೆ. ಪ್ರವೇಶಕ್ಕೆ ಮುನ್ನ ಕಾಣುವ ಮನೆಯ ಕೈತೋಟದ ಹಾಗೆ ರಾಮಾಶ್ವಮೇಧದ ಅಲ್ಲಲ್ಲಿ ಬರುವ ಮುದ್ದಣದಂಪತಿಗಳ ರಸಬಿಂದುಗಳನ್ನೆಲ್ಲ ಸುಂದರವಾದೊಂದು ಪಾತ್ರೆಯಲ್ಲಿ ಸಂಗ್ರಹಿಸಿದ್ದಾರೆ. ಸಂನಿವೇಶ ಮುದ್ದಣನದಾದರೂ ಅದರೆದುರು ತನ್ನ ಸೂಕ್ಷ್ಮದರ್ಶಕ ಯಂತ್ರವನ್ನು ಹಿಡಿದು ಸ್ವಸ್ಥವಾಗಿಸಿದ್ದಾರೆ. ಅದನ್ನೋದುವಾಗ ಸ್ವತಂತ್ರವಾದೊಂದು ಕತೆಯನ್ನೋದುವಂತೆ ಎನಿಸುವಷ್ಟು ಓದುಗರನ್ನು ಸೆರೆ ಹಿಡಿಯುತ್ತಾರೆ.

ಎರಡನೆಯದಾ "ಮೂರು ಪಾತ್ರಗಳು" ಎಂಬುದನ್ನು "ಮುದ್ದಣನ ರಾಮಾಶ್ವಮೇಧ" ವು ಘಟನಾ ಪ್ರಧಾನ ಕಾವ್ಯ—ಅಲ್ಲಿ ಪಾತ್ರಗಳ ಬೆಳವಣಿಗೆಗೆ ಅವಕಾಶ ಕಡಮೆ" ಎಂದು ಪ್ರಾರಂಭಿಸಿ, ತಮ್ಮ ಪ್ರಾಮಾಣಿಕವಾದ ಅಭಿಪ್ರಾಯವನ್ನು ಬಿಚ್ಚಿ ಹೇಳಿ—ಆ ಮೇಲೆ ಪಾತ್ರ ನಿಶ್ಲೇಷಣೆಗೆ ತೊಡಗುತ್ತಾರೆ. ರಾಮನನ್ನು ಒಡೆದು ಸೀತಾರಾಮ—ರಾಜಾರಾಮ-ಎಂದು ದ್ವಿಭಾಗಿಸಿ, ಅವೆರಡರ ನಡುವಿನ ಅತನ ಹೋರಾಟವನ್ನು ಎಳೆಯೆಳೆಯಾಗಿ ಬಿಡಿಸುತ್ತಾರೆ. ಸೀತೆಯ ಸ್ಥೂಲ ಸೂಕ್ಷ್ಮಗಳ ದರ್ಶನ ಮಾಡಿಸಿ ಲಕ್ಷ್ಮಣನ ಮುಂದಿನ ಪರದೆ ಸರಿಸುತ್ತಾರೆ. ಹೀಗೆ ಮಾಡುವಾಗ, ಮುದ್ದಣನ ಈ ವರೆಗಿನ ವಿಮರ್ಶಕರ ಕೆಲ ಸರಿಬಾರದ ಮಾತುಗಳನ್ನು ತೂಗಿ—ಒರೆಗೆ ಹಚ್ಚಿ, ತಮಗೆ ಸರಿಕಂಡ ನಿರ್ಣಯ ನುಡಿ ಕಾರಣಗಳಿಂದ ಸಮರ್ಥಿಸುತ್ತಾರೆ

ಮೂರನೆಯದಾದ ಶೈಲಿಯಲ್ಲಿ ಮುದ್ದಣನ ಚೇಬಿನಲ್ಲಿ ಸಿಗುವ ಲಕ್ಷ್ಮೀಶನ ಸಾಮ್ಯಗಳನ್ನು ಗುರುತಿಸಿ, ಮುದ್ದಣನು ಅವುಗಳ ಮೇಲೆ ತನ್ನ ಮುದ್ರೆ ಹಾಕಿದ ಬಗೆಯನ್ನು ತೋರಿಸುತ್ತಾರೆ.

ಪುಸ್ತಕದ ಪುಟದ ತುಂಬೆಲ್ಲ ಒಂದು ಪಕ್ವ ಸಂಸ್ಕಾರಗೊಂಡ ಮನಸ್ಸಿನ ಸಹೃದಯತೆಯ ಅಭಿವ್ಯಕ್ತಿಯನ್ನು ಕಾಣಬಹುದು ರಸದ ಒಂದೊಂದು ಸೂಕ್ಷ್ಮಬಿಂದುವನ್ನೂ ಬಿಡದೆ ಚಪ್ಪರಿಸಿದ ಸವಿಯನ್ನು ಓದುಗರಿಗೆ ಉಣಬಡಿಸುತ್ತಾರೆ. ಹೀಗೆ ಮಾಡುವಾಗ ಒಮ್ಮೊಮ್ಮೆ ಅತಿಶಯೋಕ್ತಿಯಲ್ಲಿ ಮಾತನಾಡಿದ್ದು ಉಂಟು. ವಿಮರ್ಶೆ ಹಿಂದುಳಿದು ಅಭಿಮಾನ ಮುಂದೆ ಬಂದದ್ದೂ ಉಂಟು. ಅಲ್ಲಲ್ಲಿ ಅದೇ ಕಾಲಕ್ಕೆ ತಾವು ಮುದ್ದಣನ ಶೈಲಿಯ ಬಗೆಗೆ ಬರೆಯುತ್ತ 'ಅಭ್ಯಾಸಿಯ ಪ್ರಾಯೋಗಿಕ ಶೈಲಿ' ಎಂಬುದನ್ನು ರಾಮಾಶ್ವಮೇಧದ ಮೂಲಬೇರನ್ನೂ ಅದು ಪಡೆದ ಸಹಾಯವನ್ನೂ ನಿರ್ಮಲ ಮನಸ್ಸಿನಿಂದ ನಿರೂಪಿಸಿದ್ದನ್ನು ನೆನೆಯಬೇಕು. ಆತನ ಶೈಲಿಯ ವಿಶ್ಲೇಷಣೆಯಲ್ಲಿ ಕಂಡು ಬರುವ ತಾಳ್ಮೆ-ತೂಕಗಳು ಮೆಚ್ಚಲರ್ಹವಾಗಿವೆ. ಇಷ್ಟಾಗಿಯೂ ಆತ 'ಮಹಾಕವಿ' ಎನ್ನದೆ, ವರಕವಿ ಎಂದುದರಲ್ಲಿನ ಅವರ ಔಚಿತ್ಯ ಪ್ರಜ್ಞೆ ನಿಜವಾಗಿಯೂ ಮೆಚ್ಚುವಂಥದು.

ಈ ಪುಸ್ತಕದ ಶೈಲಿಯ ಬಗೆಗೊಂದು ಮಾತು. ಒಟ್ಟು ಕತೆಯೊಂದನ್ನು ಯಾರ ಬಾಯಿಂದಲೋ ಕೇಳಿ, ಅದನ್ನು ಸರಸವಾಗಿ ತನ್ನದೇ ಎನ್ನುವಂತೆ ಭ್ರಾಂತಿ ಹುಟ್ಟಿಸುವ ಕಲೆಗಾರನೊಬ್ಬನ ಸ್ವಸ್ಥತಿಭೆಯನ್ನು ನಾವಿಲ್ಲಿ ಕಾಣಬಹುದು. ಇದನ್ನೋದುತ್ತ ಹೋದಹಾಗೆ ಸ್ವತಂತ್ರವಾದೊಂದು ಕಾದಂಬರಿಯನ್ನೋದಿದಂತಾಗುತ್ತದೆ. ಪುಡಿ ವಾಕ್ಯಗಳು—ಅಲ್ಲಲ್ಲಿ ಕವಿಯ ಶಬ್ದಗಳ ಬಳಕೆ—, ಜೊತೆಗೆ ಸಮರ್ಪಕವಾದ ಉಪಮೆ ಚಿತ್ರಗಳ ಮಾಲೆ—ಇಷ್ಟಾಗಿಯೂ ಅಲ್ಲಲ್ಲಿ ಗದ್ಯನ ಆಕರ್ಷಕ ಅಭಿನಯ—ಹೀಗೆ ಇವರ ಗದ್ಯವು ಸಬಲವಾದುದೆಂದು ಒಪ್ಪಬೇಕು. ಇದು ಲೇಖಕರ ಪ್ರಥಮ ಕೃತಿಯಾದರೂ ಸಿದ್ಧಿ. ಸಮೀಕ್ಷೆಯ ಒಂದು ಆಕರ್ಷಕ ಗುಣವನ್ನು ಇಲ್ಲಿ ಕಾಣುತ್ತೇವೆ.

ಲೇಖಕರು ತಮ್ಮ ನುಡಿಯಲ್ಲಿ "ಇದನ್ನು ಕಂಡು ರಾಮಾಶ್ವಮೇಧವನ್ನು ಕೂಲಂಕಷವಾಗಿ ಓದುವ ಕುತೂಹಲವಾದರೂ ನಿಮ್ಮಲ್ಲಿ ಕೆರಳಲಿ; ಸಾಕು." ಎಂದು ಓದುಗರನ್ನು ಕುರಿತು ಹೇಳಿದ್ದಾರೆ. ಅವರ ಈ ಆಭೀಪ್ಸೆ ಅಪೇಕ್ಷಿಸಿದುದಕ್ಕಿಂತಲೂ ಹೆಚ್ಚಾಗಿ ನೆರವೇರಬಹುದೆಂದೇ ನಮ್ಮ ನಂಬಿಕೆ.

---

* ಬರೆದವರು ಶ್ರೀ ಏರ್ಯಲಕ್ಷ್ಮೀನಾರಾಯಣ ಅಳ್ವರು. ಪ್ರಕಾಶಕರು ದಿ ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಪ್ ಏಜನ್ಸಿಸ್, ಮಂಗಳೂರು.

ಸಾದರ ಸ್ವೀಕಾರ

೧೩. **ವಿಚಾರಕರಣ** (ಸರ್ವೋದಯ ಪ್ರಚಾರಪತ್ರಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಬಸವಕುಮಾರ ಸಿಗ್ಲಿ; ಧಾರವಾಡ ಜಿಲ್ಲಾ ಸರ್ವೋದಯ ಮಂಡಲ, ಹುಬ್ಬಳ್ಳಿ. ಕ್ರೌ. ಅ. ೧೨ ಪುಟಗಳು.

೧೪. **ರಾಜಶೇಖರ ವಿಳಾಸ ಸಂಗ್ರಹ** (ಪ್ರಾಚೀನ ಕಾವ್ಯ ಸಂಗ್ರಹ ೧). ಸಂಪಾದಕರು ಡಾ. ಆರ್. ಸಿ. ಹಿರೇಮಠ ಎಂ. ಎ., ಪಿಎಚ್. ಡಿ. ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಡಾ. ಎಂ. ಎಸ್. ಸುಂಕಾಪುರ ಎಂ. ಎ., ಪಿಎಚ್. ಡಿ. ರೀಡರ್ ಕರ್ನಾಟಕ ವಿ. ವಿದ್ಯಾಲಯ. ಪ್ರಕಾಶಕರು ಶ್ರೀ. ಎಸ್. ಎಸ್. ಒಡೆಯರ್ ಎಂ. ಎ., ಎಲ್. ಎಲ್. ಬಿ. ರೆಜಿಸ್ಟ್ರಾರ್ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಕ್ರೌ. ಅ. ೪೮+೨೧೨ ಪುಟಗಳು. ಬೆಲೆ ೨ರೂ.

೧೫. **ನೆರಳು** (ಕಥಾಸಂಕಲನ) ಲೇಖಕರು ಶ್ರೀ. ಸು. ರಂ. ಯಕ್ಕುಂಡಿ ಅವರು. ಪ್ರಕಾಶಕರು ವೈಜಯಂತಿ ಗ್ರಂಥಪ್ರಕಾಶನ ಸಂಸ್ಥೆ, ಸಾಗರ-ಶಿವಮೊಗ್ಗೆ. ಕ್ರೌ ಅ. ೧೧೧ ಪುಟಗಳು. ಬೆಲೆ ೧.೦೦

೧೬. **ಮೊರಬ ಸನ ತವರ** (ಜಾನಪದ ಗೀತಕಥನ) ಬರೆದವರು : ಶ್ರೀ. ಈಶ್ವರ ಹಿರೇನಂದಿಹಳ್ಳಿ, ಮೊರಬ. ಪ್ರಕಾಶಕರು : ಶ್ರೀ. ಆರ್. ಎಸ್. ಇಮ್ಮಡಿ, ಮೊರಬ, ಜಿ. ಧಾರವಾಡ. ಫೂ ಕ್ಯಾ. ಅ. ೧೨ ಪುಟಗಳು. ಬೆಲೆ ೦೦.೧೫.

ಸ್ವಗ್ರಾಮದ ಪ್ರೀತಿಯಿಂದ ಅಲ್ಲಿಯ ಜನಜೀವನದ ಸೊಗಸು-ಸೌಂದರ್ಯಗಳನ್ನು ಬಣ್ಣಿಸಿ ಹಾಡಿದ ಸಾಂಗತ್ಯಗಳು. ಮೊರಬದ ಜನ ಈ ಸಾಂಗತ್ಯಗಳನ್ನು ಓದಿ ಮೆಚ್ಚಿ ವೈನವಿರು ಪಡೆಯಬಹುದು. ಮಿಕ್ಕವರೂ ಓದಿ ನೋಡಬೇಕು.

೧೭. **ಜನಪ್ರಿಯ ಜನಪದ ಗೀತಗಳು** (ಹಳ್ಳಿಯ ಹಾಡುಗಳ ಚಿಕ್ಕ ಸಂಕಲನ). ಸಂಗ್ರಹಿಸಿ ಪ್ರಕಟಿಸಿದವರು ಶ್ರೀಮಾನ್ ಮತಿಘಟ್ಟ ಕೃಷ್ಣಮೂರ್ತಿ, ಬೆಂಗಳೂರು. ಫೂ. ಕ್ಯಾ. ಅ. ೧೬ ಪುಟಗಳು. ಬೆಲೆ : ೦೦.೧೫.

ಶ್ರೀ. ಮತಿಘಟ್ಟ ಕೃಷ್ಣಮೂರ್ತಿಯವರು ಜನಪದ ಸಾಹಿತ್ಯದ ಸಂಗ್ರಹಕ್ಕೆಂದು ತಮ್ಮ ಜೀವನವನ್ನೇ ಧಾರೆಯೆರೆದವರು. ಇವರಲ್ಲಿ ಕೆಲವು ಮಾದರಿಯ ಗೀತಗಳನ್ನು ಸಂಕಲನ ಮಾಡಿವ್ವಾರೆ. ಹಳ್ಳಿಯ ಸಾಹಿತ್ಯದ ಸೊಗಸನ್ನು ನೋಡಬಯಸುವವರು, ಈ ಸಂಕಲನವನ್ನು ಅವಶ್ಯವಾಗಿ ನೋಡಬೇಕು.

೧೮. **ಚೈತ್ರಪಕ್ಷಿ** (ಕವಿತಾ ಸಂಕಲನ). ಬರೆದವರು ಶ್ರೀ. ಆರ್. ಜಿ. ಗಂಗಾವತಿಯವರು. ಪ್ರಕಾಶಕರು ಶ್ರೀಮಾನ್ ಸಿದ್ದಣ್ಣ ಮಸಳಿ, ಸಂಗಮ ಸಾಹಿತ್ಯ ಪ್ರಕಾಶನ, ಧಾರವಾಡ. ಕ್ರೌ. ಅ. ೫೨ ಪುಟಗಳು. ಬೆಲೆ : ೧.೦೦.

೧೯. **ಸಾವಧಾನ** (ಪ್ರಬಂಧ ಸಂಕಲನ). ಲೇಖಕರು ಶ್ರೀ. ದ. ಬಾ. ಕುಲಕರ್ಣಿಯವರು. ಧಾರವಾಡದ ಲಲಿತ ಸಾಹಿತ್ಯಮಾಲೆಯ ೫೦ನೆಯ ಕುಡಿ. ಕ್ರೌ. ಅ. ೧೧೪ ಪುಟಗಳು. ಬೆಲೆ ಉತ್ತಮ ಪ್ರತಿಗೆ ೨.೫೫; ಸಾಮಾನ್ಯ ಪ್ರತಿಗೆ ೧.೫೦.

೨೦. **ಸಖ್ಯ** (ಗಾಂಧೀಸಾಹಿತ್ಯ-ಲಘುಗ್ರಂಥ). ಅನುವಾದಕರು ಶ್ರೀ. ಜಿ. ಆರ್. ಪಾಂಡೇಶ್ವರ ಅವರು. ಪ್ರಕಾಶಕರು : ಶ್ರೀ. ರಾ. ಶ್ರೀ. ಹುಕ್ಕೇರಿಕರ, ಅಧ್ಯಕ್ಷ ಗಾಂಧೀ ಸ್ಮಾರಕನಿಧಿ, ಕರ್ನಾಟಕ ಶಾಖೆ, ಧಾರವಾಡ. ಫೂ. ಕ್ಯಾ. ಅ. ೭೨ ಪುಟಗಳು. ಬೆಲೆ : ೦೦.೭೫.

೨೧. **ಸರ್ವೋದಯ** (ಗಾಂ. ಸಾ. ಲಘುಗ್ರಂಥ). ಅನುವಾದಕರು ಪ್ರೊ. ಸಿ. ಎಸ್. ಕುಲಕರ್ಣಿಯವರು. ಪ್ರಕಾಶಕರು ಮೇಲೆ ಹೇಳಿದವರು. ಫೂ. ಕ್ಯಾ. ಅ. ೭೪ ಪುಟಗಳು. ಬೆಲೆ : ೦೦.೭೫.

೨೨. **ಪಟ್ಟದಕಲ್ಲು ಗುಡಿಗಳು** (ಸಚಿತ್ರ ಕನ್ನಡ ಐತಿಹಾಸಿಕ ಕಲಾಕ್ಷೇತ್ರ ಸಂದರ್ಶನ) ಬರೆದವರು ಶ್ರೀ. ಎ. ಎಂ. ಅಣ್ಣಿಗೇರಿ ಎಂ. ಎ , ಕ್ಯೂರೇಟರ್ ಆಫ್ ಮ್ಯೂಸಿಯಮ್, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ. ಪ್ರಕಾಶಕರು : ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಡೆ. ಅ. ೧೦೮ (ಅಲ್ಲದೆ ೧೪ ಚಿತ್ರ) ಪುಟಗಳು. ಬೆಲೆ ೨.೦೦.

೨೩. **ಶ್ರೀ ಗುರುದೇವ ರಾನಡೆಯವರ ಜೀವಜ್ಯೋತಿ** (ವ್ಯಕ್ತಿತ್ವ ಮತ್ತು ಕಾರ್ಯಮಹತ್ತ್ವಗಳ ಪರಿಚಯ ಗ್ರಂಥ). ಲೇಖಕರು ಶ್ರೀ. ಮ. ಶ್ರೀ. ದೇಶಪಾಂಡೆ ಎಂ. ಎ. ಅಥಣಿ. ಧಾರವಾಡ ಮಿಂಚಿನ ಬಳ್ಳಿಯ ೨೨ನೆಯ ವರ್ಷದ ೩-೪ನೆಯ ಕುಡಿ. ಕ್ರೌ. ಅ. ೪೦೮ ಪುಟಗಳು. ಬೆಲೆ : ೬.೦೦.

೨೪. **ಸಂಸ್ಥಾನಿಕರು** (ವ್ಯಂಗ್ಯಚಿತ್ರ ಸಂಕಲನ) ಬರೆದವರು ಶ್ರೀ. ಗೋವಿಂದಮೂರ್ತಿ ದೇಸಾಯಿ, ಧಾರವಾಡ. ಪ್ರಕಾಶಕರು ಸುಲಭಸಾಹಿತ್ಯ ಪ್ರಕಾಶನ, ಕುಮಟಾ. ಉ. ಕ. ಜಿಲ್ಲಾ. ಕ್ರೌ. ಅ. ೧೩೦ ಪುಟಗಳು. ಬೆಲೆ ೧.೫೦.

೨೫. **ಶ್ರೀ ಮಾರಿಕಾಂಬಾ ಪ್ರಶಸ್ತಿ** (ಶಿರಸಿಯ ಶ್ರೀ ಮಾರಿಕಾಂಬಾ ದೇವಸ್ಥಾನದ ಆಡಳಿತದ ಸಚಿತ್ರ ವರದಿ). ಪ್ರಕಾಶಕರು ಶ್ರೀ. ಎಸ್. ಎಸ್. ಧಾಕಪ್ಪನವರ ಎಂ. ಎ. ಎಲ್ಎಲ್. ಬಿ. ಪ್ರೆಸಿಡೆಂಟರು ಮಾರಿಕಾಂಬಾ ದೇವಸ್ಥಾನ ಪಂಚಸಮಿತಿ, ಶಿರಸಿ.

ಕ್ರೌ. ಅ. ೧೩೦ ಪುಟದ ವರದಿಯಿದು. ಸಂಪೂರ್ಣ ಮಿಂಚು ಕಾಗದದಲ್ಲಿ ಅಂದವಾಗಿ ಮುದ್ರಿತವಾಗಿದೆ. ಈ ದೇವಸ್ಥಾನವು ಭಕ್ತರ ಕಾಣಿಕೆಯನ್ನು ಸಮಾಜದ ಕಲ್ಯಾಣಕ್ಕೆ ವೆಚ್ಚಮಾಡಿ, ನಿಜವಾದ ದೇವಸ್ಥಾನವೆನಿಸಿಕೊಳ್ಳುತ್ತಿರುವುದನ್ನು ಈ ವರದಿಯಿಂದ ಚೆನ್ನಾಗಿ ಅರಿತುಕೊಳ್ಳಬೇಕು. ಮಿಕ್ಕ ಕಡೆಯ ದೇವಸ್ಥಾನದ ಆಡಳಿತಕ್ಕೆ, ಈ ದೇವಸ್ಥಾನದ ಪಂಚಸಮಿತಿಯ ಆಡಳಿತವು ಆದರ್ಶವೆನಿಸುವಂತಿದೆ.

———

ಶರತ್‌ಪ್ರಕಾಶನ ಮಂದಿರ, ಶಹಾಪುರ (ಬೆಳಗಾಂವ)

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ ನಾಲ್ಕನೆಯ ಆವೃತ್ತಿ

ರಾಜಯೋಗಿ

ಹೊಸಕಾಲಕ್ಕೆ ತಕ್ಕ

ಮುದ್ರಣ-ಬಂಧನಗಳ ಬೆಡಗಿನೊಂದಿಗೆ ಇದೀಗ ಬೆಳಕಿಗೆ ಬಂದಿದೆ.

ಐತಿಹಾಸಿಕ ಕಾದಂಬರಿಯೆಂದರೆ, ಆ ಕಾಲದ ಜನಜೀವನದ ತದ್ರೂಪ ಚಿತ್ರಣವಾಗಿರಬೇಕು. ವಾಚಕರಿಗೆ ತಾವು ಐತಿಹಾಸಿಕ ಕಾಲದಲ್ಲಿಯೇ ಇದ್ದೇವೆ, ಘಟನೆ ನಡೆವ ಪ್ರದೇಶದಲ್ಲಿಯೆ ಇದ್ದೇವೆ—ಎನಿಸಬೇಕು. ಪಾತ್ರಗಳು ಐತಿಹಾಸಿಕವಾದರೂ, ಅಂದಿನ ಕಾಲದ ಜೀವನವನ್ನು ಜೀವಂತ ವ್ಯಕ್ತಿಗಳಾಗಿ ವ್ಯವಹರಿಸಿ ತೋರಿಸಬೇಕು.

'ರಾಜಯೋಗಿ' ಕಾದಂಬರಿಯಲ್ಲಿ ಇವೆಲ್ಲ ಗುಣಗಳೂ ಇವೆ.

ಎಂತಲೇ ಇದು ಹುಟ್ಟಿ ೩೫ ವರ್ಷಗಳಾದರೂ, ವಾಚಕರಿಗೆ ಹೊಸ ಹೊಸದೇ ಎನಿಸುತ್ತದೆ.

ಪ್ರತಿಯೊಂದು ವಾಚನಮಂದಿರದಲ್ಲಿಯೂ ಇರಲೇಬೇಕಾದ ಕಾದಂಬರಿಯಿದು.

ಕ್ರೌ. ಅ. ೧೬೦ ಪುಟಗಳು. ● **ಬೆಲೆ : ೨ ರೂ. ೨೫ ನಯೇಪೈಸೆ**

ನಮ್ಮ ಮಂದಿರದ ಬೇರೆ ಪ್ರಕಟನೆಗಳು

ಮಗಳ ಮದುವೆ
(ಸಾಮಾಜಿಕ ಕಾದಂಬರಿ)
ಕ್ರೌ. ಅ. ೩೫೦ ಪುಟ * ಬೆಲೆ : ೪ ರೂ.

ಕಾರಹುಣ್ಣಿವೆ
(ಕವನಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೨ ರೂ.

ಬೆಳವಡಿ ಮಲ್ಲಮ್ಮ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೫೦

ಬೆಂದ ಹೃದಯ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೨೫

ನಲ್ವಾಡುಗಳು
(ಪ್ರೀತಿ ಗೀತ ಸಂಕಲನ)
ಕ್ರೌ. ಅ. ೭೨ ಪುಟ ● ಬೆಲೆ : ೧.೨೫

'ಆನಂದಕಂದ'ರ ಯಾವ ಪುಸ್ತಕಗಳು ಬೇಕಾದರೂ ನಮಗೆ ಬರೆಯಿರಿ!

ಶರತ್‌ಪ್ರಕಾಶನ ಮಂದಿರ, ಕಚೇರಿಗಲ್ಲಿ, ಶಹಾಪುರ (ಬೆಳಗಾಂವ)

Printed by Basavaraj Horadi at Lalita Mudranalaya, Dharwar &
Published for the Propritors Jayanti Publications by K. S. Betgeri at Jayanti Office, Dharwar.

ಜಯಂತಿ

ಜಯಂತಿಗೆ ಚಂದಾದಾರರಾಗಿರಿ!

❋

ಜಯಂತಿಯಂತಹ ಸದಭಿರುಚಿ–ಸಂಸ್ಕೃತಿ ಪ್ರಚಾರಕ ಮಾಸಪತ್ರಿಕೆ-ಯನ್ನು ಬಹುಕಾಲ ಬದುಕಿಸುವುದು ಕನ್ನಡ ಜನತೆಯ ಕರ್ತವ್ಯವಾಗಿದೆ.

* * * *

ಕನ್ನಡ ನಾಡಿನಲ್ಲಿಯ ಪ್ರತಿಯೊಂದು ವಿದ್ಯಾಶಾಲೆಯೂ ಪ್ರತಿಯೊಂದು ವಾಚನಾಲಯವೂ ಜಯಂತಿಯನ್ನು ಬರಮಾಡಿಕೊಳ್ಳಬೇಕು. ಹಿಂದಿನ ಕಾಲದ—ಕನ್ನಡಪ್ರದೇಶವನ್ನು ಒಳಗೊಂಡ—ಎಲ್ಲ ರಾಜ್ಯ ಸರಕಾರಗಳೂ ಜಯಂತಿಗೆ ಮನ್ನಣೆಯನ್ನು ಕೊಟ್ಟಿದ್ದುವು.

ಮೈಸೂರು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರ No. F. Dis. G. L. 4250-48/49. D. 3 rd Aug 1948 ರ ಪ್ರಕಾರ,

ಜಯಂತಿಯನ್ನು ರಾಜ್ಯದಲ್ಲಿಯ ಎಲ್ಲ ಹೈಸ್ಕೂಲ್, ಮಿಡಲ್ ಸ್ಕೂಲ್, ಟ್ರೇನಿಂಗ್ ಸ್ಕೂಲ್‌ಗಳಿಗೆ ತರಿಸಿಕೊಳ್ಳಬಹುದೆಂಬ ಮನ್ನಣೆಯ ಒಪ್ಪಿಗೆ ದೊರೆತಿದೆ.

ಎಲ್ಲ ಪಾಠಶಾಲೆಗಳ ಮುಖ್ಯಾಧ್ಯಾಪಕರೂ ಈ ಸಂಗತಿಯನ್ನು ಲಕ್ಷ್ಯದಲ್ಲಿ ಇರಿಸಿಕೊಂಡು, ತಮ್ಮ ತಮ್ಮ ಶಾಲೆಯ ವಾಚನಾಲಯಗಳಿಗೆ ಜಯಂತಿಯನ್ನು ತರಿಸಿಕೊಳ್ಳಬೇಕು.

ವಿದ್ಯಾರ್ಥಿಗಳಲ್ಲಿ ಸುಸಂಸ್ಕೃತಿಯನ್ನು ಬೆಳೆಸಿ, ಅವರನ್ನು ಒಳ್ಳೆಯ ನಾಗರಿಕರನ್ನಾಗಿ ಮಾಡಬಲ್ಲ ಮಾಸಪತ್ರಿಕೆ— **'ಜಯಂತಿ.'**

ಸಂಪುಟ ೨೩ | ಅಕ್ಟೋಬರ್ ೧೯೬೦ | ಸಂಚಿಕೆ ೪

JAYANTI

ಈ ಸಂಚಿಕೆಯಲ್ಲಿ

ಎಂ. ವಿಶ್ವೇಶ್ವರಯನವರ ಗೆಲುಬಾಳಿನ ನೂರು ವರ್ಷಗಳು (ಸಂಪಾದಕೀಯ)
ಸಂಪಾದಕರು ೧೦೯

ನಾಡನಡೆ (ವ್ಯಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೧೧೧

ಪ್ರತಿಫಲ (ಪೌರಾಣಿಕ ರೂಪಕ)
ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಅಕ್ಕಿಗುಪ್ಪೆ ೧೧೩

ಕಾವ್ಯ ವಿಮರ್ಶೆಗೆ ಒಂದು ಮಾದರಿ
ಶ್ರೀ. ಮಾ. ರಾಮಚಂದ್ರ ಬಿ. ಎ. (ಆನರ್ಸ್) ಧಾರವಾಡ ೧೧೭

ಬರುವೆಯು ಸಂಗಾತಿ (ಕವನ)
ಶ್ರೀ. ಈಶ್ವರ ಪೆಂಡಾಲ, ಹೊಸದಿಲ್ಲಿ ೧೧೯

ಕತ್ತಲಲ್ಲಿಯ ಜನ (ನವ್ಯಕತೆ)
ಶ್ರೀ. ಆರ್. ಪಿ. ಕುಲಕರ್ಣಿ ಎಂ. ಎ. ಬೆಳಗಾಂವಿ ೧೨೦

ನೂಕಪರುಗಳ ತಂದೆ ಶ್ರೀ. ಶ್ರೀಪಾಲ ಜೋತರು (ವ್ಯಕ್ತಿಪರಿಚಯ)
ಶ್ರೀ ಎ. ಎಸ್. ಸಾಟೇಲ, ಬಿ. ಎ. ಧಾರವಾಡ ೧೨೩

ನೂಕಶೋಕ (ಕವನ)
ಶ್ರೀ ಚಂದ್ರಶೇಖರ ಸಾಟೇಲ, ಧಾರವಾಡ ೧೨೫

ತೋಬಾಟೇಕಸಿಂಗ್ ಎಲ್ಲಿದೆ ? (ಸಣ್ಣಕತೆ)
ಶ್ರೀ ಶಿವಾನಂದ ಜೋಶಿ ಬಿ. ಎ. (ಆನರ್ಸ್) ಸೊಲ್ಲಾಪುರ ೧೨೬

ನನ್ನ ನಾರಾಣಸೀ ಯಾತ್ರೆ (ಪ್ರವಾಸಪ್ರಬಂಧ)
ಶ್ರೀ. ಎಸ್. ಎಸ್. ಗದಗಕರ ಬಿ. ಎ. ಧಾರವಾಡ ೧೩೦

ಮುದ್ದಳೆ ಬಾರಿಸುವ ಮಾಯೆ (ಕವನ)
ಶ್ರೀ. ಚಂದ್ರಶೇಖರ ಕಂಬಾರ ಬಿ. ಎ. ಎಂ. ಎ. ಧಾರವಾಡ ೧೩೨

ನಾರದರ ಸೋಲು (ಚಿತ್ರಕತೆ)
ಶ್ರೀ. ಬಿ. ಆರ್. ಪಾಡಿಗ್ಗಿ ಎಂ. ಎ., ಬಿ. ಟಿ. ಧಾರವಾಡ ೧೩೩

ಉಜ್ಜು ಭಾರತನಜ್ರ (ಕವನ)
ಶ್ರೀ ಜೆನ್ನವೀರ ಕಣವಿ ಎಂ. ಎ. ಧಾರವಾಡ ೧೩೫

ಹವ್ಯಕರ ಮನೆಮಾತುಗಳು (ಭಾಷಾಚಿತ್ರ)
ಶ್ರೀ. ಡಾ ವ್ಹಿ. ಆರ್. ಭಾಗವತ ಎಂ.ಎ.,ಪಿಚ್.ಡಿ. ಬೆಳಗಾಂವಿ ೧೩೬

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ
ಶ್ರೀ. ಮಲ್ಲಣ್ಣ ಸುಲ್ತಾನಪುರ, ಗೋಗಿ ೧೪೧
ಶ್ರೀ. ಪು. ಆರ್ ಪಂಚಿನಮನಿ ಬಿ. ಎಸ್‌ಸಿ. ಬೆಳಗಾಂವಿ ೧೪೩

ವ್ಯರ್ಥಕವಿತೆ (ಕವನ)
ಶ್ರೀ. ಮುದೇನೂರ ಸಂಗಣ್ಣ, ಜಿಗಟೇರಿ ೧೪೪

ಸಾಹಿತ್ಯ ಸ್ವೀಕಾರ (ಕವರ್ ೩ನೇಯ ಪುಟದಲ್ಲಿ)

ಜಯಂತಿ

ಸಂಪುಟ ೨೩] [ಸಂಚಿಕೆ ೪

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ರಾಷ್ಟ್ರಮಾನ್ಯ ಎಂ. ವಿಶ್ವೇಶ್ವರಯ್ಯನವರ ಗೆಲುಬಾಳಿನ ನೂರು ವರ್ಷಗಳು

ಕಳೆದ ಸಪ್ಟಂಬರ್ ೧೫ನೆಯ ದಿನಾಂಕವು ಭಾರತರಾಷ್ಟ್ರದ ತುಂಬ, ಒಂದು ಸಂತೋಷ-ಸಮಾರಂಭಗಳ ದಿನವಾಗಿ ಪರಿಣಮಿಸಿತು. ಅಂದು ನಮ್ಮ ಜನತೆಗೆಲ್ಲ ಪೂಜ್ಯರೂ ಮಾನ್ಯರೂ ಆದ ಭಾರತರತ್ನ ಡಾ. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ನೂರನೆಯ ಹುಟ್ಟುಹಬ್ಬ. ಕನ್ನಡನಾಡಿನ ಹಿರಿಯ ವಿದ್ವನ್ಮಣಿಗಳೊಬ್ಬರು ಹೀಗೆ ರಾಷ್ಟ್ರದಾದ್ಯಂತ ಜನತೆಯ ಹೃದಯಪೀಠದಲ್ಲಿ ಕುಳಿತು, ಮನ್ನಣೆಪಡೆದುದು ಕನ್ನಡಿಗರೆಲ್ಲರಿಗೆ ಹೆಮ್ಮೆಯ ವಿಷಯವೇ ಸರಿ !

ವಿಶ್ವೇಶ್ವರಯ್ಯನವರು ಇಂತಹ ಮನ್ನಣೆಗೆ ಪಾತ್ರರಾದುದು ಅವರು ಜಾಣ ವಿದ್ಯಾರ್ಥಿಯಾಗಿದ್ದರೆಂದಲ್ಲ; ಸ್ಥಾಪತ್ಯಶಾಸ್ತ್ರ ವಿಶಾರದ ಪರೀಕ್ಷೆಯಲ್ಲಿ ಮೊದಲಿಗರಾಗಿ ಉತ್ತೀರ್ಣರಾಗಿದ್ದರೆಂದಲ್ಲ; ಮೈಸೂರು ಸಂಸ್ಥಾನದಲ್ಲಿ ದಿವಾಣಗಿರಿಯನ್ನು ಮಾಡಿದರೆಂದೂ ಅಲ್ಲ. ಹಾಗಾದರೆ ವಿಶ್ವೇಶ್ವರಯ್ಯನವರ ಹೆಚ್ಚುಗಾರಿಕೆಯೇನು ?

ಭಾರತದ ಸ್ವಾತಂತ್ರ್ಯಯುದ್ಧದಲ್ಲಿ ಸೇರಿ, ಆಗಿನ ಸರಕಾರದ ತುರಂಗದಲ್ಲಿ ಕಳೆದ ದಿನಗಳ ಪರಿಮಾಣದಿಂದ ವ್ಯಕ್ತಿತ್ವದ ದೊಡ್ಡಿತೆಯನ್ನು ಅಳೆಯಬಯಸುವವರೆದುರು, ಮಾನ್ಯ ವಿಶ್ವೇಶ್ವರಯ್ಯನವರು ಯಾವ ಮಾನಕ್ಕೂ ಹತ್ತಿ ನಿಲ್ಲಲಾರರು. ಭಾರತದ ಹಿರಿಯ ಧುರೀಣರು, ವ್ಯಕ್ತಿಮಹತಿಯನ್ನು ಅಳೆಯುವುದಕ್ಕೆ ಇಂತಹ ಸಂಕುಚಿತ ಮಾನಭಾಂಡವನ್ನು ಇರಿಸಿಕೊಂಡಿಲ್ಲವಾದುದರಿಂದಲೇ ಅವರು, ವಿಶ್ವೇಶ್ವರಯ್ಯನವರು ಮಾಡಿದ ರಾಷ್ಟ್ರಸೇವೆಯ ಹಿರಿಮೆಯನ್ನು ಸರಿಯಾಗಿ ಅರಿತುಕೊಂಡರು; ಸ್ವತಂತ್ರಭಾರತದಲ್ಲಿ ಆ ಸೇವೆಗೆ ಸಲ್ಲಬಹುದಾದ ಮನ್ನಣೆಯ ಕಾಣಿಕೆಯನ್ನು ಸಲ್ಲಿಸುವ ಕರ್ತವ್ಯವನ್ನವರು ಮಾಡಿದರು. ಅದಕ್ಕಾಗಿ ಆ ಹಿರಿಯ ಧುರೀಣರಿಗೆ ಶತಶಃ ಧನ್ಯವಾದಗಳು

ಭಾರತದ ಜನತೆಯ ಪರಾಧೀನತೆಯನ್ನು ಕಳೆಯಲು ನಮ್ಮ ನಾಡಿನ ಅನೇಕ ಜನನಾಯಕರು, ತಮ್ಮ ತಮ್ಮ ದೃಷ್ಟಿಯಲ್ಲಿ ಸಮುಚಿತವೆನಿಸಿದ ಕಾರ್ಯಗಳನ್ನು ಕೈಕೊಂಡು, ಪ್ರಾಮಾಣಿಕ ರೀತಿಯಿಂದ ಆ ಆ ಕಾರ್ಯಸಿದ್ಧಿಗಾಗಿ ವ್ರತಸ್ಥರಾಗಿ ದುಡಿದರು. ಕೆಲವರಿಗೆ ಬ್ರಿಟಿಷರೊಂದಿಗೆ ಪ್ರತ್ಯಕ್ಷ ಹೋರಾಟ ಹೂಡಿ ಸ್ವಾತಂತ್ರ್ಯಗಳಿಸುವುದು ಇಷ್ಟವೆನಿಸಿತು; ಇನ್ನು ಕೆಲವರಿಗೆ ದೇಶದ ದಾರಿದ್ರ್ಯ, ಜನರ ಅಜ್ಞಾನಗಳನ್ನು ಮೊದಲು ಓಡಿಸಿ, ರಾಷ್ಟ್ರವನ್ನು ಸ್ವಾತಂತ್ರ್ಯಸಿದ್ಧಿಗಾಗಿ ಅಣಿಗೊಳಿಸುವುದು ಅವಶ್ಯಕವೆನಿಸಿತು. ರಾಜಕೀಯ ಪ್ರಾಬಲ್ಯಕ್ಕಿಂತ ಆರ್ಥಿಕ ಪರಾಧೀನತೆಯೇ ಭಾರತೀಯರನ್ನು ಹೆಚ್ಚು ಹತಬಲರನ್ನಾಗಿಮಾಡಿದೆಯೆಂಬುದು, ಈ ವಿಧಾಯಕ ದೃಷ್ಟಿಯ ನಾಯಕರ ವಿಶ್ವಾಸ. ಅವರ ಆ ವಿಶ್ವಾಸ ಹುಸಿಯೇನೂ ಅಲ್ಲವೆಂಬುದಕ್ಕೆ, ನಮ್ಮ ಸ್ವತಂತ್ರಭಾರತದ ಇಂದಿನ ಪ್ರಜಾಪ್ರಭುತ್ವದ ಆಡಳಿತ ಪ್ರತ್ಯಕ್ಷಪ್ರಮಾಣವಾಗಿ ನಿಂತಿದೆ; ರಾಜಕೀಯ ಆಡಳಿತವಿಂದು ನಮ್ಮ ಅಧೀನದಲ್ಲಿ ಬಂದಿದೆಯೆಂದರೂ, ಆರ್ಥಿಕವಿಚಾರದಲ್ಲಿ ನಮ್ಮ ರಾಷ್ಟ್ರವಿನ್ನೂ ಪರಾಧೀನತೆಯಲ್ಲಿಯೆ ಇದ್ದಂತಿದೆ.

ಮಾನ್ಯ ವಿಶ್ವೇಶ್ವರಯ್ಯನವರು 'ಭಾರತೀಯರು ಮೊದಲು ಆರ್ಥಿಕಸ್ವಾತಂತ್ರ್ಯವನ್ನು ಪಡೆಯಬೇಕು !' ಎಂಬ ಸದಪೇಕ್ಷೆಯಿಂದ, ಬಾಳಿನುದ್ದಕ್ಕೂ ಆ ಬಗೆಯ ವಿಧಾಯಕ ಕಾರ್ಯಗಳಲ್ಲಿ ತೊಡಗಿ ಯಶಸ್ಸನ್ನು ಸಂಪಾದಿಸಿದವರು. ಆದರೆ ರಾಜಕೀಯ ಚಳವಳಿಯ ರಾಜಸಕಾರ್ಯಕ್ರಮಗಳ ಕಡೆಗೇ ದೃಷ್ಟಿಯಿರಿಸಿದ್ದ ಜನರಿಗೆ, ಮಾನ್ಯ ವಿಶ್ವೇಶ್ವರಯ್ಯನವರು ಹೇಳುವ ಮಾತಿನ—

ಮಾಡುವ ಕೆಲಸಗಳ ಮಹತ್ತ್ವವು ಗೊತ್ತಾಗಲಿಲ್ಲ; ಈಗ ಭಾರತವನ್ನು ಬಡತನದ ಬೊಕ್ಕಸವನ್ನಾಗಿಸಿ ಬ್ರಿಟಿಷರು ಹೊರಟುಹೋದ ಮೇಲೆ, ಬರೀ ಶಾಸನಸ್ವಾತಂತ್ರ್ಯದಿಂದ ರಾಷ್ಟ್ರ ಶಾಂತಿಸಮಾಧಾನಗಳಿಂದ ಬಾಳಲಾರವೆಂಬ ಸತ್ಯ ಎಲ್ಲರಿಗೂ ತಿಳಿದುಹೋಗಿದೆ. ಎಂತಲೇ ನಮ್ಮ ರಾಷ್ಟ್ರನಾಯಕರು, ಮಾನ್ಯ ವಿಶ್ವೇಶ್ವರಯ್ಯನವರ ಮಾತನ್ನೂ ಕೃತಿಯನ್ನೂ ಈಗ ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆ; ಅವರ ಯೋಜನೆಗಳನ್ನು ಕಾರ್ಯರೂಪದಲ್ಲಿ ತರಬೇಕೆಂದು ಸಂಕಲ್ಪ ಮಾಡಿದ್ದಾರೆ; ಸೆರೆಮನೆಗೆ ಹೋಗಿರದವನಾದರೂ ಮಾನ್ಯ ವಿಶ್ವೇಶ್ವರಯನವರು ರಾಷ್ಟ್ರದ ನಿಜವಾದ ಹಿರಿಯ ಧುರೀಣರೆಂದು ಮನವರಿಕೆಮಾಡಿಕೊಂಡಿದ್ದಾರೆ. ಇದೊಂದು ಸಂತೋಷಪಡತಕ್ಕ ಸಂಗತಿಯೆ. ಗುಣವನ್ನು ಗುಣವೆಂದು ತಿಳಿದು, ಅದನ್ನು ನಿರ್ಮತ್ಸರಭಾವದಿಂದ ಪೂಜಿಸುವುದು, ರಾಷ್ಟ್ರದ ಪ್ರಗತಿಯ ಶುಭಲಕ್ಷಣವಾಗಿದೆ.

ಮುಂಬಯಿ ಸರಕಾರದಲ್ಲಿ ಪ್ರಮುಖ ಸ್ಥಪತಿಗಳಾಗಿ ಕಾರ್ಯಮಾಡುತ್ತಿರುವಾಗಲೂ ವಿಶ್ವೇಶ್ವರಯ್ಯನವರಿಗೆ ಸ್ವಜನ ಕಲ್ಯಾಣದ ದೃಷ್ಟಿ; ಮೈಸೂರಿನ ದಿವಾಣರಾಗಿ ಇರುವಾಗಲೂ ಅವರಿಗೆ ಪ್ರಜಾಕಲ್ಯಾಣದ ಯೋಚನೆ. ಎಂತಲೇ ಅವರು ಕಾವೇರಿನದಿಯನ್ನು ತರುಬಿ 'ಕೃಷ್ಣರಾಜ ಸಾಗರ'ವನ್ನಾಗಿ ಮಾಡಿಸಿದರು. ಬೆಳಕು ಅನ್ನ ಎರಡೂ ಸುಲಭವಾಗಿ ದೊರೆಯುವಂತೆ ಸಂಯೋಜಿಸಿದರು. ಇದರ ಪರಿಣಾಮವಾಗಿ ಮೈಸೂರು ಜಿಲ್ಲೆ, ಕಬ್ಬಿನ ಜಿಲ್ಲೆ, ಅಕ್ಕಿಯ ಜಿಲ್ಲೆ-ಎಂಬು ಎರಡು ಭಾಗವಾಗಿ ರೂಪುಗೊಂಡಿತು.

ಇಂದು ಹಳೆಯ ಮೈಸೂರು ಆರ್ಥಿಕಪ್ರಗತಿಯಲ್ಲಿ ಇರಿಸಿದ ಪ್ರತಿಯೊಂದು ಹೆಜ್ಜೆಗೂ, ವಿಶ್ವೇಶ್ವರಯ್ಯನವರ ಪ್ರಜ್ಞೋದನೆಯೆ ಮುಖ್ಯ ಕಾರಣವಾಗಿದೆ. ಮೊದಲಿನ ಕೆಲವು ವರ್ಷಗಳಲ್ಲಿ ನಷ್ಟವನ್ನು ಸಹಿಸಬೇಕಾಗಿ ಬಂದುದರಿಂದ, ಭದ್ರಾವತಿಯ ಯೋಜನೆಗಾಗಿ, ವಿಶ್ವೇಶ್ವರಯ್ಯನವರನ್ನು ಆಡಿಕೊಂಡ ಕಂಗುರುಡರೂ ಅಂದಿನ ಮೈಸೂರಲ್ಲಿ ಹಲವು ಜನರು. ಬಿತ್ತಿದ ಮರುದಿನವೇ ಬೀಜ ಬೆಳೆಯನ್ನು ಒದಗಿಸುವುದೇ? ಅದಕ್ಕಾಗಿ ದುಡಿಯುತ್ತಲೇ ದಾರಿ ಕಾಯಬೇಕಲ್ಲವೆ? ಹೀಗೆ ಹೇಳಿದ ವಿಶ್ವೇಶ್ವರಯ್ಯನವರ ಮಾತುಗಳನ್ನು ಅಣಕಿಸಿ ನುಡಿಯುವವರೂ ಬೇಕಾದಷ್ಟು ಜನರಿದ್ದರು. ಅದೇ ಭದ್ರಾವತಿಯೂ ಮೈಸೂರಿಗೆ ಹಂಡೆಯ ತುಂಬ ಕರೆಯುವ ಹಸುವಾಗಿದೆ. ಅದರಿಂದ ಜನರಿಗೂ ಲಾಭ ದೊರೆಯುತ್ತಲಿದೆ; ಸರಕಾರಕ್ಕೂ ಲಾಭ ದೊರೆಯುತ್ತಲಿದೆ.

ವಿಶ್ವೇಶ್ವರಯ್ಯನವರು ಮೈಸೂರಿನ ಮುಖ್ಯಮಂತ್ರಿಪದದಿಂದಏಕೆ ನಿವೃತ್ತರಾಗಬೇಕಾಯಿತೆಂಬುದು ಇದುವರೆಗೂ ರಹಸ್ಯಪ ವಿಷಯವೇ-ಆಗಿದೆ.ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ವಿಶ್ವೇಶ್ವರಯ್ಯನವರಲ್ಲಿ ಅನನ್ಯವಾದ ಅಭಿಮಾನ! ಮೈಸೂರುಸಂಸ್ಥಾನದಬಗೆಗೆ ವಿಶ್ವೇಶ್ವರಯ್ಯನವರಲ್ಲಿ ಅನನ್ಯವಾದ ಶ್ರದ್ಧೆ. ಆದರೂ ಮದರಾಸಿನ ಕಡೆಯಿಂದ ಬಂದ ಜಾತೀಯಭಾವದ ಕೋತಿಗಳು ನಡೆಸಿದ ಕಿಡಿಗೇಡಿತನದ ಮೂಲಕ, ಅನಿವಾರ್ಯವಾಗಿ—ದಿವಾಣಪದದಿಂದ—ವಿಶ್ವೇಶ್ವರಯ್ಯನವರು ನಿವೃತ್ತರಾಗಬೇಕಾಯಿತು. ನಿವೃತ್ತವಾದರೂ ಇವರಲ್ಲಿ ಮೈಸೂರುಸಂಸ್ಥಾನದ ಬಗೆಗಿರುವ ವಿಶ್ವಾಸ-ಅಭಿಮಾನಗಳು ಕಡಮೆಯಾಗಿರಲಿಲ್ಲ.

ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನಕ್ಕೆ ಮಾಡಿದ ಕಲ್ಯಾಣದ ನೆಲೆಬೆಲೆಯನ್ನರಿತ ಕೆಲವು ಜನ ಅಭಿಮಾನಿಗಳು, ಅವರ ಹುಟ್ಟಿದ ಹಬ್ಬವನ್ನು ಪ್ರತಿವರ್ಷವೂ ಬೆಂಗಳೂರು-ಮೈಸೂರುಗಳಲ್ಲಿ ಉತ್ಸಾಹದಿಂದ ಜರುಗಿಸುತ್ತಿದ್ದರು.. ಆದರೆ ಆ ಹಬ್ಬದ ಆಚರಣೆಗೆ ಮೈಸೂರುಸರಕಾರದ ಸಹಾಯ ಸಹಾನುಭೂತಿಗಳರಲಿಲ್ಲ; ಬಹುಜನ ರಾಜಕೀಯ ಧುರೀಣರು ಅದರಲ್ಲಿ ಭಾಗವಹಿಸುತ್ತಿರಲಿಲ್ಲ. ಆಗ ಅದು ಕೇವಲ ಒಂದು ಗುಂಪಿನವರ ಚಟುವಟಿಕೆಯೆನಿಸಿಕೊಳ್ಳುತ್ತಲಿತ್ತು. ಆದರೆ ಇಂದಿನ ಸರಕಾರ ಮಾನ್ಯ ವಿಶ್ವೇಶ್ವರಯ್ಯನವರ ೧೦೦ನೆಯ ಜನ್ಮದಿನೋತ್ಸವ ಸಮಾರಂಭವನ್ನು, ತಾನೆ ಮುಂದಾಗಿ ಜರುಗಿಸಿತು. ಸರಕಾರ ಸ್ವಯಂಪ್ರೇರಣೆಯಿಂದಲೇ ಈ ಕರ್ತವ್ಯಪಾಲನೆಗೆ ಮುಂದಾಗಿದ್ದರೆ, ಅದು ಒಳ್ಳೆಯ ಲಕ್ಷಣವೆಂದೇ ಹೇಳಬೇಕು. ಭಾರತ ಸರಕಾರ ಹಲವಾರುರೀತಿಯಿಂದ, ವಿಶ್ವೇಶ್ವರಯ್ಯನವರನ್ನು ಮನ್ನಣೆಯ ಪೀಠದಲ್ಲಿ ಕುಳ್ಳಿರಿಸಿರುವಾಗ, ತಾನೂ ಅದರಂತೆ ಏಕೆ ಪಡೆಯಬಾರದು— ಎಂಬ ಅನುಕರಣಬುದ್ಧಿಯಿಂದ ಮುಂದಾಗಿದ್ದರೆ, ಅದು ಮೈಸೂರುದೇಶದ ಮೈಗೆ ಒಳ್ಳೆಯದೇನೂ ಅಲ್ಲ.

ನೂರನೆಯ ಹುಟ್ಟಿದ ಹಬ್ಬವನ್ನು ಇಡಿ ಭಾರತ ರಾಷ್ಟ್ರದಿಂದಲೇ ಮಾಡಿಸಿಕೊಂಡ ಈ ಜನತೆಯ ಪಿತಾಮಹ, ಇನ್ನೂ ಹಲವಾರು ಹುಟ್ಟಿದ ಹಬ್ಬಗಳನ್ನು ಮಾಡಿಸಿಕೊಂಡು, ಕಿರಿಯರಿಗೆ ಮಾರ್ಗದರ್ಶಕರಾಗಿ,ಶುಭಾಶೀರ್ವಾದಗಳನ್ನು ಮಾಡುತ್ತ ಬದುಕಿರಲಿ—ಎಂದು ನಮ್ಮ ಹಾರೈಕೆ; ಅದಕ್ಕಾಗಿ ಭಾರತಭಾಗ್ಯವಿಧಾತ್ರಿಯೆವದಲ್ಲಿ ನಮ್ಮ ಬೇಡಿಕೆ.

ಜಯಂತಿಯ ಓದುಗರಿಗೆ

ವಿಜಯ ದಶಮಿಯ

ಶುಭಾಶಯಗಳು

ನಾಡನಡೆ

ನಾಡಹಬ್ಬ ಹೊಸ ಹೆಜ್ಜೆಯನ್ನಿಡಲಿ!

ಹರಿದು ಹಂಚಿಹೋದ ಕನ್ನಡನಾಡನ್ನು ಸಾಂಸ್ಕೃತಿಕ ಸೂತ್ರದ ಮೂಲಕ ಒಂದುಗೂಡಿಸಬೇಕೆಂಬ ಉದ್ದೇಶದಿಂದ, ಅಖಿಲ ಕರ್ನಾಟಕದ ಜನತೆಯ ಸಾಮಾಜಿಕ-ರಾಜಕೀಯ ಪರಂಪರೆಯ ಹೆಬ್ಬಾಗಿಲಾದ ಶರನ್ನವರಾತ್ರಿಯನ್ನು, ನಾಡಹೆಬ್ಬವೆಂದು ಮರಳಿ ರೂಢಿಯಲ್ಲಿ ತರಲಾಯಿತು. ಈ ಹೆಬ್ಬದ ಸಾಮಾಜಿಕ ಸಂಘಟನೆಯ ಸತ್‌ಪರಿಣಾಮವನ್ನು ನಾಡಿನ ಜನರೆಲ್ಲರೂ ಒಪ್ಪಿಕೊಂಡರು. ಕರ್ನಾಟಕದ ಸಾಕ್ಷರ ಜನತೆಯೆಲ್ಲ ಈ ಹಬ್ಬವನ್ನು ಸಾರ್ವಜನಿಕವಾಗಿ ಎಲ್ಲೆಲ್ಲಿಯೂ ಆಚರಿಸತೊಡಗಿತು. ಇದುವರೆಗಿನ ನಾಡಹಬ್ಬದ ಕಾರ್ಯಕ್ರಮವೆಂದರೆ, ಮರೆತುಹೋದ ಕನ್ನಡತನವನ್ನು ಮರಳಿ ನೆನಪಿಗೆ ತಂದುಕೊಡುವುದೇ ಆಗಿತ್ತು. ಅದುದರಿಂದ ಕರ್ನಾಟಕದ ಇತಿಹಾಸ, ಸಾಹಿತ್ಯ, ಕಲೆ, ಸಂಸ್ಕೃತಿಗಳನ್ನು ಕನ್ನಡ ಜನತೆಯ ಮನದೆದುರು ಇಡುವಂತಹ ವಾಙ್ಮಯ ಯಜ್ಞಕರ್ಮವೇ ಇದುವರೆಗೆ ನಡೆಯಿತು.

ಈಗ ಕನ್ನಡತನವು ಎಲ್ಲೆಲ್ಲಿಯೂ ಜಾಗೃತವಾಗಿದೆ. ಅದರ ಪ್ರಭಾವದಿಂದಲೇ ಸ್ವತಂತ್ರ ಕರ್ನಾಟಕರಾಜ್ಯ ರೂಪುಗೊಂಡು ನಿಂತಿತು. ಪ್ರಜಾಪ್ರಭುತ್ವತತ್ತ್ವದ ನಮ್ಮದೇ ಆದ ಸರಕಾರದ ಆಡಳಿತದಲ್ಲಿ ನಾವು ಕನ್ನಡಿಗರೆಲ್ಲರೂ ಒಟ್ಟುಗೂಡಿದ್ದೇವೆ. ಈಗಲೂ ನಾವು ವರು-ವರುಷವೂ ನಾಡಹಬ್ಬವನ್ನು ಆಚರಿಸಲೇಬೇಕು; ಆದರೆ ಅದರ ಆಚರಣೆಯ ವ್ಯಾಕರಣ ನಿಯಮಗಳು ಬದಲಾಗಬೇಕು.

ಇನ್ನು ಮುಂದೆ ನಾವು ಆಚರಿಸಬೇಕಾದ ನಾಡಹಬ್ಬಗಳಲ್ಲಿ ಮಾತುಗಳಿಗಿಂತ ಕನ್ನಡಿಗರ ಕೃತಿಗಳಿಗೆ ಪ್ರಾಧಾನ್ಯ ದೊರೆಯಬೇಕು. ಇತಿಹಾಸಕಾಲದ ಪವಾಡ ಪ್ರಶಂಸೆಗಳಿಗಿಂತ ವರ್ತಮಾನಕಾಲದ ಜೀವನದ ಸುಖ-ಸೌಂದರ್ಯದ ವಿಚಾರಗಳು ಹೆಚ್ಚಾಗಿ ನಡೆಯಬೇಕು. ಭವಿಷ್ಯಕಾಲದ ಭವ್ಯಜೀವನದ ಕಡೆಗೆ ಸಾಗುವ ಪ್ರಾಗತಿಕ ಚಟುವಟಿಕೆಗಳಿರಬೇಕು. ನಾಡಿನಲ್ಲಿಯ ಸದ್ಗುಣ-ಸೌಂದರ್ಯಗಳಿಗೆ ಸಾರ್ವಜನಿಕ ಮನ್ನಣೆ ದೊರೆಯಬೇಕು. ನಮ್ಮ ನಾಡಹಬ್ಬ ಆಬಗೆಯ ಕಾರ್ಯಕ್ರಮಗಳನ್ನು ಇರಿಸಿಕೊಂಡು ಮುಂದುವರಿಯಬೇಕಾಗಿದೆ

ಹಿಂದೆ ರಾಜ-ಮಹಾರಾಜರುಗಳಿದ್ದರು. ಅವರು ತಮ್ಮ ಶಾಸನ ಕ್ಷೇತ್ರದಲ್ಲಿಯೆ ಸದ್ಗುಣ, ಶಕ್ತಿ, ಸೌಂದರ್ಯ, ಸತ್ಯಸಂಶೋಧನೆ—ಇವು ಎಲ್ಲಿವೆಯೆಂಬುದನ್ನು ಕಂಡುಹಿಡಿದು ನವರಾತ್ರಿಯ ನಾಡಹಬ್ಬದಲ್ಲಿ ಅವುಗಳ ಪ್ರದರ್ಶನ ನಡೆಯಿಸುತ್ತಿದ್ದರು; ಅವುಗಳಿಗೆ ಉಚಿತವಾದ ಮನ್ನಣೆಗಳನ್ನು ಸಲ್ಲಿಸುತ್ತಿದ್ದರು. ಈ ಬಗೆಯ ರಾಜಮನ್ನಣೆಗಾಗಿ ದೇಶದ ಜನರಲ್ಲಿ ಸಾತ್ತ್ವಿಕಸ್ಪರ್ಧೆ ನಡೆದು ಶಕ್ತಿ-ಸಂಸ್ಕೃತಿ-ಸೌಂದರ್ಯಗಳ ಅಭಿವೃದ್ಧಿ-ಸಂರಕ್ಷಣೆಗಳಿಗೆ ಅವಕಾಶವುಂಟಾಗಿತ್ತು.

ಈಗ ಜನರೆಲ್ಲರೂ ಶಾಸನಕರ್ತರು. ಪ್ರತಿಯೊಂದು ಪಟ್ಟಣ-ಹಳ್ಳಿಗಳೂ ಸ್ವಯಂಶಾಸನಾಧಿಕಾರ ಪಡೆದು ಬಾಳಲಿರುವುವು. ಆದುದರಿಂದ, ಹಿಂದೆ ರಾಜ-ಮಹಾರಾಜರು ನಡೆಯಿಸುತ್ತಿದ್ದ ನಾಡಹಬ್ಬದ ಮರ್ಮವನ್ನು ಮನವರಿಕೆ ಮಾಡಿಕೊಂಡು, ನಮ್ಮ ನಾಡಿನ ಪ್ರತಿಯೊಂದು ಪಟ್ಟಣ-ಹಳ್ಳಿಗಳೂ ತ್ರಿಕಾಲವಿವೇಕದಿಂದ ಈ ನಾಡಹಬ್ಬವನ್ನು ತಮ್ಮತಮ್ಮಲ್ಲಿ ನಡೆಯಿಸಬೇಕು. ಪ್ರತಿಯೊಂದು ಸದ್ಗುಣ, ಸಾಮರ್ಥ್ಯ, ಸೌಂದರ್ಯಗಳ ಪೂಜೆ-ಪ್ರದರ್ಶನಗಳು ಅಲ್ಲಿ ನಡೆದು, ಅವು ಜನತೆಯಿಂದ ಮನ್ನಣೆ ಪಡೆಯಬೇಕು. ಹಿಂದಿನಂತೆ ನಾಡಹಬ್ಬಗಳು ಮಾತಿನ ಪೇಟೆಯನ್ನೇ ಸೇರಿಸತೊಡಗಿದರೆ, ಅದರಿಂದ ನಾಡಿನ ಪ್ರಗತಿ ಸಾಧಿಸದು.

ಈ ಸಲದ ಸಾಹಿತ್ಯಸಮ್ಮೇಳನ

ಉಡುಪಿಯಲ್ಲಿ ಸೇರಲಿರುವ ಈ ಸಮ್ಮೇಳನದ ಅಧ್ಯಕ್ಷಪೆದಕ್ಕಾಗಿ ನಡೆದಿರುವ ಬೀದಿಗಲಹವನ್ನು ನೋಡಿದರೆ, ಕನ್ನಡದ ಯಾವ ನಿಜವಾದ ಅಭಿಮಾನಿಗೂ ದುಃಖವಾಗದಿರದು. ಸಾಹಿತ್ಯಸಮ್ಮೇಳನದ ಅಧ್ಯಕ್ಷರ ಆಯ್ಕೆಯೂ ರಾಜಕೀಯ ಕಿಡಿಗೇಡಿತನದ ಕೈಯಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿರುವುದು, ನಿಜವಾಗಿಯೂ ನಾಗರಿಕ ಕನ್ನಡಿಗರೆಲ್ಲರಿಗೂ ನಾಚಿಕೆಯೆನಿಸುವಂತಹ ಮಾತು.

ನಡೆದಿರುವ ಕುರುಕ್ಷೇತ್ರವನ್ನು ನೋಡಿದರೆ, ಸಾಹಿತ್ಯಸಮ್ಮೇಳನವೆಂದರೆ, ಕೇವಲ ಅಧ್ಯಕ್ಷರ ಮೆರವಣಿಗೆಗಾಗಿಯೇ ಇದೆಯೇನೋ—ಎನಿಸುವಂತಿದೆ. ಕಾರ್ಯದ ಮಹತ್ತ್ವದ ಕಡೆಗೆ ಲಕ್ಷ್ಯಕೊಡದೆ, ವ್ಯಕ್ತಿಯ ಗೌರವಕ್ಕೆ ಹೆಚ್ಚು ಮಹತ್ತ್ವವಿದೆಯೆಂದು ತಿಳಿಯುವಲ್ಲಿ, ಈ ಬಗೆಯ ಜಗಳಾಟಗಳು ಎದ್ದೇ ಏಳುವುವು.

ಪ್ರತಿವರ್ಷವೂ ನಮಗೆ ಸಾಹಿತ್ಯಸಮ್ಮೇಳನವು ಏತಕ್ಕಾಗಿ ಬೇಕು? ನಾಡಿನಲ್ಲಿಯ ನಿಜವಾದ ಸಾಹಿತ್ಯಿಕರು ಒಂದೆಡೆ ಬೆರೆಯಬೇಕು; ಅವರಲ್ಲಿ ವಿಧಾಯಕರೀತಿಯ ವಿಚಾರವಿನಿಮಯ ನಡೆಯಬೇಕು. ಆಭಾಸ ಜ್ಞಾನಗಳಿಲ್ಲ ಅಲ್ಲಿ ಇಲ್ಲದಂತಾಗಿ, ನಿಚ್ಚಳವಾದ ಜ್ಞಾನ ವ್ಯಕ್ತಿ-ವ್ಯಕ್ತಿಗಳಲ್ಲಿ ನೆಲೆಗೊಳ್ಳಬೇಕು. ಸಾಹಿತ್ಯಿಕರ ಕೃತಿಗಳ ಪ್ರತ್ಯಕ್ಷ ಪ್ರದರ್ಶನವಾಗಬೇಕು; ಅವುಗಳ ಬಗೆಗೆ ಚರ್ಚೆ-ವಿಮರ್ಶೆಗಳು ಸಹಾನುಭೂತಿಯಿಂದಲೇ ನಡೆಯಬೇಕು. ಶ್ರೇಷ್ಠ ಸಾಹಿತ್ಯಕಾರರಿಗೆ ಗೌರವ ಪೂಜೆಗಳು ಸಲ್ಲಬೇಕು. ಇವೆಲ್ಲ ಸಾಹಿತ್ಯದ ನಿಜವಾದ ಪ್ರಗತಿಗೆ ಕಾರಣಗಳು.

ಇಂತಹ ಎಲ್ಲ ಕಾರ್ಯಕ್ರಮಗಳನ್ನೂ ಕಣ್ಣಾರೆ ನೋಡಿ, ಸಮಂಜಸ-ಸಂದರ್ಭೋಚಿತ ಅಭಿಪ್ರಾಯ ಕೊಡಬಲ್ಲ ಸಾಹಿತ್ಯಸರ್ವಾಂಗಜ್ಞಾನಿಯನ್ನು ಸಮ್ಮೇಳನಕ್ಕೆ ಅಧ್ಯಕ್ಷನನ್ನಾಗಿ ಆರಿಸಬೇಕಾಗುವುದು. ಅಧ್ಯಕ್ಷ ಪದವ ಮನ್ನಣೆಗಾಗಿ ಇಂತಹ ವ್ಯಕ್ತಿ ಎಂದೂ ಆಶಿಸಬಟ್ಟು ದಾರಿಕಾಯುತ್ತ ಕುಳಿತಿರನು. ಜನರೆಲ್ಲ ಒಪ್ಪಿ ಕರೆದರೆ, ಅದೊಂದು ಸಾರಸ್ವತ ಸೇವೆಯೆಂದು ನಮ್ರಭಾವದಿಂದ ಬಂದು ಕಾರ್ಯವನ್ನು ನಿರ್ವಹಿಸಿಕೊಡುವನು. ಪಕ್ಷ-ಪಂಗಡಗಳ ರಾಜಕೀಯದಲ್ಲಿ ಅವನೆಂದೂ ಸಿಕ್ಕಿಕೊಳ್ಳಲಾರನು.

ಇಂತಹ ಅಧ್ಯಕ್ಷನ ಆಯ್ಕೆ ನಡೆದರೆ ವಿರೋಧ ಧ್ವನಿಯು ಏಕೆ ಏಳುವುದು? 'ನಮ್ಮ ಹುದ್ದರಿಯನ್ನು ಮೆರೆಸೋಣ' ಎಂದು ಒಂದು ಗುಂಪಿನವರೂ 'ತಮ್ಮ ಹುದ್ದರಿಯನ್ನು ಗದ್ದಿಗೆಗೇರಿಸೋಣ' ಎಂದು ಮತ್ತೊಂದು ಗುಂಪಿನವರೂ ತುರುಸಿಗೆ ನಿಂತರೆ, ಜಗಳವಾಗದೆ ಮತ್ತೇನು ಮಾಡೀತು?

ಸಾಹಿತ್ಯಸಮ್ಮೇಳನವೆಂದರೆ ಸರಸ್ವತೀವೇವೆಯ ಮಂದಿರವೆಂಬ

ಪವಿತ್ರ ಭಾವನೆಯಿಲ್ಲವೆ ಹೋದರೆ, ಸಾಮಾನ್ಯ ಬುದ್ಧಿಯ ಜನರು, ಅಲ್ಲಿಯೂ ಅಧಿಕಾರಕ್ಕಾಗಿ ಕಾದಾಡುವರು; ಸರಸ್ವತೀ ಮಂದಿರವನ್ನು ಒಂದು ಮುನಿಸಿಪಾಲಿಟಿಯ ಕ್ಷೇತ್ರವನ್ನಾಗಿ ಮಾಡುವರು. ಈಸಲದ ಅಧ್ಯಕ್ಷರ ಆಯ್ಕೆ ನಮಗೆ ಮುನಸೀಪಾಲಿಟಿಯ ರಾಜಕೀಯವನ್ನೇ ಕಣ್ಣಿದುರು ನಿಲ್ಲಿಸುತ್ತಲಿದೆ.

ನಮ್ಮನ್ನು ಆಳಬೇಕೆನ್ನುವ ನಾಯಕರ ಶೀಲ

ಯಾವುಯಾವುದೊ ಕಾರಣವಿಶೇಷಗಳ ಮೂಲಕವೆನ್ನಿ; ವ್ಯಕ್ತಿ-ವ್ಯಕ್ತಿಗಳ ಪ್ರಾರಬ್ಧವಶದಿಂದೆನ್ನಿ— ಹೇಗೊ ಏನೋ, ನಮ್ಮಲ್ಲಿಯ ಕೆಲವು ಜನರು, ರಾಜಕೀಯ ಪ್ರಪಂಚದಲ್ಲಿ ನಾಯಕರೆಂದು ಕರೆಯಿಸಿಕೊಳ್ಳುತ್ತಿದ್ದಾರೆ; ಇಷ್ಟೆ ಏಕೆ, ಬೇರೆಯವರನ್ನು ತಮ್ಮ ಆ ನಾಯಕ-ಸ್ಥಾನಗಳಿಗೆ ಬರಗೊಡಿಸದಂತೆ, ನಿರಂತರವೂ ಹೆಣಗುತ್ತಿರುತ್ತಾರೆ. ಸರಿ: ನಮ್ಮ ಜನತೆಯನ್ನು ಆಳಬೇಕಾದವರು ಈ ನಾಯಕಬ್ರುವರಲ್ಲದೆ ಇನ್ನಾರೂ ಅಲ್ಲ. ಜವೆ ಜನರನ್ನಾಳುವುದಕ್ಕೆ ಅಗತ್ಯವಾದ ಬುದ್ಧಿ-ಗುಣಗಳ ಭೆಟ್ಟಿಯೆ ಇವರಿಗೆ ಆದಂತಿಲ್ಲ.

ಏನೇ ಇರಲಿ, ಈ ನಾಯಕರಲ್ಲಿ ಪರಸ್ಪರ ಮಾನಸಿಕ ಹಾರ್ದಿಕ ಸಾಮರಸ್ಯವಿದೆಯೆನ್ನಬೇಕೇ? ಅದೂ ಇದ್ದಂತೆ ಕಾಣೆ. ಎಂತಲೇ ಪ್ರತಿಯೊಬ್ಬ ನಾಯಕನೂ ತನ್ನ ನಾಯಕತ್ವವನ್ನು ಉಳುಹಿಕೊಳ್ಳುವ ಕಾತರದಲ್ಲಿ, ಇನ್ನೊಬ್ಬ ನಾಯಕನನ್ನು ಸಂಶಯ-ಭೀತಿಗಳಿಂದ ನೋಡುತ್ತಿದ್ದಾನೆ.

ಪ್ರತಿಯೊಬ್ಬ ನಾಯಕನಿಗೂ ರಾಜಕೀಯ ಪ್ರಪಂಚದಲ್ಲಿ ಸಾರ್ವಭೌಮ ಅಧಿಕಾರ ಬೇಕಾಗಿದೆ. ಇರುವ ಪರಿಮಿತ ಸ್ಥಾನಗಳಲ್ಲಿ ಎಲ್ಲ ನಾಯಕರಿಗೂ ಅವು ದೊರೆಯಬೇಕು ಹೇಗೆ? ದೊರೆಯದುದಕ್ಕಾಗಿಯೆ ಒಬ್ಬರನ್ನೊಬ್ಬರು ದ್ವೇಷಿಸತೊಡಗಿದ್ದಾರೆ. ದೈನವಶಾತ್ ಅಧಿಕಾರಸ್ಥಾನಗಳನ್ನು ದೊರಕಿಸಿಕೊಂಡು ಕುಳಿತವರು, ಎಂತಹ ಆಸುರೀ ಪ್ರಯತ್ನದಿಂದಲಾದರೂ, ಕುಳಿತ ಸ್ಥಾನಗಳಲ್ಲಿ ಕುಳಿತುಕೊಂಡೇ ಬಿಡಬೇಕೆನ್ನುತ್ತಿದ್ದಾರೆ. ಅಧಿಕಾರಗಳಲ್ಲದ ನಾಯಕರು, ಎಂತಹ ದೈತ್ಯಶಕ್ತಿ ಯುಕ್ತಿಗಳಿಂದಲಾದರೂ ಅವುಗಳನ್ನು ದೊರಕಿಸಿಕೊಳ್ಳಬೇಕೆನ್ನುತ್ತಾರೆ. ಹೀಗಾಗಿ ಎಲ್ಲರೂ ಒಬ್ಬರನ್ನೊಬ್ಬರು ದ್ವೇಷಿಸುವವರೇ ಆಗಿದ್ದಾರೆ. ಆದುದರಿಂದಲೆ ಇವರು ಕೂಡಿಕುಳಿತಲ್ಲೆಲ್ಲ ಕೌರವ-ಪಾಂಡವೀಯ ನಡೆಯುತ್ತದೆ. ಹುಂಬರಿಗಿಂತ ಹುಂಬರಾಗಿ, ಒಬ್ಬರು ಇನ್ನೊಬ್ಬರನ್ನು ಬಾಯಿಗೆ ಬಂದಂತೆ ಬೈಯುತ್ತಾರೆ; ಹೊಡೆದಾಡಲೂ ಹಿಂದೆಮುಂದೆ ನೋಡದವರಾಗಿದ್ದಾರೆ.

ಇಂತಹ ನಾಯಕರ ಕೈಯಿಂದ—ಸಮಾನವದಲ್ಲಿ—ನಮ್ಮ ಕನ್ನಡ ಜನತೆಗೆ ಬಿಡುಗಡೆಯಿದ್ದಂತೆ ಕಾಣುವುದಿಲ್ಲ. ಶುಂಭನು ಅಧಿಕಾರ-ಸ್ಥಾನದಿಂದ ಇಳಿದರೆ, ನಿಶುಂಭನು ಅದನ್ನು ಏರಿ ಕುಳಿತುಕೊಳ್ಳುವನು. ಸುಂದನು ಆಸನದ ಮೇಲೆ ಕುಳಿತರೆ, ಉಪಸುಂದನು ಅವನನ್ನು ಕೈಹಿಡಿದು ಎಳೆಯುವನು. ಈ ಆಸುರೀಕಲಹವನ್ನು ನೋಡುವುದರಲ್ಲಿಯೆ ಜನತೆಯ ಉಸಿರು ಕಟ್ಟಿ ಹೋಗುತ್ತಲಿದೆ. ತಾಯೆ, ಬೆಟ್ಟದ ಚಾಮುಂಡಿ, ಕನ್ನಡ ಜನತೆಗೆ ನೀನೆ ತಾರಕಳಲ್ಲದೆ ಇನ್ನಾರು?

ಪ್ರಧಾನಮಂತ್ರಿಗಳ ಪಾಕಿಸ್ತಾನ ಪ್ರವಾಸ

ಪಾಕಿಸ್ತಾನ್ ಅಧ್ಯಕ್ಷರಾದ ಜನ್‌ಬ್ ಆಯೂಬ್ ಖಾನರು ಇತ್ತೀಚೆಗೆ ಆಗಾಗ ಪ್ರಕಟಿಸುತ್ತಿದ್ದ ಅಭಿಪ್ರಾಯಗಳು, ಭಾರತ-ಪಾಕಿಸ್ತಾನಗಳ ಜನಮನವನ್ನು ಉಯ್ಯಾಲೆಯಾಟವಾಡಿಸುತ್ತ ಬಂದಿವೆ. ಒಂದುಸಲ ಆಡಿದ ಮಾತಿನಲ್ಲಿ ಪಾಕಿಸ್ತಾನ್ ರಾಜಕೀಯ ಪರಂಪರೆಯ ಅಹಂಕಾರಗಳು ಕಂಡುಬಂದರೆ, ಇನ್ನೊಂದುಸಲ ಆಡಿದ ಮಾತಿನಲ್ಲಿ ಭಾರತದ ಸ್ನೇಹ-ಸಹಾನುಭೂತಿಗಳ ಆಪೇಕ್ಷೆ ಕಂಡುಬರುತ್ತಿತ್ತು. ಇವನ್ನೆಲ್ಲ ಸಂಕ್ರಮಣಕಾಲದ ತೂಗಾಟದ ಮನಸ್ಸಿನ ರೀತಿಯೆನ್ನಬಹುದು. ಆದರೆ ಇತ್ತೀಚೆಗೆ ಆಯೂಬ್ ಖಾನರು, ಭಾರತದ ಪ್ರಧಾನಮಂತ್ರಿ ನೆಹರೂ ಅವರಿಗೆ, ತಮ್ಮ ರಾಷ್ಟ್ರಕ್ಕೆ ಬರಲು ಆದರದ ಆಹ್ವಾನವಿತ್ತರು. ಅವರ ಆಹ್ವಾನವನ್ನು ಮನ್ನಿಸಿ ಪಂ. ನೆಹರು ಅವರು ಪಾಕಿಸ್ತಾನದ ಯಾತ್ರೆಯನ್ನು ಕೈಕೊಂಡು, ಆ ರಾಷ್ಟ್ರದ ಸರಕಾರ- ಜನತೆಗಳಿಂದ ಆತ್ಮೀಯತೆಯ ಸ್ವಾಗತವನ್ನು ಪಡೆದು, ಪಾಕಿಸ್ತಾನದ ನಾಯಕರೊಡನೆ ಸಹಾನುಭೂತಿಯಿಂದ ಮಾತು-ಕತೆಗಳನ್ನಾಡಿ, ಸ್ನೇಹ-ಸೌಹಾರ್ದದ ವಾತಾವರಣವನ್ನು ಅಲ್ಲಿ ನಿರ್ಮಿಸಿ ಮರಳಿಬಂದರು.

ಭಾರತದಲ್ಲಿಯೆ ಪಂಡಿತ ನೆಹರು ಅವರ ಕೊಲೆ ಮಾಡಿಸಬೇಕೆಂದು ಹೊಂಚು-ಸಂಚುಗಳನ್ನು ನಡೆಯಿಸಿದ ಪಾಕಿಸ್ತಾನಿಗಳ ಹಿಂದಿನ ಮನೋವೃತ್ತಿಯೆಲ್ಲಿ; ನೆಹರು ಅವರನ್ನು ತಮ್ಮಲ್ಲಿಗೆ ಆದರದಿಂದ ಬರಮಾಡಿಕೊಂಡು, ಸ್ನೇಹ-ಸೌಹಾರ್ದದ ಆತಿಥ್ಯ ಸಲ್ಲಿಸಿ, ಅವರ ಯೋಗ-ಕ್ಷೇಮಗಳ ಹೊಣೆಯನ್ನು ತಾವೆ ಹೊತ್ತುನಿಂತ ಇಂದಿನ ಪಾಕಿಸ್ತಾನಿಗಳ ಮನೋವೃತ್ತಿಯೆಲ್ಲಿ?

ಜನಸಾಮಾನ್ಯರದೇನು—ನಾಯಕರು ದ್ವೇಷ ಮಾಡಬೇಕೆಂದು ಹೇಳಿದರೆ 'ಮುರ್ದಾಬಾದ್' ಎಂದು ಕೂಗುತ್ತಾರೆ; ಸ್ನೇಹ ಮಾಡಬೇಕೆಂದು ಉಪದೇಶಿಸಿದರೆ 'ಝಿಂದಾಬಾದ್' ಎಂದು ಕೂಗುತ್ತಾರೆ. ಹಿಂದಿನ ಲೀಗ್ ನಾಯಕರಿಗೆ ಭಾರತದ ದ್ವೇಷ-ಮತ್ಸರಗಳನ್ನು ಹಬ್ಬಿಸಿಯೆ ಬದುಕಬೇಕಾಗಿತ್ತು. ಪ್ರಜೆಗಳ ಕಲ್ಯಾಣಕ್ಕೆಂತ ವೈಯಕ್ತಿಕ ಸ್ವಾರ್ಥವನ್ನು ಸಾಧಿಸುವುದೇ ಅವರ ಗುರಿಯಾಗಿತ್ತು. ಆದರೆ ಇಂದಿನ ಪಾಕಿಸ್ತಾನ್ ರಾಷ್ಟ್ರದ ಏಕೈಕ ನಾಯಕ ಆಯೂಬ್ ಖಾನರಿಗೆ, ಸ್ವಾರ್ಥ ಸಾಧನೆಗಿಂತಲೂ ರಾಷ್ಟ್ರದ ಕಲ್ಯಾಣ ಮುಖ್ಯವಾದುದೆಂದು ಎನಿಸುತ್ತಲಿದೆ. ಎಂತಲೇ ಅವರು ನೆರೆಯಲ್ಲಿರುವ ಪ್ರಬಲ ರಾಷ್ಟ್ರದೊಂದಿಗೆ ಸ್ನೇಹದಿಂದಿರಲು ಮನವಾರೆ ಬಯಸುತ್ತಿದ್ದಾರೆ.

ಪಾಕಿಸ್ತಾನ್-ಭಾರತಗಳ ನಡುವೆ ವಿದ್ವೇಷ ಭಾವನೆಯನ್ನು ಹುಟ್ಟಿಸಿದ ಸಮಸ್ಯೆಗಳು ನಿಜವಾದ ಸಮಸ್ಯೆಗಳಲ್ಲ; ಕೃತ್ರಿಮವಾದುವುಗಳು. ಕೇವಲ ದ್ವೇಷಪ್ರಸಾರಣೆಗಾಗಿಯೆ ಲೀಗ್ ನಾಯಕರು ನಿರ್ಮಿಸಿದ ಸಮಸ್ಯೆಗಳವು. ಆ ಸಮಸ್ಯೆಗಳನ್ನು ಪ್ರಾಮಾಣಿಕ ಸಹಾನುಭೂತಿಯಿಂದ, ಬಿಡಿಸಲೇಬೇಕೆಂದರೆ ಅದಕ್ಕೆ ವಿಲಂಬವಾಗದು.

ಪಂ. ನೆಹರು ಅವರಂತೂ ವಿಶ್ವಸ್ನೇಹಜೀವನವನ್ನು ಬಯಸುವವರು. ಪಾಕಿಸ್ತಾನದ ಸ್ನೇಹಹಸ್ತವನ್ನು ಅವರು ಎಂದೂ ತಿರಸ್ಕರಿಸಲಾರರು. ಆಯೂಬ್ ಖಾನರ ಸ್ನೇಹಯಾಚನೆಯ ಪ್ರಾಮಾಣಿಕತನದ ಮೇಲೆಯೆ ಭವಿಷ್ಯದ ಶುಭಸಮಯ ಅವಲಂಬಿಸಿ ಕುಳಿತಿದೆಯಿಷ್ಟೆ! ❋

ಪ್ರತಿಫಲ

(ಐದು ದೃಶ್ಯಗಳ ಒಂದು ಪೌರಾಣಿಕರೂಪಕ)

ಪಾತ್ರಗಳು

ದೇವಯಾನಿ:— (ದೈತ್ಯಗುರು ಶುಕ್ರಾಚಾರ್ಯರ ಪುತ್ರಿ)
ಶರ್ಮಿಷ್ಠಾ:— (ದೈತ್ಯರಾಜ ವೃಷಪರ್ವನ ಪುತ್ರಿ)
ಶಾಲಿನಿ:— (ವೃಷಪರ್ವನ ಸೋದರನ ಮಗಳು)
ನಳಿನಿ:— (ಸೇನಾಪತಿ ಕೇತುಮಂತನ ಮಗಳು)
ಶುಕ್ರಾಚಾರ್ಯ:— (ದೈತ್ಯರಾಜಗುರು)
ಯಯಾತಿ:— (ಚಂದ್ರವಂಶದ ಒಬ್ಬ ರಾಜ)

೧ನೆಯ ದೃಶ್ಯ

[ಶುಕ್ರಾಚಾರ್ಯರ ಆಶ್ರಮದ ಮುಂಭಾಗ: ನಯನಮನೋಹರವಾದ ಹೂದೋಟ. ಫಲಪುಷ್ಪಭರಿತವಾದ ಗಿಡಮರಗಳು. ಮಂಜುಳರವದಿಂದ ಉದ್ಯಾನದ ನಡುವೆ ನಿರ್ಮಲ ಝರಿಯೊಂದು ಹರಿಯುತ್ತಿದೆ. ಹಕ್ಕಿಪಕ್ಕಿಗಳ ಕಲರವ ಕಿವಿಗಿಂಪಾಗಿದೆ. ರಂಗಸ್ಥಳದ ಒಂದು ಭಾಗದಿಂದ ಶಾಲಿನಿ ಹೂದೋಟದ ಚೆಲುವನ್ನು ನೋಡುತ್ತ ಬರುವಳು. ಶಾಲಿನಿ ಇಪ್ಪತ್ತು-ಇಪ್ಪತ್ತೈದರ ಸುಂದರ ಯುವತಿ. ನಿರಾಭರಣೆಯಾಗಿ ಬಿಳಿ ಸೀರೆ ಉಟ್ಟಿದ್ದಾಳೆ. ಶಾಂತಿ, ಸತ್ತ್ವಗುಣಗಳು ಮುಖದಲ್ಲಿ ಎದ್ದುಕಾಣುತ್ತಿವೆ. ಅತ್ತಣಿಂದ ನಳಿನಿ ತೀವಿಯಿಂದ ಎತ್ತಲೋ ನೋಡುತ್ತ ಬರುವಳು. ಹದಿನೈದು-ಹದಿನಾರು ವಯಸ್ಸು. ಬಹು ದರ್ಪಿಷ್ಠೆ. ನಳಿನಿ ಸರ್ವಾಭರಣಭೂಷಿತೆಯಾಗಿ ಪೀತಾಂಬರ ಉಟ್ಟಿದ್ದಾಳೆ. ಬೇಕೆಂದೇ ಶಾಲಿನಿಗೆ ಡಿಕ್ಕಿ ಹೊಡೆಯುತ್ತಾಳೆ.]

ನಳಿನಿ:— (ಮುಖ ಗಂಟಿಕ್ಕಿ) ಓಹೋ! ಮೈಮೇಲೆ ಸ್ವಲ್ಪ ಪ್ರಜ್ಞೆಯಿರಲಮ್ಮಾ ಶಾಲಿನಿ. ಬಡಸಖಿಯರು ಕಣ್ಣಿಗೇ ಬೀಳದಂತಾದೆವಲ್ಲಾ. ತಡವಿಕೊಂಡೇ ಹೋಗುನೆಯಲ್ಲಾ.

ಶಾಲಿನಿ:— ಕ್ಷಮಿಸಮ್ಮಾ ನಳಿನಾ. ಈ ಹೂಗಳ ಸೊಬಗನ್ನು ನೋಡುತ್ತ ಮೈಮರೆತಿದ್ದೆ. ನಿನ್ನ ಆಗಮನವೂ ಅನಿರೀಕ್ಷಿತವೇ. ಮಹಾರಾಜರು ವಸಂತೋತ್ಸವವನ್ನು ಈ ವರ್ಷ ತುಂಬ ವೈಭವದಿಂದ ಮಾಡುವರಂತೆ. ನಾಳೆಯಿಂದಲೇ ಉತ್ಸವಾರಂಭ. ದೇವಯಾನಿಯೂ ನಾನೂ ತುಂಬಾ ಶ್ರಮಿಸಿ, ನಾಳೆಯ ವೇಳೆಗೆ ಪುಷ್ಪಗಳೆಲ್ಲಾ ಪಲ್ಲವಿಸಿ ನಲಿಯುವಂತೆ ಮಾಡಿದ್ದೇವೆ. ನೋಡು ಸಖಿ— ಹೂದೋಟ ಚೆನ್ನಾಗಿದೆಯೇ?

ನಳಿನಾ:— ಪರವಾಗಿಲ್ಲ— ತಕ್ಕಮಟ್ಟಿಗಿದೆ; ಆದರೆ ನಮ್ಮ ವಸಂತೋದ್ಯಾನದ ಮುಂದೆ ಇದು ಸೂರ್ಯನ ಮುಂದಿನ ಸೊಡರು. ಇಲ್ಲಿಯ ಹಣ್ಣುಗಳು ಮಾತ್ರ ತುಂಬಾ ರುಚಿ. ಆ ಪನ್ನೀರಲಿ ಹಣ್ಣುಗಳನ್ನು ನೋಡಿದಾಗಿನಿಂದ ನನ್ನ ಬಾಯಲ್ಲಿ ನೀರೂರಿದೆ.

ಶಾಲಿನಿ:— ವಸಂತೋದ್ಯಾನ ರಾಜೋದ್ಯಾನ; ಆದರೆ ಇದು ನಾವೇ ಪ್ರೀತಿಯಿಂದ ಬೆಳೆಸಿದ ಉದ್ಯಾನ. ನಮಗೆ ಇದರ ಮೇಲೆಯೇ ಅಭಿಮಾನ ಹೆಚ್ಚು. ಇಲ್ಲಿ ಬೆಳೆದ ಹೂ-ಹಣ್ಣುಗಳೆಲ್ಲಾ ದೇವ-ಬ್ರಾಹ್ಮಣರ ಸೇವೆಗಾಗಿ ಮುಡಿಪು. ಎಲ್ಲಿ....ಸಖಿ ಶರ್ಮಿಷ್ಠೆ?

ನಳಿನಿ:— (ಬಿಂಕದಿಂದ) ರಾಜಕುಮಾರಿಯ ನೆನಪಾದರೂ ಇದೆಯಲ್ಲ! ಗುರುಗಳಾಶ್ರಮ ಸೇರಿ, ದೇವಯಾನಿಗೆ ಆಪ್ತಳಾದೆನೆಂದು ನಿನಗೆ ಈಚೆಗೆ ತುಂಬ ಜಂಬ ಬಂದಿದೆ, ಶಾಲಿನಿ. ಮೊದಲಿನಂತೆ ನಮ್ಮೊಡನೆ ಆಟಪಾಟಕ್ಕೆ ಬರುವುದಿಲ್ಲ. ಹಿಂದೆ ನಾವು ಮೂವರೂ ಹೇಗೆ ಅಕ್ಕತಂಗಿಯರಂತಿದ್ದೆವು! ಈಗ ನಿನಗೆ ಅಧ್ಯಯನ, ಆ ಸಖಿಯ ಪರಿಚಾರಿಕೆ, ಈ ಉದ್ಯಾನವನದ ಕೆಲಸ— ಇದರಲ್ಲೇ ಕಾಲಯಾಪನೆ. ಅಲ್ಲದೆ ಆ ಗರ್ವಿಷ್ಠೆ ದೇವಯಾನಿಯೊಡನೆ ಸೇರಿ ನಿನಗೂ ಗರ್ವ ಬಂದಿದೆ.

ಶಾಲಿನಿ:— (ದೀನಳಾಗಿ) ನಳಿನಿ, ಏಕೆ ಹಾಗೆ ಚುಚ್ಚುಮಾತನಾಡುವೆ? ಯಾವ ವಿಷಯದಲ್ಲಿ ನಾನು ಜಂಬ ಪಡಲಿ? ತಂದೆ ಯುದ್ಧದಲ್ಲಿ ಹತರಾದರು. ತಾಯಿ ಸತಿ ಹೋದಳು. ತಬ್ಬಲಿಯಾದ ನನ್ನನ್ನು ಮಹಾರಾಜ-ರಾಣಿಯರು ತಂದೆತಾಯಿಗಳಂತೆ ರಕ್ಷಿಸಿದರು. ಮಂತ್ರಿಕುಮಾರನಾದ ಶೂರಾಗ್ರಣಿ ಸುಚಂದ್ರನಿಗೆ ನನ್ನನ್ನಿತ್ತು ಲಗ್ನ-ಮಾಡಿದರು. ಹತಭಾಗ್ಯಳಾದ ನನ್ನ ಪತಿ ಸುರಾಸುರರ ಯುದ್ಧದಲ್ಲಿ ಮಡಿದಾಗ, ಸತಿ ಹೋಗಲೂ ನನಗೆ ಅನುಮತಿ ಕೊಡಲಿಲ್ಲ. ಹಾಯ್, ಮಂದಭಾಗ್ಯಳಾದ ನನಗೇಕಮ್ಮಾ ಗರ್ವ? ಆಚಾರ್ಯರೂ ರಾಣಿಯವರೂ ತಾಯಿಲ್ಲದ ದೇವಯಾನಿಗೆ ಜೊತೆಯಾಗಿ ಸಖಿಯಾಗಿ ಇಲ್ಲಿರೆಂದು ಒತ್ತಾಯ ಮಾಡಿದ್ದರಿಂದ ಇಲ್ಲಿ ನಿಂತೆ. ಏಕಮ್ಮಾ ನನ್ನನ್ನು ಆಕ್ಷೇಪಿಸುವೆ?

ನಳಿನಿ:— ಛೇ, ತಮಾಷೆಗೆ ಹಾಗೆಂದರೆ ಕಣ್ಣೀರಿಡುವೆಯಲ್ಲಾ! ನೋಡು, ಬಂದ ಕೆಲಸವನ್ನೇ ಮರೆತಿದ್ದೆ. ಉತ್ಸವಕ್ಕಾಗಿ ವಸಂತೋದ್ಯಾನವನ್ನು ತುಂಬ ಚೆನ್ನಾಗಿ ಶೃಂಗರಿಸಿದ್ದಾರೆ. ರಾಜಕುಮಾರಿ ಅಲ್ಲಿಗೆ ಹೋಗಿ ಜಲಕ್ರೀಡೆಯಾಡಿ ಬರಲಿಚ್ಛಿಸಿದಳು. ರಾಣಿಕುವರು, ದೇವಯಾನಿ ಬಂದರೆ ಅವಳನ್ನೂ ಕರೆದೊಯ್ಯಿಂದರು. ನನ್ನನ್ನು ಕೇಳಬಾರೆಂದು ರಾಜಕುಮಾರಿ ಕಳುಹಿದಳು. ಎಲ್ಲಿ ನಿನ್ನ ದೇವಯಾನಿ?

ಶಾಲಿನಿ:— ಈಗ ಶಾನೇ ದೇವಯಾನಿ ಆಚಾರ್ಯರೊಡನೆ ಅರಮನೆಗೆ ಹೋದಳಲ್ಲಾ! ಈ ದಿನ ತುಂಬಾ ಬಿಸಿಲು. ಅಮೃತಸರೋವರದಲ್ಲಿ ಜಲಕ್ರೀಡೆಯಾಡುವುದು ತುಂಬಾ ಹಿತಕರ. ಸಖಿಯರ ಸಹವಾಸ ಸ್ವರ್ಗವಾಸವಂತೆ ಸುಖಕರ. ದೇವಯಾನಿ ಖಂಡಿತ ಬರಲೊಪ್ಪುವಳು, ನಳಿನಾ.

ನಳಿನಿ:— ಅವಳು ಬರುವವರೆಗೂ ನಾನಿಲ್ಲಿ ಕಾದು ಕುಳಿತಿರಬೇಕೇನು?

ಶಾಲಿನಿ:— ನೀವು ಮುಂದೆ ಹೋಗಿರಿ. ನಾನಿಬ್ಬರೂ ಅನಂತರ ಬರುತ್ತೇವೆ. ಇಲ್ಲ ಇಲ್ಲ— ನಾನು ಬರಲಾಗುವುದಿಲ್ಲ. ಈದಿನ ಆಚಾರ್ಯರು ಮಹಾದೇವನಿಗೆ ವಿಶೇಷಪೂಜೆ ಮಾಡುವರು. ಅದಕ್ಕಾಗಿ ತುಂಬೆ, ಸಂಪಿಗೆ, ಮಲ್ಲಿಗೆ, ಬಿಲ್ವಪತ್ರೆಗಳ ಮಾಲೆಗಳನ್ನು ಸಿದ್ಧಗೊಳಿಸಬೇಕು.

ನಳಿನಿ:— ಸಂಜೆ ಬಂದು ಕಟ್ಟಿದರಾಯಿತು, ಬಾ [ಅತ್ತ ನೋಡಿ] ಓ, ನೋಡಿದೆಯಾ, ರಾಜಕುಮಾರಿ ಬಂದೇ ಬಿಟ್ಟಳು!

[ಶರ್ಮಿಷ್ಠೆಯ ಪ್ರವೇಶ. ಶರ್ಮಿಷ್ಠೆ ಒಳ್ಳೆಯ ರೂಪಸಿ. ಹೆಮ್ಮೆ, ದಾಷ್ಟ್ಯಕ ಮುಖದಲ್ಲಿ ಸ್ಪಷ್ಟವಾಗಿದೆ. ನೀಲಿ ಕುಪ್ಪಸ ತೊಟ್ಟು ನಸುಗೆಂಪು ಬಣ್ಣದ ಪೀತಾಂಬರ ಉಟ್ಟಿದ್ದಾಳೆ. ಸರ್ವಾಭರಣ ಭೂಷಿತೆ]

ರಾಜಕುಮಾರಿ, ತಡವಾಯ್ತೆಂದು ಕೋಪಿಸಬೇಡ. ದೇವಯಾನಿ ಆಚಾರ್ಯರೊಡನೆ ಅರಮನೆಗೇ ಹೋದಳಂತೆ. ಶಾಲಿನಿಗೆ ಹೂಮಾಲೆ ಕಟ್ಟುವ ಕೆಲಸವು ಇದೆಯಂತೆ— ಬರುವುದಿಲ್ಲವೆನ್ನುತ್ತಾಳೆ.

ಶರ್ಮಿಷ್ಠೆ:— (ಕೀಳಿಯಿಂದ) ಆದೆಲ್ಲಾ ಸಹವಾಸ ದೋಷ, ನಳಿನಿ! ನಾವೆಲ್ಲಾ ಜ್ಞಾನಿಗಳು, ಬಂಧುಗಳು— ಆದರೂ ಶಾಲಿನಿಗೆ ದೇವಯಾನಿಯೇ ಪರಮಾಪ್ತಳು. ಅಯ್ಯೋ, ಶಾಲಿನಿಯ ಈ ವೇಷ ನೋಡು— ರಾಜಬಂಧುವಾದರೂ ದಾಸಿಯಂತಿರುವುದನ್ನು ಕಂಡು ನನ್ನ ಮೈ ಬೆಂಕಿಯಾಗುತ್ತಿದೆ! ದಿವ್ಯಾಭರಣ ತೊಟ್ಟು ಮೆರೆವ ಆ ದೇವಯಾನಿ, ತನ್ನ ಸಖಿಯನ್ನು ಹೀಗೆ ನಡೆಸಿಕೊಳ್ಳುವುದೇ? ಸಖಿಯನ್ನು ದಾಸಿಯಂತೆ ಕೀಳಾಗಿ ಕಾಣುತ್ತಿದ್ದಾಳೆ. ನನ್ನ ತಂದೆ ಆಚಾರ್ಯರ ಮೇಲಿನ ಗೌರವದಿಂದ ಆ ದೇವಯಾನಿಗೆ ಬೇಕಾದಂತೆ ವಸ್ತ್ರಾಭರಣವೀಯುತ್ತಾರೆ. ಆ ಅಲ್ಪಳಾದ ದೇವಯಾನಿಗೆ ಐಶ್ವರ್ಯ ಬಂದರೂ ಹಿರಿಮೆ ಬರಲಿಲ್ಲ. ಕೊಡುಗೈದಾನ, ಆಶ್ರಿತವಾತ್ಸಲ್ಯ ಇತ್ಯಾದಿ ರಾಜವಂಶದವರ ಹುಟ್ಟುಗುಣ ಬೇರೆಯವರಿಗೆ ಬಂದೀತೇ? ಶಾಲಿನಿ, ಬಾ ನಮ್ಮ ಅರಮನೆಗೇನೇ; ಹಿಂದಿನಂತೆ ಒಬ್ಬಾಗಿ ಆಡಿಪಾಡೋಣಂತೆ.

ನಳಿನಿ: — ಹೌದು, ಹಾಗೇ ಮಾಡು ಶಾಲಿನಿ. ರಾಜಪುತ್ರಿಯರ ಔದಾರ್ಯ ಬೇರೆಯವರಿಗೆ ಬಂದೀತೇ? ನನ್ನತ್ತ ನೋಡು. ರಾಜಕುಮಾರಿ ತನ್ನಂತೆಯೇ ನನಗೂ ಉಡಿಗೆ-ತೊಡಿಗೆ ಕೊಡುತ್ತಾಳೆ.

ಶಾಲಿನಿ:— (ನಸುನಕ್ಕು) ಸಖಿಯರೇ, ನಿಷ್ಕಾರಣವಾಗಿ ದೇವಯಾನಿಗೇಕೆ ದೋಷಕೊಡುವಿರಿ? ಜೀವನದಲ್ಲಿ ನೊಂದ ನಾನು ನಿರಕ್ತಿಯಿಂದ ಗಂಧಪುಷ್ಪ-ವಸ್ತ್ರಾಭರಣಗಳ ಮೋಹವನ್ನು ದೂರಮಾಡಿದ್ದೇನೆ. ಆಚಾರ್ಯರ ಉಪದೇಶಾಮೃತದಲ್ಲೇ ಸಕಲ ಭೋಗಭಾಗ್ಯಗಳ ಸಾರವನ್ನೂ ಕಾಣುತ್ತಿದ್ದೇನೆ. ಅರಮನೆ ಎಲೆಮನೆಗಳೆಲ್ಲಾ ನನಗೆ ಸಮಾನವೇ! ದೇವಯಾನಿ ಯಾವ ಭೇದವನ್ನೂ ಮಾಡದೆ ಅಕ್ಕನಂತೆ, ತಾಯಿಯಂತೆ ನನ್ನನ್ನು ಕಂಡುಕೊಂಡಿದ್ದಾಳೆ. ಅವಳದೆಲ್ಲ ನನ್ನದೇ— ಎಂದು ಪೂರ್ಣ ಸ್ವಾತಂತ್ರ್ಯಕೊಟ್ಟಿದ್ದಾಳೆ. ನಿಮಗೇಕೆ ಅವಳಲ್ಲಿ ಇಷ್ಟು ದ್ವೇಷ, ಇಷ್ಟು ತಿರಸ್ಕಾರ?

ಶರ್ಮಿಷ್ಠೆ:— ಸಖಿ, ನಿನ್ನ ವಿಜ್ಞಾನಕ್ಕಾಗಿ ಮರುಕವಾಗುತ್ತಿದೆ. ಆ ದೇವಯಾನಿ ಹೊನಿನಂತಿದ್ದರೂ ಹಾವಿನಂತಹ ಹೃದಯದವಳು. ರತ್ನದಂತಿರುವ ಕೆಂಡ ಅವಳು. ಒಮ್ಮೆ ಅವಳನ್ನು ಅಕ್ಕನೆಂದು ನಾನೂ ಭಾವಿಸಿದ್ದೆ. ನಮ್ಮಮ್ಮನಿಗಂತೂ ಈಗಲೂ ನನಗಿಂತಲೂ ಅವಳೇ ಪ್ರಿಯಳು. ಆದರೆ ಅವಳು ಯಾವ ಪ್ರೀತಿ-ಗೌರವಕ್ಕೂ ಅರ್ಹಳಲ್ಲ.

ಶಾಲಿನಿ:— ಅದೇಕೆ ಶರ್ಮಿಷ್ಠೆ, ಅವಳಲ್ಲಿ ಏನು ದೋಷ ಕಂಡಿರುವೆ?

ಶರ್ಮಿಷ್ಠೆ:— (ಬಿರುಸಾಗಿ) ಅವಳು ಕೃತಘ್ನಳು! ಲೋಕದಲ್ಲಿ ಎಲ್ಲ ತಪ್ಪಿಗೂ ಕ್ಷಮೆಯುಂಟು— ಆದರೆ ಕೃತಘ್ನತೆ ಅಕ್ಷಮ್ಯ, ಮನುಜಕುಲಘಾತಕಿಯಾದ ಸ್ವಾರ್ಥಿಯವಳು. ಉಪ್ಪುಂಡ ಮನೆಗೆ ಎರಡು ಬಗೆದಿರುವ ಕೃತಘ್ನೆ ಅವಳು.

ನಳಿನಿ:— ನಿಜ ರಾಜಕುಮಾರಿಯ ಮಾತು! ನನ್ನೊಡನೆ ಎಷ್ಟೋ ಸಲ ರಾಜಕುಮಾರಿ ಈ ವಿಷಯ ಹೇಳಿಕೊಂಡು ಸಂಕಟ ಪಟ್ಟಿದ್ದಾಳೆ.

ಶಾಲಿನಿ:— ಆದರೆ ನನಗೆ ನಿಮ್ಮ ಮಾತು ಅರ್ಥವೇ ಆಗುತ್ತಿಲ್ಲವಲ್ಲಾ!

ಶರ್ಮಿಷ್ಠೆ:— ಆಗಲೇ ಹೇಳಿದೆನಲ್ಲಾ— ಸಹವಾಸದೋಷವೆಂದು! ದೇವಯಾನಿಯಂತೆ ಸ್ವಾರ್ಥಸುಖವೇ ಸರ್ವಸ್ವವೆಂದು ಕೊಳ್ಳುತ್ತಿರುವೆ ನೀನು. ಅಸುರರಾಜಪುತ್ರಿಯಾದ ನನಗೆ ಅಸುರ ರಾಜ್ಯಾಭಿವೃದ್ಧಿಯೇ ಮುಖ್ಯ ಗುರಿ. ರಾಜನೀತಿಯನ್ನು ಸೋದರರೊಡನೆ ನಾನೂ ಕಲಿಯುತ್ತಿದ್ದೇನೆ. ರಾಜಬಂಧುವಾದ ನೀನು ಸಹ ರಾಜ್ಯದ ಕ್ಷೇಮವನ್ನೇ ಗುರಿಯಾಗಿಟ್ಟುಕೊಳ್ಳಬೇಕು.

ನಳಿನಿ:— ನಿಜ ರಾಜಕುಮಾರಿಯ ಮಾತು. ನಾವೆಲ್ಲ ರಾಜವಂಶೀಯರು! ಆ ದೇವಯಾನಿಗೇನು? ರಾಜ್ಯವಿದ್ದರೆಷ್ಟು ಹೋದರೆಷ್ಟು?

ಶರ್ಮಿಷ್ಠೆ:— (ಕೆಡುಗಚ್ಚಿ) ಹಾಗಿಲ್ಲದಿದ್ದರೆ ಆಜೇಯರಾಗಿದ್ದ ಅಸುರರು ಸುರರಿಂದ ಪರಾಜಿತರಾಗಬೇಕಿತ್ತೇ? ಕಚನನ್ನು ಮೋಹಿಸಿ,

ಆಚಾರ್ಯರನ್ನು ಪೀಡಿಸಿ ಸಂಜೀವಿನೀ ವಿದ್ಯೆಯನ್ನು ಸುರರ ಹಸ್ತಗತ ಮಾಡಿಸಿದವಳು ಈ ದೇವಯಾನಿಯಲ್ಲವೇ? ಅಂದಿನಿಂದ ಸುರರು ನಮಗೆ ಸಮಬಲರಾದರು, ಪ್ರಬಲರಾದರು. ಸಂಜೀವಿನೀ ವಿದ್ಯೆಯನ್ನು ಎರಡು ಪಕ್ಷದವರೂ ಉಪಯೋಗಿಸಬಾರದೆಂದು ಕರಾರಾಯಿತು. ನಿನ್ನ ಪಿತಪತಿಯರು ಹತರಾಗಲು ಅದೇ ಕಾರಣ. ಅಂತಹ ಕೃತಘ್ನೆಳೊಡನೆ ನಿನಗೆ ಸಖ್ಯ! ಶಾಲಿನಿ, ಅಸುರಕುಲೋನ್ನತಿಗಾಗಿ ಅವಳು ಕಚನ ಮೇಲಿನ ವ್ಯಾಮೋಹ ತೋರೆದಿದ್ದಲ್ಲಿ, ಅವಳ ಪಾದುಕೆಗಳನ್ನು ನನ್ನ ಮುಸ್ತಕದಲ್ಲಿಟ್ಟುಕೊಂಡು ಮೆರೆಸುತ್ತಿದ್ದೆ! [ಉದ್ರಿಕ್ತಳಾಗಿ] ಆ ಪಾಪಿ ಹಾಗೆ ಮಾಡಲಿಲ್ಲ, ಹಾಗೆ ಮಾಡಲಿಲ್ಲ! ಸ್ವಾರ್ಥಸುಖಕ್ಕಾಗಿ ದೇಶಹಿತವನ್ನು ಬಲಿಕೊಟ್ಟಳು. ತಂದೆಯ ಒಡಲನ್ನೇ ಒಡೆದುಕೊಂಡು ಕಚ ಬರಲೆಂದು ಒತ್ತಾಯ ಮಾಡಿದಳು. ಆಚಾರ್ಯರು ಬೇರೆ ದಾರಿಗಾಣದೆ, ದನುಜರ ಸ್ವತ್ತಾಗಿದ್ದ ಸಂಜೀವಿನೀ ವಿದ್ಯೆಯನ್ನು ಕಚನಿಗುಪದೇಶಿಸಿದರು. ಆಗಿನಿಂದ ದೇವಯಾನಿಯನ್ನು ಕಂಡರೆ ನನ್ನ ರಕ್ತ ಕುದಿಯುತ್ತದೆ. ಅವಳ ಕತ್ತು ಹಿಸುಕಲೇ, ರಕ್ತಹೀರಲೇ, ಕಡಿದು ಬಿಸುಡಲೇ— ಎಂಬಷ್ಟು ರೋಷನೇರುತ್ತದೆ [ಕೋಪದಿಂದ ಬುಸುಗುಟ್ಟುವಳು.]

ಶಾಲಿನಿ:— (ಮೈದಡವಿ) ಶಾಂತಳಾಗು ಶರ್ಮಿಷ್ಠಾ, ನಿನ್ನ ಕುಲಾಭಿಮಾನ ನನಗೆ ಗೊತ್ತು. ರಾಜಮುಷಿಯಾಗುವ ನಿನಗೆ ಕೋಪ ತರವಲ್ಲ. ದನುಜಕುಲಕ್ಕೆ ಕಳಂಕ ತಂದಿದೆ ಈ ಕೋಪ. ಕಚ ಸಾವಿರ ವರ್ಷ ಆಚಾರ್ಯರ ಶಿಷ್ಯನಾಗಿದ್ದರೂ ಸಂಜೀವಿನೀ ವಿದ್ಯೆ ಅವನಿಗೆ ದಕ್ಕುತ್ತಿರಲಿಲ್ಲ. ಕಚನ ಮೇಲಿನ ದ್ವೇಷದಿಂದ ಆಚಾರ್ಯರಿಗೆ ವಂಚನ ಮಾಡಿದ ಕಾರಣ, ಸಂಜೀವಿನೀ ವಿದ್ಯೆ ಅವನಿಗೆ ಲಭಿಸಿತು. ದೇವಯಾನಿ ಕೇವಲ ನಿಮಿತ್ತ ಮಾತ್ರ.

ನಳಿನಿ:— ಎಷ್ಟಾದರೂ ಶಾಲಿನಿ ದೇವಯಾನಿಯ ಸಖಿ. ಅವಳ ಪಕ್ಷ ವಹಿಸಿ ಮಾತನಾಡುತ್ತಾಳೆ!

ಶಾಲಿನಿ:— ನಾನು ಯಾರ ಪಕ್ಷವನ್ನೂ ವಹಿಸಿಲ್ಲ. ಸತ್ಯ, ಧರ್ಮ ಇದ್ದರತ್ತ ನಾನು. ಶರ್ಮಿಷ್ಠೆ-ದೇವಯಾನಿಯರು ಎರಡು ಕಣ್ಣು ಳ್ತಿರುವಾಗ ಯಾರ ಪಕ್ಷ ವಹಿಸಲಿ? ಇವರಿಬ್ಬರ ಹಿತಕ್ಕಾಗಿ ಸುಖ ಕ್ಕಾಗಿ ಈ ಜೀವನಿಟ್ಟುಕೊಂಡಿರುವೆನು. ಇಲ್ಲದಿದ್ದರೆ ಯಾವ ಸೌಭಾಗ್ಯ ಕ್ಕಾಗಿ ನಾನು ಬಾಳಬೇಕಿತ್ತು? (ಕಣ್ಣೀರು ಮಿಡಿಯುವಳು)

ಶರ್ಮಿಷ್ಠಾ:— ನಳಿನಿಯ ಮಾತಿನಿಂದ ನೋಯಬೇಡ ಸಖಿ. ನಡೆ. ಜಲಕ್ರೀಡೆಯಾಡಿ ವಿನೋದದಿಂದ ವಿಹರಿಸುವ! ದೇವಯಾನಿ ಬಾರದಿದ್ದರೆ ಪೀಡೆ ಕಳೆಯಿತು.

ಶಾಲಿನಿ:— ಸಖಿ, ಶೀಘ್ರಕೋಪವನ್ನೂ ದೀರ್ಘದ್ವೇಷವನ್ನೂ ಬಿಟ್ಟರೆ, ನಿನ್ನಂತಹ ಕನ್ಯಾರತ್ನ ತ್ರಿಲೋಕದಲ್ಲೂ ದುರ್ಲಭ. ಚಂದ್ರಬಿಂಬದಲ್ಲಿಯ ಕಳಂಕದಂತಿರುವ ನಿನ್ನ ಈ ದೋಷವೊಂದನ್ನು ಪರಿಹರಿಸಿಕೊಂಡರೆ, ಪೂರ್ಣ ಕಳೆಯಿಂದ ಶೋಭಿಸುವೆ. ಸದಾ ಹೊಗಳಿಕೆಯ ಸಿಹಿಯುಂಡಿರುವ ನಿನಗೆ ನನ್ನ ಹಿತವಾದ ಕಹಿಯಾಗುವುದೇನೋ.

ಶರ್ಮಿಷ್ಠಾ:— (ಉದಾಸಳಾಗಿ) ಆಹಾ, ದೇವಯಾನಿಯಲ್ಲಿ ಯಾವ ಮಂತ್ರಬಲವಿದೆಯೋ! ಎಲ್ಲದನ್ನೂ ಸಮ್ಮೋಹನಗೊಳಿಸಿಬಿಡುವಳು. ಶಾಲಿನಿ ಅವಳ ಹೊಗಳುಭಟ್ಟಿ. ಆಚಾರ್ಯರಂತೂ ಅವಳ ಸೂತ್ರದ ಗೊಂಬೆ! ನನ್ನ ತಂದೆ-ತಾಯಿಯರೂ ಅವಳ ಪಕ್ಷಪಾತಿಗಳು. ಗುಲಗಂಜಿಗೆ ತನ್ನಲ್ಲಿಯ ತಪ್ಪು ಕಾಣದು 'ಸತ್ಯಧರ್ಮವಿದ್ದತ್ತ ನಾನು' ಎಂದು ಹೊಗಳಿಕೊಂಡೆಯಲ್ಲವೆ? ದೇವಯಾನಿಯ ದಾಸಿಯಾದ ನಿನಗೆ, ಒಡತಿಯನ್ನು ದೂಷಿಸುವವರೆಲ್ಲಾ ದೋಷಿಗಳೇ! ಒಡತಿಯ ದೋಷಗಳೆಲ್ಲ ಸುಗುಣಗಳೇ. ಅಮ್ಮ ನಿನ್ನನ್ನೆಷ್ಟು ಆದರಿಸುತ್ತಾರೆ; ಆದರೆ ನಿನ್ನ ಪ್ರತ್ಯುಪಕಾರ ನೋಡು! ಕೊಳೆತ ಹೆಣ್ಣಿನೊಡನಿದ್ದ ಒಳ್ಳೆಯ ಹಣ್ಣು ತಾನೂ ಕೊಳೆವುದಂತೆ. ನೀನು ಸಹ ಕೃತಘ್ನಳಾಗಿಬಿಟ್ಟೆ. ಛೀ, ರಾಜಬಂಧುವಾಗಿ ಕುಲಘಾತಕಿಯಾಗಿರುವೆಯಲ್ಲಾ!

ನಳಿನಿ:— ಶಾಲಿನಿ, ನಿನ್ನ ತಲೆ ತಿರುಗುತ್ತಿದೆಯೇ? ಆಚಾರ್ಯಪುತ್ರಿಯ ಒಡನಾಡಿಯೆಂದು, ಉಪದೇಶಕ್ಕೆ ಪ್ರಾರಂಭಿಸಿದೆಯಾ? ಶರ್ಮಿಷ್ಠೆ ರಾಜಕುಮಾರಿ; ನಿನ್ನಂತೆ ಊಳಿಗದಾಳಲ್ಲ ತಿಳಿಯಿತೇ?

ಶಾಲಿನಿ:— (ಕಿವಿಮುಚ್ಚಿಕೊಂಡು) ತಪ್ಪಾಯಿತು ಶರ್ಮಿಷ್ಠಾ, ತಪ್ಪಾಯಿತು. ನೀನು ರಾಜಕುಮಾರಿಯೆಂಬುದನ್ನು ಮರೆತು, ತಂಗಿಯೆಂಬ ಸಲಿಗೆಯಲ್ಲಿ ಆಡಿದ ಮಾತನ್ನು ಮನ್ನಿಸು. ಇದೋ ಕೈಮುಗಿಯುವೆನು. [ಶರ್ಮಿಷ್ಠಾ ಸುಪ್ರಸನ್ನಳಾಗುವಳು.]

[ದೇವಯಾನಿ ಉತ್ಸಾಹದಿಂದ ಪ್ರವೇಶಿಸುವಳು. ದೇವಯಾನಿ ಶುಭ್ರವರ್ಣದ ತೇಲುಗಣ್ಣಿನ ಸುಂದರ ಯುವತಿ. ತಿಳಿಹಸುರಿನ ಕುಪ್ಪಸ ಧರಿಸಿ, ಗುಲಾಬಿ ಬಣ್ಣದ ಪತ್ತಲವುಟ್ಟಿದ್ದಾಳೆ. ಶಾಂತಸಿದ್ಧ ಮುಖ ಮುದ್ರೆ. ಮುಕ್ತಾಭರಣ ಧರಿಸಿದ್ದಾಳೆ]

ದೇವಯಾನಿ:— (ಹರ್ಷದಿಂದ) ತಂಗಿ ಶರ್ಮಿಷ್ಠಾ, ಬಹು ಸಂತಸದ ಸುದ್ದಿ ಕೇಳಿದೆ. ಬಹಳ ಸಂತೋಷವಾಯಿತಮ್ಮಾ (ವಿಶ್ವಾಸದಿಂದ ಶರ್ಮಿಷ್ಠೆಯನ್ನು ಆಲಿಂಗಿಸುವಳು. ಶರ್ಮಿಷ್ಠೆ ಮುಖ ಸಿಂಡರಿಸುವಳು. ನಳಿನಿ ಹಲ್ಲುಕಡಿಯುತ್ತ ನೆಟ್ಟಿಗೆ ಮುರಿಯುವಳು. ಶಾಲಿನಿ ಚಕಿತಳಾಗಿ ನೋಡುವಳು) ನಾನು ತಂದೆಯವರೊಡನೆ ಅರಮನೆಗೆ ಹೋಗಿದ್ದೆ. ಮಹಾರಾಜರೇ ಸುದ್ದಿ ತಿಳಿಸಿದರು. ಮೂರು ದಿನದ ವಸಂತೋತ್ಸವ ಕಳೆದನಂತರ, ನಾಲ್ಕನೆಯ ದಿನವೇ ನಿನ್ನ ಸ್ವಯಂವರವಂತೆ.

ಶಾಲಿನಿ:— (ಆನಂದದಿಂದ) ನಿಜವೇ? ಬಹು ಸಂತೋಷ! ಏಕೆ ಸುಮ್ಮನಾದೆ ಶರ್ಮಿಷ್ಠೆ? ಈ ಶುಭಸಮಾಚಾರ ಅನಿರೀಕ್ಷಿತವೇನು?

ಶರ್ಮಿಷ್ಠಾ:— (ಬಿಂಕದಿಂದ) ಅನಿರೀಕ್ಷಿತವೇಕೆ? ಸ್ವಯಂವರದಲ್ಲಿ ಮನಮೆಚ್ಚಿದವನನ್ನು ವರಿಸುವುದು ರಾಜಕುಮಾರಿಯಾದವಳ ಹಕ್ಕು. ಮೆಚ್ಚಿದವನಿಗೆ ಮಾಲೆ ಹಾಕಲಾರದೆ ಭಗ್ನಪ್ರಣಯಿಯಾಗುವ ದುಸ್ಥಿತಿ, ಈ ಅಸುರರಾಜಕುಮಾರಿಗೆ ಎಂದಿಗೂ ಒದಗದು.

ನಳಿನಿ:— ರಾಜಪುತ್ರಿ ರಾಜಮಹಿಷಿಯಾಗುವುದು ಸಹಜವೇ. ಎಲ್ಲರಿಗೂ ಆ ಭಾಗ್ಯ ಲಭಿಸುವುದೇ ?

ಶಾಲಿನಿ:— ನೀನು ಮನದಲ್ಲಿ ನೆಚ್ಚಿರುವಾತ ಯಾರೆಂದು ಕೇಳಬಹುದೇ ? ಯಾವ ಗುಣಾಗ್ರಗಣ್ಯ—ಶೌರ್ಯವೋ, ಔದಾರ್ಯವೋ ರೂಪವೋ ?

ನಳಿನಿ:— (ಶರ್ಮಿಷ್ಠೆಯ ಮುಖನೋಡಿ ಸಮ್ಮತಿ ಪಡೆದು) ರೂಪದಲ್ಲಿ ಮನ್ಮಥ, ಶೌರ್ಯದಲ್ಲಿ ಕಾರ್ತಿಕೇಯ, ಔದಾರ್ಯದಲ್ಲಿ ಬಲಿಮಹಾತ್ಮ! ಕೇವಲ ಅವನ ಸಾಹಸಕೀರ್ತಿ ಕೇಳಿಯೇ ರಾಜಕುಮಾರಿ ಮರುಳಾಗಿದ್ದಾಳೆ. ಅವನ ಹೆಸರನ್ನೂ ಹೇಳಲೇ ? ಯ....ಯಾ....ತಿ!

ದೇವಯಾನಿ:— ಒಳ್ಳೆಯ ಆಯ್ತೆ. ಬಹು ಸಂತೋಷವಾಯ್ತಮ್ಮಾ!

ಶರ್ಮಿಷ್ಠೆ:— ಏಕೆ ? ನಾನು ಹೊರಟು ಹೋಗುವೆನೆಂದೇ ಸಂತೋಷ ?

ದೇವಯಾನಿ:— ಛೇ ಛೇ ಹಾಗೇಕೆ ವ್ಯಂಗ್ಯವಾಡಿಯಾಡುವೆ ಸಖಿ ? ನಿನ್ನ ಬಾಳಿನ ಮಹಾಮಂಗಳವಲ್ಲವೇ ವಿವಾಹ? ನಿನ್ನ ಕಲ್ಯಾಣ ನನಗೆ ಸಂತೋಷವಲ್ಲವೇ ? [ನಳಿನಿ ಮುಖ ವಕ್ರನಾಡುವಳು.]

ನಳಿನಿ:— ಉದ್ಯಾನವನಕ್ಕೆ ಜಲಕ್ರೀಡೆಗಾಗಿ ನೀವೆಲ್ಲ ಹೋಗಿ ಬನ್ನಿ. ನಾನು ಪೂಜೆಗೆ ಅಣಿ ಮಾಡಬೇಕು.

ದೇವಯಾನಿ:— ರಾಣಿಯವರು ನನಗೂ ತಿಳಿಸಿದರು. ಸಂಜೆಯೊಳಗಾಗಿ ಬಂದುಬಿಡುವ, ಬಾ ಸಖಿ!

ಶಾಲಿನಿ:— ನೀವು ಮುಂದೆ ಹೋಗಿ. ನೀವು ನೀರಿನಲ್ಲಿಳಿಯುವುದರೊಳಗೆ ನಾನು ಅಣಿಮಾಡಿಬ್ಬೆ ಬರುವೆ.

ದೇವಯಾನಿ:— ಸರಿ. ನಿನ್ನಿಚ್ಛೆಯಂತೆಯೇ ಆಗಲಿ. ನಡೆಯಿರಿ ಹೋಗೋಣ.

[ಮೂವರೂ ಹೋಗುವರು. ಶಾಲಿನಿ ಚಿಂತಾಕ್ರಾಂತಳಾಗಿ ನಿಲ್ಲುವಳು.]

ಶಾಲಿನಿ:— ತಂಗಿ ಶರ್ಮಿಷ್ಠೆ, ಯಯಾತಿ ಮಹಾರಾಜನ ಮಹಿಷಿಯಾಗಬೇಕೆಂದಿರುವ ನಿನಗೆ ಈ ಪದ-ಮಾತ್ಸರ್ಯಗಳು ಸಲ್ಲವು. ಗುಣಾಗ್ರಗಣ್ಯಳಾಗಬೇಕು ನೀನು. ಹಿತವಾದ ಬೋಧನೆಯ ಬದಲು ನಳಿನಿ ಹೊಗಳುಭಟ್ಟೆಯಾಗಿದ್ದಾಳೆ—ನಿಜ ಗುಲಗಂಜಿಗೆ ತನ್ನ ತಪ್ಪು ಕಾಣದು. ನನಗೇಕೆ ಅನ್ಯರ ದೋಷವಿಮರ್ಶೆ ? ಬಿಲ್ವ ಮರವಡಿ ಪೂಜೆಗೆ ಅಣಿ ಮಾಡುವೆ.

[ತೆರೆ ಬೀಳುವುದು.]

ದಿ ಸದ್ವೈದ್ಯ ಶಾಲಾ (ಪ್ರೈವೇಟ್) ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನಸೇವೆಯಲ್ಲಿ ತೊಡಗಿರುವ ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ

ಅತ್ಯಾಧುನಿಕ ಕ್ರಮದಲ್ಲಿ

ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ ನಿತ್ಯವೂ ತಯಾರಾಗುತ್ತಲಿವೆ.

ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ

ಶಾಖೆಗಳು:

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)

(ಕನ್ನಡ ನೀನು ಬಿಟ್ಟು)

ಯುನೈಟೆಡ್ ಕನ್ಸರ್ನ್ಸ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಕಾವ್ಯ ವಿಮರ್ಶೆಗೆ ಒಂದು ಮಾದರಿ

ಎಂ. ರಾಮಚಂದ್ರ, ಬಿ. ಎ. (ಆನರ್ಸ್) ಧಾರವಾಡ.

ಇಂದಿನ ವಿಮರ್ಶಕರಲ್ಲಿ ಎರಡು ಮಾದರಿಯ ಜನರಿರುವರೆಂದು ಹೇಳಬಹುದು. ತಮ್ಮ ವೈಯಕ್ತಿಕ ಅಭಿರುಚಿ-ಅನುಭವಜ್ಞಾನಗಳನ್ನೆ ವಿಮರ್ಶೆಗೆ ಅಳತೋಲನ್ನಾಗಿ ಇರಿಸಿಕೊಂಡವರು; ವ್ಯಕ್ತಿ-ವ್ಯಕ್ತಿಗಳಲ್ಲಿಯೂ ಸೌಂದರ್ಯಾಭಿರುಚಿ ಬೇರೆ ಬೇರೆ ಬಗೆಯದಾಗಿರುವುದೆಂಬುದನ್ನು ಅರಿತು ಸಾರ್ವತ್ರಿಕ ದೃಷ್ಟಿಯಿಂದ ವಿಮರ್ಶಿಸುವವರು. ಎರಡನೆಯ ರೀತಿಯ ವಿಮರ್ಶಕರ ವಿಮರ್ಶೆ, ಯಾರ ಮನಸ್ಸನ್ನೂ ನೋಯಿಸದಂತಹ ಸತ್ಕೃತಿಯಾಗುವುದು.

'ಕನ್ನಡದಲ್ಲಿ ಆ ಬಗೆಯ ಕಾವ್ಯವು ಅದಲ್ಲದೆ ಬೇರೊಂದಿಲ್ಲ,' ಎಂದು ಲೋಕವಿಶ್ರುತವಾದ ಮುದ್ದಣನ, ಶ್ರೀ ರಾಮಾಶ್ವಮೇಧ'ದ ಕುರಿತು "ಶ್ರೀರಾಮಾಶ್ವಮೇಧದ ರಸತರಂಗಗಳು" ಎಂಬೊಂದು ವಿಮರ್ಶಕ ಗ್ರಂಥವು ಇತ್ತೀಚೆಗೆ ಪ್ರಕಟವಾಗಿದೆ. 'ಜಯಂತಿ'ಯ ಸಪ್ಟಂಬರ್ ಸಂಚಿಕೆಯಲ್ಲಿ ಆ ಗ್ರಂಥವನ್ನು ವಿಮರ್ಶಿಸುತ್ತಾ "....., ನಿಜವಾಗಿಯೂ ಸಹೃಯತೆಯಿಂದೋದಿ ದೇವರಾಣೆಗೂ ರಸಾನುಭೂತಿ ಪಡೆದು ಬರೆದ ಪ್ರಾಮಾಣಿಕ ವಿಮರ್ಶೆ ಇನ್ನೂ ಅಲ್ಪ," "....., ಮುದ್ದಣ ಮುಳುಗಿದ ಆಳ ನಮ್ಮಲ್ಲಿ ಎಷ್ಟು ಜನರಿಗೆ ಗೊತ್ತು ? ಅತನ 'ರಾಮಾಶ್ವಮೇಧ'ವ ಒಡೆದು ಕಾಣುವ ದಿನ್ನೆಗಳೇ ಜೊರತು ತಗ್ಗಿನಲ್ಲಿರುವ ಸೌಂದರ್ಯ ಎಷ್ಟು ಜನರಿಗೆ ಕಂಡಿದೆ?' ಎಂದು ಶ್ರೀಯುತ ಚಂದ್ರಶೇಖರ ಕಂಬಾರರು ಅಭಿಪ್ರಾಯಪಟ್ಟು, ಆ ಗ್ರಂಥವೊಂದು 'ಪ್ರಾಮಾಣಿಕ ವಿಮರ್ಶೆ' ಕಾವ್ಯ ಸೌಂದರ್ಯದ ಸಮರ್ಪಕ ನಿರೂಪಣೆ—ಎಂದುಕೊಂಡಿದ್ದಾರೆ. ಮುದ್ದಣನ ಕಾವ್ಯವಿಮರ್ಶೆಯು ಇಂದು ಇಂತಹದೊಂದು ಅಭಿಪ್ರಾಯಕ್ಕೆ ಎಡೆಯನ್ನಿತ್ತರೆ, ಸುಮಾರು ಮೂವತ್ತಾರು ವರ್ಷಗಳ ಹಿಂದೆ ಪ್ರಕಟವಾದ 'ಮುದ್ದಣ'-- ಎಂಬ ಗ್ರಂಥ, ಅದರಲ್ಲೂ 'ಶ್ರೀ ರಾಮಾಶ್ವಮೇಧ'ದ ವಿಮರ್ಶೆ, ಮತ್ತೊಂದು ಬಗೆಯ ಅಭಿಪ್ರಾಯಕ್ಕೆ ಎಡೆಯನ್ನಿತ್ತಿತು. ಮುದ್ದಣನ ಕಾವ್ಯವನ್ನೂ, ಕಾವ್ಯದ ಕುರಿತು ಪ್ರಕಟವಾಗಿದ್ದ ಅಭಿಪ್ರಾಯವನ್ನೂ, ಪುನರ್ವಿಮರ್ಶಿಸುತ್ತಾ, ಪೂಜ್ಯ ಎಸ್. ವಿ. ರಂಗಣ್ಣನವರು "..... ಈ ವಿಧಿಗಳ ಘನ ಪರೀಕ್ಷೆ, ಖಂಡಿತ ತೀರ್ಪುಗಳನ್ನು ಮುದ್ದಣನ ಕಾವ್ಯವು ಪಡೆದುಕೊಳ್ಳಬಲ್ಲುದೆ" ಎಂದು ಪ್ರಶ್ನಿಸಿದರು. ವಿಮರ್ಶೆಯೆಂಬುದು ಒಂದು ಕಾಲದಲ್ಲಿ ಕವಿ ಮತ್ತು ಕಾವ್ಯದಲ್ಲಿರುವ ಅಭಿಮಾನದ ದ್ಯೋತಕ; ಕೇವಲ ಪ್ರಶಂಸೆ ಮಾತ್ರ ಎಂಬಂತಿತ್ತು. ಆದರೆ ಇದು ಸಲ್ಲದು; ನಿಜವಾದ ವಿಮರ್ಶೆಯ ಲಕ್ಷಣವೆಂದರೆ ಕಾವ್ಯವನ್ನು 'ಘನಪರೀಕ್ಷೆ'ಗೆ ಒಳಪಡಿಸಿ, 'ಖಂಡಿತ ತೀರ್ಪು' ಕೊಡುವುದು. ಅಭಿಮಾನವನ್ನು ಬದಿಗಿರಿಸಿ ಸತ್ಯ ದೃಷ್ಟಿಯಿಂದ ಪರೀಕ್ಷಿಸುವುದು--ಎಂಬ ವಾದವು ಆರಂಭವಾಯಿತು. ಈ ವಾದವು ಹಲವಾರು ಹಿರಿಯರ ಗುಮನವನ್ನು ತನ್ನೆಡೆಗೆ ಸೆಳೆಯಿತು; ಮೆಚ್ಚುಗೆಯನ್ನೂ ಪಡೆಯಿತು. ಅಂತೂ ಕನ್ನಡದಲ್ಲಿ ಎರಡು-ಮೂರು ಬಗೆಯ ವಿಮರ್ಶನ ಪದ್ಧತಿಗೆ ಮುದ್ದಣನ ಕಾವ್ಯವೇ ಕಾರಣವಾಯಿತೆಂಬುದು ಮನನೀಯವಾಗಿದೆ. ಕಾವ್ಯವಿಮರ್ಶೆಯಲ್ಲಿ ಸತ್ಯದೃಷ್ಟಿ, ಅಭಿಮಾನ, ತೀರ್ಪು- ಇವುಗಳ ಕುರಿತು ಎರಡು ಮಾತುಗಳನ್ನಿಲ್ಲಿ ಬರೆಯುತ್ತಿದ್ದೇನೆ.

ವಿಮರ್ಶೆಗಾಗಿ ಇಬ್ಬಗೆಯಿಂದ ಕಾವ್ಯವನ್ನು ಕೈಗೆತ್ತಿಕೊಳ್ಳಬಹುದು. ಒಂದು ಬೆಲೆ ಕಟ್ಟುವ ದೃಷ್ಟಿಯಿಂದ; ಇನ್ನೊಂದು ಸೌಂದರ್ಯ ವಿಶ್ಲೇಷಣೆಯ ಉದ್ದೇಶದಿಂದ. ತೀರ್ಪನ್ನೀಯುವುದೇ ಮುಖ್ಯೋದ್ದೇಶವಾಗಿದ್ದರೆ ವಿಮರ್ಶಕನು 'ಜಡ್ಜನ' ಪೀಠವನ್ನೇರುತ್ತಾನೆ; ರಸಗ್ರಹಣವೆ ಮುಖ್ಯವಾಗಿದ್ದರೆ, ವಿಮರ್ಶಕನು ಕವಿಯನ್ನು ಆತ್ಮೀಯತೆಯಿಂದ ಸಮೀಪಿಸುತ್ತಾನೆ. ಒಬ್ಬನಿಗೆ ಸ್ವಾಭಿಪ್ರಾಯ ಪ್ರದರ್ಶನವೇ ಪ್ರಧಾನ ಲಕ್ಷ್ಯವಾಗಿದ್ದರೆ, ಇನ್ನೊಬ್ಬನಿಗೆ ಕವಿಭಾವಾವಿಷ್ಕರಣವೆ ನೇರವಾದ ಗುರಿ.

'ತೀರ್ಪು' ಎಂದಾಗ ಒಂದು ಪ್ರಶ್ನೆಯು ತಲೆಯೆತ್ತುತ್ತದೆ: ಕಾವ್ಯವಿಮರ್ಶೆಯಲ್ಲಿ ತೀರ್ಪನ್ನೀಯಲ-, ಇದೇ ಕೊನೆಯ ಅಭಿಪ್ರಾಯವೆಂದು ಘಂಟಾಘೋಷವಾಗಿ ಸಾರಿಬಿಡಲು ಸಾಧ್ಯವಿದೆಯೆ ? ಇನ್ನು, ಕಾವ್ಯಲೋಕದಲ್ಲಿ ಸತ್ಯಾಸತ್ಯನಿರ್ಣಯವೂ ಅಷ್ಟೊಂದು ಸುಲಭ ಕಾರ್ಯವಲ್ಲ. ಸತ್ಯಾಸತ್ಯ ಪ್ರಶ್ನೆಯೇಳುವುದು ಮೂರ್ತ(Correct) ವಸ್ತುಗಳ ಕುರಿತಲ್ಲದೆ, ಅಮೂರ್ತ (obstract) ವಿಷಯದಲ್ಲಲ್ಲ. ಕಾವ್ಯವು ಅಮೂರ್ತವಾದುದು. ಹಾಗಿರುವಾಗ ಕಾವ್ಯದ ಯೋಗ್ಯತೆಯ ಕುರಿತು ಇದೇ ಕೊನೆಯ ತೀರ್ಪು, ಇದೇ ಪ್ರಮಾಣವಾಕ್ಯ ಎಂದು ಎದೆತಟ್ಟಿ ಹೇಳುವುದು ಹೇಗೆ ?

ಒಂದು ಗರಿಹೂವಿನಲ್ಲೊ. ಪಿಂಗಾಣಿ ಪಾತ್ರದಲ್ಲೊ ಅಸಾಮಾನ್ಯವಾದ ಸೌಂದರ್ಯವನ್ನು ಕಂಡು ಕವಿಯೊಬ್ಬನು ಕವನಗಳನ್ನು ಕಟ್ಟಿ ನಲಿಯುತ್ತಾನೆ; ನಮ್ಮನ್ನು ನಲಿಸುತ್ತಾನೆ. ಸೌಂದರ್ಯವು ಕಣ್ಣಿನ ಬದುಕಾದರೆ, ಕವಿಗಿರುವುದು ಸೌಂದರ್ಯದೃಷ್ಟಿ. ಒಬ್ಬನು ಕಸಬರಿಕೆಯೊಂದರ ಕುರಿತು ಪ್ರಬಂಧವನ್ನು ಬರೆದಿದ್ದಾನೆ ಎಂದಾಗ, ಕಸಬರಿಕೆಯಲ್ಲಿ ಕಾವ್ಯವಸ್ತು ಎಂದೆನಿಸುವಷ್ಟು ಯೋಗ್ಯತೆಯಿಲ್ಲ- ಅದರಲ್ಲಿ ಕವಿಗೆ ಕೇವಲ ಅಭಿಮಾನವೆಂದು ಯಾರೂ ಉಕ್ಷೇಪಿಸಲಾರರು. ಇನ್ನು ರಾಮಾಯಣ-ಮಹಾಭಾರತಗಳನ್ನು ಆಧಾರವಾಗಿಟ್ಟು ಕಾವ್ಯಗಳನ್ನು ರಚಿಸುವಾಗ, ಕವಿಯ ಮನಸ್ಸು ಅದೆಷ್ಟು ಸೌಂದರ್ಯಪೂರ್ಣವಾಗಿರಬಹುದು ! ಅವನೆಷ್ಟು ರಸಾನೇಶ ಹೊಂದಿರಬಹುದು! ಎಂತೆಂತಹ

ಭಾವನೆಗಳು ಅವನೆದೆಯಲ್ಲಿ ಮೂಡಿರಬಹುದು! ಕಾವ್ಯರಚನೆಯಲ್ಲಿ ಕವಿಯು ಎಷ್ಟು ಆಸಕ್ತಿ ವಹಿಸುವನೊ ಅಷ್ಟೇ ಕುತೂಹಲವನ್ನು ನಾವು ಕವಿಕರ್ಮದ ಕುರಿತು ತಾಳಬೇಕು. ಇದೇ ಸಹೃದಯತೆ. "ಕಾವ್ಯ-ಕರ್ತೃವಿನಲ್ಲಿಗೆ ನಾವು ಶಿಷ್ಯರಂತೆ, ಮಕ್ಕಳಂತೆ, ನಮ್ರರಾಗಿ ಸಗುಮುಖಿ-ವುಳ್ಳವರಾಗಿ ಹೋಗಬೇಕು" ಎಂದಿದ್ದಾರೆ. ಡಿ. ವಿ. ಜಿ. ಯವರು. ಎಳ-ನೀರು ಎಂದಾಗ ನಾವು ಬಾಯಿ ಚಪ್ಪರಿಸುತ್ತೇವೆ; ಆ ಸಿಹಿಯಾದ ನೀರನ್ನೂ ಸವಿಯಾದ ತಿರುಳನ್ನೂ ನೆನೆಯುತ್ತೇವೆ. ಅವರಲ್ಲಿ ಮತ್ತೇನೂ ಇಲ್ಲವೆ–ಎಂದು ಯಾರಾದರೂ ಕೇಳಿದರೆ, ಸಿಪ್ಪೆಯಿದೆ, ಕರಟವಿದೆ—ಎಂದೂ ಹೇಳುತ್ತೇನೆ. ಸಿಪ್ಪೆ, ಕರಟಗಳೇ ನಮಗೆ ಕಾಣಿಸುವುದಾದರೆ, ಎಳನೀರಿನ ಸವಿ ನಮಗೆ ದಕ್ಕಿಲ್ಲವೆಂದರ್ಥ. ಕಾವ್ಯವಿಮರ್ಶೆಯಲ್ಲೂ ಅಷ್ಟೆ. ಎಂದರೆ ದೋಷಗಳು ಇಲ್ಲವೆಂದೇ ಹೇಳಬೇಕೆಂದಲ್ಲ. ಎಳನೀರಿನ ಸಿಪ್ಪೆ-ಕರಟಗಳನ್ನು ನಾವು ಹೇಗೆ ಸಂಪೂರ್ಣವಾಗಿ ಮರೆಯಲಾರೆವೊ ಹಾಗೆ. ಒಟ್ಟಿನಲ್ಲಿ ನಮ್ಮ ಮನಸ್ಸು ಕಾವ್ಯವತ್ತ ಸುಮುಖವಾಗಿ ಓಲಬೇಕು.

ಅಭಿಮಾನವೆಂದರೇನು? ಕವಿಯಲ್ಲಿಂದು ಬಗೆಯ ಮಮಕಾರ-ಭಾವವನ್ನು ತಾಳಿ, ಅವನಿಂದಲೆ ಕೃಪ್ತಿಪಟ್ಟು, ಕಾವ್ಯದ ಆಳಕ್ಕೆ ಇಳಿಯದೆ, ಅವರ ಒಳಹೊರಣವನ್ನು ತಿಳಿಯಲು ಪ್ರಯತ್ನಿಸದೆ, ಕವಿಯನ್ನು ಕಾಳಿದಾಸನಿಗೂ ಮಿಲ್ಟನ್-ಶೇಕ್ಸ್‌ಪಿಯರರಿಗೂ ಹೋಲಿಸಿ, ಕಾವ್ಯವು ಮಹಾಕಾವ್ಯವೆಂದೂ, ಅವರ ಶೈಲಿ ಮಹಾಶೈಲಿಯೆಂದೂ, ಕವಿಯು ಮಹಾಕವಿಯೆಂದೂ ಸ್ತುತಿಸುವುದು ಅಭಿಮಾನವೆನಿಸಬಹುದು; ಅತಿರೇಕವೆನಿಸಬಹುದು.ಆದರೆ ಕಾವ್ಯವನ್ನು ನಿತ್ಯವೆಂಬಂತೆ ಅಭ್ಯಾಸಮಾಡಿ, ಸಾಧ್ಯವಾದಷ್ಟು ಅಳಕ್ತಿಳಿದು, ಕವಿಹೃದಯದರ್ಶನದಿಂದ, ಕಾವ್ಯ-ರಸಾನುಭವದಿಂದ ಪುಲಕಿತಗಾತ್ರನಾದೊಬ್ಬ ವಿಮರ್ಶಕನು, ಕವಿಯನ್ನು ಆತ್ಮೀಯತೆಯಿಂದ ಸಂಬೋಧಿಸಿದಾಗ,ಅದು ಅಭಿಮಾನವೆನಿಸ-ಬಹುದೇ ? ಅಂತೆನ್ನುವುದು ನಮ್ಮ ಕಾರ್ಪಣ್ಯವನ್ನಷ್ಟೆ ತೋರ್ಪಡಿಸುವುದಲ್ಲವೆ ? ದುಃಖವಾದಾಗ ಕಣ್ಣೀರಿಕ್ಕುವುದು ಹೇಗೆ ಸ್ವಾಭಾವಿಕವೊ, ಸಂತೋಷವಾದಾಗ ನಗುವುದೂ ಅಷ್ಟೇ ಸಹಜವಾದುದು. ಅದನ್ನು, 'ಛೆ! ಅವನು ಅಷ್ಟು ಅಳಬಾರದಿತ್ತು, ಇಷ್ಟು ನಗಬಾರದಿತ್ತು' ಎಂದು ವಿಮರ್ಶಿಸಲಾಗುವುದೆ ?

ವಿಮರ್ಶಕರನೇಕರು ಟೀಕೆಯ ಬಾಣಗಳನ್ನೆಸೆದದ್ದು ಗತಿಸಿ-ಹೋದ ಕವಿಗಳ ಮೇಲೆ, ಇಲ್ಲವೆ ಆರ್ದ್ರಹೃದಯದಿಂದ ಅವರ ಕೃತಿ-ಗಳನ್ನು ವಿಮರ್ಶಿಸಿದವರ ಮೇಲೆ. ಪರೀಕ್ಷೆ, ತೀರ್ಪು ಮುಂತಾದ ಮಂತ್ರೋಚ್ಚಾರಣೆಯಾಗುವುದೂ ಇದೇ ಕಾಲದಲ್ಲಿ! ಆದರೆ ಅದೇ 'ಶ್ರೀರಾಮಾಶ್ವಮೇಧದ ರಸತರಂಗಗಳ' ಕುರಿತು ಹೇಳುವುದಿದ್ದರೆ, ಅದು ಕಾವ್ಯವಿಮರ್ಶೆಗೊಂದು ಮಾದರಿಯಾಗಬಲ್ಲದು. ಅದರಲ್ಲಿ "ಅತಿಯಿಲ್ಲ, ಅವಜ್ಞೆಯಿಲ್ಲ, ಅಹಂಭಾವವಿಲ್ಲ, ಅಸಹನೆಯಿಲ್ಲ, ಮತ್ಸರವಿಲ್ಲ, ದೂಷಣೆಯಿಲ್ಲ, ಪೂರ್ವಗ್ರಹವಿಲ್ಲ." ಆಲ್ಲಿ ವಿಮರ್ಶಕರು ವ್ಯಕ್ತಪಡಿಸಿದ ಪ್ರತಿಯೊಂದು ಅಭಿಪ್ರಾಯದಿಂದಲೂ ಅವರು ಕವಿ ಎಷ್ಟರೆಯ ಮೇಲೆ ಕೈಯಿಟ್ಟು, ಅದರ ಬಡಿತವನ್ನು ಬಲ್ಲ ಸಹೃದಯ ಎಂದೇ ವೇದ್ಯವಾಗುತ್ತದಲ್ಲದೆ ಬೇರೊಂದಿಲ್ಲ. ವಿಮರ್ಶಕನು ಕವಿಯನ್ನು ಪ್ರೀತಿಯಿಂದ ಕಂಡಾಗ ಕಾವ್ಯಾಭ್ಯಾಸಿಗೂ ಅದೆಷ್ಟೊ ಸಂತೋಷವಾಗುತ್ತದೆ. ಆದುದರಿಂದಲೆ " ಈ ಕಾಲದ ನಮ್ಮ ವಿಮರ್ಶನ ಮಾರ್ಗದ ಇನ್ನೊಂದು ತಿರುವಿಗೂ ಅವನೇ (ಮುದ್ದಣ) ನಿಮಿತ್ತವಾದಂತಿದೆ!" ವಿಮರ್ಶನ ಮಾರ್ಗದ ಇನ್ನೊಂದು ತಿರುವು ಎಂದರೆ ಕಾವ್ಯದ ನಿರ್ಮಲ ವಿಮರ್ಶೆ.

ನಮ್ಮ ಪೂರ್ವಿಕರ ದೃಷ್ಟಿ ಅಂತರಂಗಕ್ಕಿಂತ ಬಹಿರಂಗದತ್ತ ಹೆಚ್ಚು ಹರಿಯಿತು. ಆಧುನಿಕರನೇಕರು ಘನಪರೀಕ್ಷೆ, ಖಂಡಿತ ತೀರ್ಪು, ಇವುಗಳನ್ನು ನೆಚ್ಚಿಕೊಂಡಿದ್ದಾರೆ. ಆದರೆ ಇವುಗಳಿಗಿಂತ ಒಳ್ಳೆಯದಾದ ಇನ್ನೊಂದು ಮಾರ್ಗವಿದೆಯೆನ್ನಬಹುದು. ಅದು—ಕವಿಹೃದಯ ಜ್ಞಾನ ವನ್ನೆ ತಳಹದಿಯಾಗಿಟ್ಟುಕೊಂಡ ವಿಮರ್ಶೆ; ಅದೇ ಪ್ರಾಮಾಣಿಕ ವಿಮರ್ಶೆ!

ಹೀಗೆ, ಮುದ್ದಣನೆ ಕಾರಣನಾಗಿ ಮೊದಲಲ್ಲಿ ಬಂದ ವಿಮರ್ಶೆ, ಅನಂತರ ಬಂದ ವಿಮರ್ಶೆ, ಮತ್ತು ಇಂದು ಬಂದಿರುವ ವಿಮರ್ಶೆ—ಇವುಗಳನ್ನು ಲಕ್ಷ್ಯದಲ್ಲಿರಿಸಿ, ಸಹೃದಯ ವಿಮರ್ಶೆಯ ಕೆಲವೊಂದು ಲಕ್ಷಣಗಳನ್ನಿಲ್ಲಿ ನಿರೂಪಿಸಲು ಯತ್ನಿಸಿದ್ದೇನೆ. ನನ್ನೀ ಅಭಿಪ್ರಾಯ-ಗಳಲ್ಲಿ ಏನಾದರೂ ಹುರುಳಿದೆಯೋ ಎಂದು ಪರೀಕ್ಷಿಸುವುದು ಓದುಗ-ರಿಗೆ ಸೇರಿದೆ.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಗಡಿಯಾರ, ಟಾಕೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,

ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಐ. ಜೆ. ಮುತ್ತಿಗಿ

ಸುಭಾಸ ರೋಡ್, ಧಾರವಾಡ

ಬರುವೆಯ ಸಂಗಾತಿ?

ಕೀ: ಈಶ್ವರ ಪೆರಡಾಲ, ಹೊಸದಿಲ್ಲಿ

ಬರುವೆಯ–ಸಂಗಾತಿ ನನ್ನ ಜೋಡಿ ನೀ–ಬರುವೆಯ ಜೊತೆಗಾತಿ ?

ಹೂವು ಹಣ್ಣುಗಳು ತುಂಬಿದ ಗಿಡಮರ
ಬಾಗಿವೆ ನೋಡಲ್ಲಿ !
ಮೂವು ಬೇವುಗಳು, ತಾಳೆ ಬಾಳೆಗಳು
ತೂಗಿವೆ ನೋಡಲ್ಲಿ,
ಎಲ್ಲೆಯರಿಯದಾ ಮಧುರಶಾಂತಿಯ-
ಸಾಮ್ರಾಜ್ಯವು ಅಲ್ಲಿ
ನಿಲ್ಲದೋಡುವಾ ಬೆಡಗುಗಾತಿಯೊಲು
ತೊರೆಯ ಮೊರೆತವಲ್ಲಿ !
ಅಲ್ಲಿಗೆ–ಬರುವೆಯ ಜೊತೆಗಾತಿ ?

ಹೆಸಿರ ಚಪ್ಪರದ ಮುಸುಕ ಸಂದಿಯಲಿ
ಇಣುಕುವ ಹೊ ಬಿಸಿಲು
ಜೆಲ್ಲಿರುವುದು ಸಿರಿ —ಆ ಬನದಾ ಬಳಿ
ನಮ್ಮನೆ ಕಾಯುವೊಲು !
ಬಳಲಿಕೆಯೇತಕೆ ? ಬಾ ಹೊರಳಿನುತಲಿ
ಹಾಸಿದ ಹಾಸಿನೊಲು
ತೊರೆಯಂಚಿನ ಕಿರು-ಬಂಡೆಯ ಕೆಲದಲಿ
ಹರಡಿದೆ ತಿಳಿಮಳಲು !
ಅಲ್ಲಿಗೆ— ಬರುವೆಯ ಜೊತೆಗಾತಿ ?

ಗಿಡಮರದೆತ್ತರ, ಎಲೆಮರೆಯಾಚೆಗೆ
ಕೋಗಿಲೆ ಕಾಜಾಣ,
ಎಡೆ ಬಿಡದಂತೆಯೆ ನಡೆಸಿವೆ ಜೋಗುಳ-
ಹಾಡಿನ ಸವಿತಾನ !
ಚಿಲ್ಲಿವೆ ಬನಸುಮ, ಮಲ್ಲಿಗೆ, ಪಾದರಿ,
ಬೆಳಗಿವೆ ದೀವಳಿಗೆ !
ಹುಲ್ಲಿನ ಹಾಸುಗೆ, ಲತೆಗಳ ಜಾಲರಿ
ಸೊಗಸಿದ ಆ ನೆಲೆಗೆ !
ಅಲ್ಲಿಗೆ–ಬರುವೆಯ ಜೊತೆಗಾತಿ ?

ಏಳು ಬಣ್ಣದಾ ಮಳೆಯ ಬಿಲ್ಲಿನದೆ
ಭಾಗಿದ ತೋರಣವು,
ಕೇಕೆಯ ಹಾಕುತ ನಲಿವ ನವಿಲುಗಳೆ
ಸ್ವಾಗತ ಕೋರುವವು !
ಅನತಿ ದೂರದಲೆ ಗೊಲ್ಲ ಖಾಲಕರು
ಉಲಿವ ಮುರಲಿಗಾನ–
ಸೆಳೆಯುತಿಹುದು, ಮೈಮರೆಸುತಿರುವುದು-
ತೂರಿ ಬರುವ ಆಹ್ವಾನ !
ಅಲ್ಲಿಗೆ-ಬರುವೆಯ ಜೊತೆಗಾತಿ ?

ಜೇನು ಸುರಿವ ಹೂ ಗಂಧವ ಬೀರಿವೆ,
ಮರುಳನೆ ಹಿಡಿಸಲಿವೆ !
ಝೇಂಕರಿಸುವ ಮರಿದುಂಬಿಗಳ್ತುಂಬಿವೆ
ಬಯಕೆಯ ಮೊಳೆಸುತಿವೆ !
ಮುಂಜಾವಿಂದಲಿ ಸಂಜೆಯ ತನಕವು
ಬೀಸಿಡೆ ತಂಬೆಲರು,
ಅಂಜದೆ ಅಳುಕದೆ ಬಾಗಿದೆ ಗಗನವು—
ಧರೆಯನೆ ಮುದ್ದಿಡಲು !
ಅಲ್ಲಿಗೆ-ಬರುವೆಯ ಜೊತೆಗಾತಿ ?

ಅಂಧ ಜಗತ್ತಿನ ಬಂಧನ ತೊಡೆಯುತೆ
ಅಂದವ ಸವಿಯೋಣ,
ಕುಂದು ಕುಹಕದಾ ಕಿರುಳುಳ ನುರೆಯುತೆ
ಎದೆತುಂಬಿ ಹಾಡೋಣ !
ನಿಸ್ಕುರ ಜಗದಾ ಕಟ್ಟು-ನಿಟ್ಟುಗಳಿಗೆ
ಏತಕೆ ಕೊರಗೋಣ ?
ಬಂಧುರ ಪ್ರಕೃತಿಯ ಸುಂದರ ತಾಣದಿ
ಎಲ್ಲವ ಮರೆಯೋಣ !
ಅಲ್ಲಿಗೆ-ಬರುವೆಯ ಜೊತೆಗಾತಿ ?

ಕತ್ತಲಲ್ಲಿಯ ಜನ

(ಸನ್ಮಕತೆ)

ಶ್ರೀ. ಆರ್. ಪಿ. ಕುಲಕರ್ಣಿ ಎಂ. ಎ. ಬೆಳಗಾಂವಿ

ಜೀವನವನ್ನು ಒಂದು ಆದರ್ಶಮಾರ್ಗದಲ್ಲಿ ನಡೆಯಿಸಬೇಕೆಂದು ಸಮಾಜದ ನಿಷ್ಠುರ ನಿಯಮವಿದ್ದರೆ, ವ್ಯಕ್ತಿಗಳು ಒತ್ತಾಯ-ಹೆದರಿಕೆಗಳಿಂದಲಾದರೂ ಸಂಯಮ ನಿಯಮಗಳಲ್ಲಿ ಬಾಳಬಹುದು. ಯಾವ ನಿಯಮಬಂಧನವೂ ಇಲ್ಲದ ಅನಾಗರಿಕ ಪರಿಸ್ಥಿತಿಯಲ್ಲಿ ಮಾನವರು, ಪಶುಗಳಾಗಿ ಬಾಳುವರು.

ಅಂದು ಆ ಹಳ್ಳಿಯ ಜನರ ಉತ್ಸಾಹಕ್ಕೆ ಉಕ್ಕೇರಿತ್ತು. ಜನರು ಕುಣಿದಾಡುತ್ತಿದ್ದರು. ಮಬ್ಬಿನ ಕೀನಗಳು ಒಂದರ ಹಿಂದೊಂದು ಬರಿದಾಗುತ್ತಿದ್ದುವು.

ಊರ ಹೊರಗೆ ಭವ್ಯ ಹಂದರ ಹಾಕಿದ್ದರು. ಅಂದು ಬೈಲಾಟ. ಜನರು ಕಿಕ್ಕಿರಿದು ನೆರೆದಿದ್ದರು. ಅವರ ಸಂಸ್ಕೃತಿಯ ಪ್ರದರ್ಶನ ನಡೆದಿತ್ತು. ಯಾವ ಹಳ್ಳಿಯಲ್ಲಿಯೂ ಸಾಮಾನ್ಯ ಇದೇ ಕಂಡುಬರುವುದು.

ಹಂದರವ ಮುಂದೆ ಎಲ್ಲ ಜಾತಿಯವರು ತಮ್ಮ ಯೋಗ್ಯತೆಗೆ ತಕ್ಕ ಸ್ಥಳಗಳನ್ನು ಅಲಂಕರಿಸಿದ್ದರು. ಹುಟ್ಟಿದ ಜಾತಿಯೇ ಅವರ ಯೋಗ್ಯತೆಗೆ ಅಳತೆಗೋಲು. ಹುಟ್ಟುವುದು, ಬೆಳೆಯುವುದು—ಇದೇ ಅವರ ಜೀವನದ ಗುರಿ. ಬಡತನವೂ ನೂಕ್ಷನಂಬಿಕೆಯೂ ಅವರ ಅನುವಂಶಿಕ ಆಸ್ತಿ. ಯಾವ ಸಾಮಾಜಿಕ ಬದಲಾವಣೆಯೂ ಅಲ್ಲಿ ಆಗುವಂತಿರಲಿಲ್ಲ. ಗುಂಪು-ಪಂಗಡಗಳನ್ನು ಕಟ್ಟಿ ಹೊಡೆದಾಡುವುದರಲ್ಲಿಯೇ ಅವರ ರಾಜಕಾರಣ. ಜನಸಂದೆಯೇ ಅವರ ನಿತ್ಯದ ಮಂತ್ರ. ಸಮಾಜಕ್ರಾಂತಿಯ ಯಾವ ಬಿರುಗಾಳಿಯೂ ಅವರಿಗೆ ತಗಲುತ್ತಿರಲಿಲ್ಲ.

ಆಟ ಆರಂಭವಾಯಿತು. ಕೆಲಸವಲ್ಲಿ ಯಾವಾಗಲೂ ಮಗ್ನಳಾಗಿರುತ್ತಿದ್ದಳೆಂದು ತೋರಿಸುತ್ತಿದ್ದ ಮಲ್ಲಿ, ಬೈಲಾಟಕ್ಕೆ ಹಣ-ಹೊತ್ತುಗಳನ್ನು ಹಾಳುಮಾಡುತ್ತಿದ್ದ ಜನರಿಗೆ ಬೈಗಳ ಮಳೆಗರೆಯುತ್ತಿದ್ದಳು. ಜನರೆಲ್ಲರೂ ಕೇಳಲೆಂದು ಎತ್ತಿದ ಧ್ವನಿಯಿಂದ ಒದರುತ್ತಿದ್ದಳು. ಆಟಕ್ಕೆ ಪ್ರಸಿದ್ಧ ಪಾತರದ ನಿಂಗಿ ಬಂದಿದ್ದಳು. ಅವಳಿಲಿದ ಸ್ಥಳದ ಮುಂದೆ ರಾಗಣ್ಣ ನಾಲ್ಕಾರು ಸಾರಿ ಹಾಯ್ದು, ಅವಳ ಕಡೆಗೆ ನೋಡಿದರೂ ನೋಡದಂತೆ ನಟಿಸುತ್ತಿದ್ದ. ಅಂಗಡಿಯ ಅಪ್ಪಯ್ಯ ಅಂದು ತನ್ನ ಕೆಲಸದಲ್ಲಿ ಹೆಚ್ಚು ಮಗ್ನನಾಗಿದ್ದ. ಪಿಟೀಲು ತಜ್ಞನೆಂದು ತನ್ನಷ್ಟಕ್ಕೆ ತಾನು ತಿಳಿದ ನಾಗಪ್ಪ, ನಿಂಗಿಯ ಕುಣಿತ ಹೊಗಳುತ್ತಿದ್ದ. ಸಾವುಕಾರ ದೇಸಾಯರು ಆರು ತಿಂಗಳ ಹಿಂದೆ ಕರೆತಂದ ಎಲ್ಲಿಯ ಮನೆಬಾಗಿಲು ನಿತ್ಯದಂತೆ ಮುಚ್ಚಿತ್ತು.

ಆಟ ನೋಡಲು ಡೊಂಕುನೋಟದ ಕೀನು ಬಂದ. ಆತ ತಲೆಯಲ್ಲಾಡಿಸಿದ್ದರಿಂಪ, ತಲೆಯ ಕೂದಲು ಹಣೆಯಮೇಲೆ ಬಿದ್ದುವು. ಕೆಮ್ಮಿದ. ಜನರಿಗೆ ಗೊತ್ತಿರದಿದ್ದುದು ತನಗೆ ಗೊತ್ತಿರುವುದೆಂದು ಅವನಿಗೆ ತೋರಿಸುವ ಚಟವಿತ್ತು. ತನ್ನ ಸುತ್ತುಮುತ್ತಲಿನ ಜನರನ್ನು ಬೆರಗುಗೊಳಿಸಬೇಕೆಂದ. ಕಲ್ಲಿಗೆ ಮದುವೆಯಾದ ಎಂಟು ತಿಂಗಳಲ್ಲಿ ಕೂಸು ಹುಟ್ಟಿವ್ವನ್ನು ರಾಗಣ್ಣನಿಗೆ ಹೇಳಿದ. ಎಲ್ಲಿಯ ಬಾಗಿಲು ತೆರೆಯುವುದೋ ಇಲ್ಲವೋ—ಎಂದು ನೋಡಿದ. ಅವನಿಗೆ ನಿಂಗಿಗೆ ಯಾರು ಬಣ್ಣ ಹಚ್ಚುತ್ತಿದ್ದಾರೆಂದು ತಿಳಿಯಬೇಕಿತ್ತು. ಹಂದರವ ಸುತ್ತ ತನ್ನ ದೃಷ್ಟಿ ಚೆಲ್ಲಿದ. ಖಾನುಭೋಗರ ಓಣಿಯಿಂದ ಯಾರು ಬಂದಿರುವರೆಂದು ನೋಡಿದ. ಇವೆಲ್ಲ ಅವನಿಗೆ ಮಹತ್ವದ ಸಂಗತಿಗಳು.

ಜನ ನಿಂಗಿಯ ದರ್ಶನಕ್ಕೆ ಕಾತರರಾಗಿದ್ದರು. ಒಬ್ಬ ಮೈಮೇಲೆ ಸುರುವಲು ಗುಲಾಲು ತಂದ. ಮತ್ತೊಬ್ಬ ಮಾಲೆ ತಂದ. ಕೆಂಪು ಕಣ್ಣಿನ ಇಮಾಮ್, ರೇಪಿಮೆಯ ಸೀರೆಯನ್ನೇ ತಂದಿದ್ದ.

ನಿಂಗಿಯ ಗೆಜ್ಜೆಯ ಝಣ-ಝಣ ಸದ್ದು ಜನರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಿತ್ತು. ಅಷ್ಟರಲ್ಲಿ ಹುಚ್ಚಲನಂದದ ಅಲೆಗಳೆದ್ದುವು. ಊರ ಹಿರಿಯ ಪಂಚನೇ ಹಂದರವನ್ನೇರಿದ್ದ. ಮುಂಗೈಮೇಲೆ ಒಂದೂ ರೂಪಾಯಿ ಇಟ್ಟುಕೊಂಡ. ನಿಂಗಿ ಪಿಟೀಲನ ಸದ್ದಿಗೆ ಕಾಲುಗೆಜ್ಜೆಯ ತಾಳಹಾಕುತ್ತ ಅದನ್ನು ಹಣೆಯಿಂದ ಎತ್ತುತ್ತಿದ್ದಳು. ಪಂಚ ಅಭಿಮಾನದಿಂದ ಎದೆಯುಬ್ಬಿಸುತ್ತಿದ್ದ.

ಈ ದೃಶ್ಯ ನೋಡಲು ನೂರಾರು ಜನ ಕತ್ತು ಮೇಲಕ್ಕೆತ್ತಿದರು. ಒಳಗೆ ನಿಂತ ಪಾತ್ರಧಾರಿಗಳು ಪರದೆಯಿಂದ ಹಣಿಕಿಹಾಕುತ್ತಿದ್ದರು.

ಅಂಗಡಿಯ ಅಪ್ಪಯ್ಯ ಅಂಗಡಿಬಿಟ್ಟು, ನಿಂಗಿಯ ವೈಯಾರವನ್ನು ನೋಡಲು ಜನರ ಗುಂಪಿನಲ್ಲಿ ಸೇರಿದನು. ಅವನಿಗೆ ಅಂಗಡಿಯತ್ತ ಗಮನವೇ ಇದ್ದಿಲ್ಲ. ಇಬ್ಬರು ಹುಡುಗರು ಸಂಧಿಸಾಧಿಸಿ ಎರಡು ಬೀಡಿ-ಗಳನ್ನು ಕದ್ದರು.

ರಾಗಣ್ಣ ಆನಂದಾತಿರೇಕದಿಂದ "ನೋಡ್ರಿ! ನೋಡ್ರಿ!! ಮುದುಕ ಪಂಚನ್ನ ಹ್ಯಾಂಗ ಕೈಮುಂದ ಮಾಡ್ಯಾನ! ಹಣೇಲೆ ಹೊಂಡ್ಲ ತಕ್ಕೊಂಡ್ಲ ರೂಪಾಯಿ!" ಎಂದ. ಹಂದರದತ್ತ ಜನ ನುಗ್ಗಿ ಬಿದ್ದರು. ಎಂಥ ಅದ್ಭುತ ಘಟನೆ! ಇಂಥ ದೃಶ್ಯ ನೋಡದಿರುವುದರೆ ಜೀವನದಲ್ಲಿಯ ಒಂದು ಮಹದಾನಂದವನ್ನು ಕಳೆದುಕೊಂಡಂತೆ!

ಹಿಂದಿನಿಂದ "ಕುಂಡ್ರಿ! ಕುಂಡ್ರಿ! ಹಿಂದಿನವರ್ಗೆ ಚಲೋ ಕಾಣ್ಲಿ. ತಾವಸ್ತ ನೋಡ್ಕೋಕಂತಾರ ಮಕ್ಕ!" ಎಂದು ಯಾವನೋ ಕೂಗಿದ. ಜನರು ಕುಳಿತುಕೊಂಡರು. ಬಲವ್ಹಳ್ಳನವರು ಮುಂದೆ ಬಂದರು. ಮುಂದಿನವರು ಹಿಂದೆ ನುಗ್ಗಿಸಹತ್ತಿದರು. ಈ ಗೊಂದಲದಲ್ಲಿ ಒಬ್ಬ ಹುಡುಗ ಎದ್ದುನಿಂತ. ಫಟ್ಟನೆ ತಲೆಯ ಮೇಲೆ ಏಟು. "ಯಾಕ್ಕೋ? ಆ ಹುಡುಗನ್ನ ಹೋಡೀತಿ? ಹಾಂಗಽ ಹೇಳಲಾ ಬಾಯ್ತಂತ." ಎಂದ ಒಬ್ಬ "ಮಕ್ಕಳನ್ನ ತಂದ, ಗೇಣ ಗೇಣ ಜಾಗ್ಲಾ. ಆಟಕ್ಕ ಬರತಾರ ಆಟಕ್ಕ. ಆದೂ ಜೀಮಣಾಂದ." ಪ್ರತ್ಯುತ್ತರ. ಗಲಾಟೆ ಹೆಚ್ಚಾಯಿತು. ಅಪ್ಪಯ್ಯ ಜನಜಂಗುಳಿಯಲ್ಲಿ ಕಳೆದ.

ಜನರು ಸಂಧಿಯನ್ನು ಬಿಟ್ಟಾರೇ? ಎಂಟು-ಹತ್ತು ಜನರು ಅಂಗಡಿಯತ್ತ ಧಾವಿಸಿದರು. "ನೋಡ್ರ್ಯೋ, ನೋಡ್ರಿ! ಕಳ್ಳ ಸೂಳಿಮಕ್ಕಳ್ಳ. ಅಂಗಡೀ ಸಾಮಾನ ಕದೀತಾರ." ಎಂದವನೇ ರಾಗಣ್ಣ ಅಂಗಡಿಯ ಹತ್ತರ ಬಂದ; ಇತ್ತ ನಿಂಗಿಯ ಕುಣಿತ. ಅತ್ತ ಜನರ ನುಗ್ಗಾಟ. ರಾಗಣ್ಣ ಅಂಗಡಿಯಲ್ಲಿಯ ಹಣದ ಪೆಟ್ಟಿಗೆ ಕಂಡ. ಹಾಕಿದ. ಸಿಕ್ಕಷ್ಟು ಜೇಬಿಗೆ ಕಾಣಿಸಿದ. ಶೀನನೂ ಬಂದಿದ್ದ. ಮಹತ್ತ್ವದ ಸಂಗತಿಯನ್ನು ಎಲ್ಲರಿಗೂ ಹೇಳಬೇಕೆಂದ. ಆತ ರಾಗಣ್ಣನನ್ನು ಹಿಂದೆ ಸರಿಸಿ ತಾನು ಮುಂದೆ ಬಂದ.

ಮಲ್ಲಿ ಕನಿಕರಪಟ್ಟು "ಯಾಕ್ರ್ಯೋ! ಪಾಪ ಅಂಗಡೀ ಹಾಳಮಾಡ್ತೀರಿ? ಬುದ್ಧೀ ಗಿದ್ಧೀ ಎಲ್ಲಿ ಇಟ್ಟೀದಿರಿ?" ಎಂದಳು.

ರಾಗಣ್ಣನಿಗೆ ಹೆಂಗಸರಿಗೆ ಧಕ್ಕೆ ಹೊಡೆಯುವ ವಿಚಿತ್ರ ಚಟವಿತ್ತು. ಇದರಲ್ಲಿಯೇ ತನ್ನ ಜೀವನದ ಸಾರ್ಥಿಕ್ಯವೆಂದು ಆತನ ನಂಬಿಕೆ. ಈ ವಿಚಾರವೇ ಆತನ ತಲೆಯಲ್ಲಿ ತಿರುಗುತ್ತಿತ್ತು. ಇದನ್ನು ಪೂರ್ಣಮಾಡಲು ಆತ ತೀರ ನೀಚ— ಹೇಯ ಕೆಲಸಗಳನ್ನು ಮಾಡುತ್ತಿದ್ದ. ಹೆಲವು ಸಾರೆ ತನ್ನ ಬಗ್ಗೆ ತಾನೇ ಜಿಗುಪ್ಸೆ ಹೊಂದುತ್ತಿದ್ದ. ಆದರೆ ಈ ಚಟವನ್ನು ಮಾತ್ರ ಆತ ಬಿಟ್ಟಿದ್ದಿಲ್ಲ.

ರಾಗಣ್ಣ ಮಲ್ಲಿಯನ್ನು ಜೀನ್ನಾಗಿ ಬಲ್ಲ. ಅವಳಿಗೆ ಅಂಟಿಕೊಂಡು ಬಂದ. ಆಕೆ ಅವನತ್ತ ಮತ್ತಿಷ್ಟು ಸರಿದಳು. ಅವನಿಗೆ ಯಾವ ಅಂಜಿಕೆಯೂ ಸಂಕೋಚವೂ ಉಂಟಾಗಲಿಲ್ಲ. ಅವರಿಗೆ ಎಂಥ ಸುಖ ದೊರೆಯುತ್ತಿತ್ತೋ?

ದೇಸಾಯಿ ಸಾವುಕಾರರು ಗಲಾಟೆ ಕೇಳಿದರು. ಅಂಗಡಿಯೂ ಅವರ ಮನೆಯ ಸಮೀಪದಲ್ಲಿತ್ತು. ಕಿಟಕಿಯಿಂದ ಹಣಿಕಿಹಾಕಿದರು. ಎಲ್ಲಿಯೂ ಅವರ ಹತ್ತರ ನಿಂತಳು. ಅವರು ಎಲ್ಲಿಗೆ ರಾಗಣ್ಣ ಮತ್ತು ಮಲ್ಲಿಯನ್ನು ತೋರಿಸಿ, ಅವರ ಬಗ್ಗೆ ತಾತ್ಸಾರದ ವರ್ಣನೆಯನ್ನು ಮಾಡಹತ್ತಿದರು. ಎಲ್ಲಿಗೆ ಅವರು ಜೀನ್ನಾಗಿ ಕಾಣಲಿಲ್ಲ. ಮುರುಕ-ಮಾಡುತ್ತ ಆಕೆ ದೇಸಾಯರತ್ತ ಮತ್ತಷ್ಟು ಸರಿದಳು. ದೇಸಾಯರ ಮಾತು ಕೇಳುತ್ತಿದ್ದಾಗ ಅವಳದೆಷ್ಟು ಒನಪು-ವೈಯಾರ!

ಅಷ್ಟರಲ್ಲಿ ಜನರು ದೇಸಾಯರನ್ನು ಕಿಟಕಿಯಲ್ಲಿಂದ ಕಂಡರು. ಎಲ್ಲಿಯೂ ಅವರ ದೃಷ್ಟಿಗೆ ಬಿದ್ದಳು. ಎಲ್ಲಿ "ಹಲಕಟ್ಟ ಮಕ್ಕ, ಹಣಿಕಿ ಹಾಕಿ ನಸ್ನ ನೋಡ್ತಾರ!" ಎಂದು ಉದ್ಗಾರ ತೆಗೆದಳು. ಇಬ್ಬರೂ ಹಿಂದೆ ಸರಿದರು. ಕಿಟಕಿಯ ಬಾಗಿಲನ್ನು ಮುಚ್ಚಿದರು.

ರಾಗಣ್ಣ ಎಲ್ಲಿಯನ್ನು ಕಂಡ. ಅಸೂಯೆಪಟ್ಟ. ಆದರೆ ಅವನಿಗೆ ದೇಸಾಯರಂತೆ ಮಾಡುವ ಸಾಮರ್ಥ್ಯವಿಲ್ಲ. ವಯಸ್ಸಿತ್ತು. ಹಣದ ಕೊರತೆ, ಆತನಿಗೂ ಒಂದು ಹಕ್ಕಿ ಬೇಕಾಗಿತ್ತು.

ಅಂಗಡಿಯಲ್ಲಿಯ ಸಾಮಾನು ಮಾಯವಾಗುತ್ತಿದ್ದುದು ಗೌಡರಿಗೆ ತಿಳಿಯಿತು. ಅವರು ಹಂದರದ ಮುಂದೆ ಪ್ರಶಸ್ತ ಸ್ಥಳದಲ್ಲಿ ಕುಳಿತಿದ್ದರು. ಅಂಗಡಿಯತ್ತ ಜನರ ತಿಕ್ಕಾಟದಲ್ಲಿ ನುಗ್ಗುತ್ತ ಹೋಗುವುದು ಅವರಿಗೆ ಸರಿಬರಲಿಲ್ಲ. ತಮ್ಮ ಅಧಿಕಾರ ಮತ್ತು ಬಟ್ಟೆಗಳಿಂದ ತಾವು ಶ್ರೇಷ್ಠರೆಂದು ಅವರ ಪ್ರಾಮಾಣಿಕ ತಿಳಿವಳಿಕೆ. ಜನರಿಗೆ ಇದು ತಿಳಿಯುತ್ತಿದ್ದಿಲ್ಲ. ಗೌಡರಿಗೆ ಜನರ ಈ ಅಜ್ಞಾನದ ಬಗ್ಗೆ ಆಶ್ಚರ್ಯ. ತಮ್ಮ ಅಸ್ತಿತ್ವದ ಅರಿವು ಎಲ್ಲರಿಗೂ ಆಗಬೇಕೆಂದು, ಅವರು ಎದೆಯುಬ್ಬಿಸಿ ನಡೆದು ಜನರ ಮೇಲೆ ಹರಿಹಾಯುತ್ತಿದ್ದರು. ವಿನಯ, ಮೃದುಮಾತು, ಸಹನಶೀಲತೆ— ಇವು, ಅವರು ತಿಳಿದಂತೆ ಹೇಡಿಯ ಲಕ್ಷಣಗಳು. ಜನರು ಮಾತ್ರ ಅವರನ್ನು ತಿರಸ್ಕರಿಸುತ್ತಿದ್ದರು.

ಅಪ್ಪಯ್ಯ ಅಂಗಡಿಯನ್ನು ಮುಟ್ಟಿದ "ಏ! ಸೂಳಿಮಕ್ಕಳ್ಳಾ! ಅಂಗಡೀ ಬರೀದು ಮಾಡಿದ್ರಿ." ಎಂದು ಕಸವನ್ನು ಬೀದಿಯಲ್ಲಿ ತೂರುವಂತೆ ಒಂದು ಬೈಗಳು ತೂರಿದ. ಅಂಗಡಿ ಅರ್ಧ ಉಳಿಯಿತು.

ಇತ್ತ ನಿಂಗಿಯ ಕುಣಿತಕ್ಕೆ ಬಣ್ಣವೇರಿತ್ತು.

"ನೋಡ್ರ್ಯೋ! ನೋಡ್ರ್ಯೋ! ಎಲೆಲೆಲೆ!!" ಎಂದು ಚೀರುದನಿಯಿಂದ ಕೂಗಿದ, ಬೊಚ್ಚುಬಾಯಿಯ ತೊದಲುಹನುಮ. ಅವನಿಗೆ ಏನನ್ನೂ ಉದ್ರೇಕವಿಲ್ಲದೆ ಹೇಳಲೇ ಬರುತ್ತಿದ್ದಿಲ್ಲ. ಆತನಿಗೆ ಬಹಳ ಮಾತಾಡುವ ಚಟ. ತಾನು ಮಾತಾಡಬೇಕು, ಉಳಿದವರು ಕೇಳಬೇಕೆಂಬ ಆಶೆ. ಅವನು ಬಾಯಿ ತೆರೆದನೆಂದರೆ ಜನರು ಉತ್ಸುಕತೆಯಿಂದ ಅವನ ಮುಖ ನೋಡುತ್ತಿದ್ದರು. ಆದರೆ ಆತ ತೊದಲಿಸುತ್ತಿದ್ದ. ಹಿರಿಯ ದೇಸಾಯರೇ ನಿಂಗಿಗೆ ಮಾಲೆ ಹಾಕಲು ಹಂದರ-

ವನ್ನೇರಿದ್ದರು. ಅವರು ಎಲ್ಲಿಯನ್ನು ಬಿಟ್ಟು ಆಟ ನೋಡಲು ಬಂದಿದ್ದರು. ಇದನ್ನೇ ಹನುಮನಿಗೆ ಹೇಳುವುದಿತ್ತು.

ಕಲ್ಲ ದೇಸಾಯರನ್ನು ಕಂಡವನೇ "ಹಂದರಾ ಹತ್ತಿದಪ್ಪ ಮುದುಕ! ಮಾರೀ ನೋಡ್ರಿ! ಹರಕ ಮುಚ್ಚಿ ಆಗೇತಿ ಮಾರಿ!" ಎಂದು ಕೆಸರು ಸಿಡಿಸುವಂತೆ ಬಯ್ದ. ಮಲ್ಲಿಗೆಯ ಮೊಗ್ಗೆಯಂತೆ ಬಳುಕುವ ನಿಂಗಿಯ ಮುಂದೆ ಮುದಿಮಂಗನಂತೆ ಮುದುಕ ದೇಸಾಯರು ಕಾಣುತ್ತಿದ್ದರೆಂದು ಕಲ್ಲನ ಮತ.

ಕಲ್ಲನೂ ವಯಸ್ಸಾದವನೇ! ಆತ ಆಟದಲ್ಲಿ ಹಂದರ ಹತ್ತುವುದನ್ನು ಬಿಟ್ಟಿದ್ದ. ಅವನ ಹಳೆಯ ಚಟಗಳಲ್ಲಿ ಕುದುರೆಯಂತೆ ಖೇಕರಿಸುವುದು ಮಾತ್ರ ಉಳಿದಿತ್ತು. ದೇಸಾಯರನ್ನು ಕಂಡು ಒಂದು ಕ್ಷಣ ತಾನೇ ನಾಚಿದ.

ದೇಸಾಯರಲ್ಲಿ ಯಾವ ಬದಲಾವಣೆಯೂ ಆಗಿದ್ದಿಲ್ಲ. ಇನ್ನೂ ಅವರು ಯಾವ ಸಾಹಸವನ್ನೂ ಮಾಡಬಹುದಿತ್ತು. ಅವರಿಗೆ ಭೂತಕಾಲದ ಚಿಂತೆಯಿಲ್ಲ. ಭವಿಷ್ಯಕಾಲದ ಉತ್ಸುಕತೆಯಿಲ್ಲ. ಮೊಸರು ಕಡೆಯುವಂತೆ ಪೈಯಲುಗಾಡಿಸಿ ಮಾತಾಡುತ್ತಿದ್ದಾಗ, ಅವರಿಗೆ ಅಂಟಿದ ಯಾವ ಸುಖ-ದುಃಖದ ಗುರುತೂ ಕಾಣಲಾರದು.

ಹಂದರದ ಬದಿಗೆ ತಬಲಜಿ ಅಣ್ಣಪ್ಪ ಕುಳಿತಿದ್ದ. ಅವನು ತಬಲಗಳ ಮೇಲೆ ಕೈಯಿಟ್ಟರೆ ತೀರಿತು. ನಿಂಗಿ ಕುಣಿದಷ್ಟೂ ಈತ ತನ್ನ ಕೈಯ ಕಸಬು ತೋರಿಸುತ್ತಿದ್ದ. ಎಲೆಯಡಿಕೆ ನಿತ್ಯ ತಿನ್ನುತ್ತಿದ್ದುದರಿಂದ, ಅವನ ಹಲ್ಲುಗಳು ಕೆಂಪು ಕವಡೆಯಂತೆ ಕಾಣುತ್ತಿದ್ದುವು. ಅವನು ನಗುವುದೇ ಕಡಿಮೆ. ಎಂದಾದರೊಮ್ಮೆ ನಗುವಾಗ ತನ್ನ ತೊಡೆಗಳನ್ನು ತಬಲ ಮಾಡುತ್ತಿದ್ದ. ನಡೆಯುವಾಗಲೂ ತಬಲ ಬಾರಿಸುವಂತೆ ಕೈ ಅತ್ತಿತ್ತ ತಿರುವುತ್ತಿದ್ದ.

ಒನಪು ಯಲ್ಲ ಹೆಣ್ಣು ಸಾತ್ರ ಹಾಕಿದ್ದ. ಅವನ ಅಭಿನಯದ ಕೀರ್ತಿ ಸುತ್ತಲಿನ ಹಳ್ಳಿಗಳಿಗೂ ಹಬ್ಬಿತ್ತು.

ಅವನು ಮದುವೆಯಾಗಿ ಹೆಂಡತಿಯನ್ನು ಕರೆತಂದಿದ್ದ. ಆಕೆ ಸಾಲ್ಯಾರು ತಿಂಗಳು ಮಾತ್ರ ಅವನ ಮನೆಯಲ್ಲಿದ್ದಳು. ಮುಂದೆ ಗೋಂದ್ಯಾನ ಮನೆ ಸೇರಿದಳು.

ಒನಪುಯಲ್ಲ ಗೋಂದ್ಯಾನ ಮನೆಗೆ ಹೋದ. ಬಾಗಿಲು ಒದ್ದ. "ಗೋಂದ್ಯಾ, ಹೊರಗ ಬಾ ಮಗನ! ನಿನ್ನ ಕಪಡ ಹಾಕ್ತೇನ! ನನ್ನ ಕುತ್ತಿಗೀ ಕೊದಿ! ಮಗನ!" ಎಂದು ಗದಗದ ನಡುಗುತ್ತ ರೇಗಾಡಿದ.

ಇಬ್ಬರಲ್ಲಿ ಸಾಕಷ್ಟು ರಂಭಾಟವಾಯಿತು. ಅದು ಗೋಂದ್ಯಾನ ಮೇಲೆ ಯಾವ ಪರಿಣಾಮವನ್ನೂ ಮಾಡಲಿಲ್ಲ.

"ಯಲ್ಲಾ ಸ್ವಾ, ಯಾಕೋ ನಾಯಿಹಾಂಗ ಬೊಗಳತೀ? ಆಕಿನ್ನ ಕರಕೊಂಡ ಹೋಗಲಾ. ತಾನs ಆಕಿ ನನ್ನ ಮನೀ ಸೇರಿದ್ರ ಏನ ಮಾಡ್ಲ್ಯೋ?" ಎಂದ.

ಆಕೆಯೂ ಗೋಡೆಗೆ ಆತು ಜಂಬದಿಂದ ಕುಳಿತಿದ್ದಳು.

"ಕರ್ಯಾಕ ಬಂದೀ?" ಮೂಗಿನ ಹೊಳ್ಳೆಹಾರಿಸಿ, ಬೊಟ್ಟು ಮುರಿಯುತ್ತ ಕೇಳಿದಳು. "ಆಯ್ಯ! ಜೋಕಮಾರಾ!" ಎಂದಳು.

ಒನಪುಯಲ್ಲನಿಗೆ ಇದಕ್ಕೂ ಹೆಚ್ಚು ಅವಮಾನವಾಗಬೇಕೇ? ಹೆಂಗಸು ಗಂಡಸಿಗೆ ಇದಕ್ಕೂ ಹೆಚ್ಚು ಅವಮಾನ ಮಾಡುವುದಾದರೂ ಯಾವುದು? ತನ್ನ ಶರೀರವೇ ಕರಗುತ್ತಿದ್ದಂತೆ ಅವನಿಗೆನ್ನಿಸಿತು. ಹೆಂಡತಿ ಅಂದು ಸತ್ತಳೆಂದು ತಿಳಿದ. ಹೆಂಡತಿ ಬಿಟ್ಟುಹೋದ ಮರುದಿನವೇ ಅವನು ಆಟಮಾಡುವುದನ್ನು ಆರಂಭಿಸಿದ. ಹೀಗೆ ಎರಡು ವರ್ಷ ಕಳೆದಿದ್ದ.

ಈಗಂತೂ ಒನಪುಯಲ್ಲ ಎಲುವಿನ ಹಂದರವಾಗಿದ್ದ. ಹೆಂಡತಿ ಇದ್ದಷ್ಟು ದಿನ ಎರಡು ತುತ್ತು ಕೂಳಾದರೂ ಸಿಗುತ್ತಿತ್ತು. ರೇಗಾಡಿದರೂ ಹಾಸಿಗೆ ಹಾಸಿಡುತ್ತಿದ್ದಳು.

ಅವಳ ಮೋಹಕರೂಪ ಅವನ ಕಣ್ಣುಮುಂದೆ ನಿಲ್ಲುತ್ತಿತ್ತು. ಅವಳಿಂದ ಆತ ಯಾವ ಅಪೇಕ್ಷೆ ಮಾಡಿದ್ದ? ಆಕೆಯ ನೆನಪು ಅವನ ಆನಂದವನ್ನು ಕುರುಡುಮಾಡುತ್ತಿತ್ತು. ದುಃಖಕ್ಕೆ ಮನರಂಜನೆಯ ಮಲಾಮು ಹಚ್ಚಿದ್ದ. ಒಳಗೊಳಗೆ ದುಃಖದ ಗೆದ್ದಲಿ ಅವನ ಮನಶರೀರಗಳನ್ನು ತಿನ್ನುತ್ತಿತ್ತು.

ಕತ್ತಲು ಕರಗುತ್ತಿತ್ತು. ಆಟವೂ ಮುಗಿಯಿತು. ಸೂರ್ಯ ಕಿರಣಗಳು ಕತ್ತಲೆಯನ್ನು ತೊಳೆಯುತ್ತಿದ್ದವು.

ನಿಂಗಿ ನಾಚಿಕೆಗೇಡು ನಗುಮುಖದ ದೃಷ್ಟಿಯಿಂದ ಜನಸಮುದಾಯವನ್ನು ನೋಡಿದಳು. ಜನರು ಆಕೆಯನ್ನು ನೆಟ್ಟ-ನೋಟದಿಂದ ಕುಡಿಯುತ್ತಿದ್ದರು.

ನಿಂಗಿಯ ಸಂಪಗೆಯ ಮೊಗ್ಗೆಮೂಗು, ಚಂಚಲಗಣ್ಣು, ತಾಳಬದ್ಧ ಘಿಂಗುರ ನಿನಾದ, ಬಂಗಾರದ ಬಣ್ಣದ ಮೈ, ತೊಂಡೆಯ ಹಣ್ಣು ಬಣ್ಣವನ್ನು ತಿರಸ್ಕರಿಸುವ ತುಟಿ—ಇವು ಎಲ್ಲರ ಮನಸ್ಸಿನ ಮೂಲೆಯಲ್ಲಿ ಗಟ್ಟಿಯಾಗಿ ಅಂಟಿದುವು. ಅವಳ ಸಂಬಂಧ ಕ್ಷಣಿಕವಾದರೂ ಚಿರವಲ್ಲವೇ? ಕೆಲವರಲ್ಲಿ ಅವಳ ನೋಟದ ಸೂಜಿಯು ಹಳೆಯ ನೆನಪುಗಳನ್ನು ಚುಚ್ಚಿ ಹೊಸ ನೋವನ್ನುಂಟುಮಾಡಿತು.

"ಮಗಾ ದೇಸಾಯಿ, ಹಂದರಾ ಏರಿ ನಿಂಗಿಗೆ ಮಾಲೀ ಹಾಕ್ದ. ಹ್ಯಾಂಗ ರಂಗ್ಯಾನ ಒಂಟಿತ್ತಿಸ ಸಾಡ್ಯಾಗ ಕುಂತ ಹ್ವಾದ್ಯ" ಎಂದ ಕಲ್ಲಪ್ಪ.

ಎಂಟು ದಿನಗಳಲ್ಲಿ ನಿಂಗಿ ದೇಸಾಯರ ಮನೆಗೆ ಬಂದಳು. ಎಲ್ಲಿ ಹೋದಳು! ದೇಸಾಯರಿಗೆ ಕೆಡಕೆನಿಸಲಿಲ್ಲ. ಅವರು ಉತ್ಸಾಹದಿಂದ ಆಕೆಗೆ ಒಂದು ಜರದ ಸೀರೆ, ಬೆಳ್ಳಿಯ ವಂಕೆ ಮತ್ತು ಒಂದು ಜೋಡು ಬೆಂಡೋಲೆ ತಂದರು. ಮುಂದೆ ನಾಲ್ಕು ದಿನಗಳಲ್ಲಿ ನಿಂಗಿ ದೇಸಾಯರನ್ನು ಬಿಟ್ಟು ಹಾರಿಹೋದಳು. ನಿಂಗಿಗೂ ಒನಪುಯಲ್ಲನ ಹೆಂಡತಿಗೂ ಯಾವ ಅಂತರ?

ಮೂಕಪಶುಗಳ ತಂದೆ

ಶ್ರೀ. ಶ್ರೀಪಾಲ ಜೋತರು

ವ್ಯಕ್ತಿಪರಿಚಯ

ಶ್ರೀ. ಎ. ಎಸ್. ಪಾಟೀಲ, ಬಿ. ಎ. ಧಾರವಾಡ

ಕನ್ನಡ ಗಡಿನಾಡಿನ ಚಿಕ್ಕೋಡಿ ತಾಲೂಕಿನ ಉತ್ತರಭಾಗವು, ಸವಣ್ಮೈಸೂರಿಗೆ ಅಷ್ಟೇನೂ ಪರಿಚಿತವಲ್ಲ. ಆದರೂ ಅದು ತನ್ನ ಸತ್ಕಾರ್ಯಗಳನ್ನು ಮೊದಲಿನಿಂದಲೂ ನಡೆಯಿಸಿಕೊಂಡು ಬಂದಿದೆ. ಈ ಪ್ರದೇಶವು ಚಿನ್ನದ ಬೆಳೆಯಾದ ತಂಬಾಕಿನ ನಾಡಾದಂತೆ, ಅಹಿಂಸೆಯೇ ಜೀವದ ಉಸಿರಾದ ಜೈನ ಒಕ್ಕಲಿಗರ ಬೀಡಾಗಿದೆ. ಇಂತಹ ಒಂದು ಹಳ್ಳಿ ಶಮನೇವಾಡಿಯು, ಮೊದಲಿನಿಂದಲೂ, ಸಮಾಜ ಕಾರ್ಯಗಳಿಗೆ—ಸೇವಾಧರ್ಮಕ್ಕೆ—ಹೆಸರಾಗಿದೆ; ಅಲ್ಲದೆ ಕವಿಗಳಿಗೂ ಜನ್ಮವಿತ್ತ ಊರಾಗಿದೆ. ಈ ಪ್ರಕಾರ ಲಕ್ಷ್ಮೀ-ಸರಸ್ವತಿಯರಿಬ್ಬರೂ ಪ್ರೇಮದಿಂದ ಅಲ್ಲಿ ಪುಗಡಿಯಾಡುತ್ತಿದ್ದಾರೆ. ನೂರಕ್ಕೆ ತೊಂಬತ್ತರಷ್ಟು ಜೈನರಿರುವ ಈ ಊರಲ್ಲಿ, ನೂರಕ್ಕೆ ಎಂಬತ್ತರಷ್ಟು ಜೋತ ಹೆಸರಿನ ಮನೆತನಗಳಿವೆ! ಅವುಗಳಲ್ಲಿಯ ಒಂದು ಮನೆತನವು ಮೊದಲಿನಿಂದಲೂ ಧಾನಧರ್ಮಕ್ಕೂ-ಶ್ರೀಮಂತಿಕೆಗೂ ಹೆಸರಾಗಿದೆ. ಅಂತಹ ಆ ಜೋತ ಮನೆತನದ ಶ್ರೀ. ಶ್ರೀಪಾಲ ಜೋತ ಇವರು, ತಮ್ಮ ಮನೆತನದ ಕೀರ್ತಿ-ಧ್ವಜಕ್ಕೆ ಕಳಸವನ್ನಿಟ್ಟಿದ್ದಾರೆ.

ಶಮನೇವಾಡಿಯಲ್ಲಿ ಚಿಕ್ಕ ಬಾಲಕನಿಂದ ಮುದುಕರ ವರೆಗೆ ಯಾರು ಬೇಕಾದವರನ್ನೂ, 'ಮಪ್ಪಾ' ಇವರು ಎಲ್ಲಿರುತ್ತಾರೆಂದು ಕೇಳಿದರೆ ಸಾಕು; ಸಹಜವಾಗಿಯೇ ಅಲ್ಲಿಯವರು ಈ ವ್ಯಕ್ತಿಯ ಕಡೆಗೆ ಕೈಮಾಡಿ ತೋರಿಸುತ್ತಾರೆ. ಸುತ್ತುಮುತ್ತಲಿನ ಹಳ್ಳಿಯ ಜನರೂ ಇವರನ್ನು 'ಮಪ್ಪಾ' ಎಂದೇ ಕರೆಯುವರು. ಅಷ್ಟು ಪ್ರೇಮ ಹಾಗೂ ಅಭಿಮಾನ ಆ ವ್ಯಕ್ತಿಯ ಬಗ್ಗೆ. ಇಷ್ಟೇ ಏಕೆ, ಮಹಾರಾಷ್ಟ್ರದಲ್ಲಿಯೂ ಈ ವ್ಯಕ್ತಿಯನ್ನು ಬಹು ಜನರು ಬಲ್ಲರು. ಒಂದು ಲುಂಗಿ, ಅರ್ಧ ತೋಳಿನ ಜಾಕೀಟು, ಹೆಗಲ ಮೇಲೆ ಎರಡು ಮೊಳ ಅರಿವೆ, ಇವೆಲ್ಲ ಶುದ್ಧ ಖಾದಿ. ಈ ಎಪ್ಪತ್ತೈದು ವರುಷದ ನಿರಾಡಂಬರದ ಮುದುಕ, ನವಯುವಕರನ್ನೂ ನಾಚಿಸುವಂತಹ ಕಾರ್ಯವನ್ನು ಮಾಡುತ್ತಿದ್ದಾರೆ. ಸುಮಾರು ೪೦ ವರುಷಗಳಿಂದ ಇವರು ಸಂಸಾರ ತಾಪತ್ರಯದಿಂದ ದೂರರಾಗಿ, ಜನತೆಯ ಸೇವೆಯಲ್ಲಿ-ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ತೊಡಗಿದ್ದಾರೆ. ೧೯೪೨ರಲ್ಲಿ ಮಹಾತ್ಮಾಜಿಯವರ ಸ್ವಾತಂತ್ರ್ಯದ ಕರೆಗೆ ಓಗೊಟ್ಟು, ವೈಯಕ್ತಿಕ ಸತ್ಯಾಗ್ರಹ ಮಾಡಿದ್ದಕ್ಕಾಗಿ ಶಿಕ್ಷೆಗೆ ಒಳಗಾಗಿ, ಕಾರಾಗ್ರಹವಾಸದ ಅನುಭವವನ್ನೂ ಪಡೆದಿದ್ದಾರೆ. ಅದೇ ವೇಳೆಗೆ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಜನಜಾಗೃತಿಯನ್ನು ಮಾಡಿದರು. ಅಂದಿನಿಂದ ಇವರು ಗಾಂಧೀಜಿಯವರನ್ನೇ ಅನುಸರಿಸಿದ್ದಾರೆ. ಸೆರೆಮನೆಯಿಂದ ಬಿಡುಗಡೆಯಾದನಂತರ ವೈದ್ಯಕೀಯ ಜ್ಞಾನಪಡೆದು, ದೀನ-ದಲಿತರಿಗೆ ಪುಕ್ಕಟೆ ಔಷಧಗಳನ್ನು ಒದಗಿಸುತ್ತಿದ್ದರು; ಆದ್ದರಿಂದ ಇವರು ಬಡಬಗ್ಗರಿಗೆ ತಂದೆಯಂತಿದ್ದಾರೆ. ಸ್ವಾತಂತ್ರ್ಯದ ನಂತರ ಇವರು ರಾಜಕೀಯ ಗೊಂದಲಕ್ಕೆ ಬೀಳದೆ, ಗಾಂಧೀಜಿಯವರ ಅಹಿಂಸಾ ತತ್ವಕ್ಕೆ ಅಂಟಿಕೊಂಡು, ಇಂದಿನ ತನಕ ಅದನ್ನೇ ತಮ್ಮ ಜೀವನದ ಉಸಿರನ್ನಾಗಿ ಮಾಡಿಕೊಂಡಿದ್ದಾರೆ.

ಒಮ್ಮೆ ಜನವಾಡ ಎಂಬ ಗ್ರಾಮದಲ್ಲಿ ಜಾತ್ರೆಯ ಕಾಲಕ್ಕೆ, ಕಾಂಗ್ರೆಸ್ಸಿನ ಆದೇಶದ ಮೇರೆಗೆ-ಪ್ರತಿಸಲದಂತೆ-ಸ್ವಚ್ಛತೆಯ ಕಾರ್ಯವನ್ನು ಕೈಕೊಳ್ಳಲು ಹೋದಾಗ, ಅಲ್ಲಿಯ ಹೃದಯದ್ರಾವಕ ಸನ್ನಿವೇಶವನ್ನು ಕಂಡು ಹಾಗೂ ಮೂಕಪಶುಗಳ ಕರುಣಾಕ್ರಂದನವನ್ನು ಕೇಳಿ ಬಹಳೇ ವ್ಯಥೆಪಟ್ಟರು. ಏನಾದರೂ ಉಪಾಯ ಮಾಡಿ ಈ ಅಸಹ್ಯ ಪ್ರಾಣಿವಧೆಯನ್ನು ನಿಲ್ಲಿಸಿ ಬಡಜೀವಿಗಳಿಗೆ ಜೀವದಾನ ಮಾಡಬೇಕು, ಎಂದು ಯೋಚಿಸಿ, ಅಂದಿನಿಂದಲೂ ಶಪಥತೊಟ್ಟು ಕಾರ್ಯಾರಂಭ ಮಾಡಿದರು. ಅದರ ಸಂಕೇತವಾಗಿ, ೧೯೩೫ರಲ್ಲಿ 'ಜೀವದಯಾ ಮಂಡಳ' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಪೂಜ್ಯ ಮುನಿದ್ವಯರ ಸಮಾಧಿಸ್ಥಾನದ ಹತ್ತಿರಿರುವ ಕಟ್ಟಡದಲ್ಲಿ ಕಾರ್ಯಾಲಯವನ್ನು ಮಾಡಿಕೊಂಡರು. ಅಂದಿನಿಂದಲೂ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ನಡೆಯುವ ಜಾತ್ರೆ, ಉರುಸು ಮುಂತಾದ ಜನರು ಕೂಡುವ ಸ್ಥಳಗಳಿಗೆ ಹೋಗಿ, ಆ ಉತ್ಸವ ಮಂಡಳದ ಪ್ರಮುಖರಿಗೆ ಭೆಟ್ಟಿಯಾಗಿ, ಅವರಿಗೆ

್ಮ ಕಾರ್ಯದ ಅರಿವನ್ನು ಮಾಡಿಕೊಟ್ಟು ಪ್ರಾಣಿವಧೆಯನ್ನು ತಡೆ-
ಟ್ಟುವುದಕ್ಕಾಗಿ ವಿನಂತಿಸಿಕೊಂಡರು. ಮೊದಮೊದಲು ಜನರು ಇವರ
ಪದೇಶದ ಕಡೆಗೆ ಕಿವಿಗೊಡಲಿಲ್ಲ. ಇಷ್ಟಕ್ಕೆ ಧೈರ್ಯಗೆಡದೆ ಅವರು
ೀಕ ಅಡೆತಡೆಗಳನ್ನೆದುರಿಸಿ, ಮಳೆಗಾಲ, ಚಳಿಗಾಲ, ವೈದ್ಯಾವಸ್ಥೆ
ಾವುಗಳನ್ನೂ ಲಕ್ಷಕ್ಕೆ ತಾರದೆ, ತನ್ನ ಜೊತೆಯವರನ್ನು ಕರೆದು-
ಂಡು, ಒಮ್ಮೊಮ್ಮೆ ಒಬ್ಬರೇ ಜಾತ್ರೆಗಳಿಗೆ ಹೋಗುತ್ತಿದ್ದರು. ಅಲ್ಲಿ
ಣಿಗಳನ್ನು ಮಾರುವ ಸ್ಥಳಗಳಿಗೆ ಹೋಗಿ, ಕೊಳ್ಳುವವರಿಗೂ
ರುವವರಿಗೂ ತಿಳಿಹೇಳಿ, ಅವರ ಮನವೊಲಿಸುತ್ತಿದ್ದರು. ಪ್ರಸಂಗ
ದಾಗ ಅಲ್ಲಿಯೇ ಭಾಷಣ ಮಾಡುತ್ತಿದ್ದರು. ಅವರ ಉಪದೇಶ-
ದರೆ, ದಯಯೇ ಧರ್ಮದ ಮೂಲ, ಅಹಿಂಸೆಯೇ ಪರಮ ಧರ್ಮ;
ದ್ದರಿಂದ ದೇವರಿಗೆ ಜೀವಬಲಿ ಬೇಕಾಗಿಲ್ಲ. ಸಕಲ ಪ್ರಾಣಿಗಳಿಗೂ
ವಕೊಡುವ ದೇವರು ತಾನೇ ಅವುಗಳ ಬಲಿಯನ್ನು ಬೇಡುವುದಿಲ್ಲ.
ದ್ದರಿಂದ ಪ್ರತಿಯೊಬ್ಬನಿಗೆ ತಮ್ಮ ಜೀವದ ಮೇಲೆ ಇರುವಷ್ಟೇ ಮಮತೆ
ಣಿಗಳಲ್ಲೂ ಇರಬೇಕು–ಎಂದು ತಿಳಿಹೇಳುತ್ತಿದ್ದರು. ಜೀವನಯಾ
ಂಡಳವು ಇಲ್ಲಿಯ ವರೆಗೆ ಮಾಡಿದ ಸ್ತುತ್ಯಕಾರ್ಯ:—

ಜಾತಿ, ಮತ, ಭಾಷೆ ಯಾವ ಭೇದಭಾವವೂ ಇಲ್ಲದೆ ಇವರು
ರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿ, 'ಮಾನವಕುಲವೇ, ನನ್ನ
ಟುಂಬ' ಎಂಬ ತತ್ತ್ವದಂತೆ ನುಡಿಯುತ್ತಿದ್ದಾರೆ.

ರ್ನಾಟಕದ ಗಡಿಯಲ್ಲಿ:—

ಗಡಿನಾಡ ಹಳ್ಳಿಗಳಾದ ಶಿರದವಾಡ, ಜನವಾಡ, ಕಾರವಗಿ,
ಪ್ಪಾಣಿ, ಸದಲಗಿ, ಕುಡಚಿ, ಐನಾಪೂರ ಅಲ್ಲದೆ ಇನ್ನೂ ಎಷ್ಟೋ
ಳ್ಳಿಗಳಲ್ಲಿ, ಆ ಆ ಊರಿನ ಜಾತ್ರೆ ಹಾಗೂ ಉರುಸುಗಳ ಕಾಲಕ್ಕೆ
ೋಗಿ, ದೇವರ ಹೆಸರಿನಿಂದ ನಡೆಯುವ ವಧೆಯನ್ನು ನಿಲ್ಲಿಸಿ, ಸಾವಿ-
ರು ಪ್ರಾಣಿಗಳಿಗೆ ಇವರು ಜೀವದಾನ ಮಾಡಿದ್ದಾರೆ. ಒಬ್ಬ
ೀಮಂತ ಹಾಗೂ ಪ್ರತಿಷ್ಠಿತ ವ್ಯಕ್ತಿಯು, ಮನೆಮಾರು ಬಿಟ್ಟು
ಾಮಾನ್ಯ ಜನತೆಯ ಮಧ್ಯದಲ್ಲಿ ಬಂದು ಕೈಮುಗಿದು ವಿನಂತಿಸಿ-
ಂಡು ಮಾಡುವ ಈ ಕಾರ್ಯಕ್ಕೆ, ಎಷ್ಟೋ ಜನ ಮುಸಲ್ಮಾನರು
ಾಡ–ಅವರ ಈ ಶ್ರದ್ಧಾಪೂರ್ಣವಾದ ಉಪದೇಶಕ್ಕೆ ಮನಸೋತು,
ವು ಇನ್ನು ಮುಂದೆ ಪ್ರಾಣಿವಧೆ ಪ್ರತಿಬಂಧಿಸುವೆವು–ಅಲ್ಲದೆ ನಾವು
ಂದಿನಿಂದ ಮದ್ಯಮಾಂಸಗಳನ್ನು ತ್ಯಜಿಸುವೆನೆಂದು ಆಣೆ ಮಾಡಿ-
ದ್ದಾರೆ. ಅಲ್ಲದೆ ಆ ಜಾತ್ರೆಯ ಕಾಲಕ್ಕೆ ಅವರಿಗೆ ಬೆಂಬಲನೀಡಿ, ತಮ್ಮ
ತರ ಬಂಧುಗಳನ್ನೂ ಸನ್ಮಾರ್ಗಕ್ಕೆ ತರುತ್ತಿರುವುದನ್ನು ನೋಡಿದರೆ,
ಮುದುಕನ ವ್ಯಕ್ತಿತ್ವದ ಬಗ್ಗೆ ನಮಗೆ ಅರಿವಾಗದೆ ಇರದು.

ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿ

ದಕ್ಷಿಣ ಮಹಾರಾಷ್ಟ್ರದಲ್ಲಿ 'ಬಾಹುಬಲಿ' ಎಂಬ ಒಂದು ಪುಣ್ಯ
ೇತ್ರವಿದೆ. ಶಾಂತಿನಿಕೇತನದಂತಿರುವ ಈ ಕ್ಷೇತ್ರದಲ್ಲಿ ಒಂದು ಆಶ್ರಮ-
ಂಟು. ಅಲ್ಲಿ ಎಷ್ಟೋ ವಿದ್ಯಾರ್ಥಿಗಳೂ ಧಾರ್ಮಿಕ ಶಿಕ್ಷಣದ
ಾತೆಗೆ ಲೌಕಿಕ–ಪಾಠ್ಯಮಿಕ ಶಿಕ್ಷಣವನ್ನು ಸಂಪಾದಿಸುತ್ತಿದ್ದಾರೆ.
ಈ ಸಾದಾ ಸರಳ ಜೀವನದ ಸ್ಥಳವು, ಶ್ರೀ. ಮಪ್ಪಾ ಅವರನ್ನು ಆಕರ್ಷಿ-
ಸಿದ್ದು ಆಶ್ಚರ್ಯವೇನಲ್ಲ. ಇಲ್ಲಿಯೂ ಇವರು ಜೀವದಯಾ ಮಂಡಳವನ್ನು
ಸ್ಥಾಪಿಸಿ, ಸುತ್ತುಮುತ್ತಲಿನ ಹಳ್ಳಿ ಹಾಗೂ ಪಟ್ಟಣಗಳಾದ ಹಲಸನಡಿ,
ಮಿರಜಿ, ಕುಂಭೋಜ, ಕಾಗಲ, ನಾಂದ್ರೆ, ಮಿಣಜಿ, ಆರೇವಾಡಿ,
ಮಾಲಗಾವ, ಉದಗಾವ ಮತ್ತು ಇನ್ನೂ ಕೆಲವು ಊರುಗಳಿಗೆ ಹೋಗಿ,
ಮೇಲಿನಂತೆ ಕಾರ್ಯವನ್ನು ಕೈಕೊಂಡಿದ್ದಾರೆ. ಅಲ್ಲಿಯೂ ಇವರ
ಪ್ರಭಾವ ಸಾಕಷ್ಟು ಬಿದ್ದಿದೆ. ಆ ಆ ಊರಿನ ಜಾತ್ರೆಯ ಪ್ರಮುಖರು
ಇವರ ಬರವನ್ನೇ ಕಾದುಕುಳಿತಿರುತ್ತಾರೆ. ಇವರು ಬಂದಕೂಡಲೇ
ಕಾರ್ಯಾರಂಭ. ಪ್ರತಿಯೊಂದು ಊರಿನ ಗ್ರಾಮಪಂಚಾಯತಿಯವರು
ಇವರ ಹೇಳಿಕೆಯ ಮೇರೆಗೆ, ತಮ್ಮ ಊರಲ್ಲಿ ಎಷ್ಟೋ ಜೀವಹಿಂಸೆಯನ್ನು
ನಿಲ್ಲಿಸಿದ್ದಾರೆ.

ಹೀಗೆ ಮಪ್ಪಾ ಅವರ ಕಾರ್ಯ ಅನಿಚ್ಛಿನ್ನವಾಗಿ ನಡೆಯುತ್ತಲೇ
ಇದೆ. ಹೀಗೆಯೇ ಅವರಿಗೆ ದೇವರು ಆಯುರಾರೋಗ್ಯವನ್ನು ಕೊಟ್ಟು
ಇನ್ನೂ ಕೆಲವು ವರ್ಷ ಅವರಿಂದ ಪುಣ್ಯಕಾರ್ಯವನ್ನು ಮಾಡಿಸಿಕೊಳ್ಳ-
ಲೆಂದು ಪ್ರಾರ್ಥನೆ.

× × × ×

ನಿ. ಸೂ: ಶ್ರೀಮಾನ್ ಜೋತ ಅವರಂತೆಯೆ ಆದರ್ಶ ವ್ಯಕ್ತಿ-
ತ್ವವುಳ್ಳ ಹಿರಿಯರು ಕನ್ನಡನಾಡಿನಲ್ಲಿ ಬೇರೆ ಕಡೆಗಳಲ್ಲಿಯೂ ಇರ-
ಬಹುದು. ನೈತಿಕಜೀವನ, ಔದಾರ್ಯ, ಕರ್ತೃತ್ವಶಕ್ತಿ, ಯಶೋಜೀ-
ವಿತ್ವ-ಮೊದಲಾದ ಸದ್ಗುಣಗಳಿಂದ ಲೋಕಪ್ರಿಯರಾಗಿ, ಲೋಕಕಲ್ಯಾ-
ಣದ ಕಡೆಗೆ ದೃಷ್ಟಿಯಿರಿಸಿ ಬಾಳುವ ನಮ್ಮ ಹಿರಿಯ ವ್ಯಕ್ತಿಗಳನ್ನು
ಜಯಂತಿ ಜನರಿಗೆ ಪರಿಚಯ ಮಾಡಿಕೊಡಬೇಕೆಂದು ಅಪೇಕ್ಷಿಸುತ್ತಿದೆ.
ಅಲ್ಲಲ್ಲಿ ಇರುವ ಬರೆಹಬಲ್ಲವರು, ಅವರ ಪರಿಚಯಗಳನ್ನು ಬರೆದು ಕಳು-
ಹಿಸಿದರೆ ಜಯಂತಿ ಅವಶ್ಯವಾಗಿ ಅವುಗಳ ಪ್ರಕಟನೆಗೆ ಎಡೆಕೊಡುವುದು.

—ಸಂಪಾದಕರು

ಮುಂ ಮುಂ ಮುಂ ಮುಂ ಮುಂ ಮುಂ ಮುಂ ಮುಂ ಮುಂ ಮುಂ

೨೩ನೆಯ ವರ್ಷದಲ್ಲಿ

ಜಯಂತಿಗೆ ಚಂದಾದರ ಬಳಗ ಬೆಳೆಯಲಿ

ಜಯಂತಿಯನ್ನು ಪೋಷಿಸಿದರೆ

ಅದು ಜನರ ಹೃದಯ-ಮನಗಳನ್ನು

ತೋಷಿಸುವುದು.

ಮುಂ ಮುಂ ಮುಂ ಮುಂ ಮುಂ ಮುಂ ಮುಂ ಮುಂ ಮುಂ ಮುಂ

ಮೂಕ ಶೋಕ

ಡಾ. ಚಂದ್ರಶೇಖರ ಕಾಟೀಲ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಒಂದು ಗಳಿಗೆಯ ಹಿಂದೆ.....
[ಕಳೆದ ಜನುಮದಿ ಕಂಡ ಮಸಕು ಕನಸಿನ ಹಾಗೆ
ತೋರುತಿರುವುದು ಈಗ—ನನ್ನ ಕಣ್ ಮುಂದೆ !]
ಗಡಿಯಾರ ಗಂಟಲಕೆ ಜೋತ ಲಂಬಕದಂತೆ
ತೂಗು ಹಾಕುತಲಿತ್ತು ಇಲ್ಲಿ ಜೀವ.
ಮೇಲೊಮ್ಮೆ ಕೆಳಗೊಮ್ಮೆ ತೊನೆದಾಡಿ ಕೆನೆದಾಡಿ
ಜೀಕುತಿದ್ದವು ಇಲ್ಲಿ ನೂರು ಭಾವ.
ಭಾವಭಾವಕೆ ಜೀವ, ಜೀವಜೀವಕೆ ಭಾವ,
ಬೆರೆತಿದ್ದವಿಲ್ಲಿಯೇ ತಳಕುಹಾವುಗಳಂತೆ—
ಎಷ್ಟೊಂದು ಆಂದ ಆ ಹಾವ-ಭಾವ !

× × × ×

ಎಲ್ಲವೂ.....ಎಲ್ಲವೂ.....
ಒಂ....ದು....ಗ....ಳಿ....ಗೆ....ಯ... ಹಿಂ....ದೆ.... !
ಅಯ್ಯೋ! ಈಗೇನಾಯ್ತು ?
' ತಿರುಕನೊರ್ವನೂರ ಮುಂದೆ ' ಕನಸು ಕಂಡಂತಾಯ್ತು.
ಹೆಸಿದ ದುಂಬಿಯ ಹಿಂಡು ಕಾಗದದ ಕುಸುಮದಲಿ
ಬಂಡನುಂಡಂತಾಯ್ತು.
ಭಾವ-ರಾಣಿಯ ತೊರೆದು ಜೀವರಾಜನು ಮಡಿಯೆ
ಎತ್ತೆತ್ತಲೂ ಗೋಳು ಶ್ವಾನಗೀತ;
ಶೂನ್ಯದಾ ಹೆಂಪೆಯಲಿ ಹಾಳು ಊರಿಯನು ಹೊತ್ತು
ಸುತ್ತಲೂ ಸುತ್ತುತಿದೆ ಮೌನ-ಭೂತ.

ನಿರ್ವಾತ ಬಲ್ಬಿನಲಿ ತಂತಿ ಎಲುಬಿನ ಕೈದಿ,
ತುಟಿಯು ಬಿಮ್ಮನೆ ಬಿಗಿದು, ಮೈಯ ಕೆಂಡವ ಮಾಡಿ
ಬೆಂಕಿ-ಕೆಡಿ ಸಿಡಿನೋಟ ತೂರುತಿಹನು.
ಆ ನೋಟ, ಪುಟಚಂಡಿನಂತೆ ಗೋಡೆಗೆ ಬಡಿದು
ನನ್ನ ಕಣ್ಣನು ಸೇರಿ ಕರಗುತಿಹುದು.
(ಎದೆಯೊಳೂ ಇಂಗುತಿದೆ !....ಅಹುದೆ ?....ಅಹುದು !)

ತಿಲುಬೆಯಲಿ ಸಿಲುಕಿರುವ ಬಡ ಹುತಾತ್ಮನ ಹಾಗೆ
' ಹ್ಯಾಂಗರಿ ' ಗೆ ತೂಗುತಿದೆ ಹರಕುಕೋಟು;
ಕೆಳಗೆ ಬೀಳುವೆನೇನೊ ಎಂಬ ಹೆದರಿಕೆ ತೊಟ್ಟು.
ತಾಯಸೆರಗನು ಬಿಡದೆ ಹಿಡಿದ ಮಗುವಿನ ತೆರದಿ
ಗೋಡೆಗಳ ಆಸರವ ಹೊಂದಿ ನಿಂತಿಹುವಲ್ಲಿ
ಜೀವಂತ ಮಾನವರ ನಿರ್ಜೀವಚಿತ್ರ.
' ಪಾಹಿಮಾಂ, ಪಾಹಿಮಾಂ '—ಮೌನದಲಿ ಅರಚುತಿದೆ;
ಮೊಗದಿ, ಭಯ ಮೂಡಿಸಿದ ಭಾವಚಿತ್ರ.

ಅಲ್ಲಿ, ಕ್ಯಾಲೆಂಡರಿನ ಕಾಲಚಕ್ರದ ಅಡಿಗೆ
ಕಾಲನೇ ಉರುಳಿಹನು ಕಾಲು ಮುರಿದು.
ಭೂತಕಾಲವನಳೆದ ನೂರಾರು ಅಂಕಿಗಳು
ಕಣ್ಮುಚ್ಚಿ, ಕೊನೆಯುಸುರನೆಳೆದು ಮಲಗಿವೆ ಎಲ್ಲ;
ಬರಲಿರುವ ಅಂಕಿಗಳು ಕಣ್ಣು ತೆರೆದೇ ಇಲ್ಲ,
ಜೀವನದ ಮೊದಲನೆಯ ಉಸಿರನೆಳೆದಿಲ್ಲ.
ಸುಗ್ಗಿಕಾಲದ ಚೆಲುವ ವರ್ಣಮಯ ಚಿತ್ರದಲಿ
ಬಾಳನರುಣನ ಬೆಳಕು ಕಂಡ ಯುವಕನು ಒರ್ವ,
ತನ್ನ 'ಅವಳ'ಗೆ ತೋಳಿನುಂಗುರವ ತೊಡಿಸುತಲೆ
ನಿನ್ನೆ-ನಾಳೆಯ ಮರೆತು 'ಇಂದಿ'ನಲಿ ಬೆರೆತಿಹನು.
ಅವಳೊಲವೆ ಮೈದಳೆದ ಮೌನಮಂದಿರದಲ್ಲಿ,
" ಗಂಟೆಗಳ ದನಿಯಿಲ್ಲ; ಜಾಗಟೆಗಳಿಲ್ಲಿಲ್ಲ; "
ಕರ್ಪೂರದಾರತಿಯ ಜ್ಯೋತಿಯಿಲ್ಲ "
ಆವರಿಗೋ....ಕಾಲನಾ ಭೀತಿಯಿಲ್ಲ.

ವೈಭವದ ಆರಮನೆಗೆ ರಾತ್ರಿಗನ್ನವ ಹಾಕಿ,
ಸದ್ದುಗದ್ದಲವಿಲ್ಲದಂತೆ ಸಾಮಾನುಗಳ
ಬೆಕ್ಕಿನೊಲು ಸಾಗಿಸುವ ಚೋರಪ್ರಮುಖನಂತೆ—
ಒಳಗೊಮ್ಮೆ ಹೊರಗೊಮ್ಮೆ ಸುಳಿಯುತಿದೆ ನನ್ನುಸಿರು
ಸುತ್ತಲೂ ನೋಡಿದರೆ, ಕೇಳುವವರೇ ಇಲ್ಲ.
ಹಿಡಿದು ಕೂಗಲಿ ನಾನು ಯಾರ ಹೆಸರು ?

ನೂರೆಂಟು ತಗಣಿಗಳ ' ಶರಪಂಜರ'ದ ಮೇಲೆ,
ಬಿಳಿ ಮಗ್ಗು ಲಾಸಿಗೆಯ ಹೆಣದ ಅರಿಮೆಯ ತೊಟ್ಟು,
ಭೀಷ್ಮನೊಲು ಒರಗಿಹುದು ಜೊಂಡು-ಮೈ ಗಾದಿ.
ಸಾವ ಬಾಗಿಲಿನಲ್ಲಿ ಮೊರೆಯುತಿದೆ ನಾಲಗೆಯು—
" ಅರ್ಜುನಾ ! ಅರ್ಜುನಾ ! ಎಲ್ಲಿ ಹೋದೆ ? "
ಮೂಕ ರಣರಂಗದಲಿ ಶೋಕ ಗರ್ಜಿಸುತಿಹುದು—
" ಅರ್ಜುನಾ ! ಅರ್ಜುನಾ ! ಎಲ್ಲಿ ಹೋದೆ ? "

× × × ×

ಢಣ್....ಢಣ್....ಓಹ್ ! ಇದೇನು ?
ತನ್ನಿರವ ಬೀರುತಿದೆ ಗೋಪುರದ ಗಡಿಯಾರ !
ಮೌನದಂತ್ಯವ ಸಾರಿ ತೋರುತಿಹ ಹರಿಕಾರ !
ಅರ್ಜುನನು ಬಂದನೇ, ತನ್ನೊಡನೆ ತಂದನೇ
ಜೀವ ಸಂಜೀವಿನೀ ಗಂಗೆಯನ್ನು ?
" ಇಳಿದು ಬಾ ತಾಯಿ ಇಳಿದು ಬಾ! "

ತೋಬಾಟೇಕಸಿಂಗ್ ಎಲ್ಲಿದೆ?

*ಸಣ್ಣ ಕಥೆ

ಶ್ರೀ. ಶಿವಾನಂದ ಜೋಶಿ, ಬಿ. ಎ. (ಆನರ್ಸ್) ಸೊಲ್ಲಾಪುರ.

ಭಾವನಾತ್ಮಕ ಜನರೆಲ್ಲ ಬುದ್ಧಿವಾದಿಗಳ ದೃಷ್ಟಿಯಲ್ಲಿ ಹುಚ್ಚರ ಮಾಲಿಕೆಯಲ್ಲಿ ಸೇರಿಕೊಳ್ಳುವರು. ಜನ್ಮ ಭೂಮಿಯ ವಿಷಯಕವಾದ ಪ್ರೀತಿ, ಎಂತಹ ಮನುಷ್ಯನನ್ನೂ ಭಾವನಾವಶನನ್ನಾಗಿ ಮಾಡುವುದು. ಭಾರತದ ವಿಭಜನೆ, ಇಂತಹ ಎಷ್ಟು ಜನ ಭಾವುಕರ ಎದೆಗೆ ಸಿಡಿಲಾಗಿ ಪರಿಣಮಿಸಿದ್ದೀತು?

ಭಾರತದ ವಿಭಜನೆಯಾಗಿ ಎರಡು-ಮೂರು ವರ್ಷಗಳು ಕಳೆದಿರಬೇಕು. ಆಗ, 'ಕೈದಿಗಳನ್ನು ಸ್ಥಳಾಂತರಿಸಿದ ಹಾಗೆ, ಎರಡೂ ದೇಶಗಳ ಹುಚ್ಚಾಸ್ಪತ್ರೆಗಳಲ್ಲಿಯ ಹುಚ್ಚರನ್ನೂ ಸ್ಥಳಾಂತರಿಸಬೇಕು!' ಎಂಬ ಯೋಜನೆ ಭಾರತ-ಪಾಕಿಸ್ತಾನ ಸರಕಾರಗಳ ತಲೆಯಲ್ಲಿ ಹೊಕ್ಕಿತು. ಈ ಬಗ್ಗೆ ಸರಕಾರಗಳು ನಿರ್ಣಯ ತೆಗೆದುಕೊಳ್ಳಬೇಕಾದರೆ ದೊಡ್ಡದೊಡ್ಡ ಸಭೆ-ಸಮ್ಮೇಲನಗಳು ನೆರೆದುವು; ಕಮೀಟಿಗಳು ಸ್ಥಾಪಿತವಾದುವು. ಕೊನೆಗೊಮ್ಮೆ, 'ಪಾಕಿಸ್ತಾನದಲ್ಲಿಯ ಹಿಂದು-ಸಿಖ್ಖ ಹುಚ್ಚರನ್ನು ಹಿಂದುಸ್ತಾನಕ್ಕೂ, ಹಿಂದುಸ್ಥಾನದಲ್ಲಿಯ ಮುಸಲ್ಮಾನ ಹುಚ್ಚರನ್ನು ಪಾಕಿಸ್ತಾನಕ್ಕೂ ಸ್ಥಳಾಂತರಗೊಳಿಸುವುದು!' ಎಂಬ ನಿರ್ಣಯವನ್ನು ತೆಗೆದುಕೊಂಡಾಯಿತು. ಈ ವಿನಿಮಯಕ್ಕಾಗಿ ಒಂದು ದಿನವನ್ನು ಕೂಡ ನಿಶ್ಚಯಿಸಲಾಯಿತು.

ಇದಕ್ಕಾಗಿ ಹೆಚ್ಚಿನ ತಯಾರಿಗಳು ನಡೆದುವು. 'ಭಾರತದ ಆಸ್ಪತ್ರೆಗಳಲ್ಲಿಯ ಮುಸಲ್ಮಾನ್ ಹುಚ್ಚರ ಸಂಬಂಧಿಕರು ಭಾರತದಲ್ಲಿಯೇ ಉಳಿದಿದ್ದರೆ, ಅವರನ್ನು ಸ್ಥಳಾಂತರಗೊಳಿಸುವ ಅಗತ್ಯವಿಲ್ಲ!' ಎಂದು ನಿರ್ಣಯವಾಯಿತು. ಪಾಕಿಸ್ತಾನದಲ್ಲಿಯೂ ಹಿಂದೂ ಹಾಗೂ ಸಿಖ್ಖ ಜನವೆಲ್ಲ ಭಾರತಕ್ಕೆ ಹೊರಟುಹೋಗಿದ್ದರಿಂದ, ಪಾಕಿಸ್ತಾನದ ಆಸ್ಪತ್ರೆಗಳಲ್ಲಿಯ ಹಿಂದು-ಸಿಖ್ಖ ಹುಚ್ಚರನ್ನು ಭಾರತಕ್ಕೆ ರವಾನಿಸುವುದು ಎಂದಾಯಿತು. ಅವರಲ್ಲಿ ಕೆಲವರನ್ನು ಹಿಂದೆ ಉಳಿಸುವ ಪ್ರಶ್ನೆಯೇ ಏಳಲಿಲ್ಲ.

ಅತ್ತ ಭಾರತದಲ್ಲಿ ಏನೇನು ನಡೆಯುತ್ತೋ ಗೊತ್ತಿಲ್ಲ; ಆದರೆ ಇತ್ತ ಲಾಹೋರಿನ ಮೆಂಟಲ್ ಆಸ್ಪತ್ರೆಯಲ್ಲಿ ಈ ಸುದ್ದಿ ತಲುಪಿದೊಡನೆ, ದೊಡ್ಡ ಗೊಂದಲವೇ ಎದ್ದಿತು. ಹುಚ್ಚರೆಲ್ಲರೂ ಏನೂ ತಿಳಿಯದೆ ದಂಗುಬಡಿದು ನಿಂತರು. ಒಬ್ಬ ಮುಸಲ್ಮಾನನು ಇನ್ನೊಬ್ಬ ಮುಸಲ್ಮಾನನನ್ನು-ಇವನು ಹನ್ನೆರಡು ವರ್ಷಗಳಿಂದಲೂ ಬಿಟ್ಟೂಬಿಡದೆ 'ಜಮೀಂದಾರ್' ದಿನಪತ್ರಿಕೆಯನ್ನು ಓದುತ್ತಲಿದ್ದ—ಕೇಳಿದ. "ಯಾಕೆ ನಮ್ಮೌಲವಿಸಾಹೇಬರೇ, ಈ ಪಾಕಿಸ್ತಾನವೆಂಡರೆ ಎಂಥದು? ಎಲ್ಲಿದೆ?" ಎಂದು. ಆತ ಗಂಭೀರವದನನಾಗಿ ಉತ್ತರಿಸಿದ: "ಪಾಕಿಸ್ತಾನವೆಂದರೆ, ಚೂರಿಗಳ ಉತ್ಪಾದನೆಗಾಗಿ ಪ್ರಸಿದ್ಧವಿದ್ದ ಒಂದು ಸ್ಥಳ ಅದು ಹಿಂದುಸ್ಥಾನದಲ್ಲಿದೆ" ಅವನು ಬಹಳ ಯೋಚಿಸಿ ಹೀಗೆ ನುಡಿದಿದ್ದ.

ಒಬ್ಬ ಸಿಖ್ಖ ಇನ್ನೊಬ್ಬ ಸಿಖ್ಖನನ್ನು ಪ್ರಶ್ನಿಸಿದ: "ಯಾಕೆ ಸರದಾರಜೀ, ನಮ್ಮನ್ನು ಹಿಂದುಸ್ಥಾನಕ್ಕೆ ಏಕೆ ಕಳಿಸುತ್ತಾರಂತೆ? ನಮಗೆ ಅಲ್ಲಿಯ ಭಾಷೆ ಕೂಡ ಬರುವುದಿಲ್ಲ!" ಅವನ ಮಿತ್ರ ಇಷ್ಟು ಮಾತ್ರ ಹೇಳಿದ: " ನನಗಂತೂ ಹಿಂದುಸ್ಥೋಡ್ ಭಾಷೆ ಬರುತ್ತದಪ್ಪ!"

ಒಂದು ದಿನ ಒಬ್ಬ ಮುಸಲ್ಮಾನ್ ಹುಚ್ಚ ಸ್ನಾನ ಮಾಡುತ್ತಿದ್ದವ, ಒಮ್ಮೆಲೆ ಉತ್ತೇಜಿತನಾಗಿ, "ಪಾಕಿಸ್ತಾನ್ ಜಿಂದಾಬಾದ್!" ಎಂದು ಉದ್ಘೋಷಿಸಿ, ಮರುಕ್ಷಣವೇ ಪ್ರಜ್ಞೆತಪ್ಪಿ ಕೆಳಗುರುಳಿದ. ಅವನು ತನ್ನ ಮೊದಲಿನ ಸ್ಥಿತಿಗೆ ಬರಬೇಕಾದರೆ ಎರಡು ಗಂಟೆ ಹಿಡಿಯಿತು.

ಇವರಲ್ಲಿ ಕೆಲವರಂತೂ ಹುಚ್ಚರಿರಲೇ ಇಲ್ಲ; ಇವರೆಲ್ಲ ಕೊಲೆಗಾರರು; ಮರಣದಂಡನೆಯನ್ನು ತಪ್ಪಿಸಿಕೊಳ್ಳಲೆಂದು ಹುಚ್ಚರಂತೆ ಅಭಿನಯಿಸಿ, ಇಲ್ಲಿಗೆ ಬಂದು ಸೇರಿಕೊಂಡಿದ್ದರು. ಇವರಿಗೇನೋ, 'ಪಾಕಿಸ್ತಾನ್' 'ವಿಭಜನೆ' ಮೊದಲಾದ ಶಬ್ದಗಳ ಅರ್ಥ ಕೆಲಮಟ್ಟಿಗೆ ಅರ್ಥವಾಗುತ್ತಿದ್ದರೂ, ಪೂರ್ತಿ ವಿಷಯ ಇವರಿಗೂ ತಿಳಿದಿರಲಿಲ್ಲ. ವೃತ್ತಪತ್ರಗಳಿಂದಲೂ ಇವರಿಗೆ ಪ್ರಯೋಜನವೇನೂ ಆಗಲಿಲ್ಲ. ಇಲ್ಲಿ ಕಾವಲಿದ್ದ ಸಿಪಾಯಿಗಳೂ ಹೆಚ್ಚು ಕಲಿತಿರಲಿಲ್ಲವಾದ್ದರಿಂದ, ಅವರಿಗೂ ಏನೂ ತಿಳಿದಿರಲಿಲ್ಲ. ಹೀಗಾಗಿ ಈ ಹುಚ್ಚನಟರೂ ಗೊಂದಲದಲ್ಲಿ ಬಿದ್ದಿದ್ದರು.

ಇನ್ನು ಅರೆಹುಚ್ಚರ ಗೊಂದಲವನ್ನಂತೂ ಹೇಳುವಂತಿರಲಿಲ್ಲ. ತಾವು ಹಿಂದುಸ್ಥಾನದಲ್ಲಿರುವೆವೋ ಪಾಕಿಸ್ತಾನದಲ್ಲಿರುವೆವೋ?-

*ಉರ್ದು ಸಾಹಿತ್ಯದ ಅಪರ ಕತೆಗಾರ ಸಆದತ್ ಹಸನ್ ಮಂಟೋ ಅವರ ಕತೆಯೊಂದರ ಅನುವಾದ.)

ಎಂಬುದೇ ಅವರಿಗೆ ತಿಳಿಯದಾಗಿತ್ತು. ತಾವು ಹಿಂದುಸ್ಥಾನದಲ್ಲಿದ್ದರೆ ಪಾಕಿಸ್ಥಾನವೆಂಬುದು ಎಲ್ಲಿದೆ? ಇಲ್ಲನೆ, ಪಾಕಿಸ್ಥಾನವಲ್ಲಿದ್ದರೆ ಇಷ್ಟು ದಿನ ಇಲ್ಲಿಯೇ ಇದ್ದೂ ತಾವು ಹಿಂದುಸ್ಥಾನದಲ್ಲಿದ್ದುದು ಹೇಗೆ?—ಇನೆಲ್ಲ ಪ್ರಶ್ನೆಗಳು ಅವರಿಗೆ ಬಗೆಹರಿಯದ ಕಗ್ಗಂಟುಗಳಾಗಿದ್ದುವು.

ಒಬ್ಬ ಆರೆಹುಚ್ಚನ ಸ್ಥಿತಿಯಂತೂ ಇದರಿಂದಾಗಿ ಇನ್ನೂ ವಿಕಟವಾಯಿತು. ಅವನು ಈ ಹಿಂದುಸ್ಥಾನ-ಪಾಕಿಸ್ತಾನ, ಪಾಕಿಸ್ತಾನ ಹಿಂದುಸ್ಥಾನಗಳ ಸಮಸ್ಯೆಯನ್ನು ಬಿಡಿಸುವುದಕ್ಕೆ ತೊಡಗಿ, ಕೊನೆಗೆ ದಿಕ್ಕುಗಾಣದೆ ಪೂರಾ ಹುಚ್ಚನಾಗಿ ಬಿಟ್ಟ. ಒಂದು ದಿನವಂತೂ ಅವನು ಎತ್ತರವಾದ ಮರವನ್ನೇರಿ, ತುತ್ತ ತುದಿಯಲ್ಲಿ ಕುಳಿತು ತೀವ್ರತವಾಗಿ ಎರಡು ಗಂಟೆಗಳ ಕಾಲ ಹಿಂದುಸ್ಥಾನ-ಪಾಕಿಸ್ತಾನಗಳ ಬಗ್ಗೆ ಭಾಷಣ ಮಾಡಲಾರಂಭಿಸಿದ. ಅಧಿಕಾರಿಗಳು ಬಂದು ಅವನಿಗೆ ಇಳಿಯಲು ಹೇಳಿದರು. ಅವನು ಇನ್ನೂ ಮೇಲಕ್ಕೆ ಏರಿ ಕೂಗಾಡತೊಡಗಿದ: "ನಾನು ಹಿಂದುಸ್ಥಾನದಲ್ಲಿ ಇರಲೂ ಒಲ್ಲೆ, ಪಾಕಿಸ್ತಾನದಲ್ಲಿ ಇರಲೂ ಒಲ್ಲೆ; ನಾನು ಇಲ್ಲಿಯೇ ಈ ಗಿಡದ ಮೇಲೆ ಇದ್ದು ಬಿಡುವೆ" ಎಂಬ ತನ್ನ ನಿರ್ಣಯವನ್ನು ಕೂಗಿಹೇಳಿದನು. ಕೊನೆಗೆ ಹೆದರಿಕೆ-ಬೆದರಿಕೆಗಳನ್ನು ತೋರಿದಾಗ, ಅವನು ಕೆಳಗೆ ಬರಬೇಕಾಯಿತು. ಕೆಳಗಿಳಿದೊಡನೆಯೇ ಅವನು ತನ್ನೊಬ್ಬ ಸಿಖ್ಖ್ ಮಿತ್ರನನ್ನು ತಬ್ಬಿಕೊಂಡು ಗಟ್ಟಿಯಾಗಿ ಅಳತೊಡಗಿದ. 'ಇನ್ನು ಇವರು ತನ್ನನ್ನು ಅಗಲಿ ಹೋಗುವರಲ್ಲ' ಎಂದು ಅವನಿಗೆ ಅತೀವ ದುಃಖವಾಗಿತ್ತು.

ಒಬ್ಬ ಹುಚ್ಚ, ದಿನಕ್ಕೆ ಹತ್ತುಹದಿನೈದು ಸಲ ಸ್ನಾನಮಾಡುತ್ತಿದ್ದವ, ಸ್ನಾನ ಮಾಡುವುದನ್ನೇ ಬಿಟ್ಟು ಬಿಟ್ಟ. ಅವನ ಹೆಸರು ಮಹಮ್ಮದಅಲಿ ಎಂದಿತ್ತು. ಆಯಿತು, ತಾನೇ ಮಹಮ್ಮದಅಲಿ ಜಿನ್ನಾ ಎಂದು ಹೇಳಿಕೊಳ್ಳತೊಡಗಿದ. ನೋಡು-ನೋಡುವಷ್ಟರಲ್ಲಿಯೇ ಒಬ್ಬ ಸಿಖ್ಖ್, ಮಾಸ್ಟರ್ ತಾರಾಸಿಂಗನಾಗಿ ಕುಳಿತ. ಇನ್ನೇನು, ಆಸ್ಪತ್ರೆಯಲ್ಲಿ ಖೂನಿ-ಗೀನಿ ನಡೆಯುವುದೇ? ಆಸ್ಪರಲ್ಲಿ ಅವರನ್ನು ಬೇರ್ಪಡಿಸಿದುದರಿಂದ, ಅಂಥದೇನೂ ಘಟಿಸಲಿಲ್ಲ.

ಲಾಹೋರಿನ ಒಬ್ಬ ತರುಣ ಹಿಂದೂ ವಕೀಲ, ಪ್ರೇಮವಂಚನೆಯಿಂದಾಗಿ ಮತಿಭ್ರಮ್ಮನಾಗಿ ಅಲ್ಲಿಗೆ ಬಂದಿದ್ದ. 'ಅಮೃತಸರವು ಹಿಂದುಸ್ಥಾನದಲ್ಲಿ ಉಳಿಯಿತು' ಎಂಬುದನ್ನು ತಿಳಿದು ಅವನಿಗೆ ತುಂಬ ವ್ಯಸನವಾಯಿತು. ಅವನು ಪ್ರೇಮಿಸಿದ ಹುಡುಗಿ ಅಮೃತಸರದವಳಾಗಿದ್ದಳು. ಅವನಿಗೆ ಹುಚ್ಚು ಹಿಡಿದಸಮಯವೂ, ಅವಳ ನೆನಪು ಇದ್ದೇ ಇತ್ತು. ಅವನು, ದೇಶವನ್ನು ಒಡೆದುಹಾಕಿದ ಮುಖಂಡರನ್ನೆಲ್ಲ ದಿನವೀಡೀ ಬೈಯುತ್ತಲೇ ಇದ್ದ. 'ನಿನ್ನನ್ನು ಹಿಂದುಸ್ಥಾನಕ್ಕೇ-ಎಂದರೆ ಅಮೃತಸರಕ್ಕೇ ಕಳಿಸುತ್ತಾರೆ, ಸುಮ್ಮನಿರು!' ಎಂದು ಅವನಿಗೆ ಕೆಲವರು ಸಮಾಧಾನ ಹೇಳಿದರು. ಆದರೆ ಅವನಿಗೆ ಲಾಹೋರವನ್ನು ಬಿಡಲಿಕ್ಕೆ ಇಷ್ಟವಿರಲಿಲ್ಲ; ಅಮೃತಸರದಲ್ಲಿ ನನ್ನ ಲಾಯರಿ ಪ್ರಾಕ್ಟೀಸು ಜೆನ್ನಾಗಿ ನಡೆಯಲಿಕ್ಕಿಲ್ಲ— ಎಂದು ಅವನ ಅಭಿಪ್ರಾಯವಿತ್ತು.

ಇನ್ನೊಬ್ಬ ಸಿಖ್ಖನಿವ್ನ, ಅವನು ಈ ಆಸ್ಪತ್ರೆಗೆ ಸೇರಿಕೊಂಡು ಹದಿನೈದು ವರುಷವಾಗಿತ್ತು. ಯಾವಾಗಲೂ "ಊಪಡದೀ ಗಡಗಡದೀ ಏಂಕಸದೀ ಬೇಧಮಾನಾದೀ ಮುಂಗದೀ ದಾಲ ಆಫ್ ಲಾಲ-ಜೈನ್" ಎಂಬ ಅರ್ಥವಾಗದ ಏನೇನೋ ಮಾತುಗಳನ್ನು ಬಡಬಡಿಸುತ್ತಿದ್ದ. ಅವನು ಒಮ್ಮೆಯೂ ಮಲಗಿ ನಿದ್ರೆಹೋದುದೇ ಇರಲಿಲ್ಲ. ಆಲ್ಲಿಯ ಪಹರೆದಾರರಿಗೆ ಗೊತ್ತಿದ್ದಂತೆ, ಅವನು ಹದಿನೈದು ವರುಷಗಳಲ್ಲಿ ಒಂದು ದಿನವೂ ಮಲಗಿಕೊಂಡಿರಲಿಲ್ಲವಂತೆ! ಯಾವಾಗಲೂ ನಿಂತೇ ಇರುತ್ತಿದ್ದ; ಬಹಳವಾದರೆ ಯಾವಾಗಾದರೊಮ್ಮೆ ಗೋಡೆಗೆ ಆತು ನಿಲ್ಲುತ್ತಿದ್ದ. ಅವ್ಯಾಹತವಾಗಿ ನಿಂತೇ ಇರುತ್ತಿದ್ದರಿಂದ, ಅವನ ಕಾಲಿನ ಮೀನುಗಂಡಗಳು ಊದಿಕೊಂಡಿದ್ದುವು. ಆದರೂ ಅವನು ಒಮ್ಮೆಯೂ ಕುಳಿತುಕೊಂಡಿರಲಿಲ್ಲ; ಇಲ್ಲವೆ 'ಅಡ್ಡಾ'ಗಿರಲಿಲ್ಲ, ಹಿಂದುಸ್ಥಾನ್-ಪಾಕಿಸ್ಥಾನಗಳ ಬಗೆಗಾಗಲಿ, ವಿಭಜನೆಯನ್ನು ಕುರಿತಾಗಲಿ, ಮಿಕ್ಕ ಹುಚ್ಚರಲ್ಲಿ ಮಾತುಕತೆ ನಡೆದಾಗ, ಅವನು ಚಿತ್ತವಿಟ್ಟು ಅವರ ಮಾತುಗಳನ್ನು ಆಲಿಸುತ್ತಿದ್ದ. ಯಾರೋ ಅವನನ್ನು ಕೇಳುತ್ತಿದ್ದರು: 'ಇದರ ಬಗ್ಗೆ ನಿನ್ನ ಅಭಿಪ್ರಾಯವೇನು?' ಎಂದು. ಅವನು ಗಂಭೀರನಾಗಿ ಉತ್ತರಿಸುವ, "ಊಪಡದೀ ಗಡಗಡದೀ ಏಂಕಸದೀ ಬೋಧಯಾನಾದೀ, ಮುಂಗದೀ ದಾಲ ಆಫ್ ದೀ ಪಾಕಿಸ್ತಾನ್ ಗವ್ವರ್ನಮೆಂಟ್" ಎಂದು. ಆದರೆ ಬರಬರುತ್ತ "ಪಾಕಿಸ್ತಾನ್ ಗವ್ವರ್ನಮೆಂಬ" ಎಂಬುದನ್ನ "ಆಫ್ ದಿ ತೋಬಾ ಟೇಕ್ ಸಿಂಗ್ ಗವ್ವರ್ನಮೆಂಟ್" ಎಂಬುದು ಆಕ್ರಮಿಸಿತು. ಅವನು ಅವರಿವರನ್ನು ಮತ್ತೆ ಮತ್ತೆ ಪ್ರಶ್ನಿಸತೊಡಗಿದ: "ತೋಬಾಟೇಕಸಿಂಗ್ ಎಲ್ಲಿದೆ?" ಎಂದು; ಆದರೆ ಅಲ್ಲಿರುವ ಯಾರೊಬ್ಬರಿಗೂ ಈ 'ತೋಬಾಟೇಕಸಿಂಗ್' ಎಂಬುದು ಎಲ್ಲಿದೆ, ಪಾಕಿಸ್ತಾನದಲ್ಲಿಯೋ ಹಿಂದುಸ್ತಾನದಲ್ಲಿಯೊ-ಎಂಬುದೇ ತಿಳಿದಿರಲಿಲ್ಲ. ಸಿಯಾಲ್‌ಕೋಟ್ ಎಂಬುದು ಮೊದಲು ಹಿಂದುಸ್ತಾನದಲ್ಲಿತ್ತು. ಈಗ ಪಾಕಿಸ್ತಾನದಲ್ಲಿದೆಯಂತೆ-ಅದು ಹೇಗೊ! ಇಂತಹ ಗೊಂದಲಗಳಲ್ಲಿಯೇ ಎಲ್ಲರೂ ತೊಡಕಿಕೊಂಡಿದ್ದರಾದ್ದರಿಂದ, ಯಾರೂ ಅವನ ಪ್ರಶ್ನೆಯನ್ನು ಉತ್ತರಿಸುವುದಕ್ಕೆ ಸಮರ್ಥರಾಗಲಿಲ್ಲ.

ಅವನ ತಲೆಯಲ್ಲಿ ಕೂದಲು ಇನಿಸೂ ಉಳಿದಿರಲಿಲ್ಲ, ಅವನು ಸ್ನಾನ ಮಾಡುತ್ತಿದ್ದುದೇ ಕ್ವಚಿತ್ತಾಗಿಯಾದ್ದರಿಂದ, ಅವನ ಗಡ್ಡವೆಲ್ಲ ನಿಗುರಿನಿಂತು, ಮುಖ ಭಯಾನಕವಾಗಿ ತೋರುತ್ತಿತ್ತು. ಆದರೆ ಅವನು ಮೊದಲಿನಿಂದಲೂ ಸಾಧು-ಪ್ರಾಣಿಯೆಂದು ಹೆಸರಾಗಿದ್ದ; ಯಾರಿಗೂ ಒಂದು ಕೈ ಹಚ್ಚಿದವನಲ್ಲ. ಅವನು 'ತೋಬಾ ಟೇಕಸಿಂಗ"ದ ಒಂದು ಜಮೀನುದಾರ ಮನೆತನಕ್ಕೆ ಸೇರಿದವನಾಗಿದ್ದ. ಏಕೋ ಏನೋ, ಒಂದು ದಿನ ಇದ್ದಕ್ಕಿದ್ದಂತೆ ಹುಚ್ಚನಾಗಿ ಬಿಟ್ಟವ್ದ; ಆದ್ದರಿಂದ ಅವನ ಜನ ಅವನನ್ನು ಇಲ್ಲಿ ತಂದಿರಿಸಿ ಹೋಗಿದ್ದರು.

ಅವನ ಹೆಸರು 'ಬಿಸನಸಿಂಗ್' ಎಂದಿತ್ತು; ಆದರೆ ಈಗ ಅವನನ್ನು ಎಲ್ಲರೂ 'ತೋಬಾಟೇಕ್‌ಸಿಂಗ್' ಎಂದೇ ಕರೆಯುತ್ತಿದ್ದರು. ಅವನ ಸಂಬಂಧಿಕರು ತಿಂಗಳಿಗೊಮ್ಮೆ ಬಂದು ಅವನನ್ನು ಭೆಟ್ಟಿಯಾಗಿ ಹೋಗುತ್ತಿದ್ದರು. ಅವನು ದಿನ ಯಾವುದು, ತಿಂಗಳು ಯಾವುದು, ವರ್ಷ ಯಾವುದು, ಎಂಬುದೆಲ್ಲವನ್ನೂ ಮರೆತುಬಿಟ್ಟಿದ್ದ; ಆದರೆ ಪ್ರತಿ ತಿಂಗಳೂ ತನ್ನ ಸಂಬಂಧಿಕರು ತನ್ನನ್ನು ಸಂಧಿಸಲು ಬರುವ ದಿನ ಯಾವುದು—ಎಂಬುದು ಅವನಿಗೆ ಕಟ್ಟನೆ ಹೊಳೆಯುತ್ತಿತ್ತು. ಆರೀತಿ

ಅವನು ಚೆನ್ನಾಗಿ ಸ್ನಾನ ಮಾಡುತ್ತಿದ್ದ. ಸಾಬೂನು ಹಾಕಿಕೊಳ್ಳುತ್ತಿದ್ದ. ತಲೆಗೆ ಎಣ್ಣೆ ತೊಡೆದುಕೊಂಡು ಬಾಚಿಕೊಳ್ಳುತ್ತಿದ್ದ; ಎಂದೂ ಧರಿಸದಿದ್ದ ತನ್ನ ಬಟ್ಟೆಗಳನ್ನು ತೆಗೆಯಿಸಿ ಧರಿಸುತ್ತಿದ್ದ. ಹೀಗೆ ಸಿಂಗರಿಸಿಕೊಂಡು ತನ್ನ ಜನರ ಹತ್ತಿರ ಹೋದರೂ, ಅವನು ಮಾತನಾಡುತ್ತಿದ್ದುದು ಕಡಿಮೆಯೇ! ಅವರು ಏನಾದರೂ ಕೇಳಿದರೆ, ಮೌನವೇ ಅವರಿಗೆ ಉತ್ತರವಾಗುತ್ತಿತ್ತು. ಇಲ್ಲವೆ, ಅವರಿಗೆ ಅರ್ಥವಾಗದ "ಊಪರ್ ದೀ ಗಡಗಡದೀ...." ಇತ್ಯಾದಿ ನುಡಿಗಳನ್ನು ಪುಟಪುಟಿಸುತ್ತಿದ್ದ.

ಅವನಿಗೆ ಒಬ್ಬಳು ಮಗಳಿದ್ದಳು. ಹದಿನೈದು ವರುಷದ ಜವ್ವನೆಯಾಗಿ ಬೆಳೆದಿದ್ದ ಅವಳನ್ನು ಬಿಶನ್‌ಸಿಂಗ್ ಗುರುತಿಸುತ್ತಿರಲಿಲ್ಲ. ಅವಳು ಮಗುವಿದ್ದಾಗಲೂ ತಂದೆಯನ್ನು ನೋಡಿ ಅಳುತ್ತಿದ್ದಳು; ಈಗ ಕೂಡ ಕಂಬನಿ ಹರಿಸುವುದನ್ನು ನಿಲ್ಲಿಸಿರಲಿಲ್ಲ.

ಈ ಹಿಂದುಸ್ಥಾನ್-ಪಾಕಿಸ್ತಾನ್‌ಗಳ ಗೊಂದಲ ಪ್ರಾರಂಭವಾದೊಡನೆ, ಬಿಶನ್‌ಸಿಂಗ ಕುಡಕುಡಿದವರನ್ನು ಕೇಳತೊಡಗಿದ: 'ತೋಬಾ ಟೇಕ್‌ಸಿಂಗ್ ಈಗ ಎಲ್ಲಿದೆ?' ಎಂದು. ಯಾರಿಂದಲೂ ಉತ್ತರ ದೊರೆಯದ್ದರಿಂದ, ಅವನ ಸಮಸ್ಯೆ ಕಗ್ಗಂಟಾಗುತ್ತಲೇ ಹೋಯಿತು.

ಆ ಆಸ್ಪತ್ರೆಯಲ್ಲಿ ತನ್ನಷ್ಟಕ್ಕೇ 'ಖುದಾ' ಎಂದು ಕರೆದುಕೊಳ್ಳುವ ಒಬ್ಬ ಮುಸಲ್ಮಾನನೂ ಇದ್ದ. ಒಮ್ಮೆ ಬಿಶನ್‌ಸಿಂಗ ಅವನನ್ನು 'ತೋಬಾ ಟೇಕ್‌ಸಿಂಗ್ ಎಲ್ಲಿದೆ?' ಎಂದು ಕೇಳಿದಾಗ, ಅವನು ನಿಸ್ಸೀಮ ಗಾಂಭೀರ್ಯದಿಂದ ಉತ್ತರಿಸಿದ: "ಹಿಂದುಸ್ಥಾನದಲ್ಲಿಯೂ ಇಲ್ಲ, ಪಾಕಿಸ್ತಾನದಲ್ಲಿಯೂ ಇಲ್ಲ. ಯಾಕೆಂದರೆ ಈ ಬಗ್ಗೆ ನಾನಿನ್ನೂ ಹುಕುಮನ್ನೇ ಕೊಟ್ಟಿಲ್ಲ" ಎಂದು.

ಬಿಶನ್‌ಸಿಂಗ್ ಅವನನ್ನು ಸೆರಗೊಡ್ಡಿ ಪ್ರಾರ್ಥಿಸಿದ: 'ಬೇಗನೆ ಹುಕುಮನ್ನು ಕೊಟ್ಟುಬಿಡು' ಎಂದು; ಆದರೆ 'ಖುದಾ' ನಿರಾಕರಿಸಿದ. ಅವನು ಕೊಡಬೇಕಾದ ಹುಕುಮುಗಳು ಇನ್ನೂ ಬೇಕಾಷ್ಟು ಇದ್ದುವಂತೆ! ಒಂದು ದಿನ ಬಿಶನ್‌ಸಿಂಗ ಅವನ ಮೇಲೆ ರೊಚ್ಚಿಗೆದ್ದ. "ಉಪ ಡದೀ ಗಡಗಡದೀ ಏಂಕಸ್‌ದೀ ಬೇಧಯಾನಾದೀ ಮುಂಗ ದೀ ದಾಲ್ ಆಫ್ ವಾಹ್ ಗುರುಜೀ ವಾಹ್ ಖಾಲಸಾ ಎಂಡ್ ವಾಹ್ ಗುರೂಜೀ ಕೀ ಫತ್‌ಹ್ ಜೋ ಬೋಲೇಸೋ ನಿಹಾಲ ಸತ್ ಸಿರೀ ಅಕಾಲ್" ಎಂದು ಏನೇನೋ ಗೊಣಗಿದ. ಬಹುಶಃ 'ನೀನು ಮುಸಲ್ಮಾನರ ಖುದಾ ಆದ್ದರಿಂದ,ನನ್ನ ಪ್ರಾರ್ಥನೆಯನ್ನು ಕೇಳಲೊಲ್ಲೆ, ಸಿಖ್ಖರ ಖುದಾ ಆಗಿದ್ದರೆ ಕೇಳುತ್ತಿದ್ದೆ' ಎಂಬುದು ಅವನ ಅಭಿಪ್ರಾಯವಾಗಿದ್ದಿರಬಹುದು.

ಸ್ಥಳಾಂತರವಾಗುವುದಕ್ಕೂ ಕೆಲವು ದಿನಗಳಿಗೆ ಮುನ್ನ ಬಿಶನ್‌ಸಿಂಗನ ಮುಸಲ್ಮಾನ ಮಿತ್ರನೊಬ್ಬ ಅವನನ್ನು ಭೆಟ್ಟಿಯಾಗುವುದಕ್ಕೆ ಬಂದ. ಅವನು ಈ ಮೊದಲು ಒಮ್ಮೆಯೂ ಬಂದಿರಲಿಲ್ಲ. ಅವನನ್ನು ಕಂಡೊಡನೆಯೇ ಬಿಶನ್‌ಸಿಂಗ್ ಬೆದರಿ ಹಿಂದಿರುಗಿದ. ಆದರೆ ಸಿಪಾಯಿಗಳು ಅತನನ್ನು ತಡೆದು ಹೇಳಿದರು:—"ಅವನು ನಿನ್ನ ಗೆಳೆಯ ಫಜಲ್‌ದೀನ್, ನಿನ್ನನ್ನೇ ಭೆಟ್ಟಿಯಾಗಲು ಬಂದಿದ್ದಾನೆ."

ಬಿಶನ್‌ಸಿಂಗ್ ಅವನೆಡೆಗೆ ತಿರುಗಿ, ತನ್ನ ನಿತ್ಯದ ಅರ್ಥವಾಗದ ಮಾತುಗಳನ್ನೇ ಬಡಬಡಿಸತೊಡಗಿದ. ಫಜಲ್‌ದೀನ್ ಅವನ ಹೆಗಲ ಮೇಲೆ ಕೈಹಾಕಿ ಅವನನ್ನು ಸಂತೈಸುತ್ತ ಹೇಳತೊಡಗಿದ: "ನಾನು ಬಹಳ ದಿನಗಳಿಂದ ನಿನ್ನನ್ನು ಭೆಟ್ಟಿಯಾಗಬೇಕೆಂದು ಇಚ್ಛಿಸುತ್ತಿದ್ದೆ; ಆದರೆ ಆಗಲೇ ಇಲ್ಲ. ನಿನ್ನ ಜನರೆಲ್ಲ ಕ್ಷೇಮವಾಗಿದ್ದಾರೆ. ಅವರೆಲ್ಲರೂ ಹಿಂದುಸ್ಥಾನಕ್ಕೆ ಹೋದರು. ನನ್ನಿಂದ ಸಾಧ್ಯವಾದಷ್ಟು ಮದ್ದತು ಮಾಡಿದೆ. ನಿನ್ನ ಮಗಳು ರೂಪಕೌರ್....." ಎನ್ನುತ್ತ ಅವನು ತಡೆದ. ಬಿಶನ್‌ಸಿಂಗ್ ನೆನಪುಮಾಡಿಕೊಳ್ಳುವವನಂತೆ ಕನವರಿಸಿದ. "ನನ್ನ ಮಗಳು ರೂಪಕೌರ್?...."

"ಹೌದು. ಅವಳೂ ಚೆನ್ನಾಗಿದ್ದಾಳೆ....ನಿನ್ನನ್ನು ಬಹಳ ನೆನಸುತ್ತಾಳೆ. ಅವಳೂ ಅನರೊಡನೆ ಹಿಂದುಸ್ಥಾನಕ್ಕೆ ಹೋದಳು. ನಿನ್ನನ್ನು ನೋಡಿಕೊಳ್ಳುವಂತೆ ಬಹಳ ಹೇಳಿಹೋಗಿದ್ದಾಳೆ. ನೀನೂ ಹಿಂದುಸ್ಥಾನಕ್ಕೆ ಹೋಗುವೆಯಂತಲ್ಲ? ಅಲ್ಲಿಗೆ ಹೋದೊಡನೆ, ಭಾಯಿ ಬಲಭೀಮುಸಿಂಗನಿಗೆ, ಭಾಯಿ ವಧವಾಸಿಂಗನಿಗೆ ನನ್ನ ಸಲಾಮುಗಳನ್ನು ಹೇಳು. ಅಮೃತಕೌರ್ ಬಹನಳಿಗೂ ನನ್ನ ಸಲಾಮುಗಳನ್ನು ಹೇಳು. ಭಾಯಿ ಬಲಭೀಮುಸಿಂಗನಿಗೆ ಹೇಳು 'ಫಜಲದೀನ್ ಬಹಳ ಖುಶಿಯಾಗಿದ್ದಾನೆಂದು. ಅವನು ಕೊಟ್ಟುಹೋದ ಎರಡು ಎಮ್ಮೆಗಳಲ್ಲಿ ಎರಡೂ ಒಂದೊಂದು ಕರುವನ್ನು ಇಟ್ಟವು. ಆದರೆ, ಹೆಣ್ಣುಕರು ಆರೇ ದಿನಗಳಲ್ಲಿ ಪತ್ತುಹೋಯಿತು.... ನನ್ನಿಂದ ಏನಾದರೂ ಕೆಲಸವಾಗಬೇಕಾಗಿದ್ದರೆ ಯಾವಾಗ ಬೇಕಾದರೂ ಮಾಡಲು ಸಿದ್ಧನಿದ್ದೇನೆ....ಇಲ್ಲಿ ನೋಡು, ನಿನ್ನ ಸಲುವಾಗಿ ಮಿತಾಯಿ ತಂದಿದ್ದೇನೆ." ಬಿಶನ್‌ಸಿಂಗ ಪೊಟ್ಟಣವನ್ನು ತೆಗೆದುಕೊಂಡು, ಬಳಿಯಲ್ಲಿದ್ದ ಸಿಪಾಯಿಗೆ ಕೊಟ್ಟ. ಫಜಲದೀನನಿಗೆ ಕೇಳಿದ:

"ತೋಬಾಟೇಕ್‌ಸಿಂಗ್ ಎಲ್ಲಿದೆ?"

"ಎಲ್ಲಿದೆ ಎಂದರೆ? ಮೊದಲು ಎಲ್ಲಿತ್ತೋ ಅಲ್ಲಿಯೇ ಇದೆ!" ಎಂದ ಫಜಲದೀನ್.

"ಹಿಂದುಸ್ಥಾನದಲ್ಲಿಯೋ ಪಾಕಿಸ್ತಾನದಲ್ಲಿಯೋ?" ಮತ್ತೆ ಬಿಶನ್‌ಸಿಂಗ್ ಕೇಳಿದ.

"ಹಿಂದುಸ್ಥಾನದಲ್ಲಿ..... ಇಲ್ಲಿಲ್ಲ..... ಪಾಕಿಸ್ತಾನದಲ್ಲಿದೆ!" ಫಜಲುದ್ದೀನ್ ಅನುಮಾನಿಸುತ್ತ ಉತ್ತರಿಸಿದ.

ಬಿಶನ್‌ಸಿಂಗ್ ತನ್ನ ಮಿತ್ರನ ಮೇಲಿನ ಆಸ್ಥೆಯೆಲ್ಲವನ್ನೂ ಕಳೆದುಕೊಂಡು ಬಡಬಡಿಸುತ್ತ ಹೊರಟುಬಿಟ್ಟ. "ಊಪಡದೀ ಗಡಗಡದೀ ಏಂಕಸ್‌ದೀ ಬೇಧಯಾನಾ ದೀ ಮುಂಗದೀ ಡಾಲ ಆಫ್ ದಿ ಪಾಕಿಸ್ತಾನ್ ಆ್ಯಂಡ್ ಹಿಂದುಸ್ಥಾನ್ ಆಫ್ ದಿ ದೂರ್ ಫಟೇ ಮುಹೆ" ಎಂದು.

ಹಿಂದೂ ಹಾಗೂ ಸಿಖ್ಖ್ ಹುಚ್ಚರನ್ನು ಹಿಂದುಸ್ಥಾನಕ್ಕೆ ಕಳಿಸುವುದಕ್ಕಾಗಿ ಸಿದ್ಧತೆಗಳು ನಡೆದುವು. ಗೊತ್ತುಮಾಡಿದ ದಿನವೂ ಬಂದಿತು.

ಅಂದು ಎರಡೂ ದೇಶಗಳಲ್ಲಿಯ ಹುಚ್ಚರನ್ನು ಸರಹದ್ದಿಗೆ ತಂದು ಮುಟ್ಟಿಸಲಾಯಿತು. ಇಬ್ಬದಿಯ ಆಫೀಸರರು ಸಂಧಿಸಿ ವಿಚಾರವಿನಿಮಯ ಮಾಡಿದರು. ಹುಚ್ಚರನ್ನು ಸ್ಥಳಾಂತರಿಸುವ ಕೆಲಸವು ಪ್ರಾರಂಭವಾಯಿತು. ಹೊತ್ತು ಮುಳುಗಿ ಕತ್ತಲೆ ಕವಿದರೂ, ಈ ಕೆಲಸ ನಡೆದೇ ಇತ್ತು.

ಹುಚ್ಚರನ್ನು ಲಾರಿಯಿಂದ ಕೆಳಗೆ ಕಳಿಸುವುದೇ ಕಷ್ಟದ ಕೆಲಸವಾಗಿಬಿಟ್ಟಿತ್ತು. ಹೇಗಾದರೂ ಮಾಡಿ ಅವರನ್ನು ಕೆಳಗಿಳಿಸಿದರೂ, ಅವರನ್ನು ನಿಯಂತ್ರಿಸುವುದು ಇನ್ನೂ ಕಠಿಣದ ಕೆಲಸವಾಗಿತ್ತು. ಅವರೆಲ್ಲ ಅತ್ತಿತ್ತ ಓಡಲು ಯತ್ನಿಸುತ್ತಿದ್ದರು ಬಟ್ಟೆಗಳನ್ನು ಹರಿದುಕೊಂಡು ಚಿಂದಿ ಮಾಡುತ್ತಿದ್ದರು. ಅವರ ಬಾಯಿಂದ ಹೊರಡುತ್ತಿದ್ದ ಅವ್ಯಾಹತ ಬೈಗಳನ್ನಂತೂ ನಿಯಂತ್ರಿಸುವುದಕ್ಕೆ ಸಾಧ್ಯನಿರಲಿಲ್ಲ ಕೆಲವರು ಬೇರೆಯವರನ್ನು ಅಪ್ಪಿಕೊಂಡು ಅಳುತ್ತಿದ್ದರು. ಇನ್ನು ಕೆಲವರು ಮುಷ್ಟಿಯುದ್ಧಕ್ಕೆ ನಿಲ್ಲುತ್ತಿದ್ದರು. ಹೆಂಗಸರನ್ನು ತಡೆಹಿಡಿಯುವುದಂತೂ ಹೆಚ್ಚಿನ ಕೆಲಸವಾಗಿತ್ತು. ಅವರು ಮಾಡುತ್ತಿದ್ದ ಕೋಲಾಹಲಕ್ಕೆ ಕೊನೆಯೇ ಇರಲಿಲ್ಲ.

ಅವರಲ್ಲಿ ಕೆಲವರಿಗೆ ಎಲ್ಲಿಲ್ಲಿಗೂ ಹೋಗುವುದೇ ಬೇಡವಾಗಿತ್ತು. ಇವರು ತಮ್ಮನ್ನು ಎತ್ತಿ ಒಯ್ದು ಎಲ್ಲಿ ಬೀಸಾಡುತ್ತಿದ್ದಾರೆ?—ಎಂಬುದು ಅವರಿಗೆ ತಿಳಿಯದಾಗಿತ್ತು. ತಿಳಿದುಕೊಂಡಿದ್ದ ಹುಚ್ಚರು 'ಪಾಕಿಸ್ತಾನ್ ಜಿಂದಾಬಾದ್' 'ಪಾಕಿಸ್ತಾನ್ ಮುರ್ದಾಬಾದ್' ಮುಂತಾದ ಕೂಗುಗಳಿಂದ ಹುಯಿಲೆಬ್ಬಿಸಿದರು. ಇದರಿಂದಾಗಿ ಕೈಗೆಕೈ ಹತ್ತುವ ಪ್ರಸಂಗಗಳೂ ಇದ್ದುವು; ಬಹು ಪ್ರಯಾಸದಿಂದ ಅವುಗಳನ್ನು ಹತ್ತಿಕ್ಕಲಾಯಿತು.

ಬಿಶನ್‌ಸಿಂಗನ ಪಾಳಿ ಬಂದಾಗ ಹಿಂದುಸ್ಥಾನೀ ಆಫೀಸರನು ಅವನ ಹೆಸರನ್ನು ತನ್ನ ರಜಿಸ್ಟರಿನಲ್ಲಿ ಬರೆದುಕೊಳ್ಳತೊಡಗಿದ. ಬಿಶನ್‌ಸಿಂಗ್ ಮತ್ತೆ ಕೇಳಿದ. ತೋಬಾಟೇಕಸಿಂಗ್ ಎಲ್ಲಿದೆ?" ಎಂದು. "ಎಲ್ಲಿ ಎಂದರೆ? ಪಾಕಿಸ್ತಾನದಲ್ಲಿ!" ಎಂದು ಆಫೀಸರ್ ನಕ್ಕು ಉತ್ತರಿಸಿದ.

ಇದನ್ನು ಕೇಳಿದೊಡನೆ ಬಿಶನ್‌ಸಿಂಗ್ ಹಿಂದಿರುಗಿ ಓಡಿಹೋಗಿ ತನ್ನವರನ್ನು ಕೂಡಿಕೊಂಡ. ಪಾಕಿಸ್ತಾನಿ ಸಿಪಾಯಿಗಳು ಅವನನ್ನು ಹಿಡಿದೆಳೆದರು. ಆದರೆ ಅವನು ಅಲ್ಲಿಂದ ಕದಲಲಿಲ್ಲ. ಹಟಮಾರಿಯಾಗಿ ನಿಂತಲ್ಲಿ ನಿಂತುಬಿಟ್ಟ. "ತೋಬಾಟೇಕ್‌ಸಿಂಗ್ ಇಲ್ಲಿಯೇ ಇದೆ. ನಾನೆಲ್ಲಿಗೂ ಬರುವುದಿಲ್ಲ!" ಎಂದು ಅರಚಿದೆ. "ಊಪಡದೀ ಗಡಗಡದೀ ಎಂಕಸ್‌ದೀ ಬೇಧಯಾನಾದೀ ಮುಂಗದೀ ಹಾಲ್ ಆಫ್‌ದಿ ತೋಬಾಟೇಕ್‌ಸಿಂಗ್ ಆ್ಯಂಡ್ ಪಾಕಿಸ್ತಾನ್" ಎಂದು ಕೂಗಾಡತೊಡಗಿದ.

ಆಫೀಸರರು ಅವನ ಮನವೊಲಿಸಲು ಬಹುವಾಗಿ ಪ್ರಯತ್ನಿಸಿದರು:—'ತೋಬಾಟೇಕ್‌ಸಿಂಗ್ ವೀಗ ನಿಜಕ್ಕೂ ಹಿಂದುಸ್ಥಾನಕ್ಕೇ ಹೋಗಿದೆ; ಹೋಗಿರದಿದ್ದರೂ ಅದನ್ನು ಬೇಗನೆ ಅಲ್ಲಿಗೆ ಕಳಿಸುವ ವ್ಯವಸ್ಥೆ ಮಾಡಲಾಗುವುದು; ಎಂದೆಲ್ಲ ಅವನಿಗೆ ತಿಳಿಹೇಳಿದರು. ಆದರೆ ಬಿಶನ್‌ಸಿಂಗ್ ಅಚಲವಾಗಿ ನಿಂತಿದ್ದ. ಅವನನ್ನು ಬಲಪೂರ್ವಕವಾಗಿ ಎಳೆದೊಯ್ಯಲು ಯತ್ನಿಸಿದಾಗ, ಅವನು ತನ್ನ ಊದಿಕೊಂಡ ಕಾಲುಗಳನ್ನು ಗಟ್ಟಿಯಾಗಿ ನೆಲದ ಮೇಲೂರಿ ಅಲುಗದೆ ನಿಂತುಬಿಟ್ಟ. ಯಾವ ಶಕ್ತಿಗೂ ಅವನನ್ನು ಅಲ್ಲಿಂದ ಎಳೆದೊಯ್ಯುವುದು ಸಾಧ್ಯವಿರಲಿಲ್ಲ.

ಬಿಶನ್‌ಸಿಂಗ್ ನಿರುಪದ್ರವಿ ಪ್ರಾಣಿಯಾದುದರಿಂದ 'ಸದ್ಯಕ್ಕೆ ಅವನು ಇದ್ದಲ್ಲಿಯೇ ಇರಲಿ; ಹಿಂದುಗಡೆ ಅವನನ್ನು ನೋಡಿಕೊಂಡರಾಯಿತು' ಎಂದು ಅವರೆಲ್ಲ ಬೇರೆ ಬೇರೆ ಕೈದಿಗಳನ್ನು ಸಾಗಿಸುವ ಕೆಲಸದಲ್ಲಿ ತೊಡಗಿದರು.

ಸೂರ್ಯೋದಯಕ್ಕೆ ಮೊದಲು ಒಂದು ಎದೆ ಇರಿಯುವ ಕೂಗು ಹೊರಟು ಎಲ್ಲರನ್ನೂ ಬಡಿದೆಬ್ಬಿಸಿತು. ಇಬ್ಬದಿಯ ಆಫೀಸರರೂ ಓಡಿ ಬಂದರು. ಆದರೆ ಅಲ್ಲಿ ಅವರು ನೋಡಿದುದೇನು? ಹದಿನೈದು ವರುಷಗಳಿಂದ ಒಂದು ಕ್ಷಣ ಕೂಡ ಮಲಗಿಕೊಂಡಿರದಿದ್ದ—ಒಂದು ಚಣವೂ ಕೂಡ ವಿಶ್ರಾಂತಿ ಪಡೆದಿರದಿದ್ದ—ಬಿಶನ್‌ಸಿಂಗ್, ನೆಲವನ್ನಪ್ಪಿ ಮಲಗಿದ್ದ. ತಂತಿಯ ಬಾರ್ಡರಿನ ಆಚೆಗೆ ಹಿಂದುಸ್ಥಾನ ಹರಡಿತ್ತು, ಈಚೆಗೆ ಪಾಕಿಸ್ತಾನ್ ಹರಡಿತ್ತು. ಇವೆರಡರ ಮಧ್ಯೆ ಇದ್ದ ಹೆಸರಿಲ್ಲದ ತುಂಡು ನೆಲದ ಮೇಲೆ 'ತೋಬಾಟೇಕ್‌ಸಿಂಗ್' ಮುಗಿಯದ ನಿದ್ರೆಯಲ್ಲಿ ಮೈ ಮರೆತಿದ್ದ.

'ಆನಂದಕಂದ'ರ ಹೊಸ ಕವನಸಂಕಲನ

ನಲ್ವಾಡುಗಳು

ಇದೀಗ ಅಚ್ಚಾಗಿ ಹೊರಬಿದ್ದಿದೆ! ಜಾನಪದ ಪ್ರೀತಿಗೀತಗಳು!!

ಕ್ರಾ. ಅ. ೮೦ ಪುಟಗಳು ಬೆಲೆ ರೂ. ೧. ೨೫ ನ. ಪೈ.

ಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಕೂಡಲೇ ಪತ್ರ ಬರೆಯಬೇಕು.

ಶ್ರೀ. ಎಸ್. ಡಿ. ಧರಮಟ್ಟಿ

ಶರತ್‌ಪ್ರಕಾಶನ ಮಂದಿರ

ಕಚೇರಿಗಲ್ಲಿ, ಶಹಾಪುರ, ಜಿಲ್ಲಾ ಬೆಳಗಾಂವಿ

ನನ್ನ ವಾರಾಣಸೀ ಯಾತ್ರೆ

(ಪ್ರವಾಸ ಪ್ರಬಂಧ)

ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ

ಪ್ರವಾಸದ ಅನುಭವಗಳು ಚತುರಲೇಖಕನ ಕೈಗೆ ಸಿಕ್ಕಾಗ, ಒಳ್ಳೆಯ ಸಾಹಿತ್ಯವಸ್ತುಗಳಾಗಬಲ್ಲವು. ಇವುಗಳಿಂದ ಸ್ಥಾದೇಶಿಕ ಪರಿಚಯವನ್ನಲ್ಲದೆ, ಲಲಿತ ಸಾಹಿತ್ಯದ ರುಚಿಯನ್ನೂ ಅನುಭವಿಸ ಬಲ್ಲರು— ನಾವಕರು.

" ಕದಾ ವಾರಾಣಸ್ಯಾಮುಮುತಟೆನೀರೋಧಸಿ ವಸನ್
ವಸಾನಃ ಕೌಪೀನಂ ಶಿರಸಿ ನಿದಧಾನೋಂಜಲಿಪುಟಂ |
ಅಯೇ ಗೌರೀನಾಥ ತ್ರಿಪುರಹರ ಶಂಭೋತ್ರಿನಯನ—
ಪ್ರಸೀದೇತ್ಯಾಕ್ರೋಶನ್ನಿಮಿಷನಿಮಿಷ ನೇಷ್ಯಾಮಿ
ದಿವಸಾನ್ ॥ "

ಎಂಬ ಭರ್ತೃಹರಿ ನೀತಿಶತಕದಲ್ಲಿಯ ಭಕ್ತಿಭಾವಪುರಸ್ಸರವಾದ ಪದ್ಯವನ್ನು ಓದುತ್ತಿರುವಾಗೊಮ್ಮೆ ವಾರಾಣಸಿಯ (ಕಾಶಿಯ) ಕಾಲ್ಪನಿಕ ಚಿತ್ರ ನನ್ನ ಮನದಾಗಸದಲ್ಲಿ ಆಗೀಗ ಮಿಂಚಿ ಸೂಡಿ ಮಾಯವಾಗುತ್ತಿತ್ತು-ಮಂದಹಾಸವಂತೆ ! ಆದರೂ ಇಷ್ಟು ದಿನದ ಆಕಾಂಕ್ಷೆಗೆ ಮೊನ್ನೆ ಮೊನ್ನೆ ಮೂರ್ತಸ್ವರೂಪ ಬರುವ ಪ್ರಸಂಗ ಒದಗಿತು-ಅದು ನನ್ನ ಒಬ್ಬ ಹಿರಿಯ ಮೈಸೂರ ಗೆಳೆಯರ ಅತ್ಯಾದರದ ಆತ್ಮೀಯತೆಯ ಓಲೆಯ ಮುಖಾಂತರವಾಗಿಯಷ್ಟೆ. ಹಾಗೆ ನೋಡಿದರೆ, ಎಲ್ಲ ಮಾಸಿಕಗಳು, ದೈನಿಕಗಳು– " ಪ್ರವಾಸಕ್ಕಿಂತ ಭೆಟ್ಟಿ ಉತ್ತಮ " ಎಂದು ಬರೆದು, ಮಂಗಲಕಾರ್ಯ ಕೈಕೊಳ್ಳುವ ನನ್ನಂತಹ ಮಹಾಶಯನಿಗೆ ಕಾಲ್ತೊಡಕು (ಶಬ್ದಶಃ ಅಲ್ಲ) ಹಾಕಿದ್ದವು. ಕ್ಲಪ್ತ ಕಾಲಾವಧಿ-ಪ್ರವಾಸದ್ದು-ಉರುಳುವದೇನು ತಡ ? ಕ್ಯಾಲೆಂಡರಿನ ಪುಟ ಲೆಕ್ಕದಂತೆ ಹಿಂದುರುಳಿದವು. ಹಾ ಹಾ ಎನ್ನುವುದರಲ್ಲಿ ಪ್ರವಾಸದ ದಿನ ದುತ್ತೆಂದು ಬಂದು ನಿಂತೇಬಿಟ್ಟಿತು. ನನ್ನ ಪೂರ್ವಸಿದ್ಧತೆಯೇನೂ ಕಡಿಮೆ ಇರಲಿಲ್ಲವೆನ್ನಿ. ಮೂರು ಹಗಲು ಮೂರು ರಾತ್ರಿಯ ಪ್ರವಾಸವೆಂದು ಮೊದಲೇ ಗೊತ್ತು. ಹುಟ್ಟಿದ ಪ್ರದೇಶದ ನನ್ನ ಪ್ರೀತಿಯ ಗೆಳೆಯನೊಬ್ಬ ಸಂಗಡಿಗನಿರ್ವಾನೆಂದು ತಿಳಿದಾಗಂತೂ ನಿಶ್ಚಿಂತನಾಗಿ, ಕೇವಲ ಊಟೋಪಚಾರದ ವ್ಯವಸ್ಥೆಯ ಸರಂಜಾಮನ್ನಷ್ಟೇ ನೋಡಿಕೊಂಡೆ. ಇನ್ನು ಹಣವೇ ? ಅದು ಎಲ್ಲಕ್ಕೂ ಮೂಲ. ಆದರ ಪ್ರಶ್ನೆ ಎತ್ತುವಂತೆಯೆ ಇಲ್ಲ. "He has nothing of the bear but its skin" ಎಂಬ ಅಭಿಪ್ರಾಯದ ಅನುಭವನನ್ನು ನನ್ನ ಗೆಳೆಯನ ಬಗ್ಗೆ ಮೊದಲಿನಿಂದಲೂ ಕೇಳಿದ್ದರಿಂದ, ಆದಷ್ಟು ಉಳಿದ ಓದು ವಿಹಾರ, ಏಕಾಂತವಾಸದಲ್ಲಿಯೇ ಕಾಲಹಾಕುವದು ಉಚಿತವೆಂದು ಬಗೆದಿದ್ದೆ. ಏನಿದ್ದರೂ ಗೆಳೆಯನಲ್ಲವೇ ? ಅಲ್ಪ ಸ್ವಲ್ಪ ಆಗೀಗಿನ ರಸವತ್ತಾದ ಹರಟೆಗೇನು ಕೊರತೆ? ಅಂತೂ ಅಣಿಯಾದೆ; ಹೊರಟೆ.

ಇರುಳಿನ ಪ್ರವಾಸ ನಿದ್ರೆಯಲ್ಲಿ ಕಳೆದು, ನಿರಾಮವಾಗಿ ಪುಣೆಯನ್ನು ತಲುಪಿಬೊಪನೆ, ಮುಂದಿನ ಪ್ರವಾಸ ಪ್ರಾರಂಭಕ್ಕೇ ರೋಮಾಂಚಕಾರಕವಾಗಿತ್ತು. ಕಲ್ಯಾಣದ ಗಾಡಿ ಹಿಡಿಯುವುದು ಅಳ್ಳೆದೆಯವರಿಗೆ ಅಸಾಧ್ಯವೆಂದು ನನ್ನ ಗೆಳೆಯ ಮೊದಲೇ ಹೇಳಿಟ್ಟಂತೆ, ಕೊಂಚ ಸಾಹಸಕ್ಕೆ ಮನಸೋತು ಆಸನಾರೂಢರಾದೆವು. ರಾತ್ರಿಯಲ್ಲಿ ಕಾಶಿ ಎಕ್ಸಪ್ರೆಸ್ ಹಿಡಿದು, ಇದ್ದುದರಲ್ಲಿಯೇ ಒರಗಲು ಅನುವು ದೊರಕಿಸಿದಾಗ ' ಕಲ್ಯಾಣದ' ಅವರ್ಣನೀಯ ಚಹನೇ ನಮ್ಮಿಬ್ಬರಿಗೂ ಮರ-ಮರಳಿ ನೆನಪಿಗೆ ಬರುತ್ತಿತ್ತು !

ರಂಗಸಂಚಮಿ. ಎಂದೇ ಅಂದು ಗಾಡಿಯಲ್ಲಿ ಅಷ್ಟು ನೂಕುನುಗ್ಗಲಾಟ ಇರಲಿಲ್ಲವೇನೊ ! ಸರಿ. ಆದರೆ ಓಕಳಿ ಆಡುವವರ ಪಾವಳಿಗೆ ಜಲ್ಲಲ್ಲಿ ಪರಿಮಿತಿ ಇರಲಿಲ್ಲ. ತಮ್ಮತಮ್ಮೊಳಗೆ ಬಣ್ಣ ಉಗ್ಗುವುದಲ್ಲದೆ, ಪಾಪ ! ರೇಲ್ವೆ ನೌಕರರಿಗೂ ರಾಗರಂಜಿತವಾಗುವ ಕಾಲ ಬಂದಿರಬೇಕೆ ? ಎಷ್ಟಾದರೂ ಮೊಪಲು ಎಲ್ಲರೂ ಸಹೂಜಜೀವಿಗಳು. ಅನಂತರ ನೌಕರರು, ವರ್ಜ್ಯ !

' ಇರುಳು ಹನ್ನೊಂದರ ಸುಮಾರಿಗೆ ಮುಗಲ್‌ಸರಾಯಿ ಬರುತ್ತಲೆ, ಇನ್ನೊಂದು ಗಾಡಿ ಹಿಡಿದು ಕಾಶಿಗೆ ಸೇರಬೇಕು, ಎಂಬ ನನ್ನ ಗೆಳೆಯನ ಉದ್ಗಾರ ಕೇಳಿದಾಗ, ವಿಶ್ವವಿಖ್ಯಾತ ಕಾದಂಬರಿಕಾರ

ಶರತ್‌ಚಂದ್ರರ "ದೇವದಾಸ" ಕಲಾಕೃತಿಯ ಪರಿಸರ ಕಣ್ಮಟ್ಟತು. ಅಲ್ಲಿಂದಲೇ ಕಥಾನಾಯಕ, ತನ್ನ ಹಳ್ಳಿಯಾದ ಹಾಥಿಪೋಥಾ ಗ್ರಾಮಕ್ಕೆ ಹೊರಟಿದ್ದು, ಅದೂ ಚಕ್ಕಡಿಯ ಪ್ರವಾಸ. ಸಂಗಡ ಆಳು-ಮನುಷ್ಯನೊಬ್ಬನಿದ್ದರೇನಾಯ್ತು ? ಪ್ರಕೃತಿ ಕ್ಷೀಣವಾಗತೊಡಗಿದೆ. ಮಿತಿ ಮೀರಿ ಕುಡಿತ, ಅನಿಯಮಿತ ಆಹಾರವಿಹಾರ-ಮೊದಲಾಗಿ, ಈಗ ಸಾವಿನ ಕರಾಳ ನೆರಳು ಚಾಚತೊಡಗಿದೆ. ದೈವಯೋಗದಿಂದ ಪ್ರಕೃತಿ ಈಗ ಹೀಗಾಗಿದ್ದರೇನಾಯಿತು ? ದೇವದಾಸನು ದೇವದಾಸನೆ! ಅಲೌಕಿಕ ವ್ಯಕ್ತಿ ಎಂದು ಸಮಾಧಾನಪಟ್ಟುಕೊಂಡು, ನಿದ್ರೆಯಲ್ಲಿ ನಾಲ್ಕಾರು ತಾಸು ಕ್ರಮಿಸುವಾಗ ವಾರಾಣಸಿಯೇ ಎದುರು !

'ಮಧ್ವಾಶ್ರಮ' ಒಂದಿರದಿದ್ದರೆ, ನಮ್ಮಂತಹ ಅಪರಿಚಿತ ಜನರ ಗತಿ ಏನು ?-ವಿಶ್ವೇಶ್ವರನನ್ನು ಕಂಡು ಸುಖರೂಪವಾಗಿ ಮರಳುವುದು ಕನಸೇ—ಎಂದು ವಾರಾಣಸಿಯಲ್ಲಿರುವಾಗೆಲ್ಲ ನನಗೆ ಮನವರಿಕೆಯಾಗಿ ಹೋಗಿತ್ತು. ಸಂಸ್ಥೆಯ ಸಂಚಾಲಕರು ನಿಜಕ್ಕೂ ಔದಾರ್ಯದ ಖಣಿ. ರೊಕ್ಕದ ಮೋರೆ ಬಿಟ್ಟು ಜಗತ್ತು ಒಂದಿದೆ; ಬಂಧು ಭಾಂಧವರಿರುವರು-ಎಂಬ ಪ್ರಜ್ಞೆ ಇದ್ದ ಅವರೇ ಕಾಶಿಗೆ ಭೂಷಣಪ್ರಾಯ ಎಂದು, ಆಚ್ಛೊತ್ತಿದ್ದಂತೆ ಮನಸಿನಲ್ಲಿ ಅಭಿಪ್ರಾಯ ಮೂಡಿಸಿಕೊಂಡೆ.

ಆಹಾರ-ವಿಹಾರದ ಕ್ರಮವೆಲ್ಲ ಸಿಟ್ಟಿಗೆ ಬಿದ್ದೊಡನೆ, ಇನ್ನು ಯಾತರ ಚಿಂತೆ ? ಮನಸೋಕ್ತವಾಗಿ ಅಲೆದಾಟ! ಬನಾರಸಿನ ಆ ಉದ್ದ ಈ ಉದ್ದ ಬೀದಿಗಳಲ್ಲಿ, ಹಿಂದೀಭಾಷೆಯ ರೂಢಿಯಾಗಲೆಂದು ನನ್ನ ಗೆಳೆಯ ನನ್ನೊಬ್ಬನನ್ನೇ ಅಲೆದಾಡಲು ಬಿಟ್ಟಿದ್ದು ಪ್ರಾರಂಭಕ್ಕೆ ಅಡ್ಡ-ತಡೆ ಎನ್ನಿಸಿದರೂ, 'ಸಾಹಸೇ ಶ್ರೀಃ ಪ್ರತಿವಸತಿ' ಎಂಬ ಉಕ್ತಿಯಲ್ಲಿ ತಥ್ಯವಿದೆಯೆಂದು ಹಿಂದುಗಡೆ ನಿದರ್ಶನಕ್ಕೆ ಬರತೊಡಗಿತು. ಚಿಕ್ಕ ಮಕ್ಕಳಿಂದ ಮೊದಲು ಮಾಡಿ ಹೆಂಗಳೆಯರು ವೃದ್ಧರು ಸಹ— ಎಲ್ಲ ವ್ಯವಹಾರ ಎಲ್ಲೆಡೆ ಹಿಂದಿಯಲ್ಲಿಯೇ ನಡೆಸುತ್ತಾರೆಂದು ತಿಳಿದೊಡನೆ ಆ ಭಾಷಾ ಅಜ್ಞರಾದ ನಮ್ಮಂತಹರಿಲ್ಲ ಅವ್ಯವಹಾರಿಗಳೇ ಎಬಡರೇ— ಎಂದು ಮನವರಿಕೆಯಾಯಿತು. ಇದರ ಜೀವಂತ ನಿದರ್ಶನವೆಂದರೆ 'Cycle rickshaw' ವಾಲಾಗಳಿಗೆ ಒಮ್ಮೊಮ್ಮೆ ಒಂದಕ್ಕೆ ನಾಲ್ಕು ಮುಮ್ಮಡಿ ತೆತ್ತುವ ಪ್ರಸಂಗ ಒದಗಿದಾಗ, ಹಾಗೂ ಅಜ್ಞಾನದ ಮೂಲಕ ಪೆದ್ದರಾದಾಗ!

ಮಿಠಾಯಿ, ವಾರಾಣಸಿಯ ಜೀವಾಳವೆಂಬುದನ್ನು ನಾವು ಒಂದು ವೇಳೆ ಮರೆತರೂ ಪ್ರಮಾದವೆನಿಸಲಿಕ್ಕಿಲ್ಲ. ಆದರೆ ಅಲ್ಲಿಯ ಬೀದಿಗಳು ಪ್ರತಿ ನಿಲುವುಗನ್ನಡಿಗಳೇ ಎಂಬುವನ್ನು ತಾತ್ಸರಿಸಲಾಗದು. ಕಾರ್ಪೋರೇಶನ್ನಿನ ಆವಲಿತೆಯ ಜಾಗರೂಕತೆಯೇ ಅಂತಹದು. ಹೇಳಿ ಕೇಳಿ ಪ್ರವಾಸಿಗರು ಶ್ರದ್ಧೆಯಿಂದ ದೂರ ದೂರದಿಂದ ಬಂದವರು. ಅವರಿಗೆಲ್ಲಿಯ ಕಟ್ಟುನಿಟ್ಟುಗಳು ? ಹೀಗೆಂದು ಕ್ಷಣ ಕ್ಷಣಕ್ಕೆ ಕಂಡಕಂಡಂತೆ ಕಸಮುಸುರೆ ಮಾಡಿಯೂ, ಮತ್ತೆ ಬೀದಿಗಳು ನೈರ್ಮಲ್ಯದಾಗರ. ಜಾಪೂಗಾರಿಕೆ, ಪುಣ್ಯಾಬಾಜಾರವೇ ಸರಿ ಎನ್ನದೆ ವಿಧಿಯಿಲ್ಲ.

ಅಕ್ಕಿಯೇ ಬನಾರಸಿನ ಪ್ರಮುಖ ಆಹಾರವೆನಿಸಿದರೂ ಬರುಹೋಗುವವರೆಲ್ಲ ಅಲ್ಲಿ ನೆಲೆಸಿ ಬದುಕಿದುದು 'ಗೋರಸ'ದಿಂದ! ಇಲ್ಲಿಯಕಿಂತ ಹಾಲಿನ ಬೆಲೆ ಅಲ್ಲಿ ಕಡಿಮೆ ಇರಲಿಕ್ಕಿಲ್ಲ. ಆದರೂ ಎಷ್ಟು ಪರಿಶುದ್ಧ, ರುಚಿಕಟ್ಟು ! ಅಂತೇ ಊಟ ಬಿಟ್ಟು ರಾತ್ರಿ ಹಾಲಿನಿಂದಲೇ ಜೀವ ಹಿಡಿದಿರುವ ಪ್ರವಾಸಿಕರಲ್ಲಿ ವಿಶೇಷ. ಅವರಿ ಮಣ್ಣಿನ ಪೇತಿಗಳೆ ಸಾಮಾನ್ಯವಾಗಿ ಹಾಲಿಗೆ, ಜಹಕ್ಕೆ ಎಂದು ಕಂಡಾಗ ಸೋಜಿಗವೆನಿಸುವುದು. ಉಪಯೋಗವಾದೊಡನೆ ಅವನ್ನು ಬೀದಿಗೆ ಬಿಸಾಕಿಬಿಡುವುದುಂಟು. ಮಣ್ಣಿನ ಪೇತಿಗಳ ವಿಪುಲ ತಯಾರಿಕೆಯೇ ಹಲವಾರು ಜನರಿಗೆ ಹೀಗೆ— ಹೊಟ್ಟೆಯ ಉದ್ಯೋಗವಾಗಿ ಅಲ್ಲಿ ಪರಿಣಮಿಸಿದ್ದರೆ ಅಚ್ಚರಿ ಎನು ?

ಕಾಶಿಗೆ ಬಂದಾಗ ವಿಶ್ವೇಶ್ವರನ ನಿತ್ಯ ಸಂದರ್ಶನವಾಗದಿದ್ದಲ್ಲಿ ಹಳಹಳಿ— ಎಂಬರ್ಥದಲ್ಲಿ ನಿಷ್ಠಾವಂತನೆನಿಸಿದ್ದ ನನ್ನ ಗೆಳೆಯನೊಡನೆ ನಾನು ನಾಲ್ಕಾರು ಸಲ ದೇವಾಲಯ ಸಂದರ್ಶಿಸಿದೆ. ಒಳದಾರಿಯಲ್ಲಿ ಕ್ರಮಿಸಿ ಇಳಿದುಕೊಂಡ ಸ್ಥಳ ಮುಟ್ಟುವುದು ಪ್ರಯಾಸವೇ ಸೈ. ಎನು ಇಕ್ಕಟ್ಟು ಬೀದಿಗಳು ! ಎಂಥ ಗಲಭೆ! ನೋಡಿಯೆ ತೃಪ್ತಿ ಪಡಬೇಕು! ಎಷ್ಟು ಹಿಂದಿನ ಕಟ್ಟಡಗಳೂ ! ಎಂಥ ವಿಚಿತ್ರ ರಚನೆ ಎನಿಸದೇ ಹೋಗದು.

ವಿಶ್ವೇಶ್ವರನ ನೈಜ— ಪವಿತ್ರ— ಸಾನ್ನಿಧ್ಯದ ಕಲ್ಪನೆ, ಸೃಷ್ಟಿಯ ಸೊಬಗಿನ ಸೂರೆಯ ಪ್ರಜ್ಞೆ, ಭಾವುಕತೆಯ ನಂಬುಗೆ—ನಮಗೆ ಘಾಟಿಗೆ ಬಂದಾಗ ನಿಚ್ಚಳವಾಗಿ ಆಗುವವು. ಭಕ್ತರಿಗೆ ಅದು ಅನುಸವು ಏಸಿರಿ. ಗಂಗೆಯ ಅಂಗಾಂಗಗಳಲ್ಲಿ ಮುಳಲ ಕಣದಲ್ಲಿ ದೇವತ್ವದ ಶ್ರದ್ಧೆ ತುಂಬಿ ತುಳುಕಾಡುತ್ತಿರುತ್ತದೆ. ನೋಡುವ ಕಣ್ಣು, ಅನುಭವಿಸುವ ಹೃದಯ ಇದ್ದವರ ಪ್ರಶ್ನೀಯಷ್ಟೇ ಅದು.

ಕಾಶಿ ಹೀಗೆ ಭಾವುಕತೆ ಹಾಗೂ ಭಕ್ತಿಯ ಕೇಂದ್ರವಾಗಿದ್ದರೂ ಅಲ್ಲಿ ಜಾತಿಯತೆಯ ರೌದ್ರರಸ ಒಮ್ಮೊಮ್ಮೆ ತುಳುಕಾಡಿದರೆ ತೀರಿ ಹೋಯಿತು. ನಾಲ್ಕು ದಿನ ಹಾಹಾಕಾರ. ಒಮ್ಮೊಯಂತೂ ಹಿಂದೂ ಮುಸ್ಲೀಂ ಹಿರಿಯರು (?) ಚಿಕ್ಕಮಕ್ಕಳ ವ್ಯಾಜ್ಯದಲ್ಲಿ ಧುಮುಕಿ ಚಿಕ್ಕ, ಪುಟ್ಟ ಗಾಯಹೊಂದಿದ್ದು ಕೇಳಿದಾಗ ಕೆಡುಕೆನಿಸಿತು. ಜಗಳಾಡಿದ ಹಸುಳೆಗಳು ಮರುದಿನ ಹುಡಿಯಲ್ಲಿ ಸ್ವಚ್ಛಂದವಾಗಿ ವಿಹರಿಸಿದರು. ಈ ಹಿರಿಯರೆನ್ನುವವರು (?) ಮನಸ್ಸು ಸಣ್ಣದಾಗಿಸಿಕೊಂಡು ಕೈಗೆ ಕೈ ಹಚ್ಚಿದರು. "Little children are wiser than men" ಎಂಬ ರಶಿಯನ್ ಮಾನವತಾವಾದಿ ಕೌಂಟ್ ಲಿಯೊ ಟಾಲ್‌ಸ್ಟಾಯಿಯ ತತ್ಸದೃಶ ಸೋಜಿಗದ ರಸಪತ್ತಾದ ಸನ್ನಿವೇಶ ನೆನಪಿಗೆ ಬಂದಿತು ಆಗ!

ಕಾಶಿಯ ಘಾಟಿನ ಭರಬೀದಿಯಲ್ಲಿ ನಿಂತುಕೊಂಡೇ ಇಬ್ಬರು ಶಿಷ್ಯರು, ಎಷ್ಟೊಬೊತ್ತು ದೇವವಾಣಿ (ಸಂಸ್ಕೃತ)ಯಲ್ಲಿ ನೀರು ಕುಡಿದಷ್ಟು ಸಹಜವಾಗಿ ಸಂಭಾಷಿಸಿದರೆಂದನೇಲೆ, ಬಳಿಯಲ್ಲಿಯೆ ಜಗದ್ಗುರು ಶಂಕರಾಚಾರ್ಯರ ಮಠ, ಮಧ್ವಾಶ್ರಮಗಳಂತಹ ವಿದ್ಯೆಯಾಗರಗಳು, ಪಂಡಿತ ಮಾಲವೀಯರ ವಿಶ್ವವಿದ್ಯಾಲಯ ಇರುವನೆಂದರೆ ಏನಚ್ಚರಿ ! ಭಾರತದ ಪುಣ್ಯಭೂಮಿ ಬನಾರಸ—ಎಂಬುದಕ್ಕೆ ಬೇರೆ ದೃಷ್ಟಾಂತಗಳೇ ಬೇಡ ಎನಿಸುವುದು.

" Lives of great men all remind us
We can make our lives sublime,
And, departing leave behind us
Foot prints on the sunds of time"

ಎಂಬ ಲಾಂಗ್‌ಫೆಲೊ ಕವಿಯ ಉಕ್ತಿ ಸಹ ವಾರಾಣಸಿಯ ಸಾಮಗ್ರ ಸೌಂದರ್ಯವನ್ನು ಹೃದಯಾಂತರಾಳದಲ್ಲಿರಿಸಿಕೊಳ್ಳಲು ಸಹಾಯ್ಯಕಾರಿಯಾಯಿತೆಂದರೆ ಅತಿಶಯೋಕ್ತಿಯ ಆರೋಪ ಬರಲಕ್ಕಿಲ್ಲ ವಷ್ಟೆ !

ಮದ್ದಳೆ ಬಾರಿಸುವ ಮಾಯೆ

ಶ್ರೀ. ಚಂದ್ರಶೇಖರ ಕಂಬಾರ ಜ್ಯೂ. ಎಂ. ಎ. ಧಾರವಾಡ.

ಗಡಿಯಾರವನ್ನು ಮನುಷ್ಯ ನಿರ್ಮಿಸಿದಾಗ, ಆಕಾರನಿಲ್ಲದ ಕಾಲಕ್ಕೊಂದು ಆಕಾರ ಬಂತು. ತನ್ನ ಅನುಕೂಲಕ್ಕಾಗಿ ಮನುಷ್ಯ ಗಡಿಯಾರವನ್ನೇನೋ ನಿರ್ಮಿಸಿದ. ಆದರೆ ಸರಸ ಯಂತ್ರಯಜ್ಞದಿಂದೆದ್ದ ಈ ಹೆಣ್ಣು ಅವನನ್ನೇ ಆಳತೊಡಗಿದಳು. ಊಟ-ತಿಂಡಿ-ರೇಲು-ಬಸ್ಸು-ಆ ಮೇಲೆ ವಿಶ್ರಾಂತಿ-ಅವಳು ಸಹ ಅವಳೇ ಒಡತಿ! ಪ್ರಭು ಮದ್ದಳೆಬಾರಿಸಿದಾಗ ಕುಣಿದಾಕೆ ಮಾಯೆ. ಅದಾಯಿಲ್ಲಿ ಮದ್ದಳೆ ಬಾರಿಸುವವಳು ಮಾಯೆ— ಕುಣಿವನ ಪ್ರಭು. ಪ್ರಭು-ಮಾಯೆಯರನ್ನು ಒಬ್ಬ ಕವಿ ಲಿಂಗಲೀಲೆಯಲ್ಲಿ ಅಗಲಿಸಿದ. ಇಲ್ಲಿ ಇನ್ನೊಬ್ಬ ವ್ಯಂಗ್ಯಲೀಲೆಯಲ್ಲಿ ಬೆಸೆದಿವ್ವಾನೆ.

ಟರ್ ರ್ ರ್ ರ್..... ೧
ಚೌರಸಾಕಾರದಲಿ ಬೆಳೆವ ಶ್ರೀಮತಿ ಮಡದಿ
ಗುದ್ದುಗಣ್-ಕೆಸನೂಗ-ತೆರವಾಯ ಹಿಗ್ಗಿಸುತ
ಪುಕ್ಕಗಂಡನ ಜಗ್ಗಿ ಜಬರಿ ಝಾಡಿಸಿ ಜಲಿಸಿ
ಸೂರು ಹಾರುವ ಹಾಗೆ ಚೀರಿ ಬಯ್ಯುವ ತೆರವಿ
ಬಾರಿಸಿತಲಾರಮ್ಮ!
ಇವರಿಗಿನ್ನೂ ಜೊಂಪು.
ಅಲಸಿಕೆಯ ಹೊದಿಕೆಯಲಿ ಗೂಡುಗಾಲನು ಹಚ್ಚಿ
ಯಾ ಕನಸ ಹಸಿಮೈಯ ನೆಕ್ಕುತಿಹನೊ,
ದಿನದಿನವು ಬೈಸಿಕೊಂಡಿವಗೂನು ಅಭ್ಯಾಸ
ದಡ್ಡ ಬಿದ್ದಿಹ ಕವಿಗಿನ್ನೆಲ್ಲ ಹೂಹಾರ.
ಏಳಯ್ಯ ಆರಗುವರ-ಕ್ರಮವಾಗಿ ಟುಕುಟುಕಿಸಿ
ಸೊಟ್ಟ ಮುಸುಡಿಯ ಪಿಸುರ ಬಾಯಿಂದ ನಳಿವಟಾ ಹಚ್ಚಿ
ಬೈಗುಳದ ಕೋಶವನ್ನೂದುತ್ತ
ಹೊಟ್ಟು ಜಾಡಿಸಿದಂತೆ ನಿನ್ನವ್ಯಕ್ತಿತ್ವವನು ಕಟುಕುತಿಹಳು
ಏಳಪಾ ಚಿನ್ನ
ಏಳು.
ನರಮನುವು ಗೈದಂಥ ಯಂತ್ರಯಜ್ಞವಲೆದ್ದು ೨
ಹೊರಬಂದಳೀ ಮಾಯೆ ಬಿಂಕದಿಂದ.
ನಿರ್ದಯಹಿ ಕಾಲನಭಿಕಾಪ ದೂರಾಯಿತ್ತು
ಸಾಕಾರ ಸ್ತ್ರೀದೇಹ ಧರಿಸಿ ಬಂದ.
ಮನು ಮಹಾ 'ಋಷಿ'ಯ ಲಂಗೋಟಿ ಕಳಚಿತ್ತು.
ಹೆಸಿದ ತೃಷೆಯೊಲು ಭೋಂಕನೆದ್ದು ನೆಗೆದ.
ಅವಳು ಹಾಕಿರುವೆಲ್ಲ ಕಠಿಣ ಕರಾರೊಪ್ಪಿ
ಹೆಣ್ಣು ಕಾಣದ ಕೆಂಚ ಭಿಕಾರಿ—ಮದುವೆಯಾದ.
ಹೊಸ ಹರೆಯ ಹೊಸ ಮಡದಿ ಎಷ್ಟಾದರೂ ಚೆಲುವಿ ೩
ವಯ್ಯಾರ ಬಿನ್ನಾಣ ಬಿಂಕ ಬೇರೆ
ಆಜೆ ಗೋಡೆಯ ಮೇಲೆ ಮತ್ತೆ ಮೇಜಿನ ಮೇಲೆ
ಅಥನ-ಮೇಣ್-ಮತ್ತೆ-ಇಲ್ಲನೆ-ಇನ್ನು ಮೇಲೆಲ್ಲೂ—
ಇಟ್ಟು ನೋಡಿದರೂನೂ ಇಲ್ಲ ತೃಪ್ತಿ.
ಯಣಿಕಟ್ಟನಲಿ ಧರಿಸಿ ಹೋದ ಹೋದಲ್ಲೆಲ್ಲ ಕರೆದೊಯ್ದು
ಬೇಕೆಂದೆ ಬೀಸಾಗಿ ಕೈಯ ಬೀಸಿ
ನಿಂತಕುಳಿತರಿಗೆಲ್ಲ ಅವಳ ಪರಿಚಯಿಸಿ
ಕ್ರಮವಾಗಿ ಟುಕ್ಕಿಡುವ ಅವಳೊರಟು ಶಬುದದಲೆ
ಕಾವ್ಯಪ್ರೇಮ ಕಾವ್ಯವನೆಲ್ಲ ಅಲಿಸಿ
ನಿತ್ಯ ರಾತ್ರಿಯಖಿವಳ ಕೆವಿಹಿಂಡಿ ಮುತ್ತಿಟ್ಟರೂನು
ತೀರಲಿಲ್ಲವನ ಪಿರುತಿ.
ಧನ್ಯಪ್ರೇಮದ ದೇವತಿ!
ಮತ್ತೆ ಬೆಳಗಿನವಳ ಚೀರುವನಿ ಸಂಗೀತ!
ಕಾಕಗೀತ!
ಮೂರುದಿನ ಮುಗಿದಿಲ್ಲ ಹರೆಸೆಬರತು ಹೋಯ್ತು.
ಬತ್ತಿತ್ತು ಕುಂದಿತ್ತು-ಕಂದಿತ್ತು.
ಹರೆಯದುಬ್ಬಿನಲೀನೊ ಜೋಲಿತಪ್ಪಿ
ಮೂಗಿನಲಿ ಮೂಗುದಾರವನೊಂದ ಪೋಣಿಸಿ
ಅದರ ಸೂತ್ರವನವಳ ಕೈಗೆಕೊಟ್ಟ.
ಸೂತ್ರಧಾರಿಣಿ.
ಇವ ಗೊಂಬಿ!
ಯಾ ಕೆಲಸ ಕಾರ್ಯ ಕಾರಣಗಳೇ ಇದ್ದಿರಲಿ
ಆದಕೆ ಇರಬೇಕವಳ ಅಜ್ಞೆಮುದ್ರೆ!
ಶಾಲೆ-ಕಾಲೇಜು-ಊಟ ತಿಂಡಿ-ರೇಲು-ಬಸ್ಸು ಸಿನೇಮಾ
ಆ ಮೇಲೆ ವಿಶ್ರಾಂತಿ.
ಅವಕು ಸಹ ಅವಳೊಡತಿ.
ಇವಳ ಹಿಡಿತದೊಳಿಂದ ಹೇಗೆ ಪಾರಾಗುವಿಯ ಬಂಧು? ೪
Divorse
ಛೀ ತಮ್ಮ—
ಇರುವ ಕಾನೂನೆಲ್ಲ ಹೆಂಗಸರ ಪರವಾಗಿ
ನೀನು ಗಂಡಸು ನಿನ್ನ ದೈವ ಕರ್ಮ.
ಎಡೆಯೊಳಿದ್ದಂಬಲಿಯೊ ಅಮೃತವೆಂದುಣಬೇಕು.
ಪಾಲಿಗಿಹ ಬೇವು ಸಹ ಬೆಲ್ಲ ಬೆಲ್ಲ.
ಹರಿಯಬೇಕೆಂದಾಗ ಹರಿವುದೇ ಈ ಗಂಟು?
ಆದರೂ ಕರಕಸ್ಪ ಇಂಥ ನಂಟು!
ಎಲ ಎಲಾ ಖೋಡಿ, ೫
ಮುಸುಕಿನಲಿ ಇನ್ನೂನು ಮಲಗಿರುವಿಯಲ್ಲೊ;
ಕೇಳಲಿಲ್ಲವೆ ನಿನಗೆ ಇದೀಗಲೇ ಬಾರಿಸಿದ
ಅವಳ ಮದ್ದಳೆ ಸ್ವರವು?
ಸಿದ್ಧಳೀ ಗಡಿಯಾರ ಭಾಮೆಯು
ಮದ್ದಳೆಯ ಮಿದುವಾಗಿ ಬಡಿವಳು
ನಿದ್ದೆ ತಿಳಿದೆದ್ದೇಳು ಕುಣಿಯಲು ಅರುಣನುಟ್ಟವನೇ!
ಪೆದ್ದನಲ್ಲಮನಿಂತು ಮಾಯೆಯ
ಹದ್ದಿನಲಿ ಬಿದ್ದೆದ್ದು ಕುಣಿವುದ
ಕದ್ದು ಕಂಡಿಹನೆಮ್ಮ ಕವಿ ತಾವ್ಯಂಗ್ಯಲೀಲೆಯಲಿ! ❋

ನಾರದರ ಸೋಲು!

(ಚಿಕ್ಕ ಕಥೆ)

ಶ್ರೀ. ಬಿ. ಆರ್. ನಾಡಪ್ಪಿ ಎಂ. ಎ., ಬಿ. ಟಿ., ಧಾರವಾಡ

ಭಕ್ತನ ಭಕ್ತಿಯ ಮೇಲ್ಮೆಯನ್ನು ಸ್ಥಾಪಿಸುವುದರಲ್ಲಿ, ಅನೇಕ ದೇವ-ದೇವತೆಗಳೂ ಭೂಲೋಕದಲ್ಲಿ ವಿಡಂಬನೆಗೆ ಗುರಿಯಾಗಿ, ಸೋತು ಶರಣಾಗತರಾದ ಕತೆಗಳಿವೆ. ತಾನೆ ಶ್ರೇಷ್ಠನೆಂಬ ಅಹಂಕಾರಕ್ಕೊಳಗಾದ ನಾರದ ಮಹರ್ಷಿಯನ್ನು, ಇಲ್ಲಿ ಕಪಿವೀರ ಹನುಮಂತನ ಭಕ್ತಿ ಸೋಲಿಸಿಬಿಟ್ಟಿದೆ.

ರಾಮಾಯಣ ಕಾಲ. ಕಥೆಗೆ ಯಾವ ಕಾಲವೇನು? ಇದೂ ಒಂದು ಕಥೆಯೆಂದೇ ಹೇಳುತ್ತಿದ್ದೇನೆ! ಮಹಾವಿಷ್ಣುವು ರಾಮಾವತಾರ ತಾಳಿ ಭೂಲೋಕಕ್ಕೇ ಇಳಿದು ಬಂದುದಾಯಿತು. ಆತನ ಮುಖ್ಯ ಉದ್ದೇಶ ರಾವಣ-ಕುಂಭಕರ್ಣರನ್ನು ಕೊಂದು ಭೂಭಾರ ಇಳುಹುವುದಾಗಿತ್ತಷ್ಟೆ? ಕಾರ್ಯಕಾರಣ ಭಾವವೇನೋ ಅದರಲ್ಲಿದ್ದಿತು. ಆದರೆ ಕಾರ್ಯವೇನು ಕೂಡಲೆ ಕೊನೆಗೊಳ್ಳುವುದೆ? ಸಾವಿರಾರು ವರುಷ ಗತಿಸಿದರೂ ವಿಷ್ಣುವು ತನ್ನ ಅವತಾರ ಕಾರ್ಯ ಮುಗಿಸದೇ ಇರುವುದನ್ನು ಕಂಡು, ದೇವಗಣಕ್ಕೆ ಆತನು ವೈಕುಂಠವನ್ನೇ ಮರೆತನೋ ಏನೋ ಎಂದೆನಿಸಿರಬೇಕು! ದೇವಲೋಕ-ಭೂಲೋಕಕ್ಕೆ ನಿಕಟ ಸಂಬಂಧವಿಟ್ಟುಕೊಂಡವರು ನಾರದರಲ್ಲವೆ? ಅದೇಕೆ? ಅವರು ಹದಿನಾಲ್ಕು ಲೋಕಗಳನ್ನೂ ಸಂದರ್ಶಿಸಬಲ್ಲ ಮಹಾವ್ಯಕ್ತಿಗಳು. ಆಯಿತು-ಗಾನಲೋಲ ನಾರದ ಮಹಾಮುನಿಗಳು, ಸ್ವರ್ಗಲೋಕದಿಂದ ಭೂಲೋಕಕ್ಕೆ ಇಳಿಯುವದೇನು ಮಹಾಕಾರ್ಯವೆಂದೆಣಿಸಿ, ನಭೋಮಂಡಲದಲ್ಲಿ ಗಾಯನ ಮಾಡುತ್ತ ಸಾವಕಾಶವಾಗಿ ಇಳಿಯಹತ್ತಿದರು. ಮೇಘಮಂಡಲವನ್ನು ಭೇದಿಸಿ ವಾಯುಮಾರ್ಗದಿಂದ ನಾರದರು ಸಂಚರಿಸುವಾಗ ಕೇಳುವದೇನಿದೆ? ಇಂಪಾದ ಅವರ ಹರಿನಾಮಸ್ಮರಣೆಯ ಮಧುರಧ್ವನಿ ಜೇನಾಗಿ ಇಳೆಗೆ ಇಳಿಯಹತ್ತಿತು.

ನಾರದರ ಆಗಮನ ಭೂಲೋಕದವರಿಗೆ ಅದೆಷ್ಟು ಸಂತಸ-ಕೊಟ್ಟರಲಿಕ್ಕಿಲ್ಲ! ಹಿಮವತ್ ಪರ್ವತದ ಶ್ರೇಣಿಗಳ ಮೇಲೆ ನಾರದರು ಬರುತ್ತಿರುವಾಗ, ಹಿಮಾಚ್ಛಾದಿತವಾದ ಪರ್ವತದ ಶಿಖರಗಳು ಕೂಡ ಅವರಿಗೆ ನಮ್ರವಾಗಿ ನಮಿಸಿದುವಂತೆ! ಪ್ರವಹಿಸುತ್ತಿರುವ ನದಿಗಳ ಅಲೆಗಳೂ—ತಾನತಾನವಾಗಿ ಬಂದ ಮಧುರಧ್ವನಿಯೊಂದಿಗೆ ನಲಿಯಹತ್ತಿರುವಂತೆ. ಅದೆಂತಹ ದಿವ್ಯಗಾಯನ! ನಾರದರ ಸ್ವಾರಿ ಹಾಗೆಯೇ ಅಯೋಧ್ಯೆಗೆ ಇಳಿದುಬಿಟ್ಟಿತು. ಆಗ ಅಯೋಧ್ಯೆಯಲ್ಲಿ ಅವರು ರಾಮನನ್ನು ಕಾಣುವುದಾದರೂ ಹೇಗೆ? —ರಾಮನಿಗೆ ವನವಾಸ ಬಂದುಬಿಟ್ಟಿತ್ತು! ಶ್ರೀರಾಮಚಂದ್ರ ದಂಡಕಾರಣ್ಯದಲ್ಲಿ ನೆಲಸಿದ್ದಾನೆಂಬ ವಾರ್ತೆ—ಈಗ ಲಂಕೆಯ ರಾವಣನ ಸಂಗಡ ಯುದ್ಧ ಮಾಡುತ್ತಿದ್ದಾನೆಂಬ ಸಂಗತಿಯನ್ನು ಭರತನಿಂದ ತಿಳಿದು, ನಾರದರು ಮತ್ತೆ ಪ್ರಯಾಣ ಬೆಳೆಯಿಸಿದರು. ನಾರದರಿಗೇನು ಇದೆಲ್ಲವೂ ಗೊತ್ತಿರಲಿಲ್ಲವೆ? ಎಲ್ಲವೂ ಗೊತ್ತಿದ್ದರೂ, ಭೂಲೋಕದ ಜನರ ಬಗ್ಗೆ ನಾರದರು ಯಾವ ಅಭಿಪ್ರಾಯವನ್ನೂ ತಮ್ಮದೆಂದು ಕೊಡಲು ಸಿದ್ಧರಿರಲಿಲ್ಲ! 'ಭೂಲೋಕದಲ್ಲಿ ದೇವತೆಗಳದೇನು ಹಕ್ಕು?' ಎಂದು ಯಾರಾದರೂ ಕೇಳಿದರೇನು ಗತಿ?—ಎಂದು ನಾರದರಿಗೆ ಭಯವಾಗಿರಬೇಕು.

ರಮ್ಯವಾದ ಗೋದಾವರೀ ತಟಾಕದಲ್ಲಿ ಕಾಣುವ ಶ್ರೀರಾಮಚಂದ್ರನ ಕುಟೀರವನ್ನು ನಾರದರು ಆಕಾಶದಿಂದಲೇ ನೋಡಿದರು. ಅಲ್ಲಿ ಯಾರ ಸುಳಿವೂ ಇರಲಿಲ್ಲ. ಸೀತಾದೇವಿಯು ತಾನೇ ತನ್ನ ಕಮಂಡಲುವಿನಿಂದ ನೀರನ್ನು ತಂದು—ಹಾಕಿ ಬೆಳೆಯಿಸಿದ ಆ ವೃಕ್ಷಗಳು, ಇದೀಗ ದೊಡ್ಡವಾಗಿ ಕಂಗೊಳಿಸುತ್ತಿದ್ದುವು. ಸೀತಾದೇವಿಯು, ಈಗ ಅಶೋಕವನದಲ್ಲಿ ರಾವಣನ ಬಂಧನದಲ್ಲಿದ್ದುದು—ಅವರಿಗೆ ನೆನಪಾಯಿತು. ಆ ನೆನಹು ಅವರ ಹೃದಯಕ್ಕೆ ಒಂದುಬಗೆಯ ಹೇಳಲಾಗದ ನೋವನ್ನುಂಟುಮಾಡಿತು. ಆ ದುಃಖದಲ್ಲಿಯೇ ಕರುಣಾರಸ ಸ್ಫುರಿಸುವಂತೆ ಒಂದು ಶೋಕಸಂಗೀತವನ್ನು ಆಲಾಪಮಾಡುತ್ತ, ಲಂಕೆಯತ್ತ ಪ್ರಯಾಣ ಬೆಳೆಸಿದರು. ಮಾರ್ಗದಲ್ಲಿ ವೀರನಾದ ವಾಲಿಯ ಗವಿಯನ್ನು ನೋಡಿದರು; ಆದರೆ ಅಲ್ಲಿ ವಾಲಿ ಇರಲಿಲ್ಲ—ಸುಗ್ರೀವ, ಹನುಮಂತ—ಯಾರೂ ಇರಲಿಲ್ಲ! ಛೇ—ನಾರದರಿಗೆ ಬಲು ಸಂಕಟವಾಯಿತು!! ವಾಲಿಯನ್ನು ಶ್ರೀರಾಮ ಕೊಂದಿದ್ದಾನೆ—ಸುಗ್ರೀವ, ನಳ, ಅಂಗದ ಮತ್ತು ಹನುಮಂತ ಮೊದಲಾದ ಮಹಾಕಪಿಗಳೊಡನೆ—ರಾವಣನೊಡನೆ ಯುದ್ಧ ಹೂಡಿದ್ದಾನೆಂಬು ಮಾತನ್ನು ಜ್ಞಾನದಿಂದರಿತ ನಾರದರು, ಮಹಾನಗರಿಯಾದ ಲಂಕೆಯ ಮೇಲೆಯೇ ಆಕಾಶದಿಂದ ಇಳಿಯಹತ್ತಿದರು.

ಬೆಳುದಿಂಗಳ ಇರುಳು! ನೀಲಾಕಾಶ!! ಸುತ್ತಲೂ ಭೋರ್ಗರೆಯುವ ರತ್ನಾಕರ!!! ಕೇಳುವುದೇನು? ದೇವಋಷಿ ನಾರದರಿಗೆ ಆ ಲಂಕಾ ಪಟ್ಟಣವು ಭೂವೈಕುಂಠದಂತೆ ಕಂಡಿರಬೇಕು. ಆದರೆ ವೈಕುಂಠ

ಪತಿ ಶ್ರೀಮನ್ನಾರಾಯಣನ ಅವತಾರ—ಶ್ರೀರಾಮಚಂದ್ರನನ್ನು ಎಲ್ಲಿ ಕಾಣುವುದು?—ಎಂಬ ಚಿಂತೆ ಬಲವಾದಾಗ, ದೂರದ ಉತ್ತುಂಗ ಶಿಖರಗಳ ಮೇಲೆ ಕಪಿಗಳ ಗುಂಪನ್ನು ಕಂಡರು. ಅಹುದು ಶ್ರೀರಾಘವನು ವಾನರಸೈನ್ಯದೊಂದಿಗೆ—ಲಂಕೆಗೆ ಬಂದಿದ್ದ! ನೇರವಾಗಿ ಅಲ್ಲಿಯೇ ನಾರದರ ಸ್ವಾರಿ ಆಗಮಿಸಿತು! ನಾರದರ ಆಗಮನವನ್ನು ಅರಿಯುವುದೇನು ಕಷ್ಟವಾಗಲಿಲ್ಲ ಶ್ರೀರಾಮನಿಗೆ-ಆಗಲೇ ಆಕಾಶವನ್ನೆಲ್ಲ ತುಂಬಿದ ಇನಿದಾದ ಅವರ ಗಾಯನಸುಧೆ, ಅವನ ಅಂತರಂಗಕ್ಕೇ ಮುಟ್ಟಿಬಿಟ್ಟಿದ್ದಿತು. ಶ್ರೀರಾಮನಿಗೂ ಬಹು ಸಂತೋಷವಾಯಿತು; ನಾರದರಿಗೆ ನಮಸ್ಕರಿಸಿ, ಒಂದು ಶಿಲೆಯನ್ನೇ ಆಸನವಾಡಿಕೊಳ್ಳಲು ಬಿನ್ನನಿಸಿದ! ನಾರದರಿಗೆ ಎಲ್ಲವೂ ವಿಚಿತ್ರವೆನಿಸಿತು ಸುತ್ತಲೂ ನೋಡಿದರು; ಮಾನವರ ಒಂದು ಮುಖವು ಕೂಡ ಕಾಣುತ್ತಿರಲಿಲ್ಲ. ಕೇವಲ ಮುಸುಗುಡುವ ವಾನರರ ಆ ಮುಖಗಳೇ ಅವರಿಗೆ ಕಂಡಾಗ, ಅವರಿಗೆ ತುಸು ಬೇಸರವೂ ಬಂದಿರಬೇಕು.

ಶ್ರೀರಾಮಚಂದ್ರನಿಗೋ, ನಾರದರ ಗಾಯನವನ್ನು ಕೇಳಿ ಅನೇಕ್ಟ ದಿನಗಳಾಗಿದ್ದುವೋ—ಪಾಪ! ಅವನ ಬಯಕೆ ಬಾಯಿಬಿಟ್ಟಿತು. 'ನಾರದರೆ, ತಮ್ಮ ಗಾಯನವನ್ನು ಕೇಳುವ ಆಶೆ ಬಲವಾಗಿದೆ—ಇಮೋ ನೋಡಿರಿ, ನಿಸರ್ಗದ ಈ ಹುಯಿಲು, ಎಂತಹದು!' ಎಂದು ಉಬ್ಬರಿಸುವ ವಾರಿಧಿಯನ್ನು ತೋರಿಸಿ ಸುಮ್ಮನಾದ. ನಾರದರ ಅಂತರಂಗದಲ್ಲಿ ಕೋಪವು ತುಸು ಮೊಳೆಯಿತು; ತಡೆದು ಅವರ ಮುಖದಲ್ಲಿ ಕಾಣುವ ಮೊದಲೇ ಹುದುಗಿಕೊಂಡಿತು! ಎಷ್ಟೆಂದರೂ ಈ ಕೇಳುಲೋಕದೊಡೆಯ ಎದುರಿನಲ್ಲಿದ್ದ! ನಾರದಮುನಿ "ಸ್ವಾಮಿ, ನೀನು ವೈಕುಂಠಕ್ಕೆ ಮರಳಿದಾಗ—ಅಲ್ಲಿ ಹಾಡಿತೋರಿಸುವೆ" ಎಂದು ನುಡಿದು, ಕಪಿಗಳ ಮುಖ ನೋಡಿದರು! ಶ್ರೀರಾಮಚಂದ್ರನಿಗೆ ನಾರದರ ಭಾವ ತಿಳಿಯಿತು. ಮಂಗಗಳ ಮಧ್ಯೆ ದೇವಲೋಕದ ನಾರದಮುನಿಗಳು, ಅದು ಹೇಗೆ ಗಾಯನ ಮಾಡಿಯಾರು? ಆದರೆ ಶ್ರೀರಾಮನ ಆಜ್ಞೆಗೂ ಮನ್ನಣೆಕೊಡದ ನಾರದರ ಗರ್ವಭಂಗವಾಗಬೇಕಲ್ಲವೆ? ರಾಮಚಂದ್ರ ಅರಿತೂ ಅರಿಯದವನಂತೆ "ನಾರದರೆ, ದೇವಲೋಕದಲ್ಲಿ ಎಲ್ಲವೂ ಕ್ಷೇಮವೆ?" ಎಂದ. ಅದಕ್ಕೆ ತಟ್ಟನೆ ನಾರದರು "ಪ್ರಭೋ, ಎಲ್ಲವೂ ಸರಿಯಾಗಿದೆ. ನೀನಂತೂ ರಾವಣ-ಕುಂಭಕರ್ಣರ ವಧೆಗಾಗಿ ಇಲ್ಲಿ ಅವತಾರ ಮಾಡಿದ್ದಾಯಿತು—ಇತ್ತ ದೇವಲೋಕ ಚಂದ್ರನಿಲ್ಲದ ಆಕಾಶದಂತೆ ಭಣಗುಟ್ಟುತ್ತಿದೆ.....ನೀನೂ....ಈ ಕಪಿಗಳಿಂದ ಕೂಡಿಕೊಂಡು...." ಎಂದು ಏನೋ ಯೋಚಿಸಿ "ಆಯಿತು, ಇನ್ನು ವೈಕುಂಠಕ್ಕೆ ಎಂದು ಬರುವಿ ಸ್ವಾಮಿ?" ಎಂದರು. ನಾರದರ ನುಡಿಗಳನ್ನು ಕೇಳಿ ರಾಮನು ಮುಗುಳುನಗೆ ನಕ್ಕು "ಎಲ್ಲಿ ನನ್ನ ಭಕ್ತರು ಇರುವರೋ ಅಲ್ಲಿಯೇ ವೈಕುಂಠ. ಈ ನನ್ನ ಕಪಿಸೈನ್ಯದ ಪರಿಚಯ ನಿಮಗೆ ಅಷ್ಟು ಇರಲಿಕ್ಕಿಲ್ಲ" ಎಂದು ಹನುಮಂತನ ಮುಖನೋಡಿ "ಹನುಮಂತ, ನೀನಾದರೂ ಒಂದು ಗೀತವನ್ನು ಅನ್ನು. ನನಗೆ ಅತಿ ಬೇಸರು!!" ಎಂದಾಗ, ನಾರದರು ಶ್ರೀರಾಮನು ತನ್ನನ್ನು ಬೇಕೆಂತಲೇ ಅಪಮಾನ ಮಾಡುತ್ತಿದ್ದಾನೆ—ಎಂದು ಬಗೆದು, ಬಹು ಬಿಗುಮಾನದಿಂದ ಕುಳಿತುಕೊಂಡರು! ಭಕ್ತಶ್ರೇಷ್ಠ ಹನುಮಂತ ಕೈಜೋಡಿಸಿ "ಅಪ್ಪಣೆ ಪ್ರಭೋ!" ಎಂದು ನಾರದರ ತಂಬೂರಿಯತ್ತ ದೃಷ್ಟಿ ಹರಿಸಿದ! ಅದನ್ನರಿತ ರಾಮಚಂದ್ರ "ನಾರದರೇ, ದಯವಿಟ್ಟು ಆ ತಂಬೂರಿಯನ್ನು ಹನುಮಂತನಿಗೆ ತುಸು ಕೊಡಿರಿ. ನೀವು ಪಣೆದು ಬಂದಿದ್ದೀರಿ" ಎಂದು ಹೇಳಿದಾಗ, ನಾರದರಿಗೆ ಅಸಹನೆ ಎನಿಸಿತಾದರೂ, ಭಿಡೆಯ ಮೀರದೆ ತಂಬೂರಿಯನ್ನು ಹನುಮನ ಕೈಗಿತ್ತು, ಅದು ಏನಾಗುವುದೋ ಎಂದು—ಭಯದಿಂದ ಸುಮ್ಮನೆ ಕುಳಿತರು. ಶ್ರುತಿಮಾಡಿದ ತಂಬೂರಿ, ಕೇಳುವುದೇನು—ಹನುಮಂತನ ಅಂಗುಲಿಗಳ ಸ್ಪರ್ಶಮಾತ್ರದಿಂದ ನಾದವು ಸುಮಧುರವಾಗಿ ತಾನೇ ತಾನಾಗಿ ಹೊರಹೊಮ್ಮಿ, ಸುತ್ತಲೂ ವ್ಯಾಪಿಸಿತು! ಆಕಾಶದಲ್ಲಿಯ ನಕ್ಷತ್ರಗಳೂ ಸಮುದ್ರದ ಅಲೆಗಳೂ, ಸುಳಿಗಾಳಿಯೂ ತಾವೆಲ್ಲ ಕೂಡಿ ಈ ಗಾಯನಸುಧೆಯನ್ನು ವಿಶ್ವಕ್ಕೆಲ್ಲ ಹಂಚಲು ನಿರತವಾದಂತಿತ್ತು! ಶ್ರುತಿಗೆ ತಕ್ಕಂತೆ ಗಾಯನದ ಆಲಾಪಗಳ ಸುರುಳಿ ಸುರುಳಿ ಹೊರಹೊಮ್ಮುತ್ತಲು, ನಾರದರೂ ಮೈಮರೆತು ಕುಳಿತರು! ಶ್ರೀರಾಮನಂತೂ ಹನುಮಂತನ ಆ ಭಕ್ತಿಗೀತಕ್ಕೆ ಮೆಚ್ಚಿ-ತನ್ನನ್ನೇ ಅತನಿಗೆ ಕೊಡಲು ಸಿದ್ಧನಾದಂತಿತ್ತು! ಭಕ್ತನಿಗೆ—ಭಕ್ತಿಗಿಂತ ಹೆಚ್ಚಿನದೇನು ಬೇಕು!

"ಸುಗ್ರೀವ ರಾಮಕೃಪಾss" ಎಂಬ ಒಂದು ಭಕ್ತಿರಸಪ್ರಧಾನವಾದ ಪಾಡನ್ನು ಹಾಡುತ್ತಿದ್ದಾಗ— ಸುಗ್ರೀವನ ಕಣ್ಣುಗಳಿಂದ ಆನಂದಾಶ್ರುಗಳು ಧಾರಾಳವಾಗಿ ಹರಿಯುತ್ತಿದ್ದುವು. ಶ್ರೀರಾಮಚಂದ್ರನು ಸುಗ್ರೀವನಿಗೆ ಕೃಪೆಮಾಡಿ ರಕ್ಷಿಸಿದ ಭಾವವನ್ನು ಆ ಗೀತವು ಹೇಳುತ್ತಿತ್ತು! ಆ ಗಾಯನದಲ್ಲಿ ತಲ್ಲೀನರಾದ ಆ ಕಪಿಗಳಿಗೂ, ಶ್ರೀರಾಮಚಂದ್ರನಿಗೂ, ಮತ್ತು ವೈಕುಂಠದಿಂದ ಇಳಿದುಬಂದ ನಾರದ ಮಹಾಮುನಿಗಳಿಗೂ—ವೇಳೆಯಾದುದು ತಿಳಿಯಲೇ ಇಲ್ಲ. ಆಕಾಶದಲ್ಲಿಯ ಚಂದ್ರ ಸಮುದ್ರತೀರವನ್ನಪ್ಪುವ ಸಮಯಕ್ಕೆ, ಬೆಳಗಿನ ಗಾಳಿ ಬಹು ಸ್ನಿಗ್ಧವಾಗಿ ಬೀಸಹತ್ತಲು—ಶ್ರೀರಾಮಚಂದ್ರ ಹನುಮಂತನಿಗೆ ನುಡಿದ: "ಹನುಮಂತಾ—ಸಾಕುಮಾಡು! ನಿನ್ನ ಭಕ್ತಿಗೆ ಮೆಚ್ಚಿದ್ದೇನೆ-ಅದೋ ಬೆಳಗಾಯಿತು ಕಾಣುವುದಿಲ್ಲವೆ?" ಎಂದು ಮುಗುಳು ನಗೆ ಬೀರಹತ್ತಿದಾಗ, ನಾರದರು ಸಮಾಧಿಯಿಂದ ಎಚ್ಚತ್ತು "ಧನ್ಯನಾದೆ ಮಹಾಪ್ರಭೋ! ನಾನು ನಿಜಕ್ಕೂ ಧನ್ಯ. ಅಹಂಕಾರ ನನ್ನನ್ನು ನಿನ್ನ ಭಕ್ತರ ಮಹಿಮೆಯನ್ನೂ ಅರಿಯದಂತೆ ಮಾಡಿತ್ತು" ಎಂದು ಶ್ರೀರಾಮನ ಪಾದಗಳಿಗೆ ನಮಸ್ಕರಿಸಿದರು! "ಹಹಹ!!" ಎಂದು ಶ್ರೀರಾಮ ಗಹಗಹಿಸಿ ನಗುತ್ತ "ನಾರದರೆ, ಸತ್ವಪರೀಕ್ಷೆ ಇನ್ನು ಮುಂದೆ ಅಗಲಿದೆ" ಎಂದ.

ನಾರದರಿಗೆ ಇನ್ನೂ ಭಯವಾಯಿತು! ರಾಮಚಂದ್ರನ ಕೋಪಕ್ಕೆ ಪಾತ್ರನಾದೆನೆಂದು ಅರಿತಾಗ, ಅವರ ಮೈಯೆಲ್ಲಾ ಕಂಪಿಸಿತು. ನಾರದರು ಪೃಥುಪಾಗಿ ನುಡಿದರು: "ಪ್ರಭೋ, ನನ್ನ ತಪ್ಪನ್ನು ಕ್ಷಮಿಸಬೇಕು."

"ನಾರದರೇ, ನೀವು ಮಾಡಿದ ತಪ್ಪಾದರೂ ಏನು?"

"ಎಲ್ಲವನ್ನೂ ಅರಿತ ನಿನ್ನೆದುರು-ನಾನು ಅರಿತೆನೆಂದರೆ ಹೇಗೆ?

ಇರಲಿ. ಸ್ವಾಮಿ, ಕಲೆಯು ತನ್ನ ಆತ್ಮಾನಂದಕ್ಕಲ್ಲದೆ ಹೆರವರ ದುಃಖ ನಿವಾರಣೆಯ ಸಾಧನವಾಗಿದೆ ಎಂಬ ಸತ್ಯವನ್ನು ಮರೆತು ಸಡೆದೆ!''

'' ನಾರದರೆ, ಈ ರಾಮಭಕ್ತ ಹನುಮಂತನ ಗಾಯನಕ್ಕೆ ನೀವೂ ಮೆಚ್ಚಿಕೊಂಡಿದ್ದೀರಿ ಅಲ್ಲವೆ? ಆಯಿತು, ಇನ್ನು ನಿಮ್ಮ ತಂಬೂರಿಯನ್ನು ನೀವು ತೆಗೆದುಕೊಳ್ಳಬಹುದು!'' ಎಂದು ರಾಮಚಂದ್ರ ಹೇಳಿದಾಗ, ನಾರದರು ತಮ್ಮ ಎದುರಿನಲ್ಲಿ ಇದ್ದ ತಂಬೂರಿಯನ್ನು ನೋಡುತ್ತಾರೆ-ಅದು ಯಾರ ಸಹಾಯವಿಲ್ಲದೆ ಶಿಲಾತಲದಮೇಲೆ ಒರ್ವ ಗರ್ವಿಷ್ಠ ಗಾಯಕನಂತೆ ಕುಳಿತಿದೆ! ಆಶ್ಚರ್ಯದಿಂದ ಅದನ್ನು ನಾರದರು ಮುಟ್ಟಿನೋಡುತ್ತಾರೆ—ಅದು ಒಂದು ತಂಗುಳಿ ಮಾತ್ರವೂ ಅಲುಗಾಡದೆ, ಶಿಲೆಯೊಡನೆ ಬೆರೆತು ಗಟ್ಟಿಮುಟ್ಟಿಯಾಗಿ ಅಂಟಿಕೊಂಡಿದೆ. ನಾರದರ ಮುಖ ಪೆಚ್ಚಾಯಿತು. ಸುತ್ತಲೂ ನೋಡಿದರು-ಆದರೆ ಅಲ್ಲಿ ಯಾರೂ ಇರಲಿಲ್ಲ! ಎಲ್ಲರೂ ಮಾಯವಾಗಿದ್ದಾರೆ. ನಾರದರೇ ನಾರದರು, ತಂಬೂರಿಯೇ ತಂಬೂರಿ! ಶೀತಲಗಾಳಿ ಬೀಸುತ್ತಿತ್ತು. ಕಡಲು ಭೋರ್ಗರೆಯುತ್ತಿತ್ತು- ನಾರದರ ಮನಸ್ಸನ್ನಾವರಿಸಿದ ಗರ್ವಭಾವ ತೊಲಗಿ ಜ್ಞಾನೋದಯವಾಯಿತು. ಅವರ ನಾಲಗೆ ತಾನೇ ನುಡಿಯಿತು. '' ಶ್ರೀರಾಮ ಗಾಯನ ಮಾತಲು ಹೇಳಿದ; ನಾನು ಕಪಿಗಳ ಎದುರಿನಲ್ಲಿ ಗಾಯನ ಮಾಡಲು ಒಪ್ಪಲಿಲ್ಲ. ಇದೆಂತಹ ಮೋಸ! ದೇವ-ದೇವಲ್ಲಿಯೂ ನನ್ನ ಅಹಂಭಾವವೆ? ಸರಿ. ತಕ್ಕ ಉಡುಗೊರೆ ಸಂದಿತು ನನಗೆ, ಹನುಮಂತನ ಗಾಯನಕ್ಕೆ ಕಲ್ಲುಕರಗಿ ನೀರಾಯಿತು; ಅವನು ಗಾಯನ ನಿಲ್ಲಿಸಲು ಅದು ಮತ್ತೆ ತನ್ನ ಮೂಲ ಪ್ರಕೃತಿಯಂತೆ ಗಟ್ಟಿ ಶಿಲೆಯಾಯಿತು. ಅದರಲ್ಲಿ ನನ್ನ ತಂಬೂರಿಯ ತಳ ಸಿಕ್ಕಿಕೊಂಡಿತು. ಎಂತಹ ಭಕ್ತಿ ಹನುಮಂತನದು; ನನ್ನ ಗರ್ವಭಂಗವಾಯಿತು-ಇನ್ನಾದರೂ ಹರಿಸ್ಮರಣೆ ಮಾಡುವೆ'' ಎಂದು ಅತ್ಯಂತ ದುಃಖದಿಂದ ನಾರದರು, ತಂಬೂರಿ ಇದ್ದಲ್ಲಿಯೇ ಕುಳಿತು ಶ್ರುತಿಮಾಡಿ ಭಕ್ತಿಯಿಂದ ಶ್ರೀರಾಮಸ್ಮರಣೆ ಮಾಡಹತ್ತಲು, ಮತ್ತೆ ಶಿಲೆಕರಗಿ ನೀರಾಯಿತು. ನಾರದರು ಕೂಡಲೇ ತಮ್ಮ ತಂಬೂರಿಯನ್ನು ಎತ್ತಿಕೊಂಡರು. ನಾರದರಿಗೆ ಅಲ್ಲಿಂದ ಕೂಡಲೇ ಹೊರಡಬೇಕೆಂಬ ಆಶೆ! ಆದರೆ ಶ್ರೀ ರಾಮಚಂದ್ರ ಅವರ ಎದುರಿನಲ್ಲಿಯೇ ನಿಂತುಕೊಂಡಿದ್ದಾನೆ. '' ನಾರದರೇ ನಿಮ್ಮ ಗಾಯನ ಸುಧೆಯಿಂದ ನನ್ನ ಬಹುದಿನದ ಜಾಡ್ಯ ಮಾಯವಾಯಿತು. ನಾನು ಧನ್ಯ'' ಎಂದು ನುಡಿದ. ಪಾಪ—ನಾರದರ ಕಣ್ಣುಗಳಲ್ಲಿ ನೀರೂರಿತು. ಈ ಅನಂತ ವಿಶ್ವವು ಅವಿಭಾಜ್ಯವಾದುದು; ಒಂದೊಂದು ಮೂಲತತ್ತ್ವದ ಮೇಲೆಯೇ ಎಲ್ಲವೂ ನಿಂತುಕೊಂಡಿದೆ. ಅದನ್ನರಿಯದೆಯೇ ತಮ್ಮಲ್ಲಿ ಅಹಂಭಾವ ಬೆಳೆಯುತಲ್ಲ—ಎಂಬ ಜ್ಞಾನ ನಾರದರಲ್ಲಿ ಉದಯವಾಗಿತ್ತು! ಶ್ರೀರಾಮನಿಗೆ ನಮ್ರರಾಗಿ ನಮಿಸಿ '' ಪ್ರಭೋ-ಇನ್ನು ಹೊರಡುವೆ!'' ಎಂದು ಕಂಠತುಂಬಿ ನಾರದರು ಅಪ್ಪಣೆ ಕೇಳಿದರು. ಶ್ರೀರಾಮಚಂದ್ರನು ಮುಗುಳು ನಗೆ ಬೀರುತ್ತ '' ನಾರದರೇ-ನಾನು ಇಂದು ನಿಜವಾಗಿಯೂ ಧನ್ಯ, ನಿಮ್ಮ ಗಾಯನದ ಮಾಧುರ್ಯ-ಹನಮಂತನ ಭಕ್ತಿಯುತವಾದ ಗೀತ-ಎರಡೂ ಸಮ್ಮಿಲಿತವಾಗಿ-ನನಗೆ ಅಪೂರ್ವ ಯೋಗವನ್ನು ತಂದುಕೊಟ್ಟುವು'' ಎಂದ.

ಉಜ್ಜು ಭಾರತವಜ್ರ..

❋

[ಶತಾಯುಷಿ ಶ್ರೀ ವಿಶ್ವೇಶ್ವರಯ್ಯನವರನ್ನು ಕುರಿತು]

ಘನತೆ-ಗೌರವ-ಸಮತೆಗಿಷ್ಟಗಲ ತೆರೆದ ಕವಿ.
ಕ್ಷಿತಿಜದಂಚಿಗೆ ತಾಗಿ ಆಚೆ ಹೊಳೆಯುವ ದೃಷ್ಟಿ.
ಯೋಜನೆಯ ಮೇಜು ಹಣೆ. ತುಟಿ-ವಿನಯ-ಸಂತುಷ್ಟಿ.

ನೇರ ಬಾಳಿದ ಮೂಗು ದುಡಿಮೆ-ದೀಕ್ಷಾ-ತಪಸಿ.
ಶುಭ್ರ ಜಶಿಪೇಟಿ, ಮೇಧಾಕಿರೀಟಿ; ಶಾಂತರಸ.

ಓರಣಕೆ ತೋರಣಕಟ್ಟಿದುಡುತೊಡುಗೆ. ನಡಿಗೆ
ನೂರು ಸಂವತ್ಸರದ ಕೊಡುಗೆ; ಕನ್ನಡ ಗುಡಿಗೆ

ಚಂದನದ ತೇರು, ಕೋಲಾರ-ಚಿನ್ನದ ಕಳಸ.
ಸಂಕಲ್ಪಮಾತ್ರದಲಿ ಶತಮಾನಗಳ ಕನಸ

ಕಡೆದು ನಿಲಿಸುವ ಶಿಲ್ಪಿ; ಯಂತ್ರ-ಗಡಗಡ-ಗಾಲಿ
ಉಕ್ಕು-ಕಬ್ಬಿಣ-ಸೊಕ್ಕು, ವಿದ್ಯುಚ್ಛಕ್ತಿ ಪೈಲಿ!

ವೃಂದಾವನದಿ ಮತ್ತೆ ಜೀವ ಪುಟಿಯುವ ರಾಸ.
ಅಜ್ಜನದ್ಭುತ ಕಥೆಗೆ ಮೊಮ್ಮಗನ ಪೈನವಿರು—
ಉಜ್ಜು ಭಾರತವಜ್ರ, ಜಂಗು ತಿಂದವರಿವರು.

—ಚೆನ್ನವೀರ ಕಣವಿ

ದೂರದ ದಿಗಂತದಲ್ಲಿ ಮೂಡಲ ಹೊಂಬೆಳಕು ಪಸರಿಸುತ್ತಿತ್ತು. ಹಕ್ಕಿಪಕ್ಕಿಗಳ ಮಧುರ ಧ್ವನಿಯೊಡನೆ-ದೂರದ ಲಂಕೆಯ ಪಡೆಗಳ ರಣವಾದ್ಯಗಳ ಧ್ವನಿಯೂ ಕೂಡಿಕೊಂಡು ವಾತಾವರಣವನ್ನು ಜಾಗೃತಗೊಳಿಸಹತ್ತಿತ್ತು. ಇತ್ತ ಕಪಿಗಳ ಸೈನ್ಯವು ರಣಭೂಮಿಗೆ ಜಯಘೋಷಣ ಮಾಡುತ್ತ ಧಾವಿಸುವುದರಲ್ಲಿತ್ತು! ನಾರದರಿಗೆ ಹೇಳಲಾರದ ಒಂದು ದಿವ್ಯ ಅನುಭವ-ಅದು ಅಂಗಾಂಗಗಳನ್ನು ವ್ಯಾಪಿಸುತ್ತಿರುವಾಗಲೇ – ಆಕಾಶದತ್ತ ಪ್ರಯಾಣ ಮಾಡಿದರು. ಅದು ವೈಕುಂಠಕ್ಕೋ ಮತ್ತೆಲ್ಲಿಗೋ ಯಾರು ಬಲ್ಲರು?

ಹವ್ಯಕರ ಮನೆಮಾತುಗಳು

ಶ್ರೀ. ಡಾ. ವಿ. ಆರ್. ಉಮರ್ಜಿ ಎಂ. ಎ., ಪಿಚ್.ಡಿ. ಬೆಳಗಾಂವಿ

ಲೇಖ ೧

[**ಡಾ. ವಿ. ಆರ್. ಉಮರ್ಜಿ**ಯವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲಸಮಾಡುತ್ತಿರುವಾಗ, ಕರಾವಳೀ ತೀರದಲ್ಲಿ ವಾಸಮಾಡುವ ಪಂಗಡಗಳ ಮನೆಮಾತುಗಳ ಪರಿಶೀಲನೆಯನ್ನು ಕೈಕೊಂಡಿದ್ದರು— ೧೦ ವರ್ಷಗಳ ಹಿಂದೆ. ೧೯೫೦ರಿಂದ ೧೯೫೯ರ ವರೆಗೆ ೪ ವರ್ಷ ಕಾಲಾವಧಿ ಸತತ ಪರಿಶ್ರಮಿಸಿ, ಆಯಾ ಪಂಗಡಗಳ ಮನೆಮಾತುಗಳನ್ನು ಸಂಗ್ರಹಿಸಿದ್ದಾರೆ. ಅವುಗಳ ಮುಖ್ಯಾಂಶಗಳನ್ನು ೧೪ ಲೇಖನಗಳ ಮುಖಾಂತರವಾಗಿ, ವಾಚಕರ ಅವಗಾಹನೆಗಾಗಿ ಇಲ್ಲಿ ಕ್ರಮವಾಗಿ ಪ್ರಪಟಿಸುತ್ತಿದ್ದೇವೆ.— **ಸಂಪಾದಕ.**]

ಹವ್ಯಕರ ಅಲ್ಪಪರಿಚಯ:— ಕರಾವಳಿಯ ಪ್ರದೇಶದಲ್ಲಿ ಬಹು ಪ್ರಭಾವಶಾಲಿ ಹಾಗೂ ಮುಂದುವರಿದ ಒಂದು ದೊಡ್ಡ ಪಂಗಡ ಹವ್ಯಕರದು. ಬಹು ಫಲವತ್ತಾದ ಅಘನಾಶಿನಿ ಹಾಗೂ ಶರಾವತಿ ನದಿಗಳ ಕೊಳ್ಳಗಳ ಮಧ್ಯಪ್ರದೇಶದಲ್ಲಿ ಇದು ವಾಸಿಸಿದೆ. ಅವರು ವಾಸಿಸಿರುವ ಮುಖ್ಯ ಕೇಂದ್ರ ಸ್ಥಳಗಳು— ಅಗ್ರಹಾರ, ಸಿಂಗಲಕೋಡ, ಹೊಸಕುಳಿ, ಕರ್ಕಿ, ಇಡಗುಂಜಿ, ಹೆಗ್ಡೆ, ಅಜವೆ (ಗೋಕರ್ಣ). ಇವರ ಮನೆಮಾತು ಕನ್ನಡ. ಇವರು ಉತ್ತರಕಡೆಯಿಂದಾ ಬಂದವರಾದರೂ, ಇವರ ತಿಗಳಾರಿ ಲಿಪಿ ಹಾಗೂ ಮಾತಿನಲ್ಲಿ ಮಲೇಯಾಳೀ ಆಘಾತ— ಇವು ಯಾರಿಗಾದರೂ ಸೋಜಿಗವನ್ನು ಉಂಟುಮಾಡದೆ ಇರಲಾರವು. ಒಟ್ಟಿನ ಮೇಲೆ ಇದೊಂದು ವಿಚಿತ್ರ ಪಂಗಡ. ದೇವಸ್ಥಾನಗಳ ಪೂಜೆ, ಪೌರೋಹಿತ್ಯ ಇವರ ಮುಖ್ಯ ಉದ್ಯೋಗಗಳಾದರೂ, ಅಲ್ಲಲ್ಲಿ ಒಕ್ಕಲು-ತನವನ್ನು ಮಾಡುತ್ತಿರುವರು.

ಮೂರೂರ ಹವ್ಯಕರ ಮಾತಿನ ಮಾದರಿ:—

ಹವ್ಯಕರು ಬಹುಸಂಖ್ಯಾಕರಾಗಿರುವ 'ಮೂರೂರು' ಗ್ರಾಮವು ಒಂದು ದೊಡ್ಡ ಹಳ್ಳಿ. ಕರಾವಳಿಪ್ರದೇಶದಲ್ಲಿ ಸಾಂಸ್ಕೃತಿಕ ಕೇಂದ್ರವೆನಿಸಿದ ಕುಮಟೆಯಿಂದಾ ದಕ್ಷಿಣಕ್ಕೆ ೬ ಮೈಲುಗಳ ಮೇಲೆ ಇದೆ. ಮೂರೂರ ಹವ್ಯಕರ ಮನೆಮಾತಿನಲ್ಲಿ* ಸೂರ್ಯ ಹಾಗೂ ಗಾಳಿ ಎಂಬ ಕತೆಯು:

೧. ವಾಯು ಸೂರ್ಯ ಇಬ್ರೂವಕ ನನ್ಯಕ್ಕೆಯ್ಯಿಜ್ಜೊಟ್ಟಿ.
೨. ನಿನ್ಯಕ್ಕೆಯ್ಯಿಜ್ಜೊ ಹೇಳ್ಳಗ್ಯಾತ್ತಿದ್ದಿದ್ದೊ.
೩. ಆಗೊಬ್ಬಪ ದಾರಿಮೇಲ್ಯೊಪಹಳ್ಬನ್ನ. ಅವ
೪. ಸೈತುಂಬವ ಬೆಚ್ಚಗ್ಯಂಬಿ ಹೊದ್ಕಣ್ಡಿದ.
೫. ಆ ಕಂಬ್ಳಿನಿಗವ ಯಾರ್ಮಲ್ಲಿಕ್ಕೆ ತನ್ಯೆಲ್ತಕಮ್ಯಾಯ್ಗಾ.
೬. ಜ್ಞೊವ ಆಸ್ಸಕ್ಕೆಯ್ಯಿಚ್ಚುಹೇಳ್
೭. ತೆಳ್ಳಳವು ಹೇಳ್ಯಾತ್ತಾಜ್ಞೊಣ್ಣೊ.
೮. ಮಲ್ಲಿಕ್ಕೆ ವಾಯು ತನ್ಯೆಲಪ್ಪಟ್ಯಕ್ಕೆ
೯. ಜಾಕೂಗ್ದ. ಅವೂಗ್ಯಾಯ್ಗಾ
೧೦. ದಾರಿಮೇಲ್ಯೊಪವ್ಮತ್ತು ಗನಾಕ್ಯೆಯ್ಮೇ-

* ಭಾಷಾಪ್ರಭೇದಗಳನ್ನು ತುಲನಾತ್ಮಕವಾಗಿ ಅಭ್ಯಸಿಸುವಾಗ, ಪಾರ್ಶ್ವಾತ್ಯರು ಸೂರ್ಯ ಮತ್ತು ಗಾಳಿ (The sun and the wind) ಎಂಬ ಕಥೆಯನ್ನು ಉಪಯೋಗಿಸುವರು. ಆ ಕಥೆಯನ್ನು ಕನ್ನಡದಲ್ಲಿ ಪರಿವರ್ತಿಸಿ ಇಲ್ಲಿ ಕೊಟ್ಟಿದೆ: "ವಾಯು ಸೂರ್ಯ ಇಬ್ಬರೂ ನನ್ನ ಶಕ್ತಿ ಹೆಚ್ಚಿ ನಿನ್ನ ಶಕ್ತಿ ಹೆಚ್ಚಿ ಎಂದು ವಾದ ಮಾಡುತ್ತಾ ಇದ್ದರು. ಆಗ ಒಬ್ಬ ಪ್ರಯಾಣಿಕನು ಆ ಕಡೆ ಬಂದನು. ಅವನು ಬೆಚ್ಚಗಿನ ಕಂಬಳಿಯನ್ನು ಮೈತುಂಬ ಹೊತ್ತುಕೊಂಡಿದ್ದನು. ಆ ಕಂಬಳಿಯನ್ನು ಯಾರು ಮೊದಲು ಅವನ ಕೈಯಲ್ಲಿ ಬಿಚ್ಚಿಹಾಕುತ್ತಾರೊ, ಅವನ ಶಕ್ತಿಯೇ ಹೆಚ್ಚಿಂದು ತಿಳಿಯಬೇಕು— ಹೀಗೆಂದು ಅವರು ಒಪ್ಪಂದ ಮಾಡಿಕೊಂಡರು. ಮೊದಲು ವಾಯು ತನ್ನ ಶಕ್ತಿಯನ್ನೆಲ್ಲ ಬಿಟ್ಟು ಊದಿದನು. ಆದರೆ ಅವನು ಊದಿದಷ್ಟೂ ಆ ಪ್ರಯಾಣಿಕನು ಕಂಬಳಿಯನ್ನು ಇನ್ನಷ್ಟು ಬಿಗಿಯಾಗಿ ಮೈಮೇಲೆ ಎಳಕೊಂಡನು. ಕಡೆಗೆ ವಾಯು ಪ್ರಯತ್ನವನ್ನು ಕೈಬಿಟ್ಟನು. ಆ ಮೇಲೆ ಸೂರ್ಯನು ಕಿರಣವನ್ನು ಬೀರುತ್ತ ಬಂದನು. ಬಿಸಿಲಿನ ಜಳಕ್ಕೆ ಪ್ರಯಾಣಿಕನು ಕಂಬಳಿಯನ್ನು ತಾನೇ ಬಿಚ್ಚಿಹಾಕಿದನು. ಹೀಗಾಗಿ ತನ್ನ ಶಕ್ತಿಗಿಂತ ಸೂರ್ಯನ ಶಕ್ತಿಯೇ ಹೆಚ್ಚಿಂದು ವಾಯು ಒಪ್ಪಿಕೊಳ್ಳಬೇಕಾಯಿತು.

೧೧. ಲ್ಯಳ್ಕಂಡ. ಕಡೆಗ್ವಾಯು

೧೨. ಕಟ್ಟಟಿ ಮಾಡುದ್ಬಿಟ್ಟುಟಿ, ಕಡೆಗ್ನೂರ್ಯ

೧೩. ಕೆರ್ಣಬಿಡುಲ್ಲಣ್ಣಿದ. ಬಿಸ್ಲೊಪ್ಪಡ್ತಾಕ

೧೪. ದಾರಿಮೇಲ್ಹೋಪವ್ಕಮ್ಬಿ ನಿಗವ ತನ್ನರೆ ತೆಗ್ದಾಂಡ್ಕ.

೧೫. ಹಾಗಾಗ್ತನ್ಯಕ್ತೆಗಿನ್ನೂ ನರ್ಯಕ್ಕೆ ಹೆಚ್ಚು

೧೬. ಹೇಳ್ವಾಯು ವಪ್ಪಳಕಾತು.

[ಕತೆಯನ್ನು ಹೇಳಿದವನು — ನೈಂಳಟರಮಣ ಗಣಪತಿ ಹೆಗ್ಡೆ. ಮೂರೂರು, ತಾಲೂಕು ಕುಮಟಾ.]

ಪರಿಶೀಲನೆ:— ಉಚ್ಚಾರಗಳ ವರ್ಗೀಕರಣ: (೧) ಸ್ವರಗಳು:- ಅಭ್ಯಾಸಕ್ಕೆ ತೆಗೆದುಕೊಂಡ ಹವ್ಯಕರ ಮನೆಮಾತಿನಲ್ಲಿ **'ಎ'** ಹಾಗೂ **'ಒ'** ಗಳು ಅನುಕ್ರಮವಾಗಿ **'ಯ್ಅ'** ಹಾಗೂ **'ವ'** ಗಳಾಗಿ ಉಚ್ಚರಿಸಲ್ಪಡುವುವು. ಉಳಿದ ಪಂಗಡಗಳ ಮನೆಮಾತಿನಲ್ಲಿ ಇದನ್ನು ಕಾಣುವುದಿಲ್ಲ.

ಎ> ಯ್ಅ ಉದಾ:— ಎಳೆದುಕೊಂಡನು > ಯಳ್ಕಂಡ.

ಒ> ವ್ ಉದಾ:— ಒಬ್ಬ > ನಬ್ಬವ, ಒಪ್ಪಿಕೊಳ್ಳಬೇಕಾಯಿತು> ವಪ್ಪಳಾಕಾತು.

ಕೆಲವೆಡೆಯಲ್ಲಿ 'ಎ' 'ಒ' ಕಾರಗಳು **ಅ>** ಕಾರವಾಗಿ ಉಚ್ಚರಿಸಲ್ಪಡುವುವು.

ಎ> ಅ ಉದಾ: — ತೆಗೆದುಕೊಳ್ಳು—ತ> ಕಂಭ್ಗಾಗ

ಒ> ಅ ಉದಾ:— ಒಪ್ಪಿಕೊಳ್ಳ— ವಪ್ಪಳ್, ಮೊದಲು> ಮ> ದ್ಲಿಕ್ಕೆ ಅದರಂತೆ ಕೆಲವು ಎಡೆಯಲ್ಲಿ 'ಇ' ಕಾರವು 'ಎ'ಕಾರವಾಗಿ ಉಚ್ಚರಿಸಲ್ಪಡುವುದು.

ಇ> ಎ ಉದಾ:— ತಿಳಿದುಕೊಳ್ಳಬೇಕು— ತೆಳ್ಕಳವು.

೨. ವ್ಯಂಜನಗಳು:— ಸಾಮಾನ್ಯವಾಗಿ ವರ್ಗದ ಪ್ರಥಮ ಸ್ಥಾನದಲ್ಲಿ ತೃತೀಯವನ್ನು ಕಾಣಬಹುದು. ಉದಾ:— ಹೊತ್ತುಕೊಂಡಿದ್ದನು> ಹೊದ್ಯಂಡಿದ್ದ. ಅದರ ವಿರುದ್ಧ ಕ್ರಿಯೆಯನ್ನೂ ಕಾಣಬಹುದು. ಉದಾ:— ತೆಗೆದು—ತಕಂಭ್ಗಾಂಗ. ಅನುಸ್ವಾರವನ್ನು (ಬಿಂದುವನ್ನು) ಮುಂದೆ ಬರುವ ವ್ಯಂಜನದ ವರ್ಗದ ಪಂಚಮವನ್ನಾಗಿ ಪರಿವರ್ತಿಸುವುದು.

ಉದಾ:— ಬಂದನು > ಬನ್ದ.

೩. ದಂತತಾಲವ್ಯ ಚ ವರ್ಗ:— 'ಚ'ವರ್ಗವು ದಂತತಾಲವ್ಯವಾಗಿ ಉಚ್ಚರಿಸಲ್ಪಡುವುದು. ಉದಾ:— ಚ್ > ಚ್ — ಹೆಚ್ಚಿ > ಹೆಚ್ಚೆ ಇದು ಎಲ್ಲ ದ್ರಾವಿಡ ಭಾಷೆಗಳ ವೈಶಿಷ್ಟ್ಯ. ಸಂ. ಪೂಜಾ > ಕ. ಪೂಜೆ

೪. ಶಷಸಗಳ ಉಚ್ಚಾರ:— ಶ ಷ ಸ ಉಚ್ಚಾರ ಭೇದಗಳಿವೆ.

ಶ — ಶ್ ಉದಾ:— ಶಕ್ತಿ — ಶಕ್ತಿ ಮುಂ.

ಸ — ಸ್ ಉದಾ:— ಸೂರ್ಯ — ಸೂರ್ಯ ಮುಂ.

ಒಮ್ಮೊಮ್ಮೆ ಹವ್ಯಕರ ಪಂಗಡದಲ್ಲಿ 'ಸ' ಕಾರವನ್ನು 'ಶ' ಕಾರವಾಗಿ ಉಚ್ಚರಿಸುವ ಒಲವು ಉಂಟು. ಉದಾ:— ಬಿಸಿಲಿನ > ಬಿಶ್ಲಿನ. ಸುರುಮಾಡು > ಶುರುಮಾಡು. ಷಕಾರದ ಉದಾಹರಣೆಗಳು ಮಾತಿನ ಮಾದರಿಯಲ್ಲಿ ಇಲ್ಲ. ಹವ್ಯಕರು ಷ ಕಾರವನ್ನು ಷ ಕಾರವಾಗಿಯೇ ಉಚ್ಚರಿಸುವರು.

೫. ರ ಲ ಳ ಗಳ ಉಚ್ಚಾರ:— ಈ ವರ್ಣಗಳ ಉಚ್ಚಾರವು ಯಥಾಪ್ರಕಾರವಿದೆ.

ರ—ರ ಉದಾ:— ಯಾರು> ಯಾರ್, ಸೂರ್ಯ, ಕೆರ್ಣ ಮುಂ.

ಲ—ಲ ಉದಾ:— ಮೇಲೆ ಮುಂ.

ಳ—ಳ ಉದಾ:— ಕಂಬಳಿ > ಕಂಬ್ಳಿ, ಹೇಳ್ ಮುಂ.

೬. ನ-ಣ ಗಳ ಉಚ್ಚಾರ:— ನ — ಣ ಗಳಲ್ಲಿ ಉಚ್ಚಾರ. ಭೇದವಿದೆ.

ನ—ನ ಉದಾ:— ನನ್ನ> ನನ್, ನಿನ್, ಗನಾಕ್ ಮುಂ.

ಣ—ಣ ಉದಾ:— ಕಿರಣ> ಕೆರ್ಣ, ಹಣ್ಕಾದ್. ಮುಂ.

ಆದರೂ ಒಂದೆಡೆಯಲ್ಲಿ ನ> ಣ ಆದದ್ದನ್ನು ನೋಡಬಹುದು. ಉದಾ:— ಬೆಚ್ಚಗಿನ > ಬೆಚ್ಗಣ್. ಇದು ಅಪವಾದ.

೭. ಮಹಾಪ್ರಾಣಗಳ ಉಚ್ಚಾರ:— ತೆಗೆದುಕೊಂಡ ಕತೆಯಲ್ಲಿ ಮಹಾಪ್ರಾಣಗಳು ಬಂದಿಲ್ಲವಾದರೂ, ಈ ಪಂಗಡದ ಮನೆಮಾತಿನಲ್ಲಿ ಮಹಾಪ್ರಾಣಗಳ ಉಚ್ಚಾರ ಯಥಾಪ್ರಕಾರವಿದೆ.

೮. ಸಾನುನಾಸಿಕ:— 'ವ' ಕಾರವು ಕೆಲವೆಡೆಯಲ್ಲಿ ಸಾನುನಾಸಿಕವಾಗಿ ಉಚ್ಚರಿಸಲ್ಪಡುವುದು.

ವ> ವಂ ಉದಾ:— ಇಬ್ಬರು> ಇಬ್ರುಂವ, ಅವನು> ಅಂವ, ಒಬ್ಬ> ವಬ್ಬಾಂವ, ದಾರಿಮೇಲ್ಹೋಪಂವ.

೯. ಸಂಧಿ:— ಶಬ್ದಗಳನ್ನು ಅಥವಾ ಶಬ್ದಸಮುದಾಯಗಳನ್ನು ಸಂಕೋಚಿಸಿ (Contract) ಉಚ್ಚರಿಸುವುದು; ಅದಕ್ಕೆ ಸಂಧಿ ಎಂದು ವ್ಯಾಕರಣದಲ್ಲಿ ಹೇಳುತ್ತಾರೆ. ಹವ್ಯಕರ ಮನೆಮಾತಿನಲ್ಲಿ ಅನೇಕ ಸಂಕೋಚಿಸಿದ ಉಚ್ಚಾರಗಳನ್ನು ನಮೂದಿಸಬಹುದು.ಉದಾ:- ಕೆರಣ> ಕೆರ್ಣ, ಬಿಸಿಲಿನ> ಬಿಸ್ಲ್ನ, ಮಾತ್ಕಾಡ್ಕಂಡೊ, ನನ್ನ ಶಕ್ತಿ ಹೆಚ್ಚ್ಯೊ> ನನ್ಯಕ್ತೆ ಹ್ಚ್ಯೊ, ಸೂರ್ಯನ ಶಕ್ತಿಯೇ> ಸೂರ್ಯ್ನಕ್ತೆ ಯೇ

೧೦. ಹ್ರಸ್ವ-ದೀರ್ಘ-ಪ್ಲುತಗಳು:— ಕೆಲವೆಡೆ ಉಚ್ಚಾರ ಬಹಳ ಎಳೆಯುವುದರಿಂದ (ಮೂರು ಮಾತ್ರೆಯವರೆಗೆ) — ಪ್ಲುತವಾಗಿ ಉಚ್ಚರಿಸಿದ್ದನ್ನು ಕಾಣಬಹುದು.

ಉದಾ:— ಗನಾssಕ್, ಇಬ್ರುssನ್.

೧೧. ಆಘಾತಗಳು:— ಈ ಪಂಗಡದ ಮನೆಮಾತಿನಲ್ಲಿ ಪದಗಳು ಅಥವಾ ಪದಸಮುಚ್ಚಯಗಳು ಸಂಕೋಚ (Contract) ಹೊಂದುತ್ತಿರುವುದರಿಂದ ಆಘಾತಗಳಿರುವುದು ಸಹಜ. ಇಲ್ಲವಾದರೆ ಪದಗಳು ಅಥವಾ ಪದಸಮುಚ್ಚಯಗಳು ಆಘಾತ (ಹೊಡೆತ, ಒತ್ತು, ಜೋರು) ವಿಲ್ಲದೇ ಸಂಕುಚಿತವಾಗಲಾರವು.

ಉದಾ:— 'ಬೆ'ಚ್ಗಣ್ (ಬೆಚ್ಚಗಿನ) 'ಕಂಬ್ಳಿ', 'ನನ್' ಶಿಕ್ತ 'ಹೆಚ್ಚ್ಯೊ'

೧೨. ವಿರಾಮ ಘಟಕಗಳು:— (Breath Group) ಬಹಳ ತೀವ್ರತೆಯಿಂದಲೂ ಜೋರಿನಿಂಹೂ ಶಬ್ದಗಳನ್ನು ಈ ಪಂಗಡದವರು

ಉಪಯೋಗಿಸುವರು. ಆದ್ದರಿಂದ, ಸಾಮಾನ್ಯವಾಗಿ ಸಣ್ಣ ವಾಕ್ಯವಿದ್ದರೆ ಒಂದೇ ವಿರಾಮಘಟಕ.

ಉದಾ:— ಬೆಚ್ಚಗ್ ಕಂಬ್ಳಿ ಹೊದ್ಕಂಡಿದ ॥
ಆಗೊಬ್ಬಂನ ದಾರಿನೇಲ್ಹೋಪಂವ ಆಲ್ಬಂದ ॥

ಉದ್ದವಾಕ್ಯವಿದ್ದರೆ ಎರಡು ವಿರಾಮಘಟಕಗಳು, ಹೆಚ್ಚಿಲ್ಲ.

ಉದಾ:— ವಾಯು ಸೂರ್ಯ ಇಬ್ರೂವ, ನನ್ಯಕ್ಕೆ ಜ್ಞೊ
ನಿನ್ಯಕ್ಕೆ ಜ್ಞೊ ಹೇಳ್ವಷ್ಟಾಯಾಮಾಡ್ತಿದ್ದಿದೊ ॥

೧೩. ಸ್ವರಗಳ ವಿವರಿಣೆ:— ಈ ಮನೆಮಾತಿನಲ್ಲಿ ಅವು ಅಷ್ಟು ಸ್ಪಷ್ಟವಾಗಿ ಒಡೆದು ಕಾಣುವುದಿಲ್ಲ

೧೪. ಸ್ವರಗಳ (ಅ) ಅಲ್ಪಮಾತ್ರಾ ಉಚ್ಚಾರ (ಬ) ವ್ಯಂಜನಗಳ ಅಸ್ಪಷ್ಟ ಉಚ್ಚಾರ:—

(ಅ) ಉದಾ:— ಕಿರ್ಣ (ಕಿರಣ)— ರ ನಲ್ಲಿಯು 'ಅ' ಕಾರವು ಅಲ್ಪಮಾತ್ರೆಯಾಗಿ ಉಚ್ಚರಿಸಲ್ಪಡುವುದು.

(ಬ) ವಸ್ತಳಕಾತು (< ವಸ್ಪಕಳ್ಳಬೇಕಾತು < ವಸ್ಪಿಕೊಳ್ಳಿಬೇಕಾಯಿತು.

೧೫. ಶಬ್ದಗಳ ವರ್ಗೀಕರಣ:— ಸಂಸ್ಕೃತ, ವಾಯು, ಸೂರ್ಯ ಮುಂತಾದ ಪದಗಳನ್ನು ಈ ಸಂಗಡಿಗರು ಉಪಯೋಗಿಸುತ್ತಿದ್ದರು. ಪ್ರಯಾಣಿಕ ಎಂಬಲ್ಲಿ ದಾರಿನೇಲ್ಹೋಪಂವ, ಜಾವ ಎಂಬಲ್ಲಿ (ಜಗಳ) ಜಗ್ಳ, ಪ್ರಯತ್ನ ಎಂಬಲ್ಲಿ ಕಟ್ಟಪಟಿ ಎಂಬ ದೇಶೀಯ ಪದಗಳನ್ನು ಉಪಯೋಗಿಸುವರು. ಇಲ್ಲವೆ ಅನೇಕ ಹಳಗನ್ನಡ ಪದ ಹಾಗೂ ಪದ ಸಮುಚ್ಚಯಗಳನ್ನು ಉಪಯೋಗಿಸುತ್ತಾರೆ. ಕೈಯಲಪ್ಪಟ್ಟಕ್ಕೆ— (ತನ್ನ ಎಲ್ಲ ಶಕ್ತಿ), ದಾರಿನೇಲ್ಹೋಪವ— (ಹಾದಿಯ ಮೇಲೆ ಹೋಗುವವ) ಎಂಬ ಮುಂತಾದ ಹಳಗನ್ನಡ ಪದಗಳು. ಜಗ್ಳಾಮಾಡ್ತಿದ್ದಿದೋ— (ಪಾಪಮಾಡುತ್ತ ಇದ್ದರು) ಮಾತ್ಕಾಡ್ಕಂಡೊ (—ಒಪ್ಪಂದ ಮಾಡಿಕೊಂಡರು) ತೆಳ್ಕಳವು— (ತಿಳಿದುಕೊಳ್ಳುವುದು—ತಿಳಿದುಕೊಳ್ಳಬೇಕು) ಇಲ್ಲಿ ತೆಳ್ಕಳವು ಎಂಬ ಭಾವವಾಚಕ ನಾಮವನ್ನು ಕ್ರಿಯಾಪದದಂತೆ ಉಪಯೋಗಿಸಿದ್ದಾರೆ. 'ಕಂಬ್ಳಿನಿಗವ' ಎಂಬಲ್ಲಿಯ 'ನಿಗವ' ಎಂಬ ಪದವು ಕರ್ಮಾರ್ಥ ಸೂಚಕವಾದುದು. 'ಕಂಬ್ಳಿನಿಗವ'—ಕಂಬಳಿಯನ್ನು. ಇಲ್ಲಿ 'ನಿಗವ' ಪದವು ಗಮನಾರ್ಹವಾಗಿದೆ. ತನ್ನರೆ— ತಾನೇ ಇದು ಒಂದು ಹವ್ಯಕರ ಮಾತಿನ ವೈಶಿಷ್ಟ್ಯ. ಗನಾಕ್—ಬಗಿಯಾಗಿ, ಹಣ್ಣಾದ (ಪುರುಮಾಡ್ದ) ಎಂಬ ಶಬ್ದಗಳೂ ಗಮನಾರ್ಹವಾಗಿವೆ. ಸಂಸ್ಕೃತದಲ್ಲಿ ಘನ (ಗನ) ಎಂಬ ಶಬ್ದವನ್ನು ನಿರಂತರ (ಬಿಗಿ, ಗಟ್ಟಿ) ಎಂಬ ಅರ್ಥದಲ್ಲಿ ಉಪಯೋಗಿಸುತ್ತಾರೆ. ಹವ್ಯಕರೂ ಅದೇ ಅರ್ಥದಲ್ಲಿ ಗನ (ಗನಾಕ್) ಎಂಬುದನ್ನು ಉಪಯೋಗಿಸುವಂತೆ ಕಾಣುತ್ತದೆ.

ಗುಡೇಅಂಗಡಿ ಹವ್ಯಕರ ಮನೆಮಾತುಗಳು:—

ಕುಮಟೆಯಿಂದಾ ಉತ್ತರಕ್ಕೆ ೫ ಮೈಲುಗಳ ಮೇಲೆ ಗುಡೇಅಂಗಡಿ ಗ್ರಾಮವಿದೆ. ಅಲ್ಲಿ ಹವ್ಯಕರ ಜನವಸತಿ ಹೆಚ್ಚು. ಗುಡೇಅಂಗಡಿ ಗ್ರಾಮದಲ್ಲಿಯು ಹವ್ಯಕರ ಸಂಗಡದ ಮನೆಮಾತಿನಲ್ಲಿ ಸೂರ್ಯ ಹಾಗೂ ವಾಯು ಎಂಬ ಕಥೆಯನ್ನು ಹೇಳಿಸಿ ಸಂಗ್ರಹಿಸಲಾಗಿದೆ:

ಸೂರ್ಯ ಹಾಗೂ ವಾಯು

೧. ಗಾಳಿ ಸೂರ್ಯ ಎರ್ಡೂ ಜನ ss, ನನ್ ಶಕ್ತಿ ಹೆಚ್ಚೀ
೨. ನಿನ್ ಶಕ್ತಿ ಹೆಚ್ಚೋಯೆಂತಾ ಜಗಳಾಡ್ತಾಯಿದ್ದಿದೊss.
೩. ಆಗ ಒಬ್ಬನ ಹಾದೀಮೇಲ್ ಹೋಪಾಂವ ಆಬದಿಗೆ, ಬಂದಾ.
೪. ಅಂವಾ ಬೆಚ್ಚಗಪ್ಪಾಂಗೆ ಕಂಬ್ಳಿಯ ಮೈ ಪೂರಾ ಮುಚ್ಚಾಯ್ ಕಂಡಿದ್ದ
೫. ಆ ಕಂಬ್ಳಿಯ ಯಾರ್ ಮೊದ್ಲಿಕ್ಕೆ ಆವ್ನ ಕೈಯಿಂದೇಯ
೬. ಬಿಡ್ ಹಾಕ್ಸಾವ್ವಾಂಗೆ ಮಾಡ್ತೊವ ಅವಂದ ಶಕ್ತಿಯೇ ಹೆಚ್ಚು ಹೇಳಿ
೭. ತಿಳಿಕಳೋ. ಹಿಂಗ ಹೇಳಿ ಅನ್ಗ್ರುತ್ತ್ ಮಾಡ್ಕಂಡೊ.
೮. ಮೊದ್ಲಿಕ್ಕೆ ಗಾಳಿ ತನ್ನ ಹತ್ರಿದ್ದ ಶಕ್ತಿಯೆಲ್ಲಾ
೯. ಹಾಕೆ ಉಬ್ಬಾ. ಆದ್ರೆ ಅವ ಊಬ್ಬಾಣಂಗೆ
೧೦. ಆ ಹಾದಿಮೇಲೆ ಹೋಪಾಂವ ಮತ್ತೂ ಗನಾಕೆ
೧೧. ಬಿಗಿಯಪ್ಪಾಂಗೆ ಮೈಮೇಲೆ ಹೊದ್ಕಂಡಾ.
೧೨. ಆಗss ಗಾಳಿ ಕಟಪಟಿ ಮಾಡುದ ಬಿಟ್ಸss ಬುಟಾ. ಪಾಂಗೇಯೂ ಸೂರ್ಯ
೧೩. ತನ್ನ ಕಣ್ಣಾ ಬಿಡೂತೆ ಶುರುಮಾಡ್ದ (ಹಣ್ಕಾದ). ಬಿಶ್ಲಾನ ಶಕೆಗೆ
೧೪. ಆ ಹಾದಿ ಮೇಲ್ ಹೋಪಾವ ತಾನಾಗೇಯು ಕಂಬ್ಳಿ-ಬಿಪ್ಸಾಕ್ದ.
೧೫. ಏಂಗಾಗಿ ತನ್ ಶಕ್ತಿಗಿಂತ ಸೂರ್ಯ್ನ
೧೬. ಶಕ್ತಿಯೇ ಹೆಚ್ಚು ಹೇಳಿ ಗಾಳಿವಪ್ಕಳೀಕಾತು.

(ಕಥೆಯನ್ನು ಹೇಳಿದವನು ಲಕ್ಷ್ಮೀನಾರಾಯಣ ಗಣಪತಿ ಭಟ್ಟ; ಗುಡೇಅಂಗಡಿ, ತಾಲೂಕು—ಕುಮಟಾ.)

ವಾಕ್ಯಗಳ ಅರ್ಥವು ಸ್ಪಷ್ಟವಾಗಿದೆ. ಅರ್ಥವಿವರಣೆಯ ಆವಶ್ಯಕತೆಯಿಲ್ಲ. ಹವ್ಯಕರ ಮನೆಮಾತಿನ ವೈಶಿಷ್ಟ್ಯಗಳಿಂದ ಎ > ಯ್ ಹಾಗೂ ಒ> ವ್ ಪರಿವರ್ತನೆಗಳನ್ನು ಕಾಣಬಹುದು.

೩೧. ಇಡಗುಂಜಿ ಹವ್ಯಕರ ಮನೆಮಾತುಗಳು. ಹವ್ಯಕರ ಸಂಗಡಗಳು ಅನೇಕವಿದ್ದು ಅವು ಅಲ್ಲಲ್ಲಿ ವಾಸಿಸಿವೆ, ಎಂದು ಮೇಲೆ ಹೇಳಿದೆಯಷ್ಟೇ. ಅವುಗಳಲ್ಲಿ ಇಡಗುಂಜಿ ಎಂಬ ಗ್ರಾಮವು, ಒಂದು ಹವ್ಯಕರು ವಾಸಿಸುವ ಕೇಂದ್ರ. ಹವ್ಯಕರ ಕುಲದೇವತೆಯಾದ ಗಣಪತಿಯ ದೇವಸ್ಥಾನವು ಅಲ್ಲಿ ಇದೆ. ಕುಮಟಿಯಿಂದ ೧೮ ಮೈಲು (ದಕ್ಷಿಣಕ್ಕೆ) ದೂರದಲ್ಲಿರುವ ಹೊನ್ನಾವರ ತಾಲೂಕಿನ ಇಡಗುಂಜಿ ಪ್ರದೇಶದ ಹವ್ಯಕರ ಮನೆಮಾತಿನಲ್ಲಿ ಸೂರ್ಯ ಗಾಳಿ ಎಂಬ ಕಥೆಯನ್ನು ಹೇಳಿಸಿ ಸಂಗ್ರಹಿಸಲಾಗಿದೆ:

ಸೂರ್ಯ ಹಾಗೂ ವಾಯು

೧. ಗಾಳಿ ಸೂರ್ಯ ಇಬ್ಬರೂವ ನನ್ನಕ್ಕೆ ಜ್ಞೋ
೨. ನಿನ್ನಕ್ಕೆ ಜ್ಞೀ ಹೇಳಿ ತಂಗ್ಯೊಳ್ಗಾವ್ದಾ ಮಾಡ್ತಿದ್ದೊ.
೩. ಆಗ್ದಾರಿ ಮೇಲ್ಹೋಪವೊಬ್ಬ ಆತ್ಲಾಗ್ಬಂದಾ. ಅವ
೪. ಬೆಚ್ಚ್ನ ಕಂಬ್ಳೀಲ್ಮೈಸಾಪ ಮುಚ್ಕಂಡಿದ್ದಾ.
೫. ಆ ಕಂಬ್ಳಿ ಯಾರ್ಮೊದ್ಲವ್ನ ಕೈಯಲ್
೬. ತೆಗೆಸ್ಹಾಕ್ಹೋವ ಅನ್ನಕ್ಕೆ ಜ್ಞೆ ಹೇಳಿ
೭. ತಿಳಿಯೇಕು ಹೇಳಿ ಅವ್ರೊಳ್ಗಾತ್ಕಾತ್ಮಾಡ್ಕಂಡೋ.
೮. ಮುದಾಲ್ಗಾಳಿ ತಂದೆಲ್ಲ ಶಕ್ತಿ
೯. ಹಾಕೂಬ್ದ. ಅದ್ರೆ ಗಾಳೂಬ್ದಾಗೂವ
೧೦. ಅದಾರಿ ನೇಲ್ಹೋಪವ ಕಂಬ್ಳಿ ಮತ್ತೂ ಗನಾಕ್

೧೧. ಗಟ್ಟಿ ಮಾಡ್ದಿಡ್ಡಂಡು ಮೈಮೇಲ್ಯಳ್ಳಂಡ.ಹಾಗೆಯ
೧೨. ಗಾಳಿ ಕಟಪಟಿ ಮಾಡೂಬ್ಬಟ್ಟಿಡ್ಡ. ಹಾಂಗೆಯ ಸೂರ್ಯ
೧೩. ತನ್ರಶ್ಮಿ ಬಿಡುಲ್ಯುರು ಮಾಡ್ದಾ. ಬಿಶ್ಲ ತಾಪಕ್
೧೪. ಅವ ತನ್ನಕಂಬಳಿ ತಾನೇ ತೆಗ್ದಾಲ್ಕಾ.
೧೫. ಅಂತು ಹೀಗೆಲ್ಲ ಅದ್ಮೇಲೆ ತನ್ನಕ್ಕೆಗಿಂತ ಸೂರ್ಯ
೧೬. ಶಕ್ತೆಯಚ್ಚು ಹೇಳಿ ಗಾಳಿಗೊಪ್ಪಳೇಕಾತು.

(ಕಥೆಯನ್ನು ಹೇಳಿದವರು ಮು. ಗ. ಯಾಜಿ, ಇಡಗುಂಜಿ; ತಾಲೂಕ—ಹೊನ್ನಾವರ.)

ಇಲ್ಲಿಯ ವಿಶಿಷ್ಟ ಬಳಕೆ ಶಬ್ದಗಳು:—

ತಂಗ್ಳೊಳ್ಳಿ = ತಮ್ಮೊಳಗೆ— ತಂಗಳ್— ನಂಗಳ್— ನಿಂಗಳ್ ಎಂಬ ರೂಪಗಳು ಗಮನಾರ್ಹವಾಗಿವೆ.

ಗನಾಕೆ = ಥಲೋದಾಗಿ — ಮಾತ್ಮಾಡ್ಕಂಡೋ = ಒಪ್ಪಂದ ಮಾಡಿಕೊಂಡರು.

ಹಾಗೆಯ = ಆಮೇಲೆ ಸಾಪ = ಪೂರ್ಣ (ಮೈತುಂಬ) ಅಲ್ಲದೆ ಎ> ಯ್ ಹಾಗೂ ಒ> ವ್ ಪರಿವರ್ತನೆಗಳನ್ನೂ ಕಾಣಬಹುದು.

ಬರ್ಬಳ್ಳಿ ಹವ್ಯಕರ ಮನೆಮಾತು:— ಯಲ್ಲಾಪುರ ತಾಲೂಕಿನ ಘಟ್ಟದ ಪ್ರದೇಶದಲ್ಲಿ ಬಾರೆ, ನೀರೆ, ತಾರೆ, ಸೀರೆ, ಕಳಚೆ ಎಂಬ ಹಳ್ಳಿಗಳಿವೆ. ಅಲ್ಲದೆ ಅಲ್ಲಿ ಬರ್ಬಳ್ಳಿ ಎಂಬ ಗ್ರಾಮವೂ ಇದೆ. ಈ ಹಳ್ಳಿಗಳಲ್ಲಿ ಹವ್ಯಕರು ಮುಖ್ಯವಾಗಿ ವಾಸಿಸುವರು. ಬರ್ಬಳ್ಳಿ ಇದು ಕರಾವಳಿ ಪ್ರದೇಶವಲ್ಲದೆ, ಉಳಿದ ಪ್ರದೇಶದಲ್ಲಿಯ ಹವ್ಯಕರ ಮನೆಮಾತುಗಳನ್ನು ತುಲನಾತ್ಮಕವಾಗಿ ಅಭ್ಯಾಸಮಾಡಲು ಅವ್ಯಶ್ಯವೆಂದೆನಿಸಿದ್ದರಿಂದ, ಬರ್ಬಳ್ಳಿಯ ಹವ್ಯಕರ ಮನೆಮಾತಿನ ಮಾದರಿಯನ್ನು ತೆಗೆದುಕೊಳ್ಳಲಾಗಿದೆ. ಕುಮಟೆಯಿಂದ ಈಶಾನ್ಯಕ್ಕೆ ಇದ್ದ ಯಲ್ಲಾಪುರ ತಾಲೂಕಿನ ಬರ್ಬಳ್ಳಿ ಎಂಬ ಊರಿನ ಹವ್ಯಕರ ಮನೆಮಾತಿನಲ್ಲಿ ಸೂರ್ಯ ಹಾಗೂ ಗಾಳಿ ಎಂಬ ಕತೆಯು ಕೆಳಗಿನಂತೆ ಇದೆ:

೧. ವಾಯು ಸೂರ್ಯ ಇಬ್ರಲ್ಲಿ ಎನ್ನ ಶಕ್ತಿಹೆಚ್ಚೊ ?
೨. ನಿನ್ನ ಶಕ್ತಿ ಹೆಚ್ಚಿ ಎಂದು ಪಾವ ಮಾಡ್ತಿರ್ದ್ದಿದ್ದೊ.
೩. ಆಗ ಅವೆಬ್ಬಂವ ದಾರಿ ಮ್ಯಾಗೆ ಹೋಪ್ತಿದ್ದಂವನ ತ್ಲಾಗ್ಬಂದಾ ಅವ
೪. ಬೆಚ್ಚಂಗೆ ಕಂಬ್ಳಿಯ ಮೈತುಂಬ ಮುಚ್ಕೆಂಡಿದ್ದ.
೫. ಆ ಕಂಬ್ಳಿಯ ಯಾರು ಮುಂಚೆ ಅವ್ನಕೈಲಿ
೬. ಬಿಚ್ಚಿಸ್ತಿವ ಅಂವ್ನ ಶಕ್ತಿ ಹೆಚ್ಚೆಂದು
೭. ಹೇಳಿ ತೆಳಕಳ್ಳಿ. ಹೀಂಗೆ ಅವ್ರೊಳ್ಳಿ ನೇಮು ಮಾಡ್ಕ್ಯಂಡೊ.
೮. ಮೊದ್ಲು ಗಾಳಿ ತನ್ಕೆ ಅಷ್ಟೂ ಶಕ್ತಿಯಿಂದ
೯. ಊದದ; ಅದ್ರೆ ಅವ ಊದದಷ್ಟೂ
೧೦. ಹೋಸಂವ ತನ್ಕೆ ಮೈಯ್ಯಾಗಸ್ ಕಂಬಳಿಯ ಮತ್ತೂಗಟ್ಟಿ
೧೧–೧೨. ಹ್ಯಾಕೆಂಡ. ಕಡೇಲಿ ಪಾಯು ತನ್ಕೆ ಪ್ರಯತ್ನ ಬಿಟ್ಟ. ಕಡೇಲಿ ಸೂರ್ಯ
೧೩. ಕೆರ್ಣ ಬಿಡ್ತು ಬಂದ. ಬಿಸ್ಲಥಗೆಗೆ ಹೋದ್ತಿಂದವ
೧೪. ತನ್ಕೆ ಕಂಬ್ಳಿಯ ತಾನೇ ಬಿಟ್ಕಿಂಡ.
೧೫. ಹೀಂಗಾಯಿ ತನ್ಕೆ ಶಕ್ತಿಗಿಂತ ಸೂರ್ಯನ
೧೬. ಶಕ್ತಿಯೇ ಹೆಚ್ಚೆಂದು ಹೇಳಿ ಒಪ್ಕೆಂಡ.

(ಕಥೆಯನ್ನು ಹೇಳಿದವರು ಗಾ.ವಿ. ಭಟ್ಟ; ಬರ್ಬಳ್ಳಿ, ತಾಲೂಕ—ಯಲ್ಲಾಪುರ).

ಮೇಲಿನ ಕಥೆಯಲ್ಲಿಯೂ ಎ> ಯ್, ಒ> ವ್ ಪರಿವರ್ತನೆ ಕಾಣಬಹುದು. ಅಲ್ಲದೇ ಅಪರ ಮುಖ್ಯ ವೈಶಿಷ್ಟ್ಯವೇನೆಂದರೆ, ಸಾನುನಾಸಿಕ ಉಚ್ಚಾರ. ಉದಾ:— ಬಂದ—ಊದಿದ— ಬಟ್ಟಿ, ಸೂರ್ಯ, ಬಿಸ್ಲ—ಕಂಬಳಿಯ, ಶಕ್ತಿಗಿಂತ, ವತ್ಕಂಡ. ಉಳಿದ ಹವ್ಯಕರ ಸಂಗಡದ ಮನೆಮಾತಿನಲ್ಲಿಯಗಿಂತಲೂ ಇಲ್ಲಿ ಹೆಚ್ಚು ಸಾನುನಾಸಿಕ ಉಚ್ಚಾರಗಳು ಇವೆ. ಇದಕ್ಕೆ ಕವಳಸೇಡಿನವು (ಎಲೆ ಅಡಿಕೆ ತಿನ್ನುವುದು,ತಾಂಬೂಲ ಮೆಲ್ಲುವುದು) ಕಾರಣವಾಗಿರಬಹುದೇ? ಬರ್ಬಳ್ಳಿಯ ಗ್ರಾಮದ ಹವ್ಯಕರು ಬಹಳ ಕವಳಪ್ರಿಯರು. ಯಾವಾಗಲೂ ಕವಳವನ್ನು ಬಾಯಲ್ಲಿಟ್ಟುಕೊಂಡೇ ಮಾತಾಡುತ್ತಿರುವುದರಿಂದ, ಮೂಗಿನಿಂದ ಸ್ವರವನ್ನು ಹೊರಡಿಸುತ್ತಿರಬಹುದೇ ?

ಹವ್ಯಕರ ಎಲ್ಲ ವೈಶಿಷ್ಟ್ಯಗಳನ್ನು ಒಳಗೊಂಡ ಒಂದು ಕಥೆ:— ಮೇಲ್ಕಾಣಿಸಿದ ಹವ್ಯಕರ ಮನೆಮಾತುಗಳು ಪರಿಮಿತವೂ, ಕೃತ್ರಿಮವೂ ಆದ್ದರಿಂದ, ಹವ್ಯಕರ ಎಲ್ಲ ವೈಶಿಷ್ಟ್ಯಗಳನ್ನು ಕಾಣುವುದು ಸಾಧ್ಯವಿಲ್ಲ. ಆದ್ದರಿಂದ ಹವ್ಯಕರ ಮನೆಮಾತಿನಲ್ಲಿಯೇ ತಮ್ಮದೇ ಆದ ರೀತಿಯಿಂದ ತಮ್ಮಲ್ಲಿ ಜನಪ್ರಿಯವಾದ ಒಂದು ಕಥೆಯನ್ನು ಹೇಳಿಸಿ ಸಂಗ್ರಹಿಸಲಾಗಿದೆ. ಅದು ಕೆಳಗಿನಂತಿದೆ:

ಗೌಡ ಹಾಗೂ ಮಣಕ

ವಂದಲ್ಲಾ ವಂದೂರಲ್ಲಿ ವಂಡ್ ದೊಡ್ಡದ್ದೆಬೈಲಲ್ಲಿ ವಂದ್ ದೊಡ್ಡೆರಿದ್ದಿತ್ತಡಾ ಆ ಕೆರೆಲಿಗವಾ ಪಂಪ್ಮಣ್ಕೆದ್ದಿತ್ತಡಾ. ಬಿಶ್ಲ್ಲಿಂಡ್ತಕ್ಕೆ ಗಾವಾ ಆ ಕೆರೆ ನೀರು ವಣ್ಣೊಂಡಿತ್ತಡಾ. ಅದ್ರಲ್ಲಿದ್ದ ಮಣ್ಕ ನೀರಲ್ಲಿಗಿದೆಯಾ ಬಿಶ್ಲೊಂಡ್ತಕ್ಕೆ ಅಚ್ಕೆ-ಇಚ್ಕೆ ಹೊರ್ಳಾಡ್ಕೋತ ಬಿದ್ದಿತ್ತಡಾ.

ಅಷ್ಟೊತ್ತಿಗ್ವಂಪ್ಗೌಡಲ್ಬತ್ತಿನ್ನಡಾ. ಅಂವಗೂ ಅಗ್ರಾಗಿ ನೀರು ಹುಡಿಕತ್ನ ಅಲ್ಲಿಗೇ ಬಂದ್ನಡಾ. ಹಾದಿಮೇಲ್ದವ ಈ ಕೆರಿನ್ದಂಡ್ಕಂಡ ನೀರಿದ್ದೋ ಇಲ್ಲೋವೇ ಹೇಳ್ನೋಡುದಕ್ಕಲ್ಲಿಂದ್ನಡಾ. ಆವಾಗ ಆ ಮಣ್ಕನ್ನ ಕಂಡ್ಕಂಡಂತಡಾ. ಯಂತದು ಅಂದ್ರೆ "ಗೌಡಾ ಇಲ್ಲಿನ್ಯಾರೂ ಬಂದಿದ್ದಿಲ್ಲೆ. ಈಗ್ನೀ ಬಂಜ್ಯಾ. ಲಾಯ್ಕಾತು. ಪಂಡ್ಕಿಲ್ಸಾ ಮಾಡ್ತಿಲ್ಯಾ ಹೇಳ್ಬೇಳ್ಕತ್ತಡಾ." ಆವಾಗ ಅವ ಅಕ್ಕುಕ್ಕ ಹೇಳಂದ್ನಡಾ. ಹಗರೆ ನೀ ಅಲ್ಯಂತಕ್ಕೆಂತ್ಕೆಂಜೆ ಯನ್ಬಡ್ಕೆಬಾ. ಯನಗ್ನೀರಿಲ್ಲಿಗಿದೆ ಗೆಂಟ್ಲೆಶ್ಶಲ್ಲಾ ವಣ್ಣೋಜು. ಯನ್ನೊವ್ವತ್ಕೊಂಡೋಗಿ ಕಾಶಿ ನೀರಿದ್ದಲ್ಬಿಡ್ತಿಲ್ಯಾ, ನಿನ್ಸುಣ್ಯ ಬಕ್ಕು ಹೇಳ್ ಹೇಳ್ತಡಾ. ಪಾಪ ಬಡೀ ಪ್ರಾಣಿ ಹೇಗಾರೂ ಬದೀಕಂಡಿರ್ಲಿ ಹೇಳ್ತಿಕಂಡು ಆ ಮಣ್ಕನ್ನಿಗಾವ ಹೊತ್ಕಂಡ್ಬಪ್ಪಾಗ, ಅವಂಗಲ್ವಂದೊಳ್ಕಂಡ್ತಡಾ. ಆ ಹೊಳೀಲಿ ವಂದ್ನೊಂಟ್ನೀರಿದ್ದಲ್ಲಿಬ್ಬಡೋ ಹೇಳ್ತಿಕಂಡು ಹೋಗ್ಬಿಟ್ಟನಡಾ. ಆಗಾ ಮಣ್ಕ. ಅವ್ನ ಕಾಲಿಡ್ಕಂಡ್ನುಂಗ್ಬಿಡ್ತಡಾ.

(ಇದ್ದಿತ್ತಡಾ—ಇದ್ದಿತ್ತಂತೆ, ಬಂಜ್ಯಾ—ಬಂದೀಯಾ?, ದ> ಜ, ನಿಂತ್ಕಂಜೆ—ನಿಂತುಕೊಂಡಿರುವಿ, ಮಣ್ಕ—ಮೊಸಳೆ.)

=ಕಥೆಯನ್ನು ಹೇಳಿದವನು ರಾ. ಗ. ಭಟ್ಟ ಮದ್ಗುಣಿ, ತಾ:— ಕುಮಟಾ. ಮದ್ಗುಣಿ (ಚಿತ್ರಗಿಯ ಒಂದು ಭಾಗ)ಯು ಕುಮಟೆಯಿಂದಾ ಉತ್ತರಕ್ಕೆ ೧ ಮೈಲು ದೂರದಲ್ಲಿದೆ.=

ಒಟ್ಟಾರೆ, ಹವ್ಯಕರ ಮನೆಮಾತುಗಳು ಎ> ಯ್ ಹಾಗೂ ಒ> ವ್ ಒಲವಿನ ಭಾಷೆಯೆಂದು ಹೇಳಬಹುದು.

ಹವ್ಯಕರ ಹೆಚ್ಚಿನ ವೈಶಿಷ್ಟ್ಯಗಳಿಗಾಗಿ ಶ್ರೀಮಾನ್ ವ್ಹಿ. ಜೆ. ಭಟ್ಟರು ಬರೆದ "ಉ. ಕ. ಜಿಲ್ಲೆಯ ಜೀವನಚಿತ್ರಗಳು." ಎಂಬ ಗ್ರಂಥವನ್ನು ಓದಬೇಕು. ಮೇಲೆ ತೋರಿಸಿದ ಎಲ್ಲ ವೈಶಿಷ್ಟ್ಯಗಳೂ ಅದರಲ್ಲಿ ಕಂಡುಬರುವುವು.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಮೋಸ' ಕಥೆಯ ವಿಮರ್ಶಾಲೇಖನಗಳು ೬ ಜನರಿಂದಲೂ 'ಮಲಮಗನ ಕರೆ' ಕಥೆಯ ವಿಮರ್ಶಾಲೇಖನಗಳು ೪ ಜನರಿಂದಲೂ ಬಂದಿವೆ.

'ಮೋಸ' ಕಥೆಯ ವಿಮರ್ಶಕರು :

೧. ಶ್ರೀ. ರಾಘವೇಂದ್ರ ಪಾಂಡುರಂಗಿ, ಧಾರವಾಡ. ೨. ಶ್ರೀ. ಕೆ. ವ್ಹಿ. ಇನಾಮದಾರ, ಗುಲ್‌ಬುರ್ಗಾ. ೩. ಕುಮಾರಿ ವೀಣಾ ಯಲಬುರ್ಗಿ, ಬಾಗಲುಕೋಟೆ. ೪. ಶ್ರೀ. ಕೆ. ಆರ್. ಸಂಪತ್, ಮೈಸೂರು. ೫. ಶ್ರೀ. ಉಮೇಶ ಭಕ್ತ, ಕಾಸರಗೋಡು. ೬. ಶ್ರೀ. ಮಲ್ಲಣ್ಣ ಸುಲ್ತಾನಪುರ, ಗೋಕಾ.

'ಮಲಮಗನ ಕರೆ' ಕಥೆಯ ವಿಮರ್ಶಕರು :

೧. ಶ್ರೀ. ಎಸ್. ಬಿ. ಪಾಟೀಲ, (ಡಿ. ಎಸ್. ಎ. ಸಿ.), ಪಾಸಬಾಗ. ೨. ಶ್ರೀ. ಜಿ. ಎಂ. ಚೌಧರಿ, ಬಿ. ಎ. ಭಾಗ ೨, ಕರ್ನಾಟಕ ಕಾಲೇಜ್, ಧಾರವಾಡ. ೩. ಶ್ರೀ. ಮಾ. ರಾಮಚಂದ್ರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೪. ಶ್ರೀ. ಪಿ. ಆರ್. ಹಂಚಿನಮನಿ ಬಿ. ಎಸ್ಸಿ. ಭಾಗ ೧, ಆರ್. ಎಲ್. ಸೈನ್ಸ್ ಇನ್ಸ್‌ಟ್ಯೂಟ್, ಬೆಳಗಾಂವಿ,

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಸಮಿತಿಯವರೇ ನೋಡಿ ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ. **'ಮೋಸ'** ಕಥೆಯನ್ನು ಕುರಿತು ಬಂದ ವಿಮರ್ಶೆಗಳಲ್ಲಿ **ಶ್ರೀ. ಮಲ್ಲಣ್ಣ ಸುಲ್ತಾನಪುರ** ಅವರ ವಿಮರ್ಶೆ ಔತ್ಯುತ್ತಮವಾಗಿದೆ. ಶ್ರೀ. ರಾಘವೇಂದ್ರ ಪಾಂಡುರಂಗಿಯವರ ವಿಮರ್ಶೆ ಉತ್ತಮವಾಗಿದೆ. ಶ್ರೀ. ಉಮೇಶಭಕ್ತ ಅವರ ವಿಮರ್ಶೆ ಚೆನ್ನಾಗಿದೆ. ಮಿಕ್ಕುವು ಸಾಮಾನ್ಯವಾಗಿವೆ.

'ಮಲಮಗನ ಕರೆ' ಕಥೆಯ ಬಗೆಗೆ ಬಂದ ನಾಲ್ಕೂ ವಿಮರ್ಶೆಗಳೂ ಒಳ್ಳೆಯವಾಗಿವೆ. ಅವುಗಳಲ್ಲಿ ಶ್ರೀ. ಪಿ. ಆರ್. ಹಂಚಿನಮನಿ ಅವರ ವಿಮರ್ಶೆಯನ್ನು ಪ್ರಕಟಿಸಬೇಕು.

ಮುಂದಿನ ತಿಂಗಳ ಸಾಹಿತ್ಯವಿಮರ್ಶೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ **'ಕತ್ತಲಲ್ಲಿಯ ಜನ'** ಎಂಬ ನವ್ಯ ಕಥೆಯನ್ನಾಗಲಿ, **'ತೋಬಾಟೇಕಸಿಂಗ್ ಎಲ್ಲಿದೆ?'** ಎಂಬ ಅನುವಾದಿತ ಕಥೆಯನ್ನಾಗಲಿ ವಿಮರ್ಶೆಗೆ ತೆಗೆದುಕೊಳ್ಳಬೇಕು.

ಈ ವಿಭಾಗವನ್ನು ಪ್ರಶಂಸಿಸುವ ಜನರೇ ಬಹಳವಾಗಿರುವರಲ್ಲದೆ, ಪ್ರತ್ಯಕ್ಷವಾಗಿ ಭಾಗವಹಿಸಿ ಪ್ರಯೋಜನ ಪಡೆಯುವವರ ಸಂಖ್ಯೆ ಬೆಳೆಯುತ್ತಿಲ್ಲ. ಬರಲಿರುವ ದಿನಗಳಲ್ಲಿ ವಿಮರ್ಶಾಸಾಹಿತ್ಯಕ್ಕೆಂದು ಹೆಚ್ಚಿನ ಸ್ಥಾನ ದೊರೆಯಲಿದೆಯೆಂಬುದನ್ನು ಯಾರೂ ಮರೆತು ನಡೆಯಬಾರದೆಂದು ನಮ್ಮ ಕೋರಿಕೆ.

—ಸಂಪಾದಕ

"ಮೋಸೆ"

(ಸಣ್ಣಕತೆಯ ನಿಮರ್ಶೆ)

ಶ್ರೀ. ಮಲ್ಲಣ್ಣ ಸುಲ್ತಾನಪೂರ, ಗೋಗಿ

ಮನುಷ್ಯನ ಸುಂದರ ಸ್ವಪ್ನಗಳ ಸೌಧ ಕಡಿದುಬಿದ್ದಾಗ, ಕಡಿದಿಟ್ಟ ಹೊಂಗನಸುಗಳು ಹುಡಿಯಲ್ಲಿ ಮುಚ್ಚಿಹೋದಾಗ ಬಾಳು ಕೊರಡಿನಂತಾಗುತ್ತದೆ. ಅಲ್ಲಿ ತನಗಿನ್ನು ತುಡಿಯುವ ಬೆಳಕಿಲ್ಲ, ತನ್ನನ್ನು ಮೇಲಕ್ಕೆತ್ತುವ ಕೃತುಶಕ್ತಿಯಿಲ್ಲವೆಂದು ಆತ ಭಾವಿಸುತ್ತಾನೆ. ಆದರೂ ಹೈದ್ಗತವಾದ ತಣಿಯದ ಹಂಬಲ, ಆಶೆ, ಅವನನ್ನು ಕೆಣಕುತ್ತವೆ. ಆ ಮಿಡಿತದ ಜಾಡಿನಲ್ಲೇ ಮತ್ತೆ ಮೇಲೇಳಬೇಕೆಂದಿದ್ದರೆ, ಬಿರುಗಾಳಿ ಸುಳಿಯದ ನಿಡುಬಾಳನ್ನು ಕಟ್ಟಬೇಕೆಂದಿದ್ದರೆ— ಅಚಲವಾದ ಶ್ರದ್ಧಾಸಕ್ತಿ, ಪ್ರಬಲವಾದ ನಿರ್ಧಾರ, ನಿಕೃಷ್ಟವಾದ ಸತ್ಯದ ಅರಿವು ಅಳವಟ್ಟಿರಬೇಕೆಂಬುವನ್ನು ಮರೆಯಬಾರದು. ಅವರೆ ಚಿತ್ತ ದುರ್ಬಲತೆಯು, ಭ್ರಮೆವೆಸೌಲ್ಯದ ಕೈಗೂಸಾದಾಗ ದುರಂತಕ್ಕೀಡಾಗುತ್ತಾನೆ. ಅಲ್ಲಿ ಎಂತಹವೇ ಸಣ್ಣಘಟನೆ ಸುಳಿದುಹೋಗಲಿ, ಉದ್ವಿಗ್ನತೆಯ ಭರದಲ್ಲಿ ಜೀವನ ಕಹಿಯಾಗಬಲ್ಲುದು. ಸುಮಿತ್ರೆಯ ಬಾಳು ಮುಕ್ಕಾಗಲು ಅವಳ ಚಿತ್ತದುರ್ಬಲತೆ, ಭಾವನಾವೇಶ, ಕನವರಿಕೆಗಳೇ ಕಾರಣವಾಗಿದ್ದುವು. ಉಕ್ಕೇರುವ ಯೌವನದ ಕೈಗೊಂಬೆಯಾದ ಸುಮಿತ್ರೆಯ ಚಿತ್ತವಿಭ್ರಮಣತೆಯನ್ನು ಪದರು ಪದರಾಗಿ–ಎಳೆದು ತೋರಿಸಲು ಶ್ರೀ. ಆನಂದ ಪರ್ಟಿಯವರು ಯತ್ನಿಸಿದ್ದಾರೆ.

ಕತೆ ಒಂದು ಸಣ್ಣ ಘಟನೆಯನ್ನು ಸುತ್ತುಪರಿದುಕೊಂಡು ಹೋಗುತ್ತದೆ. ಜೀವನವನ್ನು ತುಂಬುಗಣ್ಣಿನಿಂದ ನೋಡುವ ಮೊದಲೇ ಸುಮಿತ್ರೆ ವಿಧವೆಯಾಗುತ್ತಾಳೆ. ಈ ಮೊದಲು ಕಾಲೇಜ ಜೀವನದಲ್ಲಿ ರಮೇಶನನ್ನು ಪ್ರೀತಿಸಿ ಭಗ್ನಗೊಂಡ ಅವಳ ಹೃದಯ ಈಗ ಮತ್ತಷ್ಟು ಹೆಣ್ಣಾಗಿ ಹೋಗುತ್ತದೆ. ಅವರೆ ಯಾವತ್ತೂ ರಮೇಶನ ಕನವರಿಕೆಯಲ್ಲಿವ್ದ ಅವಳು,ಒಂದು ದಿನ ಬಸ್ಸಿನ ಮೂಲಕ—ತನ್ನ ಕೆಲಸವನ್ನು ತೀರಿಸಿಕೊಂಡು— ಮನೆಗೆ ಹಿಂದಿರುಗುವಾಗ, ತನ್ನ ಮುಂದಿನ ಸೀಟಿನಮೇಲೆ ಕುಳಿತ ಸಿಂಧೀ ಗೃಹಸ್ಥನೊಬ್ಬನನ್ನು ರಮೇಶನೆಂದು ಭಾವಿಸಿ ಪ್ರೇಜಾಟಕ್ಕೆ ಸಿಕ್ಕಿಕೊಳ್ಳುತ್ತಾಳೆ. ಆಗ ಅವಳ ಚಿತ್ತವೃತ್ತಿಗಳಲ್ಲಾಗುವ ಏರಿಳಿತವನ್ನೇ "ಮೋಸ"ದಲ್ಲಿ ನೋಡುತ್ತೇವೆ. ಕತೆಯ ಸಾರಾಂಶವಿದು.

ಕತೆಗಾರರು ಸುಮಿತ್ರೆಯ ಭಾವನಾತಿರೇಕದ ರೂಪವನ್ನು ಕಡೆಯುತ್ತಿರ್ವಂತೆ, ಅದರ ತಳದಲ್ಲಿ ಹುದುಗಿದ ಸಪ್ತಚೇತನದರಿವನ್ನೂ ಮಾಡಿಕೊಡುತ್ತಾರೆ. ರಮೇಶನೇ ತನ್ನ ಜೀವನದ ಒಡನಾಡಿಯಾಗಿರಬೇಕೆಂಬ ಅವಳ ಆದರ್ಶ ಒಡೆದು ಸುಚ್ಚು ನೂರಾದಾಗ,ಅವಳ ಮನಸ್ಸಿನಲ್ಲೇಳುವ ಭಾವನಾಂದೋಲತೆಯನ್ನೇ ಕತೆಯ ಹಂದರವೆನ್ನಬಹುದು. ಕಲ್ಪನೆಯ ಪ್ರವಾಹದಲ್ಲಿ ಕೊಚ್ಚಿಹೋಗುವ ಅವಳ ಒಳಮನಸ್ಸಿನ ಪರಿಗಳನ್ನು ಬಿಡಿಬಿಡಿಯಾಗಿ ತೋರಿಸುವುದೇ ಲೇಖಕರ ಉದ್ದೇಶವಾಗಿದೆ.

ಸುಮಿತ್ರೆ ಜೀವನವನ್ನು ಕಣ್ಣಾರಸಿ ನೋಡುವ ಮೊದಲೇ ವಿಧವೆಯಾಗಿ ಕಣ್ಣೀರಿನಲ್ಲಿ ಕೈತೊಳೆಯಬೇಕಾಗುತ್ತದೆ. ಆನಿರೀಕ್ಷಿತವಾಗಿ ತನ್ನ ಹಿಂದಿನ ಕಾಲೇಜು ಜೀವನದ ಒಡನಾಡಿ "ರಮೇಶ" ನನ್ನು ನೋಡುತ್ತಲೇ ಅವಳ ಹೃದಯ ಪುಲಕೆಶಗೊಂಡು ಅರಳುತ್ತದೆ. ರಮೇಶನೊಂದಿಗೆ ಪಡೆಯಬೇಕೆಂದಿದ್ದ ನಗೆಬಾಳನ್ನು ಮರುಕಳಿಸುತ್ತಾಳೆ. ಆ ಜೇನ್ ಬಾಳನ್ನು ನೆನೆದಂತೆಲ್ಲ ಅವಳ ಹೃದಯದಲ್ಲಿ ನೂರಾರು ಮಧುರಭಾವಗಳು ನುಗ್ಗಿ ಬರುತ್ತವೆ. ಆ ರಸಸ್ಥಿತಿಗಳಲ್ಲಿ ಅಪೆಂಥ ಮಾದಕತೆ ಅಡಗಿದೆ! ಬರಿದಾದ ಮಸಣಬಾಳಿನಲ್ಲಿ ನಗೆಯನ್ಮೃತ ತಳುಕಿದಂತಾಯ್ತು!! ತಾನಿನ್ನು ಋಜುಬಾಳಿನತ್ತ ಸಾಗುತ್ತೇನೆಂದು ಕಟ್ಟುವ ಹುಲುಕಲ್ಪನೆ ಸಹಜ-ಸುಂದರತೆಯಿಂದ ಮೂಡಿದೆ. ಅವಳಲ್ಲಿ ತುಳುಕುತ್ತಿರುವ ಕಾತರ, ತುಡಿಯುತ್ತಿರುವ ಭಾವ ಉಕ್ಕೇರಿ ಹರಿಯುವುದನ್ನು ಕಾಣುತ್ತೇವೆ.

ಅನಪೇಕ್ಷಿತವಾಗಿ 'ರಮೇಶ' ನನ್ನು ನೋಡಿದ ಸುಮಿತ್ರೆಗೆ ಅವನನ್ನು ಯಾವಾಗ ಮಾತಾಡಿಸೇನೆಂಬ ಕಾತರ; ಅವನ ಕೈಯನ್ನು ತನ್ನ ಕೈಯಲ್ಲಿಟ್ಟುಕೊಳ್ಳುವ ಹಂಬಲ. ಇನ್ನೇನು, ಅವಳ ಕೈ ಅವನ ಹೆಗಲನ್ನು ತಟ್ಟಿ ಎಚ್ಚರಿಸುವುದರಲ್ಲಿತ್ತು. ಆದರೆ "ಅವನ ಪಕ್ಕದಲ್ಲಿ ಕೂತ ಹೆಂಗಸು, ಮೈಗೆ ಮೈ ತಾಗಿಸಿ, ಅವನ ಕಿವಿಯಲ್ಲಿ ಏನನ್ನೋ ಉಸುರಿದಳು." ಈ ಕಟುದೃಶ್ಯವನ್ನು ಕಂಡ ಸುಮಿತ್ರೆ ಸಿಡಿಮಿಡಿಗೊಳ್ಳುತ್ತಾಳೆ. ಅವಳೆದೆಯಲ್ಲಿ ಮಾತ್ಸರ್ಯ ಹೊಗೆಯಾಡುತ್ತದೆ. ಒಮ್ಮೆ ಸಿಡಿದು ಹೋದ ಬಯಕೆ ಈಗ ಈಡೇರುತ್ತದೆನ್ನುವಾಗಲೇ ಈ ಆಘಾತವೆ? ಯೌವನದ ತುತ್ತತುದಿಯ.ಲ್ಲಿ ನಿಂತ ಅವಳ ಮನಸ್ಸಿನಾಳದಲ್ಲಿ ಪ್ರಚಂಡ ಹೊಯ್ದಾಟ ನಡೆಯುತ್ತದೆ. ಮನಸ್ಸಿನಲ್ಲಿ ನಡೆಯುವ ಗುಪ್ತ ಹೋರಾಟದ ಆರಂಭ ಇಲ್ಲಿಂದಲೇ ಆಗುತ್ತದೆನ್ನಬೇಕು. "ತನ್ನ ರಮೇಶನನ್ನು ತನ್ನಿಂದ ಕಸಿದುಕೊಂಡ ಆ ವೈರಿಣಿ" ಯಾರಾಗಿರಬಹುದು? ತನ್ನ ಬಾಳಿನ ನಿರ್ವಿಣ್ಣತೆಯನ್ನು ನಿವಾರಿಸಲೆಂದೇ ಬಂದ ಅವನನ್ನು ಬಿಟ್ಟುಕೊಡಲು ಅವಳ ಮನಸ್ಸು ನಿರಾಕರಿಸಿತು. ಆದರೆ ಅವಳ ದೃಷ್ಟಿ ಆ ಹೆಂಗಸಿನ ಕೊರಳಲ್ಲಿ ಶೋಭಿಸುವ ಕಪ್ಪುಮಣಿಗಳ ಸುಂದರ ಮಂಗಲ ಸೂತ್ರದ ಮೇಲೆ ಬಿದ್ದಾಗ, ಕೂರ್ಗತ್ತಿ–ತಿವಿತದ ವೇದನೆಯನ್ನು ಅನುಭವಿಸುತ್ತಾಳೆ. ಅವಳ ಮನಸ್ಸಿನ ತುಂಬ ಕಾಡುಬಯಕೆಗಳು ದಿಕ್ಕೆಟ್ಟು ಓಡಾಡತೊಡಗಿದುವು. ಆಕೆ 'ಅವನ' ಧರ್ಮಪತ್ನಿಯಾಗಿರಬಹುದೆ? ನಿರ್ಧಾರ ಕಾಣದ ಮನಸ್ಸಿನಲ್ಲಿ ಸಿಹ್ವಲತೆ ತಾಂಡವವಾಡುತ್ತದೆ. ಈ ಚಕಮಕಿ ಬಹಳಹೊತ್ತು ನಡೆಯುತ್ತದೆ. ಚಕಮಕಿ ನಡೆಮೂ ದಡೆದೂ ಕೊನೆಗೊಮ್ಮೆ ಮಿಂಚು ಹೊಳೆಯುತ್ತದೆ. ದ್ವೇಷ, ಅಸೂಯೆ, ವಿಕೃತಿಯ ಗರ್ಭದಿಂದ ಮಾನವತೆ ಹೊಮ್ಮಿಬರುತ್ತದೆ. ಅವಳು 'ಅವನ' ಹೆಂಡತಿಯೇ ಆಗಿರಬೇಕು....ಅದರೆ ತಾನೇಕೆ ಅವನ ಹಾಲುಜೇನಸದಲ್ಲಿ ಹುಳಿ ಹಿಂಡುವುದು?" ಅವನ ಸುಖ-ಸಮಾಧಾನದ ಜೀವನದಲ್ಲಿ ತನ್ನ ವ್ಯಥೆಯ ಕರುಣಸ್ವರವನ್ನು ಏದೇಕೆ ಕೂಡಿಸುವುದು? ಅವನ ಆನಂದ ಪೂರ್ಣವಾದ ಜೀವನದಲ್ಲಿ ಪ್ರವೇಶಮಾಡುವ ಯೋಗ್ಯತೆ ತನಗೆಲ್ಲಿದೆ?" ಎಂತಹ ಅಧಿಕಾರವಿದೆ ತನಗೆ?"....ಸಾಲುಪ್ರಶ್ನೆಗಳ ಬಲ್ಸುರಿಗೆ ಸಿಕ್ಕ ಅವಳ ಮನಸ್ಸು ನಿರ್ಮಲವಾಗಿ ಕಂಗೊಳಿಸುತ್ತದೆ. ಇಲ್ಲಿ ಕರುಳಿನ ಅಳಕೊಳ್ಳದಲ್ಲೆದ್ದ ಮಹಾ ಕೋಲಾಹಲವನ್ನು ದಮನಮಾಡುವ ಸಂಯಮಶೀಲತೆಯನ್ನೂ, ಅವಳ ವಿವೇಕವಾಣಿ ಎಚ್ಚೆತ್ತ ಬಗೆಯನ್ನೂ

ಲೇಖಕರು ಸೊಗಸಾಗಿ ನಿರೂಪಿಸಿದ್ದಾರೆ. ಹೆಂಗರುಳಿನ ಮೃದುತನ, ಅನ್ಯಾಯ ಅಂತಃಕರುಣೆಯ ಹೊಗರುತನ ಮನಸ್ಸಿನಮೇಲೆ ಅಚ್ಚೊತ್ತಿ-ನಂತಾಗುತ್ತದೆ. ಇಲ್ಲಿ ನಿರೂಪಿಸಿದ ಸುಮಿತ್ರೆಯ ಹೃದಯವಂತಿಕೆಯೇ ಕಥೆಯ ಚಿಲ್ಪಿಕೆಗೆ ಕಾರಣವಾಗಿದೆ.

ಕತೆಯ ಕೊನೆಯಲ್ಲಿ ಸುಮಿತ್ರೆ ಮುತ್ತುಷ್ಣು ಪರಿಶೋಧಿಸಿದ್ದಾಳೆ. ರಮೇಶ ತನ್ನ ವೈಧವ್ಯಸ್ಥಿತಿಯನ್ನು ನೋಡಬಾರದೆಂದು ವ್ಯಥೆಪಡು-ತ್ತಾಳೆ. ತನ್ನ ಬಿಳಿಯ ಹೆಣೆಯನ್ನು ನೋಡಿ ಅವನೇನೆನ್ನುವನು? ತನ್ನ ದುಃಖದರಿವನ್ನು ಅವನಿಗೇಕೆ ಮಾಡಿಕೊಡುವುದು?" ಎಂದು ನಾನಾಬಗೆಯಾಗಿ ಚಿಂತಿಸುತ್ತಾಳೆ. ಭೀತಿಯ ಜೋನಿನಲ್ಲಿ ಸಿಕ್ಕಿ ಬಪ ಮಿಗದಂತೆ ಮಿಡುಕುತ್ತಾಳೆ. ಇವನ್ನೇ ನಾವು ಅವಳ ಚಿತ್ತಮುರ್ಮುಲತೆ-ಯೆಂದು ಕರೆಯಬಹುದೆ? ಇರಲಾರದು! ಯಾವ ಹೆಣ್ಣೂ ವಿಧವೆ-ಯಾಗಲು ಬಯಸುವುದಿಲ್ಲ. ಹೆಣ್ಣು ಸಾವನ್ನಪ್ಪಲು ಸಿದ್ಧಳು ಆದರೆ ವೈಧವ್ಯತೆಯನ್ನಪ್ಪಲು ಹಿಂಜರಿಯುತ್ತಾಳೆ. ಇಲ್ಲಿ ಸುಮಿತ್ರೆ ನಿತ್ಯೈಸ ಸುಮಂಗಲಿಯಾಗಿ, ಗರತಿಯಾಗಿ ಬಾಳಬೇಕೆಂಬ ಸುಪ್ತಾಕಾಂಕ್ಷೆಯ ಹೊರತಾಗಿಲ್ಲವೆಂಬುದನ್ನು ಲೇಖಕರು ಎತ್ತಿ ಹಿಡಿದಿದ್ದಾರೆ.

ರಮೇಶ ಬಸ್ಸಿನಿಂದ ಇಳಿಯುವವ. ಕೊನೆಗೊಮ್ಮೆ ಕಳ್ಳನೋಟ-ದಿಂದ, ಮನಃಪೂರ್ವಕವಾಗಿ ಅವನನ್ನು ನೋಡಬೇಕೆಂಬ ಬಯಕೆಯ ಚರಮಸೀಮೆಯನ್ನು ದಾಟಿದೆ. ಅವನನ್ನು ತನ್ನ ಹೃದಯಪೀಠಿಕೆಯಲ್ಲಿ ಜಪ್ಪಿಸಿಟ್ಟುಕೊಳ್ಳಬೇಕೆನ್ನುವಾಗಲೇ, ಅರ್ಥಶೂನ್ಯ ನಿಕಟತೆ ಮುಸುಕು ಹಾಕುತ್ತದೆ. ಆದರೆ 'ಅವನು' ರಮೇಶನಾಗಿರಲಿಲ್ಲ. ಸಿರಿಬೆಳಕು ಬೇಕೆಂದು ಹಾತೊರೆದ ಅವಳ ಮನಸ್ಸಿನಮೇಲೆ ದಟ್ಟ ಕತ್ತಲು ಕವಿಯುತ್ತದೆ. ಇಲ್ಲಿ ಸುಮಿತ್ರೆ ಚಿತ್ತವಿಭ್ರಮನೆಯ ವ್ಯೂಹದಲ್ಲಿ ಸಿಕ್ಕಿ ನಜ್ಜು-ಗುಜ್ಜಾಗುವ ಪಾಡಿನ ಪ್ರತೀಕವಾಗಿದ್ದಾಳೆ. ಹುಯ್ಯಲಿಡುವ ಅವಳ ಹೃದಯದ ಆರ್ತಧ್ವನಿ ನಮ್ಮಿಂದ ಅನುಕಂಪವನ್ನೂ ಸಹಾನುಭೂತಿ-ಯನ್ನೂ ಪಡೆಯದಿರದು.

ಕತೆಯಲ್ಲಿ ಸುಳಿಯುವ ಪಾತ್ರಗಳಲ್ಲಿ ರಮೇಶನೂ ಒಬ್ಬ. ಸುಮಿ-ತ್ರೆಯ ಬಾಳಹೆಂದರವಲ್ಲಿ ಕೆಳಪೇ ಪೊತ್ತು ನಿಂತು ಮರೆಯಾವರೂ, ಅವಳ ಆದರ್ಶವನ್ನೆಲ್ಲ ಪೋಷಿಕೊಂಡು ಹೋಗುತ್ತಾನೆ. ನಿಂಬಿನಿಂತೆ ಬಂದ ಅವನು ಅಚ್ಚಳಿಯದ ನೆನಪನ್ನು ಬಿಟ್ಟು ಹೋಗುತ್ತಾನೆ. ಸುಮಿತ್ರೆ ಅವನನ್ನು ತನ್ನ ಜೀವನದ ಒಡನಾಡಿಯೆಂದು ಭಾವಿಸು-ತ್ತಾಳೆ. ಆದರೆ ತನಗಾಗಿ ಕೊರಗುವ ಜೀವವೊಂದರ ಸಾಮೀಪ್ಯ-ವರ ಪರಿವೆ ಅವನಿಗಿದ್ದಂತಿಲ್ಲ! ಸುಮಿತ್ರೆಯ ಅಂತರ್ಗತವನ್ನು ಬೆಪರಿ-ಸೋದಿದಾಗ, ರಮೇಶ ಅವಳ ದಾರಿಗೆ ಜೀವನ ಸಂಗಾತಿಯಂತೆ ರೂಪಿ-ಸಲ್ಪಟ್ಟಿದ್ದಾನೆ. ಆದರೆ ಅವನ ಚಲನವಲನದ ಮೇಲೆ ತೀಕ್ಷ್ಣವಾದ ದೃಷ್ಟಿ ಹಾಯಿಸಿದಾಗ, ಅವನೂ ಒಬ್ಬ ಕಾಲೇಜಿನ ನಿಲುಮನೆಯಲ್ಲಿ ನಿಂತು, ಕೆಲದಿನಗಳವರೆಗೆ ತಂಗಿ ಮತ್ತೆ ಹೊರಟುಹೋಗುವ ಗೆಳೆಯ-ನಂತಿದ್ದಾನೆ. 'ಡಿಪೇಟಿಂಗ್ ಸೊಸ್ಯಾಟಿಯ' ಸೆಕ್ರೆಟರಿಶಿಪ್‌ಗಾಗಿ ಮಾಡುವ ಯಾಚನೆಯಲ್ಲಿ, ನಾಟಕದಲ್ಲಿ ಅಭಿನಯಿಸಿವ ಸುಮಿತ್ರೆಯ ಚಾಕಚಕ್ಯತೆಯನ್ನು ಕಂಡಾಡುವ ಹೆಚ್ಚುಗೆಯ ಮಾತುಗಳಲ್ಲಿ ಮೈತ್ರೀಯತೆಯ ಹಾರ್ದಿಕತೆ ಇತ್ತು ಅಭಿಮಾನದ ಸಂಕೇತವಿದೆಯೇ ಹೊರತು, ಅಲ್ಲಿ ಧ್ವನಿಸಬೇಕಾದ ಪ್ರಣಯಾಹ್ವಾನತೆಯಿಲ್ಲ; ಪ್ರೇಮಿಸುವ ಸುಳುವಾರ ಹೃದಯವಿಲ್ಲ! ರಮೇಶನ ತಂದೆಗೆ ಮುಂಬಯಿಗೆ ವರ್ಗ-ವಾದಾಗಿನ ಸಂಭಾಷಣೆಯೊಂದಿದೆ. ಅವನಲ್ಲಿಗೆ ಹೋಗುವಾಗ ಸುಮಿತ್ರೆ ಬೀಳ್ಕೊಡುತ್ತಿದ್ದಾಳೆ. ತಮ್ಮ ಗೆಳೆತನವನ್ನು ಶಾಶ್ವತವಾಗಿರಿಸಲು ತಮ್ಮಲ್ಲಿ ಪರಸ್ಪರ ಪತ್ರವ್ಯವಹಾರ ನಡೆಯುತ್ತಿರಬೇಕೆಂಬ ಆಶ್ವಾಸನೆ-ಯನ್ನು ನಿನಿಮಯ ಮಾಡುತ್ತಾರೆ. ರಮೇಶ ಪತ್ರಗಳನ್ನು ಬರೆಯುತ್ತಿ-ದ್ದನೆ? ಹಾಗೇನೂ ನಮಗನ್ನಿಸುವದಿಲ್ಲ. ಹೀಗಾಗಿ ಅವನು ಅವಳ ಗೆಳೆಯ ಮಾತ್ರವೇ ಏಕಾಗಿರಬಾರದೆಂಬ ಸಂಶಯ ಕುಡಿಯೊಡೆಯು-ತ್ತದೆ. ಇಲ್ಲಿ ರಮೇಶನ ಪಾತ್ರಚಿಜನೆಯಲ್ಲಿ ಗೊಂದಲಕ್ಕೆ ಆಸ್ಪದ ಸಿಕ್ಕಂ-ತಾಗುತ್ತದೆ. ಅವನ ಪಾತ್ರ ಸ್ಪಷ್ಟವಾಗಿ ಗೋಚರಿಸದೇ, ಮುಸಕು ಮುಸ-ಕಾಗಿ ತುಂಬುತುಂಡಾಗಿ ಮೂಡಿದೆಯೆನ್ನಬೇಕು.

ಇಲ್ಲಿ ಇನ್ನೊಂದು ಪಾತ್ರವಾದ 'ರಮೇಶನ' ಧರ್ಮಪತ್ನಿ-ಯನ್ನು ನೆನೆಯುವುದು ವಿಹಿತವೆನಿಸುತ್ತದೆ. ಸುಮಿತ್ರೆಯ ಮನೋ-ಭೂಮಿಕೆಯನ್ನು ತೆರೆದು ತೋರಿಸುವ ಪೋಷಕಪಾತ್ರವೆಂದರೇ ಇವಳು. ಸುಮಿತ್ರೆಯಲ್ಲಿ ನಡೆಯುವ ವಿಚಾರಮಥನಕ್ಕೂ ಅವಳೇದೆ-ಯಲ್ಲಿ ಉದಿಸುವ ಮಾನಪತೆಗೂ ಇವಳೇ ಕಾರಣವೆಂದರೂ ಅಡ್ಡಿಯಿಲ್ಲ.

ಕತೆಯ ನಾಟಪನ್ನೂ, ಆದರೆ ನಿಲುವನ್ನೂ ಅಲ್ಲಲ್ಲಿ ಕೆಲಕುವ ಘಟನೆಗಳೆಂದರೆ ವರ್ಣನಾತೀತೇಕ ಹಾಗೂ ಭಿನ್ನಭಿನ್ನವಾಗಿ ತೋರುವ ಪಾತ್ರಗಳ ನಿರ್ಮಿತಿಯೆನ್ನಬೇಕು. ಆರಂಭದಲ್ಲಿ ಬರುವ ಒಂದು ಪುಟಕ್ಕೂ ಮೀರಿದ ಮುಂಬಯಿ ವರ್ಣನೆ, 'ರಮೇಶ' ಹಾಗೂ 'ಅವನ' ಪತ್ನಿಯ ಉಡಿಗೆತೊಡಿಗೆಗಳ ರೂಪರೇಷೆ ಅತಿಯಾವಂತಿವೆ. ಸಣ್ಣದಾವ ಕತೆಯಲ್ಲಿ ಯಾವಪ್ಪೂ ಹಿತಮಿತವಾದ ವರ್ಣನೆಯಿರ-ಬೇಕಾವುದು ಅತ್ಯವಶ್ಯ. ಏಕೆಂದರೆ ಇದು ವಸ್ತುವಿನ ಪ್ರಾಧಾನ್ಯತೆ-ಯನ್ನೂ ಆದರ ಘಟನೆಯನ್ನೂ ಕಡಮೆಮಾಡುತ್ತದೆ. ಸುಮಿತ್ರೆಯ ಪಾತ್ರಸೃಷ್ಟಿಯಲ್ಲಿ ಜೋಪ ತಲೆಯೆತ್ತಿರುವುದನ್ನು ನೋಡುತ್ತೇವೆ. ಅವಳ ಪ್ರೇಮ, ಆದರ್ಶ ಕೆಲವೊಂದು ಕಡೆ ಕುಸಿದಿದೆ. ಲಗ್ನದನಂತ-ರವ "ಆ ಸುಖದ ದಿನಗಳಲ್ಲಿ ಎಂದಿಗೂ ಆಕೆಗೆ ರಮೇಶನ ನೆನಪಾಗಿ-ದ್ದಿಲ್ಲ" ಎನ್ನುವ ಮಾತಿನಲ್ಲಿ ಮುತ್ತು ತನ್ನ ದೈನಂದಿನವ ಕೆಲಸಗಳನ್ನು ತೀರಿಸಿಕೊಂಡು "ಮನೆಯನ್ನು ಸೇರುವಾಗ ಳಕೆ ಎಂದಿನಂತೆ ಪ್ರಸನ್ನ-ಚಿತ್ತದಿಂದ ಕಳ್ಳಸಿಳ್ಳನ್ನು ಹಾಕಬಹುದಾಗಿತ್ತು" ಎನ್ನುವ ಮಾತಿನಲ್ಲೂ ಶಿಥಿಲತೆ ಒಡೆದು ಕಾಣುತ್ತದೆ. ರಮೇಶನಿಗಾಗಿ ತೊಳಲಾಡುವ ಸಂತ್ರಸ್ತ ಮನಸ್ಸನ್ನು ಸ್ಪಷ್ಟವಾಗಿ ನಿರ್ದೇಶಿಸುವ ನುಡಿಗಳಲ್ಲ.

ಕಥಾತಂತ್ರ ಸರಳವಾಗಿದೆ. ಶೈಲಿ ಮೋಹಕವಾಗಿದೆ.

ಕೊನೆಯಲ್ಲಿ ಹೇಳಬೇಕಾದ ಮಾತೆಂದರೆ, ಕೆಲವೊಂದು ದೋಷ-ಗಳನ್ನು ಬಿಟ್ಟರೆ ಕತೆಗಾರರು ಸುಪ್ತಚಿತ್ತದ ವೇದನೆ-ಸಂವೇದನೆಯ ಮೇಲೆ ಬೆಳಕು ಚೆಲ್ಲಲು ಪ್ರಯತ್ನಿಸಿದ್ದು ಪ್ರೋತ್ಸಾಹನೀಯವಾದುದು. ಇದನ್ನೇ ಪ್ರಜ್ಞಾವಾಹಪ, ಪ್ರತಿಮೆಗಳ ಸಂಯೋಜನೆಯಲ್ಲಿ ತಂದಿಳಿಸಿ-ದ್ದರೆ ಮಾರ್ಮಿಕವೆನಿಸುತ್ತಿತ್ತು. ಆಪರೂ ಕತೆಯಲ್ಲಿ ಮನೋವಿಜ್ಞಾ-ನದ ಸೆಳಕು ಸೋಗಲಾಡಿಕೊಂಡು ಹೋಗುತ್ತದೆಯಾದ್ದರಿಂದ ಮೆಚ್ಚ-ಬೇಕು.

ಮಲಮಗನ ಕರೆ

(ಕಥೆಯ ವಿಮರ್ಶೆ)

ಶ್ರೀ. ಪಿ. ಆರ್. ಹಂಚಿನಮನಿ, ಬಿ.ಎಸ್‌ಸಿ. ಭಾಗ ೧, ಬೆಳಗಾಂವಿ

ಘಟನೆಗಳು ಎಂದೇ ಯಾವ ವೇಳೆಯಲ್ಲಿಯೇ ಸಂಭವಿಸಿರಲಿ, ಅವು ನಮ್ಮ ಮನಸ್ಸಿನ ವಿರುದ್ಧವಾಗಿ ಅಥವಾ ಮನಸ್ಸಿನಮೇಲೆ ಪರಿಣಾಮಕಾರಿಯಾಗಿದ್ದರೆ, ಅವು ಕೊನೆಯವರೆಗೂ ಮಾನವನ ಚಿತ್ತಭಿತ್ತಿಯಿಂದ ಮರೆಯಲಾರವು ಅಂತೆಯೇ ೫-೬ ವರ್ಷಗಳ ಹಿಂದಿನ ಘಟನೆಯು ಬೋಜುವನ್ನು ನಿರಂತರವಾಗಿ ಕಾಡುತ್ತಿತ್ತು. ಯಾವುದೋ ಒಂದು ಭಾವನಾವೇಶದ ಉದ್ರೇಗದಲ್ಲಿ ಕೈಗೊಂಡ ಘೋರಕಾರ್ಯವದು.

ಬೋಜು ಒಬ್ಬ ವಿಧವೆ.ಬಿದ್ದು ಧನದ ಆಶೆಗಾಗಿ ಬೇಡದವಳನ್ನು ಕಟ್ಟಿಕೊಂಡ ಸುಂದರ ಯುವಕ. ಬಿದ್ದುವಿನ ಹೆಂಡತಿಯ ಮರಣಾನಂತರ ಅವನು ಬೋಜುವನ್ನೇ ಮದುವೆಮಾಡಿಕೊಂಡು, ಅವಳನ್ನೇ ಮೈನುಸಗಳೆರಡರ ಒಡತಿಯನ್ನಾಗಿ ಮಾಡಿಕೊಂಡಿದ್ದ. ಬೋಜುವಾದರೋ ಮಲಮಗನನ್ನು ಅಸಹ್ಯದಿಂದ ಕಾಣದೆ ತನ್ನ ಅಪೂರ್ವ ಪ್ರೀತಿಯನ್ನು ಧಾರೆಯೆರೆಯಲಿತ್ತಿಸಿದಳು. ಆದರೆ ಅದೇ ಮೂಲವಾಗಿ, ತನ್ನ ಮಗನನ್ನೇ ಬಲಿತೆಗೆದುಕೊಳ್ಳುವಷ್ಟು ಗಂಭೀರ ಪರಿಸ್ಥಿತಿಗೆ ಬಂತು, ಮಲಮಗನಾದ ಡಾಲಿಯ ಹಟಮಾರಿತನ ಮತ್ತು ಸ್ವಾರ್ಥತೆಯಿಂದ. ಇದೇ ಅತಿರೇಕಕ್ಕೆ ಬಂದಾಗ, ತಾಯಿಕರುಳಿನ ಮಮತೆ ಅವಳನ್ನು ಡಾಲಿಯನ್ನು ಕೊಲ್ಲುವ ಘೋರಕೃತ್ಯಕ್ಕೆ ಇಳಿಸಿತು. ಮತ್ತು ತಾಯಿಹೃದಯ ವಿವೇಚನೆಗೆ ಅವಕಾಶಕೊಟ್ಟರೂ. ಉತ್ತಮ ಭಾವನೆಗಳ ಕುತ್ತಿಗೆ ಹಿಸುಕಿತು. ಅದೇ ಅವಳ ಮನಸ್ಸಿನಲ್ಲಿ ಬರುವ ಚಿಂತೆ ಅಥವಾ ಉದ್ವೇಗ. ಎಲ್ಲವೂ ಡಾಲಿಮಯವಾಗಿ ಕಾಣುತ್ತಿತ್ತು. ಎಲ್ಲೆತರದ ಧ್ವನಿಯೂ ಡಾಲಿಯ ಧ್ವನಿಮಯವಾಗಿ ಕೇಳುತ್ತಿತ್ತು.

ಇದಿಷ್ಟು ಕಥೆ. ಬೋಜು, ಬಿದ್ದು, ಡಾಲಿ, ಚೆಂಗುಮಣಿ, ದೇಜು, ಇವರೇ ಮೊದಲಾದವರು ಕಥೆಯ ಜೀವಿಗಳು. ಬೋಜು, ಬಿದ್ದು ನಾಯಕಿ-ನಾಯಕರು.

ಬೋಜು ಒರ್ವ ಸುಂದರ ತರುಣಿ; ಆದರೆ ವಿಧವೆ. ತಾರುಣ್ಯದಲ್ಲಿಯೇ ವೈಧವ್ಯಪ್ರಾಪ್ತವಾದರಿಂದ,ಬಿದ್ದುವಿನಂತಹ ಸುಂದರ ತರುಣನಲ್ಲಿ ಮೋಹಗೊಂಡಳು. ಸಾಮಾನ್ಯ ಮಲತಾಯಿಯಂತೆ ಅವಳು ಮಲಮಗನನ್ನು ಕಾಡುವನೋಜಿಗೆ ಹೋಗಲಿಲ್ಲ. ಆದರೆ ತಾಯ್ತನದ ಹಿರಿಮೆ ಅವಳಲ್ಲಿತ್ತು. ಒರ್ವ ಚಂಚಲ ತರುಣಿ. ಬಿದ್ದು "ಕೆಟ್ಟಮೇಲೆ ಬುದ್ದಿಬಂದ" ಒರ್ವ ಸುಂದರ ತರುಣ. ಪ್ರೇಮದ ಮಕರಂದಕ್ಕಾಗಿ ಹಾತೊರೆಯುವವ. ಸಂಪತ್ತಿನ ವ್ಯಾಮೋಹ ಅವನಿಗೆ ಅದರಬದಲು ಕಾರ್ಕೋಟಕ ವಿಷ ಕುಡಿಸಿದ್ದಿತು. ಪ್ರೇಮದ ಜೊತೆಯಲ್ಲಿ ಧರ್ಮ, ಕರುಣೆ ಉಳ್ಳವ. ಅದ್ದರಿಂದಲೇ ಬೋಜು ಡಾಲಿಯನ್ನು ಹೊಡೆದಾಗ "ಪಾಪ! ತಬ್ಬಲಿಮಗು!" ಎಂದು ಉದ್ಗಾರತೆಗೆಯುತ್ತಾನೆ.

ಇನ್ನು ಡಾಲಿ ಒಬ್ಬ ಹಟಮಾರಿತನವೆ, ಸ್ವಾರ್ಥವೆ ಮೂರ್ತಿ. ಚೆಂಗುಮಣಿಗೆ ಕೊಟ್ಟದ್ದೇ ತನಗೂ ಬೇಕೆಂದು ಹಟಮಾಡುತ್ತಿದ್ದ. ಈ ಹಟದ ಸಾಧನೆಗೆ ಬೇಕಾದ ಹೇಯಕೃತ್ಯಗಳನ್ನು ಮಾಡಲೂ ಹೇಸುವವನಲ್ಲ. ಉಳಿದೆರಡು ಜೀವಿಗಳೆರಡೂ ಅಷ್ಟೊಂದು ಮಹತ್ವದವರಲ್ಲ. ಆದರೂ ದೇಜು ಒಂದು ರೋಗದ ಗೂಬೆ. ಆದರೆ ಸಂಪತ್ತಿನಸಾಗರ. ಅವಳ ಗುಣಗಳು ಈ ಕಥೆಯಲ್ಲಿ ಇಲ್ಲ.

ಪಾತ್ರಸೃಷ್ಟಿಯಲ್ಲಿ ಲೇಖಕರು ಅತ್ಯಂತ ಉತ್ತಮಸಾಧನೆ ಸಾಧಿಸಿದ್ದುದು ಅಭಿಮಾನಾಸ್ಪದ ಸಂಗತಿ. ಮಾತಿನಲ್ಲಿಯೇ ಹೃದಯತೋರಿಸುವ ಹಿರಿಮೆ ಅವರದು. ಬೋಜು, ಬಿದ್ದು, ಡಾಲಿ, ಇವರು ಓದುಗರ ದೃಷ್ಟಿಗೆ ಕೇವಲ ಅಕ್ಷರದ ಮುದ್ದೆಯಾಗಿರದೆ,ಸಜೀವಿಗಳಾಗಿದ್ದಾರೆ. ಕಥೆ ಓದಿದಂತೆ ಮುಂದಿನ ಕಥೆಯಬಗ್ಗೆ ಕುತೂಹಲ ಕೆರಳುತ್ತದೆ. ಮುಂದಿನ ಕಥೆ ಏನಿರಬಹುದೆಂದು ಊಹಿಸಿವ ಊಹೆ ಊಹೆಯಾಗಿಯೇ ಉಳಿಯುವುದು.

"Sincirity is the trcee test of lites cetare" ಎಂಬಂತೆ ಈ ಕಥೆಯಲ್ಲಿ ವಾಸ್ತವತೆ ತುಂಬಿ ತುಳುಕುತ್ತದೆ. ಬಿದ್ದುವಿನ ಮದುವೆ, ಮತ್ತು ಬೋಜುವಿನ ಸಂಗಾತ ಪ್ರಣಯ, ಡಾಲಿಯ ವರ್ತನೆ,ಡಾಲಿಯ ಮರಣ ಇವೆಲ್ಲವುಗಳನ್ನೂ ವಾಸ್ತವತೆಯ ಬೆಳಕಿನಲ್ಲಿ ಚರ್ಚಿಸಿದ್ದಾರೆಂಬುದು ಗೊತ್ತಾಗುತ್ತದೆ.

ಆದರೆ ಒಂದನ್ನು ನಾವಿಲ್ಲಿ ಕಾಣಬಹುದಾದರೆ, ಡಾಲಿಯು ಹೇಗೆ ಸತ್ತನೆಂಬುದು ಡಾಕ್ಟರಿಗೆ ತಿಳಿಯಲಿಕ್ಕಿಲ್ಲವೇ ? ಅದು ಕೊಲೆಎಂದಾಗ ವಿಚಾರಣೆ ನಡೆದಿರಲಿಕ್ಕಿಲ್ಲವೇ?—ಎಂಬ ಪ್ರಶ್ನೆಗಳು ಉದ್ಭವಿಸುವುದು ಸಹಜ. ಕಾಳಜೀಪೂರ್ವಕವಾಗಿ ಬರೆದಿದ್ದರೂ, ಇದೊಂದು ತಪ್ಪು ಜಾರಿ ಉಳಿದಿದೆ. ಲೇಖಕರು, ಪೋಲೀಸಿನವರಿಗೆ ಬಿದ್ದು ರೊಕ್ಕ ಕೊಟ್ಟು ಉಳಿಸಿದಂತೆ ಅಥವಾ ಮತ್ತೇನನ್ನಾದರೂ ಮಾಡಿ ಬರೆದಿದ್ದರೆ ಈ ಕಥೆಗೆ ಇನ್ನೂ ಕಳೆಕಟ್ಟುತ್ತಿದ್ದಿತೆಂಬುದು ಗೊತ್ತಿದ್ದ ಸಂಗತಿ.

ಆ ಮೇಲೆ ಇನ್ನೊಂದು ಡಾಲಿ: ಸುಮಾರು ೧೪ ವರ್ಷದ ಪ್ರಾಯದ ಪುಡುಗ. ಆ ಹುಡುಗ "ಅಮ್ಮಾ ನೀರು" ಎಂದಾಗ, ಫಾಲಿಡಾಲ್-ಹಾಕಿದ ನೀರನ್ನು ಕೊಟ್ಟರೆ, ಅವನು ಅವುಗಳೆರಡನ್ನು ರುಚಿಯಿಂದ ಗ್ರಹಿಸಲಾರನೇ ?—ಎಂಬುದೊಂದು ಪ್ರಶ್ನೆ. ಅದು ವಿಷವೇ ಎಂದು ತಿಳಿಯದಿದ್ದರೂ, ಇದು ಕಹಿ ಇದೆ ಎಂದಾದರೂ ತಿಳಿಯಲೇ ಬೇಕಲ್ಲವೇ? ಅದನ್ನೇ ಔಷಧದ ನೆವದಲ್ಲಿ ಕುಡಿಸಿದಳೆಂದಿದ್ದರೆ ಹೆಚ್ಚು ಅರ್ಥ ಪೂರ್ಣವಾಗದಿರುತ್ತಿರಲಿಲ್ಲ.

ಇನ್ನು ಶೈಲಿಯಬಗ್ಗೆ ಬೇರೇನೂ ಹೇಳಲೇಬೇಕಾಗಿಲ್ಲ. ಅತ್ಯಂತ ಮನೋಹರವಾವ, ಸುಲಭಶೈಲಿ ಉಪಯೋಗಿಸಿಕೊಂಡಿದ್ದಾರೆ. ಕಥಾರಚನೆ ರಮ್ಯವಾಗಿದೆ. ಅದರಲ್ಲಿಯೂ ಮೊದಲನೆಯ ಅಂದರೆ ಪ್ರಾರಂಭದ ಭಾಗ ಅತ್ಯಂತ ರಮ್ಯವಾಗಿದೆ. ಡಾಲಿ, ಚೆಂಗುಮಣಿಗೆ ತ್ರಾಸುಕೊಡುವುದು ಮುಂತಾದ ಸಂದರ್ಭಗಳು ಸಾಮಾನ್ಯವಾಗಿ ವಾಸ್ತವವಾದುವುಗಳಾಗಿವೆ. ಅನಾವಶ್ಯಕ ಭಾಗಗಳಿಗಾಗಿ ಅಷ್ಟೊಂದು ಕಾಳಜಿತೊಡದೆ, ಕೇವಲ ಆವಶ್ಯಕಭಾಗಗಳನ್ನಷ್ಟೇ ವರ್ಣಿಸಿದ್ದರಿಂದ, ಭಾಷೆಯ ಬಿಗಿ ಇದ್ದು ಕಥಾತಂತ್ರದಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಿದ್ದಾರೆ. "ಊಂ, ನಾನೇನೂ ಅವನಿಗೆ ತಿನ್ನಿಸಿಲ್ಲ" "ನನ್ನ ಕಾಡುವ ಮಾರಿಯಂತಿದ್ದಾನೆ." ಇವೆಲ್ಲವು ಸಾಮಾನ್ಯವಾಗಿ ನಾವು ನಿತ್ಯಜೀವನದಲ್ಲಿ ಬಳಸುವ

ವ್ಯರ್ಥ ಕವಿತೆ !

ಶ್ರೀ. ಮುದೇನೂರ ಸಂಗಣ್ಣ, ಚಿಗಟೇರಿ

ಮಧುರ-ಸ್ವಪ್ನದೊಳಾನು ನಿನ್ನಿನಿರುಳೊಳು ಕಂಡ
ಸ್ವರ್ಗಸುಂದರಿಯಂಥ ಮಾಟಗಾತಿ !
ಚಂದ್ರರೇಖೆಯ ಹಳಿವ ಬಿಂಬಾಧರದ ಕಾಂತಿ
ಕುಸುಮ ಕೋಮಲ ಕದಪು,—ಮೋಹಗಾತಿ !
ಕಾಲಕುಣಿತಕೆ ನುಡಿವ ನೂಪುರದ ನುಣ್ಣನಿನಿಗೆ
ಬಾಗಿಬಳಕುತ ಕುಸಿವ ನೀಣಿಭಾರ;
ಮಿಂಚುಮುರಿಯಂತಿರುವ ನಯನಾರವಿಂದನದೊ;—
ತುಂಬುಕುಚ ಯೌವನದ ಸಕಲಸಾರ !
ಇನಿತೆಲ್ಲ ರೂಪರಾಶಿಯ ಸಕಲ ವೈಭವದ
ಮನಸೆಳೆವ ದೃಶ್ಯದಾ ವಿವರಗಳನು
ಇಂದು ಬಣ್ಣಿಸ ಕುಳಿತೆ ಲಿಕ್ವಣಿಕೆಯನು ಪಿಡಿದು
ಸುಮ್ಮನಿರಲಳವೇನು—ಕವಿಯು ನಾನು ?
ಇನ್ನೇನು ಚುಂಬಿಪೆನು ಕಲ್ಪನಾಸುಂದರಿಯ !
ಎನ್ನ ನುಡಿಯಪ್ಪುಗೆಯ ಬಂದಿಯವಳು !
ಕವಿಕುಲದ ಕೋಟಿ ಕಬ್ಬಗಳ ಪೀಗಳೆದೆನ್ನ
ಕಾಗದದ ಶಯ್ಯೆಯೊಳಗೆಸೆಯಲಿಹಳು !
ಯುಗಯುಗದಿ ' ಚಿರಯುವತಿ ' ' ನಪರೂಪಿ ' ತಾನೆನಿಸಿ
ಓದುಗರ ಮನತಣಿಸಿ ಬಾಳಲಿಹಳು.....
' ಏನ ಮಾಡುವೆ ಮಗುವೆ.... ? ' ನಡುಗುನುಡಿಯಾಡುತ್ತ
ಕಡುವಯ್ಯುದುಕೆ ಎನ್ನಜ್ಜಿ ಬರುತಲಿಹಳು !
ಎನ್ನ ಕಲ್ಪನೆಯ ಸುರಸುಂದರಿಯನಣಕಿಸುವ
ಈ ಮುದುಕಿ—ದಿಟವಣ್ಣ, ವ್ಯಂಗ್ಯ ಕವನ !
ಬರೆವ ಹುರುಪುಮೋ ಕರಗಿ ಕರವು ಕಂಪಿಸುತಿರಲು
ಯೌನವಾಯಿತು ನನ್ನ ಮನವ ತನನ !
ಯಾರು ಬರೆದಿಹರಿದನು ?—ತಿಳಿಯಲಾಗದ ಹವನು !
ಎನೆಂಥ ಜೀವಂತ ನವ್ಯಕವಿತೆ !
ದಿನಕೊಂದು ಹೊಸ ತರ್ಜ, ಹೊಸ ಭಾವ !—ಬರೆಯುವೆನೆ
ನುಡಿಜಾಣ ನಾನಿಂಥ " ಪೂರ್ಣಕವಿತೆ ! "
ತಲೆಯ ನರೆಗೈದು ಮೆರೆವ ತಾರುಣ್ಯ
ದಮಿತ ಜೀತನದ ಚೆಲುವ ಮೆಟ್ಟಿ,
ಆರಿವು-ಮರೆವುಗಳ ಪಿಂಚ ಕಂಡರಿಪ
ಕರಕೆ ಸರಿದೊರೆಯೆ ಚೀರಘಟ್ಟಿ ?
ನೋಡು, ನಿಡುಹುಬ್ಬಿನಡಿಯ ಪಾಳಾಳ
ತಳವ ಕಾಳಮೆಯ ಕುಂಡದಲ್ಲಿ—
ಮಾಗಿ ಹೆಣ್ಣಾದ ನಯನ ದೀಧಿತಿಯ
ಮೌನಧ್ಯಾನವದೊ ಹೊಳೆಯುತಲ್ಲಿ—
ಕಂಡು ಕಾಣದಿಪ ದಿವ್ಯಸತ್ಪಥವ
ತುಡುಕಿ ಚಿದ್ರೂಪವನ್ನೆ ಕಂಡು
ತೃಪ್ತವಾಗಿಹುದು ನಮಿಸಿ ನೀರಾಜ–
ನವೆನೆ ಆನಂದತೈಲವುಂಡು !
ಕರ್ಮಧರ್ಮಗಳ ಹೊರೆಯ ಭಾರವನು
ಹೊರುತ ನರಳುತಿಹ ಸೋಲುಗಾಲು—
ಬಯಸಲಾಸರೆಯ—ನೆರವುಕರದೊಳಿದೆ
ನುರುಗಿ ತಾನಾಗುತೂರುಗೋಲು !
ವಿಗತತತವರುಷ ಕೊರೆವ ದಾರಿಗೆರೆ
ನೊಗದಿ !—ಬೆವರಳೇನ್ ಭೂಮಿತಾಯೆ ?
ಜರೆಯ ನೆರೆಯೊಳಿದೆ ಬಿಡುಗಡೆಯ ಭಾವ–
ವೆಂಥ ಕವಿಯವನು ಕಾಲಛಾಯೆ !
ಕಲಾಸುಂದರಿಯು !—ಭವ್ಯಗತಕತೆಯ-
ನೊರೆವ ಈ ಘೋರ ವಿಕೃತರೂಪ !
ಕಡುಕುರೂಪದೊಳೆ ದಿವ್ಯ ಸಿರಿಸೋಬುಗ
ತುಂಬಲೆನಗಹುದೆ ?—ಯಾವ ಶಾಪ !
ರಸಿಕ ಓಮಗನೆ, ಕ್ಷಮಿಶು—ನಾಮಾಡೆ
ವ್ಯರ್ಥ ಕವಿತೆಯನು ಬರೆವ ಪಾಪ !

ಮಾತುಗಳೇ ಆಗಿದ್ದು, ಇಂಥವುಗಳನ್ನು ಕಥೆಯಲ್ಲಿ ತೆಗೆದುಕೊಂಡುದರಿಂದ ಕಥೆಯ ಶೈಲಿ ಬಂಗಾರಕ್ಕೆ ಕುಂದಣ ಕೂಡಿಸಿದಂತಾಗಿದೆ.

ಇದುವರೆಗೆ ಸಾಮಾನ್ಯವಾಗಿ ಯಾರೂ ಚರ್ಚಿಸದಿದ್ದ ಭಾಗವೊಂದನ್ನು ಇವರು ಚರ್ಚಿಸಿದ್ದಾರೆ. ಇದುಹರೆಗೆ ಸುಮಾರು ಎಲ್ಲರೂ ಮಲತಾಯಿಯ ಕೊರತೆ, ಮಲಮಕ್ಕಳ ಶೋಚನೀಯ ಪರಿಸ್ಥಿತಿಯನ್ನು ಚರ್ಚಿಸಿದರೆ, ಅದರ ವಿರುದ್ಧವನ್ನಿವರು ಇಲ್ಲಿ ಚರ್ಚಿಸಿದ್ದಾರೆ. ಇದು ಸಾಮಾನ್ಯವಾಗಿ ಕಂಡುಬಾರದಿದ್ದರೂ ಇಂಥ ಘಟನೆಗಳು ಇರದಿರಲಾರವು. ಆದ್ದರಿಂದ ಸಮಾಜವನ್ನು ತಪ್ಪುದೇಶದ ಒಂದು ವಿಶಿಷ್ಟ ರೀತಿಯಲ್ಲಿ ನೋಡಿದ್ದಾರೆ ಮತ್ತು ಚರ್ಚಿಸಿದ್ದಾರೆ. ವಿವೇಕಾನಂದರು ಹೇಳುವಂತೆ "ಸಾಹಿತ್ಯವೆಂದರೆ ಜನಜೀವನವನ್ನು ಬಿಂಬಿಸುವ ರನ್ನಗನ್ನಡಿ" ಎಂಬುದನ್ನು ಸಾವಿಲ್ಲಿ ಕಾಣಬಹುದಾಗಿದೆ. ಸಂಪತ್ತಿನ ದೆಸೆಯಿಂದ ಕೆಂದವರನ್ನು ಮದುವೆಯಾಗುವ ಇಂದಿನ ಯುವಕರನ್ನೂ ಒಂದು ತೆರವಲ್ಲಿ ಬಿದ್ದುವಿನ ಉದಾಹರಣೆಯಿಂದ ಎಚ್ಚರಿಸಿದ್ದಾರೆ. ಮಲಮಕ್ಕಳು ಸತ್ತಕೂಡಲೇ ಮಲತಾಯಿಯನ್ನು ದೂರುವ ಸಮಾಜಕ್ಕೆ ಚರ್ಚೆಯ, ಇರಬಹುದಾದ ಸಂಗತಿಯ ಕವಿಮಾತು ಹೇಳಿದ್ದಾರೆ. ಒಟ್ಟಿನ ಮೇಲೆ ಸಂಪೂರ್ಣ ಜೀವನವನ್ನೇ ಚರ್ಚಿಸಿದ್ದಾರೆ. ಸಮರಸನೇ ಜೀವನ— ಎಂಬುದನ್ನು ತೋರಿಸಿದ್ದಾರೆ.

ಒಟ್ಟಿನ ಮೇಲೆ ಹೇಳಬೇಕೆಂದರೆ ಇದೊಂದು ಯೋಗ್ಯ ಸಣ್ಣ ಕಥೆ. ಈ ಲೇಖಕರು ಇದೇ ರೀತಿ ಸಾಹಿತ್ಯಸೇವೆಯನ್ನು ಮಾಡಲೆಂದು ಹಾರ್ಸೈಸುವೆ.

ಜೈ ಬಂದ ! ಸಾಹಿತ್ಯಮಾತಾಕೀ ಜೈ !